ನಗರೀಕರಣದ ಅಭಿವೃದ್ಧಿ ರಾಜಕಾರಣ

(ಕೊಪ್ಪಳ ನಗರವನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ರಾಜ್ಯಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಬಾಳಪ್ಪ ತಳವಾರ

ಮಾರ್ಗದರ್ಶಕರು

ಡಾ.ಎ. ಶ್ರೀಧರ

ಪ್ರಾಧ್ಯಾಪಕರು

ಅಭಿವೃದ್ಧಿ ಅಧ್ಯಯನ ವಿಭಾಗ

ಸಮಾಜವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೨೦

ನಗರೀಕರಣದ ಅಭಿವೃದ್ಧಿ ರಾಜಕಾರಣ

(ಕೊಪ್ಪಳ ನಗರವನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ರಾಜ್ಯಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಬಾಳಪ್ಪ ತಳವಾರ

ಮಾರ್ಗದರ್ಶಕರು

ಡಾ.ಎ. ಶ್ರೀಧರ

ಪ್ರಾಧ್ಯಾಪಕರು

ಅಭಿವೃದ್ಧಿ ಅಧ್ಯಯನ ವಿಭಾಗ

ಸಮಾಜವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೨೦

ಮಾರ್ಗದರ್ಶಕರ ದೃಢೀಕರಣ ಪತ್ರ

ನಗರೀಕರಣದ ಅಭಿವೃದ್ಧಿ ರಾಜಕಾರಣ (ಕೊಪ್ಪಳ ನಗರವನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ. ಪದವಿಗಾಗಿ **ಬಾಳಪ್ಪ ತಳವಾರ** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದು, ಪ್ರಸ್ತುತ ಮಹಾಪ್ರಬಂಧವಾಗಲಿ ಅತವಾ ಯಾವುದೇ ಭಾಗವನ್ನಾಗಲೀ ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ ಎಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

ಡಾ.ಎ. ಶ್ರೀಧರ
ಮಾರ್ಗದರ್ಶಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬

ದಿನಾಂಕ : 26/08/2020

ಸ್ಥಳ : ವಿದ್ಯಾರಣ್ಯ

ಸಂಶೋಧಕರ ಘೋಷಣಾ ಪತ್ರ

ನಗರೀಕರಣದ ಅಭಿವೃದ್ಧಿ ರಾಜಕಾರಣ (ಕೊಪ್ಪಳ ನಗರವನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧದವನ್ನು ೨೦೧೯-೨೦ನೇ ಶೈಕ್ಷಣಿಕ ಸಾಲಿನಲ್ಲಿ ವಿಭಾಗದ ಪ್ರಾಧ್ಯಾಪಕರಾದ **ಡಾ.ಎ. ಶ್ರೀಧರ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದು, ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವನ್ನು ಪೂರ್ಣವಾಗಿಯಾಗಲಿ, ಅಂಶಿಕವಾಗಿಯಾಗಲಿ ಯಾವುದೇ ಪದವಿಗಾಗಿ ಈ ಮೊದಲು ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

(ಬಾಳಪ್ಪ ತಳವಾರ)

ದಿನಾಂಕ: ೨೬/೦೮/೨೦೨೦

ಸ್ಥಳ: ವಿದ್ಯಾರಣ್ಯ

ಸಂಶೋಧನ ವಿದ್ಯಾರ್ಥಿ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬

ಪರಿವಿಡಿ

ಕೋಷ್ಟಕಗಳು

ಅಧ್ಯಾಯ : ಒಂದು

ಪ್ರಸ್ತಾವನೆ

೧.೧ ಅಧ್ಯಯನ ವಿಷಯದ ಸಮಸ್ಯೀಕರಣ

೧.೨ ಅಧ್ಯಯನದ ಉದ್ದೇಶಗಳು

೧.೩ ಅಧ್ಯಯನದ ಮಹತ್ವ

೧.೪ ಅಧ್ಯಯನದ ವಿಧಾನ

೧.೫ ಅಧ್ಯಯನದ ವ್ಯಾಪ್ತಿ ಮತ್ತು ಇತಿಮಿತಿಗಳು

೧.೬ ಅಧ್ಯಯನದ ವಿಭಾಗೀಕರಣ

ಅಧ್ಯಾಯ: ಒಂದು

ಪ್ರಸ್ತಾವನೆ

ನಗರದಲ್ಲಾಗುವ ಪ್ರತಿಯೊಂದು ಬದಲಾವಣೆಯು ಆರ್ಥಿಕತೆಯನ್ನು ಅವಲಂಬಿಸಿರುತ್ತದೆ. ಈ ಆರ್ಥಿಕತೆಯನ್ನು ಅಲ್ಲಿರುವ ರಾಜಕೀಯ ಪ್ರತಿನಿಧಿಗಳು ಯಾವ ರೀತಿ ಬಳಸಿಕೊಳ್ಳುತ್ತಾರೆ? ಎಂಬುದರ ಮೇಲೆ ನಿಂತಿರುತ್ತದೆ. ಹೀಗಾಗಿ ನಮ್ಮ ವ್ಯಾಪ್ತಿಯ ಪ್ರದೇಶದಲ್ಲಿ ರಾಜಕೀಯ ವ್ಯಕ್ತಿಗಳು ಯಾವ ರೀತಿ ನಗರದ ಅಭಿವೃದ್ಧಿಗೆ ತಮ್ಮನ್ನು ತೊಡಗಿಸಿಕೊಂಡಿದ್ದಾರೆ ಎನ್ನುವುದನ್ನು ತಿಳಿದುಕೊಳ್ಳುವುದು. ಈ ಅಧ್ಯಯನದ ಆಶಯವಾಗಿದೆ. ಈ ಅಧ್ಯಯನ ಕೈಗೊಳ್ಳಲು ಕಾರಣವೆಂದರೆ ೨೦೧೨ರ ನಂಜುಂಡಪ್ಪರವರ ವರದಿ ಪ್ರಕಾರ ಕೊಪ್ಪಳ ಜಿಲ್ಲೆಯು ಹಿಂದುಳಿದ ಪ್ರದೇಶವಾಗಿದ್ದು, ಈ ಪ್ರದೇಶದ ಅಭಿವೃದ್ಧಿಗೆ ಸಂವಿಧಾನದ ೩೭೧(ಜೆ) ಕಲಂನಲ್ಲಿ ವಿಶೇಷ ಸ್ಥಾನಮಾನ ನೀಡಲಾಗಿದೆ. ಈಗ ಇಲ್ಲಿ ಯಾವ ಮಟ್ಟದಲ್ಲಿ ಅಭಿವೃದ್ಧಿ ನಡೆಯುತ್ತಿದೆ ಎನ್ನುವುದನ್ನು ನೋಡುವುದು ದೊಡ್ಡ ದೊಡ್ಡ ನಗರಗಳ ನಗರೀಕರಣ ಪ್ರಕ್ರಿಯೆಯನ್ನು ಆಧಾರವಾಗಿಟ್ಟುಕೊಂಡು ನಮ್ಮ ನಗರದ ಅಧ್ಯಯನವನ್ನು ರಚಿಸಲಾಗಿದೆ. ಅಲ್ಲಿ ಆಗುವ ಎಲ್ಲಾ ಬದಲಾವಣೆಗಳು ಇಲ್ಲಿ ಸಂಭವಿಸುತ್ತವೆಯೋ ಅಥವಾ ಅವುಗಳ ಪ್ರಮಾಣದಲ್ಲಿ ಏನಾದರೂ ವ್ಯತ್ಯಾಸವಿದೆಯೇ ನಗರೀಕರಣಕ್ಕೂ ಅಭಿವೃದ್ಧಿಗೂ ಸಂಬಂಧವಿದೆಯೋ ಅಥವಾ ಒಂದರ ಮೇಲೊಂದು ಯಾವ ರೀತಿ ಪರಿಣಾಮ ಬೀರುತ್ತವೆ ಎಂದು ಈ ಅಧ್ಯಯನದಲ್ಲಿ ನೋಡಲಾಗಿದೆ.

ನಗರಗಳು ಮತ್ತು ಪಟ್ಟಣಗಳಲ್ಲಿನ ಜನಸಂಖ್ಯೆಯ ಸಾಂದ್ರತೆಯು ಆರ್ಥಿಕ ಅಭಿವೃದ್ಧಿಯ ಅತ್ಯಂತ ಗಮನಾರ್ಹ ಲಕ್ಷಣಗಳಲ್ಲಿ ಒಂದಾಗಿದೆ. ಇದು ಚಾಲಕ ಮತ್ತು ಆರ್ಥಿಕ ಬೆಳವಣಿಗೆಯ ಪರಿಣಾಮವಾಗಿದೆ. ಆರ್ಥಿಕ ಚಟುವಟಿಕೆಗಳ ವಿಸ್ತರಣೆ ಮತ್ತು ಕೈಗಾರೀಕರಣವು ನಗರಗಳನ್ನು ಬೆಳವಣಿಗೆಯ ಕೇಂದ್ರಗಳಾಗಿ ವಿಕಸಿಸಲು ಕಾರಣವಾಗುತ್ತದೆ. ಈ ನಗರ ಕೇಂದ್ರಗಳು ಮೂರು ಪ್ರಮುಖ ವಿಧಾನಗಳಲ್ಲಿ ಸುಸ್ಥಿರ ಆರ್ಥಿಕ ಬೆಳವಣಿಗೆಯನ್ನು ಸುಗಮಗೊಳಿಸುತ್ತವೆ–ನೈಜ ವಲಯದ ಮೂಲಕ, ಉತ್ಪಾದನೆ ಮತ್ತು ಉದ್ಯೋಗದ ಉತ್ಪಾದಕತೆಯನ್ನು ಹೆಚ್ಚಿಸುವ ಮೂಲಕ, ಆರ್ಥಿಕ ವಲಯದ ಮೂಲಕ, ಉಳಿತಾಯವನ್ನು ಸಜ್ಜುಗೊಳಿಸುವ ಮತ್ತು ಚಾಲನೆ ಮಾಡುವ ಮೂಲಕ ಮತ್ತು ನಗರ ರಿಯಲ್ ಎಸ್ಟೇಟ್ ರೂಪದಲ್ಲಿ ಸಂಪತ್ತನ್ನು ಸಂಗ್ರಹಿಸಲು ಅನುವು ಮಾಡಿಕೊಡುತ್ತದೆ

ಮತ್ತು ಹಣಕಾಸಿನ ಹರಿವಿನ ಮೂಲಕ, ಸರ್ಕಾರಗಳ ತೆರಿಗೆ ಆದಾಯದ ಪ್ರಮುಖ ಪಾಲನ್ನು ಒದಗಿಸುತ್ತದೆ.[೧] (ವಿಶ್ವ ಬ್ಯಾಂಕ್, ೨೦೦೦) ದೇಶದ ಆರ್ಥಿಕ ಬೆಳವಣಿಗೆ ಎಷ್ಟು ವೇಗವಾಗಿ ನಗರೀಕರಣಗೊಳ್ಳುತ್ತದೆ ಅದು ನಗರೀಕರಣದ ಆರ್ಥಿಕ ಬೆಳವಣಿಗೆ ಮತ್ತು ಆರ್ಥಿಕ ಅಭಿವೃದ್ಧಿ ಮಾದರಿಗಳಿಗೆ ಪ್ರತಿಫಲಿಸುತ್ತದೆ. ಸರಕು, ಸೇವೆಗಳು, ಕಾರ್ಮಿಕ, ಬಂಡವಾಳ, ಮಾಹಿತಿ, ತಂತ್ರಜ್ಞಾನ ಮತ್ತು ಸಾಮಾಜಿಕ ವಹಿವಾಟುಗಳ ವಿನಿಮಯದ ಮೂಲಕ ನಗರ ಪ್ರದೇಶದ ಅಭಿವೃದ್ಧಿಯು ಗ್ರಾಮೀಣ ಆರ್ಥಿಕತೆಯೊಂದಿಗೆ ನಿಕಟ ಸಂಬಂಧ ಹೊಂದಿದೆ. ಸರಿಯಾಗಿ ನಿರ್ವಹಿಸಿದರೆ, ನಗರಾಭಿವೃದ್ಧಿ ಪ್ರಕ್ರಿಯೆಯು ಒಟ್ಟಾರೆ ರಾಷ್ಟ್ರೀಯ ಮತ್ತು ಪ್ರಾದೇಶಿಕ ಅಭಿವೃದ್ಧಿಗೆ ಪ್ರಮುಖವಾದುದು. ಗ್ರಾಮೀಣ ಪ್ರದೇಶಗಳಿಗಿಂತ ಹೆಚ್ಚಿನ ಉತ್ಪಾದಕತೆಯನ್ನು ನಗರದಲ್ಲಿ ದಾಖಲಿಸುವ ದೊಡ್ಡ ಪ್ರಾಯೋಗಿಕ ಸಾಹಿತ್ಯವಿದೆ.[೨]

೧.೧. ಅಧ್ಯಯನ ವಿಷಯದ ಸಮಸ್ಯೀಕರಣ

ಸಮಾಜದ ಬೆಳವಣಿಗೆಗೆ ಮತ್ತು ಅಭಿವೃದ್ಧಿಗೆ ಗಣ್ಯವ್ಯಕ್ತಿಗಳ ಪಾತ್ರ ಪ್ರಮುಖವಾಗಿದ್ದು, ಆಡಳಿತಗಾರರು ಮತ್ತು ರಾಜಕೀಯ ಗಣ್ಯರು ಯೋಜನೆಗಳನ್ನು ರಚಿಸಿ ಹಾಗೂ ನೀತಿಗಳನ್ನು ರೂಪಿಸಿ, ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಸ್ಥೆಗಳಲ್ಲಿ ಬದಲಾವಣೆ ತರುವುದೇ ಅಭಿವೃದ್ಧಿ.

ಜನಸಾಮಾನ್ಯರು ಮತ್ತು ಬಹುತೇಕ ಅಭಿವೃದ್ಧಿ ತಜ್ಞರು ಕೂಡಾ ಚಾಲ್ತಿ ಇರುವ ಅಭಿವೃದ್ಧಿಯಿಂದ ಬಡತನದ ನಿವಾರಣೆಯಾಗುತ್ತದೆ ಎಂದು ನಂಬಿದ್ದಾರೆ. ಚಾಲ್ತಿಯಲ್ಲಿರುವ ಅಭಿವೃದ್ಧಿಯಿಂದ ಬಡತನ ನಿವಾರಣೆಯಾಗುವುದಿಲ್ಲ ಬಡತನ ಸೃಷ್ಟಿಯಾಗುತ್ತದೆ ಮುಖ್ಯವಾಗಿ ಮೂಲಭೂತ ಸೌಕರ್ಯಗಳನ್ನು ಪೂರೈಸಬೇಕು.[೩](ಎಮ್. ಚಂದ್ರ ಪೂಜಾರಿ,೨೦೧೪,೫೮) ಇಂದು ಶಿಕ್ಷಣ ಮತ್ತು ಅಭಿವೃದ್ಧಿ ನಡುವೆ ನೇರ ಸಂಬಂಧ ಕಲ್ಪಿಸಲಾಗಿದೆ, ಶಿಕ್ಷಣ ಹೆಚ್ಚಿದಂತೆ ಅಭಿವೃದ್ಧಿ ಹೆಚ್ಚುತ್ತದೆ, ಮತ್ತು ಶಿಕ್ಷಣ ಕಡಿಮೆಯಾದಂತೆ ಅಭಿವೃದ್ಧಿ ಕಡಿಮೆಯಾಗುತ್ತದೆ ಎನ್ನುವ ಗ್ರಹಿಕೆ ಇದೆ. ಈ ಎರಡರ ನಡುವೆ ನೇರ ಸಂಬಂಧ ಇರುವುದರಿಂದಲೇ ಸರಕಾರ ಕೂಡ ಶಿಕ್ಷಣವನ್ನು ಆದ್ಯತಾವಲಯವೆಂದು ಪರಿಗಣಿಸಿದೆ.[೪](ಎಮ್. ಚಂದ್ರ ಪೂಜಾರಿ),(೨೦೧೪,೬೧)

ರಾಜಕೀಯ ಅಭಿವೃದ್ಧಿ ಎಂದರೆ ಕಾಲಕ್ಕೆ ತಕ್ಕ ಹಾಗೆ ರಾಜಕೀಯ ವ್ಯವಸ್ಥೆಯಲ್ಲಿ ಬದಲಾವಣೆ ತರುವುದು ಹಾಗೂ ಇರುವ ಪರಿಸರದಲ್ಲಿ ಅಗತ್ಯ ಬದಲಾವಣೆ ತರುವುದು ಮತ್ತು ಜನರ ಕಲ್ಯಾಣವೇ ಅಭಿವೃದ್ಧಿ ಎನ್ನುತ್ತಾರೆ.[೫] ಗೀಬಿ ಎಂಡರ್‌ವರ ಪ್ರಕಾರ ಒಂದು ವ್ಯವಸ್ಥೆಯನ್ನು ಹೇಗೆ ತನ್ನದಾಗಿಸಿಕೊಳ್ಳಬಹುದು ಎಂಬುವುದು ರಾಜಕೀಯ ಅಭಿವೃದ್ಧಿ.[೬] ಅಭಿವೃದ್ಧಿಯೆನ್ನುವುದು ಸಮಾಜವನ್ನು ಸುಸ್ಥಿತಿಗೆ ಒಯ್ದು, ಕಲ್ಯಾಣಕಾರಿ ಚಟುವಟಿಕೆಯ ರೂಪಿಸಿಕೊಂಡು ಹಾಗೆಯೇ ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಬೆಳವಣಿಗೆ ಹೊಂದುವುದಾಗಿದ್ದು. ಅಲ್ಲದೇ ಇದೊಂದು ನೈಸರ್ಗಿಕ ಪ್ರಕ್ರಿಯೆಯಾಗಿದ್ದು. ಅದು ಪ್ರತಿವಿಷಯದಲ್ಲಿ ನೈಸರ್ಗಿಕವಾಗಿ ಅಭಿವೃದ್ಧಿ

ಹೊಂದುತ್ತಾ. ಇಲ್ಲಿ ಯಾವುದು ಸ್ಥಿರವಾಗಿ ಉಳಿಯದೇ ಪರಿಸ್ಥಿತಿಗೆ ತಕ್ಕ ಹಾಗೆ ನಿರಂತರ ಬದಲಾವಣೆ ಹೊಂದುತ್ತದೆ. ಈ ಮೇಲಿನ ಅಂಶಗಳು ಅಭಿವೃದ್ಧಿ ಪರಿಕಲ್ಪನೆ ಗುರುತಿಸಿದರೆ, ಸಾರ್ವತ್ರಿಕ ಶಿಕ್ಷಣ ನೀಡಿಕೆ, ಭ್ರಷ್ಟಾಚಾರ ನಿರ್ಮೂಲನ, ಕ್ರಾಂತಿಕಾರಕ ಭೂಸುಧಾರಣೆ, ಸಾಮಾಜಿಕ ಶಿಸ್ತು, ಕಟ್ಟುನಿಟ್ಟಿನ ಜನಸಂಖ್ಯಾ ನಿಯಂತ್ರಣ, ಮಾರುಕಟ್ಟೆ ವ್ಯವಸ್ಥೆ ಹೀಗೆ ಅನೇಕ ಕಾರಣಗಳನ್ನು "ಗುನ್ನಾರ ಮಿರ್ಡಾಲ್" ರವರು ತಮ್ಮ 'ಹಿಮ್ಮುಖ ಸಂಚಲನಾ" ಮತ್ತು ಆರ್ಥಿಕ ಅಭಿವೃದ್ಧಿ ವಿಸ್ತರಣೆ" ಎಂಬ ತತ್ವದ ಮೂಲಕ ಅನಾಭಿವೃದ್ಧಿ ಪರಿಕಲ್ಪನೆಯನ್ನು ಪ್ರತಿಬಿಂಬಿಸುತ್ತದೆ.[೭]
ಆರ್.ಎಸ್.ಮಿಶ್ರರವರ ಪ್ರಕಾರ : ಕಡಿಮೆ ವರಮಾನದ ರಾಜ್ಯ, ದೇಶಗಳು ತಮ್ಮ ಸಾಧನೆ ಸಾಮಾಗ್ರಿಗಳನ್ನು ಉತ್ತಮ ರೀತಿಯಲ್ಲಿ ಬಳಸಿಕೊಳ್ಳುವ ಮೂಲಕ ಅಧಿಕ ವರಮಾನದ ದೇಶಗಳಾಗಿ ಪರಿವರ್ತನೆ ಹೊಂದುವ ವಿಧಾನವನ್ನು "ಅಭಿವೃದ್ಧಿ" ಎನ್ನಬಹುದು ಎಂದಿದ್ದಾರೆ.[೮]

ಕಂಪಲ್‌ಬರ್ಗ್‌ರವರ ಪ್ರಕಾರ ಅಧಿಕ ಉತ್ಪನ್ನ ಮತ್ತು ಅದನ್ನು ಉತ್ಪಾದಿಸುವ ತಾಂತ್ರಿಕ ಮತ್ತು ಸಾಂಸ್ಥಿಕ ವ್ಯವಸ್ಥೆಗಳ ಬದಲಾವಣೆಯನ್ನು "ಅಭಿವೃದ್ಧಿ" ಎನ್ನುತ್ತಾರೆ.[೯]

ವಿಲಿಯಂಸನ್ ಮತ್ತು ಬ್ಯಾಟ್ರಿಕರ ಪ್ರಕಾರ : ಒಂದು ಪ್ರಾಂತ್ಯದ ಅಥವಾ ರಾಷ್ಟ್ರದ ಜನರ ಸರಕು ಹಾಗೂ ಸೇವೆಗಳ ತಲಾ ಉತ್ಪಾದನೆಯಲ್ಲಿ ಸ್ಥಿರವಾದ ಹೆಚ್ಚಳ ಸಾಧಿಸಲು ಲಭ್ಯವಿರುವ ಸಂಪನ್ಮೂಲಗಳನ್ನು ಉಪಯೋಗಿಸಿಕೊಳ್ಳುವ ಪ್ರಕ್ರಿಯೆಯೇ ಅಭಿವೃದ್ಧಿ ಎನ್ನುತ್ತಾರೆ.[೧೦]

ಜೇಕಬ್‌ವೈನ್ ನವರ ಪ್ರಕಾರ ತಲಾದಯವನ್ನು ಹೆಚ್ಚಿಸುವ, ಸದ್ಯ ಅಸ್ತಿತ್ವದಲ್ಲಿರುವ ಉನ್ನತಮಟ್ಟದ ವರಮಾನವನ್ನು ಉಳಿಸಿಕೊಂಡು ಹೋಗುವ ಕ್ರಿಯೆಗೆ ಅಭಿವೃದ್ಧಿ ಎನ್ನುವರು.[೧೧]

ವಿಶ್ವಸಂಸ್ಥೆಯ ತಜ್ಞರ ಸಮಿತಿಯವರ ವರದಿಯಂತೆ ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಸಾಂಸ್ಥಿಕ ವಲಯದಲ್ಲಿ ಬದಲಾವಣೆ ತರುವುದೇ ಅಭಿವೃದ್ಧಿ.[೧೨]

ರೋಸ್ಟೋವ್ ರವರ ಪ್ರಕಾರ ಒಂದು ಜಿಲ್ಲೆ, ರಾಜ್ಯ, ದೇಶದಲ್ಲಿ ಉತ್ತಮವಾದ ಕೈಗಾರಿಕೆಗಳ, ತಂತ್ರಜ್ಞಾನದ ಬೆಳವಣಿಗೆ ಹಾಗೂ ಸ್ವಾಭಾವಿಕವಾಗಿ ಸಂಪನ್ಮೂಲಗಳು ಹೇರಳವಾಗಿ ದೊರಕುತ್ತಿದ್ದರೆ ಅದು ಅಭಿವೃದ್ಧಿ ಹೊಂದಿದ ರಾಜ್ಯ ಎಂದು ಹೇಳಬಹುದು. ಇವರು ಅಭಿವೃದ್ಧಿಯನ್ನು ಕೈಗಾರಿಕೆ ಮತ್ತು ತಂತ್ರಜ್ಞಾನದ ಮೇಲೆ ಅಳೆಯುತ್ತಾರೆ. ಒಂದು ಪ್ರದೇಶದ ಅಭಿವೃದ್ಧಿಯನ್ನು ಗುರುತಿಸಬೇಕಾದರೆ ಪ್ರಮುಖವಾಗಿ ಶಿಕ್ಷಣ, ಆರೋಗ್ಯ, ಜನರ ಕಲ್ಯಾಣ, ಸಮಾನ ಅವಕಾಶಗಳನ್ನು ಒಳಗೊಂಡಿರುತ್ತದೆ. ನಾಗರಿಕ ಹಕ್ಕುಗಳನ್ನು ಯಾವುದೇ ಜಾತಿ, ಲಿಂಗ, ಆರ್ಥಿಕ ಸ್ಥಾನಮಾನ, ಧರ್ಮ, ಶಿಕ್ಷಣ, ಮುಂತಾದವುಗಳನ್ನು ಆಧರಿಸಿ ಭೇದಭಾವವಿಲ್ಲದೇ ನೀಡುವುದೇ ಅಭಿವೃದ್ಧಿ. ಇಲ್ಲಿ ಅಭಿವೃದ್ಧಿ ಎನ್ನುವುದು ಆರ್ಥಿಕ ಅಂಶಗಳನ್ನು ಅಷ್ಟೇ ಒಳಗೊಳ್ಳದೇ ಸಾಮಾಜಿಕ ಚಾಲನೆ ಮತ್ತು ಸಾಮಾಜಿಕ ಸ್ವಾತಂತ್ರ್ಯವನ್ನು ಒಳಗೊಂಡಿದೆ. ಆದರೆ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ನಡುವೆ ಭಿನ್ನತೆಗಳನ್ನು ಕಂಡುಹಿಡಿಯುವುದು ಕಷ್ಟ. ಸಮಾಜದ ಸಂಪೂರ್ಣ ಅಭಿವೃದ್ಧಿಗೆ ರಾಜಕೀಯ ಅಂಶಗಳು ಪ್ರಮುಖ ಕಾರಣವಾಗುತ್ತವೆ ಎಂದು ತಿಳಿಸುತ್ತಾರೆ.[೧೩]

ಡೆವನ್‌ಸ್ಕಿರವರ ಪ್ರಕಾರ ಅಭಿವೃದ್ಧಿ ಎನ್ನುವುದು ಆರ್ಥಿಕ ವ್ಯವಸ್ಥೆಯಲ್ಲಿ ಮೌಲ್ಯಮಾಪನ ಮಾಡುವುದು ಹಾಗೂ ಬಳಕೆದಾರರ ಬಳಕೆಯ ಮತ್ತು ಉತ್ಪಾದನಾ ತಂತ್ರಗಳ ನಡುವಿನ ಸಂಬಂಧವನ್ನು ವಿಶ್ಲೇಷಿಸುವುದು ಅಭಿವೃದ್ಧಿ ಎನ್ನುತ್ತಾರೆ.[೧೪]

ಟಿ.ಕೆ.ಎನ್. ಉನ್ನಿನಾಥನ್ ರವರ ಪ್ರಕಾರ ಒಂದು ರಾಜಕೀಯ ವ್ಯವಸ್ಥೆಯು ಎಷ್ಟರಮಟ್ಟಿಗೆ ಜನರ ರಾಜಕೀಯ ಬೇಡಿಕೆಗಳನ್ನು ಪೂರೈಸುವ ಕ್ಷಮತೆಯನ್ನು ಎಷ್ಟರಮಟ್ಟಿಗೆ ಹೊಂದಿದೆ ಮತ್ತು ರಾಜಕೀಯ ಸಮಸ್ಯೆಗಳನ್ನು ಪರಿಹರಿಸುತ್ತವೆ ಎಂಬುವುದನ್ನು ವಿವರಿಸುವುದೇ ಅಭಿವೃದ್ಧಿ ರಾಜಕೀಯವಾಗಿದೆ ಎನ್ನುತ್ತಾರೆ.[೧೫]

ರಸಲ್ ಆರ್ ರವರ ಪ್ರಕಾರ "ಡೆವೆಲಪ್‌ಮೆಂಟ್ ಆ್ಯಜ್ ಸೋಶಿಯಲ್ ಎಕಾನಮಿಕ್ ಆ್ಯಂಡ್ ಪೊಲಿಟಿಕಲ್ ಪ್ರೊಸಸ್" ಎಂಬ ಲೇಖನದಲ್ಲಿ ರಾಜಕೀಯ, ಸಾಮಾಜಿಕ,ಮತ್ತು ಆರ್ಥಿಕ ವಲಯದಲ್ಲಾಗುವ ಬದಲಾವಣೆ ಒಂದು ಪ್ರದೇಶದಲ್ಲಿ ಯಾವ ರೀತಿ ಕಂಡುಬರುತ್ತದೆ ಅಲ್ಲದೇ ಈ ಅಂಶಗಳು ಜನರ ಮೂಲಭೂತ ಸಮಸ್ಯೆಗಳಾದ ಶಿಕ್ಷಣ, ಜನಸಂಖ್ಯೆ, ವಸತಿ, ಉದ್ಯೋಗ, ನೀರು, ಮುಂತಾದ ಬೇಡಿಕೆಗಳನ್ನು ಪೂರೈಸುವಲ್ಲಿ ಇವುಗಳ ಪಾತ್ರ ಕುರಿತು ವಿವರಿಸುತ್ತದೆ.[೧೬]

ಆರ್ಥಿಕ ಅಭಿವೃದ್ಧಿಯು ಮೊದಲ ಮಹಾಯುದ್ಧದ ಕಾಲದಲ್ಲಿ ಬೆಳೆದ ಹಂತ ಮತ್ತು ಕೈಗಾರೀಕರಣದ ಬೆಳವಣಿಗೆಯಿಂದ ಜನರ ಉತ್ತಮ ಜೀವನಕ್ಕೆ ಉದ್ಯೋಗ ಬೇಕು. ಅಲ್ಲದೇ ಸಾವಿರಾರು ಕುಟುಂಬಗಳು ಬಡತನ ರೇಖೆಗಿಂತ ಮೇಲಿದ್ದವು ಎಂಬ ಅಂಶವನ್ನು ತಿಳಿಸುತ್ತವೆ.[೧೭]

ಒಂದು ಭೂ ಪ್ರದೇಶದ ಬೆಳವಣಿಗೆಗೆ ಮತ್ತು ಆರ್ಥಿಕ, ರಾಜಕೀಯ ಅಭಿವೃದ್ಧಿಯಲ್ಲಿ ರಾಜಕೀಯ ಗಣ್ಯರ ಪಾತ್ರ ಎಷ್ಟಿರುತ್ತದೆ ಹಾಗೂ ರಾಜಕೀಯ ಬೆಳವಣಿಗೆಗೆ ಆರ್ಥಿಕ, ಸಾಮಾಜಿಕ ಅಂಶಗಳು ಹೇಗೆ ಸಹಾಯಕಾರಿಯಾಗಿದೆ ಎಂಬುವುದನ್ನು ತಿಳಿಸುತ್ತದೆ.[೧೮]

ಇಕ್ಬಾಲ್ ನಾರಾಯಣರ "ಡೆಮಾಕ್ರಾಟಿಕ್ ಡಿಸೆಂಟ್ರಲೈಜೆಷನ್ಸ್ ದಿ ಐಡಿಯಾ ದಿ ಇಮೇಜ್ ಆ್ಯಂಡ್ ದಿ ರಿಯಾಲಿಟಿ" ಎಂಬ ಲೇಖನದಲ್ಲಿ ತಾಯಿ ಬೇರಿನಂತಿರುವ ನಗರ ಸರ್ಕಾರಗಳ ಕಾರ್ಯ ವೈಖರಿಯು ಹಾಗೂ ವಿಕೇಂದ್ರಿಕರಣದ ಮಹತ್ವ ಪ್ರಜಾಪ್ರಭುತ್ವ ವ್ಯವಸ್ಥೆಗೆ ಯಾವ ರೀತಿ ಸಹಾಯಕಾರಿಯಾಗಿದೆ ಎಂಬುವುದನ್ನು ಈ ವರದಿಯು ತಿಳಿಸುತ್ತದೆ. ಅಲ್ಲದೇ ಸ್ಥಳೀಯಮಟ್ಟದ ಸಮಸ್ಯೆಗಳು ಇಂತಹ ಸರ್ಕಾರಗಳಿಂದ ಎಷ್ಟರಮಟ್ಟಿಗೆ ನಿವಾರಣೆಯಾಗುತ್ತದೆ ಎಂಬ ಅಂಶವನ್ನು ಈ ಲೇಖನದಲ್ಲಿ ವಿವರಿಸಿದ್ದಾರೆ.[೧೯]

ಕೊಪ್ಪರ್ ಬೇಕರ್ ಎಚ್.ಡಿ ರವರ ಪ್ರಕಾರ "ದಿ ಆಲ್ ಇಂಡಿಯಾ ಲೋಕಲ್ ಸೇಲ್ಫ್ ಗೌರ್ನಮೆಂಟ್" ಎಂಬ ಲೇಖನದಲ್ಲಿ ಭಾರತದಲ್ಲಿ ಮುನಿಸಿಪಾಲ್ ಆಡಳಿತ ಪದ್ಧತಿಯಲ್ಲಿ ರಾಜ್ಯ, ಜಿಲ್ಲೆ, ತಾಲ್ಲೂಕ, ಗ್ರಾಮ ಮಟ್ಟದಲ್ಲಿ ಇವುಗಳ ಕಾರ್ಯ ನಿರ್ವಹಣೆ ಹಾಗೂ ಜನರ ಮೂಲಭೂತ ಸಮಸ್ಯೆಗಳನ್ನು ನಿವಾರಿಸುವಲ್ಲಿ ಇವುಗಳ ಪಾತ್ರ ಎಷ್ಟಿದೆ ಎಂಬುವುದನ್ನು ವಿವರಿಸುತ್ತದೆ.[೨೦]

ಐ.ಎಲ್. ಹಾರೋವಿಜ್ "ಸೋಶಿಯಾಜಿಕಲ್ ಆಂಡ್ ಐಡಿಯಾಲಾಜಿಕಲ್ ಕಂಜಪ್ಷನ್ಸ್ ಆಪ್ ಇಂಡಸ್ಟ್ರೀಯಲ್ ಡೆವೆಲಪಮೆಂಟ್" ಎಂಬ ಲೇಖನದಲ್ಲಿ ಸಮಾಜ ಶಾಸ್ತ್ರಜ್ಞರು ಅಭಿವೃದ್ಧಿಯನ್ನು ಬೇರೆ-ಬೇರೆ ವಿಧಾನಗಳಲ್ಲಿ ವಿವರಿಸಿದ್ದಾರೆ. ಇವರ ಪ್ರಕಾರ ಅಭಿವೃದ್ಧಿಯು ಬಂಡವಾಳಶಾಹಿಗಳ ಆದಾಯದ ಏರಿಳಿತಗಳನ್ನು ಅವಲಂಬಿಸಿದೆ. ಅಲ್ಲದೇ ಅರ್ಥಶಾಸ್ತ್ರಜ್ಞರು ಕೈಗಾರಿಕೆ ಬೆಳವಣಿಗೆಯಿಂದ ಆ ಪ್ರದೇಶ ಅಭಿವೃದ್ಧಿಯಾಗುತ್ತದೆ ಎನ್ನುವ ತತ್ವದಲ್ಲಿ ನಂಬಿಕೆಯಿಟ್ಟಿದ್ದಾರೆ. ಆರ್ಥಿಕ ಅಭಿವೃದ್ಧಿಯು ಅಂತರಾಷ್ಟ್ರೀಯ ವರಮಾನವನ್ನು ಹೆಚ್ಚಿಸುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.[೨೧]

ಸೇನ್ ಆರ್.ಕೆ ಆ್ಯಂಡ್ ಆರ್.ಎಲ್ "ಸೊಶಿಯೋ ಎಕಾನಾಮಿಕ್ ಡೆವೆಲಪ್‌ಮೆಂಟ್ ಇನ್ ದಿ ಟ್ವೆಂಟಿ ಫಸ್ಟ್ ಸೆಂಚುರಿ" ಎಂಬ ಗ್ರಂಥದಲ್ಲಿ ೨೧ನೇ ಶತಮಾನದಲ್ಲಿ ಆರ್ಥಿಕ ಮತ್ತು ಸಾಮಾಜಿಕವಾಗಿ ಆದ ಬದಲಾವಣೆ ಕುರಿತು ತಿಳಿಸುತ್ತದೆ. ಅಲ್ಲದೇ ವಿಕೇಂದ್ರಿಕರಣ ವ್ಯವಸ್ಥೆಯಲ್ಲಿ ರಾಜಕೀಯ, ಆರ್ಥಿಕ, ಸಾಮಾಜಿಕ ವಲಯದಲ್ಲಿ ಆದ ಬದಲಾವಣೆ ಕುರಿತು ಮಾಹಿತಿ ನೀಡುತ್ತದೆ.[೨೨]

ಸಪ್ರು ಆರ್.ಕೆ "ಡೆವಲಪ್‌ಮೆಂಟ್ ಅಡ್ಮಿನಿಸ್ಟ್ರೇಷನ್" ಎಂಬ ಗ್ರಂಥದಲ್ಲಿ ವ್ಯವಸ್ಥೆಯಲ್ಲಿ ಗುರಿ ಇಲ್ಲದ ನಾಯಕತ್ವದ ರಾಜಕಾರಣದಿಂದ ಅಲ್ಲಿನ ಆರ್ಥಿಕ ಯೋಜನೆಗಳು ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿನ ಅಭಿವೃದ್ಧಿಗೆ ನೇರವಾಗದೆ ಅಡಚಣೆಯಾಗಿದ್ದನ್ನು ವಿಸ್ತಾರವಾಗಿ ವಿವರಿಸಿದ್ದಾರೆ.[೨೩]

ಮೈಕಲ್ ಎ. ಕರ‍್ರಿ "ದ ಚಾಲೆಂಜ್ ಅರ್ಬನ್ ಎಕಾನಮಿಕ್ ಡೆವಲಪ್‌ಮೆಂಟ್" ಎಂಬ ಗ್ರಂಥದಲ್ಲಿ ನಗರ ಪ್ರದೇಶದ ಆರ್ಥಿಕ ಅಭಿವೃದ್ಧಿಯನ್ನು ಒಂದು ಸವಾಲಾಗಿ ಸ್ವೀಕರಿಸಿ ಆ ಪ್ರದೇಶದಲ್ಲಿ ವೈದ್ಯಕೀಯ ಸೌಲಭ್ಯ, ಉತ್ತಮ ಸಾರಿಗೆ ಸಂಪರ್ಕ, ಜನಸಂಖ್ಯಾ ನಿಯಂತ್ರಣ, ನಿರುದ್ಯೋಗ ಸಮಸ್ಯೆಯ ನಿವಾರಣೆ ಕೈಗಾರಿಕೆಗಳ ಸ್ಥಾಪನೆ, ಇಂತಹ ಮುಂತಾದ ಕಾರ್ಯಗಳನ್ನು ನೇರವೇರಿಸುವ ಪರಿಯನ್ನು ವಿವರಿಸುತ್ತದೆ.[೨೪]

ಮ್ಯಾಕ್ ಗ್ರಾಹಂ "ಅನ್‌ರೈಸ್ಡ್ ಕಂಟೆಂಟ್ಸ್ ಅಂಡ್ ಮೆಜರ್‌ಮೆಂಟ್ ಆಫ್ ಸೊಷಿಯೋ ಎಕಾನಾಮಿಕ್ ಡೆವಲಪಮೆಂಟ್ ಆನ್ ಎಂಪಿರಿಕಲ್ ಎನಕ್ವೈರಿ" ಎಂಬ ವರದಿಯಲ್ಲಿ ಒಂದು ಪ್ರದೇಶ ಅಭಿವೃದ್ಧಿ ಹೊಂದಬೇಕಾದರೆ ಅದು ಮೂಲಭೂತವಾಗಿ ಸಾರಿಗೆ-ಸಂಪರ್ಕ, ನೀರಾವರಿ ವ್ಯವಸ್ಥೆ, ವೈದ್ಯಕೀಯ ಸೌಲಭ್ಯ, ಉತ್ತಮ ಶಿಕ್ಷಣ, ಕೈಗಾರಿಕೆ ಸ್ಥಾಪನೆ, ಎಲ್ಲಾ ವ್ಯವಸ್ಥೆಯನ್ನು ಸರಿಯಾದ ರೀತಿಯಲ್ಲಿ ಹೊಂದಿರಬೇಕು ಎಂಬುದನ್ನು ತಿಳಿಸುತ್ತದೆ.[೨೫]

ಕೆ.ವಿ ಸುಂದರಂ "ಸಮ್ ರೀಸೆಂಟ್ ಟ್ರೆಂಡ್ಸ್ ಇನ್ ಡೆವೆಲಪ್‌ಮೆಂಟ್ ಪ್ಲಾನಿಂಗ್ ಇನ್ ನ್ಯಾಷನಲ್ ಡೆವಲಪಮೆಂಟ್" ಎಂಬ ಪುಸ್ತಕದಲ್ಲಿ ಜಿಲ್ಲಾ ಕೇಂದ್ರದ ಬೆಳವಣಿಗೆಯಲ್ಲಿ ಭಾರತದ ಅಂತರಾಷ್ಟ್ರೀಯ ಅಭಿವೃದ್ಧಿ ರಾಜಕೀಯದಲ್ಲಿ ಅಭಿವೃದ್ಧಿ ಯೋಜನೆಗಳು ಯಾವ ರೀತಿ ಪಾತ್ರ ವಹಿಸುತ್ತಿವೆ ಹಾಗೂ ಸಾಮಾಜಿಕ, ಆರ್ಥಿಕ ಬೆಳವಣಿಗೆಯಲ್ಲಿ ಜನರ ಪಾತ್ರ ಕುರಿತು ವಿವರಿಸುತ್ತದೆ.[೨೬]

ಡಿ ಎಂ ನಂಜುಂಡಪ್ಪ ಆ್ಯಂಡ್ ಆರ್.ಕೆ ಸಿನ್ಹಾ "ಬ್ಯಾಕ್ವರ್ಡ್ ಏರಿಯಾ ಡೆವಲಪಮೆಂಟ್ ಪ್ರೊಬ್ಲೆಂಸ್ ಆ್ಯಂಡ್ ಪ್ರೋಸ್ಪೆಕ್ಟ್" ಎಂಬ ಪುಸ್ತಕದಲ್ಲಿ ಕರ್ನಾಟಕದಲ್ಲಿ ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಕುರಿತು ವಿವರಣೆ ನೀಡುತ್ತದೆ.[೨೭]

ಗೌರ್ವಮೆಂಟ್ ಆಫ್ ಇಂಡಿಯಾ "ಪ್ಲಾನಿಂಗ್ ಕಮಿಷನ್ ಐಡೆಂಟಿಪಿಕೇಶನ್ ಆಫ್ ಬ್ಯಾಕ್ವರ್ಡ್ ಏರಿಯಾಸ್" ಎಂಬ ಸಮಿತಿಯಲ್ಲಿ ಭಾರತದ ಹಿಂದುಳಿದ ಪ್ರದೇಶದಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ, ಮತ್ತು ರಾಜಕೀಯವಾಗಿ ಅಲ್ಲಿನ ಭೂಪ್ರದೇಶವನ್ನು ಯಾವ ರೀತಿ ಅಭಿವೃದ್ಧಿ ಪಡಿಸಬೇಕು ಎಂಬ ವಿಚಾರವನ್ನು ವಿವರಿಸುತ್ತದೆ.[೨೮]

ಗೌರ್ವಮೆಂಟ್ ಆಫ್ ಕರ್ನಾಟಕ "ಐಡೆಂಟಿಪಿಕೇಶನ್ ಆಫ್ ಬ್ಯಾಕ್ವರ್ಡ್ ಏರಿಯಾಸ್" ಎಂಬ ವರದಿಯಲ್ಲಿ ಹಿಂದುಳಿದ ಪ್ರದೇಶಗಳನ್ನು ಗುರುತಿಸಿ ಅಲ್ಲಿನ ಭೌಗೋಳಿಕವಾಗಿ, ಧಾರ್ಮಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಅಲ್ಲಿನ ಪರಿಸರಕ್ಕೆ ತಕ್ಕಂತೆ ಯಾವ ರೀತಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕು ಎಂಬ ಅಂಶಗಳನ್ನು ಕುರಿತು ವಿವರಿಸುತ್ತದೆ.[೨೯]

ಸತೀಶ್ ಎಸ್ ಗವಾತಿ ಅವರ "ದಿ ಇಂಪ್ಯಾಕ್ಟ್ ಎಕಾನಮಿಕ್ ಡೆವಲಪ್ಮೆಂಟ್ ಆ್ಯನ್ ಪೊಲಿಟಿಕಲ್ ಪಾರ್ಟಿಸಿಪೇಷನ್ ಎ ಮೈಕ್ರೋ ಸ್ಟಡಿ"ಯಲ್ಲಿ ರಾಜಕೀಯ ಭಾಗವಹಿಸುವಿಕೆಯಲ್ಲಿ ಗಣ್ಯರ ಪಾತ್ರ ಹಾಗೂ ಸಾಮಾಜಿಕ ಸಂಸ್ಥೆಗಳ ಕೆಲಸ ಕಾರ್ಯಗಳು ಮತ್ತು ಸಾಮಾಜಿಕ ಆರ್ಥಿಕ ಅಧ್ಯಯನ ಕುರಿತು ವಿವರಣೆ ನೀಡಿದ್ದಾರೆ.[೩೦]

ಬೈದ್ಯನಾಥ್ ವರ್ಮಾರವರ "ದಿ ಸೋಶಿಯಾಲಜಿ ಆ್ಯಂಡ್ ಪೊಲಿಟಿಕಲ್ ಡೆವಲಪಮೆಂಟ್ ಎ ಥಿರೋಟಿಕಲ್ ಸ್ಟಡಿ"ದಲ್ಲಿ ಒಂದು ರಾಷ್ಟ್ರವು ಅಭಿವೃದ್ಧಿ ಹೊಂದಬೇಕಾದರೆ ಅಲ್ಲಿನ ಪ್ರಮುಖ ಅಂಶಗಳಾದ ಆರ್ಥಿಕ, ಸಾಮಾಜಿಕ, ರಾಜಕೀಯ ಅಂಶಗಳು ಯಾವ ರೀತಿ ಕಾರ್ಯನಿರ್ವಹಿಸುತ್ತವೆ ಎಂಬುದನ್ನು ವಿವರಿಸುತ್ತದೆ.[೩೧]

ಬಾಲಕೃಷ್ಣನ್ ಎನ್ ನಯರ್ "ಸಿಸ್ಟಮ್ಯಾಟಿಕ್ ಅಪ್ರೋಚಸ್ ಟು ಇಂಡಿಯನ್ ಸೋಶಿಯೋ ಎಕಾನಮಿಕ್ ಡೆವಲಪಮೆಂಟ್" ಎಂಬ ಪುಸ್ತಕದಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯ ವ್ಯವಸ್ಥೆಯಲ್ಲಿ ಅಭಿವೃದ್ಧಿ ಹಂತಗಳು ಯಾವ ರೀತಿ ಸಹಾಯಕಾರಿಯಾಗಿವೆ. ಅಲ್ಲದೇ ಒಂದು ಪ್ರದೇಶ ಅಭಿವೃದ್ಧಿ ಹೊಂದಬೇಕಾದರೆ ಅದು ಉದ್ಯೋಗ, ಕೈಗಾರಿಕೆಗಳ ಬೆಳವಣಿಗೆ, ಕುಟುಂಬ ಕಲ್ಯಾಣ ಯೋಜನೆಗಳ ಅಸ್ತಿತ್ವದ, ಮಿತವಾದ ಜನಸಂಖ್ಯೆ ಹಾಗೂ ಮುಂತಾದ ಅಂಶಗಳು ಪ್ರಮುಖ ಪಾತ್ರವಹಿಸುತ್ತವೆ ಎಂಬ ಅಂಶವನ್ನು ಸ್ಪಷ್ಟಪಡಿಸುತ್ತದೆ.[೩೨]

ಡಾ. ಚಂದ್ರಪೂಜಾರಿ ಮತ್ತು ಡಾ. ಟಿ.ಆರ್. ಚಂದ್ರಶೇಖರ್ ಅವರ ಅಭಿವೃದ್ಧಿ ಅಧ್ಯಯನ ಎಂಬ ಪುಸ್ತಕದಲ್ಲಿ ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆ ಹೋಗಲಾಡಿಸಲು ಕೆಲವು ವಿಶಿಷ್ಟ ಚಳುವಳಿಗಳು ಪ್ರಾರಂಭವಾಗಿದ್ದರ ಕುರಿತು ಹಾಗೂ ಈ ಚಳುವಳಿಗಳು ಉತ್ತರ ಕರ್ನಾಟಕದ

ಪ್ರಾದೇಶಿಕ ಅಸಮಾನತೆಯನ್ನು ಯಾವ ರೀತಿ ಪರಿಹರಿಸುತ್ತವೆ ಎಂಬ ವಿವರಣೆಯನ್ನು ವಿವರಿಸಲಾಗಿದೆ.[೩೩]

ಹೇಮಂತ್ ರಾವ್ "ರಿಜನಲ್ ದಿಸ್ಪರಿಟೀಸ್ ಆಂಡ್ ಡೆವಲಪಮೆಂಟ್ ಇನ್ ಇಂಡಿಯಾ" ಎಂಬ ಪುಸ್ತಕದಲ್ಲಿ ನಗರ ಸರ್ಕಾರಗಳ ಅರ್ಥ, ಮಹತ್ವ ಹಾಗೆಯೇ ನಗರ ಪ್ರದೇಶಗಳ ಅಭಿವೃದ್ಧಿಯಲ್ಲಿ ಇವುಗಳ ಕಾರ್ಯವೈಖರಿಯನ್ನು ತಿಳಿಸುತ್ತದೆ. ಅಲ್ಲದೇ ಇಂತಹ ಸರ್ಕಾರಗಳು ಸ್ಥಳೀಯ ಪ್ರದೇಶದ ಅಭಿವೃದ್ಧಿ ಕಾರ್ಯವನ್ನು ನೆರವೇರಿಸುವಲ್ಲಿ ಅಲ್ಲಿನ ರಾಜಕೀಯ ಪಾತ್ರದ ಕುರಿತು ವಿವರಿಸುತ್ತದೆ.[೩೪]

ಕೋಟೆಡ್ ಫೈನರ್ "ರಿಜಿನಲ್ ದಿಸ್ಪರಿಟೀಸ್ ಇಶ್ಯೂಸ್ ಇಂಡಿಯಾ" ಎಂಬ ಗ್ರಂಥದಲ್ಲಿ ಅಭಿವೃದ್ಧಿ ಅಧ್ಯಯನಕ್ಕೆ ಸಂಬಂಧಿಸಿದಂತೆ ಅಭಿವೃದ್ಧಿಯ ಅರ್ಥ, ವಾಕ್ಯ ಮತ್ತು ಪರಿಕಲ್ಪನೆಯನ್ನು ಸಿದ್ಧಾಂತಗಳ ಹಿನ್ನೆಲೆಯಲ್ಲಿ ವಿವರಿಸಿದ್ದಾರೆ. ಅಲ್ಲದೇ, ಮೂಲಭೂತ ಸೌಲಭ್ಯಗಳಾದ ಉದ್ಯೋಗ, ಶಿಕ್ಷಣ, ಬಟ್ಟೆ, ಆಹಾರ, ವಸತಿ ಈ ಮೂಲ ಸೌಕರ್ಯಗಳನ್ನು ಒದಗಿಸಿಕೊಡುವಲ್ಲಿ ಅಭಿವೃದ್ಧಿ ರಾಜಕೀಯವು ಯಾವ ರೀತಿ ಪ್ರಯತ್ನ ಮಾಡಿದೆ ಎಂಬ ಮಾಹಿತಿಯನ್ನು ತಿಳಿಸುತ್ತದೆ.[೩೫]

* ನಗರ ಸಮುದಾಯಗಳಲ್ಲಿ ವಿವಿಧ ರೀತಿಯ ಸಮಸ್ಯೆಗಳು ಗೋಚರಿಸುತ್ತದೆ. ಅವುಗಳೆಂದರೆ ಬಡತನ, ಭಿಕ್ಷಾಟನೆ, ವೇಶ್ಯಾವಾಟಿಕೆ, ಅನಕ್ಷರತೆ, ಸಂಪ್ರದಾಯನಿಷ್ಠತೆ, ಅಜ್ಞಾನ, ಮಧ್ಯಪಾನ, ಮುಂತಾದ ಸಮಸ್ಯೆಗಳನ್ನು ನಿವಾರಣೆ ಮಾಡಿ ಜಿಲ್ಲೆಯ ಜನರ ಬದುಕನ್ನು ಹಸನುಗೊಳಿಸುವ ಹಾಗೂ ಸಂತೃಪ್ತ ಜೀವನ ಸಾಗಿಸುವಂತೆ ಮಾಡುವ ಪ್ರಯತ್ನವೇ ನಗರ ಅಭಿವೃದ್ಧಿಯಾಗಿದೆ.[೩೬] ಡಾ. ಸಿ. ಚಂದ್ರಪ್ಪರವರ ಭಾರತದ ನಗರೀಕರಣ ಎಂಬ ಪುಸ್ತಕದಲ್ಲಿ ಸ್ವಾತಂತ್ರ್ಯ ದೊರೆತ ಮೇಲೆ ನಗರೀಕರಣವು ತ್ವರಿತಗತಿಯಲ್ಲಿ ಸಾಗಿತು. ೧೯೫೧ರಲ್ಲಿ ನಗರಗಳಲ್ಲಿನ ಜನಸಂಖ್ಯೆ ೬೨ಮಿಲಿಯನ್ ಇದ್ದದು ೧೯೮೧ರಲ್ಲಿ ೧೫೯ಮಿಲಿಯನ್‌ಗಳಿಗೆ ಹೆಚ್ಚಿತು. ದೇಶದ ಜನಸಂಖ್ಯೆಯಲ್ಲಿ ನಗರದ ಜನಸಂಖ್ಯೆಯ ಶೇಕಡಾ ೧೭.೬ ರಿಂದ ೨೩.೭ಕ್ಕೆ ಹೆಚ್ಚಿತ್ತು. ೧೦ ಲಕ್ಷಕ್ಕೂ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿದ ನಗರಗಳ ಸಂಖ್ಯೆಯು ೧೨ಕ್ಕೆ ಏರಿತು. ಏರಿಕೆಗೆ ಕಾರಣವೇನೆಂದರೆ,

* ಭಾರತಕ್ಕೆ ನಿರಾಶ್ರಿತರ ಆಗಮನ ಮತ್ತು ಅವರ ನೆಲೆಸುವಿಕೆ.
* ಚಂಡಿಗಢ, ಭುವನೇಶ್ವರ್ ಮತ್ತು ಗಾಂಧಿನಗರಗಳಂತಹ ಆಡಳಿತಾತ್ಮಕ ನಗರಗಳ ನಿರ್ಮಾಣ.
* ಪ್ರಮುಖ ನಗರಗಳ ಬಳಿ ಕೈಗಾರಿಕಾ ಪಟ್ಟಣಗಳು ಮತ್ತು ಕೈಗಾರಿಕಾ ನಗರಗಳ ನಿರ್ಮಾಣ.
* ೧ ಲಕ್ಷ ಮತ್ತು ೧೦ ಲಕ್ಷ ಜನಸಂಖ್ಯೆಯುಳ್ಳ ನಗರಗಳ ನಿರ್ಮಾಣ.
* ಚಿಕ್ಕ ಚಿಕ್ಕ ನಗರ ಮತ್ತು ಪಟ್ಟಣಗಳ ಬೆಳವಣಿಗೆಯ ಸ್ಥಗಿತ.

* ನಗರಗಳಲ್ಲಿ ಕೊಳಚೆ ಪ್ರದೇಶಗಳ ಹೆಚ್ಚುವಿಕೆ ಮತ್ತು ಅದರಿಂದ ಉಂಟಾದ ಗ್ರಾಮ ನಗರಗಳ ನಡುವಿನ ಅಂತರ.

* ನಗರ ಯೋಜನೆ ಮತ್ತು ನಾಗರಿಕ ಸೌಲಭ್ಯಗಳು ದೊರೆಯುವಿಕೆ.[೩೭]

ಪ್ರದೇಶದ ಒತ್ತುವರಿ, ಕಳಪೆ ಗುಣಮಟ್ಟದ ನಿರ್ಮಾಣ, ಅವೈಜ್ಞಾನಿಕ ನಿರ್ಮಾಣಗೊಂಡ ಮನೆಗಳು, ಮುಂತಾದವು ಪ್ರಮುಖವಾದ ಸಮಸ್ಯೆಗಳಾಗಿವೆ. ದೊಡ್ಡ ನಗರಗಳು ತೀವ್ರ ಗತಿಯಲ್ಲಿ ಬೆಳೆದು ಸುತ್ತಮುತ್ತಲ ಹಳ್ಳಿಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡಂತೆ ನೀರಿನ ಸರಬರಾಜು, ಚರಂಡಿ, ಕೊಳಚೆ ಪ್ರದೇಶಗಳ ಜನರಿಗೆ ಸೂಕ್ತ ಸೌಕರ್ಯವನ್ನು ಕಲ್ಪಿಸುವುದು ಅಗತ್ಯವಾಗಿದೆ. ಆದರೆ ಕೊಳಚೆ ಪ್ರದೇಶಗಳ ಜನರು ಎಲ್ಲಾ ಸೌಕರ್ಯಗಳನ್ನು ಕಲ್ಪಿಸುವ ಅಗತ್ಯವಾಗಿದೆ. ಆದರೆ ಕೊಳಚೆ ಪ್ರದೇಶಗಳ ಜನರು ಎಲ್ಲ ಸವಲತ್ತುಗಳನ್ನು ಬೇಡುತ್ತಾರೆ ಹೊರತು ತೆರಿಗೆ ರೂಪದಲ್ಲಿ ಯಾವ ಹಣವನ್ನು ನೀಡುವುದಿಲ್ಲ. ಕಾನೂನುಬಾಹಿರವಾಗಿ ಆಕ್ರಮಿಸಿಕೊಂಡ ಪ್ರದೇಶಗಳನ್ನು ಸಕ್ರಮಗೊಳಿಸಲು ರಾಜಕೀಯ ವ್ಯಕ್ತಿಗಳ ಒತ್ತಡವು ತೀವ್ರವಾಗಿರುತ್ತದೆ. ಹೀಗಾಗಿ ಕೆಲವು ಸವಲತ್ತುಗಳನ್ನು ಕೊಳಚೆ ಪ್ರದೇಶಗಳ ಜನರಿಗೆ ನೀಡಲಾಗುತ್ತಿದೆ. ಈ ನಗರ ಯೋಜನೆಗಳು ದೇಶವು ಸ್ವತಂತ್ರಗೊಂಡ ಮೇಲೆ ಜಾರಿಗೆ ಬಂದವು.[೩೮]

ನಗರ ಅಧ್ಯಯನ ವೈಜ್ಞಾನಿಕ ಸಂಶೋಧನೆಗಳು ೧೯ನೇ ಶತಮಾನದಿಂದ ಈಚೆಗೆ ಪ್ರಪಂಚದ ಬಹುತೇಕ ರಾಷ್ಟ್ರಗಳಲ್ಲಿ 'ನಗರೀಕರಣ ಅಧ್ಯಯನ' ಎನ್ನುವ ಹೊಸ ಅಧ್ಯಯನ ವಿಧಾನ ಒಂದು ಕಾಣಿಸಿಕೊಂಡಿತು. ಈ ಅಧ್ಯಯನ ಹುಟ್ಟು ಹಾಕಿದವರು ಸಮಾಜ ವಿಜ್ಞಾನಿಗಳು. ಎರಡು ಮಹಾಯುದ್ಧಗಳಲ್ಲಿ ಯೂರೋಪ್ ಮತ್ತು ಇತರ ಪ್ರದೇಶಗಳಲ್ಲಿ ನಗರ ಪ್ರದೇಶಗಳು ನಾಶ ಹೊಂದಿರುವುದು ನಗರ ಅಧ್ಯಯನಕಾರರಿಗೆ ಹೊಸ ಸವಾಲು ಒಡ್ಡಿತು. ನಗರ ಅಧ್ಯಯನದ ಸಂಶೋಧನೆ ಎರಡನೇ ಜಾಗತಿಕ ಯುದ್ಧದ ನಂತರ ವ್ಯಾಪಕವಾಗಿ ಕಾರ್ಯಗತಗೊಂಡವು. ನಗರದ ಅಧ್ಯಯನಕ್ಕೆ ಸಂಬಂಧಿಸಿದಂತೆ ಇತಿಹಾಸ ಮತ್ತು ಮಾನವ ವಿಜ್ಞಾನಿಗಳು ಒಂದು ವಿಚಿತ್ರವಾದರೂ ಆದರೆ, ಆಶ್ಚರ್ಯಕರವಾದ ರೀತಿಯಲ್ಲಿ ಪರಸ್ಪರ ಹೊಸೆದುಕೊಂಡಿದೆ.[೩೯]

ಗ್ರಾಮೀಣ ಪ್ರದೇಶ ಪಟ್ಟಣವಾಗಿ ಪರಿವರ್ತನೆಗೊಳ್ಳುವ ಪ್ರಕ್ರಿಯೆಯನ್ನು ನಗರೀಕರಣವೆಂದು ಕರೆಯಬಹುದು. ಈ ಪ್ರಕ್ರಿಯೆಯಿಂದಾಗಿ ನಗರತ್ವ ರೂಪಗೊಳ್ಳುತ್ತದೆ. ನಗರದ ಜೀವನ ಕ್ರಮವನ್ನು ನಾವು ಸದ್ಯಕ್ಕೆ ನಗರತ್ವ ಎಂಬ ನೆಲೆಯಲ್ಲಿ ವ್ಯಾಖ್ಯಾನಿಸಬಹುದು. ಇದೊಂದು ವಿಶೇಷ ಪರಿಕಲ್ಪನೆಯಾಗಿದ್ದು ನಗರಜೀವನ ಮಾದರಿಯನ್ನು ಸಂಕೇತಿಸುತ್ತದೆ. ನಗರ ಜೀವನದ ವೈವಿಧ್ಯತೆ, ಭಿನ್ನರೂಪತೆ, ನಗರವಾಸಿಗಳ ಪರಸ್ಪರ ಅವಲಂಬನೆಯಲ್ಲಿನ ಹೆಚ್ಚಳ, ವೈಚಾರಿಕತೆ ಪ್ರಧಾನ ಜೀವನ, ಸಾಮಾಜಿಕ ಸಂಬಂಧಗಳಲ್ಲಿ ಪ್ರತ್ಯೇಕತೆ, ಮೊದಲಾದ ಜೀವನಶೈಲಿಯ ಪ್ರಧಾನ ಗುಣವಿಶೇಗಳನ್ನು ನಗರತ್ವ ಬೆಳವಣಿಗೆಯ ಹೊರನೋಟದ ಮುಖಗಳನ್ನು ಸಂಕೇತಿಸಿದರೆ, ನಗರತ್ವವು ನಗರ ಬೆಳವಣಿಗೆಯ ಒಳನೋಟವನ್ನು ಸಂಕೇತಿಸುತ್ತದೆ. ನಗರೀಕರಣವು ಪ್ರಪಂಚದ ಯಾವುದೇ

ಭಾಗದಲ್ಲಿ ಆಗುತ್ತಿದ್ದರೂ ಅದು ಅಲ್ಲಿನ ಸಾಮಾಜಿಕ, ರಾಜಕೀಯ, ಆರ್ಥಿಕ, ಸಾಮಾಜಿಕ, ಭೌಗೋಳಿಕ ಮತ್ತು ಧಾರ್ಮಿಕ ಅಂಶಗಳಿಂದ ಪ್ರೇರಣೆಗೊಂಡಿರುತ್ತದೆ. ಯಾವುದೇ ಒಂದು ಅಂಶ ಸ್ವತಂತ್ರವಾಗಿ ಒಂದು ಹಳ್ಳಿ ಪ್ರದೇಶ ನಗರ ಕೇಂದ್ರವಾಗಿ ಪರಿವರ್ತನೆ ಹೊಂದುವುದಕ್ಕೆ ಪೂರಕವಾಗಲಾರದು.[೪೦]

ಸಿ.ಬಿ ಮೆಮೊರಿಯವರ ಪ್ರಕಾರ ನಗರೀಕರಣವೆಂಬುದು ಒಂದು ಪ್ರಕ್ರಿಯೆಯಾಗಿದ್ದು ಅದರ ಮೂಲಕ ನಗರದ ಮೌಲ್ಯಗಳು ಪ್ರಸಾರಗೊಳ್ಳುವವು, ವರ್ತನೆಯ ನಮೂನೆಗಳು ರೂಪಾಂತರಗೊಳ್ಳುವವು ಮತ್ತು ಗ್ರಾಮಗಳಿಂದ ನಗರಗಳತ್ತ ಜನರ ಚಲನೆ ಸಂಭವಿಸುವದು.[೪೧]

ವಾಲ್ಲೇಸ್ ಮತ್ತು ವಾಲ್ಲೇಸ್ ರವರ ಪ್ರಕಾರ ಗ್ರಾಮೀಣ ಪ್ರದೇಶಗಳಿಂದ ನಗರಗಳತ್ತ ಜನರು ಚಲಿಸುವುದನ್ನೇ ನಗರೀಕರಣ ಎನ್ನುತ್ತಾರೆ.[೪೨]

ಹುವಾರ್ಡ್ ವುಲ್ಸನ್ ಎಂಬ ನಗರ ಸಮಾಜಶಾಸ್ತ್ರಜ್ಞ ತನ್ನ ಮೆಟ್ರೊಪೊಲಿಸ್ ಎಂಬ ಗ್ರಂಥದಲ್ಲಿ ನಗರವನ್ನು ಹೀಗೆ ವ್ಯಾಖ್ಯಾನಿಸಿದ್ದಾರೆ. ಒಂದು ಸ್ಥಳೀಯ ಸರ್ಕಾರದ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿರುವ ಹಲವು ಸಮಾನ ಆಸಕ್ತಿಗಳನ್ನು ಮತ್ತು ಸಂಸ್ಥೆಗಳನ್ನು ಹೊಂದಿದ್ದು ಒಂದು ಸೀಮಿತ ಭೌಗೋಳಿಕ ಪ್ರದೇಶದಲ್ಲಿ ದಟ್ಟವಾಗಿ ನೆಲೆಸಿರುವ ಜನಸಮೂಹವನ್ನು ನಗರ ಎನ್ನಬಹುದು.ಳಿ

ಲೂಯಿ ವರ್ತ್‌ರವರ ಪ್ರಕಾರ ನಗರ ಎಂಬುದು ಸಾಪೇಕ್ಷ ದೊಡ್ಡ ಗಾತ್ರದ ಹೆಚ್ಚು ಜನಸಾಂದ್ರತೆಯುಳ್ಳ ಹಾಗೂ ಸಾಮಾಜಿಕವಾಗಿ ವೈವಿಧ್ಯತೆಯನ್ನು ಹೊಂದಿದ ಜನರ ಶಾಶ್ವತ ನೆಲೆಯಾಗಿದೆ. ಜೆಮ್ಸ್ ಎ ಕ್ವಿನ್ ಎಂಬಾತನು ತನ್ನ 'ಅರ್ಬನ್ ಸೋಶಿಯಾಲಜಿ' ಎಂಬ ಪುಸ್ತಕದಲ್ಲಿ ನಗರವನ್ನು ವಿಶಿಷ್ಟೀಕರಣ ವಿದ್ಯಮಾನವಾಗಿದೆ ಮತ್ತು ಕೃಷಿಯ ಹೊರತಾದ ಉದ್ಯೋಗಗಳಲ್ಲಿ ನಿರತವಾದ ಜನರ ಸಮೂಹವಾಗಿದೆ ಎಂದು ಹೇಳಿರುವರು.[೪೪]

ಥಿಯೋಡೊರ್‌ಸನ್‌ರವರ ಪ್ರಕಾರ ನಗರ ಸಮುದಾಯವು ಅತಿಯಾದ ಜನಸಾಂದ್ರತೆಯೊಂದಿಗೆ ಕೃಷಿಯೇತರ ಉದ್ಯೋಗಗಳ ಪ್ರಾಧ್ಯಾನತೆಯನ್ನು ಹೊಂದಿರುವ ಸಂಕೀರ್ಣ ಸ್ವರೂಪದ ಕ್ರಮ ವಿಭಜನೆಗೆ ಕಾರಣವಾಗಿರುವ ಅತ್ಯಧಿಕ ಮಟ್ಟದ ವಿಶೇ। ಪರಿಣತಿಯನ್ನು ಪಡೆದಿರುವ ಹಾಗೂ ಔಪಚಾರಿಕ ಸ್ವರೂಪದ ಸ್ಥಳೀಯ ಸರ್ಕಾರವನ್ನು ಒಳಗೊಂಡಿರುವ ಸಮುದಾಯವಾಗಿರುತ್ತದೆ. ಅದು ವೈಯಕ್ತಿಕ ಸ್ವರೂಪದ ಮಾಧ್ಯಮಿಕ ಸಂಬಂಧಗಳನ್ನು ಮತ್ತು ಔಪಚಾರಿಕ ಸ್ವರೂಪದ ನಿಯಂತ್ರಣ ವ್ಯವಸ್ಥೆಯನ್ನು ಹೊಂದಿರುವ ವ್ಯವಸ್ಥೆಯಿರುತ್ತದೆ.[೪೫]

೧.೨. ಅಧ್ಯಯನದ ಉದ್ದೇಶಗಳು

ಕರ್ನಾಟಕ ರಾಜ್ಯದ ಭಾಗವಾದ ಹೈದರಾಬಾದ್-ಕರ್ನಾಟಕ ಪ್ರದೇಶದಲ್ಲಿ ಬರುವ ಒಂದು ನಗರವಾದ ಕೊಪ್ಪಳ ನಗರದ ನಗರೀಕರಣದ ಅಭಿವೃದ್ಧಿ ರಾಜಕಾರಣವನ್ನು ಗಮನದಲ್ಲಿ ಇಟ್ಟುಕೊಂಡು ಕೆಳಕಂಡ ಉದ್ದೇಶಗಳನ್ನು ರೂಪಿಸಿಕೊಂಡಿದ್ದೇವೆ.

೧. ನಗರ ಪ್ರದೇಶದ ವಸತಿ ಮತ್ತು ಜಾತಿ ನಡುವಿನ ಸಂಬಂಧಗಳನ್ನು ತಿಳಿದುಕೊಳ್ಳುವುದು. (ಯಾವ ಯಾವ ಜಾತಿಯವರು ಎಲ್ಲಿ ಎಲ್ಲಿ ವಾಸವಾಗಿದ್ದಾರೆ, ಸ್ಲಮ್‌ಗಳಲ್ಲಿ ಇರುವ ಜನರ ಜಾತಿ ಯಾವುದು ಒಂದೇ ಜಾತಿಯವರು ಒಂದೇ ಕಡೆ ವಾಸಿಸುತ್ತಿದ್ದಾರೆಯೇ? ಎನ್ನುವುದನ್ನು ನೋಡುವುದು)

೨. ನಗರ ವಾಸಿಗಳ ಸಾಮಾಜಿಕ ಅಭಿವೃದ್ಧಿಯನ್ನು ಅಧ್ಯಯನ ಮಾಡುವುದು (ಆರೋಗ್ಯ, ವಸತಿ, ಶಿಕ್ಷಣ, ಕುಡಿಯುವ ನೀರು, ನೈರ್ಮಲ್ಯ)

೩. ನಗರ ವಾಸಿಗಳ ಆರ್ಥಿಕ ಅಭಿವೃದ್ಧಿಯ ಅಧ್ಯಯನ (ಆದಾಯ, ಕಸಬು, ಆಸ್ತಿ–ಪಾಸ್ತಿ (ಚರಾಸ್ತಿ, ಸ್ಥಿರಾಸ್ತಿ)

೪. ನಗರ ವಾಸಿಗಳ ರಾಜಕೀಯ ಪಾಲ್ಗೊಳ್ಳುವಿಕೆ.

೫. ಮೇಲಿನ ಉದ್ದೇಶಗಳನ್ನು ಆಧಾರವಾಗಿಟ್ಟುಕೊಂಡು ಸಲಹೆಯನ್ನು ನೀಡುವುದು.

೧.೩. ಅಧ್ಯಯನದ ಮಹತ್ವ

ಭಾರತವು ಹಳ್ಳಿಗಳಿಂದ ಕೂಡಿದ ರಾಷ್ಟ್ರ ಕೃಷಿ ನಮ್ಮ ದೇಶದ ಬಹುಪಾಲು ಉದ್ಯೋಗವನ್ನು ಒದಗಿಸಿದ ಕ್ಷೇತ್ರ, ಆದರೆ ಇವತ್ತು ಪರಿಸ್ಥಿತಿ ಬದಲಾಗಿದೆ. ಆಧುನಿಕ ಕಾಲದಲ್ಲಿ ಹೆಚ್ಚು ಜನ ಹಳ್ಳಿಯಲ್ಲಿರುವ ಕೃಷಿಯನ್ನು ಬಿಟ್ಟು ನಗರಗಳಿಗೆ ಧಾವಿಸುತ್ತಿದ್ದಾರೆ. ಈ ಪ್ರಕ್ರಿಯೆಯನ್ನು ನಾವು ನಗರೀಕರಣ ಎಂಬ ಹೆಸರಿನಿಂದ ಕರೆಯುತ್ತೇವೆ. ನಗರೀಕರಣ ಎನ್ನುವುದು ಪ್ರಪಂಚದ ಮೂಲೆ ಮೂಲೆಯಲ್ಲಿಯೂ ಕೂಡ ನಡೆಯುವ ಒಂದು ಪ್ರಕ್ರಿಯೆಯಾಗಿದೆ. ಇವತ್ತು ದಿನದಿಂದ ದಿನಕ್ಕೆ ಜನಸಂಖ್ಯೆ ಹೆಚ್ಚಾಗುತ್ತಿದೆ. ಪರಿಸರದಲ್ಲಿ ಅನೇಕ ವೈಫರೀತ್ಯವನ್ನು ಕಾಣುತ್ತಿದ್ದೇವೆ. ಸರಿಯಾದ ಸಮಯಕ್ಕೆ ಮಳೆಯಾಗುತ್ತಿಲ್ಲ, ಮಳೆಯೂ ಇಲ್ಲದಿದ್ದರಿಂದ ಅಂತರ್ಜಲವು ಕೂಡಾ ಕಡಿಮೆಯಾಗುತ್ತಿದೆ. ರೈತರು ಕೈಸುಟ್ಟುಕೊಳ್ಳುವ ಪರಿಸ್ಥಿತಿ ತಲುಪಿದ್ದಾರೆ. ಅವರು ಬೆಳೆದ ಬೆಳೆಗೆ ಸರಿಯಾದ ಬೆಲೆಯೂ ಸಿಗುತ್ತಿಲ್ಲ. ಸರ್ಕಾರಗಳು ಒಂದು ಸುವ್ಯವಸ್ಥಿತ ಮಾರುಕಟ್ಟೆಯನ್ನು ನೀಡಲೂ ಕೂಡಾ ವಿಫಲರಾಗಿದ್ದಾರೆ. ರೈತರು ಕಷ್ಟಪಟ್ಟು ದುಡಿದ ದುಡ್ಡೆಲ್ಲ ದಲ್ಲಾಳಿಗಳ ಪಾಲಾಗುತ್ತಿದೆ. ಹೀಗಾಗಿ ಅನೇಕ ಸಂಕಷ್ಟಗಳನ್ನು ಎದುರಿಸುತ್ತಿರುವ ರೈತರು ಹಳ್ಳಿಯ ಜನರು ತಮ್ಮ ಆಸ್ತಿಪಾಸ್ತಿಯನ್ನು ಮಾರಿ ನಗರಗಳಿಗೆ ಉದ್ಯೋಗವನ್ನು ಹುಡುಕಿಕೊಂಡು ಹೋಗುವ ಪ್ರಕ್ರಿಯೆ ಇವತ್ತು ಸಾಮಾನ್ಯವಾಗಿದೆ. ಹಾಗಾಗಿ ನಗರಗಳು ದಿನದಿಂದ ದಿನಕ್ಕೆ ತಮ್ಮ ಗಾತ್ರವನ್ನು ಹೆಚ್ಚಿಸಿಕೊಳ್ಳುತ್ತದೆ. ನಗರಗಳ ಸ್ಥಿತಿ ಹೇಗಿದೆ, ನಗರೀಕರಣ ಪ್ರಕ್ರಿಯೆ ಯಾವ ರೀತಿಯಾಗುತ್ತಿದೆ, ಈ ನಗರೀಕರಣದಲ್ಲಿ ನಮ್ಮನಾಳುವ ಜನಪ್ರತಿನಿಧಿಗಳು ಪಾತ್ರವೇನಿದೆ. ಅವರು ಎಷ್ಟರಮಟ್ಟಿಗೆ ತಮ್ಮ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ, ನಗರ ಎದುರಿಸುತ್ತಿರುವ ಸವಾಲುಗಳೇನು, ಆ ಸವಾಲುಗಳನ್ನು ಪರಿಹರಿಸುವಲ್ಲಿ ಪ್ರತಿನಿಧಿಗಳ ಪಾತ್ರವೇನು, ನಾವು ಆಯ್ದುಕೊಂಡ

ನಗರ ಚಿಕ್ಕ ನಗರ ದೊಡ್ಡ ನಗರಗಳಿಗೆ ಹೋಲಿಸಿದಾಗ ಇಲ್ಲಿ ಯಾವ ರೀತಿಯ ಬದಲಾವಣೆಯನ್ನು ಕಾಣುತ್ತಿದ್ದೇವೆ ಮತ್ತು ಸರಿಯಾದ ದಿಕ್ಕಿನಲ್ಲಿ ನಗರವು ಸುಸಜ್ಜಿತವಾಗಿ ಬೆಳೆಯುತ್ತಿದೆಯೇ ನಗರದಲ್ಲಿರುವ ಜನರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ,ರಾಜಕೀಯ ಪಾಲ್ಗೊಳ್ಳುವಿಕೆ, ಯಾವ ಯಾವ ಮಟ್ಟದಲ್ಲಿದೆ, ಸಾಗಬೇಕಾದ ದಿಕ್ಕಿನಲ್ಲಿ ನಗರವು ಸಾಗುತ್ತಿದೆಯೇ ಅಥವಾ ನಿಧಾನಗತಿಯಲ್ಲಿ ಸಾಗುತ್ತಿದೆಯೇ ಅಥವಾ ಹಿಂದುಳಿದಿದೆಯೋ ನಗರದ ಐತಿಹಾಸಿಕ ಹಿನ್ನೆಲೆ ಏನು, ನಗರದಲ್ಲಿ ಯಾವ ಜಾತಿಯ ಜನ ಹೆಚ್ಚಿರುವವರು ಮತ್ತು ನಗರದಲ್ಲಿ ಪ್ರಮುಖ ಹುದ್ದೆಗಳು ಯಾರ ಕೈಯಲ್ಲಿರುವವು, ನಗರದಲ್ಲಿ ಮೂಲಭೂತ ಸೌಕರ್ಯಗಳ ಸ್ಥಿತಿ ತಿಳಿದುಕೊಳ್ಳುವುದು ಹಾಗೂ ನಾವು ಆಯ್ದುಕೊಂಡ ನಗರವು ಹಿಂದುಳಿದ ಹೈದ್ರಾಬಾದ್ ಕರ್ನಾಟಕದ ಭಾಗವಾಗಿರುವುದರಿಂದ ಸರ್ಕಾರವು ಅಭಿವೃದ್ಧಿಗೆ ಏನೆಲ್ಲಾ ಕಾರ್ಯಕ್ರಮಗಳನ್ನು ಕೈಗೊಂಡಿದೆ. ಏಕೆ ಜನರು ನಗರಕ್ಕೆ ವಲಸೆ ಬರುತ್ತಿದ್ದಾರೆ. ಈ ನಗರದ ಬೆಳವಣಿಗೆಯಲ್ಲಿ ಯಾರ ಪಾತ್ರ ಎಷ್ಟಿದೆ, ನಗರದ ಭೌಗೋಳಿಕ ಸ್ಥಿತಿಯನ್ನು ತಿಳಿಯುವುದು ಮುಂದುವರೆದ ಮಧ್ಯಮ ಮತ್ತು ಹಿಂದುಳಿದ ಪ್ರದೇಶದ ಜನರ ಜೀವನಮಟ್ಟವನ್ನು ತುಲನಾತ್ಮಕವಾಗಿ ತಿಳಿದುಕೊಳ್ಳುವುದು. ಒಟ್ಟಿನಲ್ಲಿ ನಗರದ ಸಂಪೂರ್ಣ ಚಿತ್ರಣವನ್ನು ಅಧ್ಯಯನ ಮಾಡುವುದು ಈ ಅಧ್ಯಯನದ ಮಹತ್ವವಾಗಿದೆ.

೧.೪. ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನವನ್ನು ಕರ್ನಾಟಕ ರಾಜ್ಯದ ಹೈದ್ರಾಬಾದ್ ಕರ್ನಾಟಕದ ಒಂದು ಜಿಲ್ಲೆಯಾದ ಕೊಪ್ಪಳ ಜಿಲ್ಲೆಯ ಕೊಪ್ಪಳ ನಗರವನ್ನು ಆಯ್ದುಕೊಳ್ಳಲಾಗಿದೆ ಈ ಜಿಲ್ಲೆಯು ಇತ್ತೀಚೆಗೆ ಅಂದರೆ ೧೯೯೮ ರಲ್ಲಿ ರಾಯಚೂರು ಜಿಲ್ಲೆಯಿಂದ ಬೇರ್ಪಟ್ಟು ಪ್ರತ್ಯೇಕ ಜಿಲ್ಲೆಯಾಗಿ ಮಾರ್ಪಟ್ಟಿತು. ನಮ್ಮ ಅಧ್ಯಯನವು ಕೊಪ್ಪಳ ನಗರಕ್ಕೆ ಸೀಮಿತವಾಗಿದ್ದು ೨೦೦೭ರವರೆಗೆ ೨೭ ವಾರ್ಡ್‌ಗಳನ್ನು ಹೊಂದಿದ ನಗರ ಪ್ರಸ್ತುತ ೩೧ ವಾರ್ಡುಗಳನ್ನು ಹೊಂದಿದ್ದು ಪ್ರೊಫೆಸರ್ ನಂಜುಂಡಪ್ಪ ವರದಿ ಪ್ರಕಾರ ಹಿಂದುಳಿದ ಪ್ರದೇಶಗಳಲ್ಲಿ ಕೊಪ್ಪಳವು ಒಂದು, ಜಿಲ್ಲೆಯು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದೆ. ಕೆಲವೊಂದು ಜಿಲ್ಲೆಗಳಿಗೆ, ನಗರಗಳಿಗೆ ಹೋಲಿಸಿದಾಗ ಆಗಬೇಕಾದ ಅಭಿವೃದ್ಧಿ ಆಗದೇ ಇರುವುದನ್ನು ಕಾಣುತ್ತೇವೆ. ಮಾನವ ಅಭಿವೃದ್ಧಿ ವರದಿ ಪ್ರಕಾರ ಸಾಕ್ಷರತೆ, ಉದ್ಯಮ ರಂಗ, ನೀರಾವರಿ, ಮೂಲಭೂತ ಸೌಕರ್ಯಗಳು, ಲಿಂಗ ಸಂಬಂಧಿ, ಮಕ್ಕಳ ಅಭಿವೃದ್ಧಿ ಸೂಚ್ಯಂಕ, ಆಹಾರ ಭದ್ರತೆ ಸೂಚ್ಯಂಕ, ನಗರಾಭಿವೃದ್ಧಿ ಹೀಗೆ ಅನೇಕ ಕ್ಷೇತ್ರಗಳಲ್ಲಿ ಬೇರೆ ನಗರಗಳಿಗೆ ಹೋಲಿಸಿದಾಗ ಕಡಿಮೆ ಇರುವುದನ್ನು ಕಾಣುತ್ತೇವೆ. ನಗರವನ್ನು ಮೂರು ಭಾಗಗಳಾಗಿ ಅಧ್ಯಯನವನ್ನು ಮಾಡಿದ್ದೇವೆ. ಅಂದರೆ ಒಟ್ಟು ಒಂಬತ್ತು ವಾರ್ಡುಗಳನ್ನು ಆಯ್ದುಕೊಂಡಿದ್ದೇವೆ. ಹೇಗೆಂದರೆ ಮೊದಲನೇದಾಗಿ ಮುಂದುವರೆದ ಹಾಗೂ ಇತ್ತೀಚೆಗೆ ನಿರ್ಮಾಣವಾದ ವಾರ್ಡುಗಳು, ಎರಡನೇದಾಗಿ ಮಧ್ಯಮ ಪ್ರದೇಶ ಅಂದರೆ ಹಳೆಯ ಪ್ರದೇಶಗಳನ್ನು ಆಯ್ದುಕೊಂಡಿದ್ದೇವೆ. ಮೂರನೇದಾಗಿ ಹಿಂದುಳಿದ ಹಾಗೂ ಸ್ಲಂ ಪ್ರದೇಶಗಳನ್ನು ಆಯ್ದುಕೊಂಡಿದ್ದೇವೆ. ತಲಾ ಪ್ರದೇಶದಲ್ಲಿ ೩ ವಾರ್ಡುಗಳನ್ನು ಆಯ್ಕೆ ಮಾಡಿಕೊಂಡಿದ್ದೇವೆ. ಅಧ್ಯಯನ ನಗರದ ಸರಾಸರಿ ಬೆಳವಣಿಗೆಯನ್ನು ತಿಳಿದುಕೊಳ್ಳಲು ಈ ರೀತಿ

ಆಯ್ಕೆಯನ್ನು ಮಾಡಿಕೊಂಡು, ಸಾಮಾಜಿಕ, ಆರ್ಥಿಕ, ರಾಜಕೀಯ, ಮತ್ತು ಸಾಂಸ್ಕೃತಿಕ ಅಂಶಗಳನ್ನು ಇಟ್ಟುಕೊಂಡು ಸಮಗ್ರ ಪ್ರಶ್ನಾವಳಿಗಳ ಮೂಲಕ ಅಧ್ಯಯನ ಮಾಡಲಾಗಿದೆ. ಇದರ ಜೊತೆಗೆ ನಗರದಲ್ಲಿರುವ ಪ್ರಬಲವಾದ ವರ್ಗ ಯಾವುದು, ನಗರದ ಪ್ರಮುಖ ಸಂಸ್ಥೆಗಳು, ಅಧಿಕಾರಗಳು, ಯಾರ ಕೈಯಲ್ಲಿ ಇದೆ ಮತ್ತು ರಾಜಕೀಯದಲ್ಲಿ ಕೇವಲ ಮೀಸಲಾತಿಯಿಂದ ಮಾತ್ರ ಜನ ಭಾಗವಹಿಸುತ್ತಿದ್ದಾರೆಯೇ ಅಥವಾ ಸಾಮಾನ್ಯ ಸ್ಪರ್ಧೆಯಲ್ಲಿ ಹಿಂದುಳಿದ ವರ್ಗವಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಏನಾದರೂ ಭಾಗವಹಿಸುತ್ತಿದ್ದಾರೆಯೇ ಎನ್ನುವುದನ್ನು ಕೂಡ ಅಧ್ಯಯನ ಮಾಡಲಾಗಿದೆ. ನಗರೀಕರಣ ಪ್ರಕ್ರಿಯೆಯಲ್ಲಿ ರಾಜಕಾರಣಿಗಳ ಪಾತ್ರವೇನಿದೆ, ನಗರದ ಅಭಿವೃದ್ಧಿಗೆ ಅವರು ಮಾಡಬೇಕಾದ ಕಾರ್ಯಗಳೇನು, ಅವರು ಸರಿಯಾದ ರೀತಿಯಲ್ಲಿ ಅಭಿವೃದ್ಧಿಯಲ್ಲಿ ತೊಡಗಿದ್ದಾರೆಯೇ, ಜನರೊಂದಿಗೆ ಯಾವ ರೀತಿ ಸಂಪರ್ಕವಿದೆ, ಸಾಮಾನ್ಯ ಜನರಿಗೆ ಸ್ಪಂದಿಸುವ ರೀತಿ ಹೇಗಿದೆ, ಹೀಗೆ ಅನೇಕ ವಿಚಾರಗಳನ್ನು ತಿಳಿದುಕೊಳ್ಳಲು ಅನೇಕ ಗ್ರಂಥಗಳು, ಲೇಖನಗಳಲ್ಲಿನ ನಗರಗಳ ಅಧ್ಯಯನ ವಿಧಾನವನ್ನು ಅಧ್ಯಯನ ಮಾಡಿ ಈ ಅಧ್ಯಯನವನ್ನು ಪ್ರಾರಂಭ ಮಾಡಿದ್ದೇವೆ.

ಪ್ರಾಥಮಿಕ ಮಾಹಿತಿ : ಈ ಅಧ್ಯಯನವು ಬಹುತೇಕ ಕ್ಷೇತ್ರಾಧಾರಿತ ಅಧ್ಯಯನವಾಗಿದೆ. ಕ್ಷೇತ್ರಕಾರ್ಯದಲ್ಲಿ ಗಮನಿಸಬೇಕಾದ ಅಂಶಗಳಿಗೆ ಪೂರಕವಾದ ಮತ್ತು ಅಧ್ಯಯನವು ಒಳಗೊಂಡ ಪ್ರಮುಖ ವಿಿಯಗಳನ್ನು ಆಧರಿಸಿ ತಾತ್ವಿಕ ಮತ್ತು ಸೈದ್ಧಾಂತಿಕ ನೆಲೆಗಟ್ಟನ್ನು ಅಭ್ಯಸಿಸಲಾಗಿದೆ. ಈ ಹಿನ್ನಲೆಯಲ್ಲಿ ಕ್ಷೇತ್ರಕಾರ್ಯವನ್ನು ಕೊಪ್ಪಳ ಜಿಲ್ಲೆಯ ಕೊಪ್ಪಳ ನಗರವನ್ನು ಅನುಲಕ್ಷಿಸಿ ನಗರದ ೯ ವಾರ್ಡುಗಳಲ್ಲಿ ಪ್ರಶ್ನಾವಳಿಯ ಮೂಲಕ ರ್‍ಯಾಂಡಮ್ ಪದ್ಧತಿಯನ್ನು ಅನುಸರಿಸಿ ಸಾಮಾಜಿಕ ಸ್ಥಿತಿಗತಿ, ಆರ್ಥಿಕ ಸ್ಥಿತಿಗತಿ, ರಾಜಕೀಯ ಸ್ಥಿತಿಗತಿ, ಸಾಂಸ್ಕೃತಿಕ ಸ್ಥಿತಿಗತಿ, ಮನೋರಂಜನಾ ಸ್ಥಿತಿಗತಿ ಕುರಿತು ಪ್ರಶ್ನೆಗಳನ್ನು ರಚಿಸಿಕೊಂಡು ನೇರವಾಗಿ ಮಾಹಿತಿಯನ್ನು ಪಡೆದುಕೊಂಡಿದ್ದೇವೆ ಮತ್ತು ನಗರಸಭೆಯಲ್ಲಿಯ ಅಧಿಕಾರಿಗಳಿಂದ ಕೊಪ್ಪಳ ನಗರದ ಚಿತ್ರಣ, ಯಾವ ಜನರಲ್ಲಿ ಎಷ್ಟು ಆಸ್ತಿ ಇರುವುದು, ಶಿಕ್ಷಣ ಸಂಸ್ಥೆಗಳು ಯಾರ ಕೈಯಲ್ಲಿರುವುದು, ಇತರೆ ಲಾಭದಾಯಕ ಸಂಸ್ಥೆಗಳು ಯಾರ ಕೈಯಲ್ಲಿರುವುದು, ಹಾಗೆಯೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನರು ನಗರಸಭೆಯಲ್ಲಿ ಸಾಮಾನ್ಯ ಸ್ಪರ್ಧೆಯಲ್ಲಿ ಸ್ಪರ್ಧಿಸಿದ ನಾಲ್ಕು ಅವಧಿಯ ಮಾಹಿತಿಯನ್ನು ಕೂಡ ನೇರವಾಗಿ ಪಡೆದುಕೊಂಡಿದ್ದೇವೆ. ಜಿಲ್ಲೆಯ ಅಂಕಿಸಂಖ್ಯಾ ವಿಭಾಗದವರಿಂದಲೂ ಕೂಡ ಬೇಕಾದ ಮಾಹಿತಿಯನ್ನು ಹಾಗೂ ನಗರಾಭಿವೃದ್ಧಿ ಇಲಾಖೆಯಿಂದಲೂ ಕೂಡ ನಗರಕ್ಕೆ ಸಂಬಂಧಪಟ್ಟಂತಹ ಕೆಲವು ಮಾಹಿತಿಯನ್ನು ಪಡೆದುಕೊಂಡಿದ್ದೇವೆ. ನೇರ ಸಂದರ್ಶನ ಹೊರತುಪಡಿಸಿ ಕೆಲವು ಸಾಮಾಜಿಕ, ರಾಜಕೀಯ ಮತ್ತು ಊರಿನ ಮುಖಂಡರೊಂದಿಗೆ ಹಾಗೂ ಅಧಿಕಾರಿಗಳನ್ನು ಸಂದರ್ಶಿಸಿ ಮಾಹಿತಿ ಕಲೆಹಾಕಲಾಗಿದೆ. ಇದರೊಂದಿಗೆ ಜನರೊಂದಿಗೆ ಭಾವನಾತ್ಮಕವಾಗಿ ಬೆರೆತು ಗುಂಪು ಚರ್ಚೆ ನಡೆಸಿ ಅವರಲ್ಲಿ ಒಬ್ಬರಾಗಿ ನಿಂತು ಅವಲೋಕನದ ಮೂಲಕ ಕೆಲವು ಮಾಹಿತಿಯನ್ನು ಪಡೆಯಲಾಗಿದೆ.

ಆನುಷಂಗಿಕ ಮಾಹಿತಿ : ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಭಿವೃದ್ಧಿ ಹಾಗೂ ನಗರೀಕರಣಕ್ಕೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಹೊರಡಿಸಿದ ಆದೇಶಗಳು, ನೀತಿಗಳು, ಗೆಜೆಟ್ ಅಧಿಸೂಚನೆಗಳು, ಜನಗಣತಿ ಮತ್ತು ಮಾನವ ಅಭಿವೃದ್ಧಿ ಸೂಚ್ಯಂಕದ ವರದಿಗಳು, ಗೆಜೆಟಿಯರ್, ಕೊಪ್ಪಳ ಜಿಲ್ಲೆ ಮಾನವ ಅಭಿವೃದ್ಧಿ ವರದಿ, ಕೊಪ್ಪಳ ಜಿಲ್ಲೆಯ ಅಂಕಿ ಅಂಶಗಳ ನೋಟ, ನಂಜುಂಡಪ್ಪ ವರದಿಗಳನ್ನು ಅಧ್ಯಯನಕ್ಕೆ ಬಳಸಲಾಗಿದೆ. ಇದರೊಂದಿಗೆ ಈಗಾಗಲೇ ನಡೆದ ಅಧ್ಯಯನಗಳು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಸಂಶೋಧನಾ ಗ್ರಂಥಗಳಲ್ಲಿ ದಿನಪತ್ರಿಕೆಗಳಲ್ಲಿ ಮತ್ತು ಪಾಕ್ಷಿಕಗಳಲ್ಲಿ ಬಂದಂತಹ ಪ್ರಮುಖ ಮಾಹಿತಿಯನ್ನು ಪಡೆಯಲಾಗಿದೆ. ಬುದ್ಧಿಜೀವಿಗಳ, ಚಿಂತಕರ ಅಭಿಪ್ರಾಯಗಳನ್ನು ಎರಡನೇಯ ಮಾಹಿತಿಯನ್ನಾಗಿ ಪಡೆಯಲಾಗಿದೆ. ಹೀಗೆ ಸಂಗ್ರಹಿಸಿದ ಮಾಹಿತಿಯನ್ನು ವಾಸ್ತವವಾಗಿ ಕ್ಷೇತ್ರಕಾರ್ಯ ನಡೆಸಿ ಕಲೆಹಾಕಿದ ಮಾಹಿತಿಯೊಂದಿಗೆ ಮುಖಾಮುಖಿಯಾಗಿಸಿ ಚರ್ಚಿಸಲಾಗಿದೆ. ಹೀಗೆ ಅನುಷಂಗಿಕ ಮಾಹಿತಿಯನ್ನು ಕಲೆಹಾಕಿ ಬಳಸಿಕೊಳ್ಳಲಾಗಿದೆ.

ಸ್ಯಾಂಪ್ಲಿಂಗ್ ಆಯ್ಕೆ ವಿಧಾನ : ಕೊಪ್ಪಳ ನಗರದ ೯ ವಾರ್ಡ್‌ಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಆಯ್ದುಕೊಳ್ಳುವಾಗ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಮೂರು ಮುಂದುವರಿದ ಪ್ರದೇಶ, ಮೂರು ಮಧ್ಯಮ ಸ್ಥಿತಿಯ ಪ್ರದೇಶ, ಮೂರು ಹಿಂದುಳಿದ ಪ್ರದೇಶಗಳನ್ನು ಆಯ್ದುಕೊಳ್ಳಲಾಗಿದೆ. ಆ ೯ ಪ್ರದೇಶಗಳೆಂದರೆ ಗವಿಶ್ರೀ ನಗರ, ವಿದ್ಯಾ ನಗರ, ಬಿ.ಟಿ ಪಾಟಿಲ್ ನಗರ, ಕುಂಬಾರ್ ಓಣಿ, ಅಂಬೇಡ್ಕರ್ ನಗರ, ಕುರುಬರ ಓಣಿ, ಗೌರಿ ಅಂಗಳ, ಸಜ್ಜ ಹೊಲ, ಕುವೆಂಪುನಗರ ಹೀಗೆ ಒಂಭತ್ತು ಪ್ರದೇಶಗಳನ್ನು ಆಯ್ದುಕೊಂಡು ರ್‍ಯಾಂಡಮ್ ಆಗಿ ಒಂದು ಪ್ರದೇಶದಿಂದ ೨೫ ಕುಟುಂಬಗಳನ್ನು ಅಂದರೆ ಒಟ್ಟು ೨೨೫ ಕುಟುಂಬಗಳನ್ನು ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ,ಮನೋರಂಜನಾ, ಇತರ ಮಾಹಿತಿಯ ಕುರಿತು ಪ್ರಶ್ನೆಗಳನ್ನು ಕೇಳಿ, ಚರ್ಚಿಸಿ, ಈ ಕೆಳಗಿನ ವಿಧಾನದ ಮೂಲಕ ಮಾಹಿತಿಯನ್ನು ವಿಶ್ಲೇಣೆ ಮಾಡಲಾಗಿದೆ.

ವಿಶ್ಲೇಷಣೆ : ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ಮಾಹಿತಿಗಳನ್ನು ಈಗಾಗಲೇ ಪ್ರಸ್ತುತ ಕ್ಷೇತ್ರದಲ್ಲಿ ನಡೆಸಲ್ಪಟ್ಟಿರುವ ಅಧ್ಯಯನದೊಂದಿಗೆ ತುಲನಾತ್ಮಕವಾಗಿ ಮಾಡಲಾಗಿದ್ದು ಸಂಖ್ಯಾಶಾಸ್ತ್ರೀಯ ವಿಧಾನಗಳನ್ನು ಬಳಸಿಕೊಂಡು ಮೈಕ್ರೋಸಾಫ್ಟ್ ವರ್ಡ್‌ನಲ್ಲಿ ಕೋಷ್ಟಕಗಳನ್ನು ಹಾಕುವುದರ ಮೂಲಕ ವೈಜ್ಞಾನಿಕವಾಗಿ ಮಾಹಿತಿಯನ್ನು ವಿಶ್ಲೇಷಣೆ ಮಾಡಲಾಗಿದೆ. ಆ ಕ್ಷೇತ್ರದ ಕುರಿತು ಈಗಾಗಲೇ ಸ್ಥಾಪಿತವಾಗಿರುವ ವಿಿಯ ಮತ್ತು ನಾವು ಕಂಡುಕೊಂಡ ಸತ್ಯದೊಂದಿಗೆ ಹೋಲಿಕೆ ಮಾಡಿ ವಿಶ್ಲೇಣೆಯನ್ನು ಮಾಡಲಾಗಿದೆ.

೧.೫. ಅಧ್ಯಯನದ ವ್ಯಾಪ್ತಿ ಮತ್ತು ಇತಿಮಿತಿಗಳು

ಈ ಅಧ್ಯಯನವು ಕೊಪ್ಪಳ ನಗರದ ಒಂಭತ್ತು ವಾರ್ಡಗಳನ್ನು ಒಳಗೊಂಡಿದೆ ಈ ನಗರಗಳ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಸ್ಥಿತಿಗತಿಗಳ ಕುರಿತು ವಿಶ್ಲೇಷಿಸಲಾಗಿದೆ. ಪ್ರಸ್ತುತ ಅಧ್ಯಯನವು ಕೊಪ್ಪಳ ನಗರಕ್ಕೆ ಮಾತ್ರ ಸೀಮಿತಗೊಳಿಸಿಕೊಳ್ಳಲಾಗಿದೆ.

೧. ಈ ಅಧ್ಯಯನವು ಕೊಪ್ಪಳ ನಗರಕ್ಕೆ ಮಾತ್ರ ಸೀಮಿತವಾಗಿದೆ.

೨. ಈ ಅಧ್ಯಯನವು ಮಾನವ ಅಭಿವೃದ್ಧಿಯ ನೆಲೆಯಲ್ಲಿ ಪ್ರಸ್ತುತ ವಸ್ತುಸ್ಥಿತಿಯನ್ನು ಅಧ್ಯಯನ ಮಾಡುವಂತಾಗಿದೆ.

೩. ಕೆಲವೊಂದು ಮುಂದುವರೆದ ನಗರಗಳಿಗೆ ಹೋಲಿಕೆಯನ್ನು ಮಾಡಿ ಅಧ್ಯಯನವನ್ನು ಮಾಡಲಾಗಿದೆ.

೪. ನಗರದಲ್ಲಿರುವ ಒಂಭತ್ತು ವಾರ್ಡುಗಳನ್ನು ಆಯ್ಕೆ ಮಾಡಿಕೊಂಡು ರ್‍ಯಾಂಡಮ್ ಆಗಿ ಒಂದು ಪ್ರದೇಶದಿಂದ ೨೫ ಕುಟುಂಬಗಳಂತೆ ೨೨೫ ಕುಟುಂಬಗಳಿಗೆ ಸೀಮಿತಗೊಳಿಸಿಕೊಳ್ಳಲಾಗಿದೆ.

೫. ಸಂಸದರು, ಶಾಸಕರು ಮತ್ತು ನಗರಸಭಾ ಪ್ರತಿನಿಧಿಗಳನ್ನು ಗಮನದಲ್ಲಿಟ್ಟುಕೊಂಡು ಮಾತ್ರ ಅಧ್ಯಯನಗಳನ್ನು ಮಾಡಲಾಗಿದೆ.

೬. ಪ್ರಸ್ತುತ ಜನಪ್ರತಿನಿಧಿಗಳನ್ನು ಮಾತ್ರ ಪರಿಗಣಿಸಿ ಪ್ರಶ್ನೆಗಳನ್ನು ರಚಿಸಲಾಗಿದೆ.

೭. ಅಧ್ಯಯನ ಸಂದರ್ಭದಲ್ಲಿ ಮುಂದುವರೆದ ನಗರಗಳ ಸಾಮಾಜಿಕ, ಆರ್ಥಿಕ, ರಾಜಕೀಯ, ಹಾಗೂ ಸಾಂಸ್ಕೃತಿಕ ಹಿನ್ನೆಲೆಗಳನ್ನು ತೌಲನಿಕವಾಗಿ ಬಳಸಿಕೊಳ್ಳಲಾಗಿದೆ.

೮. ನಗರೀಕರಣದ ಪ್ರಸ್ತುತ ಮಾನದಂಡಗಳನ್ನು ಈ ನಗರಕ್ಕೆ ಮಾನದಂಡಗಳನ್ನಾಗಿ ಬಳಸಿಕೊಳ್ಳಲಾಗಿದೆ.

೧.೬. ಅಧ್ಯಯನದ ವಿಭಾಗೀಕರಣ

ಈ ಸಂಶೋಧನ ಪ್ರಬಂಧವು ೮ ಅಧ್ಯಾಯಗಳನ್ನು ಒಳಗೊಂಡಿದೆ. ಅಧ್ಯಾಯ ಒಂದರಲ್ಲಿ ಪ್ರಸ್ತಾವನೆ, ಇಲ್ಲಿ ವಿಷಯ ಪ್ರವೇಶ, ಸಮಸ್ಯೀಕರಣ, ಅಧ್ಯಯನದ ಉದ್ದೇಶಗಳು, ಅಧ್ಯಯನದ ಮಹತ್ವ, ಅಧ್ಯಯನದ ವಿಧಾನ, ಅಧ್ಯಯನದ ವ್ಯಾಪ್ತಿ ಮತ್ತು ಇತಿಮಿತಿಗಳನ್ನು ಒಳಗೊಂಡಿದೆ. ಅಧ್ಯಾಯ ಎರಡರಲ್ಲಿ ಇಲ್ಲಿಯವರೆಗೆ ಈ ಅಧ್ಯಯನಕ್ಕಾಗಿ ಮಾಡಿದ ಅಭಿವೃದ್ಧಿ ಮತ್ತು ನಗರೀಕರಣಕ್ಕೆ ಸಂಬಂಧಪಟ್ಟಂತೆ ಸಾಹಿತ್ಯ ಸಮೀಕ್ಷೆಯನ್ನು ಮಾಡಲಾಗಿದೆ. ಅಧ್ಯಾಯ ಮೂರರಲ್ಲಿ ಅಧ್ಯಯನ ಕ್ಷೇತ್ರದ ಇತಿಹಾಸ ಮತ್ತು ಪರಿಚಯವನ್ನು ಮಾಡಿಕೊಡಲಾಗಿದೆ. ನಾಲ್ಕನೆಯ ಅಧ್ಯಾಯದಲ್ಲಿ ಅಭಿವೃದ್ಧಿ ಪರಿಕಲ್ಪನೆ ಕುರಿತು ವ್ಯಾಖ್ಯಾನಗಳನ್ನು, ಅಭಿವೃದ್ಧಿಯ ಪ್ರಕಾರಗಳನ್ನು ಮತ್ತು ಸಾಮಾನ್ಯ ಅಭಿಪ್ರಾಯವನ್ನು ವಿವರಿಸಲಾಗಿದೆ. ಐದನೆಯ ಅಧ್ಯಾಯದಲ್ಲಿ ನಗರೀಕರಣದ ಪರಿಚಯ ಮತ್ತು ಪರಿಕಲ್ಪನೆಯ ಹಿನ್ನೆಲೆಯನ್ನು ನೋಡಲಾಗಿದೆ. ಇಲ್ಲಿ ನಗರ ಕೇಂದ್ರಗಳ ಮೂಲ ಮತ್ತು ವಿಕಾಸ, ಪ್ರಾಚೀನ ಕಾಲದಲ್ಲಿ ನಗರೀಕರಣ, ನಗರೀಕರಣದ ಪೂರ್ವ ಐತಿಹಾಸಿಕ ಅವಧಿ, ಮಧ್ಯಯುಗದ ಅವಧಿ, ಆಧುನಿಕ ಅವಧಿ, ಸ್ವಾತಂತ್ರ್ಯ ನಂತರದ ಅವಧಿಯಲ್ಲಿ ನಗರೀಕರಣ ಯಾವ ರೀತಿ ಇದೆ ಎನ್ನುವುದನ್ನು ನೋಡಲಾಗಿದೆ. ಅಧ್ಯಾಯ ಆರರಲ್ಲಿ ನಗರದ ಕ್ಷೇತ್ರಕಾರ್ಯಾಧಾರಿತ ವಿಶ್ಲೇಷಣೆಯಲ್ಲಿ ಸಾಮಾಜಿಕ ಸ್ಥಿತಿಗತಿ, ಆರ್ಥಿಕ ಸ್ಥಿತಿಗತಿ ಮತ್ತು ಸಾಲದ ವಿವರ, ರಾಜಕೀಯ ಅಭಿವೃದ್ಧಿ ಕುರಿತು

ಹಾಗೂ ಇತರ ಮಾಹಿತಿ ಕುರಿತು, ವಿಶ್ಲೇಷಣೆ ಮಾಡಲಾಗಿದೆ. ಅಧ್ಯಾಯ ಏಳರಲ್ಲಿ ನಗರೀಕರಣದ ಪ್ರಮುಖ ಸವಾಲುಗಳು ಕುರಿತು ವಿವರವಾಗಿ ವಿಶ್ಲೇಷಿಸಲಾಗಿದೆ. ಅಧ್ಯಾಯ ಎಂಟು ಸಮಾರೋಪದಲ್ಲಿ ಅಧ್ಯಯನದ ಫಲಿತ ಮತ್ತು ಸಲಹೆಗಳನ್ನು ನೀಡಲಾಗಿದೆ.

ಕೊನೆ ಟಿಪ್ಪಣಿಗಳು

೧. ವರ್ಲ್ಡ್ ಬ್ಯಾಂಕ್.(೨೦೦೦) ವರ್ಲ್ಡ್ ಡೆವೆಲಪಮೆಂಟ್ ರಿಪೋರ್ಟ, ವಾಷಿಂಗ್‌ಟನ್ ಡಿ.ಸಿ.

೨. ಎಸ್. ಶಿವಣ್ಣ (೨೦೧೨) "ಪ್ಯಾಕ್ಟ್ಸ್ ಆಪ್ ಅರ್ಬನ್ ಪಾವರ್ಟಿ", ಎ ಸ್ಟಡಿ ಆಪ್ ಮೈಸೂರು ಸಿಟಿ, ಪಿಎಚ್.ಡಿ ಪದವಿಗಾಗಿ ಕರ್ನಾಟಕ ವಿಶ್ವ ವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಪ್ರಬಂಧ.

೩. ಎಂ. ಚಂದ್ರ ಪೂಜಾರಿ (೨೦೧೪) "ಅಭಿವೃದ್ಧಿ ಮತ್ತು ರಾಜಕೀಯ", ಪಲ್ಲವ ಪ್ರಕಾಶನ, ಪುಟ ೫೮.

೪. ಅದೇ ಪುಟ ೬೧.

೫. ಲ್ಯುಸಿಯನ್ ಪೈ. (೧೯೭೨) "ಆಸ್ಪೆಕ್ಟ್ ಆಪ್ ಪೋಲಿಟಿಕಲ್ ಡೆವಲಪಮೆಂಟ್ ಆನ್ ಅನಲಿಟಿಕಲ್ ಸ್ಟಡಿ" ಪುಟ ೪೫.

೬. ಅದೇ.

೭. ಕೋಟಿಡ್ ಪೈನರ್ (೧೯೯೯) "ರೀಜನಲ್ ಡಿಸ್‌ಪ್ಯಾರಿಟಿಸ್ ಇಶ್ಯೂಸ್ ಇನ್ ಇಂಡಿಯಾ" ಹಿಮಾಲಯ ಪಬ್ಲಿಶಿಂಗ್ ಹೌಸ್, ನವದೆಹಲಿ, ಪುಟ ೪೯.

೮. ಎಸ್.ಟಿ. ಸೋಮಶೇಖರ್ (೨೦೦೩) "ಎಕನಾಮಿಕ್ ಡೆವಲಪ್‌ಮೆಂಟ್" ಹಿಮಾಲಯ್ ಪಬ್ಲಿಶಿಂಗ್ ಹೌಸ್, ನವದೆಹಲಿ, ಪುಟ ೧೬-೧೭.

೯. ಅದೇ.

೧೦. ಅದೇ. ಪುಟ ೧.

೧೧. ಅದೇ.

೧೨. ಅದೇ.

೧೩. ಆರ್.ಕೆ.ಸಪ್ರು (೧೯೯೬) "ಡೆವಲಪ್‌ಮೆಂಟ್‌ಲ್ ಎಡ್ಮಿನಿಸ್ಟ್ರೇಷನ್" ಸ್ಟರ್ಲಿಂಗ್ ಪ್ರಕಾಶನ್, ನವದೆಹಲಿ.

೧೪. ಅದೇ.

೧೫. ಅದೇ.

೧೬. ಅದೇ.

೧೭. ಮಸಲ್ ಬಿ.ಎಫ್ ಆ್ಯಂಡ್ ಚಾರ್ಲ್ ವೋಲ್ಸ್ ಜೆ. ಆರ್.(೧೯೬೩) "ಎಕನಾಮಿಕ ಡೆವಲಪ್‌ಮೆಂಟ್ ಆಂಡ್ ಇಂಡಸ್ಟ್ರೀಯಲ್" ಜರ್ನಲ್ ಆಫ್ ಇಂಡಸ್ಟ್ರೀಯಲ್ ಎಕನಾಮಿಕ್ಸ, ವ್ಯಾಲ್ಯೂಮ್ ನಂ ೨ ಪುಟ ೧೧೬-೧೩೧.

೧೮. ಇಲ್ತಿಜಾ ಎಚ್.ಶಾನ್ (೧೯೭೫) "ದಿ ಪೊಲಿಟಿಕ್ಸ್ ಆಫ್ ಡೆವಲಪ್‌ಮೆಂಟ್", ಇಂಡಿಯನ್ ಜರ್ನಲ್ ಆಫ್ ಪೊಲಿಟಿಕ್ಸ, ವ್ಯಾಲ್ಯೂಮ್ ನಂ ೨.

೧೯. ಇಕ್ಬಾಲ್ ನಾರಾಯಣರ (೧೯೬೮) "ಡೆಮಾಕ್ರಾಟಿಕ್ ಡಿಸೆಂಟ್ರಲೈಜೆಷನ್ಸ್ ದಿ ಐಡಿಯಾ ದಿ ಇಮೇಜ್ ಆ್ಯಂಡ್ ದಿ ರಿಯಾಲಿಟಿ" ಇಂಡಿಯನ್ ಜರ್ನಲ್ ಆಫ್ ಪಬ್ಲಿಕ್ ಎಡ್ಮಿನಿಸ್ಟ್ರೇಷನ್ ವ್ಯಾಲ್ಯೂಮ್ ನಂ ೩೭.

೨೦. ಕೊಪ್ಪರ್ ಬೇಕರ್ ಎಚ್.ಡಿ (೧೯೯೦ "ದಿ ಆಲ್ ಇಂಡಿಯಾ ಲೋಕಲ್ ಸೇಲ್ಫ್ ಗೌರ್ವಮೆಂಟ್" ಇಂಡಿಯನ್ ಜರ್ನಲ್ ಆಫ್ ಲೋಕಲ್ ಗೌರ್ನಮೆಂಟ್ಸ, ವ್ಯಾಲ್ಯೂಮ್ ನಂ ೬೧.

೨೧. ಐ.ಎಲ್. ಹಾರೋವಿಜ್ (೧೯೯೦) "ಸೋಶಿಯಾಲಾಜಿಕಲ್ ಆಂಡ್ ಐಡಿಯಾಲಾಜಿಕಲ್ ಕಂಜಪ್‌ಷನ್ಸ್ ಆಫ್ ಇಂಡಸ್ಟ್ರೀಯಲ್ ಡೆವೆಲಪಮೆಂಟ್" ಅಮೆರಿಕನ್ ಜರ್ನಲ್ ಆಫ್ ಎಕನಾಮಿಕ್ಸ ಆ್ಯಂಡ್ ಸೋಶಿಯಾಲಜಿ.

೨೨. ಸೇನ್ ಆರ್.ಕೆ ಆ್ಯಂಡ್ ಆರ್.ಎಲ್ (೨೦೦೧) "ಸೋಶಿಯೋ ಎಕಾನಾಮಿಕ್ ಡೆವೆಲಪ್‌ಮೆಂಟ್ ಇನ್ ದಿ ಟ್ವೆಂಟಿ ಫಸ್ಟ್ ಸೆಂಚುರಿ" ದೀಪ್ ಆಂಡ್ ದೀಪ್ ಪಬ್ಲಿಕೇಶನ್ಸ್, ನವದೆಹಲಿ.

೨೩. ಸಪ್ರು ಆರ್.ಕೆ (೧೯೯೬) "ಡೆವಲಪ್‌ಮೆಂಟ್ ಅಡ್ಮಿನಿಸ್ಟ್ರೇಷನ್" ಸ್ಟರ್ಲಿಂಗ್ ಪ್ರಕಾಶನ, ನವದೆಹಲಿ.

೨೪. ಮೈಕಲ್ ಎ. ಕರ್‍ರಿ (೧೯೭೫) "ದ ಚಾಲೆಂಜ್ ಅರ್ಬನ್ ಎಕಾನಾಮಿಕ್ ಡೆವಲಪ್‌ಮೆಂಟ್" ಲಕ್ಸಿಂಗ್ ಟನ್ ಬುಕ್ ಕಂಪನಿ, ಟೊರೇಂಟೋ, ಲಂಡನ್.

೨೫. ಮ್ಯಾಕ್ ಗ್ರಾಹಂ (೧೯೭೦) "ಅನ್‌ರೈಸ್ಡ್ ಕಂಟೆಂಟ್ಸ್ ಆ್ಯಂಡ್ ಮೆಜರ್‌ಮೆಂಟ್ ಆಫ್ ಸೋಶಿಯೋ ಎಕಾನಾಮಿಕ್ ಡೆವಲಪ್ಮೆಂಟ್ ಆನ್ ಎಂಪಿರಿಕಲ್ ಎನ್ಕ್ವೈರಿ" ರಿಪೋರ್ಟ.

೨೬. ಕೆವಿ ಸುಂದರಂ (೧೯೭೮) "ಸಮ್ ರೀಸೆಂಟ್ ಟ್ರೆಂಡ್ಸ್ ಇನ್ ಡೆವೆಲಪ್‌ಮೆಂಟ್ ಪ್ಲಾನಿಂಗ್ ಇನ್ ನ್ಯಾಷನಲ್ ಡೆವಲಪಮೆಂಟ್" ವಿಕಾಸ್ ಪಬ್ಲಿಕೇಶನ್ ನವದೆಹಲಿ, ಪುಟ ೩೨೮.

೨೭. ಡಿ ಎಂ ನಂಜುಂಡಪ್ಪ ಅಂಡ್ ಆರ್.ಕೆ ಸಿನ್ಹಾ (೧೯೮೨) "ಬ್ಯಾಕ್ವರ್ಡ್ ಏರಿಯಾ ಡೆವಲಪಮೆಂಟ್ ಪ್ರೊಬ್ಲಂಸ್ ಆ್ಯಂಡ್ ಪ್ರೋಸ್ಪೆಕ್ಟ್" ಸ್ಟರ್ಲಿಂಗ್ ಪ್ರಕಾಶನ, ನವದೆಹಲಿ, ಪುಟ ೩೧೭.

೨೮. ಗೌರ್ಮೆಂಟ್ ಆಫ್ ಇಂಡಿಯಾ(೧೯೬೯) "ಪ್ಲಾನಿಂಗ್ ಕಮಿಷನ್ ಐಡೆಂಟಿಪಿಕೇಶನ್ ಆಫ್ ಬ್ಯಾಕ್ವರ್ಡ್ ಏರಿಯಾಸ್" ರಿಪೋರ್ಟ ಆಪ್ ದಿ ವರ್ಕಿಂಗ್ ಗ್ರೂಪ್,ನವದೆಹಲಿ, ಪುಟ ೧.

೨೯. ಗೌರ್ನಮೆಂಟ್ ಆಫ್ ಕರ್ನಾಟಕ(೧೯೬೮) "ಐಡೆಂಟಿಪಿಕೇಶನ್ ಆಫ್ ಬ್ಯಾಕ್ವರ್ಡ್ ಏರಿಯಾಸ್"

೩೦. ಸತೀಶ್ ಎಸ್ ಗವಾತಿ (೨೦೦೦) "ದಿ ಇಂಪ್ಯಾಕ್ಟ್ ಎಕಾನಮಿಕ್ ಡೆವಲಪಮೆಂಟ್ ಆನ್ ಪೊಲಿಟಿಕಲ್ ಪಾರ್ಟಿಸಿಪೆಷನ್ ಎ ಮೈಕ್ರೋ ಸ್ಟಡಿ" ಹಿಮಾಲಯ ಪಬ್ಲಿಶಿಂಗ್ ಹೌಸ್ ನ್ಯೂದೆಹಲಿ.

೩೧. ಬೈದ್ಯನಾಥ್ ವರ್ಮ (೧೯೮೦) "ದಿ ಸೋಶಿಯಾಲಜಿ ಆ್ಯಂಡ್ ಪೊಲಿಟಿಕಲ್ ಡೆವಲಪಮೆಂಟ್ ಎ ಥಿರೋಟಿಕಲ್ ಸ್ಟಡಿ" ಕೇಗಾನ್ ಪೌಲ್ ಪಬ್ಲೀಕೇಶನ್ಸ, ಲಂಡನ್.

೩೨. ಬಾಲಕೃಷ್ಣನ್ ಎನ್ ನಯರ್ (೧೯೭೧) "ಸಿಸ್ಟಮ್ಯಾಟಿಕ್ ಅಪ್ರೋಚಸ್ ಟು ಇಂಡಿಯನ್ ಸೋಶಿಯೊ ಎಕಾನಮಿಕ್ ಡೆವಲಪಮೆಂಟ್" ಅಸೋಸಿಯೇಟ್ ಪಬ್ಲಿಶಿಂಗ್ ಹೌಸ್,ನವದೆಹಲಿ.

೩೩. ಚಂದ್ರಪೂಜಾರಿ ಮತ್ತು ಟಿ.ಆರ್. ಚಂದ್ರಶೇಖರ್ (೨೦೦೨)'ಅಭಿವೃದ್ಧಿ ಅಧ್ಯಯನ' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೪. ಹೇಮಂತ್ ರಾವ್ (೧೯೮೪) "ರಿಜನಲ್ ದಿಸ್ಪರಿಟೀಸ್ ಅಂಡ್ ಡೆವಲಪಮೆಂಟ್ ಇನ್ ಇಂಡಿಯಾ" ಆಶೀಶ್ ಪಬ್ಲಿಶಿಂಗ್ ಹೌಸ್, ನವದೆಹಲಿ.

೩೫. ಕೋಟೆಡ್ ಫೈನರ್ (೧೯೯೯) "ರಿಜಿನಲ್ ದಿಸ್ಪಾರಿಟೀಸ್ ಇಶ್ಯೂಸ್ ಇಂಡಿಯಾ" ಹಿಮಾಲಯ ಪ್ರಕಾಶನ, ನವದೆಹಲಿ.

೩೬. ಎನ್.ಟ.ಸೋಮಶೇಖರ್ (೨೦೦೩) "ಎಕನಾಮಿಕ ಡೆವಲಪ್‌ಮೆಂಟ್" ಹಿಮಾಲಯ ಪಬ್ಲಿಶಿಂಗ್ ಹೌಸ್, ನವದೆಹಲಿ, ಪುಟ ೧೫.

೩೭. ಸಿ.ಚಂದ್ರಪ್ಪ (೨೦೧೩) "ಭಾರತದ ನಗರೀಕರಣ" ಅಕ್ಷರ ಮಂಟಪ ಹಂಪಿನಗರ, ಬೆಂಗಳೂರು, ಪುಟ ೨೫೮-೫೫೯.

೩೮. ಅದೇ, ಪುಟ ೫೫೯-೫೬೦.

೩೯. ಅದೇ, ಪುಟ ೧-೩.

೪೦. ಅದೇ, ಪುಟ ೪-೫.

೪೧. ಚ.ನ.ಶಂಕರ್‌ರಾವ್(೨೦೧೩) "ಭಾರತದ ನಗರ ಸಮಾಜ" ಜೈ ಪ್ರಕಾಶನ್, ಮಂಗಳೂರು, ಪುಟ ೨೬.

೪೨. ಅದೇ, ಪುಟ ೨೬.

೪೩. ಅದೇ, ಪುಟ ೨೬.

೪೪. ಅದೇ, ಪುಟ ೨೬.

೪೫. ಅದೇ, ಪುಟ ೨೬.

❖❖❖

ಅಧ್ಯಾಯ : ಎರಡು

ಅಧ್ಯಯನಗಳ ಸಮೀಕ್ಷೆ

ಅಧ್ಯಾಯ: ಎರಡು

ಅಧ್ಯಯನಗಳ ಸಮೀಕ್ಷೆ

ಅಧ್ಯಯನಗಳ ಸಮೀಕ್ಷೆ ಎನ್ನುವ ಈ ಅಧ್ಯಯನದಲ್ಲಿ ಅಧ್ಯಯನಕ್ಕೆ ಸಂಬಂಧಪಟ್ಟಂತ ಗ್ರಂಥಗಳನ್ನು ಪರಾಮರ್ಶಿಸಲಾಗಿದೆ. ಮುಖ್ಯವಾಗಿ ನಾವು ಅಭಿವೃದ್ಧಿ, ನಗರೀಕರಣ, ಶಿಕ್ಷಣ, ಆರೋಗ್ಯ, ವಸತಿ, ಅಭಿವೃದ್ಧಿ ರಾಜಕೀಯ, ನಗರಗಳ ವರಮಾನ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ಅಧ್ಯಯನಗಳ ಅವಲೋಕನವನ್ನು ಒಳಗೊಂಡಿದೆ. ನತಲ್ಯೆವೆಸ್ಟ್‌ಖಾರ್ ಕೊಂಗೂರರವರ ಲೇಖನವಾದ "ಈಶಾನ್ಯದಲ್ಲಿ ಶಿಕ್ಷಣ ಮತ್ತು ಉದ್ಯೋಗ"ದಲ್ಲಿ "ಶಿಕ್ಷಣ ಕ್ಷೇತ್ರದಲ್ಲಿ ರಾಜಕೀಯ ಬದ್ಧತೆ, ಅಧಿಕಾರಿಶಾಹಿ ಬೆಂಬಲ ಮತ್ತು ಬದ್ಧತೆ, ಉತ್ತಮ ಆಡಳಿತ ಮತ್ತು ಖಾಸಗಿ, ಸಾರ್ವಜನಿಕ, ಜನರ, ಸಹಭಾಗಿತ್ವ (P.P.P.P.) (Private, Public, People, Participate) ಮಾದರಿಯನ್ನು ಅನುಸರಿಸಬೇಕಾಗಿದೆ. ಎಲ್ಲಾ ಕ್ರಮಗಳನ್ನು ಕೈಗೊಳ್ಳುವ ಮೂಲಕ ಪ್ರಸ್ತುತ ಇರುವ ಶೈಕ್ಷಣಿಕ ವ್ಯವಸ್ಥೆಯನ್ನು ಸದೃಢಗೊಳಿಸಬೇಕಿದೆ. ಆ ಮೂಲಕ ಹೆಚ್ಚಿನ ಉದ್ಯೋಗವಕಾಶಗಳನ್ನು ಸೃಷ್ಟಿಸಿ, ಈಶಾನ್ಯ ಭಾಗಗಳಿಂದ ಜನರು ವಲಸೆ ಹೋಗುವುದನ್ನು ತಪ್ಪಿಸುವುದರ ಜೊತೆಗೆ ಬಂಡುಕೋರರ ಸಮಸ್ಯೆಗಳನ್ನು ಸಹ ಹತ್ತಿಕ್ಕಬಹುದಾಗಿದೆ. ಈ ಲೇಖನದಿಂದ ನಾವು ರಾಜಕೀಯ ಬದ್ಧತೆಯ ಅವಶ್ಯಕತೆಯನ್ನು ತಿಳಿಯಬಹುದು. ನಗರದಲ್ಲಿನ ಜನಸಂಖ್ಯೆ ಹೆಚ್ಚಳವನ್ನು ಮಾಡುವಲ್ಲಿ ಅಲ್ಲಿನ ಉದ್ಯೋಗವಕಾಶಗಳು ಕಾರಣವಾಗುತ್ತದೆ ಎನ್ನುವುದನ್ನು ತಿಳಿಯಬಹುದು.[೧]

ಮತ್ತಿಹಳ್ಳಿಮದನ ಮೋಹನರವರ ಲೇಖನವಾದ 'ಹಿಂದುಳಿಯುವಿಕೆ ಎಂಬ ಶಾಪ'ದಲ್ಲಿ ಸಂವಿಧಾನ ತಿದ್ದುಪಡಿಯ ಮೂಲಕ ರಚಿತವಾದ ಹೊಸ ಹೈದ್ರಾಬಾದ-ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿಯ ಕಥೆ ಸ್ವಲ್ಪ ಭಿನ್ನ. ಪ್ರಾರಂಭದ ದಿವಸಗಳ ಅನಿಶ್ಚಿತತೆ ದೂರವಾಗಿ ಅದು ನೆಲ ಊರ ತೊಡಗಿದೆ. ಕಾರ್ಯಕ್ರಮಗಳೆಲ್ಲ ಮಂಡಳಿಯಲ್ಲಿಯೇ ನಿರ್ಣಯವಾಗಿ ಅನುಷ್ಠಾನದ ಹೊಣೆ ಹೊತ್ತಿರುವ ಸರ್ಕಾರಿ ವಿಭಾಗಗಳಿಗೆ ಕಳಿಸಲಾಗುತ್ತದೆ. ಮೊದಲಿನ ಮಂಡಳಿಗಿಂತ ಭಿನ್ನವಾದದ್ದೆಂದರೆ ಸರ್ಕಾರದಿಂದ ಬರುವ ಅನುದಾನದಲ್ಲಿ ನಿಶ್ಚಿತತೆ ಇದೆ. ವರ್ಷಕ್ಕೆ ರೂ. ೧೦೦೦ ಕೋಟಿ ಅನುದಾನ ನಿಗದಿ ಮಾಡಿದ್ದು, ಪ್ರತಿ ತ್ರೈಮಾಸಿಕ ಅವಧಿಗೆ ಸರ್ಕಾರದ ಅನುದಾನ ಬಂದು ಬಿಡುತ್ತದೆ ಎಷ್ಟು ಬೇಗ ಯೋಜನೆಗಳು ಕಾರ್ಯಗತವಾಗುತ್ತವೆಯೋ ಅಷ್ಟು

ಬೇಗ ಹಣ ಬಂದು ಬಿಡುತ್ತದೆ. ಖರ್ಚಾಗಿದ್ದ ಹಣ ವಾಪಾಸ್ಸು ಹೋಗುವ ಹೆದರಿಕೆ ಇಲ್ಲ. ಅದನ್ನು ಬೇರೆ ಕಾರ್ಯಕ್ರಮಕ್ಕೆ ವಿನಿಯೋಗಿಸಲಾಗುತ್ತದೆ. ಇಲ್ಲಿ ಬಂದಿರುವ ಒಂದೇ ತೊಂದರೆ ಎಂದರೆ ಯೋಜನೆಗಳ ಅನುಷ್ಠಾನವು ಸರ್ಕಾರಿ ವಿಭಾಗಗಳಿಂದ ಆಗುವುದರಿಂದ ಯೋಜನೆ ಮುಗಿಸುವಲ್ಲಿ ವಿಳಂಬವಾಗುತ್ತಿದೆ. ಏಕೆಂದರೆ ಅದೇ ವಿಭಾಗದವರು ಇತರ ಸರ್ಕಾರಿ ಯೋಜನೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆ ಕೆಲಸಗಳ ಜೊತೆಗೆ ಹೈದ್ರಾಬಾದ ಕರ್ನಾಟಕ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತ ಮಾಡಬೇಕು. ಇರುವ ನೌಕರರ ಸಂಖ್ಯೆ ಹೆಚ್ಚಾಗಿಲ್ಲ, ಹೊಸ ನೇಮಕಗಳು ಆಗಿಲ್ಲ ಮತ್ತು ಹೈದ್ರಾಬಾದ ಕರ್ನಾಟಕ ಅಭಿವೃದ್ಧಿ ಕೆಲಸಗಳಿಗೆ ಹೆಚ್ಚುವರಿ ಸಿಬ್ಬಂದಿ ಇಲ್ಲ. ಹೀಗಾಗಿ ಅವರ ಮೇಲೆ ಕೆಲಸದ ಒತ್ತಡ ಹೆಚ್ಚಾಗುತ್ತಿದೆ. ಆದ್ದರಿಂದ ಯೋಜನೆ ಕಾರ್ಯಗತವಾಗುವಲ್ಲಿ ವಿಳಂಬವಾಗುತ್ತಿದೆ. ಈ ಗೊಂದಲದಲ್ಲಿ ಅವರು ತೊಳಲಾಡುತ್ತಿದ್ದಾರೆ.[೨]

ಟಿ. ಆರ್. ಚಂದ್ರಶೇಖರರವರ ಲೇಖನವಾದ 'ಕರ್ನಾಟಕದಲ್ಲಿ ಸಂವಿಧಾನಿಕ ಅನುಚ್ಛೇದ ೩೭೧(ಜೆ)' ದಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಸದರಿ ಪ್ರದೇಶದ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡಬೇಕು ಮತ್ತು ಅನುಷ್ಠಾನದಲ್ಲಿರುವ ಅಭಿವೃದ್ಧಿ ಯೋಜನೆಗಳ ನಿರ್ವಹಣೆಯನ್ನು ಉತ್ತಮ ಪಡಿಸಬೇಕು. ಈ ಪ್ರದೇಶದಲ್ಲಿ ಮುಖ್ಯವಾಗಿ ಸಾಕ್ಷರತೆ, ಶಿಕ್ಷಣ, ಆರೋಗ್ಯ, ಪೌಷ್ಠಿಕತೆ, ಸಂತಾನೋತ್ಪತ್ತಿ, ಹಕ್ಕುಗಳು, ಮಹಿಳಾ ಸಮಾನತೆ, ಮಕ್ಕಳ ಆರೋಗ್ಯ, ವಲಸೆ, ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳು ಮುಂತಾದ ಸಂಗತಿಗಳ ಬಗ್ಗೆ ಗಮನ ನೀಡುವ ಅಗತ್ಯವಿದೆ.[೩]

ಎಂ.ಚಂದ್ರ ಪೂಜಾರಿರವರ ಪುಸ್ತಕವಾದ 'ಬದಲಾಗುತ್ತಿರುವ ಕರ್ನಾಟಕ'ದಲ್ಲಿ ನಮ್ಮ ನಗರೀಕರಣವನ್ನು ಹತ್ತಿರದಿಂದ ನೋಡಿದರೆ ನಗರದಲ್ಲೂ ಜಾತಿ ಕೆಲಸ ಮಾಡುವುದರ ಬಗ್ಗೆ ಆಶ್ಚರ್ಯವಾಗುವುದಿಲ್ಲ. ಗ್ರಾಮೀಣ ಸಾಮಾಜಿಕ ಸಂಬಂಧಗಳನ್ನು ಸಂಸ್ಥೆಗಳನ್ನು ಮತ್ತು ಮೌಲ್ಯಗಳನ್ನು ಸಂಪೂರ್ಣ ಬುಡಮೇಲು ಮಾಡುವ ಕ್ರಮದ ನಗರೀಕರಣ ನಮ್ಮದಲ್ಲ. ನಮ್ಮ ಪೇಟೆ, ಪಟ್ಟಣಗಳು ಕೂಡ ಗ್ರಾಮೀಣ ಪ್ರದೇಶಗಳಂತೆ ಜಾತಿ/ಧರ್ಮಗಳ ಏಣಿಗಳನ್ನು ರೂಪಿಸಿಕೊಂಡಿವೆ, ಬೆಳೆದು ನಿಂತ ಮಹಾನಗರದಲ್ಲೂ ಬ್ರಾಹ್ಮಣರೆ ವಾಸಿಸುವ ಬೀದಿಗಳು, ಲಿಂಗಾಯತರೆ ತುಂಬಿರುವ ಪ್ರದೇಶಗಳು, ಒಕ್ಕಲಿಗರೆ ಹೆಚ್ಚಿರುವ ರಸ್ತೆಗಳನ್ನು ಕಾಣಬಹುದು. ಊರಲ್ಲಿ ಕೇರಿ ಇದ್ದಂತೆ ಪೇಟೆ ಪಟ್ಟಣಗಳಲ್ಲಿ ಸ್ಲಮ್ ಅಥವಾ ಕೊಳಗೇರಿಗಳಿವೆ. ಊರಿನ ಕೇರಿಗಳಲ್ಲಿ ದಲಿತರಿರುವಂತೆ ಪೇಟೆ ಪಟ್ಟಣಗಳ ಕೊಳಗೇರಿಗಳಲ್ಲಿ ದಲಿತರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಬೆವರು ಸುರಿಸಿ ಊರಿನ ಹೊಲಗದ್ದೆಗಳಲ್ಲಿ ಫಸಲು ತರುವ ಶ್ರಮಿಕರು (ದಲಿತರು) ಊರಲ್ಲೂ ಹೊರಗೆ.[೪]

ಕೆ. ಸಿದ್ಧಪ್ಪರವರು ಡಾ. ಎಮ್. ಚಂದ್ರಪೂಜಾರಿಯವರ ಮಾರ್ಗದರ್ಶನದಲ್ಲಿ ಮಾಡಿದ ಪಿಎಚ್.ಡಿ ಗ್ರಂಥವಾದ 'ಪ್ರವಾಸೋದ್ಯಮ ಮತ್ತು ಅಭಿವೃದ್ಧಿ'ಯಲ್ಲಿ ಅಧ್ಯಾಯ-ಐದರಲ್ಲಿ ಪ್ರವಾಸೋದ್ಯಮ ಮತ್ತು ಆರ್ಥಿಕ ಪರಿವರ್ತನೆಗಳು ಎಂಬುವುದನ್ನು ನೋಡಿದಾಗ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವುದರಿಂದ ಸಾಮಾಜಿಕವಾಗಿ, ಆರ್ಥಿಕವಾಗಿ ಬಹಳಷ್ಟು ಗುಣಾತ್ಮಕ ಬದಲಾವಣೆ

ಕಾಣಬಹುದು ಮತ್ತು ಜೀವನ ಶೈಲಿ ಬದಲಾಗುತ್ತದೆ. ಹಾಗೂ ಇದಕ್ಕೆ ಸ್ಥಳೀಯ ರಾಜ್ಯ ಮತ್ತು ಕೇಂದ್ರ ಸರಕಾರಗಳು ಸಹಕಾರವನ್ನು ನೀಡಬೇಕು ಎನ್ನುವುದನ್ನು ಅಂಕಿ ಅಂಶಗಳ ಮೂಲಕ ಸ್ಪಷ್ಟಪಡಿಸುತ್ತದೆ.[೫]

ಡಾ. ಸಿ.ಎನ್. ಮಂಜುನಾಥರವರ ಲೇಖನವಾದ "ಚೆಲುವ ಕನ್ನಡ ನಾಡಿಗೆ ಆಸ್ಪತ್ರೆಗಳೇ ಬುನಾದಿ!"ಯಲ್ಲಿ ಸರಕಾರಿ ಆಸ್ಪತ್ರೆಗಳ ಸಮಸ್ಯೆಗಳೇನು? ಅಲ್ಲಿ ಸರಕಾರ ಅನುಸರಿಸಬೇಕಾದ ಕ್ರಮಗಳೇನು? ಏಕೆ ಸರಕಾರಿ ಆಸ್ಪತ್ರೆಗಳು ಯಶಸ್ವಿಯನ್ನು ಕಾಣಲು ಸಾಧ್ಯವಾಗುತ್ತಿಲ್ಲ? ಮತ್ತು ಯಾವ ಹಳ್ಳಿಯ ಜನರಿಗೆ ಆಗುವ ತೊಂದರೆಗಳೆಷ್ಟಿವೆ? ಮತ್ತು ವೈದ್ಯರು ಏಕೆ ಹಳ್ಳಿಗಳನ್ನು ನಿರಾಕರಿಸುತ್ತಿದ್ದಾರೆ? ಎನ್ನುವುದನ್ನು ವಿವರಿಸಿದ್ದಾರೆ. ಹಾಗೂ ಆರೋಗ್ಯಕ್ಕೆ ಸಂಬಂಧಿಸಿದಂತೆ ಅಂಕಿ-ಅಂಶಗಳನ್ನು ನೀಡಿದ್ದಾರೆ. ಮಾಹಿತಿಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಪಡೆದುಕೊಂಡಿದ್ದಾರೆ.[೬]

ಡಾ. ಟಿ. ಎನ್. ಪ್ರಕಾಶ ಕಮ್ಮರಡಿ ರವರ ಲೇಖನವಾದ 'ರೈತರ ಆದಾಯ ವೃದ್ಧಿಗೆ ಸಮರ್ಪಕ ನೀತಿ ಅಗತ್ಯ' ಲೇಖನದಲ್ಲಿ ಇಂದಿನ ಸರಕಾರ ಕೃಷಿಯ ಕಡೆಗೆ ಗಮನಹರಿಸಿರುವುದು ಸಂತಸದ ವಿಚಾರ. ಪ್ರಧಾನಿಗಳಾದ ನರೇಂದ್ರ ಮೋದಿಯವರು ೫ ವರ್ಷಗಳಲ್ಲಿ ರೈತರ ಆದಾಯವನ್ನು ದ್ವಿಗುಣಗೊಳಿಸುವ ವಿಚಾರವನ್ನು ಪದೇ ಪದೇ ಎತ್ತುತ್ತಿದ್ದಾರೆ. ಕೃಷಿ ಪದ್ಧತಿಯಲ್ಲಿ ಯಾವ ರೀತಿಯ ಬದಲಾವಣೆಯ ಅವಶ್ಯಕತೆ ಇದೆ ಮತ್ತು ಮಾರಕಟ್ಟೆ ವ್ಯವಸ್ಥೆ ಯಾವ ರೀತಿ ಇರಬೇಕು, ಉದಾಹರಣೆಗೆ ಕರ್ನಾಟಕದ 'ಇ' ಮಾರುಕಟ್ಟೆಯನ್ನು ಮಾದರಿಯನ್ನಾಗಿಸಿಕೊಂಡಿದ್ದಾರೆ. ಕೃಷಿಯ ಜೊತೆಗೆ ಕೃಷಿಯೇತರ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವ ಅನಿವಾರ್ಯತೆಯನ್ನು ತಿಳಿಸಿದ್ದಾರೆ. ರೈತರಿಗೆ ನೇರವಾಗಿ ಆದಾಯ ಸಂದಾಯವಾಗಬೇಕು ಆದಷ್ಟು ಮಧ್ಯವರ್ತಿಗಳನ್ನು ತಪ್ಪಿಸುವ ಕಾರ್ಯವಾಗಬೇಕಿದೆ ಎನ್ನುತ್ತಾರೆ.[೭]

ಐ.ಎಮ್. ವಿಠ್ಠಲಮೂರ್ತಿ (ನಿವೃತ್ತ ಐ.ಎ.ಎಸ್. ಅಧಿಕಾರಿ) ಯವರ ಲೇಖನವಾದ 'ಡಿಸ್ನಿಲ್ಯಾಂಡ್ ಕಟ್ಟೋಣಾ, ಸಿಂಗಪೂರ ಮೀರಿ ಬೆಳೆಯೋಣ'ದಲ್ಲಿ ಪ್ರವಾಸಿ ತಾಣಗಳಲ್ಲಿ ನಮ್ಮ ರಾಜ್ಯ ಯಾವುದರಲ್ಲಿಯೂ ಕಡಿಮೆ ಇಲ್ಲಾ, ಆದರೆ ಅದನ್ನು ಸರಿಯಾದ ರೀತಿಯಲ್ಲಿ ನಿಯೋಜಿಸುವ ಅವಶ್ಯಕತೆ ಬಹಳಷ್ಟಿದೆ. ಇದು ರಾಜ್ಯವನ್ನು ಆರ್ಥಿಕವಾಗಿ ಪ್ರಗತಿಯತ್ತ ಕೊಂಡೊಯ್ಯಲು ಸಹಾಯಕಾರಿಯಾಗಲಿದೆ. ರಾಜ್ಯಕ್ಕೆ ಭೇಟಿ ನೀಡಿದ ಪ್ರವಾಸಿಗರು ಪ್ರವಾಸೋದ್ಯಮದಲ್ಲಿ ರಾಜ್ಯದ ಸ್ಥಾನ ಹಾಗೂ ಪ್ರವಾಸೋದ್ಯಮದಲ್ಲಿ ರಾಜ್ಯದ ಬೆಳವಣಿಗೆಗಳನ್ನು ಅಂಕಿ ಅಂಶ ಚಾರ್ಟುಗಳ ಮೂಲಕ ನೀಡಿದ್ದಾರೆ.[೮]

ಡಾ. ಆರ್. ಬಾಲಸುಬ್ರಮಣ್ಯಂ (ಅಭಿವೃದ್ಧಿ ಕಾರ್ಯಕರ್ತ ಸ್ವಾಮಿ ವಿವೇಕಾನಂದ ಯೂತ್ ಮೂಮೆಂಟ್‌ನ ಸಂಸ್ಥಾಪಕ) ರವರ ಲೇಖನದಲ್ಲಿ "ಆರೋಗ್ಯ ಕಾಯುವ ಕೈಗಳಿಗೆ ಶಕ್ತಿ ತುಂಬಬೇಕು" ದಲ್ಲಿ ಆರೋಗ್ಯ ಕ್ಷೇತ್ರದಲ್ಲಾಗುವ ಸುಧಾರಣೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಆರೋಗ್ಯ

ರಕ್ಷಣಾ ವ್ಯವಸ್ಥೆ, ಉತ್ತೇಜನ, ದಕ್ಷ ವಿಮಾ ಯೋಜನೆ, ಪ್ರಾದೇಶಿಕ ಅಸಮಾನತೆಯ ನಿವಾರಣೆ, ಸಮುದಾಯಗಳ ಬಲವರ್ಧನೆ, ವೃದ್ಧರ ಬಗ್ಗೆ ಕಾಳಜಿ, ಮುಖ್ಯವಾಹಿನಿ ಜೊತೆ ಮಾನಸಿಕ ಆರೋಗ್ಯ ಸೇವೆಯ ಜೋಡಣೆ, ಖಾಸಗಿ ಕ್ಷೇತ್ರದ ಸುಧಾರಣೆ ಹೀಗೆ ಹಲವು ವಿಚಾರಣೆಗಳನ್ನು ಹೇಳುತ್ತಾ ಆರೋಗ್ಯ ಕಾಯುವ ಕೈಗಳಿಗೆ ಶಕ್ತಿ ತುಂಬಬೇಕು ಎನ್ನುವುದನ್ನು ತಿಳಿಸಿದ್ದಾರೆ.[೯]

ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಅಭಿವೃದ್ಧಿ ಅಧ್ಯಯನ ವಿಭಾಗ ಹಮ್ಮಿಕೊಂಡಿದ್ದ 'ಪೊಲಿಟಿಕಲ್ ಎಕಾನಾಮಿ ಆಫ್ ತ್ರಿಪುರ' ಎಂಬ ಕಾರ್ಯಕ್ರಮದಲ್ಲಿ ತ್ರಿಪುರದ ಮುಖ್ಯಮಂತ್ರಿ ಮಾಣಿಕ ಸರ್ಕಾರ ಮಾತನಾಡುತ್ತ ದೇಶದ ಯಾವುದೇ ರಾಜ್ಯ ಅಭಿವೃದ್ಧಿ ಸಾಧಿಸಲು ಕೃಷಿ ಪ್ರಗತಿಯಿಂದ ಮಾತ್ರ ಸಾಧ್ಯ, ರೈತರಿಗೆ ಬೇಕಾದ ಗುಣಮಟ್ಟದ ಬೀಜ ರಸಗೊಬ್ಬರ, ಕೃಷಿ ಸಲಕರಣೆಗಳನ್ನು ತ್ರಿಪುರದಲ್ಲಿ ಸರಕಾರವೇ ನೀಡುತ್ತಲಿದೆ. ಕೃಷಿಗೆ ಸಂಪೂರ್ಣ ಉತ್ತೇಜನ ನೀಡುತ್ತಿರುವುದರಿಂದಾಗಿಯೇ ರೈತರು ಆರ್ಥಿಕವಾಗಿ ಅಭಿವೃದ್ಧಿ ಹೊಂದುತ್ತಿದ್ದಾರೆ. ಅದೇ ರೀತಿ ಶಿಕ್ಷಣ ಮತ್ತು ಆರೋಗ್ಯದ ಕುರಿತು ತ್ರಿಪುರದ ಶೈಕ್ಷಣಿಕ ಪ್ರಗತಿ ಶೇ. ೯೭.೮ ರಷ್ಟಿದ್ದು, ಆರೋಗ್ಯ ಸುಧಾರಣೆಯಲ್ಲಿ ಶೇ. ೯೭ ರಷ್ಟು ಹೊಂದಿದ್ದೇವೆ. ಇದಕ್ಕೆ ಕಾರಣ ಈ ಸಂಸ್ಥೆಗಳನ್ನು ಸರಕಾರದ ಹಿಡಿತದಲ್ಲಿರುವಂತೆ ನೋಡಿಕೊಳ್ಳುವುದು, ದೇಶದ ಸರಾಸರಿ ಪ್ರಮಾಣಕ್ಕಿಂತಲೂ ಹೆಚ್ಚಿರುವುದು ಕಂಡು ಬರುತ್ತದೆ.[೧೦]

'ಪ್ರವಾಸೋದ್ಯಮ ಇಲಾಖೆ ಮತ್ತು ಜಿಲ್ಲಾಡಳಿತ ಕೊಪ್ಪಳ ಜಿಲ್ಲೆ' ಇವರು ಹಮ್ಮಿಕೊಂಡ 'ವಿಶ್ವ ಪ್ರವಾಸೋದ್ಯಮ ದಿನಾಚರಣೆ-೨೦೧೬ (ದಿನಾಂಕ ೨೭-೦೯-೨೦೧೬) ಕಾರ್ಯಕ್ರಮದಲ್ಲಿ ಭಾಗವಹಿಸಿ, ಅಲ್ಲಿ ನೀಡಿರುವ ಪ್ರವಾಸೋದ್ಯಮ ಅವಶ್ಯಕತೆ, ಅದು ರಾಜ್ಯದ ಆರ್ಥಿಕತೆಯ ಮೇಲೆ ಬೀರುವ ಪರಿಣಾಮ ಜಿಲ್ಲೆಯ ಸಮಗ್ರ ಪ್ರವಾಸೋದ್ಯಮ ಸ್ಥಳಗಳ ಸ್ಥಿತಿಗತಿ ಮತ್ತು ಅಲ್ಲಿ ಆಗಬೇಕಾದ ಬದಲಾವಣೆಗಳು ಹಾಗೂ ಮುಂದಿನ ದಿನಗಳಲ್ಲಿ ಏನೆಲ್ಲಾ ಕ್ರಮಗಳನ್ನು ಕೈಗೊಳ್ಳುತ್ತಾರೆ ಎನ್ನುವುದನ್ನು ಇಲಾಖೆಯು ಅಧಿಕಾರಿಗಳಿಂದ ತಿಳಿದು ಕೊಳ್ಳಲಾಯಿತು.[೧೧]

ತ್ರಿಣಾವಿತ್‌ಯಾತಿಲ ಮತ್ತು ಗಾಯತ್ರಿಸಿಂಗರವರ ಲೇಖನವಾದ Residential Segregation in Indian cities (ಭಾರತದ ನಗರಗಳಲ್ಲಿನ ವಸತಿಯ ಪ್ರತ್ಯೇಕತೆ) ದಲ್ಲಿ ೨೦೦೧ರ ಜನಗಣತಿಯ ವಾರ್ಡ-ಲೆವೆಲ್‌ನ ದತ್ತಾಂಶದಂತೆ ಭಾರತದ ಏಳು ಮಹಾನಗರಗಳಾದ ಮುಂಬೈ, ದೆಹಲಿ, ಕಲ್ಕತ್ತಾ, ಚೆನ್ನೈ, ಬೆಂಗಳೂರು, ಅಹಮದಾಬಾದ ಮತ್ತು ಹೈದ್ರಾಬಾದಗಳಲ್ಲಿ ವಸತಿ ಪ್ರತ್ಯೇಕತೆಯು ಜಾತಿಯ ಆಧಾರದ ಮೇಲೆ ಅವಲಂಬಿತವಾಗಿದೆ. ಪ್ರತಿಯೊಂದು ನಗರಗಳಲ್ಲಿಯೂ ಕೂಡಾ ಜಾತಿಯ ಆಧಾರದ ಪ್ರತ್ಯೇಕತೆಯೂ ಸಾಮಾಜಿಕ ಆರ್ಥಿಕತೆಯ ಆಧಾರಕ್ಕಿಂತಲೂ ಪ್ರಬಲವಾಗಿದೆ. ಲಭ್ಯವಿರುವ ಮಾಹಿತಿಗಳನ್ನು ಈ ಅಧ್ಯಯನವು ಭವಿಷ್ಯತ್ತಿನ ಸಂಶೋಧನೆಗಳ ಮೇಲೆ ಬೆಳಕು ಚೆಲ್ಲಲಿದೆ.

ಭಾರತದ ಜಾತಿ ವ್ಯವಸ್ಥೆಯು ಬಹುಕಾಲದಿಂದಲೂ ಅಸಮಾನತೆ, ಸಾಮಾಜಿಕ ಹಾಗೂ ಪ್ರಾದೇಶಿಕ ಪ್ರತ್ಯೇಕತೆಗೆ ಮೂಲವಾಗಿದೆ. ಆದಾಗ್ಯೂ ಕೂಡ ಅಭಿವೃದ್ಧಿ ಹೊಂದುತ್ತಿರುವ ನಗರೀಕರಣದ ಹಾಗೂ ಆರ್ಥಿಕ, ಸಾಂಸ್ಕೃತಿಕ ಪರಿಸರದ ಆಧಾರದ ಮೇಲೆ ಸಾಮಾಜಿಕ ರಚನೆಗಳಾದ ಪ್ರಮುಖ ಜಾತಿ ವ್ಯವಸ್ಥೆ ನಗರೀಕರಣದ ಸಾಮಾಜಿಕ ಸಿದ್ಧಾಂತವು ವಾದಿಸುವುದೇನೆಂದರೆ, ವೈಯಕ್ತಿಕವಾಗಿ ಸಾಮೂಹಿಕವಾಗಿ ನಗರ ಜೀವನಕ್ಕೆ ಹೊಂದಿಕೊಂಡಿದೆ. ಇತ್ತೀಚಿನ ಅಧ್ಯಯನವೊಂದು ಈ ವಾದವನ್ನು ಬೆಂಬಲಿಸುವಂತಿದೆ. ಜಾತಿಯ ಅಸಮಾನತೆಗಳು ಶಿಕ್ಷಣದಿಂದ, ಆದಾಯ ಹಾಗೂ ಸಾಮಾಜಿಕ ಜಾಲಗಳು ಪ್ರಬಲವಾಗಿಲ್ಲ. ಇದು ಹಿಂದುಳಿದ ಹಳ್ಳಿಗಳಲ್ಲಿ ಪ್ರಬಲವಾಗಿ ಕಂಡು ಬಂದರೆ ಅಭಿವೃದ್ಧಿ ಹೊಂದಿದ ಹಳ್ಳಿ ಮತ್ತು ಸಣ್ಣ ನಗರಗಳಲ್ಲಿಯೂ ಕಂಡುಬರುತ್ತಿದೆ. ೨೧ನೇ ಶತನಮಾನದಲ್ಲಿಯೂ ಸಹ ಭಾರತದಲ್ಲಿ ಜಾತಿಯು ಎಷ್ಟು ಪ್ರಬಲ ಮಾನದಂಡವಾಗಿದೆ ಎಂಬುದನ್ನು ಪ್ರಸ್ತುತ ಅಧ್ಯಯನವು ತಿಳಿಸುತ್ತದೆ.[೨]

ಮಾರ್ಚ ೧೨-೧೮, ೨೦೦೫ ರ Economic & Political Weekly Vol XL No. ೧೧ Pg No. ೧೦೪೧-೧೦೫೪ ರಲ್ಲಿ Johan Hariss ರವರ Political Participation Representation and the Urban Poor (Finding from research in Delhi-೨೦೦೩) ಲೇಖನದಲ್ಲಿ ನಗರದಲ್ಲಿರುವ ಬಡವರ ರಾಜಕೀಯ ಭಾಗವಹಿಸುವಿಕೆ ಮತ್ತು ಪ್ರತಿನಿಧಿಸುವುದರ ಕುರಿತು ದೆಹಲಿಯಲ್ಲಿ ನಡೆದ ಒಂದು ಸಂಶೋಧನೆಯ ತೀರ್ಪುಗಳು ಇಲ್ಲಿ ಬಡವರ ಭಾಗವಹಿಸುವಿಕೆ ಪ್ರಮಾಣ ಬಹಳಷ್ಟು ಕಡಿಮೆ ಮಟ್ಟದಲ್ಲಿ ಇರುತ್ತದೆ. ೨೦೦೩ ರಲ್ಲಿ ಸರ್ವೆ ಮಾಡಲಾಯಿತು. ಇವರು ಇಲ್ಲಿ ತುಲನಾತ್ಮಕ ವಿಧಾನ, ಪ್ರಶ್ನಾವಳಿಗಳ ವಿಧಾನದ ಮೂಲಕ ಮಾಹಿತಿ ಸಂಗ್ರಹಿಸಿದ್ದಾರೆ. ಇಲ್ಲಿ Brazil (Sao Paul) Mexico (Mexico city) ಗಳನ್ನು ತುಲನೆಗೆ ಬಳಸಿಕೊಳ್ಳಲಾಗಿದೆ.

ಬಡವರು ಪ್ರಭಾವಿ ರಾಜಕೀಯ ವ್ಯಕ್ತಿಗಳ ಮುಂದಾಳತ್ವದಲ್ಲಿ ಸಂಘಟತರಾಗಿದ್ದಾರೆ. ಇಲ್ಲಿ ಬಳಸಿದ ಪರಿಕಲ್ಪನೆ ರಾಜಕೀಯ ಭಾಗವಹಿಸುವಿಕೆ ದೆಹಲಿ ಮತ್ತು ಅಲ್ಲಿನ ರಾಜಕೀಯದ ಕುರಿತು ಹೇಳುತ್ತದೆ. ವಿಧಾನ ಸಭೆಯು ೭೦ ಸದಸ್ಯರನ್ನು ಹೊಂದಿದೆ ಮೊದಲಿಗೆ ಕಾಂಗ್ರೆಸ್ ಪಕ್ಷ ೨೦೦೩ರವರೆಗೂ ಅಧಿಕಾರವನ್ನು ನಡೆಸಿದ ನಂತರ ಕೇಂದ್ರದಲ್ಲಿ ಬಿ.ಜೆ.ಪಿ. ಪಕ್ಷ ಬಂದ ನಂತರ ಸರಿಯಾದ ಸಂಘಟನೆ ಮತ್ತು ಶಕ್ತ ರಾಜಕಾರಣ ಬಂದಿತು. ಅಲ್ಲಿನ ಜನಸಂಖ್ಯೆಯು ಕಳೆದ ೩೦ ವರ್ಷಗಳಲ್ಲಿ ಬಹಳಷ್ಟು ವೇಗಗತಿಯಿಂದ ಬೆಳೆದುದನ್ನು ಕಾಣಬಹುದು. ವಲಸೆ ಪ್ರಕ್ರಿಯೆಯು ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಉದಾ: ಅಲ್ಲಿ ರಾಜ್ಯಗಳಾದ ಪಂಜಾಬ, ಹರಿಯಾಣ, ರಾಜಸ್ಥಾನ, ಬಿಹಾರ ಅದರಲ್ಲಿ ಉತ್ತರ ಪ್ರದೇಶದ ಜನರು ಹೆಚ್ಚು ವಲಸೆ ಬರುತ್ತಿದ್ದಾರೆ. ಕೈಗಾರಿಕೆಗಳು ಮತ್ತು ಐ.ಟಿ. ಸೆಕ್ಟರ್ ಹೆಚ್ಚುತ್ತಿರುವದರಿಂದ ಅಭಿವೃದ್ಧಿಯನ್ನು ಹೊಂದುತ್ತದೆ. ೧೯೯೮ರ ಆರ್ಥಿಕ ಸಮೀಕ್ಷೆ ಪ್ರಕಾರ ಶೇ. ೪೧ ಕೆಲಸಗಾರರು ತಯಾರಿಕೆಯು ಮತ್ತು ಶೇ. ೨೩ ವ್ಯಾಪಾರ ವಾಣಿಜ್ಯದಲ್ಲಿ ತೊಡಗಿದ್ದಾರೆ. ಆದರೆ ಕಲ್ಕತ್ತಾ ಮತ್ತು ಮುಂಬಯಿ ರೀತಿಯಲ್ಲಿ ಸರಿಯಾದ ಬೆಳವಣಿಗೆ ಆಗುತ್ತಿಲ್ಲ.

ನಂತರ ಅಲ್ಲಿರುವ ಸಮಸ್ಯೆಗಳಾದ ವಾಯು ಮಾಲಿನ್ಯ, ಮೂಲ ಅವಶ್ಯಕತೆಗಳು, ಹಿಂಸೆ ಮತ್ತು ಅಪರಾಧ ಸಾರ್ವಜನಿಕ ಸೇವೆ, ಆರೋಗ್ಯ ಸೇವೆಗಳ ಕುರಿತು ಹಾಗೂ ಈ ಸಮಸ್ಯೆಗಳಿಗೆ ಸರಕಾರ, ಕಾನೂನು, ರಾಜಕೀಯ ಪಕ್ಷಗಳು, ದೊಡ್ಡ ವ್ಯಕ್ತಿಗಳು, (ಬಿಗ ಮ್ಯಾನ್) ಪ್ರಾತ್ಯಕ್ಷಿತೆ (ಡೆಮೋನ್‌ಸ್ಟ್ರೇಷನ್) ಸ್ವಸಿದ್ಧತೆ (ಸೆಲ್ಫ್ ಪ್ರಾವಿಸಿಂಗ್) ಮೂಲಕ ಪರಿಹರಿಸಬೇಕಾದ ಅವಶ್ಯಕತೆಯನ್ನು ಹೇಳುತ್ತದೆ.[೧೩]

ಏಪ್ರೀಲ್ ೨೨-೨೮, ೨೦೦೬ ರ Economic & Political weekly Vol XLI No. 16 pg No 1523-1529 ರಲ್ಲಿ K.C. SURI. ಯವರ Political Economy of Agrarian Distress ಎಂಬ ಲೇಖನದಲ್ಲಿ ಲೇಖಕರು ದೇಶದ ವಿವಿಧ ರಾಜ್ಯದಲ್ಲಿನ ಕೃಷಿಯ ದುಸ್ಥಿತಿಯ ಸಂಕಟವು ರೈತರನ್ನು ದುಃಖಕ್ಕೆ ಎಡೆ ಮಾಡಿದೆ ಮತ್ತು ಇತ್ತೀಚಿನ ದಿನಗಳಲ್ಲಿ ರೈತರ ಆತ್ಮಹತ್ಯೆಗಳು ಕೂಡಾ ನಡೆಯುತ್ತಿವೆ. ಈ ಲೇಖನವು ತುಲನಾತ್ಮಕವಾಗಿದ್ದು, ಅಧ್ಯಯನದ ಉದ್ದೇಶ ಕೃಷಿಯ ಸವಾಲುಗಳ ಅವಶ್ಯಕತೆ ತಿಳಿಸುವುದಾಗಿದೆ. ರೈತರ ಆತ್ಮಹತ್ಯೆ ತಡೆಯಲು ೨೦೦೫ ರಲ್ಲಿ ಆಂಧ್ರ ಪ್ರದೇಶದಲ್ಲಿ ರೈತರ ಆಯೋಗವನ್ನು ಸ್ಥಾಪಿಸಲಾಯಿತು. The Chairman of National Commission of Farmers M.S. Swaminath says that "some thing is terribly wrong in the country side" ಅಂತಾ ಹೇಳಿದ್ದನ್ನು ಉಲ್ಲೇಖಿಸಿದ್ದಾರೆ. ೨೦೦೩ ರಲ್ಲಿ National Sample Survey organisation ಪ್ರಕಾರ ರೈತರು ಪ್ರತಿ ತಿಂಗಳಿಗೆ ೬೧೫ ರೂ. ಕ್ಕಿಂತ ಕಡಿಮೆ ಅನುಭೋಗ ವೆಚ್ಚವನ್ನು ಮಾಡುತ್ತಿದ್ದಾರೆ. Official Statistics ಪ್ರಕಾರ ೨೦೦೧ ರಿಂದ ೨೦೦೬ರ ಮಧ್ಯೆ ನಾಲ್ಕು ರಾಜ್ಯಗಳಾದ ಆಂಧ್ರಪ್ರದೇಶ, ಕರ್ನಾಟಕ, ಕೇರಳ ಮತ್ತು ಮಹಾರಾಷ್ಟ್ರದಲ್ಲಿ ೮೯೦೦ ರೈತರ ಆತ್ಮಹತ್ಯೆಗಳಾಗಿದ್ದವು.

ಇವೆಲ್ಲವನ್ನು ಏಕೆ ಸರಕಾರ ತಡೆಗಟ್ಟಲು ಸಾಧ್ಯವಾಗುತ್ತಿಲ್ಲ. ಇದನ್ನು ರಾಜಕೀಯ ಆರ್ಥಿಕತೆಯ ವಿಫಲತೆ ಎನ್ನಬಹುದು. ಮುಂಬರುವ ದಿನಗಳಲ್ಲಾದರೂ ಸರಕಾರ ಇದನ್ನು ತಡೆಗಟ್ಟುವ ಪ್ರಯತ್ನ ನಡೆಸಬೇಕು. ಸರಕಾರವನ್ನು ಎಚ್ಚರಿಸಲು ರೈತ ಸಂಘಟನೆಗಳ ಹೋರಾಟ ಅವಶ್ಯವಿದೆ. ಸರಕಾರ ವಿವಿಧ ಕ್ರಮಗಳನ್ನು ಕೈಗೊಳ್ಳಬೇಕು ಪಠ್ಯಕ್ರಮದಲ್ಲಿ ಸೇರಿಸಬೇಕು. ಶಿಕ್ಷಕರು ತರಗತಿಗಳಲ್ಲಿ ಇದರ ಅರಿವನ್ನು ಮೂಡಿಸುವುದು, ಎಲ್ಲಾ ರಾಜ್ಯಗಳ ವಿಧಾನ ಸಭೆಯ ಅಧಿವೇಶನದಲ್ಲಿ ಚರ್ಚೆ ನಡೆಸುವುದು ವಿರಳ, ಅದು ನಡೆಯಬೇಕು. ಹೆಚ್ಚು ರಾಜ್ಯಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪ್ರತಿನಿಧಿಗಳು ರೈತ ಹಿನ್ನೆಲೆಯಿಂದ ಬಂದರೂ ಕೂಡ ರೈತರ ಸಮಸ್ಯೆಗಳಿಗೆ ಗಮನ ನೀಡುವುದಿಲ್ಲ. ಬ್ರಿಟಿಷರ್ ಕಾಲದಲ್ಲಿ ರೈತರ ಪರಿಸ್ಥಿತಿ ಶೋಚನೀಯವಾಗಿತ್ತು. ಸ್ವಾತಂತ್ರ್ಯ ನಂತರ ಕಾಂಗ್ರೆಸ್ ಸರಕಾರ ರೈತರ ಪರವಾಗಿ ಕಾರ್ಯ ನಿರ್ವಹಿಸಿದ್ದನ್ನು ಮತ್ತು ಹಸಿರು ಕ್ರಾಂತಿ, ಆಧುನಿಕ ಕೃಷಿ ಪದ್ಧತಿ ರೈತರನ್ನು ಒಳ್ಳೆಯ ಸ್ಥಿತಿಯಲ್ಲಿ ಇಡಲು ಕಾರಣವಾದವು. ನಂತರದ ದಿನಗಳಲ್ಲಿ ಹವಾಮಾನ ವೈಪರೀತ್ಯ, ಮಾರಕಟ್ಟೆ ವ್ಯವಸ್ಥೆಯಿಂದ ರೈತರ ಆತ್ಮಹತ್ಯೆಗಳು ನಡೆದಿರುವುದನ್ನು ತಿಳಿಸುತ್ತಾರೆ.[೧೪]

Oct ೦೭-೧೩-೨೦೦೬ Economic & Political weekly Vol XL Pg No. ೪೨೭೩ to ೪೨೭೯ ರಲ್ಲಿ TARIQUE NIAZI ರವರ Political Economy of Ecological Divide in Pakistan' ಎಂಬ ಲೇಖನದಲ್ಲಿ ಪಾಕಿಸ್ತಾನದ ಆರ್ಥಿಕತೆಯನ್ನು ಪರಿಸರವು ವಿಭಜಿಸುತ್ತದೆ, ಎಲ್ಲ ಕಡೆಯು ಒಂದೇ ತರವಿರದೇ ಪರಿಸರಕ್ಕೆ ತಕ್ಕ ಹಾಗೆ ಬದಲಾಗುತ್ತದೆ, ಅಲ್ಲಿರುವ ರಾಜಕಾರಣವು ಕೂಡಾ ಭೂಮಿಯನ್ನು ಹೊಂದಿದವರ ಹತ್ತಿರ ಇದ್ದದ್ದನ್ನು ಕಾಣಬಹುದು. Economist (೨೦೦೬) ರ ಪ್ರಕಾರ ಸಿಂಧ ಪಾಕಿಸ್ತಾನದ ಕಾಟನ್‌ಬೆಲ್ಟ್‌ದಲ್ಲಿ ಶೇಕಡಾ ೪೦ ರಷ್ಟು ಭೂಮಿಯು ಕೇವಲ ಶೇಕಡಾ ೭ ರಷ್ಟು ಭೂ ಮಾಲೀಕರದ್ದು ಒಟ್ಟು ಹಳ್ಳಿಯ ಅರ್ಧದಷ್ಟು ಜನರು ಭೂಮಿ ಇಲ್ಲದವರು (೪೯ ಮಿಲಿಯನ್ ನಿವಾಸಿಗಳು) ಶೇಕಡಾ ೪೦ ರಷ್ಟು ಜನ ಬಡತನದಿಂದ ಬಳಲುತ್ತಿದ್ದರು. ಶೇಕಡಾ ೫ ರಷ್ಟಿರುವ ಹಳ್ಳಿಯ ಪ್ರಮುಖರು ಶೇಕಡಾ ೯೫ ರಷ್ಟು ಆಸ್ತಿಯನ್ನು ಹೊಂದಿದ್ದರು. ಇನ್ನೂ ಶೇಕಡಾ ೯೫ ರಷ್ಟು ಜನ ಶೇಕಡಾ ೫ ರಷ್ಟು ಆಸ್ತಿಯನ್ನು ಹೊಂದಿದ್ದರು. (Hq ೨೧೯೯೬).

DISTRIBUTION OF LANDOWNERSHIP IN PAKISTAN

Farm Size (in Acres)	Percentege of Owners	Percentage of Farm Area.
Five or less	೫೪.೦	೧೨.೦೦
೫-೨೫	೩೯.೦	೩೯.೦
೨೫-೫೦	೫.೦	೧೫.೦
೫೦-೧೫೦	೨.೦	೧೭.೦
೧೫೦ and above	೦.೫	೧೭.೦
All arm size	೧೦೦.೦	೧೦೦೦

Source : Government of Pakistan (೧೯೯೦) census of Agriculture Agricultural census organization, Lahor-Pakistan.

ಇಲ್ಲಿ ಭೂಸುಧಾರಣಾ ಕಾಯ್ದೆಯನ್ನು ತರಲಾಯಿತು. ಜನರಲ್ ಆಯುಬ್‌ಖಾನ್ ಅಕ್ಟೋಬರ ೧೯೫೮ ರಲ್ಲಿ ೨.೫ ಮಿಲಿಯನ್ ಎಕರೆ ಭೂಮಿಯನ್ನು ಮತ್ತು ೧೯೭೨ ರಲ್ಲಿ ಮಾಜಿ ಪ್ರಧಾನಿ ಜುಲಪಿಕಾರ ಅಲಿ ಭುಟ್ಟೊ ೩ ಲಕ್ಷ ಎಕರೆ ಭೂಮಿಯನ್ನು ವಶಪಡಿಸಿಕೊಂಡು ಭೂಮಿ ಇಲ್ಲದ ರೈತರಿಗೆ ನೀಡಿದರು.[೧೫] (Word Bank ೨೦೦೨; Qureshi ೨೦೦೧).

April ೭-೨೦೦೭ Economic & Political weekly Vol XLII Pg No. ೧೨೮೧-೧೨೮೭ ರಲ್ಲಿ PRANAB KANTI BASU ರವರ Political Economy of Land Grab ನಲ್ಲಿ ಸರಕಾರವು

ಕೈಗಾರಿಕೆಗಳಿಗೆ ಸರಕಾರದ ಕೆಲಸಕ್ಕೆ ಭೂಮಿಯನ್ನು ವಶಪಡಿಸಿಕೊಳ್ಳುವುದು ರಾಜಕೀಯ ಪ್ರಾಥಮಿಕ ಮಹತ್ವವಾಗಿದೆ ಎನ್ನುತ್ತಾರೆ ಮತ್ತು ಇಲ್ಲಿ ಭೂಮಿಯನ್ನು ಸರಕಾರ ದೊಡ್ಡ ದೊಡ್ಡ ಭೂಮಿಯನ್ನು ಹೊಂದಿದವರನ್ನು ಬಿಟ್ಟು ಹೆಚ್ಚಾಗಿ ಕಡಿಮೆ ಭೂಮಿಯನ್ನು ಹೊಂದಿದವರ ದಿನನಿತ್ಯದ ಬದುಕಿಗೆ ಸಹಕಾರಿಯಾದ ಭೂಮಿಯನ್ನು ಪಡೆದುಕೊಂಡು ಕಡಿಮೆ ಪರಿಹಾರವನ್ನು ನೀಡುತ್ತಿದೆ. ಉದಾ: ಪಶ್ಚಿಮ ಬಂಗಾಳದ ಸಿಂಗೂರ ಉತ್ತರ ಪ್ರದೇಶದ ಗಾಜಿಯಾಬಾದ. ಜಾಗತೀಕರಣದ ಪರಿಣಾಮ ಬಡರಾಷ್ಟ್ರಗಳ ಮೇಲೆ ಬೀರಿ ಸಾಮ್ರಾಜ್ಯ ಸಾಹಿತ್ಯಕ್ಕೆ ದಾರಿ ಮಾಡಿಕೊಡುತ್ತಿದೆ. ಕ್ಯಾಪಿಟಲ್ ರೆಂಟ್ ಕುರಿತು ಹೇಳುತ್ತಾರೆ ವಿದ್ಯಾವಂತ ಜನರ ಅವಶ್ಯಕತೆ ಹೆಚ್ಚುತ್ತಿದೆ ಹಾಗೆಯೇ ಅವರ ವೇತನವು ಕೂಡಾ ತೀರಾ ಹೆಚ್ಚಾಗಿರುವುದನ್ನು ಕಾಣುತ್ತೇವೆ.[೧೬]

ಸೆಪ್ಟೆಂಬರ್ ೨೦೧೫ ಯೋಜನಾ ಮ್ಯಾಗಜೀನಲ್ಲಿ ಆರ್.ಕೆ. ಬಾಸಿನರವರು 'ಸುರಕ್ಷಿತ ಸ್ಮಾರ್ಟ ನಗರಗಳು ಎಂಬ ಲೇಖನದಲ್ಲಿ ಪ್ರಸಕ್ತ ವರ್ಷದ ಬಜೆಟನಲ್ಲಿ ೭೬೦೦ ಕೋಟಿ ಹಣವನ್ನು ೧೦೦ ಸ್ಮಾರ್ಟ ಸಿಟಿಗಳ ನಿರ್ಮಾಣಕ್ಕಾಗಿ ತೆಗೆದಿರಸಲಾಗಿದೆ. ಈ ಯೋಜನೆಗೆ ಚಾಲನೆ ಬಲವಾಗಿ ಕಾರ್ಯನಿರ್ವಹಿಸುತ್ತಿರುವ ರಾಷ್ಟ್ರೀಯ ಸುಸ್ಥಿರ ಅಭಿವೃದ್ಧಿ ಮತ್ತು ಸ್ಮಾರ್ಟ ಸಿಟಿ ಮಿಷನ್ ದೇಶದ ಮಧ್ಯಮ ಗಾತ್ರದ ನಗರಗಳನ್ನು ಈ ಉದ್ದೇಶಕ್ಕಾಗಿ ಗುರುತಿಸುವಲ್ಲಿ ಕಾರ್ಯೋನ್ಮುಖವಾಗಿವೆ. ೨೦೧೧ರ ಜನಗಣತಿಯ ಪ್ರಕಾರ ಸುಮಾರು ಶೇ. ೩೧ ರಷ್ಟು ಜನಸಂಖ್ಯೆ ನಗರ ಪ್ರದೇಶದಲ್ಲಿ ವಾಸಿಸುತ್ತಿದ್ದು, ಅದು ಶೀಘ್ರವೇ ಶೇ. ೪೦ ಕ್ಕೆ ಏರಿಕೆಯಾಗುವ ನಿರೀಕ್ಷೆ ಇದ್ದು, ಮುಂದಿನ ೧೫ ವರ್ಷಗಳಲ್ಲಿ ಒಟ್ಟು ದೇಶಿಯ ಉತ್ಪನ್ನಕ್ಕೆ (ಜಿಡಿಪಿ) ಅದರ ಕೊಡುಗೆ ಶೇ. ೭೫ ರಷ್ಟಾಗಲಿದೆ. ಜಾಗತೀಕರಣದ ಅನುಭವ ಮೇಲೆ ಹೇಳುವುದಾದರೆ ಒಂದು ದೇಶದ ನಗರೀಕರಣ ಶೇ ೩೦ರ ನಂತರ ಹೆಚ್ಚು ವೇಗದಲ್ಲಾಗುತ್ತದೆ. ಇದು ಭಾರತೀಯರನ್ನು ತುದಿಗಾಲಲ್ಲಿ ನಿಲ್ಲಿಸಿದ್ದು, ನಗರೀಕರಣದ ಕ್ಷೀಣತೆಯನ್ನು ತಡೆಯುತ್ತಿದೆ. ಸ್ಮಾರ್ಟ ಸಿಟಿಯ ಉದ್ದೇಶ ನಗರದ ಜನರಿಗೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.[೧೭]

Dec-೧೬-೨೨, ೨೦೦೬ ರಲ್ಲಿ Economic & Political Weekly Vol XLI No. ೫೦ Pg No. ೫೧೬೫-೫೧೭೧ ರಲ್ಲಿ REETIKA KHERA ರವರ Political Economy of State Response to drought in Rajastan ೨೦೦೦-೦೩ ಎಂಬ ಲೇಖನದಲ್ಲಿ ರಾಜಸ್ಥಾನದಲ್ಲಿ ೨೦೦೦-೦೩ ರಲ್ಲಿ ಬರಗಾಲ ಬಂದಾಗ ಅಲ್ಲಿನ ರಾಜಕೀಯ ಆರ್ಥಿಕ ಪರಿಸ್ಥಿತಿಯನ್ನು ಸರಕಾರ ನಿರ್ವಹಿಸಿದ ರೀತಿ ಮತ್ತು ಅನೇಕ ಸಂಘ ಸಂಸ್ಥೆಗಳು, ಸಾರ್ವಜನಿಕರು, ಸಮೂಹ ಮಾಧ್ಯಮ, ಸಂಶೋಧನೆ, ನ್ಯಾಯಾಲಯ ಮತ್ತು ಮುಂತಾದವುಗಳು ವಹಿಸಿದ ಪಾತ್ರದ ಕುರಿತು ಈ ಲೇಖನದಲ್ಲಿ ವಿವರಿಸಲಾಗಿದೆ. ೫೦ ಕ್ಕಿಂತಲೂ ಹೆಚ್ಚು ಸಂಘಟನೆಗಳು ಪರಿಹಾರ ಕಾರ್ಯದಲ್ಲಿ ತೊಡಗಿದ್ದರು. ಇವು ಅಕಾಲ ಸಂಘರ್ಷ ಸಮಿತಿಯ ನೇತೃತ್ವದಲ್ಲಿ ಸಂಘಟಿತವಾಗಿದ್ದವು. ೨೦೦೨ ರಲ್ಲಿ ಪರಿಹಾರ ನೀಡಲು ಸರಕಾರ ವಿಫಲವಾದಾಗ ಅಲ್ಲಿರುವ ಒತ್ತಡ ಗುಂಪುಗಳು ಸರಕಾರದ ಮೇಲೆ ಒತ್ತಡ ತರಲು ಪ್ರಾರಂಭಿಸಿದವು. ಅದರಲ್ಲೂ ಸಮೂಹ ಮಾಧ್ಯಮ, ಜನ ಸಂಘಟನೆ,

ನ್ಯಾಯಂಗೀಯ ಕಾರ್ಯ ಮತ್ತು ಸಂಶೋಧನೆ ಇವು ಸರಕಾರವನ್ನು ಎಚ್ಚೆತ್ತುಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದರು.[೧೮] ಈ ಲೇಖನವು ನಮಗೆ ರಾಜಕೀಯ ಆರ್ಥಿಕತೆಯ ಮಹತ್ವವನ್ನು ತಿಳಿಸುತ್ತದೆ. ಮತ್ತು ಇಲ್ಲಿ ಪ್ರಮುಖ ಪಾತ್ರ ವಹಿಸಿದ ಜನ ಸಂಘಟನೆ ಒತ್ತಡ ಗುಂಪುಗಳು ಸಮೂಹ ಮಾಧ್ಯಮಗಳು ಇತರೆ ಸಂಘಟನೆಗಳು ನ್ಯಾಯಾಲಯಗಳು ಮುಂತಾದವುಗಳು ಯಾವ ರೀತಿಯ ಪಾತ್ರ ವಹಿಸುತ್ತವೆ ಎನ್ನುವದನ್ನು ನಾವು ಕಾಣಬಹುದು.

Nov ೨೮ Dec ೧೯೯೮ Economic & Political weekly Vol XXXIII Pg ೩೦೩೩–೩೦೩೮ ರಲ್ಲಿ PABITRA GIRI ರವರು Urbanisation in west Bengal, ೧೯೫೧–೧೯೯೧ ಲೇಖನದಲ್ಲಿ ಈ ರೀತಿ ತಿಳಿಸಿದ್ದಾರೆ. ಸ್ವತಂತ್ರ ಬರುವ ಸಮಯದಲ್ಲಿ ಇದೇ ಭಾರತದಲ್ಲಿ ನಗರೀಕರಣ ಪ್ರಕ್ರಿಯೆಯಲ್ಲಿ ಪಶ್ಚಿಮ ಬಂಗಾಳ ಮುಂದಿತ್ತು. ಆದರೆ ಆ ಸಮಯದಲ್ಲಿ ಹಿಂದುಳಿದ ಜಿಲ್ಲೆಗಳಲ್ಲಿ ನಗರೀಕರಣ ತೀರಾ ಕಡಿಮೆ ಇತ್ತು. ಇಲ್ಲಿ ವಸಾಹತು ಶಾಹಿ ಆಡಳಿತ ಇತ್ತು ಅಲ್ಲದೇ ಇದು ವಸಾಹತು ಶಾಹಿಯ ವ್ಯಾಪಾರ ಕೇಂದ್ರವಾಗಿತ್ತು. ಭೂಮಿಯನ್ನು ರೈತರಿಗೆ ಶಾಶ್ವತವಾಗಿ ನೀಡಲಾಯಿತು. ಜಮೀನ್ದಾರ ಪದ್ಧತಿ ಇಲ್ಲದೇ ಇರುವ ಸ್ಥಳಗಳಲ್ಲಿ ಕೃಷಿಯು ಹೆಚ್ಚಿದನ್ನು ಕಾಣಬಹುದು. ನಂತರ ಕಲ್ಕತ್ತಾದಲ್ಲಿ ಸೆಣಬಿನ ಕೈಗಾರಿಕೆಗಳು ಪ್ರಾರಂಭವಾದದ್ದು ಇಲ್ಲಿ ರಫ್ತಿಗೆ ಸಹಾಯಕವಾಗುವಂತೆ ಜಲಮಾರ್ಗ ಮತ್ತು ರೈಲುಮಾರ್ಗಗಳು ಇದ್ದವು. ಆಸಾನಸೋಲ್ (Asansol) ಬೆಲ್ಟ್‌ನಲ್ಲಿ ಕೆಲವೊಂದಿಷ್ಟು ನಗರಗಳು ಗಣಿಗಾರಿಕೆಯಿಂದ ಅಭಿವೃದ್ಧಿ ಹೊಂದಿದ್ದನ್ನು ಕಾಣಬಹುದು. ಇದರಿಂದ ಇಲ್ಲಿ ನಗರ–ಹಳ್ಳಿ ಅಂತರರಾಜ್ಯ ವಲಸೆ ಪ್ರಮಾಣ ಕಡಿಮೆ ಇರುವುದನ್ನು ಕಾಣಬಹುದು. ೧೯೬೧ ರಲ್ಲಿ ಶೇ ೫೪ ರಷ್ಟಿದ್ದ ನಗರ ಜನ ಸಂಖ್ಯೆಯಲ್ಲಿ ಕೇವಲ ಶೇ. ೧೧ ರಷ್ಟು ಅಂತರ ರಾಜ್ಯ ನಗರ–ಹಳ್ಳಿ ವಲಸೆ ನಡೆಯಿತು. ೧೯೫೧ ರಲ್ಲಿ ಪಶ್ಚಿಮ ಬಂಗಾಳದಲ್ಲಿ ನಗರೀಕರಣ ಶೇ. ೨೩.೮೮ ಇತ್ತು. ಇಡೀ ಭಾರತದಲ್ಲಿ ೧೭.೨೯ ಇತ್ತು. ಪಶ್ಚಿಮ ಬಂಗಾಳ ನಾಲ್ಕನೇ ಸ್ಥಾನದಲ್ಲಿತ್ತು. ಮಹಾರಾಷ್ಟ್ರ ಶೇ. ೨೮.೭೫ ಗುಜರಾತ್ ಶೇ. ೨೮.೨೩ ತಮಿಳುನಾಡು ೨೪.೩೫ ಈ ಮೂರು ರಾಜ್ಯಗಳಿಗೆ ಹೋಲಿಸಿದಾಗ ಇದು ನಿಧಾನಗತಿಯಲ್ಲಿ ಇದ್ದದನ್ನು ಕಾಣಬಹುದು. ೧೯೯೧ ರಲ್ಲಿ ಆರನೇ ಸ್ಥಾನಕ್ಕೆ ಇಳಿಯಿತು. ಮತ್ತೆ ಇಲ್ಲಿ ಪಂಜಾಬ ಮತ್ತು ಕರ್ನಾಟಕ ಸೇರಿಕೊಂಡವು. ಅಲ್ಲಿರುವ ಕಾರ್ಖಾನೆಗಳು ಬೇರೆ ಉದ್ಯೋಗಾವಕಾಶಕ್ಕಿಂತ ಹೆಚ್ಚಿನ ಉದ್ಯೋಗಾವಕಾಶ ನೀಡಿದ್ದವು. ಹೀಗಾಗಿ ವಲಸೆ ಪ್ರಮಾಣದಲ್ಲಿ ಕಡಿಮೆಯಾಯಿತು. ದೇಶದ ಇತರೆ ಭಾಗಗಳಿಗೆ ಹೋಲಿಸಿದರೆ ಇಲ್ಲಿ ನಗರೀಕರಣ ಪ್ರಮಾಣ ಕಡಿಮೆಯಾಯಿತು. ಕಾರಣವೇನೆಂದರೆ ಕೃಷಿಯ ಬೆಳವಣಿಗೆಯಿಂದ ಹಳ್ಳಿಗಳಲ್ಲಿಯೇ ಉದ್ಯೋಗದ ಪ್ರಮಾಣ ಹೆಚ್ಚಿದ್ದರಿಂದ ಎನ್ನುವುದು ತಿಳಿಯಿತು.[೧೯]

'ಯೋಜನಾ' ಅಭಿವೃದ್ಧಿ ಮಾಸ ಪತ್ರಿಕೆ ೨೦೧೫ ಪುಟ ಸಂ. ೧೫–೧೯ ರಲ್ಲಿ ಹಣ ಹೂಡಿಕೆ – ಸುಧಾರಣೆ –ಅಭಿವೃದ್ಧಿ ಎಂಬ ಲೇಖನವನ್ನು ಪ್ರವಾಕರ ಸಾಹೋ (ಪ್ರಾಧ್ಯಾಪಕರು ಆರ್ಥಿಕ ಅಭಿವೃದ್ಧಿ ಸಂಸ್ಥೆ ನವದೆಹಲಿ) ಕನ್ನಡಕ್ಕೆ ಮಧುಶ್ರೀ ಬಿ. ಈ ಲೇಖನದಲ್ಲಿ ಹೂಡುವಿಕೆ–ಸುಧಾರಣೆ–ಅಭಿವೃದ್ಧಿಗೆ ನೇರವಾದ ಸಂಬಂಧವಿದೆ. ಒಂದು ಹೆಚ್ಚಾದಂತೆ ಇನ್ನೊಂದು ಹೆಚ್ಚಾಗುತ್ತಾ

ಹೋಗುತ್ತದೆ. ದೇಶದ ಈ ಮೂರು ಅಭಿವೃದ್ಧಿ ಆಗಬೇಕಾದರೆ ದೇಶದ ಆರ್ಥಿಕ ನೀತಿಗಳು ಸಡಿಲಗೊಳ್ಳಬೇಕು. ಆರ್ಥಿಕ ನೀತಿಗಳಲ್ಲಿ ಬದಲಾವಣೆ ಅತಿ ಅವಶ್ಯವಾಗಿದೆ ಎನ್ನುವುದನ್ನು ತಿಳಿಸಿದ್ದಾರೆ.[೨೦] ಈ ಲೇಖನದಿಂದ ನಗರದ ಅಭಿವೃದ್ಧಿಗೆ ರಾಜಕೀಯ ವ್ಯಕ್ತಿಗಳು ಹೂಡಿಕೆಗೆ ಅನುಕೂಲವಾಗುವ ಹಾಗೆ ಆರ್ಥಿಕ ನಿಯಮಗಳನ್ನು ರೂಪಿಸಬೇಕು ಎನ್ನುವುದನ್ನು ತಿಳಿದುಬರುತ್ತದೆ.

ಯೋಜನಾ ಅಭಿವೃದ್ಧಿ ಮಾಸಪತ್ರಿಕೆ ಮೇ–೨೦೧೫ ರಲ್ಲಿ ಪುಟ ಸಂ. ೩೮–೪೧ "ಆರ್ಥಿಕ ಬೆಳವಣಿಗೆಯಲ್ಲಿ ಪ್ರವಾಸೋದ್ಯಮ" ಎಂಬ ಲೇಖನವನ್ನು ಪ್ರೇಮ ಸುಬ್ರಮಣ್ಯಂ (ಮೂಲ ಸೌಕರ್ಯ ಸಲಹಾಕಾರರು) ಕನ್ನಡಕ್ಕೆ ಅವಿನಾಶ ಈ ಲೇಖನದಲ್ಲಿ ಭಾರತವು ತನ್ನ ಪ್ರವಾಸೋದ್ಯಮ ಕ್ಷೇತ್ರದಲ್ಲಿರುವ ಆಗಾಧ ಸಾಧ್ಯತೆಗಳನ್ನು ದುಡಿಸಿಕೊಳ್ಳುವಲ್ಲಿ ಹಾಗೂ ಈ ಕ್ಷೇತ್ರವನ್ನು ಆರ್ಥಿಕ ಅಭಿವೃದ್ಧಿ, ಸರ್ವೋದಯಗಳಿಗೆ ಬಳಸಿಕೊಳ್ಳುವಲ್ಲಿ ಹೆಚ್ಚಿನ ಯಶಸ್ಸನ್ನೇನೋ ಸಾಧಿಸಿಲ್ಲ. ೧೨ನೇ ಪಂಚವಾರ್ಷಿಕ ಯೋಜನೆಯು ಈ ನಿಟ್ಟಿನಲ್ಲಿ ಗಮನಹರಿಸಿದೆ, ಇಲ್ಲಿಯವರೆಗೂ ಮುಖ್ಯವಾಗಿದ್ದ ವಿದೇಶಿ ಪ್ರವಾಸಿಗಳು ಮತ್ತು ವಿದೇಶ ವಿನಿಮಯ ಕೇಂದ್ರಿತ ಪ್ರವಾಸೋದ್ಯಮಕ್ಕಿಂತ ಭಿನ್ನವಾದ ಹೆಜ್ಜೆಯನ್ನಿಡಲು ಅದು ಯೋಜಿಸುತ್ತದೆ. ವಿಶ್ವಸಂಸ್ಥೆಯ ವಿಶ್ವಪ್ರವಾಸೋದ್ಯಮ ಕೇಂದ್ರದ ಪರಿಕಲ್ಪನೆಯ ಅನುಸಾರ ಸಹಸ್ರ ಮಾನದ ಅಭಿವೃದ್ಧಿ ಗುರಿಗಳು ಹಾಗೂ ಸುಸ್ಥಿರ ಅಭಿವೃದ್ಧಿ ಗುರಿಗಳ ನೆರಳಿನಲ್ಲಿ ಪ್ರವಾಸೋದ್ಯಮದ ಪಾತ್ರವನ್ನು ಸಂಯೋಜಿಸಲು ಯೋಜನೆಯು ಬಯಸುತ್ತದೆ.[೨೧] ಇಲ್ಲಿ ಬೇರೆ ದೇಶಗಳಿಗೆ ಹೋಲಿಸಿದಾಗ ನಮ್ಮ ದೇಶದಲ್ಲಿ ಪ್ರವಾಸಿ ಕೇಂದ್ರಗಳ ನಿರ್ಮಾಣ ಸುವ್ಯವಸ್ಥೆಯಲ್ಲಿ ಇಲ್ಲ. ಕೆಲವೊಂದು ಪ್ರವಾಸ ಕೇಂದ್ರಗಳಲ್ಲಿ ಪ್ರವಾಸಿಗರಿಗೆ ಅನುಕೂಲಕರ ವಾತಾವರಣ ಕಲ್ಪಿಸಲಾಗುತ್ತಿಲ್ಲ, ಎಷ್ಟೋ ಪ್ರಸಿದ್ಧ ಪ್ರವಾಸಿ ಕೇಂದ್ರವಾಗಬೇಕಾದಂತಹ ಸ್ಥಳಗಳು ಭಾರತ ದೇಶದಲ್ಲಿವೆ. ಸರಕಾರ ಅವುಗಳನ್ನು ನೋಡಿಯೇ ಇಲ್ಲ, ಬಹಳಷ್ಟು ಬದಲಾವಣೆಯ ಅವಶ್ಯಕತೆ ಇದೆ. ಇದರಿಂದ ನಮ್ಮ ಆರ್ಥಿಕತೆಯನ್ನು ಸುಧಾರಿಸಲು ಸಾಧ್ಯವಾಗುತ್ತದೆ.

'ಯೋಜನಾ' ಅಭಿವೃದ್ಧಿ ಮಾಸ ಪತ್ರಿಕೆ ಅಕ್ಟೋಬರ ೨೦೧೪ ಪುಟ ಸಂ. ೧೨–೧೮ರಲ್ಲಿ ಅರುಣ್‌ಮಿತ್ರಾ (ಅರ್ಥಶಾಸ್ತ್ರ ಪ್ರಾಧ್ಯಾಪಕರು, ಆರ್ಥಿಕ ಬೆಳವಣಿಗೆಗೆ ಸಂಸ್ಥೆ ದೆಹಲಿ) ಕನ್ನಡಕ್ಕೆ ಕಣ್ಮಣಿ ಇವರ ಲೇಖನ 'ನಗರ ಅನೌಪಚಾರಿಕ ವಲಯ' ದಲ್ಲಿ ನಗರ ಅನೌಪಚಾರಿಕ ವಲಯವು ಜೀವನೋಪಾಯಕ್ಕೆ ಅಗತ್ಯವಿರುವ ಆದಾಯವನ್ನು ಒದಗಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಅದರಲ್ಲೂ ವಿಶಿಷ್ಟವಾಗಿ ಗ್ರಾಮೀಣ ಭಾಗದಿಂದ ವಲಸೆ ಬಂದಿರುವ ಮತ್ತು ನಗರ ಪ್ರದೇಶದ ಕೊಳಗೇರಿ ಪ್ರದೇಶಗಳಲ್ಲಿ ವಾಸಿಸುವ ಕಡಿಮೆ ಆದಾಯ ಹೊಂದಿರುವ ಕುಟುಂಬಗಳಿಗೆ ಆದಾಯ ಒದಗಿಸುವಲ್ಲಿ ನಿರ್ಣಾಯಕ ಪಾತ್ರವಹಿಸುತ್ತದೆ. ಹೀಗಾಗಿ ಅನೌಪಚಾರಿಕ ವಲಯದ ಗಾತ್ರ ಮತ್ತು ರಚನೆಯ ಪ್ರಕ್ರಿಯೆಗಳನ್ನು ತುಲನಾತ್ಮಕವಾಗಿ ಪರಿಶೀಲಿಸುವ ಪ್ರಯತ್ನ ಮಾಡಿದ್ದಾರೆ. ದೇಶದ ಒಟ್ಟು ಉದ್ಯೋಗಿಗಳ ಪೈಕಿ ಅನೌಪಚಾರಿಕ ವಲಯದಲ್ಲಿರುವ ಉದ್ಯೋಗಿಗಳ ಪಾಲು ಹೆಚ್ಚು ಕೃಷಿ ಮತ್ತು ಕೃಷಿಯೇತರ ಚಟುವಟಿಕೆ ಒಳಗೊಂಡಿದೆ. "ಬಂಡವಾಳ ಮತ್ತು ಕಾರ್ಮಿಕ ಸಂಖ್ಯೆಯ ಅನುಪಾತ ಕಡಿಮೆ ಇರುವ, ಕಡಿಮೆ ಗುಣಮಟ್ಟದ ತಂತ್ರಜ್ಞಾನದೊಂದಿಗೆ ಕಡಿಮೆ ಪ್ರಮಾಣದ ಉತ್ಪಾದನಾ

ಚಟುವಟಿಕೆ ಹೊಂದಿರುವ ವಲಯವೇ ಅನೌಪಚಾರಿಕ ವಲಯ"[೨೨] ಒಟ್ಟಿನಲ್ಲಿ ನಗರದಲ್ಲಿ ಉದ್ಯೋಗ ಸೃಷ್ಟಿಸುವಲ್ಲಿ ಈ ಅನೌಪಚಾರಿಕ ವಲಯ ಪ್ರಮುಖ ಪಾತ್ರ ವಹಿಸುತ್ತದೆ.

Dec-೨೭-೨೦೧೪ Economic & Political weekly ಯಲ್ಲಿ Vol XLIX No. ೫೨ Pg ೧೬-೧೯ ರಲ್ಲಿ ಲೇಖಕರಾದ JYOTIRAJ PATRA KOMAL KANTARIYA ರವರು ತಮ್ಮ ಲೇಖನದಾದ Emergent Disaster Riskscape in urban India ದಲ್ಲಿ ನಗರಗಳಲ್ಲಿ ಸಂಭವಿಸುವ ನೈಸರ್ಗಿಕ ವಿಕೋಪಗಳಿಂದ ಹೊರ ಬರುವ ರೀತಿ ಪ್ರಸ್ತಾಪಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಇದೊಂದು ನಗರಗಳಿಗೆ ಸವಾಲಾಗಿರುವುದನ್ನು ಕಾಣುತ್ತೇವೆ. ಜಮ್ಮು-ಕಾಶ್ಮೀರ ಸಂಭವಿಸಿದ ನೆರಹಾವಳಿ, ಆಂಧ್ರಪ್ರದೇಶ ಮತ್ತು ಓಡಿಸ್ಸಾಕ್ಕೆ ಅಪ್ಪಳಿಸಿದ ಸೈಕ್ಲೋನನ್ನು ಉದಾಹರಣೆಗಾಗಿ ತೆಗೆದುಕೊಂಡು ಅಲ್ಲಿನ ಪರಿಸ್ಥಿತಿ ಗಂಭೀರವಾದದ್ದರ ಕುರಿತು ಹೇಳುತ್ತಾರೆ. ಇಂತಹ ಸಂದರ್ಭಗಳಲ್ಲಿ ನಗರಗಳು ಅವಕಾಶಗಳಿಗೆ ಬಾಗಿಲನ್ನು ತೆರೆದಿಡಬೇಕು, ಒಂದು ನಗರವನ್ನು ನಾಲ್ಕು ಸ್ಥಂಭಗಳ ಮೇಲೆ ಕಟ್ಟಬೇಕಾಗುತ್ತದೆ. ೧. ಸಾಮಾಜಿಕವಾಗಿ ೨. ತಾಂತ್ರಿಕವಾಗಿ ೩. ಸಾಂಸ್ಥಿಕವಾಗಿ ೪. ಆರ್ಥಿಕ ಮೂಲಭೂತ ಸೌಕರ್ಯಗಳಿಂದ ಕಟ್ಟಲು ಸಾಧ್ಯವಾಗುತ್ತದೆ. ಪರಿಣಾಮಕಾರಿಯಾಗಿ ನಗರವನ್ನು ಕಟ್ಟಲು ಇನ್ನೂ ೫ ಅಂಶಗಳ ಕುರಿತು ಹೇಳುತ್ತಾರೆ. ೧. ಪರಿಷತ್ತು / ಸಮಿತಿ (ಇನಸ್ಟೂಷನ್) ೨. ಬದಲಾವಣೆ (ಇನ್ನೊವೆಷನ್) ೩. ಹೂಡಿಕೆ (ಇನವೆಸ್ಟಮೆಂಟ) ೪. ಮೂಲಭೂತ ಸೌಕರ್ಯಗಳು (ಇನ್‌ಫ್ರಾಸ್ಟ್ರಕ್ಚರ್) ೫. ಮುನ್ಸೂಚನೆ / ಮಾಹಿತಿ (ಇನಫಾರಮೇಷನ್).[೨೩]

Economic & Political Weekly (Vol XLIX No. ೪೫ Nov, ೮-೨೦೧೪ Pg ೩೨-೪೩ Population Education & Development- LEELA VISARIA ಈ ಲೇಖನದಿಂದ ಲೇಖಕರು ಜನಸಂಖ್ಯೆ, ಶಿಕ್ಷಣ ಮತ್ತು ಅಭಿವೃದ್ಧಿಯ ಯಾವ ರೀತಿ ಸಂಬಂಧವಿದೆ ಎನ್ನುವುದನ್ನು ತಿಳಿಸಿದ್ದಾರೆ. ಯಾವುದೇ ಒಂದು ಪ್ರದೇಶ ಅಭಿವೃದ್ಧಿ ಹೊಂದಬೇಕಾದರೆ ಅಲ್ಲಿರುವ ಜನಸಂಖ್ಯೆಗೆ ಸರಿಯಾದ ಶಿಕ್ಷಣ ದೊರೆಯಬೇಕು. ಇತ್ತೀಚಿನ ದಿನಗಳಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕಿನಿಂದ ಶಿಕ್ಷಣದ ಪ್ರಮಾಣ ಹೆಚ್ಚಾಗಿರುವುದನ್ನು ನಾವು ನೋಡುತ್ತೇವೆ. ಈ ಶಿಕ್ಷಣವು ಲಿಂಗ ಅಸಮಾನತೆಯನ್ನು, ಹಳ್ಳಿ ನಗರ ಎಂಬ ಭೇದಭಾವವನ್ನು ಕಡಿಮೆಗೊಳಿಸಿದೆ. ಗುಣಮಟ್ಟದ ಶಿಕ್ಷಣ ದೊರಕಿದರೆ ಅದು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ. ಈ ಶಿಕ್ಷಣ ಪ್ರಮಾಣ ಹೆಚ್ಚಾಗಬೇಕಾದರೆ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ಶಾಲೆಗಳಿರಬೇಕು ಮತ್ತು ಆ ಶಾಲೆಗಳಲ್ಲಿ ನುರಿತ ಶಿಕ್ಷಕರಿರಬೇಕು. ಆ ಶಿಕ್ಷಕರಿಗೆ ನಿರಂತರವಾಗಿ ತರಬೇತಿಯನ್ನು ನೀಡಬೇಕು. ದೇಶದಲ್ಲಿ ಶಿಕ್ಷಣ ಪೂರ್ಣ ಪ್ರಮಾಣದಲ್ಲಿ ಗುಣಮಟ್ಟದಲ್ಲಿ ಇಲ್ಲ ಇನ್ನೂ ಅನೇಕ ಸವಾಲುಗಳನ್ನು ಎದುರಿಸಿ ಅನೇಕ ರೀತಿಯ ಬದಲಾವಣೆಯ ಅವಶ್ಯಕತೆ ಇರುವುದನ್ನು ಹೇಳುತ್ತಾರೆ.[೨೪]

Economic & Political weekly Vol XLIX No. ೪೮ Pg No. ೫೪-೬೧ Nov ೨೯-೨೦೧೪ Analysing Urban growth Boundry Effects. MANDALASA

VENKATARAMAN ಈ ಲೇಖನವು ನಗರದ ಬೆಳವಣಿಗೆಯಿಂದ ನಗರದ ಗಡಿಯ ಮೇಲಿನ ಪರಿಣಾಮ ಕುರಿತು ವಿವರಿಸಿದ್ದಾರೆ. ಉದಾಹರಣೆಗಾಗಿ ಬೆಂಗಳೂರನ್ನು ತೆಗೆದುಕೊಂಡಿದ್ದಾರೆ. ಬೆಂಗಳೂರಿನಂತ ನಗರದ ಬೆಳವಣಿಗೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುತ್ತದೆ. ಆದರೂ ಅಲ್ಲಿ ಯಾವುದೇ ಕೆಟ್ಟ ಪರಿಣಾಮವಾಗಿಲ್ಲ, ಏಕೆಂದರೆ ಸುಸಜ್ಜಿತವಾಗಿ ವ್ಯವಸ್ಥಿತವಾಗಿ ಬೆಳವಣಿಗೆ ನಡೆಯುತ್ತಿದೆ ಮತ್ತು ಇನ್ನೊಂದು ವಿಷಯವೆಂದರೆ ಮಾಸ್ಟರ್ ಪ್ಲಾನ ಮೂಲಕ ನಿರ್ಮಾಣವಾದ ನಗರವದು, ಇಲ್ಲಿ ಜೊತೆಗೆ ಪರಿಸರದ ಕಾಳಜಿ ಕೂಡ ಇದೆ. ಬೆಂಗಳೂರನ್ನು ಉದ್ಯಾನ ನಗರ ಎನ್ನುತ್ತಾರೆ. ಗಿಡ- ಮರಗಳಿಂದ ಕೂಡಿದ ನಗರವಾಗಿದೆ. ನಗರಗಳಲ್ಲಿ ಒಂದು ಸಮಸ್ಯೆ ಎಂದರೆ ಅತಿಕ್ರಮಣ ಕಟ್ಟಡಗಳು ಇಂದು ವೇಗಗತಿಯಲ್ಲಿ ನಡೆಯುತ್ತಿರುತ್ತವೆ. ಇವುಗಳನ್ನು ತಡೆಯಲು ಸೂಕ್ತ ಕಾನೂನಿನ ಅವಶ್ಯಕತೆ ಇರುವುದನ್ನು ತಿಳಿಸಿದ್ದಾರೆ.[೨೫] ಒಟ್ಟಿನಲ್ಲಿ ನಗರದ ಬೆಳವಣಿಗೆಯಿಂದ ಗಡಿಯ ಮೇಲೆ ಪರಿಣಾಮ ಬೀರಬಾರದೆಂದರೆ ನಗರಗಳು ಸುಸಜ್ಜಿತವಾಗಿ ಮಾಸ್ಟರ್ ಪ್ಲಾನಗಳ ಮೂಲಕ ರೂಪಿಸಲು ಸಲಹೆ ನೀಡಿದ್ದನ್ನು ನೋಡಬಹುದು.

Economic & Political weekly Vol No. XLIX No. ೪೬ Nov. ೧೫-೨೦೧೪ Pg No. ೨೨-೨೬, The 'Smart City' card HIMANSHU BURTE. ಈ ಲೇಖನದಲ್ಲಿ ಸ್ಮಾರ್ಟಸಿಟಿ ಯೋಜನೆಯ ಕುರಿತು ಚರ್ಚಿಸಿದ್ದಾರೆ. ಈ ಸ್ಮಾರ್ಟ ಸಿಟಿಯಿಂದ ಮೊದಲನೇಯದಾಗಿ ಮೂಲಭೂತ ಸೌಕರ್ಯಗಳು ನಗರಕ್ಕೆ ದೊರೆಯುತ್ತದೆ, ನಗರದ ಬದಲಾವಣೆ ತೀವ್ರಗತಿಯಲ್ಲಿ ಆಗುತ್ತದೆ, ಬದಲಾವಣೆ ಅಥವಾ ಸ್ಮಾರ್ಟಸಿಟಿ ರಾಜಕೀಯವನ್ನು ಹೊರತಾಗಿಲ್ಲ, ಇವರು ಮನಸ್ಸು ಮಾಡಿದರೆ ಮಾತ್ರ ಅದು ಅಂದುಕೊಂಡಿದ್ದನ್ನು ಸಾಧಿಸಲು ಸಾಧ್ಯವಾಗುತ್ತೆ. ಹಾಗೂ ಇಡೀ ನಗರ ಎಲ್ಲ ರೀತಿಯ ಬದಲಾವಣೆ ಕಾಣಲು ಸಾಧ್ಯ. ಆಡಳಿತದಲ್ಲಿ ಪಾರದರ್ಶಕತ್ವ ಭ್ರಷ್ಟತೆಯಿಂದ ದೂರ ಉಳಿಯಲು, ನಾಗರಿಕರಿಗೆ ಪ್ರತಿಯೊಂದು ಬೇಗನೆ ತಿಳಿಯುವಂತೆ ಮಾಹಿತಿಯ ವೇಗವು ಹೆಚ್ಚಾಗುತ್ತದೆ. ಅದೇ ರೀತಿ ಕೈಗಾರಿಕೆಗಳು ಬೆಳವಣಿಗೆಯನ್ನು ಸಾಧಿಸಲು ಸಾಧ್ಯವಾಗುತ್ತದೆ. ಈ ಮೇಲಿನ ಎಲ್ಲ ಬದಲಾವಣೆಗಳು ಸ್ಮಾರ್ಟಸಿಟಿ ಯೋಜನೆ ಸ್ಮಾರ್ಟ ಆಗಿ ಜಾರಿಗೆಯಾದಾಗ ಮಾತ್ರ ಸಾಧ್ಯ ಎನ್ನುವುದನ್ನು ಹೇಳುತ್ತಾರೆ.[೨೬]

Economic & Political weekly Vol XLIX No. ೪೨ Oct-೧೮-೨೦೧೪ page No. ೩೬-೩೮ understanding the Urban Challenge SHANKAR ACHARYA. ಈ ಲೇಖನವು ನಗರಗಳ ಸವಾಲುಗಳನ್ನು ಅಧ್ಯಯನಕ್ಕೊಳಪಡಿಸುವುದರ ಕುರಿತು ಇರುವಂತದ್ದು, ಇಲ್ಲಿ ಆರ್ಥಿಕ ಬೆಳವಣಿಗೆ ಉದ್ಯೋಗ, ಬಡತನ, ವಿದೇಶ ವ್ಯಾಪಾರ, ಸಂದಾಯ, ಸಾರ್ವಜನಿಕ ಹಣಕಾಸು, ಕೃಷಿ, ಕೈಗಾರಿಕೆ, ಗ್ರಾಮೀಣ ಅಭಿವೃದ್ಧಿ, ಸಾಮಾಜಿಕ ವಲಯ, ಪ್ರಮುಖವಾದ ವಿಷಯಗಳಾಗಿವೆ. ಸಂವಿಧಾನದ ೭೪ನೇ ತಿದ್ದುಪಡಿ ನಗರ ಸ್ಥಳೀಯ ಸರಕಾರವನ್ನು ಬಲಗೊಳಿಸಿದೆ. ಪ್ರಮುಖ ಸವಾಲುಗಳೆಂದರೆ ಹಳ್ಳಿಗಳಿಂದ ನಗರಕ್ಕೆ ಸ್ಥಳಾಂತರವಾಗುವ ಪ್ರಕ್ರಿಯೆ ಆರ್ಥಿಕ ಅಭಿವೃದ್ಧಿ ಸಾಧಿಸುವುದು, ಕೃಷಿಯ ಸೊರಗುವಿಕೆ ತಡೆಗಟ್ಟುವುದು, ಕೃಷಿಯೇತರ ಚಟುವಟಿಕೆ ಹೆಚ್ಚಿಸಲು ಕೈಗಾರಿಕೆ ಹೆಚ್ಚಿಸುವ

ಕೃಷಿಯ ಮೇಲೆ ಕಡಿಮೆ ಅವಲಂಬನೆ ಜನದಟ್ಟನೆಯ ಪ್ರದೇಶ ಕಳಪೆ ನಗರ/ಮುನ್ಸಿಪಲ ಸೇವೆಗಳು ಕೊಳಚೆ ಪ್ರದೇಶಗಳು, ರೋಗಗಳು ಆಗಿವೆ. (ಪಿ. ಕೆ. ಮೊಹಂತಿ) ಪ್ರಕಾರ ಭಾರತದ ಮುನಿಸಿಪಾಲಿಟಿಗಳು ವಿಶ್ವದಲ್ಲಿಯೇ ಬಲಹೀನವಾಗಿವೆ. ಕಾರಣವೆಂದರೆ ಸಂಪನ್ಮೂಲಗಳ ಮಾರ್ಗ, ಆರ್ಥಿಕತೆ ಸ್ವಾಯತ್ತತೆ, ಕಂದಾಯ ಹೆಚ್ಚಿಸುವಿಕೆ, ದಕ್ಷತೆ ಕಡಿಮೆ ಇರುವುದು, ಸಂಪ್ರದಾಯಿಕ ಆಸ್ತಿಯ ತೆರಿಗೆ ಹೆಚ್ಚಿಸುವಲ್ಲಿ ಆಸಕ್ತವಾಗಿದೆ.[೨೭] ನಗರದ ಅಭಿವೃದ್ಧಿಗೆ ಹೊಸ ಹೊಸ ಸಂಶೋಧನೆಗಳ ಕೊರತೆ ಇರುವುದನ್ನು ವಿವರಿಸಿದ್ದಾರೆ.

ಮೇ-೨೬ ಜೂನ್ ೧-೨೦೦೭ ರ Economic and Political weekly Vol XLII Pg No. ೧೯೨೨ – ೧೯೩೩ ರಲ್ಲಿ NANDINI GUPTA. Industrial Decline and Urban Politics in Kolkata ನಲ್ಲಿ ಕಲ್ಕತ್ತಾ ನಗರದಲ್ಲಿ ಗೋಣಿ ನಾರು ಕೈಗಾರಿಕೆ ಕ್ಷೀಣಿಸಿದ್ದು ನಗರ ರಾಜಕೀಯದ ಮೇಲೆ ಪರಿಣಾಮ ಬೀರಿತ್ತು. ನಗರದಲ್ಲಿ ದೊಡ್ಡ ಪ್ರಮಾಣದ ಕಾರ್ಮಿಕರ ಮುಷ್ಕರಗಳನ್ನು ಎದುರಿಸಬೇಕಾಯಿತು. ಇದರ ಪರಿಣಾಮವಾಗಿ ೨೦೦೦-೨೦೦೫ ರವರೆಗೆ ರಾಜಕೀಯ ವ್ಯಕ್ತಿಗಳು ಅನೇಕ ರೀತಿಯಲ್ಲಿ ಪ್ರಯತ್ನಿಸಿದರು. ಉದ್ಯೋಗಗಳನ್ನು ಸೃಷ್ಟಿಸಲು ಮತ್ತು ನಗರ ಕಾರ್ಮಿಕರ ಬಡತನದ ಸುಧಾರಣೆಗೆ ಪ್ರಯತ್ನಿಸಿದರು. ಉದಾರೀಕರಣದ ಪರಿಣಾಮವಾಗಿ ಹತ್ತಿ ಗಿರಿಣಿಗಳು ಮುಂಬಯಿ, ಅಹಮದಾಬಾದ ಮತ್ತು ಕಾನ್ಪುರನಲ್ಲಿ ೧೯೮೦ ರ ಕ್ಕಿಂತ ಮುಂಚೆ ಇಲ್ಲೂ ಕೂಡಾ ಕೈಗಾರಿಕೆಗಳು ಕುಸಿದಿದ್ದನ್ನು ಕಾಣಬಹುದು. ಸಣ್ಣ ಪುಟ್ಟ ಗುಡಿಕೈಗಾರಿಕೆಗಳು ಮುಚ್ಚಿ ಕಾರ್ಮಿಕರ ಸ್ಥಿತಿ ಹೀನಾಯವಾದ್ದದನ್ನು ವಿವರಿಸಿದ್ದಾರೆ.[೨೮] ಈ ಲೇಖನದಿಂದ ನಮ್ಮ ನಗರದಲ್ಲಿ ಕೈಗಾರಿಕೆಗಳ ಪಾತ್ರವೇನು ಮತ್ತು ಉದಾರೀಕರಣ ಯಾವ ರೀತಿ ಪರಿಣಾಮ ಬೀರಿದೆ ಎನ್ನುವುದನ್ನು ನಾವು ನೋಡಬಹುದು.

ಎಂ. ಚಂದ್ರ ಪೂಜಾರಿ. (೨೦೧೪) ಬದಲಾಗುತ್ತಿರುವ ಕರ್ನಾಟಕ, ಗಾಯತ್ರಿ ಪ್ರಕಾಶನ ಬಳ್ಳಾರಿ ನಮ್ಮಲ್ಲಿ ನಡೆದ ಮೂರು ಭೂಸುಧಾರಣೆಗಳ ನಂತರವು ರಾಜ್ಯ ಮೂರನೇ ಒಂದರಷ್ಟು ಕುಟುಂಬಗಳ ಸ್ವಾಧೀನದಲ್ಲಿ ಯಾವ ಭೂಮಿಯೂ ಇಲ್ಲ. ಸುಮಾರು ಇಷ್ಟೇ ಪ್ರಮಾಣದ ಕುಟುಂಬಗಳ ವಶದಲ್ಲಿ ಒಂದರಿಂದ ಒಂದೂವರೆ ಎಕರೆಯಷ್ಟು ಭೂಮಿ ಇದೆ. ಶೇಕಡ ೨೫ ರಷ್ಟು ಕೃಷಿ ಕುಟುಂಬಗಳು ರಾಜ್ಯದ ಶೇಕಡ ೬೫ ರಷ್ಟು ಕೃಷಿ ಭೂಮಿಯನ್ನು ಹೊಂದಿವೆ. ಇಂದಿನ ಅಭಿವೃದ್ಧಿಗೆ ಹಿಂದಿನ ಸಣ್ಣ ಸಣ್ಣ ತುಂಡು ಭೂಮಿಗಳನ್ನು ಹೊಂದಿವೆ. ಇಂದಿನ ಅಭಿವೃದ್ಧಿಗೆ ಹಿಂದಿನ ಸಣ್ಣ ಸಣ್ಣ ಭೂಮಿಗಳು ಸರಿಯಲ್ಲ. ಅದರ ಬದಲು ದೊಡ್ಡ ಭೂಮಿ ಅನಿವಾರ್ಯವೆಂದು ಪ್ರಚಾರ ನಡೆಸಲಾಗುತ್ತಿದೆ. ಇದಕ್ಕಾಗಿ ೧೯೭೪ ರ ಭೂ ಸುಧಾರಣಾ ಮಸೂದೆ ೧೯೯೬ ರಲ್ಲಿ ತಿದ್ದುಪಡಿಗೊಂಡು ಭೂಮಿ ಪರಭಾರಗೆ ಅವಕಾಶ ಕಲ್ಪಿಸಲಾಗಿದೆ. ವಿಶೇಷ ಆರ್ಥಿಕ ವಲಯಗಳಿಗೆ ನಗರಗಳ ಅಭಿವೃದ್ಧಿಗೆ ಉದ್ಯಮಿಗಳಿಗೆ ಭೂಮಿ ನೀಡಲು ಭೂ ಬ್ಯಾಂಕ್ ಸ್ಥಾಪಿಸಲು ಲಕ್ಷಗಟ್ಟಲೆ ಎಕರೆ ಕೃಷಿ ಭೂಮಿಯನ್ನು ವಶಪಡಿಸಿಕೊಳ್ಳುತ್ತಿದೆ. ಇದರಿಂದಾಗಿ ಎಪ್ಪತ್ತು ಎಂಬತ್ತರ ದಶಕಗಳು ಕೃಷಿಕರಿಗೆ ದಕ್ಕಿದ ಅಲ್ಪಸ್ವಲ್ಪ ಭೂಮಿ ಕೂಡ ಅವರ ಕೈತಪ್ಪುತ್ತಿದೆ.

ಈ ಎಲ್ಲ ಕಾರಣಗಳಿಂದ ಪಂಚವಾರ್ಷಿಕ ಯೋಜನೆಗಳಲ್ಲಿ ನೀಡಿದ ಬೃಹತ್ ಮಿನಿಯೋಜನೆಯ ಹೆಚ್ಚಿನ ಲಾಭವನ್ನು ದೊಡ್ಡ ಕೃಷಿಕರು ಮತ್ತು ದೊಡ್ಡ ಬಂಡವಾಳಿಗರು ಮಾತ್ರ ಪಡೆಯಲು ಸಾಧ್ಯವಾಯಿತು.[೨೯]

ಎಂ. ಚಂದ್ರ ಪೂಜಾರಿ (೨೦೧೪) ಬದಲಾಗುತ್ತಿರುವ ಕರ್ನಾಟಕ ಗಾಯತ್ರಿ ಪ್ರಕಾಶನ ಬಳ್ಳಾರಿ ಹಲವಾರು ಕಾರಣಗಳಿಂದ ಇತ್ತೀಚಿನ ದಿನಗಳಲ್ಲಿ ಸಮುದಾಯದ ಎಲ್ಲರೂ ಬಳಸುವ ಸಂಪನ್ಮೂಲಗಳು ನಶಿಸುತ್ತಿವೆ. ಖಾಸಗಿ ಬಳಕೆಗಾಗಿ ಸಮುದಾಯದ ಸಂಪನ್ಮೂಲಗಳ ಅತಿಕ್ರಮಣ ಇವುಗಳ ನಾಶಕ್ಕೆ ಮುಖ್ಯ ಕಾರಣವಾಗಿದೆ. ಗೋಮಾಳ, ಕೆರೆ ಜಲಾಯನ, ಕೆರೆ ಪಾತ್ರ ಮುಂತಾದವು ಅತಿಕ್ರಮಣದಿಂದ ನಾಶವಾಗಿವೆ. ಇದರ ಜೊತೆಗೆ ಸಂರಕ್ಷಣೆಯ ಕೊರತೆಯಿಂದಾಗಿ ಸಾಮಾಜಿಕ ಅರಣ್ಯ, ಸಮುದಾಯ ಭವನ, ಮುಂತಾದವು ನಾಶವಾಗುತ್ತವೆ. ಗ್ರಾಮೀಣ ಪ್ರದೇಶಗಳ ಭೂಮಿ ಸಂಬಂಧಗಳು ಅಧಿಕಾರ ಸಂಬಂಧಗಳು, ಜಾತಿ ಸಂಬಂಧಗಳು ತಳಸ್ತರದ ಜನರಿಗೆ ಉಸಿರುಗಟ್ಟಿಸುವ ವಾತಾವರಣ ಸೃಷ್ಟಿಸಿವೆ. ಇಂತಹ ಉಸಿರುಗಟ್ಟಿಸುವ ಬದುಕಿನಿಂದ ಬಿಡುಗಡೆಗಾಗಿ ತಳಸ್ತರದ ಜನರು ಸೇವೆಗಳತ್ತ ಸಾಲುಗಟ್ಟಿ ವಲಸೆ ಹೋಗುತ್ತಿದ್ದಾರೆ ನೀರಾವರಿಯ ಕೊರತೆ ಹತ್ತಿಪ್ಪತ್ತು ಎಕರೆ ಭೂಮಿ ಇರುವವರನ್ನು ಕೃಷಿ ಕಾರ್ಮಿಕರ ದುಃಸ್ಥಿತಿಗೆ ತಳ್ಳಿದೆ. ವಲಸೆ ಹೋಗುವುದು, ಮೂರು ಹೊತ್ತಿನ ಊಟಕ್ಕೆ ಪರದಾಡುವುದು, ಕಲಿಕೆ ಶಿಕ್ಷಣ, ಅನಾರೋಗ್ಯವನ್ನು ಅನುಭವಿಸುವುದು ಇವರಿಗಿರುವ ಆಯ್ಕೆಗಳು.[೩೦]

Economic & Political weekly Vol XLIX No. 9 The Micro Political Economy of Gains by unorganied workers in India, BARBERA HARISS WHITE VELENTINE PROSPERI ಈ ಲೇಖನವು ಅಸಂಘಟಿತ ಕಾರ್ಮಿಕರಿಂದ ಸೂಕ್ಷ್ಮ ರಾಜಕೀಯ ಆರ್ಥಿಕತೆಗೆ ಕೊಡುಗೆ ನೀಡುವುದರ ಕುರಿತು ಇದೆ. ಸ್ವ ಉದ್ಯೋಗವು ನಮ್ಮ ಆರ್ಥಿಕತೆಗೆ ತಮ್ಮದೇ ಆದ ಕೊಡುಗೆಯನ್ನು ನೀಡದೇ ಹ್ಯಾರಿಸ್ ವೋಟರ ಅಧ್ಯಯನದ ಪ್ರಕಾರ ಶೇಕಡಾ ೫೩ರಷ್ಟು ಉದ್ಯೋಗ ಸ್ವಯಂ ಉದ್ಯೋಗವಾಗಿದೆ. ಅನೇಕ ಸಣ್ಣ ಮಟ್ಟ ಉದ್ಯೋಗಗಳಾದ ಕಟ್ಟಡಗಳ ನಿರ್ಮಾಣ, ಮೀನುಗಾರಿಗೆ, ಬೀಡಿ ಕಟ್ಟುವುದು, ಸ್ವ–ಸಹಾಯ ಮಹಿಳಾ ಗುಂಪು ಮುಂತಾದವುಗಳು ದೊಡ್ಡ ಪ್ರಮಾಣದಲ್ಲಿ ಉದ್ಯೋಗವನ್ನು ಸೃಷ್ಟಿಸಿವೆ. ಇವರಿಗೆ ಯಾವುದೇ ರೀತಿಯ ಕಾರ್ಮಿಕ ಕಾಯ್ದೆಗಳು ಅನ್ವಯಿಸುವುದಿಲ್ಲ ಮತ್ತು ಯಾವುದೇ ಒಂದೇ ಉದ್ಯೋಗದಲ್ಲಿ ಇವರು ಕಂಡು ಬರುವುದು. ಸಮಯ ಮತ್ತು ಸಂದರ್ಭಕ್ಕೆ ತಕ್ಕ ಹಾಗೆ ತಮ್ಮ ಉದ್ಯೋಗವನ್ನು ಬದಲಾಯಿಸುವ ಅನಿವಾರ್ಯತೆ ಇದೆ. ಇವರಿಗೆ ಯಾವುದೇ ರೀತಿಯ ಭದ್ರತೆಯನ್ನು ಒದಗಿಸಲು ಸರಕಾರದಿಂದ ಸಾಧ್ಯವಾಗುತ್ತಿಲ್ಲ. ಹಾಗೆಯೇ ಉದ್ಯೋಗಕ್ಕಾಗಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ವಲಸೆ ಹೋಗಿ ಅಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಾರೆ, ಇಲ್ಲಿ ಮಹಿಳಾ ಕಾರ್ಮಿಕರಂತು ಲೆಕ್ಕಕ್ಕೆ ಇಲ್ಲದಂತ ಪರಿಸ್ಥಿತಿ ನಿರ್ಮಾಣವಾಗಿದೆ.[೩೧]

'ಯೋಜನಾ' ಅಭಿವೃದ್ಧಿ ಮಾಸ ಪತ್ರಿಕೆ ಫೆಬ್ರುವರಿ-೨೦೧೬ ಪುಟ ಸಂ: ೩-೧೦ ರಲ್ಲಿ ಟಿ. ಸುಂದರರಾಮನ್‌ರವರ 'ಆರೋಗ್ಯ ಕ್ಷೇತ್ರದ ಸವಾಲು; ಮುನ್ನೋಟ' ಎಂಬ ಲೇಖನದಲ್ಲಿ ದೇಶದ ಆರ್ಥಿಕ ಸ್ಥಿತಿಯನ್ನು ಪ್ರತಿನಿಧಿಸುವ ತಲಾ ಆದಾಯ ಆಧರಿತ ಜಿಡಿಪಿ ಮತ್ತು ಮನುಷ್ಯನ ಜೀವತಾವಧಿಯ ನಡುವಿನ ಸಂಬಂಧ ಒಂದಕ್ಕೊಂದು ಪೂರಕವಾಗಿದೆ. ಆರೋಗ್ಯ ಮತ್ತು ಅಭಿವೃದ್ಧಿ ನಡುವಿನ ಸಂಬಂಧ ಅತ್ಯಂತ ಕುತೂಹಲಕರವಾದದು. ೧೯೭೫ರಲ್ಲಿ ಸ್ಯಾಮುವೆಲ್ ಪ್ರಿಸ್ಟನ್ ಈ ಕುತೂಹಲಕರ ಅಂಶವನ್ನು ಪೀಟರ್ ಕರ್ವ್ (ತಿರುವು) ಮೂಲಕ ತೋರಿಸಿದರು. ಜೀವಿತಾವಧಿ ಅಳೆಯುವಂತೆ ಆರೋಗ್ಯವನ್ನು ಹಾಗೂ ತಲಾವಾರು ಜಿಡಿಪಿಯಲ್ಲಿ ಅಳೆಯುವಂತೆ ದೇಶದ ಸಂಪತ್ತನ್ನು ಸಂಬಂಧವಿಟ್ಟು ಹೋಲಿಸಿದಾಗ ತಲಾವಾರು ಜಿಡಿಪಿಯಲ್ಲಿ ಸಾಮಾನ್ಯ ಏರಿಕೆ ಕಂಡು ಬಂದಾಗಲೂ ಜೀವಿತಾವಧಿಯಲ್ಲಿ ತೀವ್ರ ಹೆಚ್ಚಳ ಕಂಡಿತು. ಆದರೆ ನಂತರ ದಿಢೀರಾಗಿ ಈ ತಿರುವು ಸಪಾಟಾಗುತ್ತದೆ. ನಂತರ ಅಲ್ಪ ಜೀವಿತಾವಧಿ ಏರಿಕೆಗೂ ಅಪಾರ ಪ್ರಮಾಣದ ಸಾರ್ವಜನಿಕ ಹಣ ವೆಚ್ಚ ಅಗತ್ಯವೆಂಬುದು ವ್ಯಕ್ತವಾಯಿತು. (ಡೀಟನ್ ೨೦೧೩) ಪ್ರಿಸ್ಟನ್ ತಿರುವು ಬಾಗಿದ್ದರೂ ಜಿಡಿಪಿಯ ತಲಾವಾರು ಆದಾಯ, ಆರೋಗ್ಯ ಮತ್ತು ಅಭಿವೃದ್ಧಿ ನಡುವೆ ಪರಸ್ಪರ ಅಗತ್ಯ ಕ್ರಮಾವಳಿಯ ಸಂಬಂಧ ಉಳಿದುಕೊಳ್ಳುತ್ತದೆ ಎಂಬುದನ್ನು ಈ ವರ್ಷದ ನೊಬೆಲ್ ಪುರಸ್ಕೃತ ಆರ್ಥಿಕ ತಜ್ಞ ಆಂಗಸ್ ಡೀಟನ್ ತಮ್ಮ 'ದಿ ಗ್ರೇಟ್ ಎಸ್ಕೇಪ್' ಪುಸ್ತಕದಲ್ಲಿ ವಿವರಿಸಿದ್ದಾರೆ. ಈ ಸಂಬಂಧ ದ್ವಿಮುಖವಾದುದು. ಇದು ಆರ್ಥಿಕ ಬೆಳವಣಿಗೆ, ಉತ್ತಮ ಆರೋಗ್ಯಕ್ಕೆ ಸಂಬಂಧಿಸಿದ್ದಷ್ಟೇ ಅಲ್ಲ, ಸೋಂಕು ಶಾಸ್ತ್ರದ ಪರಿವರ್ತನೆಯ ಅಂಶವನ್ನೂ ಪ್ರತಿನಿಧಿಸುತ್ತದೆ. ಸಾವು ಮತ್ತು ಸಾವಿಗೆ ಕಾರಣವಾದ ಮಕ್ಕಳ ಸಾಮಾನ್ಯ ಕಾಯಿಲೆ, ಅವುಗಳ ನಿವಾರಣೆಗೆ ಕೈಗೊಂಡ ಮುಂಜಾಗೃತಾ ಚಿಕಿತ್ಸಾ ಪದ್ಧತಿಯಿಂದಾಗಿ ಇಳಿಕೆಯಾಗಿದೆ. ಈ ಹಿಂದಿದ್ದ ಸಂತಾನೋತ್ಪತ್ತಿ, ಮಕ್ಕಳ ಆರೋಗ್ಯ ಮತ್ತು ಸೋಂಕುಕಾಯಿಲೆಗಳ ಪ್ರಮಾಣ ಕಡಿಮೆ ಆಗಿದೆ. ಆದರೆ ಹೊಸ ಸಮಸ್ಯೆಗಳು ಅದರಲ್ಲಿ ಸೇರಿಕೊಂಡಿವೆ.

ಆರೋಗ್ಯ ಕ್ಷೇತ್ರದ ಸುಧಾರಣೆಗೆ ಸಂಬಂಧಿಸಿದಂತೆ ಸಾರ್ವಜನಿಕ ಬಂಡವಾಳ ಹೂಡಿಕೆ ಏರಿಕೆ ಆಗುತ್ತಿಲ್ಲ. ಖಾಸಗಿ ಬಂಡವಾಳ ಹೂಡಿಕೆಯ ನಿರೀಕ್ಷೆ ಇದೆ. ಆದರೆ ಇದನ್ನೆಲ್ಲ ದಾಟಿ ಆರೋಗ್ಯ ಕ್ಷೇತ್ರ ಉತ್ತಮ ಅಭಿವೃದ್ಧಿ ಕಾಣುತ್ತಿದೆ ಎಂಬ ಭರವಸೆ ಮೂಡಿದೆ. ಆರೋಗ್ಯ ವಲಯದ ಸಾರ್ವಜನಿಕ ಬಂಡವಾಳ ಹೂಡಿಕೆಯಲ್ಲಿ ಎರಡು ಆಯ್ಕೆಗಳಿಗೆ ಅವಕಾಶವಿದೆ. ಮೊದಲನೇಯದು ಸಾರ್ವಜನಿಕ ಆರೋಗ್ಯ ಪದ್ಧತಿ ಬಲಗೊಳಿಸುವುದು, ಎರಡನೇಯದು ಆರೋಗ್ಯ ಸೇವೆಗೆ ಖಾಸಗಿ ವಲಯವನ್ನು ಅವಲಂಬಿಸುವುದು ಅಥವಾ ಖಾಸಗಿ ವಲಯದ ಜೊತೆಗೆ ಒಡಂಬಡಿಕೆಯ ವ್ಯವಹಾರ ನಡೆಸುವುದು, ಒಂದು ವೇಳೆ ಎರಡನೇಯದನ್ನೇ ಆಯ್ಕೆ ಮಾಡಿಕೊಂಡರೆ ಪ್ರತಿ ವ್ಯಕ್ತಿಯ ಪ್ರಸ್ತುತ ತಲಾ ಆದಾಯದ ಜಿಡಿಪಿ ಮೇಲೆ ಶೇ. ೨.೫ ರಷ್ಟು ಹೆಚ್ಚುವರಿ ವೆಚ್ಚವನ್ನು ಹೇರಿ ಕೆಲವು ಕಠಿಣ ನಿಯಂತ್ರಣ ಕ್ರಮಗಳನ್ನು ಜಾರಿಗೊಳಿಸುವುದು ಅನಿವಾರ್ಯ. ಇಲ್ಲಿ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ, ಸಾಂಕ್ರಾಮಿಕ ರೋಗಗಳ ನಿಯಂತ್ರಣ, ಅಸಾಂಕ್ರಾಮಿಕ

ರೋಗಗಳ ಸವಾಲು, ತಿಳುವಳಿಕೆಯ ಸವಾಲು, ರಾಷ್ಟ್ರೀಯ ಆರೋಗ್ಯ ಮಿಷನ್, ಆರೋಗ್ಯ ಸೇವೆಗಳ ಸಂಕಷ್ಟ, ಸರ್ಕಾರದ ವಿಮಾ ಕಾರ್ಯಕ್ರಮಗಳು ಖಾಸಗಿ ಸಹಭಾಗಿತ್ವದಲ್ಲಿ ಹೂಡಿಕೆ ಹೀಗೆ ಆರೋಗ್ಯ ಕ್ಷೇತ್ರ ಅನೇಕ ಸವಾಲುಗಳನ್ನು ಎದುರಿಸುವುದನ್ನು ನಾವು ಕಾಣುತ್ತೇವೆ.[೨]

ಯೋಜನಾ ಅಭಿವೃದ್ಧಿ ಮಾಸಪತ್ರಿಕೆ ಜನೇವರಿ ೨೦೧೬ ಪುಟ ಸಂಖ್ಯೆ : ೮-೯ ರಲ್ಲಿ ಜೆ.ಬಿ.ಜಿ. ತಿಲಕ್‌ರವರು 'ಶಿಕ್ಷಣದಲ್ಲಿ ಧನ ಹೂಡಿಕೆ" ಎಂದ ಲೇಖನದಲ್ಲಿ ಸ್ವತಂತ್ರ ಭಾರತದಲ್ಲಿ ಅಭಿವೃದ್ಧಿ ವರ್ಷಗಳ ನಂತರ ಮೊದಲ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ೧೯೬೮ ರಲ್ಲಿ ಸೂತ್ರರೂಪಕ್ಕೆ ತರಲಾಯಿತು. ಇದಾಗಿ ಸರಿಯಾಗಿ ೧೮ ವರ್ಷಕ್ಕೆ, ಎರಡನೇಯ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ೧೯೮೬ರಲ್ಲಿ ರೂಪಿಸಲಾಯಿತು. ಇದನ್ನು ೧೯೯೨ರಲ್ಲಿ ಅಲ್ಪಮಟ್ಟಿಗೆ ಪುನರ್ ರೂಪಿಸಲಾಯಿತು. ದೇಶದ ಎಲ್ಲಾ ವಲಯಗಳಲ್ಲಿ ಆಗುತ್ತಿರುವ ಅಭಿವೃದ್ಧಿ, ಅದರಲ್ಲೂ ಶಿಕ್ಷಣ ಕ್ಷೇತ್ರದಲ್ಲಾಗುತ್ತಿರುವ ಬದಲಾವಣೆಗಳಿಂದ, ಕಳೆದ ಕೆಲವು ವರುಷಗಳಿಂದ, ಹೊಸದೊಂದು ರಾಷ್ಟ್ರೀಯ ಶಿಕ್ಷಣ ನೀತಿಯ ಅಗತ್ಯ ಹಿಂದೆಂದಿಗಿಂತಲೂ ಹೆಚ್ಚಿದೆಯೆಂದು ಬಾಸವಾಗುತ್ತಿದೆ. ಕಳೆದೆರಡು ದಶಕಗಳಲ್ಲಿ ಸೂಕ್ತ ಶಿಕ್ಷಣ ನೀತಿಯ ಕೊರತೆ ಕಾರಣ ಶಿಕ್ಷಣ ಕ್ಷೇತ್ರದಲ್ಲಿನ ಬದಲಾವಣೆಗಳನ್ನು ಕಾರ್ಯಕಾರಿ ಆದೇಶಗಳು ಅಥವಾ ಸುಸಂಘಟಿತವಲ್ಲದ ಉಪಕ್ರಮಗಳ ಮೂಲಕ ಜಾರಿಗೆ ತರಲಾಗಿದೆ. ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ತಕ್ಷಣ ಹೊಸದೊಂದು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರೂಪಿಸುವ ಸೂಚನೆ ನೀಡಿದೆ. ಒಟ್ಟಾರೆಯಾಗಿ ಈ ಹಿನ್ನಲೆಯಲ್ಲಿ ಶಿಕ್ಷಣಕ್ಕೆ ಧನಸಹಾಯ ಒದಗಿಸುವ ಕುರಿತಾದ ಕೆಲವು ನೀತಿ ನಿರ್ಣಯಗಳನ್ನು ಎಚ್ಚರಿಕೆಯಿಂದ ಪರೀಕ್ಷೆಗೊಳಪಡಿಸಬೇಕಿದೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಹಣಕಾಸು ಪ್ರಮುಖ ಪಾತ್ರ ವಹಿಸುತ್ತದೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಅಷ್ಟೇ ಅಲ್ಲದೇ ಒಂದು ಸರ್ಕಾರ ಈ ಕ್ಷೇತ್ರಕ್ಕೆ ಎಷ್ಟು ಆದ್ಯತೆ ನೀಡುತ್ತದೆ ಎಂಬುದನ್ನೂ ಅದು ಸೂಚಿಸುತ್ತದೆ. ಶಿಕ್ಷಣವೆಂಬುದು ಪ್ರಮುಖವಾದ ಸಾರ್ವಜನಿಕ ಒಳಿತು ಮತ್ತು ಜವಾಬ್ದಾರಿ ಎಂಬುದನ್ನು ವಿಶಾಲಾರ್ಥದಲ್ಲಿ ಒಪ್ಪಿಕೊಳ್ಳಲಾಗಿದೆ.[೩೩]

ಯೋಜನಾ ಅಭಿವೃದ್ಧಿ ಮಾಸಪತ್ರಿಕೆ ಜನೇವರಿ ೨೦೧೬ ಪುಟ ಸಂಖ್ಯೆ : ೪೩-೪೭ ರಲ್ಲಿ ವಾಸುದೇವ ಶರ್ಮಾ ಎನ್.ವಿ.ರವರು 'ಶಾಲಾ ಶುಲ್ಕಕ್ಕೊಂದು ಅಂಕುಶ' ಎಂಬ ಲೇಖನದಲ್ಲಿ ಶಾಲೆಗೆ ಹೋಗುವ ಮಕ್ಕಳಲ್ಲಿ ಸುಮಾರು ಶೇ. ೭೦ ರಷ್ಟು ಮಕ್ಕಳು ಸರಕಾರಿ ಶಾಲೆಗಳಲ್ಲಿದ್ದಾರೆಂದು, ಉಳಿದ ಶೇಕಡಾ ೩೦ ರಷ್ಟು ಸರಕಾರೇತರ ಶಾಲೆಗಳಲ್ಲಿ ಕಲಿಯುತ್ತಿದ್ದಾರೆಂದು ಅಂಕಿ-ಅಂಶಗಳು ಹೇಳುತ್ತವೆ. ನಗರಗಳಲ್ಲಿನ ಮಕ್ಕಳಲ್ಲಿ ಸರಕಾರೇತರ ಶಾಲೆಗಳಲ್ಲಿ ಶೇ. ೫೦ಕ್ಕಿಂತಲೂ ತುಸು ಹೆಚ್ಚಿನ ಮಕ್ಕಳು ಹೋಗುತ್ತಾರೆ. ಇಂತಹ ಸರಕಾರೇತರ ಶಾಲೆಗಳಲ್ಲಿ ಪ್ರವೇಶ ಪಡೆಯಲು ಎಷ್ಟಾದರೂ ಶುಲ್ಕ ಕಟ್ಟಲು ಕೆಲವರು ಸಿದ್ದರಿದ್ದಾರೆ. ಇದನ್ನೇ ಆಧಾರವಾಗಿಟ್ಟುಕೊಂಡು ವಿವಿಧ ಹೆಸರುಗಳಲ್ಲಿ (ಮೂಲತಃ ಸ್ವಯಂಸೇವೆ ಮಾಡಲೆಂದೇ ಸಂಘಟನೆಗಳನ್ನು ಕಟ್ಟಿ ನಡೆಸುವ ಜನಗಳ ಗುಂಪು, ಧಾರ್ಮಿಕ ಸಂಘಟನೆಗಳು, ಪಬ್ಲಿಕ್ ಶಾಲೆ, ಅಂತರಾಷ್ಟ್ರೀಯ ಶಾಲೆ ಹೀಗೆ ನೂರೆಂಟು) ಶಾಲೆಗಳು ಹೊಸ ಹೊಸದಾಗಿ ಆರಂಭವಾಗುತ್ತಲೇ ಇವೆ. ಶಾಲೆಗೆ ಮಕ್ಕಳನ್ನು ಸೇರಿಸಿಕೊಳ್ಳಲು ನಿಯಂತ್ರಣವೇ

ಇಲ್ಲವೇನೋ ಎಂಬಂತೆ 'ವಿವಿಧ ಹೆಸರುಗಳಲ್ಲಿ ಶುಲ್ಕ ವಿಧಿಸುತ್ತಾರೆ ಮತ್ತು ಕೆಲವೊಮ್ಮೆ ವರ್ಷದಲ್ಲಿ ಹಲವು ಬಾರಿ ಶುಲ್ಕ ಹೆಚ್ಚಿಸುತ್ತಾ ಹೋಗುತ್ತಾರೆ. ಹೀಗೆ ಶುಲ್ಕ ಹೆಚ್ಚಿಸುವ ಶಾಲೆಗಳು ಮಕ್ಕಳ ಹಕ್ಕುಗಳನ್ನು ಉಲ್ಲಂಘಿಸುತ್ತಿದ್ದಾರೆಂದು ಹಲವು ದೂರುಗಳು ಸರಕಾರ ಶಿಕ್ಷಣ ಇಲಾಖೆಗೆ, ರಾಜ್ಯ ಮತ್ತು ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಗಳಿಗೆ ಅಷ್ಟೇ ಅಲ್ಲದೇ ನ್ಯಾಯಾಲಯಗಳಿಗೂ ತಲುಪಿವೆ. ಇವತ್ತು ಶಾಲೆಗಳು ವ್ಯವಹಾರ ಕೇಂದ್ರಗಳಾಗಿವೆ. ತಮ್ಮ ಇಚ್ಛೆಯಂತೆ ಶುಲ್ಕವನ್ನು ಭರಿಸುತ್ತಿವೆ. ಇವು ಸಮಾಜವನ್ನು ತಪ್ಪು ದಾರಿಗೆ ಒಯ್ಯುತ್ತಿವೆ ಎನ್ನುವುದನ್ನು ತಿಳಿಸಿದ್ದಾರೆ.[೩೪] ಈ ಲೇಖನದಿಂದ ನಾವು ನಮ್ಮ ಕ್ಷೇತ್ರದಲ್ಲಿ ಎಷ್ಟು ಶಾಲಾ ಕಾಲೇಜುಗಳಿವೆ? ಸರಕಾರಿ ಮತ್ತು ಖಾಸಗಿ ಶಾಲಾ ಕಾಲೇಜುಗಳೆಷ್ಟು? ಅಲ್ಲಿಗೆ ಹೋಗುವ ಮಕ್ಕಳ ಪ್ರಮಾಣವೆಷ್ಟಿದೆ? ಮತ್ತು ಅವು ವಿಧಿಸುವ ಶುಲ್ಕದ ಪ್ರಮಾಣವನ್ನು ತಿಳಿದುಕೊಳ್ಳಬಹುದು.

ಯೋಜನಾ ಅಭಿವೃದ್ಧಿ ಮಾಸಪತ್ರಿಕೆ ಸೆಪ್ಟೆಂಬರ ೨೦೧೪ ಪುಟ ಸಂಖ್ಯೆ : ೫–೯ ಡಾ. ಆರ್.ಬಿ. ಭಗತ್ (ಕನ್ನಡಕ್ಕೆ : ಸ್ಮಿತಾ ಎನ್.ಡಿ.) ಯವರು 'ನಗರ ನೀತಿ ಮತ್ತು ಕಾರ್ಯಕ್ರಮ: ಅವಲೋಕನ' ಎಂಬ ಲೇಖನದಲ್ಲಿ ಉದಾರೀಕರಣದ ನಂತರ ಭಾರತದ ಆರ್ಥಿಕ ಬೆಳವಣಿಗೆಯಲ್ಲಿ ಪಟ್ಟಣ ಮತ್ತು ನಗರಗಳ ಪ್ರಾಮುಖ್ಯತೆ ಹೆಚ್ಚಾಗುತ್ತಿದೆ. ನಿದರ್ಶನಕ್ಕೆ ದೇಶದ ಒಟ್ಟು ಆಂತರಿಕ ಉತ್ಪನ್ನದಲ್ಲಿ (ಜಿಡಿಪಿ) ನಗರ ಪ್ರದೇಶಗಳ ಕೊಡುಗೆ ೧೯೫೦–೫೧ ರಲ್ಲಿ ಶೇ. ೨೯ ರಷ್ಟು ಇದ್ದುದ್ದು ೧೯೮೦–೮೧ರ ವೇಳೆಗೆ ಶೇ. ೪೭ ರಷ್ಟು ಏರಿತ್ತು. ಇದು ೨೦೦೭ ರಲ್ಲಿ ಶೇ. ೬೨–೬೩ ರಷ್ಟಿದ್ದು, ಬರುವ ೨೦೨೧ ರ ವೇಳಗೆ ಶೇ. ೭೫ ರಷ್ಟು ಏರಿಕೆಯಾಗುವ ನಿರೀಕ್ಷೆ ಇದೆ. (ಯೋಜನಾ ಆಯೋಗದ ವರದಿ–೨೦೦೮: ೩೯೮). ಜಿಡಿಪಿಯಲ್ಲಿ ಶೇ. ೯ ರಿಂದ ೧೦ ರಷ್ಟು ಏರಿಕೆಯಾಗುವುದು ನಗರ ಪ್ರದೇಶಗಳನ್ನು ಹೆಚ್ಚು ಸಹನೀಯವಾಗಿರಿಸಿ ಅವುಗಳ ಬೆಳವಣಿಗೆಯಲ್ಲಿ ತೊಡಗಿಸಿಕೊಂಡಿರುವುದು ಕೂಡ ಕಾರಣ ಎಂದಿದೆ ಯೋಜನಾ ಆಯೋಗದ ವರದಿ. ನಗರೀಕರಣವನ್ನು ಪ್ರಭಾವಿಸುವ ಈಗಿನ ರಾಜಕಾರಣ ನೀತಿ ಅದನ್ನು ಆಧರಿಸಿದ್ದ ಇಂದಿನ ಜಾತಿ ಮತ್ತು ಧಾರ್ಮಿಕ ಪರಿಗಣನೆಯ ಮಾದರಿಯನ್ನು ದುರ್ಬಲಗೊಳಿಸಿರುವುದು ಬಹು ಮುಖ್ಯ ಅಂಶ. ಈಗಿನ ನೋಟ, ಸ್ಥಳೀಯ ಸಮಸ್ಯೆಗಳನ್ನು ಅಭಿವೃದ್ಧಿಯ ದೃಷ್ಟಿಯಿಂದ ಬಗೆ ಹರಿಸುವುದಕ್ಕೆ ಆದ್ಯತೆ ನೀಡಿರುವುದು; ಜನ ಸಬಲೀಕರಣ ಹೊಸ ಮಾದರಿ ಜನರ ಹಕ್ಕನ್ನು ಕಾನೂನು ರೀತಿಯಲ್ಲಿ ನೀಡುವುದಾಗಿದೆ. ಆದ್ದರಿಂದ ಆಡಳಿತಕ್ಕೆ ಸಂಬಂಧಿಸಿದ ನೀತಿಯ ಬದಲಾವಣೆ ಮತ್ತು ಕಾರ್ಯತಂತ್ರಗಳು ಸ್ವರೂಪದಲ್ಲಿ ನಗರ ಕೇಂದ್ರಿತವಾಗಿವೆ. ಆರ್ಥಿಕ ಮತ್ತು ಸಾಮಾಜಿಕ ಸಂಪನ್ಮೂಲಗಳಲ್ಲಿ ಪಾಲನ್ನು ಕೇಳುವಷ್ಟು ಜಾಗೃತಿ ಹಳ್ಳಿಗಾಡಿನ ಜನತೆಯಲ್ಲಿಯೂ ಮೂಡುತ್ತಿರುವುದರಿಂದ ಹಳ್ಳಿ ಮತ್ತು ನಗರ ನಡುವಣ ಕಂದಕವೂ ಇನ್ನಷ್ಟು ಹೆಚ್ಚುತ್ತಿದೆ. ಭಾರತದ ಬಹಳಷ್ಟು ನಗರಗಳು ಸ್ವಂತವಾಗಿಯೇ ಅಭಿವೃದ್ಧಿ ಹೊಂದಿರುವುದು ಗಮನಾರ್ಹ ಅಂಶ. ದೊಡ್ಡ ನಗರಗಳ ಬೆಳವಣಿಗೆಯಲ್ಲಿ ಸರಕಾರ ನೀತಿ ಮತ್ತು ಕಾರ್ಯಕ್ರಮಗಳು ಕೆಲವೊಮ್ಮೆ ಪ್ರಭಾವ ಬೀರಿದ್ದರೂ ಸಣ್ಣ ಪಟ್ಟಣ ಮತ್ತು ನಗರಗಳ ಮೇಲೆ ಸರಕಾರ ನೀತಿ ಮತ್ತು ಕಾರ್ಯಕ್ರಮಗಳು ಪರಿಣಾಮ ಬೀರಿಲ್ಲ ಎಂಬುದನ್ನು

ಷಾ ವರದಿ. (೧೯೯೬, ೨೨೪) ತಿಳಿಸಿದೆ. ಈ ಕುರಿತಾಗಿ ಷಾ ವರದಿ ನಗರ ನೀತಿ, ಯೋಜನೆ ಮತ್ತು ಕಾರ್ಯಕ್ರಮಗಳ ಕುರಿತ ಮಹತ್ವದ ಮುನ್ನೋಟ ಹರಿಸಿದೆ. ಹಾಗೂ ಅನೇಕ ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕೆ ಸಂಬಂಧಿಸಿದಂತೆ ಕಾರ್ಯಗಳು ನಡೆದಿವೆ.[೩೫] ನಮ್ಮ ಕ್ಷೇತ್ರದಲ್ಲಿ ರಾಜಕಾರಣ ನಮ್ಮ ನಗರ ನೀತಿ ಮತ್ತು ಕಾರ್ಯಕ್ರಮದ ಮೇಲೆ ಯಾವ ರೀತಿ ಪ್ರಭಾವಿಸುತ್ತಿವೆ ಎನ್ನುವದನ್ನು ನೋಡಬಹುದು.

ಯೋಜನಾ ಅಭಿವೃದ್ಧಿ ಮಾಸಪತ್ರಿಕೆ ಸೆಪ್ಟೆಂಬರ್ ೨೦೧೪ ಪುಟ ಸಂಖ್ಯೆ : ೧೫–೧೮ ರಲ್ಲಿ ಪ್ರೋ. ನರೇಂದ್ರ ಫನಿ (ಕನ್ನಡಕ್ಕೆ ಎಮ್. ಶಶಿಧರ ಡೋಂಗ್ರೆ)ಯವರ 'ನಗರದೊಳಗಣ ಹಳ್ಳಿಗಳ ಸಮಸ್ಯೆ' ಎಂಬ ಲೇಖನದಲ್ಲಿ ಭಾರತದಲ್ಲಿ ಯೋಜನಾ ನೀತಿ ಕುರಿತ ಚರ್ಚೆಗಳು ನಗರ ಮತ್ತು ಹಳ್ಳಿಗಳ ಮಧ್ಯ ನಿಖರವಾದ ಗಡಿಗಳನ್ನು ರೂಪಿಸಿಕೊಂಡಿವೆ. ೭೦ರ ದಶಕದಲ್ಲಿ ಭಾರತದ ನೀತಿ ಸಂಹಿತೆಯು ನಗರ ಕೇಂದ್ರಿತವಾಗಿದೆಯೆಂದು (ಲಿಪ್ಟನ್ ೧೯೭೭) ಆರೋಪಿಸಲಾಗಿದ್ದರೆ, ಇತ್ತೀಚಿಗೆ ಅಂದರೆ ಇಪ್ಪತ್ತೊಂದನೇ ಶತಮಾನದ ಎರಡನೇ ದಶಕದಲ್ಲಿ (ಶಿವರಾಮಕೃಷ್ಣನ್, ೨೦೧೧) ಯೋಜನಾ ನೀತಿಯು ಹಳ್ಳಿಗಳ ಬಗ್ಗೆ ಹೆಚ್ಚು ಒಲವು ತೋರಿಸುತ್ತಿದೆಯೆಂದು ಆರೋಪಿಸಲಾಗಿದೆ. ಜಾಗತೀಕರಣ ಸಂದರ್ಭದಲ್ಲಿ, ಗಡಿಗಳನ್ನು ಕುರಿತಾದ ನಡೆದಿರುವ ಇತ್ತೀಚಿನ ಚರ್ಚೆಗಳಲ್ಲಿ, ಈ ನಿಖರ ಗಡಿ ಗುರುತಿಸುವಿಕೆ ಸರಿಯಾದ ಮಾರ್ಗವಲ್ಲವೆನ್ನುವ ಚಿಂತನೆ ನಡೆದಿದೆ. ಸಾಸ್ಕಿಯಾ ಸಾಸ್ಸೆನ್ ಅವರು, ಸ್ಥೂಲವಾಗಿ ಗಡಿಗಳನ್ನು ಎರಡು ಆಕಾರಗಳಲ್ಲಿ ಗುರುತಿಸಬಹುದೆಂದು ಸೂಚಿಸಿದ್ದಾರೆ. ಮೊದಲನೆಯ ಗಡಿಯ ಬಗ್ಗೆ ಒಂದು ವಸ್ತುವಿನಲ್ಲೊ, ವ್ಯಕ್ತಿಯಲ್ಲೊ ಅಥವಾ ಉಪಕರಣದಲ್ಲೊ ಅಡಗಿ ಕೊಂಡಿರುತ್ತದೆ. ಜಂಗಮ ಕಾರ್ಯಭಾರಿಯಾಗಿ ಗಡಿಯ ನಿರ್ಣಾಯಕ ಚಹರೆಗಳನ್ನು ತನ್ನೊಳಗೆ ಒಳಗೊಂಡಿರುತ್ತದೆ. ಎರಡನೆಯ ಗಡಿಯ ಬಗ್ಗೆ ಬೇರೆ ಬೇರೆ ನೆಲಗಳಲ್ಲಿರುವಂತಹುದು. ಅದು ಸಂಸ್ಥೆಯ ಒಳಗಿರಬಹುದು ಅಥವಾ ಅಂತರಾಷ್ಟ್ರೀಯ ಗಡಿರೇಖೆಗಳಲ್ಲಿರಬಹುದು (ಸಾಸ್ಸೆನ್, ೨೦೦೬, ಪುಟ–೪೧೬). ಈ ಎರಡು ತರಹದ ಗಡಿಗಳು ನಗರಗಳಲ್ಲಿಯೂ, ಹಳ್ಳಿಗಳಲ್ಲಿಯೂ ಇವೆ. ಇದನ್ನು ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ ಗಮನಿಸಬಹುದು. ತಾವಿದ್ದ ಹಳ್ಳಿಗಳ ಜೊತೆ ಬಲವಾದ ಸಂಬಂಧ ಇಟ್ಟುಕೊಂಡು, ನಗರಗಳಿಗೆ ಕೆಲಸ ಅರಸಿ ಬರುವ ಹಲವರು, ನಗರದಲ್ಲಿ ವಾಸಿಸುತ್ತಿದ್ದರೂ, ತಮ್ಮ ಹಳ್ಳಿಯ ಮೌಲ್ಯ ಇರಿಸಿಕೊಂಡಿದ್ದಾರೆ.[೩೬]

ಯೋಜನಾ ಅಭಿವೃದ್ಧಿ ಮಾಸಪತ್ರಿಕೆ ಸೆಪ್ಟೆಂಬರ್ ೨೦೧೪ ಪುಟ ಸಂಖ್ಯೆ : ೩೬–೩೮ ಮತ್ತು ೪೬ ರಲ್ಲಿ ಪ್ರೊ. ಎನ್. ನಾರಾಯಣ ಶಾಸ್ತ್ರಿಯವರು 'ನಗರಗಳ ಮೂಲಭೂತ ಸೌಕರ್ಯ' ಎಂಬ ಲೇಖನದಲ್ಲಿ ಜನಗಣತಿ ೨೦೦೧ರ ಪ್ರಕಾರ ೨೮೫.೩೫ ದಶಲಕ್ಷ ಜನರು ನಗರ ಪ್ರದೇಶದಲ್ಲಿ ವಾಸವಾಗಿದ್ದರು. ಇದು ದೇಶದ ಒಟ್ಟು ಜನಸಂಖ್ಯೆಯ ಶೇ. ೨೭.೮ ರಷ್ಟನ್ನು ಒಳಗೊಂಡಿತ್ತು. ೨೦೧೧ರ ಜನಗಣತಿಯನ್ವಯ, ಸುಮಾರು ೩೮೧ ದಶಲಕ್ಷ ಜನರು ನಗರ ಪ್ರದೇಶಗಳಲ್ಲಿ ವಾಸವಿದ್ದು, ಭಾರತದ ಒಟ್ಟು ಜನಸಂಖ್ಯೆಯ ಶೇ. ೩೧.೧೬ ರಷ್ಟಾಗಿದೆ. ಸ್ವಾತಂತ್ರ್ಯಾ ನಂತರದ ಕಾಲದಲ್ಲಿ, ಭಾರತದ ಜನಸಂಖ್ಯೆ ೩ ಪಟ್ಟು ಬೆಳೆದಿದ್ದರೆ, ನಗರದ ಜನಸಂಖ್ಯೆ ೫ ಪಟ್ಟು

ಬೆಳೆದಿದೆ. ನಗರದ ಜನಸಂಖ್ಯಾ ಹೆಚ್ಚಳವು ಅಲ್ಲಿನ ಬಡವರ ಸಂಖ್ಯೆಯ ಏರಿಕೆಗೂ ಕಾರಣವಾಗಿದೆ. ೨೦೦೧ರ ಅಂದಾಜಿನಂತೆ, ಕೊಳಗೇರಿ ಜನಸಂಖ್ಯೆಯು ಸುಮಾರು ೬೧.೮ ದಶಲಕ್ಷವಾಗಿದೆ. ಕೊಳಗೇರಿ ನಿವಾಸಿಗಳ ಸಂಖ್ಯೆಯ ಸತತ ಹೆಚ್ಚಳವು ನಗರದ ಮೂಲಭೂತ ಸೇವೆಯು ಮತ್ತು ಮೂಲಭೂತ ಸೌಕರ್ಯಗಳ ಮೇಲಿನ ತೀವ್ರ ಒತ್ತಡಕ್ಕೆ ಕಾರಣವಾಗುತ್ತದೆ. ನಗರದ ಕ್ಷಿಪ್ರ ಬೆಳವಣಿಗೆಯ ಪರಿಣಾಮವಾಗಿ ಉದ್ಭವಿಸುವ ತೀವ್ರ / ಬೃಹತ್ ಸಮಸ್ಯೆಗಳನ್ನು ನಿಭಾಯಿಸುವ ಸಲುವಾಗಿ, ಆಯ್ದ ನಗರದಲ್ಲಿ ಅಭಿಯಾನದ ಮಾದರಿಯಲ್ಲಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸುಸಂಬದ್ಧ ನಗರೀಕರಣ ನೀತಿ / ಕಾರ್ಯತಂತ್ರಗಳನ್ನು ರೂಪಿಸುವುದು ಕಡ್ಡಾಯವಾಗಿದೆ. ನಗರಗಳ ಅಭಿವೃದ್ಧಿ ಕುರಿತಾದ ಜವಾಹರಲಾಲ ನೆಹರು ರಾಷ್ಟ್ರೀಯ ನವೀಕರಣ ಯೋಜನೆ ಜೆಎನ್‌ನರ್ಮ್ ಬಗ್ಗೆ ಲೇಖನ ಬೆಳಕು ಚೆಲ್ಲಿದೆ. ನಮ್ಮ ಅಭಿಯಾನದ ಯೋಜನೆಯನ್ನು ಸವಿಸ್ತಾರವಾಗಿ ತಿಳಿಸಿದ್ದಾರೆ.[೩೭] ಇದರಿಂದ ನಮ್ಮ ನಗರದ ಮೂಲಭೂತ ಸೌಕರ್ಯಗಳ ಸ್ಥಿತಿ ಯಾವ ರೀತಿಯಲ್ಲಿದೆ. ಅವುಗಳನ್ನು ಒದಗಿಸಲು ಯಾವ ಯಾವ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ ಎನ್ನುವುದನ್ನು ನೋಡುವುದಾಗಿದೆ.

ಯೋಜನಾ ಅಭಿವೃದ್ಧಿ ಮಾಸಪತ್ರಿಕೆ ಸೆಪ್ಟೆಂಬರ್ ೨೦೧೪ ಪುಟ ಸಂಖ್ಯೆ : ೪೩–೪೬ ರಲ್ಲಿ ಮುರಳಿ ಟಿ.ವಿ.ಯವರು 'ನಗರ ಯೋಜನೆ–ಹೊಸಪರಿಕಲ್ಪನೆ ಮತ್ತು ಸವಾಲ್' ಎಂಬ ಲೇಖನದಲ್ಲಿ ಪ್ರಸ್ತುತ ಕಾಲವು ನಗರೀಕರಣದ ಪರ್ವಕಾಲವಾಗಿದ್ದು ಎಂದಿಗಿಂತ ನಗರ: ಪಟ್ಟಣಗಳು ಕ್ಷಿಪ್ರ ಬೆಳವಣಿಗೆಯನ್ನು ಹೊಂದುತ್ತಿವೆ. ಕಳೆದ ಶತಮಾನದಲ್ಲಿ ಸರ್ಕಾರದ ನೀತಿ ರೂಪಕ ವಿಷಯಗಳು ಗ್ರಾಮ ಕೇಂದ್ರಿಕೃತವಾಗಿದ್ದಾಗಿಯೂ ಸಹ ಆರ್ಥಿಕ ಚಟುವಟಿಕೆ ಮತ್ತು ಮಾಹಿತಿ ತಂತ್ರಜ್ಞಾನ ಜೈವಿಕ ತಂತ್ರಜ್ಞಾನ ಕೈಗಾರಿಕೆಗಳ ಬೆಳವಣಿಗೆಯ ಕಾರಣ ಉದ್ಯೋಗ ಸೃಜನೆಯಿಂದಾಗಿ ಅದರ ಅನ್ವೇಷಣೆಯಲ್ಲಿ ಮತ್ತು ಉತ್ತಮ ಜೀವನದ ಕನಸುಗಳನ್ನು ಸಾಕಾರಗೊಳಿಸಿಕೊಳ್ಳಲು ಸಣ್ಣ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶಗಳಿಂದ ಹತ್ತಿರದ ನಗರ ಮತ್ತು ಮಹಾನಗರ ಪ್ರದೇಶಗಳಿಗೆ ಜನರು ನಿರ್ಗಮಿಸುತ್ತಿರುವುದನ್ನು ಕಳೆದ ಎರಡು ದಶಕಗಳಲ್ಲಿ ಕಾಣಬಹುದಾಗಿರುತ್ತದೆ. ಈ ರೀತಿಯಾಗಿ ಸೇರ್ಪಡೆಯಾಗುತ್ತಿರುವ ಜನರಿಂದ ನಗರ ಪ್ರದೇಶಗಳ ಜನಸಂಖ್ಯಾ ವೈವಿಧ್ಯತೆಯಲ್ಲಿ ಬದಲಾವಣೆಯಾಗುತ್ತಿರುವುದು ಮತ್ತು ವಿಭಿನ್ನ ಸಂಸ್ಕೃತಿಯ ಹಿನ್ನಲೆಯ ಜನರನ್ನು ತನ್ನ ಒಡಲಲ್ಲಿ ಸೇರಿಸಿಕೊಳ್ಳುತ್ತಿರುವ ನಗರಗಳು ಹಲವಾರು ಸವಾಲುಗಳನ್ನು ನಗರ ಯೋಜಕರಿಗೆ ಮತ್ತು ಮೂಲಭೂತ ಸೌಲಭ್ಯ ಒದಗಿಸುತ್ತಿರುವ ಸಂಸ್ಥೆಗಳಿಗೆ ತಂದೊಡ್ಡುತ್ತಿದೆ. ನಗರ ಪ್ರದೇಶಗಳಲ್ಲಿ ಏರುತ್ತಿರುವ ಜನಸಂಖ್ಯೆಯೇ ಕಾರಣ ವ್ಯಕ್ತಿ ಕೇಂದ್ರಿತ ಮತ್ತು ಸಮುದಾಯ ಕೇಂದ್ರಿತ ಅವಶ್ಯಕತೆಗಳನ್ನು ಅಂದಾಜಿಸುವಲ್ಲಿಯೂ ಸಾಕಷ್ಟು ತೊಡಕುಂಟಾಗಿದ್ದು ಸವಾಲುಗಳನ್ನು ಮತ್ತಷ್ಟು ಜಟಿಲ ವಾಗುತ್ತಿರುವುದು ಸ್ಪಷ್ಟವಾಗುತ್ತದೆ.

ಭಾರತ ದೇಶದಲ್ಲಿನ ಹಲವು ರಾಜ್ಯದಲ್ಲಿ ಸಾಗುತ್ತಿರುವ ನಗರೀಕರಣ ಪ್ರಕ್ರಿಯೆಯನ್ನು ಮೆಕ್ ಇನ್ಸೀಗ್ಲೋಬಲ್ ಇನ್‌ಸ್ಟಿಟ್ಯೂಟ್‌ರವರು ಅಭ್ಯಸಿಸಿ ವರದಿಯನ್ನು ತಯಾರಿಸಿದ್ದು ಸದರಿ ವರದಿಯನ್ನು ಪರಾಮರ್ಶಿಸಿದಲ್ಲಿ ರಾಜ್ಯವು ನಗರೀಕರಣ ಪ್ರಕ್ರಿಯೆಯಲ್ಲಿ ದೇಶದ ನಾಲ್ಕನೇ ಸ್ಥಾನದಲ್ಲಿದ್ದು ೨೦೧೧ರ ಜನಗಣತಿಯ ಅಧಿಕೃತ ಮಾಹಿತಿ ಪ್ರಕಾರ ನಗರ ನಿವಾಸಿಗಳ ಪ್ರಮಾಣ ಶೇ. ೩೮.೫೭

ರಷ್ಟಿದ್ದು, ೨೦೩೦ರ ವೇಳೆಗೆ ಶೇ. ೫೭ ರಷ್ಟು ಜನಸಂಖ್ಯೆಯು ನಗರ ಪಟ್ಟಣ ಪ್ರದೇಶದ ವಾಸಿಗಳಾಗಿರುತ್ತಾರೆ ಎಂದು ಅಂದಾಜಿಸಲಾಗಿದೆ. ಹೊಸ ಪರಿಕಲ್ಪನೆಗಳಾದ ನವನಗರಗಳ ನಿರ್ಮಾಣ, ಉಪನಗರಗಳು, ಅವಳಿ ನಗರ ಕಾರಿಡಾರ್ ಅಭಿವೃದ್ಧಿ, ಸ್ಮಾರ್ಟ ಸಿಟಿ ಇತ್ಯಾದಿ ಪರಿಕಲ್ಪನೆಗಳು ಹುಟ್ಟಿಕೊಂಡಿವೆ. ಕೆಲವು ನಗರಗಳಲ್ಲಿ ಜಾರಿಯಲ್ಲಿಯೂ ಇವೆ.[೩೮]

ಯೋಜನಾ ಅಭಿವೃದ್ಧಿ ಮಾಸಪತ್ರಿಕೆ ಅಗಸ್ಟ್-೨೦೧೫ ಪುಟ ಸಂಖ್ಯೆ : ೨೬-೨೮ ರಲ್ಲಿ ಸಿ.ಎಸ್.ಸಿ. ಶೇಖರ (ಕನ್ನಡಕ್ಕೆ ಶ್ರೀಮತಿ ಹರಿಪ್ರಸಾದ) ರವರ 'ಪಡಿತರ ಪದ್ದತಿಯ ರಾಜಕೀಯ ಆರ್ಥಿಕತೆ' ಎಂಬ ಲೇಖನದಲ್ಲಿ ಭಾರತದಲ್ಲಿ ಸಾರ್ವಜನಿಕ ಪಡಿತರ ಪದ್ಧತಿಯನ್ನು (ಪಿಡಿಎಸ್) ಆಹಾರ ಪದಾರ್ಥಗಳನ್ನು ಎಲ್ಲರೂ ಕೊಳ್ಳಬಹುದಾದ ಬೆಲೆಗೆ ದೊರೆಯುವಂತೆ ಮಾಡಲು ೧೯೬೫ರಲ್ಲಿ ಆರಂಭಿಸಲಾಯಿತು. ಆಹಾರಧಾನ್ಯಗಳನ್ನು ರಾಜ್ಯ ಸರ್ಕಾರಗಳು ಮಾರುಕಟ್ಟೆಗಿಂತ ಕಡಿಮೆ ಬೆಲೆಯಲ್ಲಿ ನ್ಯಾಯಬೆಲೆ ಅಂಗಡಿಗಳ (ಎಸ್.ಪಿ.ಎಸ್.) ಮೂಲಕ ವಿತರಿಸುತ್ತವೆ. ಧಾನ್ಯಗಳ ಆರ್ಥಿಕ ಬೆಲೆ ಹಾಗೂ ವಿತರಣಾ ಬೆಲೆಗಳ ನಡುವಿನ ಅಂತರವೇ ಆಹಾರ ಪದಾರ್ಥಗಳಿಗೆ ನೀಡುವ ಅನುದಾನ. ೧೯೯೮ರವರೆಗೆ ಪಿಡಿಎಸ್ ಪದ್ಧತಿ ಎಲ್ಲೆಡೆ ಆಚರಣೆಯಲ್ಲಿದ್ದರೂ ಅದು ಪ್ರಧಾನವಾಗಿ ಕಾಣಬರುತ್ತಿದ್ದುದು ನಗರ ವಲಯಗಳಲ್ಲಿ. ಹೀಗೆ ನಗರ ಪ್ರಧಾನವಾಗಿದ್ದ ಪಿಡಿಎಸ್ ವ್ಯಾಪಕವಾಗಿ ಖಂಡನೆಗೆ ಒಳಗಾಯಿತು. ಇದರಿಂದಲೇ ೧೯೯೭ರಲ್ಲಿ ನಿರ್ದೇಶಿತ ಸಾರ್ವಜನಿಕ ಪದ್ಧತಿಯನ್ನು (ಟಿಪಿಡಿಎಸ್) ಆರಂಭವಾಯಿತು. ಈ ವ್ಯವಸ್ಥೆಯಲ್ಲಿ, ಪ್ರತಿ ರಾಜ್ಯದಲ್ಲಿನ ಅರ್ಹ ಫಲಾನುಭವಿಗಳ ಬಗೆಗೆ ಕೇಂದ್ರ ಸರಕಾರವು ನಿರ್ಧರಿಸುತ್ತದೆ. ಇದಕ್ಕೆ ಆಧಾರ ಆಯಾ ರಾಜ್ಯಗಳು ನಿರ್ಧರಿಸುವ ಬಡತನ ರೇಖೆಗಳು. ಇಂತಹ ಮನೆಯ ವಾರ್ತೆಗಳನ್ನು ಬಡತನ ರೇಖೆಯಡಿ (ಬಿ.ಪಿ.ಎಲ್) ಕುಟುಂಬಗಳೆಂದು ಗುರುತಿಸಿ ಸಾಕಷ್ಟು ಅಗ್ಗ ಬೆಲೆಯಲ್ಲಿ ಧಾನ್ಯಗಳನ್ನು ಪಡೆಯಲು ಅವು ಯೋಗ್ಯವೆಂದು ಪರಿಗಣಿಸಲಾಗುವುದು.

ಇನ್ನೂ ಮುಂದುವರೆದು ಅಂತ್ಯೋದಯ ಅನ್ನ ಯೋಜನೆ ಮನೆ ವಾರ್ತೆಗಳು (ಎ.ಎ.ವೈ) ಎಂದು ಕರೆಯುವ ಅತಿ ಬಡತನದಲ್ಲಿರುವ ಕುಟುಂಬಗಳಿಗೆ ಬಿ.ಪಿ.ಎಲ್. ಮನೆಗಳಿಗಿಂತಲೂ ಕಡಿಮೆ ಬೆಲೆಯಲ್ಲಿ ಧಾನ್ಯಗಳನ್ನು ಒದಗಿಸಲಾಗುವುದು. ಹೀಗೆ ಬಿ.ಪಿ.ಎಲ್. ಮತ್ತು ಎ.ಎ.ವೈ ಫಲಾನುಭವಿಗಳನ್ನು ಆಯಾ ರಾಜ್ಯ ಸರ್ಕಾರಗಳು ಗುರುತಿಸಲ್ಪಟ್ಟಿರುತ್ತವೆ. ಇಂತಹ ಎಲ್ಲಾ ನಿರ್ದೇಶಿತ ಕಾರ್ಯಕ್ರಮಗಳಂತೆಯೇ ಟಿ.ಪಿ.ಡಿ.ಎಸ್. ವ್ಯವಸ್ಥೆಗಳಲ್ಲಿ ಸೇರಿಸಿಕೊಳ್ಳಬೇಕಾದ ಅಥವಾ ಕೈಬಿಡಬೇಕಾದ ಕಾರ್ಯಗಳಲ್ಲಿ ದೋಷಗಳಿರುತ್ತವೆ. ಬೇರೆ ಬೇರೆ ರಾಜ್ಯಗಳಲ್ಲಿ ಪಿ.ಡಿ.ಎಸ್.ನಲ್ಲಿ ಅನೇಕ ವ್ಯತ್ಯಾಸಗಳು ಇರುತ್ತವೆ. ಇದರ ವ್ಯಾಪ್ತಿ, ಕುಟುಂಬಗಳ ಅರ್ಹತೆಗಳು, ಪಿ.ಡಿ.ಎಸ್. ಅನುಷ್ಠಾನಗೊಳ್ಳುವ ಇವೆಲ್ಲದರಲ್ಲಿಯೂ ರಾಜ್ಯ ಮಟ್ಟದಲ್ಲಿ ಬಹಳವೇ ವ್ಯತ್ಯಾಸಗಳಿರುತ್ತವೆ. ಎಲ್ಲರನ್ನು ತಲುಪುವ ಯಾವುದೇ ಸೋರಿಕೆ ಇಲ್ಲದಂತಹ ವ್ಯವಸ್ಥೆ ತಮಿಳುನಾಡಿನ ಪಿಡಿಎಸ್‌ನಲ್ಲಿದೆ.[೩೯] ನಮ್ಮ ನಗರದಲ್ಲಿನ ನ್ಯಾಯ ಬೆಲೆ ಅಂಗಡಿಗಳ ಸ್ಥಿತಿಗತಿ ಅವುಗಳ ಮೇಲಿನ ರಾಜಕೀಯ ವ್ಯಕ್ತಿಗಳ ಹಿಡಿತವನ್ನು ನೋಡಬಹುದು.

ಯೋಜನಾ ಅಭಿವೃದ್ಧಿ ಮಾಸಪತ್ರಿಕೆ ಸೆಪ್ಟೆಂಬರ್ ೨೦೧೫ ಪುಟ ಸಂಖ್ಯೆ :೧೭-೨೦ ರಲ್ಲಿ ಉಷಾ ಪಿ. ರಘುಪತಿರವರ 'ಪ್ರಸ್ತುತತೆಯಲ್ಲಿ ಸುಕ್ಷಮ ನಗರಗಳು' ಎಂಬ ಲೇಖನದಲ್ಲಿ ಭಾರತದ ನಗರ ಪ್ರದೇಶಗಳು ಗ್ರಾಮೀಣ ಭಾರತಕ್ಕಿಂತ ತೀವ್ರವಾಗಿ ತ್ವರಿತ ಗತಿಯಲ್ಲಿ ಬೆಳವಣಿಗೆಯಾಗುತ್ತಿವೆ ಎಂಬ ಸತ್ಯವನ್ನು ಮನಗಂಡ ನಂತರ, ಭಾರತ, ಕೊನೆಗೂ ಎಚ್ಚೆತ್ತುಕೊಂಡಿದೆ. ೨೦೦೧-೨೦೧೧ರ ದಶಕದಲ್ಲಿ ಭಾರತದ ನಗರ ಪ್ರದೇಶವು ದೇಶದ ಮೂಲ ಜನಸಂಖ್ಯಾ ಪ್ರಮಾಣಕ್ಕಿಂತ ೯.೧ ಕೋಟಿ ಜನಸಂಖ್ಯೆಯನ್ನು ಸೇರ್ಪಡೆಗೊಳಿಸಿದ್ದು, ಗ್ರಾಮೀಣ ಭಾರತಕ್ಕೆ ಹೋಲಿಸಿದರೆ, ಈ ಪ್ರಮಾಣ ೯.೦ ಕೋಟಿಯಾಗಿದೆ. ಜೆಎನ್‌ಎನ್‌ಯುಆರ್‌ಎಂ (ಜವಾಹರಲಾಲ ನೆಹರು ನಗರ ಪುನರ್ ನವೀಕರಣ ಕಾರ್ಯಕ್ರಮ) ಆರಂಭಕ್ಕೆ ಮುನ್ನ ಗ್ರಾಮೀಣ ವಲಯಕ್ಕೆ ಹೋಲಿಸಿದಲ್ಲಿ ನಗರ ವಲಯಕ್ಕೆ ನೀಡುತ್ತಿದ್ದ ಮೊತ್ತ ತೀರಾ ಅತ್ಯಲ್ಪವಾದುದು. ಜೆಎನ್‌ಎನ್‌ಯುಆರ್‌ಎಂ ಅನುಷ್ಠಾನ ಭಾರತ ಬಗೆಗಿನ ಚಿಂತನೆಯಲ್ಲಿ ಕ್ರಿಯಾಶೀಲ ಬದಲಾವಣೆ ತಂದಿತು. ಭಾರತದ ಆರ್ಥಿಕ ಪ್ರಗತಿ ಹಾಗೂ ಅಭಿವೃದ್ಧಿಯಲ್ಲಿ ನಗರ ಪ್ರದೇಶಗಳು ಮಹತ್ವದ ಮತ್ತು ಕೇಂದ್ರಬಿಂದುವಿನ ಪಾತ್ರ ವಹಿಸಿವೆ ಎಂಬುದನ್ನು ಗುರುತಿಸಲಾಯಿತು. ಭಾರತದ ಬಹುತೇಕ ನಗರಗಳ ಬೃಹತ ಯೋಜನೆಗಳನ್ನು ಹೊಂದಿಲ್ಲ. ಆದ್ದರಿಂದ ನಿಯೋಜಿತವಲ್ಲದ ನಗರೀಕರಣದಿಂದ ಮೂಲಸೌಕರ್ಯ ಮತ್ತು ಸೇವೆಗಳನ್ನು ಒದಗಿಸುವಲ್ಲಿ ತೀವ್ರ ತೊಂದರೆಗಳು ಎದುರಾಗುತ್ತವೆ. ಬಹುತೇಕ ಅರೆ ನಗರ ಪ್ರದೇಶಗಳಲ್ಲಿ ಆಡಳಿತ ಎಂಬುದೇ ಇರುವುದಿಲ್ಲ. ಏಕೆಂದರೆ ಈ ಪ್ರದೇಶಗಳು 'ಗ್ರಾಮಾಂತರವು ಅಲ್ಲ, ನಗರವು ಅಲ್ಲ'. ನಗರಗಳು ವಿಸ್ತರಣೆಯಾದಂತೆಲ್ಲಾ, ಬಹುತೇಕ ಯೋಜಿತವಲ್ಲದ ಪ್ರದೇಶಗಳನ್ನು ನಗರ ವ್ಯಾಪ್ತಿಗೆ ಒಳಪಡಿಸಲಾಗುತ್ತದೆ.[೪೦]

ಯೋಜನಾ ಅಭಿವೃದ್ಧಿ ಮಾಸಪತ್ರಿಕೆ ಸೆಪ್ಟೆಂಬರ್ ೨೦೧೫ ಪುಟ ಸಂಖ್ಯೆ : ೪೧-೪೫ ರಲ್ಲಿ ಕಲಾಸೀತಾರಾಮನ್ ಶ್ರೀಧರರವರ 'ನಗರ ನೈರ್ಮಲ್ಯಕ್ಕೆ ಮಾಹಿತಿ ಸಂವಹನ ತಂತ್ರಜ್ಞಾನ' ಎಂಬ ಲೇಖನದಲ್ಲಿ ನೈರ್ಮಲ್ಯ ಮತ್ತು ಘನ ತ್ಯಾಜ್ಯ ನಿರ್ವಹಣೆಯು ಮೂಲಭೂತ ಸಾರ್ವಜನಿಕ ಸೇವೆಗಳಾಗಿವೆ. ಆರೋಗ್ಯ ಮತ್ತು ಸ್ವಚ್ಛತೆ ದೃಷ್ಟಿಯಿಂದ ಹಾಗೂ ಉತ್ತಮ ಗುಣಮಟ್ಟದ ಜೀವನವನ್ನು ಖಾತ್ರಿ ಪಡಿಸುವ ನಿಟ್ಟಿನಲ್ಲಿ ಈ ಸೇವೆಗಳು ಪ್ರತಿಯೊಬ್ಬ ನಾಗರೀಕನಿಗೂ ಲಭಿಸಬೇಕು. ನೈರ್ಮಲ್ಯ ಎಂದರೆ ಶೌಚಾಲಯ ವ್ಯವಸ್ಥೆ, ಘನ ತ್ಯಾಜ್ಯ ನಿರ್ವಹಣೆ ಎಂದರೆ ಘನರೂಪಿ ಕಸದ ಸಂಗ್ರಹ ಮತ್ತು ವಿಲೇವಾರಿಯಾಗಿದೆ. ಒಂದು ನಗರ ಸ್ವಚ್ಛವಾಗಿದ್ದರೆ, ಕಸಮುಕ್ತವಾಗಿದ್ದರೆ ಅದು ಉದ್ಯಮಿಗಳು ಉದ್ಯಮ ಸ್ಥಾಪಿಸಲು ಹಾಗೂ ಜನರ ಭವಿಷ್ಯ ಅರಸಿ ಬರಲು, ನೆಲೆಸಲು ಪ್ರಶಸ್ತವಾದ ಸ್ಥಳವಾಗಿರುತ್ತದೆ.

ಭಾರತದ ೨೦೧೧ನೇಯ ಜನಗಣತಿ ಪ್ರಕಾರ ನಗರ ಪ್ರದೇಶದಲ್ಲಿ ನೈರ್ಮಲ್ಯದ್ದೇ ದೊಡ್ಡ ಸಮಸ್ಯೆಯಾಗಿದೆ. ನಗರಗಳ ಕೊಳಗೇರಿಗಳಲ್ಲಿ ವಾಸಿಸುವ ಶೇ. ೧೯ ರಷ್ಟು ಮಂದಿ ಬಯಲು ಶೌಚಾಲಯ ಅವಲಂಬಿಸಿದ್ದರೆ, ಶೇ. ೪೨ರಷ್ಟು ಮಂದಿಗೆ ನೀರಿನ ಸೌಕರ್ಯ ಉತ್ತಮವಾಗಿರುವ ಶೌಚಾಲಯ ವ್ಯವಸ್ಥೆ ಇಲ್ಲ. ಇದರಿಂದ ದೇಶದ ಶೇ. ೬೦ ಕ್ಕೂ ಹೆಚ್ಚಿನ ಪ್ರಮಾಣದ ಜಿಡಿಪಿಗೆ ಕೊಡುಗೆ ನೀಡುವ ನಗರ ಸಾರ್ವಜನಿಕ ಆರೋಗ್ಯ ಮತ್ತು ಪರಿಸರದ ಮೇಲೆ ಹೆಚ್ಚಿನ ಹೊರೆ

ಬಿದ್ದಿದೆ. ನಗರ ಜನಸಂಖ್ಯೆಯ ಶೇ. ೨೨ ರಷ್ಟು ಬಡ ಮಹಿಳೆಯರು, ಮಕ್ಕಳು ಮತ್ತು ವೃದ್ಧರಿಗೆ ಇದು ಮಾರಕವಾಗಿ ಪರಿಣಮಿಸಿದೆ. ಭಾರತದ ರಾಷ್ಟ್ರೀಯ ನಗರ ನೈರ್ಮಲ್ಯ ನೀತಿಯ ಪ್ರಕಾರ, ಕಳಪೆ ನೈರ್ಮಲ್ಯ ವ್ಯವಸ್ಥೆಯಿಂದ ೧೪ ವರ್ಷದೊಳಗಿನ ಮಕ್ಕಳಿಗೆ ತಗಲುತ್ತಿರುವ ರೋಗಗಳ ಉಪಚಾರಕ್ಕೆ ಪ್ರತಿವರ್ಷ ನಗರಗಳಲ್ಲಿ ೫೦೦ ಕೋಟಿಗೂ ಹೆಚ್ಚು ಮೊತ್ತ (೨೦೦೧ರ ಬೆಲೆಗಳ ಪ್ರಕಾರ) ವೆಚ್ಚವಾಗುತ್ತಿದೆ. (ಯೋಜನಾ ಆಯೋಗ, ವಿಶ್ವಸಂಸ್ಥೆಯ ಅಂತಾರಾಷ್ಟ್ರೀಯ ಮಕ್ಕಳ ತುರ್ತು ನಿಧಿ (ಯೂನಿಸೆಫ್) ೨೦೦೬).[೪೧]

Feb 11.2017 EPW VOL LI NO 6 Pg No 63-65 PRADEEP KUMAR MISHRA ರವರ 'Poverty Alleviation in Bihar'-Alternative views ನಲ್ಲಿ ಬಿಹಾರದಲ್ಲಿನ ಬಡತನವನ್ನು ತಗ್ಗಿಸಲು ಇರುವ ಪರ್ಯಾಯ ನೋಟ ಎಂಬ ಲೇಖನದಲ್ಲಿ MIHIR SHAH'Sರವರ ಲೇಖನವಾದ Eliminating Poverty in Bihar ದಲ್ಲಿ ಬಿಹಾರದಲ್ಲಿನ ಬಡತನವನ್ನು ಹೋಗಲಾಡಿಸಲು ಇರುವ ವಿರೋಧಭಾಸಗಳು, ಪ್ರತಿಬಂಧಕಗಳು ಮತ್ತು ಪರಿಹಾರವನ್ನು ಸೂಚಿಸಲು ಕೆಲವೊಂದಿಷ್ಟು ಪ್ರಮುಖ ವಿಚಾರಗಳನ್ನು ಸೂಚಿಸಿದ್ದಾರೆ. ಅದರಲ್ಲಿ ಪ್ರಮುಖವಾಗಿ Pradeep Kumar Mishra ರವರು ಮೂರು ಕ್ಷೇತ್ರಗಳ ಮೇಲೆ ಸಲಹೆ ನೀಡುವುದರಿಂದ ಅಥವಾ ಪ್ರಾಮುಖ್ಯತೆ ನೀಡುವುದರಿಂದ ಬಡತನವನ್ನು ಹೋಗಲಾಡಿಸಬಹುದು ಎನ್ನುವುದನ್ನು ಹೇಳುತ್ತಾರೆ ಅವುಗಳೆಂದರೆ ಕೃಷಿ ಸ್ವಸಹಾಯ ಗುಂಪುಗಳು (SHG) ಮತ್ತು ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ (MGNREGA) ಗೆ ಒತ್ತು ನೀಡುವುದು. ಅಂಕಿ ಅಂಶಗಳನ್ನು ಗಮನಿಸಿದಾಗ ಶೇ೬೦% ರಷ್ಟು ಹಳ್ಳಿ ಜನರು ಭೂಮಿಯನ್ನು ಹೊಂದಿಲ್ಲ [(CPI) (M-L)(DNA–೨೦೧೪)] ೨೦೧೧ರ ಜನಗಣತಿ ಪ್ರಕಾರ ಶೇ ೯೦% ಭೂಮಾಲಿಕರು ಸಣ್ಣ ಮತ್ತು ಅತಿ ಸಣ್ಣ ರೈತರಾಗಿದ್ದಾರೆ ಶೇ ೮೧% ಜನ ಕೃಷಿಯನ್ನು ಅವಲಂಭಿಸಿದ್ದಾರೆ (cervanes-godoyand dewbre-೨೦೧೦) ಶಾ ರವರ(pg ೪೭) ಕೃಷಿಗೆ ಒತ್ತು ನೀಡಬೇಕು ಎನ್ನುವ ವಾದ ಬಹುಷ ವ್ಯಾಪಕವಾಗಿ ಬಡತನವನ್ನು ಕಡಿಮೆ ಮಾಡುತ್ತದೆ ಎನ್ನುದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲಾ ಎನ್ನುತ್ತಾರೆ. ಅನೇಕ ರಾಜ್ಯಗಳ ಸ್ವಸಹಾಯ ಗುಂಪುಗಳನ್ನು ನೋಡಿದಾಗ ಅಷ್ಟೊಂದು ಬದಲಾವಣೆ ಕಾಣುವುದಿಲ್ಲ ಆದರೆ MGNREGA ಕಾಯ್ದೆಯು ಕೌಶಲ್ಯರಹಿತ ಕಾರ್ಮಿಕರಿಗೆ ಕೆಲಸವನ್ನು ನೀಡುವುದರಿಂದ ಸ್ವಲ್ಪ ಮಟ್ಟಿಗೆ ಬಡತನದ ನಿವಾರಣೆ ಕಾಣಬಹುದು ಬಿಹಾರದಲ್ಲಿ ವಲಸೆ ಪ್ರಮಾಣ ತುಂಬಾ ಹೆಚ್ಚಾಗಿದ್ದು ೨೦೦೧ ರ ಜನಗಣತಿ ಪ್ರಕಾರ ೨.೭% ಇದ್ದು ಸದ್ಯ ೫% ಕ್ಕೆ ಏರಿದೆ ಬೇರೆ ಪ್ರದೇಶಗಳಿಗೆ ಇಲ್ಲಿಂದ ಹೋಗುವ ಸಂಖ್ಯೆ ಹೆಚ್ಚಿದೆ.[೪೨]

Dec 31-2016 (EPW) VOL LI NO 53 Pg NO 117-123 PRASHANT K TRIVEDI, SURINDERKUMAR, SHRINIVAS GOLI, FAHIMUDDIN ರವರ Identity equation and Electroral Politics (Investigating political economy of land, Empowerment and Education) ಈ ಲೇಖನವು ಉತ್ತರ ಪ್ರದೇಶದಲ್ಲಿನ ಸಂಶೋಧನೆಗೆ ಸಂಬಂಧಪಟ್ಟಿದೆ ಭೂಮಿ,

ಉದ್ಯೋಗ ಮತ್ತು ಶಿಕ್ಷಣವನ್ನು ಆಧರಿಸಿ ಜಾತಿಯನ್ನು ಪರಿಗಣನೆಗೆ ತೆಗೆದುಕೊಂಡು ಅಂದರೆ ಅಲ್ಲಿ ವಾಸಿಸುವ ಜಾತಿಗಳು ಎಷ್ಟಿವೆ ಮತ್ತು ಅವುಗಳ ಪ್ರಮಾಣವೆಷ್ಟು ಯಾವ ಯಾವ ಕ್ಷೇತ್ರಗಳಲ್ಲಿ ಎಷ್ಟು ಪಾಲನ್ನು ಪಡೆದುಕೊಂಡಿದೆ ಎನ್ನುವುದನ್ನು ಕೂಲಂಕುಶವಾಗಿ ನೋಡಿದಾಗ ಭೂ ಹಿಡುವಳಿದಾರರು, ಉದ್ಯೋಗ ಮತ್ತು ಶಿಕ್ಷಣದಲ್ಲಿ ಮುಂದುವರೆದ ಜಾತಿಗಳ ಪ್ರಮಾಣ ಹೆಚ್ಚಿರುವುದು ಕಂಡುಬರುತ್ತದೆ. ಇಲ್ಲಿ ಆಶ್ಚರಕರ ಸಂಗತಿಯೆಂದರೆ ಬಹುಜನ ಸಮಾಜವಾದಿ ಪಕ್ಷ ದಲಿತರನ್ನು ಮತ್ತು ಸಮಾಜವಾದಿ ಪಕ್ಷ ಹಿಂದುಳಿದ ವರ್ಗವನ್ನು ಪ್ರತಿನಿಧಿಸುವ ಪ್ರಮುಖ ಪಕ್ಷಗಳು ಇರುವುದನ್ನು ನೋಡುತ್ತೇವೆ ಇವು ಇದ್ದಾಗಲೂ ಇಲ್ಲಿ ಮೇಲಿನವರ ಕೈಯಲ್ಲಿ ಪ್ರಮುಖ ಕ್ಷೇತ್ರಗಳು ಇರುವುದನ್ನು ನಾವು ಕಾಣುತ್ತೇವೆ ಎನ್ನುದನ್ನು ಸಮಗ್ರವಾಗಿ ಈ ಲೇಖನ ವಿವರಿಸುತ್ತದೆ.[೪೩]

Dec 31-2016(EPW) VOL LI NO 53 Pg No 144-151 PANKAJ K P SHREYASKAR ರವರ Contours of Access to Water and Sanitation in India (Drawing on the Right to Live with Human Dignity) ಈ ಲೇಖನವು ಕುಡಿಯುವ ನೀರು ಮತ್ತು ನೈರ್ಮಲ್ಯೀಕರಣದ ಕುರಿತು ಸಮಗ್ರವಾಗಿ ತಿಳಿಸುತ್ತದೆ. ೨೦೧೦ ಜುಲೈನಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯೀಕರಣ ಮೂಲಭೂತ ಹಕ್ಕಾಗಿದೆ ಎಂಬ ನಿರ್ಣಯ ಪಾಸು ಮಾಡಲಾಯಿತು. ಅದೇ ರೀತಿ ಭಾರತದಲ್ಲಿಯೂ ಕೂಡಾ ಅನೇಕ ಮೊಕದ್ದಮೆಗಳಲ್ಲಿ ಸುಪ್ರಿಂಕೋರ್ಟಿನ ತೀರ್ಪು ಕೂಡಾ ಜೀವಿಸುವ ಹಕ್ಕು ಮೂಲಭೂತ ಹಕ್ಕಾಗಿದೆ ಮತ್ತು ಅದು ಕಲುಷಿತರಹಿತ ನೀರು ಮತ್ತು ಗಾಳಿಯನ್ನು ಒಳಗೊಂಡಿರುತ್ತದೆ ಎನ್ನುವುದನ್ನು ತಿಳಿಸುತ್ತದೆ. ಗ್ರಾಮೀಣ ಪ್ರದೇಶಗಳನ್ನು ತೆಗೆದುಕೊಂಡಾಗ ನೀರನ್ನು ಹಿಡಿಯಲು ಅತೀ ಹೆಚ್ಚು ಸಮಯವನ್ನು ಜಾರ್ಖಂಡ (೪೦ ನಿಮಿಷ) ತೆಗೆದುಕೊಂಡರೆ ಅಸ್ಸಾಂ ಅತೀ ಕಡಿಮೆ (೧೦ ನಿಮಿಷ) ಸಮಯ ತೆಗೆದುಕೊಳ್ಳುತ್ತದೆ. ಇನ್ನೂ ನಗರ ಪ್ರದೇಶಗಳನ್ನು ತೆಗೆದುಕೊಂಡರೆ ಜಾರ್ಖಂಡ ಅತೀ ಹೆಚ್ಚು (೪೦ ನಿಮಿಷ) ತೆಗೆದುಕೊಂಡರೆ ದೆಹಲಿ ಅತೀ ಕಡಿಮೆ (೬ನಿಮಿಷ) ಸಮಯ ತೆಗೆದುಕೊಳ್ಳುತ್ತದೆ. ಇದೇ ರೀತಿ ಎಲ್ಲಾ ರಾಜ್ಯಗಳ ಗ್ರಾಮೀಣ ಮತ್ತು ನಗರ ಪ್ರದೇಶ ಪಟ್ಟಿಯನ್ನು ಈ ಲೇಖನದಲ್ಲಿ ನೀಡಿದ್ದಾರೆ. ಸ್ನಾನಗೃಹಗಳು ಮತ್ತು ಶೌಚಾಲಯಗಳ ಬಳಕೆಯನ್ನು ನೋಡಿದಾಗ ಶೇ ೩೯% ಜನ ಬಿಹಾರದಲ್ಲಿ ಬಳಸುವುದಿಲ್ಲ ಮತ್ತು ಉತ್ತರಾಖಂಡದಲ್ಲಿ ಶೇ ೨೪% ಜನ ಮಾತ್ರ ಬಳಸುವುದಿಲ್ಲ ಇವು ಕ್ರಮವಾಗಿ ಅತೀ ಹೆಚ್ಚು ಅತೀ ಕಡಿಮೆ ಬಳಸದೆ ಇರುವ ರಾಜ್ಯಗಳಾಗಿವೆ. ಎರಡು ಶತಮಾನಗಳಿಗೆ ಹೋಲಿಸಿದಾಗ ಇವತ್ತು ಕುಡಿಯುವ ನೀರಿನ ಹಾಗೂ ಶೌಚಾಲಯಗಳ ಸೌಲಭ್ಯ ಹೆಚ್ಚಾಗಿರುವುದನ್ನು ನಾವು ಕಾಣುತ್ತೇವೆ. ಇವು ನಗರದಲ್ಲಿ ಪ್ರಮುಖ ಪಾತ್ರವನ್ನು ವಹಿಸುವ ಅಂಶಗಳಾಗಿವೆ.[೪೪]

Jan 7-2017 (EPW) VOL LII NO 1 Pg NO -92-101, ROMI KHOSLA ರವರ, India's Urban Landscape (Black Towns of the 21st Century) ೭೦ ವರ್ಷದ ಸ್ವಾತಂತ್ರದ ನಂತರವು, ನಾವು ಜನರಲ್ಲಿ ಸಮಾನವಾಗಿ ಸಂತೋಷವನ್ನು ಹಂಚಲಾಗುತ್ತಿಲ್ಲ. ಎಷ್ಟೋ ಜನರು

ಸ್ವಂತ ಜಾಗವಿಲ್ಲದೆ ತಾತ್ಕಾಲಿಕ ಜಾಗಗಳಲ್ಲಿ ವಾಸಿಸುತ್ತಿದ್ದಾರೆ, ಅವುಗಳನ್ನು ಕೊಳಗೇರಿಗಳೆನ್ನುತ್ತೇವೆ ಇವುಗಳನ್ನು ಬ್ರಿಟಿಷರು 'ಬ್ಲಾಕ ಟೌನ್ಸ' ಎನ್ನುತ್ತಿದ್ದರು. ಇವುಗಳ ಬಗ್ಗೆ ನಮ್ಮ ಸರಕಾರ ತಲೆಕೆಡಿಸಿಕೊಂಡಿಲ್ಲ. ಇಷ್ಟು ವರ್ಷಗಳ ನಂತರವು ಬಹಳ ಏನು ಬದಲಾವಣೆ ಆಗಿಲ್ಲ. ಅದೇ ಅಸಮಾನತೆ, ಬಡತನ, ಅನಾಸಕ್ತಿ ಮತ್ತು ಅಧಿಕಾರಿಗಳಿಗೆ, ಗಣ್ಯ ವ್ಯಕ್ತಿಗಳಿಗೆ ಇವುಗಳ ಬಗ್ಗೆ ಕಲ್ಲೆದೆಯ ಭಾವನೆ. ಸ್ವಾತಂತ್ರದ ನಂತರವು ಅತಿಯಾದ ಅಗಾಧ ಸಂಪತ್ತಿನ ಜೊತೆ-ಜೊತೆಗೆ ಬಡತನವು ಜೀವಂತವಾಗಿದೆ.[೪೫]

August 26, 2017 EPW Vol LII No 34,Pg No 38-46 SHUBHRA GURURANI ರವರ Designed to fail:Techno politics of disavowaland disdain in an urbanising frontier.ಎಂಬ ಲೇಖನದಲ್ಲಿ. ಗುರಗಾಂವನ ಚರಂಡಿ ವ್ಯವಸ್ಥೆಯನ್ನು ಪತ್ರಿಕೆ ಎರಡು ರೀತಿಯಲ್ಲಿ ವೀಕ್ಷಣೆ ಮಾಡುತ್ತದೆ. ಮೊದಲನೇಯದು ವಾದಿಸುವುದು ಏನೆಂದರೆ ನಿರಾಶಾದಾಯಕ ಸ್ಥಿತಿಯನ್ನು ಒಳಗೊಂಡ ಈ ಗುರಗಾಂವ ನಗರವು ಸಂಸ್ಕೃತಿಯ ಅನಿಶ್ಚಿತತೆ ಪಾತ್ರಗಳನ್ನು ಮತ್ತು ಜವಾಬ್ದಾರಿಯುತ ಬೇರೆ ಬೇರೆ ಸರಕಾರಿ ವಿಭಾಗಗಳು ಮತ್ತು ಆಡಳಿತಾತ್ಮಕ ಅಂಕಿತವನ್ನು ಹೊಂದಿದ ನಗರ ಗ್ರಾಮೀಣ ಮತ್ತು ಪರಿವರ್ತನೆಯ ಪ್ರದೇಶಗಳನ್ನು ಒಳಗೊಂಡಿದೆ. ಅದು ಸೂಚಿಸುವುದೇನೆಂದರೆ ವ್ಯಾಪಕವಾದ ಅನಿಶ್ಚಿತತೆಯು ಉತ್ಪಾದಕ ಧ್ಯೇಯಹೊಂದಿ ಅದು ನೀತಿ ಶೂನ್ಯ ಪ್ರದೇಶವನ್ನು ಸೃಷ್ಟಿಸಬೇಕು. ಅದರಿಂದ ಖಾಸಗಿ ಸೇವೆ ಒದಗಿಸುವವರ/ಪೂರೈಕೆದಾರರ ಜೊತೆ ಕೂಡಿ ಉಚಿತವಾಗಿ ನಡೆಸಬೇಕು, ಮತ್ತು ಸ್ವಲ್ಪ ಜನರಿಗೆ ಅದು ಅನುತ್ತೀರ್ಣದ ವ್ಯವಸ್ಥೆಯ ವಿನ್ಯಾಸವಾಗಿರಬಹುದು.

ಎರಡನೆಯದಾಗಿ, ಪತ್ರಿಕೆ ಏನು ವಾದಿಸುತ್ತದೆ ಅಂದರೆ ಚರಂಡಿ ಸಂಕೀರ್ಣ ವ್ಯವಸ್ಥೆಗಳು ಅಥವಾ ಅವುಗಳ ಅನುಪಸ್ಥಿತಿಯಲ್ಲಿ ಟೆಕ್ನೋ-ರಾಜಕೀಯ ತನ್ನ ಕೆಲಸವನ್ನ ವಾಡಿಕೆಯಂತೆ ಮೇಲೆದ್ದುಕೊಂಡು ಮತ್ತು ಸ್ಥಳೀಯ ಹಳ್ಳಿಯ ನಿವಾಸಿಗರ, ವಲಸೆಯ ವರ್ಗಗಳ ಮತ್ತು ನಗರದ ಬಡವರ ನಿರಾಕರಣೆಯ ಒಳಪಟ್ಟ ಜಾಗಗಳೆಂದು ಪರಿಗಣಿಸಿ ಬಿಡದೆ ತನ್ನ ಕಾರ್ಯವನ್ನು ಅಚ್ಚುಕಟ್ಟಾಗಿ ಮಾಡಬೇಕು. ಗುರಗಾಂವನ್ನು ಭಾರತದ 'ಮಿಲೆನಿಯಂ ಸಿಟಿ' ಎಂದು ಕರೆಯುತ್ತಾರೆ. ಆದರೆ ಅಲ್ಲಿನ ಜನರು, ವಲಸಿಗರು, ಕಾರ್ಯಕರ್ತರು, ಯೋಜಕರು ಹತಾಶೆಯ ಭಾವಕ್ಕೆ ತಲುಪಿರುತ್ತಾರೆ. ಇವರ ಹತಾಶೆ ಕೋಪ ಅಲ್ಲಿನ ಮುನ್ಸಿಪಾಲ್ಟಿಯ ಅಧಿಕಾರಿಗಳ, ಖಾಸಗಿ ಅಧಿಕಾರಿಗಳ ನಿರ್ವಹಣೆ ಮೇಲೆ ಎದ್ದು ಕಾಣುತ್ತದೆ. ಇವರು ತಮ್ಮ ಕೆಲಸವನ್ನು ಸರಿಯಾಗಿ ಮಾಡುತ್ತಿಲ್ಲ ಎಂದು. ಈಗಿನ ಗುರಗಾಂವನ ಅಧ್ಯಕ್ಷರಾದ ಆರ್.ಎಸ್.ರಾಠಿ ಗಮನಿಸಿರೋದು ಏನೆಂದರೆ ಹಲವು ಪ್ರದೇಶಗಳಲ್ಲಿ ಸ್ಥಳೀಯ ಸಂಕೀರ್ಣ ವ್ಯವಸ್ಥೆಗಳು, ಮಾಸ್ಟರ್ ವ್ಯವಸ್ಥೆಗೆ ಜೋಡಣೆಯಾಗಿಲ್ಲ. ಆದ್ದರಿಂದ ಚರಂಡಿ ವ್ಯವಸ್ಥೆ ಜಾಲ ಒಂದು ಗಾಂಭೀರ್ಯತೆಯ ಮೇರೆಗೆ ಕಾರ್ಯ ಮಾಡಬೇಕು.[೪೬]

OCT -28- 2017 Economic and political weekly Vol LII Nos 42-43LAKSHMI SUBRAMANIAM ರವರ ROADS ARE LIKE FAMILIES [MEMOIRS OF ROADS:CULCUTTA FROM COLONIAL URBANIZATION TO GLOBAL

MODERNIZATION.] ಸುಮಂತ ಬ್ಯಾನರ್ಜಿರವರ 'MEMOIRS OF ROADS' ಎಂಬ ಲೇಖನವು ಅನೇಕ ವಿಷಯಗಳನ್ನು ಒಳಗೊಂಡಿದೆ ಮತ್ತು ಕಲ್ಕತ್ತಾದ ಇತಿಹಾಸದ ವಿವರವನ್ನು ನೀಡುತ್ತದೆ. ಇಲ್ಲಿನ ರಸ್ತೆಗಳು ಸಾಮಾನ್ಯವಲ್ಲ, ಬದಲಾಗಿ ಅವು ಸಂಕೀರ್ಣ ಸಂಬಂಧಗಳನ್ನು ಸಾಕಾರಗೊಳಿಸುತ್ತವೆ.ಪೂರ್ವ ವಸಾಹತುದಿಂದ ಹಿಡಿದು ನವ ಉದಾರವಾದ ಅಲ್ಲಿನ ಇತಿಹಾಸ ಸಾರುತ್ತವೆ. ರಸ್ತೆ ಅಂದರೆ ಕೇವಲ ಕೊಳಕು ದಾರಿಯಲ್ಲ ಅಥವಾ ಸಿಮೆಂಟ್ ಕಾಂಕ್ರಿಟ್ ಅಲ್ಲ, ಬದಲಾಗಿ ಅವು ಜನರನ್ನು ಜೋಡಿಸುತ್ತವೆ, ಸರಕುಗಳನ್ನ ಸಾಗಣೆ ಮಾಡಲು ಮತ್ತು ನಗರದ ಹೊಸ ಸಂರಚನೆಗಳನ್ನು ಸಲಹಲು ಈ ರಸ್ತೆಗಳು ತುಂಬಾ ಮುಖ್ಯವಾಗಿವೆ. ಲೇಖಕ ಬ್ಯಾನರ್ಜಿರವರ ಪ್ರಕಾರ ರಸ್ತೆಗಳು ಕುಟುಂಬಕ್ಕೆ ಉಪ ಇಳುವರಿ ಸಾಲುಗಳು ಅಥವಾ ಆಹಾರ ಉತ್ಪತ್ತಿಯನ್ನು ತಲುಪುವ ಹಾಗೆ ಮಾಡುತ್ತವೆ ಹಾಗೂ ಇವುಗಳನ್ನು 'ಗಲ್ಲಿಗಳು' ಎಂದು ಕಲ್ಕತ್ತಾದಲ್ಲಿ ಕರೆಯಲ್ಪಡುತ್ತವೆ. ಇಲ್ಲಿ ಅವರ ರಸ್ತೆಗಳ ಕಥನವು ವೈಯಕ್ತೀಕರಿಸುವುದು ಏನೆಂದರೆ ನಗರೀಕರಣವನ್ನು ತಿಳಿಯಲು ಮತ್ತು ಅಭ್ಯಾಸಿಸುವುದಕ್ಕಿಂತ ಸಾಮಾಜಿಕ ಸಂಬಂಧಗಳ ಸಾಮರ್ಥ್ಯದ ಬಗ್ಗೆ ಮತ್ತು ನಗರದ ಜನಸಂಖ್ಯೆಯ ಪರಿಣಾಮಗಳ ಬಗ್ಗೆ ತಿಳಿಯುವುದೇ ಎಷ್ಟೋ ಹೆಚ್ಚೆಂದಿದ್ದಾರೆ.[೪೭]

ಡಿಸೆಂಬರ ೨೦೧೭ ರ SOCIAL WELFARE Vol 64 No 09 pg No 25-26 prof(Dr)SUNITA NAMBIYAR ರವರ Health and Sanitation-A Human Right. ಲೇಖನದಲ್ಲಿ ನೈರ್ಮಲ್ಯೀಕರಣದ ಸಮಸ್ಯೆ ಮತ್ತು ಶುಚಿತ್ವದ ಸೌಲಭ್ಯಗಳು ಅಲಭ್ಯತೆಗಳ ಬಗ್ಗೆ ಚರ್ಚಿಸಲಾಗಿದೆ ಹಾಗೂ ಸಾಂಕ್ರಾಮಿಕ ಅಥವಾ ವೈದ್ಯಕೀಯ ಕ್ಷೇತ್ರಗಳಲ್ಲಿ ಉಂಟಾದ ಬಿಕ್ಕಟ್ಟುಗಳನ್ನು ಏಕಾಏಕಿ ಪದೇ ಪದೇ ನಾವು ಪರ್ಯಾಯಲೋಚನೆ ಮಾಡಬೇಕಿದೆ. ಭಾರತದ ನೀರಿನ ನೈರ್ಮಲ್ಯೀಕರಣದ ಪರಿಸ್ಥಿತಿಯನ್ನು ಒಂದು ವಿಷಮ ಸ್ಥಿತಿಯೆಂದು ವಿವರಿಸಲಾಗಿದೆ. ವಿಶ್ವಬ್ಯಾಂಕ್ ಪ್ರಕಾರ ಶೇಕಡಾ ೨೧ ಸಾಂಕ್ರಾಮಿಕ ರೋಗಗಳು ಭಾರತದಲ್ಲಿ ಅಸುರಕ್ಷಿತ ನೀರಿನಿಂದ ಉಂಟಾಗುತ್ತದೆ ಎಂದು ಅಂದಾಜಿಸಲಾಗಿದೆ. ಭಾರತದಲ್ಲಿ ೧೬೦೦ ಸಾವುಗಳು ಕೇವಲ ಅತಿಸಾರದಿಂದ ನಿತ್ಯವು ಉಂಟಾಗುತ್ತವೆ. ಐದು ವರ್ಷದ ಸಣ್ಣ ಮಕ್ಕಳಲ್ಲಿ ಈ ಅತಿಸಾರ ರೋಗವು ಹೆಚ್ಚಿನ ಸಂಖ್ಯೆಯಲ್ಲಿ ಮರಣ ತರುತ್ತಿದೆ. ಸರಿಯಾದ ನೀರಿನ ಹರಿವು ಮತ್ತು ಚರಂಡಿ ವ್ಯವಸ್ಥೆಗಳು ಇಲ್ಲದ ಕಾರಣದಿಂದ ರೋಗಗಳು ಸಂಖ್ಯೆ ಹೆಚ್ಚುತ್ತಿದೆ ಇದರ ಪರಿಣಾಮವಾಗಿ ಪ್ರಮುಖವಾದ ನೀರಿನ ಮೂಲಗಳು ಚರಂಡಿಯ ಕಸದಿಂದ, ಕೃಷಿಯ ತ್ಯಾಜ್ಯಗಳಿಂದ ಮತ್ತು ಕೈಗಾರಿಕಾ ತ್ಯಾಜ್ಯಗಳಿಂದ ಮಲಿನಗೊಳ್ಳುತ್ತಿದೆ.

ಜಲಮಾರ್ಗಗಳು ಮಾನವನ ಮತ್ತು ಕೈಗಾರಿಕಾ ತ್ಯಾಜ್ಯಗಳ ಭಂಡಾರಗಳಾಗಿವೆ. ಹೀಗಾಗಿ ನೈರ್ಮಲ್ಯೀಕರಣವು ಒಂದು ಆಪತ್ತಿನ/ನಿರ್ಣಾಯಕ ಸವಾಲಾಗಿದೆ. ಈಗಲೂ ೬೦೦ ಮಿಲಿಯನ ಜನರು ತೆರೆದ ಮಲವಿಸರ್ಜನೆ ಮಾಡುತ್ತಾರೆ. ಇದರಿಂದಲೂ ಆರೋಗ್ಯದ ಮೇಲೆ ಪರಿಣಾಮ ಉಂಟಾಗುತ್ತದೆ ಆರೋಗ್ಯದ ಕಾರಣದಿಂದ ಶಾಲೆಗಳಲ್ಲಿ ಮಕ್ಕಳು ಸರಿಯಾಗಿ ಕಾರ್ಯನಿರ್ವಹಿಸಲಾಗುತ್ತಿಲ್ಲ ಆಗಸ್ಟ್ ೧೫ ರಂದು ಪ್ರಧಾನಮಂತ್ರಿಯವರು ಸ್ವಚ್ಚ ಭಾರತ ಅಭಿಯಾನವನ್ನು ಘೋಷಿಸಿದರು. ಅದು ರಾಷ್ಟ್ರೀಯ ಮಟ್ಟದ ಪ್ರಚಾರ ಪಡೆದುಕೊಂಡಿತು. ಭಾರತ ಸರ್ಕಾರವು ೪೦೪೧ ಶಾಸನಬದ್ಧ

ಪಟ್ಟಣಗಳನ್ನು, ಅಲ್ಲಿನ ರಸ್ತೆಗಳು, ಸಾರ್ವಜನಿಕ ಸ್ಥಳಗಳು ಹಾಗೂ ಮುಂತಾದ ಕಡೆ ಸ್ವಚ್ಚತೆ ಮಾಡುವುದನ್ನು ಒಳಗೂಂಡಿದೆ. ಈ ಪ್ರಚಾರವು ಅಧಿಕೃತವಾಗಿ ಬಿಡುಗಡೆಯಾಗಿದ್ದು ೨ನೇ ಅಕ್ಟೋಬರ ೨೦೧೪ ರಂದು. ರಾಜ್‌ಘಾಟ, ನವದೆಹಲಿಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರೇ ಸ್ವತಃ ರಸ್ತೆಯನ್ನು ಸ್ವಚ್ಚಮಾಡುವ ಮೂಲಕ ಈ ಪ್ರಚಾರ ಪ್ರಯೋಗಿಸಿದರು. ಈ ಪ್ರಚಾರದ ಮುಖ್ಯ ಉದ್ದೇಶವೆಂದರೆ "ಸ್ವಚ್ಛ ಭಾರತ ಮಿಷನ್" ಅನ್ನು ಗಾಂಧಿಜೀಯವರ ೧೫೦ ನೇ ಹುಟ್ಟು ಹಬ್ಬವಾದ ೨ ನೇ ಅಕ್ಟೋಬರ್ ೨೦೧೯ ರ ವರೆಗೆ ನೆರವೇರಿಸುವುದು.[೪೮]

ನವೆಂಬರ ೨೫-೨೦೧೭ ರ Economic and Political Weekly Vol No 47 Pg No 54-59 ರಲ್ಲಿ BRIJESH C. PUROHIT ರವರ Efficiency of Healthcare Sector in Bihar: An Exploratory Analysis ಲೇಖನದಲ್ಲಿ ಬಿಹಾರದ ಜಿಲ್ಲಾಮಟ್ಟದ ಆರೋಗ್ಯ ವ್ಯವಸ್ಥೆಯ ಕಾರ್ಯದಕ್ಷತೆಯ ಮೇಲೆ ಹೆಚ್ಚಿನ ಒತ್ತು ಕೊಡುತ್ತದೆ ಈ ರಾಜ್ಯವು ಮೊದಲೇ ಆರ್ಥಿಕವಾಗಿ, ಸಾಮಾಜಿಕವಾಗಿ ಅನಾನೂಕೂಲ ಸ್ಥಿತಿಯಲ್ಲಿರುವ ರಾಜ್ಯವಾಗಿದೆ ಹಾಗೆಯೇ ಶಿಶು ಮರಣ ಸಂಖ್ಯೆಯು ಬಿಹಾರದಲ್ಲಿ ಹೆಚ್ಚಿದೆ. ಭೇದಾತ್ಮಕ ಕಾರ್ಯ ನಿರ್ವಹಣೆಯನ್ನು ಬೇರೆ ಬೇರೆ ಜಿಲ್ಲೆಯಲ್ಲಿ ಹೇಗೆ ಅಂಕಿ ಸಂಖ್ಯೆ ಮಾಹಿತಿ ಆವರಣ ವಿಶ್ಲೇಷಣೆಯನ್ನು ಬಳಿಸಿಕೊಂಡು ಕಾರಣಗಳನ್ನು ಅನ್ವೇಷಿಸುತ್ತದೆ. ಕಡಿಮೆ ಆರೋಗ್ಯ ಕಾರ್ಯ ನಿರ್ವಹಣೆಯನ್ನು ಪ್ರದರ್ಶನದ ಜಿಲ್ಲೆಯು, ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದಡಿಯಲ್ಲಿ ಅವುಗಳ ದಕ್ಷತೆಯು ನಮಗೆ ಸೂಚಿಸುವುದೇನೆಂದರೆ ಒಳಹರಿವುಗಳ ಕೊರತೆ, ಅದಕ್ಷ ಹಾಗೂ ಸೂಕ್ತ ಗುರಿಯ ನಿಧಿಗಳಿಂದ ವಂಚನೆಯನ್ನು ತೋರಿಸುತ್ತದೆ.

ದಕ್ಷತೆಯ ಪ್ರಾಮುಖ್ಯತೆ, ಸಂಪನ್ಮೂಲ ಬಳಕೆಯು ಆರೋಗ್ಯ ವಲಯದಲ್ಲಿ ಜಾಗತಿಕವಾಗಿ ಮಾನ್ಯತೆ ಪಡೆದಿದೆ. ಅನೇಕ ಸಂಖ್ಯೆಯ ಪ್ರಾಯೋಗಿಕ ಅಧ್ಯಯನಗಳು ಮತ್ತು ಆರೋಗ್ಯ ವ್ಯವಸ್ಥೆಯ ಕಾರ್ಯದಕ್ಷತೆಯ ಪರಿಣಾಮಕಾರಿ ಫಲಿತಾಂಶಗಳಾಗಿವೆ.(WHO 2000; Murry and Frank 1999). ಕೆಲವು ಗಮನಾರ್ಹ ಅಧ್ಯಯನಗಳಿಂದ ಆಸ್ಪತ್ರೆ, ಶೂಶ್ರೂಶ ನಿಲಯ, ಆರೋಗ್ಯ ನಿರ್ವಹಣೆ ಸಂಸ್ಥೆಗಳ ಮೇಲೆ ಕೇಂದ್ರಿಕೃತವಾಗಿವೆ ಮತ್ತು ಜಿಲ್ಲಾ ಮಟ್ಟದ (HMO'S) ಆರೋಗ್ಯ ಅಧಿಕಾರಿಗಳು (Worthington 2004;Holingsworth and wild man 2002; Jamison et al 2001; Evans et al 2001; Wang et al 1999; Sankar and Katawia 2004) ಸಾಮಾನ್ಯವಾಗಿ ಮಾನದಂಡನಾತ್ಮಕ ವಿಧಾನಗಳು ಅಥವಾ ಮಾನದಂಡನಾತ್ಮಕ ಅಲ್ಲದ ವಿಧಾನಗಳು ಕೆಲಸ ಮಾಡಿಸುತ್ತವೆ. ಇದರಲ್ಲಿ ಅಂಕಿ-ಸಂಖ್ಯೆ ಮಾಹಿತಿ ಆವರಣ ತಂತ್ರವು ನಿಯೋಜಿಸಲಾಗಿತ್ತು ನಂತರದಲ್ಲಿ ಆದರ್ಶಿಕರಿಸಿದ ಗಜಕಡ್ಡಿಯನ್ನು ಅಭಿವೃದ್ಧಿ ಪಡಿಸಲಾಯಿತು. ಇದು ಆರೋಗ್ಯ ವ್ಯವಸ್ಥೆಯ ಆರ್ಥಿಕ ನಿರ್ವಹಣೆಯನ್ನ ಮೌಲ್ಯಮಾಪನ ಮಾಡುತ್ತದೆ. ಇವೆಲ್ಲಾ ವಿಧಾನಗಳು ಉತ್ಪಾದನಾ ಸಾಧ್ಯತೆಗಳನ್ನು ಮತ್ತು ಒಂದು ಆರೋಗ್ಯ ವ್ಯವಸ್ಥೆಯು ಆ ಸಮಯದಲ್ಲಿ ಸಮರ್ಥವಾಗಿ ತಾಂತ್ರಿಕವಾಗಿ ದಕ್ಷ ಉತ್ಪಾದನೆಯ ಸಾಮರ್ಥ್ಯದ ಬಗ್ಗೆ ಚಿತ್ರಿಸಿದ ಒಂದು ಸ್ಥಾನದ ಬಗ್ಗೆ ಮಾಹಿತಿಯನ್ನು

ಒದಗಿಸುತ್ತದೆ. ಬಿಹಾರದ ಆರೋಗ್ಯ ವ್ಯವಸ್ಥೆಯು ನಮಗೆ ತಿಳಿಸುವುದೇನೆಂದರೆ ಅಲ್ಲಿನ ಕೆಲವು ಜಿಲ್ಲೆಗಳ ಒಳಹರಿವುಗಳಾದ ಡಾಕ್ಟರ್, ಬೆಡ್ಸ್, ಇತ್ಯಾದಿಗಳನ್ನು ಸರಿಯಾಗಿ ಉಪಯೋಗಿಸುತ್ತಿಲ್ಲ. ಇನ್ನೂ ಕೆಲವು ಜಿಲ್ಲೆಗಳಿಗೆ ಈ ಸೌಲಭ್ಯಗಳು ಒದಗುತ್ತಿಲ್ಲ. ಈ ಸೌಲಭ್ಯ ಒದಗಿಸಿದರೆ ಬಹುಶಃ ಈ ಕೆಲವು ಜಿಲ್ಲೆಗಳಲ್ಲಿ ಆರೋಗ್ಯ ಸುಧಾರಣೆಯಾಗಬಹುದು ಹಾಗಾಗಿ ನಮಗೆ ಅದಕ್ಷ ಹಾಗೂ ಕೆಲವು ಕೊರತೆಗಳು ಕಂಡು ಬರುತ್ತವೆ ಮತ್ತು ಅವು ಫಲಿತಾಂಶಗಳನ್ನು ಋಣಾತ್ಮಕವಾಗಿ ನೀಡುತ್ತವೆ. ಸರ್ಕಾರದಿಂದ ಬರುವ ನಿಧಿಗಳು ಸರಿಯಾಗಿ ಸೂಕ್ತವಾಗಿ ಕಡಿಮೆ ಕಾರ್ಯ ದಕ್ಷತೆ ಹೊಂದಿರುವ ಜಿಲ್ಲೆಗಳಿಗೆ ಮೊದಲು ತಲುಪಬೇಕು.[೪೯]

ನವೆಂಬರ ೨೫-೨೦೧೭ ರ Economic and political weekly Vol LII No 47, Pg No 69-76 ರಲ್ಲಿ Sandeep Mertia ರವರ 'TIMEPASS' DEVELOPMENT: SITUATING SOCIAL MEDIA IN RURAL RAJASTAN ಲೇಖನದಲ್ಲಿ ಗಮನಾರ್ಹ ಪ್ರಾಯೋಗಿಕ ತಂತ್ರಜ್ಞ ಪ್ರವಚನ ಮತ್ತು ತಂತ್ರಜ್ಞಾನದ ತಳಮಟ್ಟದ ನಡುವೆ ತಂತ್ರಜ್ಞಾನದ ಅನುಭವಗಳು ನಿದರ್ಶನಗೊಳಪಟ್ಟಿವೆ. ಬೆಳೆಯುತ್ತಿರುವ ಸಾಮಾಜಿಕ ಹಾಗೂ ಡಿಜಿಟಲ್ ಮಾಧ್ಯಮದ ಬಳಕೆಯಿಂದ ಹಳ್ಳಿಗಳಲ್ಲಿ ಮಾಹಿತಿ ಸಂವಹನ ತಂತ್ರಜ್ಞಾನಗಳು ಬೆಳವಣಿಗೆ ಮತ್ತು ಇ-ಆಡಳಿತ ಮಾರ್ಗದರ್ಶನದ ಯೋಜನೆಗಳು ತಮ್ಮ ಗುರಿಗಳನ್ನು ಮುಟ್ಟುವುದರಲ್ಲಿ ವಿಫಲತೆಯನ್ನು ಹೊಂದಿವೆ. ರಾಜಸ್ಥಾನದ ಎರಡು ಹಳ್ಳಿಗಳನ್ನು ಆಧಾರವಾಗಿ ಇಟ್ಟುಕೊಂಡು ಜನಾಂಗ ವಿವರಣೆಯ ಆಧಾರಿತ ಅಧ್ಯಯನವಾದ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳು ತಮ್ಮ ಗುರಿಗಳನ್ನು ಸಾಮಾಜಿಕ ಮತ್ತು ಡಿಜಿಟಲ ಮಾಧ್ಯಮಗಳ ಮೂಲಕ ಸನ್ನಿವೇಶದಿಂದ ಸಂಕೀರ್ಣ ಗ್ರಾಮೀಣ ಸಮಾಜದ ಹಾಗೂ ಮಾಧ್ಯಮದ ಪರಿಸರವನ್ನು ಸಹ-ರಚನಾತ್ಮಕವಾದ ವಿಧಾನಗಳಿಂದ ತಲುಪಲು ಪ್ರಯತ್ನಿಸುತ್ತವೆ. ಈ ಲೇಖನದಲ್ಲಿ ಲೇಖಕರು ಹೇಳುವುದೇನೆಂದರೆ ವಿಲಕ್ಷಣ ರೂಪದ ಸಾಮಾಜಿಕ ಮತ್ತು ಡಿಜಿಟಲ್ ಮಾಧ್ಯಮಗಳ ಉಪಸ್ಥಿತಿಯಿಂದ ದೂರಸ್ಥಳ ಹಳ್ಳಿಗಳಲ್ಲಿ ಅಭಿವೃದ್ಧಿಯ ನಡುವೆ ವಿಫಲತೆಗಳನ್ನೇ ಕಾಣಬಹುದು. ಹಾಗೆಯೇ ಮಾಹಿತಿ ತಂತ್ರಜ್ಞಾನ ಮತ್ತು ಇ-ಆಡಳಿತ ಯೋಜನೆಗಳು ICT4D (Information and Communication Technologies for Development) ಇಲ್ಲಿ ಲೇಖಕರನ್ನೇ ಗೊಂದಲದಲ್ಲಿ ಇರುವಂತೆ ಮಾಡಿದೆ ಏಕೆಂದರೆ ಸರ್ಕಾರ ಮತ್ತು ಸರ್ಕಾರಿ ಅಲ್ಲದ (NGO's) ಪರೋಕ್ಷವಾಗಿ ಅಥವಾ ಪ್ರತ್ಯಕ್ಷವಾಗಿ ಹಳ್ಳಿಯ ಜನರನ್ನೇ ನಿಂದಿಸುತ್ತವೆ. ಅಲ್ಲಿನ ಜನರು ಅನಕ್ಷರಸ್ಥರು, ಅರಿವಿಲ್ಲದವರು ಮತ್ತು ವಿರೋಧಿಗಳೆಂದು ಆರೋಪಿಸುತ್ತವೆ. ಇನ್ನೊಂದೆಡೆ ಯುವ ಜನತೆ ಮೊಬೈಲ್ ಪೋನನ್ನು ಮನರಂಜನೆಗೆ ಮತ್ತು ಸಾಮಾಜಿಕ ಜಾಲತಾಣಗಳನ್ನು ಬಳಸುವುದನ್ನು ಕಂಡು ಆಶ್ಚರ್ಯಕರವಾಗುತ್ತದೆ. ಇವೆರಡನ್ನು ನೋಡಿದರೆ ಅಲ್ಲಿನ ಜನರನ್ನು ಹೇಗೆ ಅನಕ್ಷರಸ್ಥರು ಅನ್ನುವುದು ಎಂದು ಲೇಖಕರ ಗೊಂದಲವಾಗಿದೆ. ಈ ಲೇಖನದಲ್ಲಿ ಮೊದಲಿಗೆ ಮುನ್ನಡಿಯಲ್ಲಿ ಒಂದು ಹಳ್ಳಿಯಾದ ರಾಮಪುರನಲ್ಲಿನ ಎರಡು ಜನಾಂಗ ವಿವರಣೆಯ ಮುಖಪತ್ರ ಚಿತ್ರವನ್ನೇ ಹೊರಬರುವಂತೆ ಮಾಡುತ್ತಾರೆ.

ಈ ಕಾಗದದಲ್ಲಿ ಲೇಖಕರು ಮತ್ತು ಅದರ ಸಾರಾಂಶವನ್ನು ತಿಳಿಸುತ್ತಾರೆ ನಂತರದಲ್ಲಿ ICT4D ಯ ಸಮಸ್ಯೆಯು ಭಾರತದಲ್ಲಿ ಎಷ್ಟಿದೆ ಎಂದು ಚರ್ಚಿಸಲಾಗುತ್ತದೆ. ಸಾಮಾಜಿಕ ಹಾಗೂ ಡಿಜಿಟಲ್ ಮಾಧ್ಯಮಗಳು ಹಳ್ಳಿಗಳಲ್ಲಿ ಜ್ಞಾನಕ್ಕೆ ಸಂಬಂಧಿಸಿದ ಬೆಳಕಿನ ಕಿರಣಗಳು ಎನ್ನಬಹುದು. ಈ ಮೂಲಕ ಲೇಖಕರು ವಾದಿಸುವುದೇನೆಂದರೆ ಹೆಚ್ಚಿನ ಜನಾಂಗಗಳು ತಂತ್ರಜ್ಞಾನದ ಬಗ್ಗೆ ಗಮನ ಹರಿಸಬೇಕು ಮಾಧ್ಯಮಗಳಿಂದ ಜ್ಞಾನವನ್ನು ಪಡೆದುಕೊಳ್ಳಬೇಕು. ರಾಮ್‌ಪುರ, ರಾಜಸ್ಥಾನದ ಒಂದು ಹಳ್ಳಿ. ಈ ಹಳ್ಳಿಯು ರಾಜ್ಯ ಹೆದ್ದಾರಿಯಲ್ಲಿ ಇದೆ. ಈ ಹಳ್ಳಿಯಿಂದ ಎಲ್ಲ ತರಹದ ಸಂಪರ್ಕಗಳು ಇವೆ. ಅವು ರಸ್ತೆ ಸಂಪರ್ಕಗಳು, ಇಲ್ಲಿ ICT4D ಯೋಜನೆಗಳು ಚಾಲ್ತಿಯಲ್ಲಿ ಇವೆ. ಇಲ್ಲಿನ ಜನರು ಅರೆ–ನಗರದ ವಾಸಿಗಳ ಜೀವನವನ್ನೇ ನಡೆಸುತ್ತಾರೆ. ತುಂಬಾ ಮುಂದುವರೆದ ಹಳ್ಳಿಯೆಂದು ಹೊಗಳಿಕೆಗೆ ಒಳಪಟ್ಟಿದೆ. ಈ ಹಳ್ಳಿಯಿಂದ ಪ್ರತಿವರ್ಷ ೫ ರಿಂದ ೧೦ ಮಕ್ಕಳು ಒಂದು ಬ್ಯಾಚನಂತೆ ಕಂಪ್ಯೂಟರ ಕೋರ್ಸಗಳನ್ನು ಮುಗಿಸುತ್ತಾರೆ. ಇನ್ನೊಂದೆಡೆ ಚಂದಾಪುರ ರಾಜಸ್ಥಾನದಲ್ಲಿಯೇ ಇದೆ ಆದರೆ ಈ ಹಳ್ಳಿಯ ಜನರು ಅರೆ–ನಗರ ವಾಸಿಗಳ ತರ ವಾಸಿಸುವುದಿಲ್ಲ. ಅಲ್ಲಿನ ಜನರು ಬೇರೆಯವರ ಮೇಲೆ ಅವಲಂಬಿತರಾಗಿಲ್ಲ. ಈ ಹಳ್ಳಿಯು ರಸ್ತೆಯ ಸಂಪರ್ಕ ಹೊಂದಿಲ್ಲ. ಅಲ್ಲಿನ ಜನರು ಮಾಧ್ಯಮದ ಯೋಜನೆಗಳ ಬಗ್ಗೆ ತಿಳಿದಿಲ್ಲ. ಅವರು ಅನಕ್ಷರಸ್ಥರು ಇವೆರೆಡು ಹಳ್ಳಿಗಳು ಹೀಗಿರಲು ಕಾರಣ ರಾಜ್ಯಗಳ ನಡುವಿನ ಅಂತರ ಮತ್ತು NGO's ಗಳ ಡಿಜಿಟಲ್ ಸಾಕ್ಷರತೆಯನ್ನು ತಲುಪಿಸುವ ವಿಧಾನದಲ್ಲಿನ ವ್ಯತ್ಯಾಸಗಳು. ಇಲ್ಲಿ 'ಟೈಮ್‌ಪಾಸ್' ಎಂಬ ಕಲ್ಪನೆಯು ಯುವಜನತೆ ಅದರಲ್ಲೂ ದಕ್ಷಿಣ ಭಾರತದ ಹಳ್ಳಿಯ ಜನತೆಯಲ್ಲಿ ಹೆಚ್ಚು ಕಾಣುತ್ತದೆ. ಕಾರಣ ವಿಶಾಲವಾದ ರಾಜಕೀಯ–ಆರ್ಥಿಕ ಬದಲಾವಣೆ ಮತ್ತು ನಿರುದ್ಯೋಗದ ಅಭದ್ರತೆಗಳಿಂದ ಇವೆಲ್ಲವನ್ನು ಕಾಣಬಹುದು. (Jeffrey-2010) ICT4D ವಿಮರ್ಶೆಯ ಆಚೆಯು ಸಾಹಿತ್ಯಗಳು ವಿಮರ್ಶಿಸುವುದೇನೆಂದರೆ ವಿಶ್ಲೇಷನಾತ್ಮಕ ವಿಧಾನಗಳು ಸೂಕ್ತವಾಗಿವೆ ನಮಗೆ ICTs ನ ಬಳಕೆಗಳನ್ನು ಹೇಗೆ ಬಳಸುವುದು ಎಂದು ತಿಳಿಸುತ್ತವೆ.[೫೦]

ಡಿಸೆಂಬರ ೩೦,೨೦೧೭ Economic and Political weekly Vol LII No 52 Pg No 36-38 ರಲ್ಲಿ Tanya Jakimowg ರವರ URBAN POVERTY ,LOCAL GOVERNANCE AND EVERYDAY POLITICS IN MUMBAI –EXCLUSION, POVERTY AND URBAN GOVERNANCE ಲೇಖನದಲ್ಲಿ ಜೂಪ್–ಡಿ ವಿಟ್ಸ್ ಅವರು ಭಾರತದ ನಗರದ ದೀರ್ಘ ಆಡಳಿತದ ಭಾಗಿಯಾಗಿದಕ್ಕೆ ಓದುಗರಿಗೆ ಒಂದು ವಿಮರ್ಶೆಯ ವಿಷಯ ಕೊಟ್ಟಿದ್ದಾರೆ. ಹಾಗೆಯೇ ಇದು ಅವರನ್ನು ಎರಡು ರೀತಿಯಲ್ಲಿ ಒಬ್ಬ ಸಂಶೋಧಕನ ಮತ್ತು ಅಭಿವೃದ್ಧಿ ವೈದ್ಯರನ್ನಾಗಿ ಮಾಡಿದೆ. ವಿಟ್ಸ್ ರವರು ತಮ್ಮ ಜೀವನದಲ್ಲಿ ಮಾನವ ಶಾಸ್ತ್ರಿಯ ವಿಷಯಗಳಾದ ನಗರದ ಬಡತನ ಮತ್ತು ಅಲ್ಲಿನ ಆಡಳಿತ ಬಗ್ಗೆ ಅಧ್ಯಯನವನ್ನು ಮುಂಬೈನಲ್ಲಿ ಮುಂದುವರೆಸಿದರು. ಈ ಪುಸ್ತಕವು/ಲೇಖನವು ಮುಂಬೈನಲ್ಲಿನ ಸಾಮಾಜಿಕ, ಆರ್ಥಿಕ, ರಾಜಕೀಯದ ಕಾರ್ಯ ವಿಧಾನಗಳಿಂದ ಅಲ್ಲಿನ ಬಡ ಜನರನ್ನು ಹೊರಗಟ್ಟಿರುವುದರ ಬಗ್ಗೆ ತಿಳಿಸುತ್ತದೆ.

ವಿಟ್ಸ್ ರವರು ವಾದಿಸುವುದೇನೆಂದರೆ ಮದ್ರಾಸನಂತಹ ಜಾಗಗಳಲ್ಲಿಯು ಸರ್ವವ್ಯಾಪಿತ್ವವಾದ ಔಪಚಾರಿಕತೆಯು ಎದ್ದು ಕಾಣುತ್ತದೆ. ಮತ್ತು ಸ್ಥಳೀಯ ಪ್ರಜಾಪ್ರಭುತ್ವದ ಆಕರಗಳ ಸೇವೆಗಳ ವಿತರಣೆಯು ಅಲ್ಲಿನ ಬಡ ಜನರನ್ನೇ ಹೊರಗಟ್ಟಿವೆ. ಡಿ ವಿಟ್ಸ್ ರವರು ಪ್ರಜಾಪ್ರಭುತ್ವದ ತಿಳುವಳಿಕೆಯ ಹಲವಾರು ಕೊಡುಗೆಗಳನ್ನು ನೀಡಿದ್ದಾರೆ. ಹೇಗೆಂದರೆ ವಿವರವಾದ ಮುಂಬೈ ನಗರದ ಆಡಳಿತದ ಬಗ್ಗೆ ಮಾಹಿತಿಯನ್ನು ನೀಡಿ ಮತ್ತು ಅವರು ದೇಶೀಯ ಪ್ರಜಾಪ್ರಭುತ್ವಗಳ ಬಗ್ಗೆ ಅಧ್ಯಯನ ಮಾಡಿ ಹಲವು ರೀತಿಯ ಅರಿವನ್ನು ಮೂಡಿಸಿದ್ದಾರೆ.(Michelutti-2007) ಹೊಸ ವಸಾಹತು ಪ್ರಜಾಪ್ರಭುತ್ವಗಳ ಅವುಗಳ ಸ್ವಂತ ನಿಯಮಗಳ ಬಗ್ಗೆ ತಿಳಿಯುವುದು ಅಗತ್ಯವಿದೆ. ಡಿ ವಿಟ್ಸ್ ರವರ ದೃಷ್ಟಿಕೋನವು ಬಡವರ ಮತ್ತು ನಗರದ ಸಂಸ್ಥೆಗಳ ವ್ಯಾಪಕವಾದ ಪ್ರಾಯೋಜಕತ್ವದ ವಾದಗಳ ನಡುವಿನ ಸಂಬಂಧಗಳನ್ನು ಬಹಿರಂಗ ಪಡಿಸುತ್ತದೆ ಮತ್ತು ಅವರ ಗುರಿ ಬಡವರಿಗೆ ಅಧಿಕಾರ ಒದಗಿಸುವುದಾಗಿದೆ. ಮುಂಬೈ ನಗರದ ಬಗ್ಗೆ ಅಲ್ಲಿನ ಆಡಳಿತ, ಪ್ರಜಾಪ್ರಭುತ್ವ ಮತ್ತು ನಗರದ ಬಡತನದ ಬಗ್ಗೆ ಪುಸ್ತಕಗಳಲ್ಲಿ ಬರೆದರೆ ಅವುಗಳನ್ನು ಓದುವುದರಿಂದ ವಿದ್ವಾಂಸರಿಗೆ, ವಿದ್ಯಾರ್ಥಿಗಳಿಗೆ ಇವುಗಳ ಬಗ್ಗೆ ಅರಿವು ಮೂಡುತ್ತದೆ.[೫೧]

ಜನೇವರಿ 20-2018 ರ Economic and Political weekly Vol- LIII No 03 Pg No-67-76 ರಲ್ಲಿ K.C Smita, Barun Deb pal ರವರ SPATIAL REPRODUCTION OF URBAN POVERTY IN GLOBAL CITY GENDER, Informality and mobility in Bengaluru. ಲೇಖನದಲ್ಲಿ ಬೆಂಗಳೂರಿನ ಎರಡು ಕೊಳೆಗೇರಿಗಳಿಂದ ಹೊರಹಾಕಲ್ಪಟ್ಟ ಕೊಳೆಗೇರಿ ನಿವಾಸಿಗಳಿಗೆ ಸ್ಥಳಾಂತರ ಮತ್ತು ಪುರ್ನವಸತಿಗಳ ಪರಿಣಾಮವನ್ನು ನಗರದ ಮೆಟ್ರೊ ರೈಲು ನಿರ್ಮಾಣಕ್ಕೆ ಅನುಕೂಲವಾಗುವಂತೆ ಈ ಅಧ್ಯಯನ ಪರಿಶೋಧಿಸುತ್ತದೆ. ಲೇಖಕರು ಅನೇಕ ಸಂಶೋಧನಾ ಲೇಖನಗಳನ್ನು ಉಲ್ಲೇಖವಾಗಿಟ್ಟುಕೊಂಡು ಈ ಲೇಖನ ರಚಿಸಿದ್ದಾರೆ. ಅನೇಕ ನಗರಗಳ ಸ್ಥಿತಿಯನ್ನು ವಿವರಿಸುತ್ತಾರೆ ನಗರ ಬಡತನವು ಸಂಭವಿಸುವ ರೀತಿ ಮತ್ತು ಅದು ಲಿಂಗವನ್ನು ಆಧಾರಿಸಿರುವುದನ್ನು ಪ್ರಸ್ತಾಪಿಸುತ್ತಾರೆ. ನಗರಗಳಲ್ಲಿ ಸ್ಲಮ್‌ಗಳು ಸ್ಥಳಾಂತರಗೊಂಡಾಗ ಅಲ್ಲಿ ಆಗುವ ಸಮಸ್ಯೆಗಳೇನು? ಎನ್ನುವುದನ್ನು ವಿವರಿಸುತ್ತಾರೆ. ಪ್ರಮುಖವಾಗಿ ಕೆಲವು ನಗರಗಳಲ್ಲಿ ಸ್ಥಳಾಂತರಗೊಂಡಾಗ ಎಲ್ಲರಿಗೂ ಕೂಡಾ ವ್ಯವಸ್ಥಿತವಾಗಿ ಸೌಕರ್ಯಗಳನ್ನು ಕೊಡಲಾಗುವುದಿಲ್ಲ. ಹಲವಾರು ಸಮಸ್ಯೆಗಳನ್ನು ಅವರು ಎದುರಿಸಬೇಕಾಗುತ್ತದೆ. ಅದರಲ್ಲಿ ಪ್ರಮುಖವಾಗಿ ನಗರದಿಂದ ದೂರದ ಪ್ರದೇಶಗಳಲ್ಲಿ ಈ ಸ್ಥಳಾಂತರ ಪ್ರಕ್ರಿಯೆ ನಡೆಯುತ್ತದೆ. ಸ್ಥಳದ ಬದಲಾವಣೆಯಾದಾಗ ಅವರ ಆರ್ಥಿಕ, ಸಾಮಾಜಿಕ ಬದಲಾವಣೆ ಕಾಣುತ್ತೇವೆ. ಅವರು ಆ ಪ್ರದೇಶದಲ್ಲಿ ಮೊದಲನೇಯದಾಗಿ ಉದ್ಯೋಗದ ಸಮಸ್ಯೆಯನ್ನು ಅನುಭವಿಸುತ್ತಾರೆ. ಅವರು ಮೊದಲು ಮಾಡುವ ಉದ್ಯೋಗ ಮತ್ತು ಅವರು ಸ್ಥಳಾಂತರಗೊಂಡ ಪ್ರದೇಶದ ಉದ್ಯೋಗ ಬೇರೆ ಬೇರೆಯಾದಾಗ, ಹಳೆಯ ಉದ್ಯೋಗವನ್ನು ಅರಸಿಕೊಂಡು ಅದೇ ಸ್ಥಳಕ್ಕೆ ಹೋಗಬೇಕಾದ ಸ್ಥಿತಿ ಒದಗುತ್ತದೆ. ಇಲ್ಲಿ ಪ್ರಯಾಣ ವೆಚ್ಚದ ಹೊರೆ ಅವರ ಮೇಲೆ ಬೀಳುತ್ತದೆ. ಇದು ಅವರ ಬಡತನವನ್ನು ಹೆಚ್ಚಿಸುತ್ತದೆ. ಆರೋಗ್ಯದ ಮೇಲೂ ಪರಿಣಾಮ

ಬೀರುತ್ತದೆ. ಪ್ರತಿಯೊಂದರ ಹುಡುಕಾಟದಲ್ಲಿ ಜೀವನ ಕಳೆಯುವ ಸ್ಥಿತಿ ಒದಗುತ್ತದೆ. ಶಾಶ್ವತವಾದ ನೆಲೆ ಸಿಗುವುದು ಕಷ್ಟ ಅಸಾಧ್ಯವಾದ ಕೆಲಸವಾಗಿದೆ.

ಬೆಂಗಳೂರು ಮೆಟ್ರೊ ರೈಲು ಕಾರ್ಪೋರೆಷನ್ ಪುನರ್ವಸತಿ ಪ್ಯಾಕೇಜ್ ಅನುಷ್ಠಾನದ ನಂತರ, ಸಾಮಾಜಿಕ-ಆರ್ಥಿಕ ಸ್ಥಿತಿ, ಜೀವನೋಪಾಯ ಸ್ಥಿತಿ ಮತ್ತು ಕೊಳೆಗೇರಿ ನಿವಾಸಿಗಳ ಚಲನಶೀಲತೆ, ವಿಶೇಷವಾಗಿ ಮಹಿಳೆಯರ ಮೇಲೆ ಸಂಭವಿಸಿದ ಬದಲಾವಣೆಯನ್ನು ಈ ಅಧ್ಯಯನವು ದಾಖಲಿಸುತ್ತದೆ. ಹೊಸ ಅಧ್ಯಯನದ ಪ್ರಕಾರ ಔದ್ಯೋಗಿಕ ಮತ್ತು ಆರ್ಥಿಕ ಚಲನಶೀಲತೆ ಮುಖ್ಯವಾಗಿ ಅಶಿಕ್ಷಿತ ಮತ್ತು ವಯಸ್ಸಾದ ಮಹಿಳೆಯರ ಮೇಲೆ ಗಂಭೀರವಾಗಿ ಪರಿಣಾಮ ಬೀರಿದೆ ಎಂದು ಈ ಸಂಶೋಧನೆಗಳು ಸ್ಪಷ್ಟವಾಗಿ ತೋರಿಸುತ್ತದೆ. ಇದರ ಪರಿಣಾಮವಾಗಿ ಕುಟುಂಬದ ಆದಾಯಕ್ಕೆ ಮಹಿಳಾ ಕೊಡುಗೆ ತೀವ್ರವಾಗಿ ಕಡಿಮೆಯಾಗಿದೆ. ಇದರಿಂದಾಗಿ ನಗರ ಬಡತನದ ಪ್ರಾದೇಶಿಕ ಮರು ಉತ್ಪಾದನೆಯನ್ನು ಹೆಚ್ಚಿಸುತ್ತದೆ. "ಮಿಲೆನಿಯಮ್-ಪ್ಲಸ್" ನಗರ ಎಂದು ಕರೆಯಲ್ಪಡುವ ಬೆಂಗಳೂರು ನಗರವು ಭಾರತದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ ಒಂದಾಗಿದೆ. ಮೆಟ್ರೊ ಯೋಜನೆ(ಮೂಲಸೌಕರ್ಯ)ಯಂತ ಅಭಿವೃದ್ಧಿ ಚಟುವಟಿಕೆಗಳಿಂದ ಉಂಟಾದ ಸ್ಥಳಗಳಲ್ಲಿ ಯಾವುದೇ ಬದಲಾವಣೆಗಳು ಪ್ರಾದೇಶಿಕ ಅಸಮಾನತೆಯನ್ನು ಶಾಶ್ವತವಾಗಿಸುತ್ತವೆ. ಪ್ರಾದೇಶಿಕ ಪುನರ್ರಚನೆಯ ಪರಿಣಾಮಗಳು ಬೆಂಗಳೂರಿನ ಕಳಪೆ ನಗರ ಮಹಿಳೆಯರ ಮೇಲೆ ಪರಿಣಾಮ ಬೀರಿದೆ ಎಂದು ಈ ಅಧ್ಯಯನವು ಸ್ಪಷ್ಟವಾಗಿ ತೋರಿಸುತ್ತದೆ. ಅನಿವಾರ್ಯ ಸತ್ಯವೆಂದರೆ ನಗರ ಯೋಜನೆಗಳಲ್ಲಿನ ಲಿಂಗ ಆಯಾಮವು ವಾಸ್ತವವಾಗಿ ಕಡೆಗಣಿಸಲ್ಪಟ್ಟಿದೆ. ನಗರದ ಯೋಜನೆ ಮತ್ತು ಅಭಿವೃದ್ಧಿ ಯೋಜನೆಗಳು ಮತ್ತು ಕಾರ್ಯಕ್ರಮಗಳ ವಿನ್ಯಾಸ ಯೋಜನೆ ಮತ್ತು ಅನುಷ್ಠಾನ ಪ್ರಕ್ರಿಯೆಯಲ್ಲಿ ಲಿಂಗ ಸೂಕ್ಷ್ಮ ಕ್ರಮಗಳನ್ನು ಸೇರಿಸುವುದು ಅಗತ್ಯವಾಗಿದೆ.[೫೨]

ಡಿಸೆಂಬರ 23,2017 ರವರ EPW Vol LII No 51 Pg No 97-107 ರಲ್ಲಿ Madushree Sekher, S Parasuraman Rai ರವರ EMPOWERING PEOPLE TO POWER THE PUBLIC DISTRUBUTION SYSTEM: A Process Mapping Analysis of six Indian States ಎಂಬ ಲೇಖನದಲ್ಲಿ ಆಸ್ಟ್ರೇಲಿಯಾದ ರಿಸರ್ಚ ಕೌನ್ಸಿಲ್ ಡಿಸ್ಕವರಿ ಪ್ರಾಜೆಕ್ಟ ಅನುದಾನ ಅಡಿಯಲ್ಲಿ ಸಿಡ್ನಿ ವಿಶ್ವವಿದ್ಯಾಲಯ ಮತ್ತು ಪಶ್ಚಿಮ ಆಸ್ಟ್ರೇಲಿಯಾದ ವಿಶ್ವವಿದ್ಯಾಲಯಗಳೊಂದಿಗೆ ಮುಂಬೈಯ ಟಾಟಾ ಇನ್ಸಿಟ್ಯೂಟ ಆಪ್ ಸೋಸಿಯಲ ಸೈನ್ಸನ ಸಂಶೋಧನಾ ಉಪಕ್ರಮದ ಫಲಿತಾಂಶವಾಗಿದೆ. ಇದು ಭಾರತದ ಆರು ರಾಜ್ಯಗಳಲ್ಲಿ ನಡೆದ ಅಧ್ಯಯನವಾಗಿದೆ. ಭಾರತದಲ್ಲಿ ಜನಸಂಖ್ಯೆ ಎದುರಿಸುತ್ತಿರುವ ಆಹಾರ ಮತ್ತು ಪೌಷ್ಟಿಕಾಂಶ ಅಭದ್ರತೆಗೆ ಹಾನಿಯನ್ನು ಉಂಟುಮಾಡಿದೆ. ಭಾರತದ ಆಹಾರ ಮತ್ತು ಪೌಷ್ಟಿಕಾಂಶ ಅಭದ್ರತೆಗೆ ಹಾನಿ ಉಂಟುಮಾಡಿದೆ ಭಾರತದ ಆಹಾರ ಭದ್ರತಾ ಉಪಕ್ರಮಗಳ ಹೃದಯ ಭಾಗದಲ್ಲಿರುವ ಸಾರ್ವಜನಿಕ ವಿತರಣಾ ವ್ಯವಸ್ಥೆಯು ಫಲಾನುಭವಿಗಳ ಪರಿಣಾಮಕಾರಿ ಗುರಿಗಳಿಂದ, ಆಹಾರ ಧಾನ್ಯಗಳ ಭ್ರಷ್ಟಾಚಾರ ಮತ್ತು ಸುಲಿಗೆ ಮಾಡುವುದು ಮುಂತಾದ ತೊಂದರೆಗಳಿಂದ ಹಾನಿಗೊಳಗಾಯಿತು. ೨೦೧೨ ರಲ್ಲಿ ಭಾರತವು ಅತಿ ದೊಡ್ಡ ಅಕ್ಕಿ

ರಫ್ತುದಾರ (MOHINDRU-2012) ದೇಶವಾದ ಥೈಲ್ಯಾಂಡನ್ನ ಹಿಂದಿಕ್ಕಿತ್ತು. ಮತ್ತು ೨೦೧೩-೨೦೧೪ ನೇ ಸಾಲಿನಲ್ಲಿ ದೇಶವು ಕೃಷಿ ಮತ್ತು ಇತರೇ ಕ್ಷೇತ್ರಗಳಲ್ಲಿ ಹೆಚ್ಚಿನ ಬೆಳವಣಿಗೆಗೆ ಪಾತ್ರವಾಯಿತು. ಇದು ದೀರ್ಘಾವಧಿಗೆ ಹೋಲಿಸಿದರೆ ೪.೭% ರಷ್ಟು ಸರಾಸರಿ (KPMG2014:1) ಇತ್ತು. ಆದರೆ ಅದೇ ಸಮಯದಲ್ಲಿ ಮಕ್ಕಳ ಅಪೌಷ್ಟಿಕತೆಯು ಕೇವಲ ೭% ರಷ್ಟು ಕಡಿಮೆಯಾಯಿತು. ೧೯೯೨ ಮತ್ತು೧೯೯೮ ರ ನಡುವೆ ೫೩% ರಿಂದ ೪೭% ಕ್ಕೆ ಇಳಿದಿದೆ; ೧೯೯೮ ಮತ್ತು ೨೦೦೫ ರ ನಡುವಿನ ಅವಧಿಯಲ್ಲಿ ಇಳಿಮುಖವು ಕೇವಲ ೦.೬% ನಷ್ಟಿತ್ತು (ಪಾಠಕ ಮತ್ತು ಸಿಂಗ ೨೦೧೧;೫೭೯).

ವಾಸ್ತವವಾಗಿ ಹಲವರು ಜಾಗತಿಕ ಪ್ರಯತ್ನಗಳ ಹೊರತಾಗಿಯೂ ನೂರಾರು ದಶಲಕ್ಷ ಭಾರತೀಯರಲ್ಲಿ ಆಹಾರ ಅಭದ್ರತೆಯ ಪ್ರಭುತ್ವದಲ್ಲಿ ಭಾರತದ ಜಾಗತಿಕವಾಗಿ ಹರಡಿರುವ ಬೆಳವಣಿಗೆಯ ಕಥೆಯ ವರ್ಚಸ್ಸಿನ ಸ್ವರೂಪವು ಸ್ಪಷ್ಟವಾಗಿ ಕಂಡು ಬರುತ್ತದೆ. ೨೦೧೩ ರಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆ(NFSA) ರವಾನಿಸುವುದನ್ನು ನೀತಿ ಕ್ರಮಗಳಿಗೆ ಇತ್ತೀಚಿನ ಸೇರ್ಪಡೆಯಾಗಿತ್ತು. (GOI-2013). NFSA ಹೃದಯಭಾಗದಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆ (PDS) ಇದು ವ್ಯಾಪಕವಾದ ಚರ್ಚೆ ಮತ್ತು ಟೀಕೆಯನ್ನು ಆಕರ್ಷಿಸಿದೆ. ಭಾರತದಲ್ಲಿ ಲಕ್ಷಾಂತರ ಜನರ ದಿನನಿತ್ಯದ ಆಹಾರ ಅವಶ್ಯಕತೆ ರಾಜ್ಯ ಕಲ್ಯಾಣ ಮತ್ತು ಆಹಾರದ ಸುರಕ್ಷತಾ ಸೂತ್ರಗಳ ಮೇಲೆ ಅವಲಂಬಿತವಾಗಿದೆ. ಈ ನಿಟ್ಟಿನಲ್ಲಿ ಸರಕಾರಿ ಸ್ವಾಮ್ಯದ ಪಿ.ಡಿ.ಎಸ್ ಸರ್ಕಾರದ ಉಪಕ್ರಮದ ಬೆನ್ನೆಲುಬಾಗಿದೆ. ವಿಶ್ವದ ಅತಿ ದೊಡ್ಡ ಆಹಾರ ವಿತರಣಾ ಯೋಜನೆಯೆಂದು ಮತ್ತು ಭಾರತ ಸರಕಾರ (ಸ್ವೆಡ್ಸರ್ಗ-೨೦೧೨) ನಡೆಸುತ್ತಿರುವ ಅತಿ ದೊಡ್ಡ ಆಹಾರ ಕ್ಷೇಮಾಭಿವೃದ್ಧಿ ಯೋಜನೆ ಎಂದು ಗುರುತಿಸಲ್ಪಟ್ಟಿದೆ. ಕಾರ್ಯಕ್ರಮದ ಜೀವಂತ ರಿಯಾಲಿಟಿ 'ರೇಷನ್' ಕಾರ್ಡಗಳು, ಸಬ್ಸಿಡಿ ಮಾಡಲಾದ ಆಹಾರ ಧಾನ್ಯಗಳ ಸಂಗ್ರಹಣೆ, ವಿತರಣೆ ಮತ್ತು ನ್ಯಾಯಯೋಚಿತ ಬೆಲೆ ಅಂಗಡಿಗಳು (ಎಸ್.ಪಿ.ಎಸ್) ಪಿ.ಡಿ.ಎಸ್ ಮಳಿಗೆಗಳಿಗೆ ಸ್ಥಳೀಯ ಡಿಪೋಗಳಾಗಿ ಕಾರ್ಯ ನಿರ್ವಹಿಸುತ್ತಿವೆ. ಇತ್ತೀಚಿನ ಅಧ್ಯಯನಗಳು ಕಡಿಮೆ ಕತ್ತಲೆಯಾದ ಚಿತ್ರವನ್ನು (ಡ್ರೆಸ್ ಮತ್ತು ಖೇರಾ ೨೦೧೫;ಖೇರಾ ೨೦೧೧) ಪ್ರಸ್ತುತ ಪಡಿಸುತ್ತವೆ. ಸೋರಿಕೆಗಳು ಅಧಿಕವಾಗಿದ್ದರು ಪಿ.ಡಿ.ಎಸ್ ಸುಧಾರಣೆಗಳ ಮೂಲಕ ಅಭಿವೃದ್ಧಿ ಪಡಿಸಿದ ಇತ್ತೀಚಿನ ವರ್ಷಗಳಲ್ಲಿ ಸುಧಾರಣೆಗಳ ಸಾಕ್ಷ್ಯಾಧಾರಗಳಿಗೆ ಅಧ್ಯಯನಗಳು ಸೂಚಿಸುತ್ತವೆ. ಉದಾಹರಣೆಗೆ ವಿಸ್ತರಿತ ಸರಳ ಆವೃತಿ ವ್ಯಾಪ್ತಿ ಮತ್ತು ಸೋರಿಕೆಗಾಗಿ ಸಂಭಾವ್ಯತೆಯನ್ನು ಕಡಿಮೆ ಮಾಡಲು ವಿವಿಧ ಇ-ಆಡಳಿತ ಸುಧಾರಣೆಗಳ ಬಳಕೆ ತಮಿಳುನಾಡು, ಛತ್ತೀಸಗಢ, ಮತ್ತು ಕರ್ನಾಟಕ ಮುಂತಾದ ರಾಜ್ಯಗಳು ಕೆಲವು ಹೆಸರನ್ನು ಹೊಂದಿವೆ.

ಭಾರತವು ಇದೀಗ "ಆಹಾರ ಹೆಚ್ಚುವರಿ" ರಾಷ್ಟ್ರವಾಗಿದ್ದು, ಭಾರತೀಯ ಆದಾಯ ಹೆಚ್ಚಾಗಿದೆ. ಹೀಗಿದ್ದರೂ ಇದು ಇನ್ನೂ ವಿಶ್ವದ ಹಸಿವಿನ ರಾಜಧಾನಿಯಾಗಿದ್ದು ಅದರ ಸುಮಾರು ೧.೧ ಶತಕೋಟಿ ಜನಸಂಖ್ಯೆ ಹಸಿವಿನಿಂದ ಕೂಡಿದ್ದಾರೆ (FAO 2012)(ವಿಶೇಷ ಲೇಖನ ೧೦೦ ಡಿಸೆಂಬರ ೨೩, ೨೦೧೭ Vol LI No 51 EPW ಫುಡ್ ಸೆಕ್ಯೂರಿಟಿ ಇನ್ ಇಂಡಿಯಾ) ಹೀಗಾಗಿ

ಒಂದು ಸವಾಲು ಆಹಾರ ಭದ್ರತೆಯನ್ನು ಹೆಚ್ಚಿಸಲು ಮತ್ತು ಸಾಧಿಸಲು ಎರಡು ದೃಷ್ಟಿಕೋನಗಳು ಇವೆ. ಮೊದಲಿಗೆ ಅತಃಸಂವೇದನೆ ಎಂದು ಅಸುರಕ್ಷತೆಯನ್ನು ಗ್ರಹಿಸುತ್ತದೆ ಮತ್ತು ಲಭ್ಯತೆ ಮತ್ತು ಆಹಾರದ ಪ್ರವೇಶವನ್ನು ಹೆಚ್ಚಿಸುವುದರ ಮೇಲೆ ಕೇಂದ್ರಿಕರಿಸುತ್ತದೆ ಮತ್ತು ಎರಡನೆಯದು ಆಹಾರ ವ್ಯವಸ್ಥೆಗಳ ವಿಧಾನ ಎಂದು ಕರೆಯಲ್ಪಡುತ್ತದೆ, ಇದು ಸಂಕೀರ್ಣ ವ್ಯವಸಾಯ ಸಮಸ್ಯೆಗಳನ್ನು (ಲ್ಯಾಂಗ ಮತ್ತು ಬಾರ್ಲಿಂಗ್-೨೦೧೨) ಪರಿಹರಿಸಲು ಪ್ರಯತ್ನಿಸುತ್ತದೆ. ಹಸಿರು ಕ್ರಾಂತಿಯ ನಂತರ ಕೃಷಿ ಉತ್ಪಾದನೆಯು ಬೆಳೆದಂತೆ ಪಿ.ಡಿ.ಎಸ್ ನ ಪ್ರಭಾವವು ಹೆಚ್ಚಿನ ಬಡತನದ ಗುರಿಯನ್ನು ಸಾಧಿಸಲು ವಿಸ್ತರಿಸಿತು. ೨೦೧೩ ರ ಅಂತ್ಯದ ವೇಳೆಗೆ ಭಾರತದಲ್ಲಿ ಆಹಾರ ಭದ್ರತೆ N.F.S.A ವನ್ನು ಜಾರಿಗೊಳಿಸಿತು. ೭೫% ಗ್ರಾಮೀಣ ಮತ್ತು ೫೦% ನಗರ ಮನೆಗಳಿಗೆ ಆಹಾರ ಧಾನ್ಯಗಳಿಗೆ ಕಾನೂನಿನ ಹಕ್ಕುಗಳನ್ನು ನೀಡಿತು.[೫೩]

ಜೂನ ೧೬ ೨೦೧೮ (EPW) VOL-LIII, NO 24 Pg No 36-39 ರಲ್ಲಿ SHAILAJA PAIK ರವರ New Dalit Women and Their Improper Politics.ಈ ಮೇಲಿನ ಹೊಸ ದಲಿತ ಮಹಿಳಾ ಮತ್ತು ಅವರ ಅಸಮರ್ಪಕ ರಾಜಕೀಯ. ಎಂಬ ಲೇಖನದಲ್ಲಿ ಮಹಿಳೆಯ ಮೀಸಲಾತಿ ಅಡಿಯಲ್ಲಿ ರಾಜಕೀಯದಲ್ಲಿ ಪಾಲ್ಗೊಂಡು ಯಾವ ರೀತಿ ಅಸಮರ್ಪಕ ರಾಜಕೀಯ ನಡೆಸುತ್ತಿದ್ದಾರೆ ಎನ್ನುವುದನ್ನು ಸ್ಪಷ್ಟಪಡಿಸುತ್ತಾರೆ. ವಿಭಿನ್ನ ದಲಿತ ಮಹಿಳೆಯರು ವಿಭಿನ್ನವಾಗಿ ಮಾತನಾಡುತ್ತಾರೆ. ಹೀಗಾಗಿ ನಿರ್ಣಾಯಕ ವ್ಯತ್ಯಾಸಗಳು ನಗರ, ವಿದ್ಯಾವಂತ, ಮಧ್ಯಮ ವರ್ಗ ಮತ್ತು ಮಹತ್ವಾಕಾಂಕ್ಷಿ ಮಧ್ಯಮ ವರ್ಗ ಮತ್ತು ಗ್ರಾಮೀಣ ದಲಿತ ಮಹಿಳಾ ಕಾರ್ಮಿಕರ ಮಧ್ಯ ಕಾಣುತ್ತದೆ. ಕೆಲವರು ದಲಿತ ಲೇಬಲನ್ನು ತಿರಸ್ಕರಿಸುವರು. ಕೆಲವರು ಹೆಮ್ಮೆಯಿಂದ ಅದನ್ನು ಅಳವಡಿಸಿಕೊಳ್ಳುತ್ತಾರೆ. ಅಲ್ಲದೆ ಬಿ.ಎಸ್.ಪಿ ಪಕ್ಷದ ಮಹಿಳಾ ಕಾರ್ಯಕರ್ತರು ಭಿನ್ನವಾಗಿ "ಗೃಹಿಣಿಯರು" ಎಂದು ಘೋಷಿಸಿದ್ದರು ಮತ್ತು ಗಂಡಂದಿರಿಂದ ಪ್ರೋತ್ಸಾಹದ ನಂತರ ಪಕ್ಷದೊಂದಿಗೆ ಸೇರ್ಪಡೆಯಾದರು. ಗೋಮಾಂಸ ತಿನ್ನುವುದು ಮತ್ತು ಡ್ರಮ್ಮಿಂಗ ಮೂಲಕ ಉನ್ನತ ಜಾತಿಯ ಮೌಲ್ಯಗಳ ಗೌಗವವನ್ನು ಅಳವಡಿಸಿಕೊಳ್ಳುವುದಿಲ್ಲ. ಇನ್ನೂ ಈ ಪ್ರಕ್ರಿಯೆ"ಸಂಸ್ಕೃತೀಕರಣ" ಅಲ್ಲ ಆದರೆ ದಲಿತರಂತೆ "ಪಿತೃಪ್ರಭುತ್ವದ ದಲಿತೀಕರಣ" ಎನ್ನುವುದು "ಗೌರವವನ್ನು ಸಂಸ್ಕೃತಿಕ ಪದ್ದತಿಯನ್ನು ಸ್ವಾಧೀನಪಡಿಸಿಕೊಳ್ಳುವುದು ಮತ್ತು ಪರಿವರ್ತಿಸುವುದು" ದಲಿತ ಮಹಿಳೆ ಸ್ವಾಯತ್ತತೆಯನ್ನು ಕಳೆದುಕೊಳ್ಳುವ ಸ್ಥಿತಿ ಒದಗಿದೆ. ಇದು ಹಲವಾರು ಲೇಖನಗಳನ್ನು ಹೊಂದಿರುವ ಸಮ್ಮಿಶ್ರವಾಗಿರುವ ಲೇಖನ ಕೆಲವೊಂದು ಲೇಖನಗಳಲ್ಲಿ ಮಹಿಳೆಯರು ಹಳೆಯ ಕಟ್ಟುಪಾಡುಗಳನ್ನು ಮುರಿದು ಹೊರ ಬಂದಿರುವುದನ್ನ ವಾದಿಸುತ್ತಾರೆ. ಈ ಅಧ್ಯಾಯಗಳು ತಮಿಳನಾಡು ಮತ್ತು ಉತ್ತರ ಪ್ರದೇಶ ಎರಡು ರಾಜ್ಯಗಳ ಮೇಲೆ ಗಮನ ಕೇಂದ್ರಿಕರಿಸುತ್ತವೆ ಜಾತಿವಿರೋಧಿ ತೀವ್ರಗಾಮಿತ್ವದ ಇತಿಹಾಸಗಳು ಇದು ಭಾರತದಲ್ಲಿ ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದದ ರಾಜ್ಯಗಳ ಮೇಲೆ ಹೆಚ್ಚು ಕೆಲಸ ಮಾಡಲು ಕರೆನೀಡುತ್ತದೆ. "ಪರ್ಯಾಯ ರಾಜಕಾರಣ" ದೊಂದಿಗೆ ಮುಂದುವರಿದ ಚಳುವಳಿಗಾರ ಮತ್ತು ಕಾರ್ಯಕರ್ತ ನಿಶ್ಚಿತಾರ್ಥವು ದಲಿತರು ಮತ್ತು ದಲಿತ ಅಲ್ಲದ ಮಹಿಳಾ ಮುಖಂಡರ ಭವಿಷ್ಯ

ಮತ್ತು ಪರ್ಯಾಯ ಲೋಕಗಳನ್ನು ಉಂಟುಮಾಡಬಹುದು ಎಂದು ನಾವು ನಂಬಬಹುದು. ದಲಿತರ ಸಮಕಾಲೀನ ಮಾಧ್ಯಮಗಳು, ದೊಡ್ಡದಾದ ಐತಿಹಾಸಿಕ ಸಂದರ್ಭಗಳು, ಅನಿಶ್ಚಯತೆಗಳು, ಮತ್ತು ಆಳವಾದ ಇತಿಹಾಸ ಕಳಂಕದ ವಿರುದ್ದ ಕಲಹ ದಲಿತ ಮಹಿಳೆಯರ ಸಾಮಾಜಿಕ ಮತ್ತು ಲೈಂಗಿಕ ಅವಮಾನ ಮತ್ತು ಶತಮಾನಗಳವರೆಗೆ ದಲಿತ ಪುರುಷರ ಅನುರೂಪತೆಗಳನ್ನು ಅರ್ಥೈಸಿಕೊಳ್ಳಬೇಕು. ಸಮಕಾಲೀನ ಅವಧಿಗೆ ಸಾಮಾಜಿಕ ವಿಜ್ಞಾನಿಗಳು ತಮ್ಮ ಪ್ರಾಥಮಿಕ ಕಾಳಜಿಗೆ ಮಿತಿಗಳನ್ನು ಎದುರಿಸುತ್ತಾರೆ. ಅದೇನೇ ಇದ್ದರೂ ದಕ್ಷಿಣ ಏಷ್ಯಾ ಸ್ಟುವಿನ ದೊಡ್ಡದಾದ ಮರು ಹುಟ್ಟುಗಳು, ಭಾರತ ಸ್ಟಡಿಸ್, ದಲಿತ ಅಧ್ಯಯನಗಳು ಮತ್ತು ಲಿಂಗ ಅಧ್ಯಯನಗಳು ಮರುರೂಪಿಸುವ ದಲಿತ ಮಹಿಳಾ ರಾಜಕೀಯ ಆಚರಣೆಗಳಿಗೆ ವ್ಯಾಲ್ಯೂಮ್ ಕೊಡುಗೆ ನೀಡುತ್ತದೆ ಏಕೆಂದರೆ ಅವರ ದೃಷ್ಟಿಕೋನಗಳು ಆಳವಾದ ಪ್ರಜಾಪ್ರಭುತ್ವವನ್ನು ಹೊಂದಿದೆ. ದಲಿತರಲ್ಲದವರಂತೆ ದಲಿತರು "ನೆರೆಹೊರೆಯವರು ಮತ್ತು ಸಂವಹನ ಅನುಭವ" ಅಭ್ಯಾಸಗಳ ಮೇಲೆ ಕೆಲಸ ಮಾಡುತ್ತಾರೆ. ಮತ್ತು ಅವುಗಳು ಸುತ್ತುವರೆದಿರುವ ಮತ್ತು ಪರಾನುಭೂತಿಯ ದೃಷ್ಟಿಕೋನವನ್ನು ಒದಗಿಸುತ್ತವೆ.[೫೪]

ಡಾ.ಟಿ.ಆರ್ ಚಂದ್ರಶೇಖರ್(೨೦೧೦) ರವರ ಧರೆ ಹತ್ತಿ ಉರಿದರೆ ಎಂಬ ಪುಸ್ತಕ ನಾವು,ನಮ್ಮ ಜನತಂತ್ರ, ಅಭಿವೃದ್ಧಿ ಮತ್ತು ಶಿಕ್ಷಣ ಎಂಬ ಲೇಖನದಲ್ಲಿ ಪ್ರಾಥಮಿಕ ಶಿಕ್ಷಣ (ಪ್ರಾ.ಶಿ.)ದ ಹೆಸರೇ ಸೂಚಿಸುವಂತೆ ಅದು 'ಪ್ರಾಥಮಿಕ'ವಾದುದಾಗಿದೆ.ಅಂತಹ ಪ್ರಾಥಮಿಕವೆನ್ನಬಹುದಾದ ಸಂಗತಿಯನ್ನು ಜನರಿಗೆ ಒದಗಿಸುವುದು ನಮಗೆ ಸಾಧ್ಯವಾಗದಿರುವುದು ನಮ್ಮ ಆಡಳಿತ ವ್ಯವಸ್ಥೆಯ ಬಗೆಗಿನ, ಜನತಂತ್ರದ ಬಗೆಗಿನ ಅತ್ಯಂತ ಸೌಮ್ಯ ಟೀಕೆಯಾಗಿದೆ. ನಮ್ಮ ಸಂದರ್ಭದಲ್ಲಿ ಅದು ಪ್ರಾಥಮಿಕವಾಗಿದ್ದಂತೆ ಕಾಣುವುದಿಲ್ಲ. ಅನೇಕ ಅಧ್ಯಯನಗಳು ದೃಢಪಡಿಸಿರುವಂತೆ ಸ್ವಾತಂತ್ರ್ಯ ನಂತರದ ನಮ್ಮ ಬಹುಮುಖ್ಯವಾದ ಸಾಮಾಜಿಕ ವೈಫಲ್ಯವೆಂದರೆ ಅದು ಪ್ರಾಥಮಿಕ ಶಿಕ್ಷಣವಾಗಿದೆ(ಜೀನ್ ಡ್ರೀಜ್, ಅಮರ್ತ್ಯಸೇನ್ ೨೦೦೨).ಸಾಕ್ಷರತೆ ಮತ್ತು ಪ್ರಾ.ಶಿ. ಕುರಿತಂತೆ ಅದೆಷ್ಟು ಕಾಲಮಿತಿಗಳನ್ನು ನಾವು ಹಾಕಿಕೊಂಡಿದ್ದೆವು ಎಂಬುದು ನಮಗೆ ಮರೆತೆ ಹೋಗುವಷ್ಟರ ಮಟ್ಟಿಗೆ ಅಲ್ಲಿ ಕಾಲ ವಿಳಂಬವಾಗಿದೆ. ಸಂವಿಧಾನದ ಕಾಲಮಿತಿ, ಮಸೂದೆಗಳ ಕಾಲಮಿತಿ, ಕಾರ್ಯಕ್ರಮಗಳ ಕಾಲಮಿತಿಗಳೆಲ್ಲವೂ ಮೀರಿ ಹೋಗುತ್ತಿವೆ. ಸಾಕ್ಷರತೆ ಆಂದೋಲನವಾಯಿತು, ಶಿಕ್ಷಣದ ಸಾರ್ವತ್ರೀಕರಣವಾಯಿತು, ಡಿ.ಪಿ.ಈ.ಪಿ ಯಾಯಿತು. ಈಗ ಸರ್ವ ಶಿಕ್ಷಣ ಅಭಿಯಾನ ಬಂದಿದೆ, ಅತ್ಯಂತ ದುರಂತದ ಸಂಗತಿಯೆಂದರೆ ಸರ್ವಶಿಕ್ಷಣ ಅಭಿಯಾನವನ್ನು ನಾವು ಅತ್ಯಂತ ಯಶಸ್ವಿಯಾಗಿ ಮತ್ತು ವ್ಯವಸ್ಥಿತವಾಗಿ 'ಕಾಂಟ್ರಾಕ್ಟಗಿರಿ'-ಕಾಮಗಾರಿ ಮಟ್ಟಕ್ಕೆ ಇಳಿಸಿದ್ದೇವೆ. ಎಸ್.ಡಿ.ಎಮ್.ಸಿ ಎನ್ನುವುದು ಎಮ್.ಎಲ್.ಎ ಗಳಿಗೆ ರಾಜಕೀಯ ಪುಢಾರಿಕೆ ಬೆಳೆಸುವ ತರಬೇತಿ ವೇದಿಕೆಯಾಗಿದೆ. ಸಮುದಾಯ ಸಹಭಾಗಿತ್ವವೆಂಬುವುದು ಶಾಲಾ ಪ್ರಪಂಚದೊಳಗೆ ಪಟ್ಟಭದ್ರ ಹಿತಾಸಕ್ತಿಗಳ ಪ್ರವೇಶಕ್ಕೆ ಹೆಬ್ಬಾಗಿಲಾಗಿದೆ ಸಾಕ್ಷರತೆ ಮತ್ತು ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರಾದೇಶಿಕ ಅಸಮಾನತೆಯ ಬಗ್ಗೆ ಏನನ್ನು ಹೇಳದಿರುವುದೇ ವಾಸಿ ಎನ್ನುವಂತೆ ಪರಿಸ್ಥಿತಿ ಇದೆ. ಶಿಕ್ಷಕರ ತರಬೇತಿ ಸಂಸ್ಥೆಗಳು ಕಾರ್ಖಾನೆಗಳಲ್ಲಿ

ಸರಕುಗಳನ್ನು ಉತ್ಪಾದಿಸುವಂತೆ ಶಿಕ್ಷಕರನ್ನು ಉತ್ಪಾದಿಸುತ್ತಿವೆ. ಈ ದಿಶೆಯಲ್ಲಿ ಸರಕಾರವು ತನ್ನ ಜವಾಬ್ದಾರಿಯನ್ನು ಸಂಪೂರ್ಣವಾಗಿ ಕೈಬಿಟ್ಟಿದೆ.

ಬಡವರ, ವಂಚಿತರ, ಅಂಚಿನಲ್ಲಿರುವವರ ಅನುಕೂಲಕ್ಕಾಗಿ ಪ್ರಗತಿಪರ ಶಕ್ತಿಗಳ ಹೋರಾಟದ ಫಲವಾಗಿ ಮತ್ತು ನ್ಯಾಯಾಲಯಗಳ ಒತ್ತಡಗಳಿಂದಾಗಿ ಹಾಗೂ ಮಧ್ಯಪ್ರವೇಶದಿಂದಾಗಿ ಆರಂಭಗೊಂಡ ಅನೇಕ ಕಾರ್ಯಕ್ರಮಗಳನ್ನು ಖಾಸಗಿ ಸಂಸ್ಥೆಗಳು, ಮಠ–ಮಾನ್ಯಗಳು, ಕಾರ್ಪೊರೇಟ್ ತಿಮಿಂಗಲಗಳು ಲಪಟಾಯಿಸುತ್ತವೆ. ಇದಕ್ಕೆ 'ಅಕ್ಷರ ದಾಸೋಹ'ವೆ ಸಾಕ್ಷಿ! ಪ್ರಾಥಮಿಕ ಶಿಕ್ಷಣವೆನ್ನುವುದನ್ನು ಜನರ ಹಕ್ಕನ್ನಾಗಿ ಮಾಡಲು ಒಂದುಕಡೆ ಪ್ರಯತ್ನ ನಡೆಯುತ್ತಿದ್ದರೆ ಇನ್ನೊಂದು ಕಡೆ ಅದನ್ನು ಉಳ್ಳವರ ದಾನ, ದತ್ತಿ, ಉಂಬಳಿಯನ್ನಾಗಿ 'ಹಂಗಿನ' ಸಂಗತಿಯನ್ನಾಗಿ ಮಾಡುವ ಹುನ್ನಾರ ನಡೆದಿದೆ. ಅಕ್ಷರ ದಾಸೋಹವು ಮಕ್ಕಳ ಹಕ್ಕು. ಆದರೆ ಅದನ್ನು ಇಸ್ಕಾನ್‌ನವರು ಹಂಗಿನ, ಭಿಕ್ಷೆಯ ಸಂಗತಿಯನ್ನಾಗಿ ಮಾಡುತ್ತಿದ್ದಾರೆ. ಈ ಬಗೆಯ ಸಂಸ್ಥೆಗಳು ಮಕ್ಕಳನ್ನು ದೇಶದ ಪ್ರಜೆಗಳನ್ನಾಗಿ–ಅಭಿವೃದ್ಧಿಯ ಹಕ್ಕುದಾರರನ್ನಾಗಿ ನೋಡುವುದಕ್ಕೆ ಪ್ರತಿಯಾಗಿ ಅವರನ್ನು ಭಿಕಾರಿಗಳಂತೆ, ರೋಗಿಗಳಂತೆ ಫಲನುಭವಿಗಳಾಗಿ ನೋಡುತ್ತಿವೆ. ಅವರಿಗಾಗಿ ಇಸ್ಕಾನ್‌ನವರು ವಿದೇಶಗಳಲ್ಲಿ ಭಾರತೀಯ ಪ್ರಜೆಗಳ ಹೆಸರಿನಲ್ಲಿ ಭಿಕ್ಷೆ ಬೇಡಿ ಹಣ ಸಂಗ್ರಹಿಸುತ್ತಿದ್ದಾರೆ. ಇದು 'ಹಂಗಿನ ಅಭಿವೃದ್ಧಿ' ಯಾಗುತ್ತದೆ ವಿನಾ 'ಹಕ್ಕಿನ ಅಭಿವೃದ್ಧಿ' ಯಾಗುವುದಿಲ್ಲ. ಶಾಲೆಗೆ ಮಕ್ಕಳು ಬಾರದಿದ್ದರೆ, ಮಕ್ಕಳು ಶಾಲೆಯನ್ನು ಮಧ್ಯದಲ್ಲಿ ಬಿಟ್ಟರೆ, ಬಾಲಕಿಯರ ದಾಖಲಾತಿ ಕಡಿಮೆಯಿದ್ದರೆ–ಹೀಗೆ ಪ್ರತಿಯೊಂದಕ್ಕೂ ಮಕ್ಕಳ ಪಾಲಕರ 'ಬಡತನ'ವನ್ನು ಕಾರಣ ಮಾಡಿ ಅಧಿಕಾರಿಗಳು, ಜನಪ್ರತಿನಿಧಿಗಳು ತಮ್ಮ ಕೈತೊಳೆದುಕೊಳ್ಳುತ್ತಿದ್ದಾರೆ. ಇವೆಲ್ಲಾ ಯಾರಿಗೂ ತಿಳಿಯದ ಸಂಗತಿಗಳೇನಲ್ಲ. ಇದು ತಿಳಿದು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಕ್ರಮ ತೆಗೆದುಕೊಳ್ಳದಿದ್ದರೆ ಅದಕ್ಕೆ ಏನೆನ್ನುವುದು? ಸಮಸ್ಯೆ ಗೊತ್ತಿದೆ. ಮಕ್ಕಳ ಶಿಕ್ಷಣದ ಜವಾಬ್ದಾರಿಯನ್ನು ಬಡಕುಟುಂಬಗಳ ಪಾಲಿಗೆ ಬಿಟ್ಟರೆ ಅದು ಬಗೆಹರಿವುದಿಲ್ಲವೆಂಬುವುದು ಸ್ಪಟಿಕದಷ್ಟು ಸ್ಪಷ್ಟವಾಗಿರುವಾಗ ಅದರ ಬಗ್ಗೆ ಸಮಾಜ ಮತ್ತು ಸರಕಾರ ಹೆಗಲು ಕೊಡದಿದ್ದರೆ–ಜವಾಬ್ದಾರಿ ಹೊರದಿದ್ದರೆ ಮತ್ತಾರು ಆ ಕೆಲಸ ಮಾಡಬೇಕು? ಒಟ್ಟಾರೆ ಪ್ರಾಥಮಿಕವೆನ್ನಬಹುದಾದ ಒಂದು ಸಂಗತಿಯನ್ನು ನಮಗೆ ಗಂಭೀರವಾಗಿ ನಿರ್ವಹಿಸುವುದು ಸಾಧ್ಯವಾಗಿಲ್ಲ. ಇದು ಪ್ರಪಂಚದ ಅತೀ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತಕ್ಕೆ ಶೋಭೆ ತರುವಂತಹ ಸಂಗತಿಯಲ್ಲ. ಪ್ರಸ್ತುತ ಪ್ರಬಂಧದಲ್ಲಿ ನಮ್ಮ ರಾಜ್ಯದಲ್ಲಿರುವ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿ ಕುರಿತಂತೆ, ಅದರ ಪ್ರಾದೇಶಿಕ ನೆಲೆಗಳ ಬಗ್ಗೆ ಮತ್ತು ಅಭಿವೃದ್ಧಿಯ ವಿಕೃತಿಗಳ ಬಗ್ಗೆ ಕೆಲವು ಸಂಗತಿಗಳನ್ನು ಚರ್ಚಿಸಲು ಪ್ರಯತ್ನಿಸಲಾಗಿದೆ.[೫೫]

ಡಾ.ಸಿ.ಆರ್ ಗೋಪಾಲ್(೨೦೧೮)ರವರ ಸಮುದಾಯ ಸಂಘಟನೆ, ನಿರುತ ಪಬ್ಲಿಕೇಷನ್ ಬೆಂಗಳೂರು. ಈ ಕೃತಿಯಲ್ಲಿ ನಗರ ಸಮುದಾಯಗಳ ಸಮಸ್ಯೆಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸಿದ್ದಾರೆ ಗ್ರಾಮೀಣ ಪ್ರದೇಶದ ಸಮಸ್ಯೆಗಳಾದ ಲಿಂಗ ತಾರತಮ್ಯ, ನಿರಕ್ಷರತೆ, ಆರೋಗ್ಯ, ವಸತಿ, ಜನಸಂಖ್ಯೆ, ಬಾಲಕಾರ್ಮಿಕರು, ಜೀತದಾಳುಗಳು, ಅಸ್ಪೃಶ್ಯತೆ, ಮದ್ಯಪಾನ, ನಿರುದ್ಯೋಗ, ಮೂಡನಂಬಿಕೆ,

ನಾಗರಿಕ ಸೌಲಭ್ಯಗಳಕೊರತೆ ಮುಂತಾದ ಸಮಸ್ಯೆಗಳನ್ನು ನಗರ ಸಮುದಾಯಗಳಿಗೆ ಅನ್ವಯಿಸಬಹುದಾಗಿದೆ ಇವುಗಳೊಂದಿಗೆ ಜನಸಾಂದ್ರತೆ, ವಸತಿ, ಕೊಳಗೇರಿಗಳು, ನೀರು ಪೂರೈಕೆ ಹಾಗೂ ಒಳಚರಂಡಿವ್ಯವಸ್ಥೆ, ಮಾಲಿನ್ಯತೆ, ಸಾಗಾಣಿಕೆ, ಮತ್ತು ಸಂಚಾರ, ವಿದ್ಯುಚ್ಛಕ್ತಿ, ಅನಿಶ್ಚಿತತೆ, ವಿಹಾರಗಳಿಗೆ ಅವಕಾಶ. ಇವು ಜ್ವಲಂತ ಸಮಸ್ಯೆಗಳಾಗಿ ನಗರಗಳನ್ನು ಕಾಡುತ್ತಿರುವುದನ್ನು ನಾವು ಕಾಣುತ್ತೇವೆ. ನಗರ ಸಮಸ್ಯೆಗಳಲ್ಲಿ ಒಂದಾದ ಜನಸಾಂದ್ರತೆ ನಗರಗಳಲ್ಲಿ ಜನಸಾಂದ್ರತೆ ಪ್ರತಿ ಚದರ ಕಿಲೋಮೀಟರಿಗೆ ೪೦೦ ಜನಕ್ಕಿಂತ ಹೆಚ್ಚಿರುತ್ತದೆ ಮಹಾನಗರಗಳಲ್ಲಿ ಮತ್ತು ಬೃಹತ ನಗರಗಳಲ್ಲಿ ಇದು ೨೦೦೦-೩೦೦೦ಮತ್ತು ೩೦೦೦-೫೦೦೦ ಇದೆ ಎಂದು ಅಂದಾಜಿಸಲಾಗಿದೆ. ಬಹಳವೇಗವಾಗಿ ಪಟ್ಟಣಗಳು ನಗರಗಳಾಗಿ ನಗರಗಳು ಮಹಾನಗರಗಳಾಗಿ ಮತ್ತು ಮಹಾನಗರಗಳು ಬೃಹತ ನಗರಗಳಾಗಿ ಪರಿವರ್ತನೆಗೊಳ್ಳುತ್ತಿವೆ ಇದಕ್ಕೆ ವಲಸೆ ಪ್ರಮುಖ ಕಾರಣವಾಗುತ್ತದೆ ಹಾಗಾಗಿ ನಗರಗಳಲ್ಲಿ ಇಷ್ಟು ಶೀಘ್ರವಾಗಿ ಬೆಳೆಯುತ್ತಿರುವ ಜನಸಂಖ್ಯೆಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಈ ಜನಸಂಖ್ಯೆ ಹೆಚ್ಚಾದಾಗ ಎಲ್ಲ ಸಮಸ್ಯೆಗಳು ಉದ್ಭವಿಸುತ್ತವೆ. ಜನಸಂಖ್ಯೆಯನ್ನ ಎಲ್ಲಾ ಸಮಸ್ಯೆಗಳ ಆಗರವೆಂದು ಕರೆದರೆ ತಪ್ಪಾಗಲಾರದು.[೫೬]

ಡಾ.ಟಿ.ಆರ್ ಚಂದ್ರಶೇಖರ್(೨೦೦೩) ರವರ ಕರ್ನಾಟಕ ಅಭಿವೃದ್ಧಿಯ ಸಾಮಾಜಿಕ ನೆಲೆಗಳು ಎಂಬ ಕೃತಿಯಲ್ಲಿ ಅಭಿವೃದ್ಧಿಯ ಸಾಮಾಜಿಕ ನೆಲೆಗಳು ಎಂಬ ಲೇಖನದಲ್ಲಿ ಅಭಿವೃದ್ಧಿಯನ್ನು ಅಖಂಡ ಪ್ರಕ್ರಿಯೆಯಾಗಿ ಮತ್ತು ಮೌಲ್ಯ ನಿರಪೇಕ್ಷ ಹಾಗೂ ಲಿಂಗ ನಿರಪೇಕ್ಷ ನೆಲೆಗಳಲ್ಲಿ ಪರಿಭಾವಿಸಿಕೊಂಡು ಬರಲಾಗಿದೆ. ಸಾಂಪ್ರದಾಯಿಕವಾಗಿ ಅದನ್ನು ವರಮಾನ-ಉತ್ಪನ್ನಗಳಿಗೆ ಸಂಬಂಧಿಸಿದ ಏರಿಕೆಯಲ್ಲಿ ಗುರುತ್ತಿಸುತ್ತಾ ಬರಲಾಗಿದೆ. ಕಾಲಾನುಗತವಾಗಿ ಅಭಿವೃದ್ಧಿಯ ಫಲಗಳು ಸಮಾಜದ ಎಲ್ಲ ವರ್ಗ-ಗುಂಪುಗಳಿಗೂ ಒದುಗುತ್ತದೆ ಎಂಬ ಗ್ರಹಿಕೆ ಸಾಂಪ್ರದಾಯಿಕ ಅಭಿವೃದ್ಧಿ ವಿಚಾರ ಪ್ರಣಾಳಿಕೆಯ ಮೂಲದಲ್ಲಿದೆ. ಅಭಿವೃದ್ಧಿ ಎನ್ನುವುದು ಸ್ವತಂತ್ರ-ಸ್ವಯತ್ತ ಪ್ರಕ್ರಿಯೆಯಾಗಿ ಸಮಾಜದಲ್ಲಿ ಸಂಭವಿಸಬಲ್ಲದು ಎಂಬ ನಂಬಿಕೆ ಇಲ್ಲಿದೆ. ಈ ಬಗೆಯ ಅಭಿವೃದ್ಧಿಯನ್ನು ಕುರಿತ ಗ್ರಹಿಕೆ-ನಂಬಿಕೆಗಳು ಇಂದು ಅನೇಕ ಬಗೆಯ ಸವಾಲುಗಳನ್ನು ಎದುರಿಸುತ್ತಿವೆ. ೧೯೯೮ ರ ನೊಬೆಲ್ ಪ್ರಶಸ್ತಿ ವಿಜೇತ ಅಮರ್ತ್ಯಸೇನ್ ಪ್ರಕಾರ ಸಾಂಪ್ರದಾಯಿಕ ಅಭಿವೃದ್ಧಿ ವಿಚಾರ ಪ್ರಣಾಳಿಕೆಯು 'ಇರುವುದರ' ಸಂಕಥನವಾಗಿದೆಯೇ ವಿನಾ 'ಹೊಂದಿರುವುದರ' ಸಂಕಥನವಾಗಿಲ್ಲ. ಈ ಬಗ್ಗೆ ಅವರು ತಮ್ಮ 'ಬಡತನ ಮತ್ತು ಕ್ಷಾಮ'(೧೯೮೧) ಎಂಬ ಪ್ರಸಿದ್ಧ ಗ್ರಂಥದಲ್ಲಿ ಹೀಗೆ ಬರೆಯುತ್ತಾರೆ. "Starvation is the characteristic of some people not having enough food to eat. It is not the characteristic of their being not enough food to eat" ಹಸಿವನ್ನು ಕುರಿತಂತೆ ಸೇನ್ ಏನು ಹೇಳಿದ್ದಾರೊ ಅದನ್ನು ಅಭಿವೃದ್ಧಿಗೂ ಅನ್ವಯಿಸಿ ಹೇಳಬಹುದು. "ಇರುವುದರಲ್ಲಿ" ಅಭಿವೃದ್ಧಿಯನ್ನು ಕಾಣುವುದಕ್ಕೆ ಪ್ರತಿಯಾಗಿ ಸೇನ್ ಅವರು "ಹೊಂದಿರುವುದರಲ್ಲಿ" ಅದನ್ನು ಕಾಣಲು ಪ್ರಯತ್ನಿಸುತ್ತಾರೆ. ಜಾತಿ, ವರ್ಗ, ಲಿಂಗ ಮತ್ತು ಪ್ರದೇಶ ಮುಂತಾದ ಸಂಗತಿಗಳ ಆಧಾರದ ಮೇಲೆ ಖಂಡ-ತುಂಡವಾಗಿರುವ ನಮ್ಮ ಸಮಾಜದಲ್ಲಿ 'ಇರುವುದು' ಎಲ್ಲರಿಗೂ

ಸಮಾನವಾಗಿ ದೊರೆಯುವುದು ಸಾಧ್ಯವಿಲ್ಲ ಎಂಬುದರ ಬಗ್ಗೆ ಸೇನ್ ನಮ್ಮ ಗಮನ ಸೆಳೆಯುತ್ತಿದ್ದಾರೆ. ಆದ್ದರಿಂದ ಅಭಿವೃದ್ಧಿಯನ್ನು "ರಾಜಕೀಯ ಆರ್ಥಿಕತೆ"ಯ ನೆಲೆಯಿಂದ ಪೃಥಕರಿಸುವ ಅವಶ್ಯಕತೆ ಇದೆ. ಜಾತಿ ಸ್ಥಾನಮಾನಕ್ಕೆ ಅನುಗುಣವಾಗಿ ಸಾಮಾಜಿಕ-ಆರ್ಥಿಕ ಸ್ಥಾನಮಾನಗಳು, ರಾಜಕೀಯ ಅಧಿಕಾರ, ಪ್ರಾಪ್ತವಾಗುವ ಪರಿಸ್ಥಿತಿ ಇಲ್ಲಿದೆ. ಅಭಿವೃದ್ಧಿಯ ಮೇಲೆ ವಿವಿಧ ಸಾಮಾಜಿಕ ಗುಂಪುಗಳು ಪಡೆದಿರುವ ಹಕ್ಕುದಾರಿಕೆಯನ್ನು ಇಲ್ಲಿ 'ರಾಜಕೀಯ ಆರ್ಥಿಕತೆ' ಎಂದು ಕರೆದಿದೆ.

ಕರ್ನಾಟಕದ ಸಂಧರ್ಭದಲ್ಲಿ ಅಭಿವೃದ್ಧಿಯಿಂದ ವಂಚಿತರಾದ ಒಂದು ದೊಡ್ಡ ಜನ ವರ್ಗವಿದೆ. ಕರ್ನಾಟಕದ ಜನಸಂಖ್ಯೆಯನ್ನು, ಜನವರ್ಗವನ್ನು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತರು, ಹಿಂದುಳಿದ ವರ್ಗ ಮತ್ತು ಇತರೆ ವರ್ಗ ಎಂಬ ವಿವಿಧ ಸಾಮಾಜಿಕ ಗುಂಪುಗಳು ವಿವಿಧ ಪ್ರಮಾಣದ ಹಕ್ಕುದಾರಿಕೆ ಪಡೆದಿದ್ದಾರೆ. ಸಾಮಾಜಿಕ ಗುಂಪುಗಳಾಗಿ ವರ್ಗೀಕರಿಸಬಹುದು. ಅಭಿವೃದ್ಧಿಯ ಮೇಲೆ ವಿವಿಧ ಸಾಮಾಜಿಕ ಗುಂಪುಗಳು ವಿವಿಧ ಪ್ರಮಾಣದ ಹಕ್ಕುದಾರಿಕೆ ಪಡೆದಿದ್ದಾವೆ. ಸಾಮಾಜಿಕ ಗುಂಪು ಜಾತಿಯ ಏಣಿ ಶ್ರೇಣಿಯಲ್ಲಿ ಯಾವ ಸ್ಥಾನ ಪಡೆದಿದೆಯೋ ಅದಕ್ಕೆ ಅನುಗುಣವಾದ ಹಕ್ಕುದಾರಿಕೆಯನ್ನು ಅಭಿವೃದ್ಧಿಯ ಮೇಲೆ ಅದು ಪಡೆದಿರುತ್ತದೆ. ಅಭಿವೃದ್ಧಿ ಪ್ರಕ್ರಿಯೆ ಹಾಗೂ ಸಾಮಾಜಿಕ ರಚನೆಗಳ ನಡುವೆ ಸೂಕ್ಷ್ಮ ಸಂಬಂಧಗಳಿರುತ್ತವೆ. ಪರಿಶಿಷ್ಟ ಜನವರ್ಗವು ಜಾತಿ ಏಣಿ ಶ್ರೇಣಿಯಲ್ಲಿ ಕೆಳಸ್ತರದಲ್ಲಿದೆ. ಸಹಜವಾಗಿ ಇದು ಆರ್ಥಿಕ ಒಡೆತನ ಹಾಗೂ ರಾಜಕೀಯ ಅಧಿಕಾರಿಗಳಿಂದ ವಂಚಿತವಾಗಿದೆ. ಈ ಅಧ್ಯಯನದಲ್ಲಿ ಕರ್ನಾಟಕ ಅಭಿವೃದ್ಧಿಗೆ ಸಂಬಂಧಿಸಿದ ಶಿಷ್ಟ-ಪರಿಶಿಷ್ಟ ನೆಲೆಗಳನ್ನು ಗುರಿತಿಸಲು ಪ್ರಯತ್ನಿಸಲಾಗಿದೆ. ಸಾಮಾಜಿಕ ದುಸ್ಥಿತಿಯಲ್ಲಿರುವ, ಅಧೀನ ಸ್ಥಿತಿಯಲ್ಲಿರುವ ಮತ್ತೊಂದು ದೊಡ್ಡ ವರ್ಗವೆಂದರೆ ಮಹಿಳೆಯರು. ಜನಸಂಖ್ಯೆಯಲ್ಲಿ, ಮತದಾರರಲ್ಲಿ, ಸರಿ ಸುಮಾರು ಅರ್ಧದಷ್ಟು, ದುಡಿಮೆಗಾರ ವರ್ಗದಲ್ಲಿ ಸರಿಸುಮಾರು ಮೂರನೇ ಒಂದರಷ್ಟು ಇರುವ ಮಹಿಳೆಯರು ತೀವ್ರ ಸ್ವರೂಪದ ತಾರತಮ್ಯವನ್ನು, ಸಾಮಾಜಿಕ ಅನ್ಯಾಯವನ್ನು ಮತ್ತು ಅಪಾಯವನ್ನು ಎದುರಿಸುತ್ತಿದ್ದಾರೆ.ಅವರ ದುಡಿಮೆಯು ದುಡಿಮೆಯಲ್ಲ. ಅದು ಕೇವಲ ಜೈವಿಕ ಚಟುವಟಿಕೆ. ಮಹಿಳೆಯರು ಅನುಭವಿಸುತ್ತಿರುವ ತಾರತಮ್ಯ, ಪಕ್ಷಪಾತ, ಅನ್ಯಾಯ,ದಮನ, ಹತ್ಯೆ ಎಲ್ಲವನ್ನೂ 'ಜೈವಿಕತೆ'ಗೆ ಆರೋಪಿಸಿ 'ಪುರುಷಶಾಹಿ'ಯು ಮೆರೆಯುತ್ತಿದೆ.ಅಭಿವೃದ್ಧಿಗೆ ಸಂಬಂಧಿಸಿದ ಜ್ಞಾನಶಿಸ್ತುಗಳಾದ ಅರ್ಥಶಾಸ್ತ್ರ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರಗಳು ಪುರುಷಶಾಹಿತ್ವವನ್ನು ತಮ್ಮ ಮೇಲೆ ಆರೋಪಿಸಿಕೊಂಡು ಬಿಟ್ಟಿವೆ. ಲಿಂಗತಾರತಮ್ಯಗಳು ಸಮಾಜಕ್ಕಂಟಿಕೊಂಡು ಬಿಟ್ಟಿವೆ. ಲಿಂಗತಾರತಮ್ಯಗಳು ಸಮಾಜಕ್ಕಂಟಿಕೊಂಡ ಒಂದು ವಿಕೃತಿ ಎಂಬುದನ್ನು ಜ್ಞಾನಶಿಸ್ತುಗಳು ಇನ್ನೂ ಒಪ್ಪಿಕೊಳ್ಳಲು ಸಿದ್ದವಿಲ್ಲ. ಆದ್ದರಿಂದ ಅಧ್ಯಯನದಲ್ಲಿ ಲಿಂಗಸಂಬಂಧದ ಆಯಾಮವನ್ನೂ ಗುರುತಿಸಬೇಕಾಗುತ್ತದೆ. ಅಭಿವೃದ್ಧಿಯಲ್ಲಿನ ಪ್ರಾದೇಶಿಕ ಅಂತರ-ಅಸಮಾನತೆ ಕುರಿತ ಸಂಗತಿಗಳು ಇಂದು ಕರ್ನಾಟಕದ ಸಂದರ್ಭದಲ್ಲಿ ಚರ್ಚೆಯ ಮುಂಚೂಣಿಗೆ ಬಂದಿವೆ. ಇತ್ತೀಚೆಗೆ ಕರ್ನಾಟಕ ಸರ್ಕಾರದ ಯೋಜನಾ ವಿಭಾಗವು ಪ್ರಕಟಿಸಿರುವ 'ಕರ್ನಾಟಕದಲ್ಲಿ ಮಾನವ ಅಭಿವೃದ್ಧಿ ೧೯೯೯' ಎಂಬ ವರದಿಯಲ್ಲಿ ಕರ್ನಾಟಕದ ೨೦ ಜಿಲ್ಲೆಗಳ ಪೈಕಿ ನಿಜವಾಗಿ ಅಭಿವೃದ್ಧಿ ಸಂಬಂಧಿ

ದುಸ್ಥಿತಿಯಿಂದ ನರಳುತ್ತಿರುವ ಐದು ಜಿಲ್ಲೆಗಳನ್ನು ಸ್ಪಷ್ಟವಾಗಿ ಗುರುತಿಸಿದೆ. ಈ ಐದು ಜಿಲ್ಲೆಗಳು ಯಾವುವೆಂದರೆ ಬಿಜಾಪುರ, ಬಳ್ಳಾರಿ, ಬೀದರ್, ಗುಲ್ಬರ್ಗಾ, ಮತ್ತು ರಾಯಚೂರು, ಇಡೀ ಉತ್ತರ ಕರ್ನಾಟಕ ಪ್ರದೇಶವೇ ಹಿಂದುಳಿದಿದೆ ಎಂಬ ಸಂಗತಿಯನ್ನು ವರದಿಯು ಹುಸಿಗೊಳಿಸಿದೆ. ಅಭಿವೃದ್ಧಿಯ ಪ್ರಾದೇಶಿಕ ಸ್ವರೂಪವನ್ನು ಪರಾಮರ್ಶಿಸುವುದು ಇದರಿಂದ ಅಗತ್ಯವಾಗುತ್ತದೆ.[೫೭]

ಡಾ.ಟಿ.ಆರ್.ಚಂದ್ರಶೇಖರ(೨೦೦೭) ಕರ್ನಾಟಕ ಅಭಿವೃದ್ಧಿಯ ಆಕೃತಿ ಪಲ್ಲವ ಪ್ರಕಾಶನ ಚನ್ನಪಟ್ಟಣ ಪು.ಸಂ ೪-೫ ಜನರನ್ನು ಒಳಗೊಳ್ಳುವ ಅಭಿವೃದ್ಧಿ-ಆರ್ಥಿಕ ಅಭಿವೃದ್ಧಿಯಂದರೆ ಎರಡು ಕಾಲಘಟ್ಟಗಳ ನಡುವೆ ದೇಶದ ವರಮಾನವಿಲ್ಲ ಅಂದರೆ ಜಿಡಿಪಿಯಲ್ಲಿ ಉಂಟಾಗುವ ವರ್ಧನೆಯಾಗಿದೆ. ಅಂದ ಮೇಲೆ ಅದು ಸರಾಗವಾಗಿ ವರಮಾನಕ್ಕೆ ಸಂಬಂಧಿಸಿದ ಒಂದು ಪ್ರಕ್ರಿಯೆ-ಇಲ್ಲಿನ ಗ್ರಹಿತವೆಂದರೆ ವರ್ಧನೆಯಾದ ವರಮಾನವು ತನ್ನಷ್ಟಕ್ಕೆ ತಾನೇ ಸ್ವಯಂ ಸಮುದಾಯದ ಎಲ್ಲ ವರ್ಗಗಳಿಗೂ ದೊರೆಯುತ್ತದೆ ಎಂಬುವದಾಗಿದೆ. ವರ್ಧನೆಯಾದ ವರಮಾನವು ಎಲ್ಲ ಪ್ರದೇಶಗಳಿಗೂ ಸ್ವಯಂ ಪಸರಿಸುತ್ತದೆ ಹಾಗೂ ಜನಸಮಾಜವನ್ನು ಒಳಗೊಳ್ಳುತ್ತದೆ ಎನ್ನಲಾಗಿದೆ. ದುರಾದೃಷ್ಟದ ಸಂಗತಿಯೆಂದರೆ ಇಂತಹ ಪ್ರಕ್ರಿಯೆಯ ಕುರಿತು ಅಧ್ಯಯನಗಳಿಂದ ಹಾಗೂ ಜನರ ಅನುಭವಗಳಿಂದ ತಿಳಿದು ಬಂದಿರುವ ತತ್ವವೆಂದರೆ ವರ್ಧನೆಯಾದ ವರಮಾನವು ತನ್ನಷ್ಟಕ್ಕೆ ತಾನೇ ಎಲ್ಲ ಜನರಿಗೂ ದೊರೆಯುವುದಿಲ್ಲ ಹಾಗೂ ದಕ್ಕುವುದಿಲ್ಲ. ಅಂದರೆ ವರ್ಧನೆಯಾದ ವರಮಾನವು ಜನರ ಬದುಕಾಗಿ ಜನರ ಆಹಾರವಾಗಿ, ಜನರ ಅಕ್ಷರವಾಗಿ, ಜನರ ಆರೋಗ್ಯವಾಗಿ ಪರಿವರ್ತನೆಯಾಗುವುದು. ಇದಕ್ಕೆ ಪ್ರತಿಯಾಗಿ ಜನರನ್ನು ಒಳಗೊಳ್ಳುವ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ವರ್ಧನೆಯಾದ ವರಮಾನವು ಜನರ ಬದುಕಾಗಿ ಪರಿವರ್ತನೆಯಾಗುವ ಪ್ರಕ್ರಿಯೆಗೆ ಒತ್ತು ನೀಡಲಾಗುತ್ತದೆ. ವರ್ಧನೆಯಾದ ವರಮಾನವು ಜನರ ಆಹಾರವಾಗಿ, ಅಕ್ಷರವಾಗಿ, ಆರೋಗ್ಯವಾಗಿ ಪರಿವರ್ತನೆಯಾಗಬೇಕು. ಜನಸಮೂಹವನ್ನು ಒಳಗೊಳ್ಳುವ ವರಮಾನ ವರ್ಧನಾ ಪ್ರಕ್ರಿಯೆಯನ್ನು ಪ್ರಜ್ಞಾಪೂರ್ವಕವಾಗಿ ಸಾಧಿಸಿಕೊಳ್ಳಬೇಕಾಗುತ್ತದೆ.

ಆರ್ಥಿಕ ಅಭಿವೃದ್ಧಿಯಿಂದ ಅಂದರೆ ವರಮಾನ ವರ್ಧನೆಯಿಂದ ದೇಶವೊಂದು ಶ್ರೀಮಂತವಾಗಬಹುದು. ಅಲ್ಲಿ ಸಮೃದ್ಧಿ ಉಂಟಾಗಬಹುದು, ಅಲ್ಲಿ ನಾವು ಉದಯಿಸುತ್ತಿರುವ ಹಾಗೂ ಹೊಳೆಯುತ್ತಿರುವ ಭಾರತವನ್ನು ಕಾಣಬಹುದು, ರಾಷ್ಟ್ರವು ಆಹಾರ ಭದ್ರತೆ ಸಾಧಿಸಿಕೊಳ್ಳಬಹುದು. ಆದರೆ ಜನರ ಬದುಕು? ಜನರ ಆಹಾರ ಭದ್ರತೆ? ಜನರ ಅಕ್ಷರ-ಆರೋಗ್ಯ? ಆದ್ದರಿಂದ ಡಾ.ಮನಮೋಹನಸಿಂಗ್ ಹೇಳಿದಂತೆ ಕೇವಲ ವರಮಾನ ವರ್ಧನೆಯಾದರೆ ಸಾಕಾಗುವುದಿಲ್ಲ. ಜನರ ಬದುಕು ಉತ್ತಮವಾಗಬೇಕು ಎಂದಾದರೆ ವರ್ಧನೆಯಾದವರ ಮಾನವಲ್ಲ. ಸಮುದಾಯದ ಎಲ್ಲ ವರ್ಗಗಳೂ ಪಾಲುಪಡೆಯುವಂತಾಗಬೇಕು. ವರ್ಧನೆಯಾದ ವರಮಾನದ ಮೇಲೆ ಎಲ್ಲ ವರ್ಗದ ಜನರು ತಮ್ಮ ಹಕ್ಕು-ಅಧಿಕಾರ ಸ್ಥಾಪಿಸುವಂತಾಗಬೇಕು. ವರ್ಧನೆಯಾದ ವರಮಾನವನ್ನು ಧಾರಣೆ ಮಾಡಿಕೊಳ್ಳುವ ಜನರ ಸಾಮರ್ಥ್ಯವು ವರ್ಧನೆಯಾಗಬೇಕು. ಅದು ಜನರನ್ನು ಒಳಗೊಳ್ಳುವ

ಅಭಿವೃದ್ಧಿ ವರ್ಧನೆಯಾದ ವರಮಾನದ ಪರಿಧಿಯಿಂದ ಹೊರಗಿರುವ ಜನರನ್ನು ಪರಿಧಿಯೊಳಗೆ ತರುವ ಪ್ರಕ್ರಿಯೆಯೇ ಜನರನ್ನು ಒಳಗೊಳ್ಳುವ ಅಭಿವೃದ್ಧಿ.[೫೮]

ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೧೬ ರಲ್ಲಿ ಸಲ್ಲಿಸಿದ ಮಹಾಪ್ರಬಂಧ "ಅಭಿವೃದ್ಧಿ ಮತ್ತು ದುಸ್ಥಿತಿಯ ನೆಲೆಗಳು" ಯಲ್ಲಪ್ಪ ತಾಯಪ್ಪ ರವರು ಡಾ. ಟಿ. ಆರ್. ಚಂದ್ರಶೇಖರ ರವರ ಮಾರ್ಗದರ್ಶನದಲ್ಲಿ ಈ ಸಂಶೋಧನಾ ಕಾರ್ಯವನ್ನು ಕೈಗೊಂಡಿರುತ್ತಾರೆ 'ಅಭಿವೃದ್ಧಿಯ ನಿರ್ವಚನ' ಅಭಿವೃದ್ಧಿ ಪದತಲದಲ್ಲಿರುವ ಪರಿಶಿಷ್ಟರನ್ನು ಗಮನದಲ್ಲಿಟ್ಟುಕೊಂಡು ನಾವು ಅಭಿವೃದ್ಧಿಯನ್ನು ನಿರ್ವಚಿಸಬೇಕಾಗುತ್ತದೆ. ಸಾಂಪ್ರದಾಯಿಕ ಅಭಿವೃದ್ಧಿ ಮೀಮಾಂಸೆಯು ಅದನ್ನು ಸಾಮಾಜಿಕತೆಯಿಂದ ಬೇರ್ಪಡಿಸಿ ನಿರ್ವಚಿಸಿಕೊಂಡು ಬಂದಿದೆ. ಇಂತಹ ಮೀಮಾಂಸೆಯಲ್ಲಿ ಜನರನ್ನು ಒಳಗೊಳ್ಳುವ ಅಭಿವೃದ್ಧಿ ಸಾಧ್ಯವಾಗುವುದಿಲ್ಲ, ಅಭಿವೃದ್ಧಿಯನ್ನು ಅಲಕ್ಷಿತರ ಪರಿಶಿಷ್ಟರ ಪದತಲದಿಂದ ಪರಿಭಾವಿಸಿ ಕೊಂಡರೆ ಮಾತ್ರ ಎಲ್ಲರ ಸಮಸ್ಯೆಗಳು ಅರ್ಥವಾಗುತ್ತವೆ. ಇದಕ್ಕೆ ಪ್ರತಿಯಾಗಿ ಪ್ರತಿಷ್ಠಿತರ ನೆಲೆಯಿಂದ ಅದನ್ನು ಪರಿಭಾವಿಸಿಕೊಂಡರೆ ಅಲ್ಲಿ ತಳಸ್ತರದವರ ಹಿತಾಸಕ್ತಿಗಳು ಗೋಚರಿಸುವುದಿಲ್ಲ. ವರಮಾನದ ವರ್ಧನೆಯೇ ಅಭಿವೃದ್ಧಿಯೆಂಬ ಸೀಮಿತ ನೆಲೆಯ ನಿರ್ವಚನವನ್ನು ಇಂದು ಕೈ ಬಿಡಲಾಗಿದೆ. ಸಮಾಜದಲ್ಲಿ ಲಭ್ಯವಿರುವ ಅವಕಾಶಗಳನ್ನು ಧಾರಣೆ ಮಾಡಿಕೊಳ್ಳುವ ಜನರ ಸಾಮರ್ಥ್ಯದ ವರ್ಧನೆಯನ್ನು ಅಭಿವೃದ್ಧಿಯನ್ನು ಪರಿಭಾವಿಸಿಕೊಂಡಾಗ ಮಾತ್ರ ಪರಿಶಿಷ್ಟರ ಹಿತಾಸಕ್ತಿಗಳು ಮುಂಚೂಣಿಗೆ ಬರುವುದು ಸಾಧ್ಯ. ಧಾರಣಾ ಶಕ್ತಿಯ ವರ್ಧನೆಯು ಅಭಿವೃದ್ಧಿ ಎಂದಾಗ ಅನಕ್ಷರಸ್ಥರಿಗೆ ಅಕ್ಷರ ನೀಡುವುದು ಆದ್ಯತೆಯಾಗುತ್ತದೆ ಆಹಾರದ ಹಕ್ಕಿನಿಂದ ವಂಚಿತರಾದವರಿಗೆ ಆಹಾರ ನೀಡುವುದು ಆದ್ಯತೆಯಾಗುತ್ತದೆ. ಅಭಿವೃದ್ಧಿಯಲ್ಲಿ ಹೆಚ್ಚು ವಂಚಿತರಾದ ವರ್ಗವೆಂದರೆ ದಲಿತ ಮಹಿಳೆಯರು. ದಲಿತೇತರ ಮಹಿಳೆಯರ ಸಾಕ್ಷರತಾ ಪ್ರಮಾಣ ೨೦೦೧ ರಲ್ಲಿ ಶೇ. ೬೧.೬೬ ರಷ್ಟಿದ್ದರೆ ಪರಿಶಿಷ್ಟರ ಸಾಕ್ಷರತಾ ಪ್ರಮಾಣ ಶೇ. ೪೦.೨೬ ಅಂತರ ಶೇ. ೨೧.೪೦ ಅಂಶಗಳು ಗ್ರಾಮೀಣ ಮಹಿಳೆಯರ ಸಾಕ್ಷರತಾ ಪ್ರಮಾಣ ಶೇ. ೪೮.೦ ಗ್ರಾಮೀಣ ಪರಿಶಿಷ್ಟ ಮಹಿಳೆಯರ ಸಾಕ್ಷರತಾ ಪ್ರಮಾಣ ಶೇ. ೩೭.೮೬ ಅಭಿವೃದ್ಧಿಯನ್ನು ಕೇವಲ ಬಂಡವಾಳ, ವಿದೇಶಿ ಬಂಡವಾಳ, ಉಳಿತಾಯ, ಉತ್ಪಾದನೆ, ತಂತ್ರಜ್ಞಾನ, ಮುಂತಾದ ಸಂಗತಿಗಳ ನೆಲೆಯಲ್ಲಿ ನಿರ್ವಹಿಸಿಕೊಂಡರೆ ಸಾಕಾಗುವುದಿಲ್ಲ. ಈ ಸಂಗತಿಗಳ ಫಲ 'ಅಭಿವೃದ್ಧಿ' ಎನ್ನುವ ಕಾಲ ಮುಗಿದು ಹೋಗಿದೆ ಸಮಾಜದಲ್ಲಿರುವ ಲಭ್ಯವಿರುವ ಅವಕಾಶಗಳನ್ನು ಧಾರಣೆ ಮಾಡಿಕೊಳ್ಳಲು ಸಾಧ್ಯವಾಗದಂತೆ ಮಾಡಿರುವ ಸಾಮಾಜಿಕ ಸಾಂಸ್ಕೃತಿಕ ಗೋಡೆಗಳನ್ನು ನಾಶ ಮಾಡುವಂತಹ ಅಭಿವೃದ್ಧಿ ಪ್ರಣಾಳಿಕೆಯಿಂದ ಮಾತ್ರ ದಲಿತರ, ವಂಚಿತರ ಮತ್ತು ಮಹಿಳೆಯರ ಅಧೀನತೆ ಪರಿಹಾರವಾಗಿ ಬಿಡುತ್ತದೆ.

ಇದೆ ಮಹಾಪ್ರಬಂಧದ 'ಅಭಿವೃದ್ಧಿಗೆ ಸಂಬಂಧಿಸಿದ ಸಿದ್ಧಾಂತಗಳ ಅಧ್ಯಯನ'ದಲ್ಲಿ ಪ್ರಪಂಚದ ಇತರೆ ರಾಷ್ಟ್ರಗಳಂತೆ ಕರ್ನಾಟಕದಲ್ಲಿಯೂ ಸಹ ಅಭಿವೃದ್ಧಿ ಎಂಬುವುದು ಸಮಾನವಾಗಿದೆ ಎಲ್ಲಾ ಪ್ರದೇಶಗಳಲ್ಲಿ ಏಕರೂಪತೆಯನ್ನು ಕಾಯ್ದುಕೊಂಡಲ್ಲಿ ಕರ್ನಾಟಕದ ಅಭಿವೃದ್ಧಿಯಲ್ಲಿ ಅದರಲ್ಲಿಯೂ

ಮಾನವ ಅಭಿವೃದ್ಧಿಯಲ್ಲಿ ಪ್ರದೇಶವಾರು, ಜಿಲ್ಲಾವಾರು ಅಂತರ ಅಸಮಾನತೆಗಳಿವೆ ಯೋಜನೆಗಳ ಹೊರತಾಗಿಯೂ ರಾಜ್ಯದಲ್ಲಿ ಶಿಕ್ಷಣ, ಆರೋಗ್ಯ, ಸೌಲಭ್ಯಗಳು, ಮೂಲಭೂತ ಸೌಕರ್ಯಗಳಲ್ಲಿಯ ಅಸಮತೋಲನದಿಂದಾಗಿ ಇನ್ನು ಪ್ರಾದೇಶಿಕ ಅಸಮಾನತೆಗಳು ಉಳಿದುಕೊಂಡು ಬಂದಿವೆ. ಇಂದು ಜಗತ್ತಿನಾದ್ಯಂತ ಅಭಿವೃದ್ಧಿಯನ್ನು ಮಾನವ ಅಭಿವೃದ್ಧಿಯ ಪರಿಕಲ್ಪನೆಯಲ್ಲಿ ನಿರ್ವಸಲಾಗುತ್ತಿದೆ. ಮಾನವ ಅಭಿವೃದ್ಧಿಯ ವಿಚಾರ ಪ್ರಣಾಳಿಕೆಯ ಮೂಲ ಮತ್ತು ಬೆಳವಣಿಗೆಯನ್ನು ಅರಿಯ ಬೇಕಾದರೆ ಈ ಹಿಂದೆ ಅಸ್ತಿತ್ವದಲ್ಲಿದ್ದ ಅಭಿವೃದ್ಧಿ ಮಾದರಿಗಳ ಅರಿವು ಅತ್ಯಾವಶ್ಯಕವಾಗಿರುತ್ತದೆ. ಅಭಿವೃದ್ಧಿ ಅರ್ಥವನ್ನು ವಿಶ್ಲೇಷಿಸುವುದು ಒಂದು ಸಂಕೀರ್ಣವಾದ ಸಂಗತಿ ಅಭಿವೃದ್ಧಿ ಎಂಬುವುದು ಏನನ್ನು ತಿಳಿಸುತ್ತದೆ ಎಂಬುದರ ಬಗ್ಗೆ ಗಂಭೀರ ಚರ್ಚೆ ನಡೆಯುತ್ತಿದೆ ಈ ಪದ ಹಲವಾರು ಮೌಲ್ಯ ನಿರ್ಣಯಗಳನ್ನು ಒಳಗೊಂಡಿರುವುದರಿಂದ ಚರ್ಚೆಯನ್ನು ಮುಕ್ತಾಯಗೊಳಿಸುವುದು ಕಷ್ಟಕರವಾಗುತ್ತದೆ. ಅಭಿವೃದ್ಧಿ ಆರ್ಥಿಕ ಬೆಳವಣಿಗೆಗಳ ಬಗೆಗಿನ ಕಲ್ಪನೆಗಳು ಹಲವಾರು ಶತಮಾನಗಳಿಂದ ವಿಕಸಿತಗೊಳ್ಳುತ್ತಾ ಇನ್ನು ವಿಕಸಿತಗೊಳ್ಳುತ್ತಲೇ ನಡೆದಿದೆ. ಅಭಿವೃದ್ಧಿ ಕುರಿತಾದ ಮೀಮಾಂಸೆಗಳ ಅಭಿವೃದ್ಧಿ ಅರ್ಥಶಾಸ್ತ್ರವೆಂಬ ಜ್ಞಾನ ಶಿಸ್ತುವಿನಲ್ಲಿ ಹೆಚ್ಚು ಮಂಡಿತವಾಗುತ್ತಿದೆ. ಅಭಿವೃದ್ಧಿ ಅರ್ಥಶಾಸ್ತ್ರ ಎಂಬುವುದೇನೋ ಹೊಸದಾದ ಜ್ಞಾನ ಶಿಸ್ತುವೇನಲ್ಲ ಈಗಾಗಲೇ ಆಸ್ತಿತ್ವದಲ್ಲಿದ್ದ ಜ್ಞಾನ ಶಿಸ್ತುವೇನಲ್ಲ. ಈಗಾಗಲೇ ಅಸ್ತಿತ್ವದಲ್ಲಿದ್ದ ಜ್ಞಾನ ಶಿಸ್ತುವಿನ ಒಂದು ಅಂಗ ಮಾತ್ರ. ೧೯೪೦ ಮತ್ತು ೧೯೫೦ರ ದಶಕದಲ್ಲಿ ಅದರಲ್ಲಿಯೂ ಎರಡನೇ ಪ್ರಪಂಚ ಯುದ್ಧದ ನಂತರ ಅಭಿವೃದ್ಧಿ ಅರ್ಥಶಾಸ್ತ್ರ ಕುರಿತಂತೆ ಚಿಂತನೆಗಳು ಪ್ರಾರಂಭಗೊಂಡವು. ಈ ಹಿಂದಿನ ಅರ್ಥಶಾಸ್ತ್ರಜ್ಞರಿಗಿಂತ ಈ ಅವಧಿಯ ಅರ್ಥಶಾಸ್ತ್ರಜ್ಞರ ಚಿಂತನೆಗಳು ಭಿನ್ನವಾಗಿದ್ದವು.[೫೯]

ಜುಲೈ ೧೪ ೨೦೧೮(EPW) VOL III NO 28 PG NO 83-91 ರಲ್ಲಿ WILLIAM JOE, SHALINI RUDRA, U.S.MISHRA,MALA RAMANATHAN ರವರ SOCIAL CHOICE AND POLITICAL ECONOMY OF HEALTH ;(REFLECTIONS ON THE NATIONAL HEALTH POLICY 2017). ರಾಷ್ಟ್ರೀಯ ಆರೋಗ್ಯ ನೀತಿ ೨೦೧೭ ಭಾರತದಲ್ಲಿನ ಆರೋಗ್ಯ ಕ್ಷೇತ್ರದ ಬೆಳವಣಿಗೆಗೆ ಪರ್ಯಾಯ ದೃಷ್ಟಿಕೋನಕ್ಕಾಗಿ ಸಲ್ಲುತ್ತದೆ. ಆದರೆ ಇದು ನಿರೀಕ್ಷೆಗಳಿಗೆ ಕಡಿಮೆಯಾಗಿದೆ ಕೆಲವು ಎಣಿಕೆಗಳು ಖಾಸಗಿ ವಲಯದಿಂದ ಆಯಕಟ್ಟಿನ ಖರೀದಿಗೆ ಸಂಬಂಧಿಸಿದ ಪ್ರಮುಖ ಪರಿಕಲ್ಪನೆಯು ಸೂಕ್ತವಾಗಿದೆ. ಆದರೆ ಸಾರ್ವನಿಕ ವಲಯದ ಸ್ಪರ್ಧಾತ್ಮಕತೆಯನ್ನು ಸುಧಾರಿಸುವ ಸುಧಾರಣೆಗಳು ದುರ್ಬಲಗೊಂಡಾಗ ದೃಢವಾದ ಸಾರ್ವಜನಿಕ ಕ್ಷೇತ್ರದ ಅಸ್ತಿತ್ವದೊಂದಿಗೆ ಹೊಂದಾಣಿಕೆಯಾಗುವುದಿಲ್ಲ. ಹೀಗಾಗಿ ನೀತಿ ಉಪಕರಣಗಳು ಮತ್ತು ಅಪೇಕ್ಷಣೀಯ ಫಲಿತಾಂಶಗಳ ಆಧಾರದ ಮೇಲೆ ಸಾಮಾಜಿಕ ಆಯ್ಕೆಯ ಕಾರ್ಯವಿಧಾನಗಳ ಪಾತ್ರದ ಬಗ್ಗೆ ಮೂಲಭೂತ ಚರ್ಚೆಯನ್ನು ಎನ್.ಹೆಚ್.ಪಿ ಪುನಃ ತೆರೆಯುತ್ತದೆ ಇದು ಆರೋಗ್ಯ ಕ್ಷೇತ್ರದ ರಾಜಕೀಯ ಅರ್ಥವ್ಯವಸ್ಥೆಯ ಗಂಭೀರವಾದ ಪರಿಣಾಮಗಳನ್ನು ಹೊಂದಿದೆ ಮತ್ತು ಚುನಾವಣಾ ರಾಜಕೀಯದಲ್ಲಿ ಒಂದು ಪ್ರಮುಖ ಲಕ್ಷಣವಾಗಿ ಆರೋಗ್ಯವು ಕಣ್ಮರೆಯಾಗುತ್ತದೆ.

ಸ್ವಚ್ಛ ಭಾರತ ಅಭಿಯಾನ ಅಪಾರವಾದ ತೆರೆದ ಮಲವಿಸರ್ಜನೆ ಮುಕ್ತ ಭಾರತವನ್ನು ಮಹಾತ್ಮ ಗಾಂಧಿಯವರ ೧೫೦ನೇ ಹುಟ್ಟು ಹಬ್ಬದ ವಾರ್ಷಿಕೋತ್ಸವದ ಹೊತ್ತಿಗೆ ಸಾಧಿಸುವ ಗುರಿ ಹೊಂದಿದ್ದರೂ, ರಾಷ್ಟ್ರೀಯ ಆರೋಗ್ಯ ನೀತಿ(ಎನ.ಹೆಚ.ಪಿ) ವಿವಿಧ ಕಾರಣಗಳಿಗಾಗಿ ಟೀಕೆಗಳನ್ನು ಆಹ್ವಾನಿಸುತ್ತದೆ. ಎನ್.ಹೆಚ್.ಪಿ. ಯು ಆರೋಗ್ಯದ ಕ್ಷೇತ್ರದ ರಾಜಕೀಯ ಆರ್ಥಿಕತೆಗೆ ಆಳವಾದ ಪರಿಣಾಮ ಬೀರುತ್ತದೆ ಮತ್ತು ಚುನಾವಣಾ ಹಾಗೂ ಪುನರ್ವಿತರಣೆಯ ರಾಜಕೀಯದಲ್ಲಿ ಆರೋಗ್ಯದ ಕವಚಯಂತ್ರ ಕವಣೆಯಾಗಬಹುದು. ಎನ್.ಎಚ್.ಪಿಯು ನಾಲ್ಕು ಪ್ರಮುಖ ಸಂದರ್ಭೋಚಿತ ಬದಲಾವಣೆಗಳನ್ನು ಪರಿಗಣಿಸುತ್ತದೆ ಮತ್ತು ಒಟ್ಟಾರೆ ನೀತಿ ವಿಧಾನವನ್ನು ಬಹುಶಃ ಹೆಚ್ಚಿಸುತ್ತದೆ. ೧. ಸಂವಹನೀಯ ರೋಗಗಳ ಮತ್ತು ಕೆಲವು ಸಾಂಕ್ರಾಮಿಕ ಕಾಯಿಲೆಗಳ ಹೊರೆ ೨. ಆರೋಗ್ಯ ರಕ್ಷಣೆ ಉದ್ಯಮದ ದೃಢ ಬೆಳವಣಿಗೆ ೩. ಆರೋಗ್ಯ ವೆಚ್ಚದಲ್ಲಿ ಹೆಚ್ಚಾಗುವ ಸಾಧ್ಯತೆ ೪. ವರ್ಧಿತ ಬೆಳವಣಿಗೆ ಭಾರತದಲ್ಲಿ ಹಣಕಾಸಿನ ಸಾಮರ್ಥ್ಯವನ್ನು ಹೆಚ್ಚಿಸುವುದು. ಭಾರತದಲ್ಲಿ ನಡೆಯುತ್ತಿರುವ ಜನಸಂಖ್ಯಾ, ಅರ್ಥಶಾಸ್ತ್ರ, ಸಾಂಕ್ರಾಮಿಕ ಮತ್ತು ಪೌಷ್ಠಿಕಾಂಶದ ಪರಿವರ್ತನೆಯ ಪ್ರತಿನಿಧಿ ಆದರೆ ಎನ್.ಹೆಚ್.ಪಿ. ಆರೋಗ್ಯ ಸೇವೆ ಉದ್ಯಮದ ಸ್ಥಿತಿಯನ್ನು ಮತ್ತು ಕಾಳಜಿಗಳನ್ನು ಪ್ರತಿಬಿಂಬಿಸಬೇಕೆಂಬುದನ್ನು ಚರ್ಚಿಸಲಾಗುವುದಿಲ್ಲ. ಆರೋಗ್ಯ ಕ್ಷೇತ್ರದ ಕುರಿತು ಗಮನ ಹರಿಸುವ ಕುರಿತು ಈ ಲೇಖನದಲ್ಲಿ ಚರ್ಚಿಲಾಗಿದೆ.[೬]

ಕೊನೆ ಟಿಪ್ಪಣಿಗಳು

೧. ನತಲೈವೆಸ್ಟ್ ಖಾರ ಕೊಂಗೂರ (ಯೋಜನಾ ಮಾಸ ಪತ್ರಿಕೆ) "ಈಶಾನ್ಯದಲ್ಲಿ ಶಿಕ್ಷಣ ಮತ್ತು ಉದ್ಯೋಗ" ಏಪ್ರೀಲ್-೨೦೧೬ ಪುಟಸಂಖ್ಯೆ: ೭-೯

೨. ಮತ್ತಿಹಳ್ಳಿ ಮದನ ಮೋಹನ (ಯೋಜನಾ ಮಾಸ ಪತ್ರಿಕೆ) 'ಹಿಂದುಳಿಯುವಿಕೆ ಎಂಬ ಶಾಪ' ಏಪ್ರಿಲ್-೨೦೧೬ ಪುಟ ಸಂಖ್ಯೆ ೩೭-೩೯.

೩. ಡಾ. ಟಿ.ಆರ್. ಚಂದ್ರಶೇಖರ (ಯೋಜನಾ ಮಾಸ ಪತ್ರಿಕೆ) ೧ಕರ್ನಾಟಕದಲ್ಲಿ ಸಂವಿಧಾನ ಅನುಚ್ಛೇದ ೩೭೧(ಜೆ)' ಏಪ್ರಿಲ್-೨೦೧೬ ಪುಟ.ಸಂಖ್ಯೆ ೪೦-೪೩.

೪. ಎಂ. ಚಂದ್ರಪೂಜಾರಿ (೨೦೧೪) 'ಬದಲಾಗುತ್ತಿರುವ ಕರ್ನಾಟಕ' ಗಾಯತ್ರಿ ಪ್ರಕಾಶನ, ಬಳ್ಳಾರಿ.

೫. ಕೆ.ಸಿದ್ಧಪ್ಪ (೨೦೦೨) 'ಪ್ರವಾಸೋದ್ಯಮ & ಅಭಿವೃದ್ಧಿ' (ಮಾರ್ಗದರ್ಶಕರು ಡಾ. ಎಂ. ಚಂದ್ರ ಪೂಜಾರಿ) ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ ಅಭಿವೃದ್ಧಿ ಅಧ್ಯಯನ ವಿಭಾಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬. ಡಾ. ಸಿ.ಎನ್. ಮಂಜುನಾಥ (ಪ್ರಜಾವಾಣಿ ದಿನಪತ್ರಿಕೆ) 'ಚೆಲುವ ಕನ್ನಡ ನಾಡಿನ ಆಸ್ಪತ್ರೆಗಳೇ ಬುನಾದಿ' ನವೆಂಬರ-೨೧, ೨೦೧೬.

೭. ಡಾ. ಟಿ.ಎನ್. ಪ್ರಕಾಶ ಕಮ್ಮರಡಿ (ಪ್ರಜಾವಾಣಿ ದಿನ ಪತ್ರಿಕೆ) 'ರೈತ ಆದಾಯ ವೃದ್ಧಿಗೆ ಸಮರ್ಪಕ ನೀತಿ ಅಗತ್ಯ' ಅಕೋಬರ್-೧೩, ೨೦೧೬.

೮. ಐ.ಎಮ್. ವಿಠ್ಠಲಮೂರ್ತಿ (ಪ್ರಜಾವಾಣಿ) "ಡಿಸ್ನಿಲ್ಯಾಂಡ್ ಕಟ್ಟೋಣ, ಸಿಂಗಾಪೂರ ಮೀರಿ ಬೆಳೆಯೋಣ" ನವೆಂಬರ್-೨೯, ೨೦೧೬.

೯. ಡಾ.ಆರ್.ಬಾಲಸುಬ್ರಮಣ್ಯಂ (ಪ್ರಜಾವಾಣಿ) 'ಆರೋಗ್ಯ ಕಾಯುವ ಕೈಗಳಿಗೆ ಶಕ್ತಿ ತುಂಬಬೇಕು" ನವೆಂಬರ್-೨೨, ೨೦೧೬.

೧೦. ಮಾಣಿಕ ಸರ್ಕಾರ (ಕನ್ನಡ ಪ್ರಭ) 'ಪೊಲಿಟಿಕಲ್ ಎಕನಾಮಿ ಆಫ್ ತ್ರಿಪುರ' ಜನವರಿ-೧೭, ೨೦೧೭.

೧೧. ಪ್ರವಾಸೋದ್ಯಮ ಇಲಾಖೆ ಮತ್ತು ಜಿಲ್ಲಾಡಳಿತ ಕೊಪ್ಪಳ ವಿಶ್ವ ಪ್ರವಾಸೋದ್ಯಮ ದಿನಾಚರಣೆ-೨೭-೦೯-೨೦೧೬.

೧೨. ತ್ರಿನಾ ವಿತಾಯತಿಲ, ಗಾಯತ್ರಿಸಿಂಗ್ (ಇ.ಪಿ.ಡಬ್ಲ್ಯೂ) ರೆಸಿಡೆನಸಿಯಲ್ ಸೆಗ್ರೇಷನ್ ಇನ್ ಇಂಡಿಯನ್ ಸಿಟಿಸ್, ಸೆಪ್ಟೆಂಬರ್-೧೫,೨೦೧೨ ಪು.ಸಂ.೬೦-೬೬.

೧೩. ಜಾನ್ ಹ್ಯಾರಿಸ್ (ಇ.ಪಿ.ಡಬ್ಲ್ಯೂ) ಪೊಲಿಟಿಕಲ್ ಪಾರ್ಟಸಿಪೆಷನ, ರೀಪ್ರೆಸೆಂಟೆಷನ್ ಆ್ಯಂಡ್ ದ ಅರ್ಬನ್ ಪುವರ್ (ಪೈಂಡಿಂಗ್ ಪ್ರಮ್ ರಿಸರ್ಚ ಇನ್ ದೆಹಲಿ: ೨೦೦೩. ಪು. ಸಂ ೧೦೪೧-೧೦೫೪.

೧೪. ಕೆ.ಸಿ.ಸೂರಿ(ಇ.ಪಿ.ಡಬ್ಲ್ಯೂ) 'ಪೊಲಿಟಿಕಲ್ ಎಕನಾಮಿ ಆಫ್ ಅಗ್ರೆರಿಯನ್ ಡಿಸ್‌ಸ್ಟ್ರೆಸ್' ಎಪ್ರಿಲ್ ೨೨-೨೮ ೨೦೦೬ ವ್ಯಾ.೪೧ ನಂ ೧೬ ,ಪು.ಸಂ ೧೫೨೩-೧೫೨೯.

೧೫. ತಾರೀಕ್ವಿ ನೀಯಾಜಿ (ಇ.ಪಿ.ಡಬ್ಲ್ಯೂ) ಅಕ್ಟೋಬರ ೭,೨೦೦೬ 'ಪೊಲಿಟಿಕಲ್ ಎಕನಾಮಿ ಆಫ್ 'ಎಕಲಾಜಿಕಲ್ ಡಿವಾಯಿಡ್' ಇನ್ ಪಾಕಿಸ್ತಾನ. ಪು.ಸಂ ೨೭೫-೨೮೦.

೧೬. ಪ್ರಣಬ್ ಕಾಂತಿ ಬಸು(ಇ.ಪಿ.ಡಬ್ಲ್ಯೂ) 'ಪೊಲಿಟಿಕಲ್ ಎಕನಾಮಿ ಆಫ್ ಲ್ಯಾಂಡ್ ಗ್ರ್ಯಾಬ್' ಎಪ್ರಿಲ್ ೭,೨೦೦೭ .ಪು.ಸಂ ೧೨೮೧-೧೨೮೭.

೧೭. ಅ. ಕ. ಬಾಸಿನ (ಯೋಜನಾ ಮಾಸಪತ್ರಿಕೆ) 'ಸುರಕ್ಷಿತ ಸ್ಮಾರ್ಟಸಿಟಿಗಳು' ಸೆಪ್ಟೆಂಬರ್-೨೦೧೫.

೧೮. ರೀತಿಕಾ ಖೇರ್ (ಇ.ಪಿ.ಡಬ್ಲ್ಯೂ) 'ಪೊಲಿಟಿಕಲ್ ಎಕನಾಮಿ ಆಫ್ ಸ್ಟೇಟ್ ರೆಸ್ಪೋನ್ಸ್ ಟು ಡ್ರಾಟ್ ಇನ್ ರಾಜಸ್ತಾನ' ೨೦೦೦-೦೩, ಡಿಸೆಂಬರ್ ೧೬, ೨೦೦೬ .ಪು.ಸಂ ೫೧೬೩-೫೧೭೨.

೧೯. ಪಬಿತ್ರಾ ಗಿರಿ (ಇ.ಪಿ.ಡಬ್ಲೂ) ನವೆಂಬರ್೨೧, ೧೯೯೮ ವ್ಯಾ೩೩ ನಂ ೪೭ ಪು.ಸಂ ೩೦೩೩-೩೦೩೮ ಅರ್ಬನೈಜೆಶನ್ ಇನ ವೆಸ್ಟ ಬೆಂಗಾಲ್, ೧೯೫೧-೧೯೯೧.

೨೦. ಪ್ರವಾಕರ ಸಾಹೊ (ಯೋಜನಾ ಮಾಸ ಪತ್ರಿಕೆ) ಹಣ ಹೂಡಿಕೆ-ಸುಧಾರಣೆ-ಅಭಿವೃದ್ಧಿ ಜೂನ್-೨೦೧೫ ಪುಟ ಸಂ: ೧೫-೧೯.

೨೧. ಪ್ರೇಮ ಸುಬ್ರಮಣ್ಯಂ (ಯೋಜನಾ ಮಾಸ ಪತ್ರಿಕೆ) ಆರ್ಥಿಕ ಬೆಳವಣಿಗೆಯಲ್ಲಿ ಪ್ರವಾಸೋದ್ಯಮ ಮೇ-೨೦೧೫ ಪುಟ ನಂ.೩೮-೪೧.

೨೨. ಅರುಣ್ ಮಿತ್ರ (ಯೋಜನಾ ಮಾಸ ಪತ್ರಿಕೆ) ಕನ್ನಡಕ್ಕೆ ಕಣ್ಮಣಿ ನಗರ ಅನೌಪಚಾರಿಕ ವಲಯ ಅಕ್ಟೋಬರ-೨೦೧೪ ಪುಟ ನಂ. ೧೨-೧೮.

೨೩. ಜೋಯ್ತಿರಾಜ ಪತ್ರಾ ಕೊಮಲ್ ಕಂತಾರಿಯಾ (ಇ.ಪಿ.ಡಬ್ಲೂ) ಎರ್ಮಜೆನ್ಸಿ ಡಿಸಾಸ್ಟರ್ ರೀಸ್ಕಸ್ಕೆಪ ಇನ ಅರ್ಬನ ಇಂಡಿಯಾ ಡಿಸೆಂಬರ್ ೨೭,೨೦೧೪ ಪು.ಸಂ.೧೬-೧೯.

೨೪. ಲೀಲಾ ವಿಸಾರೀಯಾ (ಇ.ಪಿ.ಡಬ್ಲೂ) ಪೊಪ್ಯುಲೆಶನ,ಎಜ್ಯುಕೆಶನ ಆ್ಯಂಡ ಡೆವಲಪಮೆಂಟ್ ದಿಸೆಂಬರ್-೨೭ ೨೦೧೪, ಪು.ಸಂ.೪೩-೫೮.

೨೫. ಮೊದಲಸಾ ವೆಂಕಟರಮನ (ಇ.ಪಿ.ಡಬ್ಲೂ) ಎನಲೈಸಿಂಗ್ ಅರ್ಬನ ಗ್ರೋತ್ ಬೌಂಡ್ರಿ ಎಫೆಕ್ಟ ನಂ.೨೯,೨೦೧೪. ಪು.ನಂ.೫೪-೬೧

೨೬. ಹಿಮಾನ್ಶು ಬುರ್ತೆ (ಇ.ಪಿ.ಡಬ್ಲೂ) ದ 'ಸ್ಮಾರ್ಟ ಸಿಟಿ' ನವೆಂಬರ್-೧೫,೨೦೧೪. ಪು.ನಂ ೨೨-೨೬.

೨೭. ಶಂಕರ ಆಚಾರ್ಯ (ಇ.ಪಿ.ಡಬ್ಲೂ) ಅನ್ಡರಸ್ಟ್ಯಾಂಡಿಂಗ ದ ಅರ್ಬನ ಚಾಲೆಂಜ, ಅಕ್ಟೋಬರ್ ೧೮,೨೦೧೪. ಪು.ನಂ.೩೬-೩೮

೨೮. ನಂದಿನಿ ಗುಪ್ತಾ (ಇ.ಪಿ.ಡಬ್ಲೂ) ಇನಸ್ಟ್ರಿಯಲ್ ಡಿಕ್ಲೆನ್ ಆ್ಯಂಡ ಅರ್ಬನ ಪೊಲಿಟಿಕ್ಸ ಇನ ಕೊಲ್ಕತ್ತಾ, ಮೇ ೨೬,೨೦೦೭, ಪು. ೧೯೨೨-೧೯೩೩

೨೯. ಎಂ. ಚಂದ್ರ ಪೂಜಾರಿ ಬದಲಾಗುತ್ತಿರುವ ಕರ್ನಾಟಕ, ಗಾಯತ್ರಿ ಪ್ರಕಾಶನ ಬಳ್ಳಾರಿ.

೩೦. ಅದೇ.

೩೧. ಬಾರಬೆರಾ ಹ್ಯಾರಿಸ್ ವೈಟ್ ವೆಲೆಟೈನ್ ಪ್ರಾಸಪೆರಿ (ಇ.ಪಿ.ಡಬ್ಲೂ) ದ ಮೈಕ್ರೊ ಪೊಲಿಟಿಕಲ್ ಎಕನಮಿ ಆಪ್ ಗೆನ್ಸ್ ಬಾಯ್ ಅನ್ಆರಗ್ನೈಜ್ಡ ವರ್ಕರ್ಸ್ ಇನ್ ಇಂಡಿಯಾ, ವ್ಯಾ. ೪೯ ನಂ.೯.

೩೨. ಟಿ.ಸುಂದರರಾಮನ್ (ಯೋಜನಾ ಮಾಸ ಪತ್ರಿಕೆ) ಆರೋಗ್ಯ ಕ್ಷೇತ್ರದ ಸವಾಲು, ಮುನ್ನೋಟ ಫೆಬ್ರವರಿ-೨೦೧೬ ಪುಟ ಸಂ. ೩-೧೬

೩೩. ಜೆ.ಬಿ.ಜಿ. ತಿಲಕ್ (ಯೋಜನಾ ಮಾಸ ಪತ್ರಿಕೆ) ಶಿಕ್ಷಣದಲ್ಲಿ ಧನ ಹೂಡಿಗೆ ಜನೇವರಿ-೨೦೧೬ ಪುಟ ಸಂ. ೮-೯.

೩೪. ವಾಸುದೇವ ಶರ್ಮಾ ಎನ್.ವಿ. (ಯೋಜನಾ ಮಾಸ ಪತ್ರಿಕೆ) ಶಾಲಾ ಶುಲ್ಕಕ್ಕೊಂದು ಅಂಕುಶ ಜನೇವರಿ-೨೦೧೬ ಪುಟ ಸಂ. ೪೩-೪೭.

೩೫. ಡಾ.ಆರ್.ಬಿ.ಭಗತ್ (ಯೋಜನಾ ಮಾಸ ಪತ್ರಿಕೆ) ನಗರ ನೀತಿ ಮತ್ತು ಕಾರ್ಯಕ್ರಮ: ಅವಲೋಕನ ಸೆಪ್ಟೆಂಬರ್-೨೦೧೪ ಪುಟ ಸಂ. ೫-೯.

೩೬. ಪ್ರೊ. ನರೇಂದ್ರ ಫನಿ, (ಯೋಜನಾ ಮಾಸ ಪತ್ರಿಕೆ) ನಗರದೊಳಗಿನ ಹಳ್ಳಿಗಳ ಸಮಸ್ಯೆ ಸೆಪ್ಟೆಂಬರ್ -೨೦೧೪ ಪುಟ ಸಂ. ೧೫-೧೮.

೩೭. ಪ್ರೋ. ಎನ್. ನಾರಾಯಣ ಶಾಸ್ತ್ರೀ (ಯೋಜನಾ ಮಾಸ ಪತ್ರಿಕೆ) ನಗರಗಳ ಮೂಲಭೂತ ಸೌಕರ್ಯ ಸೆಪ್ಟೆಂಬರ್ -೨೦೧೪ ಪುಟ ಸಂ. ೩೬-೩೮.

೩೮. ಮುರಳಿ ಟಿ.ವಿ. (ಯೋಜನಾ ಮಾಸ ಪತ್ರಿಕೆ) ನಗರ ಯೋಜನೆ-ಹೊಸಪರಿಕಲ್ಪನೆ ಮತ್ತು ಸವಾಲು, ಸೆಪ್ಟೆಂಬರ್ -೨೦೧೪ ಪುಟ ಸಂ. ೪೩-೪೬.

೩೯. ಸಿ.ಎಸ್.ಸಿ. ಶೇಖರ (ಯೋಜನಾ ಮಾಸ ಪತ್ರಿಕೆ) ಪಡಿತರ ಪದ್ಧತಿಯ ರಾಜಕೀಯ ಆರ್ಥಿಕತೆ, ಅಗಸ್ಟ್-೨೦೧೫ ಪುಟ ಸಂ. ೨೬-೨೮.

೪೦. ಉಷಾ ಪಿ. ರಘುಪತಿ (ಯೋಜನಾ ಮಾಸ ಪತ್ರಿಕೆ) ಪ್ರಸ್ತುತತೆಯಲ್ಲಿ ಸುಕ್ಷಮ ನಗರಗಳು ಸೆಪ್ಟೆಂಬರ್ -೨೦೧೫ ಪುಟ ಸಂ. ೧೭-೨೦.

೪೧. ಕಲಾ ಸೀತಾರಾಮನ್ ಶ್ರೀಧರ (ಯೋಜನಾ ಮಾಸ ಪತ್ರಿಕೆ) ನಗರಗಳ ನೈರ್ಮಲ್ಯಕ್ಕೆ ಮಾಹಿತಿ ಸಂವಹನ ತಂತ್ರಜ್ಞಾನ ಸೆಪ್ಟೆಂಬರ್ -೨೦೧೫ ಪುಟ ಸಂ. ೪೧-೪೫

೪೨. ಪ್ರದೀಪ ಕುಮಾರ ಮಿಶ್ರಾ (ಇ.ಪಿ.ಡಬ್ಲ್ಯೂ) ಪಾವರ್ಟಿ ಎಲಿವೆಷನ್ ಇನ್ ಬಿಹಾರ ಫೆಬ್ರುವರಿ ೧೧ ೨೦೦೭, ವ್ಯಾ. ೫೨ ನಂ.೦೬ ಪು.ಸಂ ೬೩-೬೫.

೪೩. ಪ್ರಶಾಂತ ಕೆ ತ್ರೀವೆದಿ, ಸುರಿಂದರ ಕುಮಾರ, ಶ್ರೀನಿವಾಸ್ ಗೊಲಿ, ಫಾಹಿಮುದ್ದಿನ (ಇ.ಪಿ.ಡಬ್ಲ್ಯೂ) ಐಡೆಂಟಿಟಿ ಇಕ್ವೆಷನ್ಸ್ ಆ್ಯಂಡ್ ಎಲೆಕ್ಟ್ರೊಲ್ ಪಾಲಿಟಿಕ್ಸ್.(ಇನವೆಸ್ಟಿಗೆಟಿಂಗ್ ಪೊಲಿಟಿಕಲ್ ಎಕನಮಿ ಆಪ್ ಲ್ಯಾಂಡ್ ಎಂಪವರಮೆಂಟ್ ಆ್ಯಂಡ್ ಎಜ್ಯುಕೆಷನ್) ಡಿಸೆಂಬರ್ ೩೧-೨೦೧೬ ವ್ಯಾ.೫೧ ನಂ.೫೩ ಪು.ಸಂ ೧೧೭-೧೨೩.

೪೪. ಪಂಕಜ್ ಕೆ ಪಿ ಶ್ರೇಯಸ್ಕರ್ (ಇ.ಪಿ.ಡಬ್ಲ್ಯೂ) ಕಾಂಟರ್ಸ್ ಆಪ್ ಆಕ್ಸೆಸ್ ಟು ವಾಟರ್ ಆ್ಯಂಡ್ ಸ್ಯಾನಿಟೆಷನ್ ಇನ್ ಇಂಡಿಯಾ (ಡ್ರಾವಿಂಗ್ ಆನ್ ದ ರೈಟ್ ಟು ವಿತ್ ಹ್ಯುಮನ್ ಡಿಗ್ನಿಟಿ) ಡಿಸೆಂಬರ್ ೩೧-೨೦೧೬ ವ್ಯಾ ೫೧ ನಂ ೫೩.ಪು.ಸಂ ೧೪೪-೧೫೧.

೪೫. ರೊಮಿ ಕೊಶ್ಲಾ (ಇ.ಪಿ.ಡಬ್ಲೂ) ಇಂಡಿಯಾಸ್ ಅರ್ಬನ್ ಲ್ಯಾಂಡಸ್ಕೆಪ್ (ಬ್ಲಾಕ್ ಟೌನ್ಸ್ ಆಪ್ ದ ೨೧ ಸೆಂಚುರಿ) ಜನೇವರಿ ೭-೨೦೧೭ ವ್ಯಾ ೫೨ ನಂ ೦೧ ಪು ಸಂ ೯೨-೧೦೧

೪೬. ಲಕ್ಷ್ಮಿ ಸುಬ್ರಮನಿಯಂ (ಇ.ಪಿ.ಡಬ್ಲೂ) ರೊಡ್ಸ್ ಆರ್ ಲೈಕೆ ಪೆಮಿಲಿಸ್, ಅಕ್ಟೋಬರ್ ೨೮-೨೦೧೭ ಪು.ಸಂ ೨೫-೨೭.

೪೭. ಶುಭ್ರಾ ಗುರುರಾನಿ (ಇ.ಪಿ.ಡಬ್ಲೂ) ಟೆಕ್ನೊ-ಪಾಲಿಟಿಕ್ಸ್ ಆಪ್ ಡಿಸ್‌ವೊವೆಲ್ ಆ್ಯಂಡ್ ಡಿಸ್‌ಡೆನ್ ಇನ್ ಆ್ಯನ್ ಅರ್ಬನೈಸಿಂಗ್ ಪ್ರಾಂಟಿಯರ್. ಅಗಸ್ಟ ೨೬-೨೦೧೭ ಪು.ಸಂ ೩೮-೪೬.

೪೮. ಪ್ರೊ(ಡಾ) ಸುನಿತಾ ನಂಬಿಯಾರ್ (ಸೊಸಿಯಲ್ ವೆಲಫೆರ್) ಹೆಲ್ತ್ ಆ್ಯಂಡ್ ಸ್ಯಾನಿಟೆಷನ್-ಎ ಹ್ಯುಮನ ರೈಟ. ಡಿಸೆಂಬರ-೨೦೧೭ ಪು.ಸಂ ೨೫-೨೬.

೪೯. ಬ್ರಿಜೆಷ ಸಿ ಪುರೋಹಿತ (ಇ.ಪಿ.ಡಬ್ಲೂ) ಎಪಿಸಿಯೆನ್ಸಿ ಆಪ್ ಹೆಲ್ತಕೆರ್ ಸೆಕ್ಟರ್ ಇನ್ ಬಿಹಾರ: ಆ್ಯನ್ ಎಕ್ಸಪ್ಲೊರೆಟರಿ ಆ್ಯನಾಲಿಸಿಸ್. ನವೆಂಬರ್ ೨೫-೨೦೧೭ ಪು.ಸಂ ೫೪-೫೯.

೫೦. ಸಂದೀಪ ಮೆರ್ಥಿಯಾ (ಇ.ಪಿ.ಡಬ್ಲೂ) 'ಟೈಮ್ ಪಾಸ್' ಡೆವೆಲಪ್‌ಮೆಂಟ್: ಸಿಚುವೆಟಿಂಗ್ ಸೊಸಿಯಲ್ ಮಿಡಿಯಾ ಇನ್ ರುರಲ್ ರಾಜಸ್ತಾನ್. ನವೆಂಬರ್ ೨೫-೨೦೧೭ ಪು.ಸಂ ೬೯-೭೯.

೫೧. ತನ್ಯಾ ಜಾಕಿಮೊಗ್ (ಇ.ಪಿ.ಡಬ್ಲೂ) ಅರ್ಬನ್ ಪಾವರ್ಟಿ.ಡಿಸೆಂಬರ್ ೩೦-೨೦೧೭.

೫೨. ಕೆ.ಸಿ ಸ್ಮಿತಾ, ಬರುನ ದೆಬಪಾಲ್ (ಇ.ಪಿ.ಡಬ್ಲೂ) ಸ್ಪಾಷಿಯಲ್ ರಿಪ್ರೊಡಕ್ಷನ ಆಪ್ ಅರ್ಬನ ಪಾವರ್ಟಿ ಇನ್ ಗ್ಲೊಬಲ್ ಸಿಟಿ ಜೆಂಡರ್.ಜನೇವರಿ ೨೦-೨೦೧೮ ಪು.ಸಂ ೬೭-೭೬.

೫೩. ಮಧುಶ್ರೀ ಶೇಖರ್, ಎಸ್. ಪರಶುರಾಮನ್ ರೈ (ಇ.ಪಿ.ಡಬ್ಲೂ) ಎಂಪವರಿಂಗ್ ಪಿಪಲ್ ಟು ಪಾವರ್ ದ ಪಬ್ಲಿಕ ಡಿಸ್ಟ್ರುಬ್ಯುಷನ ಸಿಸ್ಟಮ್. ಡಿಸೆಂಬರ್ ೨೩-೨೦೧೭ ಪು.ಸಂ ೯೭-೧೦೭.

೫೪. ಶೈಲಜಾ ಪೈಕ್ (ಇ.ಪಿ.ಡಬ್ಲೂ) ನ್ಯೂ ದಲಿತ ವುಮೆನ ಆ್ಯಂಡ್ ದೆರ್ ಇಂಪ್ರಾಪರ್ ಪೊಲಿಟಿಕ್ಸ್. ಜೂನ ೧೬ ೨೦೧೮ ಪು.ಸಂ ೩೬-೩೯.

೫೫. ಡಾ. ಟಿ.ಆರ್ ಚಂದ್ರಶೇಖರ (೨೦೧೦) ದರೆ ಹತ್ತಿ ಉರಿದರೆ ಪಲ್ಲವ್ ಪ್ರಕಾಶನ ಚನ್ನಪಟ್ಟಣ ಪು.ಸಂ ೩೪-೪೬.

೫೬. ಡಾ.ಸಿ ಆರ್. ಗೋಪಾಲ್(೨೦೧೮) ಸಮುದಾಯ ಸಂಘಟನೆ ನಿರುತ್ ಪಬ್ಲಿಕೇಷನ್ ಬೆಂಗಳೂರು ಪು.ಸಂ ೯೫–೧೦೫.

೫೭. ಡಾ. ಟಿ.ಆರ್ ಚಂದ್ರಶೇಖರ(೨೦೦೩) ಕರ್ನಾಟಕ ಅಭಿವೃದ್ಧಿಯ ಸಾಮಾಜಿಕ ನೆಲೆಗಳು ನಿವಿಜ ಪಬ್ಲಿಕೇಷನ್ ಬೆಂಗಳೂರು ಪು.ಸಂ ೫೭–೭೫.

೫೮. ಡಾ. ಟಿ.ಆರ್ ಚಂದ್ರಶೇಖರ(೨೦೦೭) ಕರ್ನಾಟಕ ಅಭಿವೃದ್ಧಿ ಆಕೃತಿ ಪಲ್ಲವ್ ಪ್ರಕಾಶನ ಚನ್ನಪಟ್ಟಣ ಪು.ಸಂ ೪–೫.

೫೯. ಯಲ್ಲಪ್ಪ ತಾಯಪ್ಪ (೨೦೧೬) “ಅಭಿವೃದ್ಧಿ ಮತ್ತು ದುಸ್ಥಿತಿಯ ನೆಲೆಗಳು. ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ ಹಂಪಿ ಗೆ ಸಲ್ಲಿಸಿದ ಮಹಾಪ್ರಬಂಧ.

೬೦. ವಿಲಿಯಂ ಜೊಯ್, ಶಾಲಿನಿ ರುದ್ರಾ, ವಿ.ಎಸ್ ಮಿಶ್ರಾ, ಮಾಲಾ ರಾಮನಾಥ (ಇ.ಪಿ.ಡಬ್ಲೂ) ಸೊಶಿಯಲ್ ಚಾಯ್ಸ ಆ್ಯಂಡ್ ಪೊಲಿಟಿಕಲ್ ಎಕಾನಮಿ ಆಪ್ ಹೆಲ್ತ್ ಪು.ಸಂ ೮೩–೯೧.

✤✤✤

ಅಧ್ಯಾಯ : ಮೂರು

ಕೊಪ್ಪಳ ರಾಜಕೀಯ ಇತಿಹಾಸ ಮತ್ತು ಜಿಲ್ಲೆಯ ಪರಿಚಯ

ಅಧ್ಯಾಯ: ಮೂರು

ಕೊಪ್ಪಳ ರಾಜಕೀಯ ಇತಿಹಾಸ ಮತ್ತು ಜಿಲ್ಲೆಯ ಪರಿಚಯ

೩.೧. ರಾಜಕೀಯ ಇತಿಹಾಸ

ಕರ್ನಾಟಕದ ಪ್ರಾಚೀನ ಇತಿಹಾಸದ ಕಾಲದಿಂದಲೂ ಕೊಪ್ಪಳ ನಾಡು ಪ್ರಾಮುಖ್ಯತೆಯನ್ನು ಪಡೆದುಕೊಂಡಿದ್ದು, ಕನ್ನಡ ನಾಡಿನ ಸಂಸ್ಕೃತಿಗೆ ತನ್ನದೇ ಆದ ಮಹತ್ತರ ಕಾಣಿಕೆಯನ್ನು ಸಲ್ಲಿಸಿರುವುದು ವಿವಿಧ ರೀತಿಯ ಆಧಾರಗಳಿಂದ ತಿಳಿದು ಬರುತ್ತದೆ. ಇತಿಹಾಸ ಪೂರ್ವದ ಮಾನವನು ಈ ಪ್ರದೇಶದಲ್ಲಿ ತನ್ನ ಅಲೆಮಾರಿ ಜೀವನವನ್ನು ನಡೆಸುತ್ತಿದ್ದನೆಂಬ ಸಂಗತಿ ಇಲ್ಲಿ ದೊರೆತಿರುವ ಶಿಲಾಯುಗ ಸಂಸ್ಕೃತಿಯ ಅವಶೇಷಗಳಿಂದ ತಿಳಿದುಬರುತ್ತದೆ. ಕೈಗೊಡಲಿ ಹಂತಕ್ಕೆ ಸೇರಿದ ಶಿಲಾಯುಧಗಳು ಕೃಷ್ಣ-ತುಂಗಭದ್ರ ನದಿಗಳ ದಂಡೆಗಳಲ್ಲಿ ದೊರೆತಿದ್ದು ಸುಮಾರು ಐದು ಲಕ್ಷ ವರ್ಷಗಳಷ್ಟು ಹಿಂದಿನಿಂದ ಈ ಪ್ರದೇಶದಲ್ಲಿ ಮಾನವ ವಸತಿಯಿದ್ದುದನ್ನು ಸಾಕ್ಷೀಕರಿಸಿವೆ. ಆನಂತರ ಕಾಲಕ್ಕೆ ಸೇರಿದ ಮಧ್ಯಯುಗೀನ ಮತ್ತು ಅಂತ್ಯ ಕಾಲದ ಶಿಲಾಯುಗ ಸಂಸ್ಕೃತಿಗಳ ಅವಶೇಷಗಳನ್ನು ಸಹ ಕೊಪ್ಪಳದ ನೆರೆಹೊರೆಯ ಪ್ರದೇಶಗಳಲ್ಲಿ ಶೋಧಿಸಿ ಹೊರ ತೆಗೆಯಲಾಗಿದೆ. ಮಾನವನು ತನ್ನ ಅಲೆಮಾರಿ ಜೀವನವನ್ನು ತ್ಯಜಿಸಿ ಗ್ರಾಮೀಣ ಜೀವನದ ಹಂತಕ್ಕೆ ಪ್ರವೇಶಿಸಿದ ಕುರುಹುಗಳನ್ನು ಸುಮಾರು ೪,೫೦೦ ವರ್ಷಗಳ ಪೂರ್ವಕ್ಕೆ ನಿರ್ದೇಶಿಸಬಹುದು. ಕೊಪ್ಪಳ ಜಿಲ್ಲೆಗೆ ಹತ್ತಿರವಾದ ರಾಯಚೂರು ಜಿಲ್ಲೆಯು ನವಶಿಲಾಯುಗ ಸಂಸ್ಕೃತಿಯ ಕೇಂದ್ರ ಸ್ಥಾನವಾಗಿತ್ತೆಂದು ಪ್ರಾಕ್ತನಶಾಸ್ತ್ರಜ್ಞರು ಒಪ್ಪಿದ ಸಂಗತಿ. ಈ ಪ್ರದೇಶದ ಮಸ್ಕಿ, ಪಿಕ್ಲಿಹಾಳ..... ಮುಂತಾದ ನೆಲೆಗಳಲ್ಲಿ ನಡೆದಿರುವ ಪ್ರಾಕ್ತನ ಸಂಶೋಧನೆಗಳಿಂದ ಆಗಿನ ಮಾನವನು ಪ್ರಥಮ ಬಾರಿಗೆ ಆಹಾರೋತ್ಪಾದನೆ, ಪಶು ಸಾಕಾಣಿಕೆಗಳಂತಹ ಕಾರ್ಯಗಳನ್ನು ಆರಂಭಿಸಿದ ವಿಷಯದ ಉಲ್ಲೇಖಗಳಿಂದ ತಿಳಿದುಬರುತ್ತದೆ.

ಮಡಕೆ-ಕುಡಿಕೆಗಳನ್ನು ತಯಾರಿಸಿ ನಿತ್ಯ ಜೀವನದಲ್ಲಿ ಬಳಸುತ್ತಿದ್ದು; ವಾಸಕ್ಕೆ ಹುಲ್ಲಿನ ಗುಡಿಸಲುಗಳನ್ನು ನಿರ್ಮಿಸಿಕೊಂಡಿದ್ದು ಇತ್ಯಾದಿ ವಿಷಯಗಳು ತಿಳಿದುಬಂದಿವೆ. ಕ್ರಮೇಣ ಜನಜೀವನ ಸುಧಾರಿಸಿದಂತೆ ಕಲೆಗೆ ಗಮನ ನೀಡಿದ ವಿಷಯ ಹಲವಾರು ಪ್ರದೇಶಗಳಲ್ಲಿ ಬಂಡೆಗಲ್ಲುಗಳ ಮೇಲೆ ಕೊರೆದಿರುವ ಪ್ರಾಣಿಗಳ, ಮಾನವರ ಮತ್ತು ಬೇಟೆಯ ರೇಖಾ ಚಿತ್ರಗಳಿಂದ ದೃಢಪಡಿಸುತ್ತವೆ. ಸುಮಾರು ೩೦೦೦ ವರ್ಷಗಳ ಹಿಂದೆ ಕಬ್ಬಿಣಯುಗ ಪ್ರಾರಂಭವಾದಾಗ ಆಗಿನ ಮಾನವರು

ಮೃತರ ದೇಹಗಳನ್ನು ಹೂಳಲು ನಿರ್ಮಿಸಿದ ನೂರಾರು ಬೃಹತ್ ಶಿಲಾ ಸಮಾಧಿಗಳನ್ನು ಸಹ ಕೊಪ್ಪಳದ ಸುತ್ತಮುತ್ತ ಅಧಿಕ ಸಂಖ್ಯೆಯಲ್ಲಿ ನೋಡಬಹುದಾಗಿದೆ. ಹೀಗೆ ಇತಿಹಾಸ ಪೂರ್ವಯುಗದಲ್ಲಿ ಕೊಪ್ಪಳ ಪ್ರದೇಶ ಜನನಿಬಿಡವಾಗಿದ್ದು ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸದಲ್ಲಿ ಪಾಲ್ಗೊಂಡಿದ್ದ ವಿಷಯ ಸ್ಪಷ್ಟವಾಗಿ ತಿಳಿದು ಬರುತ್ತದೆ. ಅಲ್ಲದೆ ಕೊಪ್ಪಳ ಬಳಿಯ ಮಳೆಮಲ್ಲೇಶ್ವರ ಬೆಟ್ಟ, ಹಿರೇಬೆಣಕಲ್ ಬೆಟ್ಟದ ಮೇಲೆ ಬೃಹತ್ ಶಿಲಾಯುಗದ ಕಲ್ಲುಗೋರಿಗಳು ಸಿಕ್ಕಿವೆ. ಇದನ್ನು 'ಮೋರಿಯರ ಮನೆ'ಯೆಂದೂ ಕರೆಯುತ್ತಾರೆ.

ಕ್ರಿ.ಶ. ಪೂರ್ವ ಯುಗವು ಅಂತ್ಯಗೊಂಡು ಕ್ರಿ.ಶ.ದ ಉದಯಕಾಲ ಪ್ರಾರಂಭವಾದಂತೆ ಕೊಪ್ಪಳದಲ್ಲಿ ರಾಜಕೀಯ ಚಟುವಟಿಕೆಗಳು ಚುರುಕುಗೊಂಡ ಕುರುಹುಗಳು ಕಂಡುಬಂದಿವೆ. ನಾವು ಇದುವರೆಗೂ ಗಮನಿಸಿದ ಪ್ರಪಂಚದ ಯಾವುದೇ ಒಂದು ಪ್ರದೇಶದ ಸಾಂಸ್ಕೃತಿಕ ಕೊಡುಗೆಗೆ ಅಲ್ಲಿ ಆಳ್ವಿಕೆ ನಡೆಸಿದ ಅರಸು ಮನೆತನಗಳ ಪಾತ್ರ ಅತ್ಯಂತ ಮಹತ್ವದ್ದು. ಈ ಹಿನ್ನೆಲೆಯಲ್ಲಿ ವಿಚಾರ ಮಾಡುವುದಾದರೆ ಕರ್ನಾಟಕವೂ ಸೇರಿದಂತೆ ಭಾರತವನ್ನಾಳಿದ ವಿವಿಧ ಅರಸು ಮನೆತನಗಳು ಇಲ್ಲಿನ ಸಾಂಸ್ಕೃತಿಕ ಪರಂಪರೆಯಲ್ಲಿ ತಮ್ಮ ಪ್ರಭಾವವನ್ನು ಹೆಚ್ಚಿಸುತ್ತಾ ಬಂದಿವೆ. ಮುಖ್ಯವಾಗಿ ಮೌರ್ಯರು, ಶಾತವಾಹನರು, ಕದಂಬರು, ಗಂಗರು, ರಾಷ್ಟ್ರಕೂಟರು, ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರು, ಬಹುಮನಿ ಸುಲ್ತಾನರು. ಮೈಸೂರಿನ ಒಡೆಯರು..... ಮುಂತಾದ ಅರಸು ಮನೆತನಗಳು ಕೊಪ್ಪಳ ಸೇರಿದಂತೆ ಕರ್ನಾಟಕದ ರಾಜಕೀಯ ಇತಿಹಾಸಲ್ಲಿ ತಮ್ಮದೇ ಆದ ಹೆಸರನ್ನು ಗಳಿಸಿಕೊಂಡಿವೆ. ಹೀಗಾಗಿ ಇಂತಹ ಅರಸು ಮನೆತನಗಳ ಸಂಕ್ಷಿಪ್ತ ಇತಿಹಾಸ ಪ್ರಸ್ತುತ ಸಂದರ್ಭದಲ್ಲಿ ಅಗತ್ಯವೆನಿಸುತ್ತದೆ.

ಕೊಪ್ಪಳ ಪ್ರದೇಶವನ್ನೊಳಗೊಂಡ ಕನ್ನಡ ನಾಡನ್ನು ವಿವಿಧ ಕಾಲಾವಧಿಯಲ್ಲಿ ಅನೇಕ ಅರಸು ಮನೆತನಗಳು ಆಳ್ವಿಕೆ ನಡೆಸಿವೆ. ಈ ವಿಷಯವನ್ನು ಇಲ್ಲಿ ದೊರೆತಿರುವ ಶಾಸನಗಳು ಸಮರ್ಥಿಸುತ್ತವೆ. ಪ್ರಸ್ತುತ ಶಾಸನಗಳನ್ನು ಆಧರಿಸಿ ಹೇಳುವುದಾದರೆ ಮೌರ್ಯರು, ಶಾತವಾಹನರು, ಕದಂಬರು, ಗಂಗರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಹೊಯ್ಸಳರು, ನೊಳಂಬರು, ಕಲಚೂರಿಗಳು, ಹೊಸಮಲೆ ದುರ್ಗದ ಅರಸರು, ವಿಜಯನಗರದ ಅರಸರು, ಬಹುಮನಿ ಸುಲ್ತಾನರು, ಮರಾಠರು..... ಈ ಮುಂತಾದ ಪ್ರಮುಖ ಅರಸರು ಕೊಪ್ಪಳ ಜಿಲ್ಲೆಯನ್ನು ಇಡಿಯಾಗಿ ಇಲ್ಲವೇ ಬಿಡಿಯಾಗಿ ಒಂದು ಆಡಳಿತ ಭಾಗವನ್ನಾಗಿಸಿಕೊಂಡು ಆಳ್ವಿಕೆ ನಡೆಸಿರುವುದು ಕಂಡುಬರುತ್ತದೆ. ಇದಕ್ಕೆ ಸಾಕ್ಷಿ ಎಂಬಂತೆ ಮುಖ್ಯವಾಗಿ ಮೌರ್ಯರ ಕಾಲದಿಂದ ಹಿಡಿದು ಪಾಳೆಗಾರರ ಕಾಲದವರೆಗೆ ಶಿಲಾಶಾಸನಗಳೇ ಸಾಕ್ಷಿ.

ಮೌರ್ಯರು

ಕರ್ನಾಟಕವೂ ಸೇರಿದಂತೆ ಭಾರತದ ಇತರೆ ಪ್ರದೇಶಗಳನ್ನು ಆಳಿದ ಮೌರ್ಯರು ಆಡಳಿತದಲ್ಲಿ ಅತ್ಯಂತ ಪ್ರಭಾವಶಾಲಿ ಅರಸರೆನಿಸಿದ್ದಾರೆ. ನಂದರನ್ನು ಸೋಲಿಸಿದ ಮೌರ್ಯರ ಅರಸು ಚಂದ್ರಗುಪ್ತ

ಮೌರ್ಯನು ತನ್ನ ಮಂತ್ರಿಯಾಗಿದ್ದ ಕೌಟಿಲ್ಯನ ಸಹಾಯದಿಂದ ಉತ್ತರ ಭಾರತದಲ್ಲಿ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಈತನ ನಂತರದಲ್ಲಿ ಬಂದ ಅಶೋಕನು ಮೌರ್ಯ ಸಾಮ್ರಾಜ್ಯವನ್ನು ದಕ್ಷಿಣ ಭಾರತಕ್ಕೂ ವಿಸ್ತರಿಸುತ್ತಾನೆ. ಕರ್ನಾಟಕವನ್ನು 'ಇಸಿಲ ಪ್ರಾಂತ್ಯ'ದ ಒಂದು ಭಾಗವನ್ನಾಗಿ ಮಾಡಿಕೊಂಡು ತನ್ನ ಆಡಳಿತದ ವ್ಯಾಪ್ತಿಯಲ್ಲಿ ಸೇರಿಸಿಕೊಳ್ಳುತ್ತಾನೆ. ಕರ್ನಾಟಕದಲ್ಲಿ ಪ್ರಸ್ತುತ ಪ್ರಸಿದ್ಧ ದೊರೆಯ ಆಡಳಿತವನ್ನು ತಿಳಿಸುವ ನಿದರ್ಶನಗಳೆಂದರೆ ಬ್ರಹ್ಮಗಿರಿ, ಮಸ್ಕಿ ಮತ್ತು ಕೊಪ್ಪಳದಲ್ಲಿನ ಕಿರು ಬಂಡೆಯ ಶಾಸನಗಳು ಪ್ರಮುಖವಾದವುಗಳಾಗಿವೆ. ಈ ಶಾಸನಗಳು ರಚನೆಗೊಂಡಿರುವ ತಾಣಗಳಲ್ಲಿ ಅಶೋಕ ಚಕ್ರವರ್ತಿಯ ಹಿರಿಯ ಅಧೀನ ಧರ್ಮಾಧಿಕಾರಿಗಳಾಗಿದ್ದ 'ಮಹಾಮಾತ್ರರು' ಆಯಾ ಪ್ರದೇಶಗಳ ಆಡಳಿತವನ್ನು ನಿರ್ವಹಿಸುತ್ತಾ ಬಂದಿರುವುದು ತಿಳಿದುಬರುತ್ತದೆ.

ಮೌರ್ಯ ಅರಸರಿಗೆ ಸಂಬಂಧಿಸಿದಂತೆ ಕೊಪ್ಪಳ ಜಿಲ್ಲಾ ಪ್ರದೇಶದಲ್ಲಿ ಇದುವರೆಗೂ ಎರಡು ಶಾಸನಗಳು ದೊರೆತಿವೆ. ಅವುಗಳೆಂದರೆ ಕೊಪ್ಪಳ ನಗರದ ಶ್ರೀ ಗವಿಸಿದ್ಧೇಶ್ವರ ಮಠದ ಹತ್ತಿರದಲ್ಲಿರುವ ಬಂಡೆಯ ಮೇಲೆ ಕೆತ್ತಿಸಿದ ಶಿಲಾಶಾಸನ ಮತ್ತು ಕೊಪ್ಪಳದ ಹತ್ತಿರವಿರುವ ಪಾಲ್ಕಿಗುಂಡಿನಲ್ಲಿರುವ ಶಾಸನ[೧] ಅತ್ಯಂತ ಪ್ರಮುಖವಾದವುಗಳು. ಈ ಶಾಸನಗಳು ಅಶೋಕನ ಆಳ್ವಿಕೆಯ ಕ್ರಿ.ಪೂ.೨೭೩ ರಿಂದ ೨೩೩ರ ನಡುವಿನ ಕಾಲಕ್ಕೆ ಸಂಬಂಧಿಸಿದವುಗಳಾಗಿವೆ. ಇವುಗಳಲ್ಲಿ ಪಾಲ್ಕಿಗುಂಡಿಯಲ್ಲಿರುವ ಅಶೋಕನ ಶಾಸನವು ಬಹಳಷ್ಟು ತೃಟಿತಗೊಂಡಿದ್ದು ಸ್ಪಷ್ಟವಾದ ಮಾಹಿತಿಯನ್ನು ಒದಗಿಸಲಾರದು. ಆದರೆ ಈ ಎರಡೂ ಶಾಸನಗಳಲ್ಲಿ ಬರುವ ವಿಚಾರಗಳು ಒಂದೇ ಎಂಬುದು ಮಾತ್ರ ಸ್ಪಷ್ಟ. ಕೊಪ್ಪಳ ನಗರದ ಶ್ರೀಗವಿಸಿದ್ಧೇಶ್ವರ ಮಠದ ಸಮೀಪದಲ್ಲಿರುವ ಶಾಸನವು 'ದೇವನಾಂಪ್ರಿಯ'ನಾದ ಅಶೋಕನು ತನ್ನ ಸಾಮ್ರಾಜ್ಯದ ಪ್ರಜೆಗಳಿಗೆ ಅವರು ಆಚರಿಸಬೇಕಾದ ಧರ್ಮದ ಬಗೆಗೆ ತಿಳಿಯ ಹೇಳಿದ್ದನ್ನು ವಿವರಿಸುತ್ತದೆ. ಈ ಅಂಶವನ್ನು ಗಮನಿಸಿದರೆ ಕೊಪ್ಪಳವೂ ಸೇರಿದಂತೆ ಅದರ ಸುತ್ತಮುತ್ತಲಿನ ಪ್ರದೇಶವು ಮೌರ್ಯರ ಆಳ್ವಿಕೆಗೆ ಒಳಪಟ್ಟಿರಬೇಕೆಂಬ ಅಂಶವು ಸ್ಪಷ್ಟವಾಗಿ ತಿಳಿದು ಬರುತ್ತದೆ. ಕೊಪ್ಪಳ ಪ್ರದೇಶಕ್ಕೆ ಹತ್ತಿರವಿರುವ ರಾಯಚೂರು ಜಿಲ್ಲೆಯ ಮಸ್ಕಿಯಲ್ಲಿ ದೊರೆತಿರುವ ಶಾಸನವು ಸಹ ಇದೇ ವಿಷಯವನ್ನು ಸಾರುತ್ತದೆ. ಅಶೋಕನ ಸಾಮ್ರಾಜ್ಯದಲ್ಲಿ ದಕ್ಷಿಣ ಪ್ರಾಂತದ ಮುಖ್ಯ ಸ್ಥಳವಾಗಿದ್ದ ಸುವರ್ಣಗಿರಿಯು ಮಸ್ಕಿಯ ಬಳಿಯಲ್ಲಿಯೇ ಇದ್ದಿತ್ತೆಂಬುದು ಕೆಲವು ವಿದ್ವಾಂಸರ ಅಭಿಪ್ರಾಯವಾಗಿದೆ. ಕೊಪ್ಪಳ ಜಿಲ್ಲೆಯ ಇಂದಿನ ಕನಕಗಿರಿಯೇ ಈ ಸುವರ್ಣಗಿರಿಯೆಂಬುದು ಮತ್ತೆ ಕೆಲವರ ಅಭಿಪ್ರಾಯ. ಅದೇನೇ ಇದ್ದರೂ ಕೊಪ್ಪಳ ನಾಡು ಮೌರ್ಯ ಸಾಮ್ರಾಜ್ಯದ ಪ್ರಮುಖ ಭಾಗವಾಗಿದ್ದು ಪ್ರಾಂತೀಯ ರಾಜಧಾನಿ ಸಹ ಈ ಪ್ರದೇಶವಾಗಿತ್ತೆಂಬುದು ಸರ್ವವಿದಿತವಾದ ವಿಷಯವಾಗಿದೆ. ಕೊಪ್ಪಳದ ಶಾಸನದಂತೆ ಮಸ್ಕಿ ಶಾಸನದಲ್ಲಿಯೂ 'ದೇವನಾಂಪ್ರಿಯ', 'ಪ್ರಿಯದರ್ಶಿ' ಎಂದು ಕರೆಯಲ್ಪಡುವ ಅಶೋಕನ ಹೆಸರು ಕಂಡುಬರುವುದರಿಂದ ಈ ಶಾಸನಗಳ ಮಹತ್ವ ಹೆಚ್ಚಿದೆ. ಇದರಿಂದಾಗಿ ಅಶೋಕನ ಕಾಲದಲ್ಲಿ ಈ ಪ್ರದೇಶದಲ್ಲಿ ಬೌದ್ಧಧರ್ಮ ಪ್ರಬಲವಾಗಿತ್ತೆಂದು ತಿಳಿದುಬರುತ್ತದೆ. ಅಶೋಕನ ಕೊಪ್ಪಳದ ಶಾಸನದ[೨] ಪ್ರತಿ ಹೀಗೆ ಸಾರುತ್ತದೆ.

೧. ದೇವನಾಂಪಿಯೇ ಆಹ ಸಾತಿರೇಕಾಣಿ ಅಢತಿಯಾಣಿ ವಸಾಣಿ ಯಮ್ ಉಪಾ

೨. ಸಕೇ ಣೊ ಚು ಕೋ ಬಾಢಮ್ ಪಕಂತೇ ಸಂವಛರೇ ಸಾತಿರೇಕೇ ಯಮ್ ಮೇ ಸಂಘೇ ಉಪೇತಿ ಬಾಢಂ

೩. ಚ ಮೇ ಪಕಂತೇ ಸೇ ಇಮಾಯಮ್ ವೇಲಾಯಮ್ ಜಂಬುದೀಪಸಿ ಅಮಿಸಾ ದೇವಾ ಸಮಾಣಾ

೪. ಮಾಣುಸೇಹಿ ಸೇ ದಾಣಿ ಮಿಸಾ ಕಟಾ ಪಕಮಸ ಏಸ ಫಾಲೆ ಣೋ ಹಿ ಇಯಮ್ ಮಹತೇಣೇವ ಚ

೫. ಕಿಯೇ ಪಾಪೋಟವೆ ಖುಡಕೇನ ಪಿ ಪರಮಮೀಣೇನ ವಿಪುಲೇ ಪಿ ಚಕಿಯೇ ಸ್ವಗೇ ಆರಾಧ್ಯಯಿತವೇ

೬. ತಾಯ ಚ ಅಥಯ ಇಯಮ್ ಸಾವಣೇ ಖುಡಕಾ ಚ ಉಡಾರಾ ಚ ಪರಮಂತು ತಿ ಅಂತಾ ಪಿ ಚ ಜಾಣಂತು ಚಿರಠಿ

೭. ಠಿಕೇ ಚ ಪರಮೇ ಹೋತು ಇಯಮ್ ಚ ಅಠೇ ವಢಿಸಿತಿ ವಿಪುಲೇ ಚ ವಢಿಸಿತಿ ದಿಯ

೮. ಢಿಯಮ್ ಪಿ ಚ ವಢಿಸಿತೀತಿ

ಈ ಮೇಲಿನ ಶಾಸನದ ಅತಿ ಮುಖ್ಯವಾದ ಸಾರಾಂಶ ಹೀಗಿದೆ:

"ದೇವನಾಂಪ್ರಿಯನು ಹೀಗೆ ಹೇಳುತ್ತಾನೆ. ನಾನು ಎರಡೂವರೆ ವರ್ಷಗಳಿಗಿಂತ ಹೆಚ್ಚು ಕಾಲ ಪ್ರಕಾಶದಲ್ಲಿ ಶಾಕ್ಯನಾಗಿದ್ದೆ. ಆದರೆ ಅಷ್ಟು ಚೆನ್ನಾಗಿ ಮನಸ್ಸಿಟ್ಟು ಪ್ರಯತ್ನಿಸಲಿಲ್ಲ. ಆದರೆ ಈಗ ಒಂದು ಸಂವತ್ಸರಕ್ಕಿಂತ ಹೆಚ್ಚು ಕಾಲ ಸಂಘವನ್ನು ಪ್ರವೇಶಿಸಿ ಚೆನ್ನಾಗಿ ಪ್ರಯತ್ನಿಸಿರುವೆನು. ಈ ಕಾಲದಲ್ಲಿ ಜಂಬೂ ದ್ವೀಪದ ಜನರು ದೇವರುಗಳೊಂದಿಗೆ ಮಿಶ್ರರಾಗಿದ್ದವರೆಲ್ಲರೂ ದೇವರುಗಳೊಂದಿಗೆ ಮಿಶ್ರರಾದರು. ಇದು ಪ್ರಯತ್ನದ ಫಲ. ಮಹತ್ತರಿಂದ ಮಾತ್ರ ಇದು ಸಾಧ್ಯವೆಂದು ತಿಳಿಯಬೇಡಿ. ಕ್ಷುದ್ರ ಜನರೂ ಕೂಡ ತಮ್ಮ ಪ್ರಯತ್ನದಿಂದ ಸ್ವರ್ಗವನ್ನು ಪಡೆಯಬಹುದು. ಇದಕ್ಕಾಗಿಯೇ ಈ ಧರ್ಮ ಶ್ರವಣವನ್ನು ಮಾಡಿರುವುದು. ಕ್ಷುದ್ರರೂ, ಮಹಾತ್ಮರೂ ಎಲ್ಲರೂ ಪರಾಕ್ರಮಿಸಲಿ ಎಂದು, ನೆರೆಯವರು ಕೂಡ ಇದನ್ನು ತಿಳಿಯಲಿ ಎಂದು, ಪರಾಕ್ರಮ ಎಂದರೆ ಇದು. ಚಿರಸ್ಥಾಯಿಯಾಗಿ ನಿಲ್ಲಲಿ ಎಂದು ಇದು ವರ್ಧಿಸುತ್ತದೆ. ವಿಪುಲವಾಗಿ ವರ್ಧಿಸುತ್ತದೆ. ಈಗಿನಕ್ಕಿಂತ ಒಂದೂವರೆಯಷ್ಟು ವರ್ಧಿಸುತ್ತದೆ."

ಈ ಮೇಲಿನ ಶಾಸನದಲ್ಲಿ ಗಮನಿಸಬೇಕಾದ ಅಂಶವೆಂದರೆ ಕ್ಷುದ್ರ ಜನರೂ ಕೂಡ ಸ್ವರ್ಗವನ್ನು ಪಡೆಯಬಹುದೆಂದು ಹೇಳಿರುವುದು. ಬಹುಶಃ ಭಾರತದ ಚರಿತ್ರೆಯಲ್ಲಿ ಕ್ಷುದ್ರ ಜನರ ಬಗ್ಗೆ ಮಾತನಾಡಿದ ಮೊದಲನೇ ಧೀಮಂತ ಅರಸ ಅಶೋಕನಾಗಿದ್ದಾನೆ. ಸ್ವರ್ಗ ಅಥವಾ ಇನ್ನಾವುದೇ ವಿಶಿಷ್ಟತೆಗಳಾಗಲಿ ಕೇವಲ ಮೇಲ್ವರ್ಗದವರಿಗೆ ಮಾತ್ರ ಸೀಮಿತ ಮತ್ತು ಅವರಿಗೆ ಸಿಗುತ್ತವೆ. ಅವರೇ

ಅದನ್ನು ಪಡೆಯಲು ಪ್ರಯತ್ನಿಸಬೇಕು ಎಂದು ಉಪದೇಶಿಸುವ ಕಾಲದಲ್ಲಿ ಕ್ಷುದ್ರ ಜನರೂ ಕೂಡ ಧರ್ಮವನ್ನು ಆಚರಿಸಬಹುದು ಮತ್ತು ಈ ಪ್ರಯತ್ನದಿಂದ ಅವರು ಸ್ವರ್ಗವನ್ನು ಪಡೆಯಬಹುದು ಎಂದು ಅಶೋಕನು ಶಾಸನದಲ್ಲಿ ಜನತೆಗೆ ಕರೆಕೊಟ್ಟಿದ್ದಾನೆ. ಇನ್ನೊಂದು ದೃಷ್ಟಿಯಿಂದ ನೋಡಿದಾಗ ಬಹುಶಃ ಬೌದ್ಧ ಧರ್ಮದ ಪ್ರಚಾರದ ದೃಷ್ಟಿಯಿಂದ ಈ ಮಾತನ್ನು ಹೇಳಿದ್ದಾನೆಂದು ಊಹಿಸಲು ಸಾಧ್ಯವಿದೆ. ಆದರೆ ಅಶೋಕನ ಚರಿತ್ರೆ(ಕಳಿಂಗ ಯುದ್ಧದ ನಂತರ ಶಾಂತಿಗಾಗಿ ಯುದ್ಧವನ್ನೇ ತಿರಸ್ಕರಿಸಿದ್ದು)ಯನ್ನು ಅವಲೋಕಿಸಿದಾಗ ಆತನಲ್ಲಿದ್ದ ಮಾನವೀಯ ಗುಣದ ಅರಿವಾಗುತ್ತದೆ. ಇಂತಹ ವಿಶೀಷ್ಟವಾದ ಶಾಸನವೊಂದು ಜಿಲ್ಲೆಯಲ್ಲಿ ದೊರೆತದ್ದು ವಿಶೇಷ.

ಹಾಗೆಯೇ ಕರ್ನಾಟಕದ ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ, ಸಿದ್ಧಾಪುರ, ಜಟಿಂಗರಾಮೇಶ್ವರ; ಬಳ್ಳಾರಿ ಜಿಲ್ಲೆಯ ನಿಟ್ಟೂರು, ಉಡೇಗೋಳ; ರಾಯಚೂರು ಜಿಲ್ಲೆಯ ಮಸ್ಕಿ...... ಮುಂತಾದೆಡೆಯಲ್ಲಿ ಅಶೋಕನಿಗೆ ಸಂಬಂಧಿಸಿದ ಸುಮಾರು ಹದಿನೇಳು ಶಾಸನಗಳು ಲಭ್ಯವಿವೆ. ಪಾಲ್ಕಿಗುಂಡು ಮತ್ತು ಮಸ್ಕಿಗಳಲ್ಲಿ ಶಾಸನಗಳಲ್ಲಿನ ವೃತ್ತಾಂತವೂ ಸ್ವಲ್ಪ ಹೆಚ್ಚು ಕಡಿಮೆ ಇದೇ ಆಗಿದೆ. ಇಂತಹ ಶಾಸನಗಳ ಮುಖಾಂತರ ಮೌರ್ಯರ ಕಾಲದ ಆಡಳಿತದ ಕುರುಹುಗಳನ್ನು ಕೊಪ್ಪಳ ಜಿಲ್ಲೆಯಲ್ಲಿ ನಾವು ಗುರುತಿಸಬಹುದು.

ಶಾತವಾಹನರು

ಮೌರ್ಯರ ನಂತರ ಈ ಪ್ರದೇಶ ಶಾತವಾಹನ ದೊರೆಗಳ ಆಳ್ವಿಕೆಗೆ ಸೇರಿದಂತೆ ತಿಳಿದು ಬರುತ್ತದೆ. ಇವರ ಮೂಲ ಸ್ಥಾನವು ಈಗಿನ ಬಳ್ಳಾರಿ ಜಿಲ್ಲೆಯ ಉತ್ತರ ಭಾಗದಲ್ಲಿತ್ತೆಂದು ಹೇಳಲಾಗುತ್ತಿದೆ. ಕೊಪ್ಪಳ ನಾಡು ಬಳ್ಳಾರಿ ಪಕ್ಕದಲ್ಲಿರುವುದರಿಂದ ಆ ಕೀರ್ತಿ ಕೊಪ್ಪಳ ಪ್ರದೇಶಕ್ಕೂ ಅನ್ವಯಿಸಬಹುದಾಗಿದೆ. ಸುಮಾರು ೫೫೦ ವರ್ಷಗಳ ಕಾಲ ಆಳಿದ ಶಾತವಾಹನ ದೊರೆಗಳ ಆಡಳಿತದ ಕಾಲಾವಧಿ ಯುದ್ದಕ್ಕೂ ಕೊಪ್ಪಳ ಪ್ರದೇಶ ಅವರ ವಶದಲ್ಲಿತ್ತೆಂದು ಹೇಳಲು ಆಧಾರಗಳಿವೆ. ಎರಡು ಅಶ್ವಮೇಧಗಳನ್ನು ಮತ್ತು ರಾಜಸೂಯಗಳನ್ನು ಮಾಡಿದ ಈ ವಂಶದ ಕನ್ನ ಅಥವಾ ಕೃಷ್ಣ (ಕ್ರಿ.ಪೂ.೨೦೭-೧೮೯) ಮಹಾರಾಷ್ಟ್ರದಿಂದ ಪೂರ್ವ ತೀರದ ಕಳಿಂಗದವರೆಗಿನ ಭೂಭಾಗವನ್ನು ತನ್ನ ಅಧೀನದಲ್ಲಿಟ್ಟುಕೊಂಡಿದ್ದನು. ತದನಂತರ ಅಧಿಕಾರಕ್ಕೆ ಬಂದ ಇಮ್ಮಡಿ ಶಾತಕರ್ಣಿ (ಕ್ರಿ.ಪೂ.೧೭೯) ಪಾಟಲಿಪುತ್ರದ ಅರಸನನ್ನು ಯುದ್ಧದಲ್ಲಿ ಸೋಲಿಸಿ ಕೊಂದುದಾಗಿ ತಿಳಿದು ಬರುತ್ತದೆ. ಕುಂತಳ ಪ್ರದೇಶದಲ್ಲಿ ರಾಯಚೂರು ಜಿಲ್ಲೆ ಸೇರ್ಪಡೆಯಾಗಿತ್ತೆಂದು ತಿಳಿದು ಬರುತ್ತದೆ. ಪುಳುಮಾವಿ, ಹಾಲ (ಕ್ರಿ.ಶ.೨೦-೨೪), ಗೌತಮಿ ಪುತ್ರ ಶಾತಕರ್ಣಿ...... ಮುಂತಾದವರು ಈ ಪ್ರದೇಶದ ಮೇಲೆ ಆಡಳಿತ ನಡೆಸಿದರು. ಗೌತಮಿ ಪುತ್ರನ ಆಳ್ವಿಕೆಗೆ ಸ್ವಲ್ಪ ಮೊದಲು ಕ್ಷತ್ರಪರು ಶಾತವಾಹನ ರಾಜ್ಯವನ್ನು ತೊಂದರೆಗೀಡು ಮಾಡಿದ್ದರು. ಆದರೆ ಗೌತಮಿಪುತ್ರನು ಅವರನ್ನು ಹೊಡೆದೋಡಿಸಿ ತನ್ನ ರಾಜ್ಯವನ್ನು ಬಲಪಡಿಸಿದನು. ಈ ವಂಶದ ಕೊನೆಯ ಪ್ರಮುಖ ಅರಸು ಯಜ್ಞಶ್ರೀ ಶಾತಕರ್ಣಿ (ಕ್ರಿ.ಶ.೧೭೦-೧೯೯). ಈತನು ಶಾತವಾಹನ ವಂಶದ ಕೀರ್ತಿ ಪತಾಕೆಯನ್ನು ಪುನಃ ಸ್ಥಾಪಿಸಿದನು. ಇಂತಹ ಶಾತವಾಹನರಿಗೆ ಸಂಬಂಧಿಸಿದಂತೆ ನೇರವಾಗಿ ಮಾಹಿತಿ ನೀಡುವ

ಯಾವುದೇ ಶಾಸನವು ಕೊಪ್ಪಳ ಜಿಲ್ಲೆಯಲ್ಲಿ ಇದುವರೆಗೂ ಲಭ್ಯವಾಗಿಲ್ಲ. ಆದರೆ ಶಾಸನೇತರ ಅಂಶಗಳನ್ನು ಗಮನಿಸಿದರೆ ಶಾತವಾಹನರೂ ಕೂಡ ಕೊಪ್ಪಳ ಜಿಲ್ಲೆಯಲ್ಲಿ ಆಳ್ವಿಕೆ ನಡೆಸಿದಂತೆ ಕಂಡು ಬರುತ್ತದೆ.

ಮೌರ್ಯ ಸಾಮ್ರಾಜ್ಯದ ಪತನದ ನಂತರ ಅಲ್ಲಲ್ಲಿ ನೆಲೆಸಿದ್ದ ಶಾತವಾಹನರು ಈ ಪ್ರದೇಶದ ಒಡೆಯರಾದರೆಂಬುದನ್ನು ಅವರ ಕಾಲದ ಮಡಕೆಯ ತುಂಡುಗಳು ಮತ್ತು ಅವರ ಲಾಂಛನವಾದ ಆನೆಯ ಆಕರ್ಷಣೀಯ ರೇಖಾಚಿತ್ರವು ಕೋಟೆಯಲ್ಲಿನ ಎತ್ತರದ ಗುಂಡಿನಲ್ಲಿ ಕೆತ್ತಿದ 'ಉಸ್ಮಾನ' ತಾಣದಲ್ಲಿವೆ. ಇವರ ಕಾಲದ ಒಂದು ಉತ್ತಮ ನಾಣ್ಯವೊಂದು ಇಲ್ಲೇ ದೊರೆತಿರುವುದಾಗಿ ತಿಳಿದುಬರುತ್ತದೆ. ಈ ನಾಣ್ಯದ ಒಂದು ಬದಿಯಲ್ಲಿ ಆನೆಯ ಉಬ್ಬು ಚಿತ್ರವಿದ್ದು ಅದು ಹೆಚ್ಚು ಕಲಾತ್ಮಕವಾಗಿ ಪ್ರಮಾಣ ಬದ್ಧವಾಗಿ ಕಂಡುಬರುತ್ತದೆ. ಇದರ ಸುತ್ತಣ ಬ್ರಾಹ್ಮಿ ಲಿಪಿಯಲ್ಲಿ 'ಸಿರಿಸತಕ'(ನಿ) ಎಂದು ಬರೆಯಲ್ಪಟ್ಟಿದೆ. ಇದರ ಲಿಪಿ ಬ್ರಾಹ್ಮಿಯಾಗಿದ್ದರೆ; ಭಾಷೆ ಪ್ರಾಕೃತವಾಗಿದೆ. ಇದು ಬಹುಶಃ ಶಾತಕರ್ಣಿ ಮಹಾರಾಜನಿಗೆ ಸಂಬಂಧಿಸಿದ ಕಾಲದ್ದಾಗಿರಬೇಕೆಂದು ನಂಬಲಾಗಿದೆ. ನಾಣ್ಯದ ಹಿಂಬದಿಯಲ್ಲಿನ ವರ್ತುಲಗೊಳಿಸಿದ ಫಲಸಹಿತ ವೃತ್ತವನ್ನು ಕೆತ್ತಿಸಲಾಗಿದೆ. ಹಾಗೆಯೇ ಕೊಪ್ಪಳದ ಸಮೀಪದಲ್ಲಿನ ಚಿಕ್ಕಸಿಂದೋಗಿಯಲ್ಲಿ ಕೆಲವು ವರ್ಷಗಳ ಹಿಂದೆ ಇಂತಹ ನಾಣ್ಯಗಳು ದೊರಕಿರುವುದಾಗಿ ಕರ್ನಾಟಕ ಸರ್ಕಾರದ ಪುರಾತತ್ವ ಇಲಾಖೆ ಪ್ರಕಟಿಸಿದೆ.[೩] ಈ ನಾಣ್ಯಗಳಿಂದ ಪಾತ್ರೆಯ ಮೇಲೆ 'ಚಿಂತಸ' ಎಂದು ಬರೆಯಲಾಗಿದೆ. 'ಚಿಂತ' ಎಂಬುದು ವ್ಯಕ್ತಿಯ ಹೆಸರು. 'ಸ'ಷಷ್ಠಿ ವಿಭಕ್ತಿ. ಪ್ರಾಕೃತ ಭಾಷೆಯಲ್ಲಿನ 'ಸ'ವು ಕನ್ನಡದಲ್ಲಿ 'ನ'ಕಾರವಾಗುತ್ತದೆ. ಅಂದರೆ 'ಚಿಂತಸ'ವು ಕನ್ನಡದಲ್ಲಿ 'ಚಿಂತನ' ವಾಗುತ್ತದೆ. ಮುದ್ರಾಂಕಿತ ನಾಣ್ಯಗಳಾದ ಇವುಗಳು ಪಂಚಮಾರ್ಕದವುಗಳಾಗಿವೆ. ಇವುಗಳು ಮೌರ್ಯರ ಕಾಲದಿಂದ ಶಾತವಾಹನರ ಕಾಲದವರೆಗೂ ಬಳಕೆ ಯಲ್ಲಿದ್ದವೆಂದು ತಿಳಿದು ಬರುತ್ತದೆ. ಸುಂದರ ಅವರು ಸಹ ಇದನ್ನು ಸಮರ್ಥಿಸುತ್ತಾರೆ.[೪] ಆದರೆ ಇದನ್ನು ಸಮರ್ಥಿಸುವ ಯಾವುದೇ ಶಾಸನವು ಲಭ್ಯವಿಲ್ಲ. ಆದುದರಿಂದ ಶಾಸನಗಳ ಆಧಾರಗಳಲ್ಲದೆ ಶಾತವಾಹನರ ಆಡಳಿತವು ಕೊಪ್ಪಳದಲ್ಲಿತ್ತು ಎಂಬುದು ಸುಲಭವಾಗಿ ಒಪ್ಪಲಾಗದು.

ಶಾತವಾಹನರ ನಂತರ ಹಂಚಿಹೋದ ಹಲವಾರು ಸಣ್ಣಮಟ್ಟ ರಾಜ್ಯಗಳು ತಲೆ ಎತ್ತಿದವು. ಬಹುಶಃ ಇಂತಹ ಸಣ್ಣ ವಂಶಗಳಲ್ಲಿ ಒಂದಾದ ವಾಕಾಟಕರು ಕೊಪ್ಪಳ ಪ್ರದೇಶದಲ್ಲಿ ಅಧಿಕಾರವನ್ನು ಸ್ಥಾಪಿಸಿರಬಹುದು. ಈ ವಂಶದ ರುದ್ರಸೇನ (ಕ್ರಿ.ಶ.೩೪೦–೩೬೫) ಮತ್ತು ಪೃಥ್ವಿಸೇನ(ಕ್ರಿ.ಶ.೩೬೫–೩೯೦) ಕುಂತಳವನ್ನು ತಮ್ಮ ವಶಕ್ಕೆ ತೆಗೆದುಕೊಂಡಿರಬೇಕು. ಆರನೆಯ ಶತಮಾನದ ಮಧ್ಯಭಾಗದಲ್ಲಿ ವಾಕಾಟಕರು ತಮ್ಮ ಪ್ರಾಬಲ್ಯವನ್ನು ಕಳೆದುಕೊಂಡರು. ಕೆಲಕಾಲ ಈ ಪ್ರದೇಶದ ಮೇಲೆ ಚೂಟು ವಂಶದ ಅರಸರು ಅಧಿಕಾರ ಪಡೆದಿರಬಹುದಾಗಿದೆ. ಆದರೆ ಇದಕ್ಕೆ ಶಾಸನಗಳ ಆಧಾರವಿಲ್ಲ.

ಕದಂಬರು

ಶಾತವಾಹನರ ತರುವಾಯ ಕೊಪ್ಪಳ ಜಿಲ್ಲಾ ಪ್ರದೇಶವು ಬಹುಮಟ್ಟಿಗೆ ಬನವಾಸಿಯ

ಕದಂಬರ ರಾಜ್ಯಕ್ಕೆ ಸೇರಿರಬೇಕೆಂದು ಸುಲಭವಾಗಿ ಊಹಿಸಬಹುದು. ಸಾಮಾನ್ಯವಾಗಿ ಚರಿತ್ರೆಕಾರರು ಕದಂಬ ರಾಜ್ಯದ ಉತ್ತರದ ಎಲ್ಲೆಯು ಮಲಪ್ರಭ ನದಿಯೆಂದು, ಪೂರ್ವದ ಎಲ್ಲೆಯು ಶ್ರೀಶೈಲವೆಂದು ಗುರ್ತಿಸಿದ್ದಾರೆ. ಕಾರಣ ಈ ಕೊಪ್ಪಳವು ತುಂಗಭದ್ರ ಮತ್ತು ಮಲಪ್ರಭ ಸಮತಲದಲ್ಲಿ ಬಹುಮಟ್ಟಿಗೆ ಬರುತ್ತದೆ. ಇದಕ್ಕೆ ಪೂರಕವಾಗಿ ಮಯೂರವರ್ಮನ ಪುನರ್ ವಿಮರ್ಶಿಸಿದ ಚಂದ್ರವಳ್ಳಿಯ ಶಾಸನ[೫] ದಲ್ಲಿ ಕುಪಣದ ಚಾಮನ ವಿವರವಿದೆ. ಪ್ರಸ್ತುತ ಕದಂಬರ ರಾಜ್ಯದಲ್ಲಿ ಕೊಪ್ಪಳವೂ ಸೇರ್ಪಡೆಯಾಗಿದ್ದುದು ಈ ಶಾಸನದಿಂದ ತಿಳಿದು ಬರುತ್ತದೆ. ಕದಂಬರ ಸಾಮಂತ ಅರಸನಾಗಿದ್ದ ಬಾದಾಮಿ ಚಾಲುಕ್ಯ ವಂಶದ ಒಂದನೇ ಪುಲಿಕೇಶಿಯು ಪ್ರಬಲನಾಗಿ ಕದಂಬರ ಕೊನೆಯ ಅರಸು ಕೃಷ್ಣ ವರ್ಮನನ್ನು ಸೋಲಿಸಿ ಕ್ರಿ.ಶ.೫೪೦ರಲ್ಲಿ ಸ್ವತಂತ್ರನಾದನೆಂಬುದಾಗಿ ಸ್ಪಷ್ಟವಾಗುತ್ತದೆ.

ಬಾದಾಮಿ ಚಾಲುಕ್ಯರು

ಮೌರ್ಯರ ನಂತರ ಅಧಿಕೃತವಾಗಿ ಕೊಪ್ಪಳವನ್ನು ಆಳಿದ ರಾಜ ಮನೆತನವೆಂದರೆ ಬಾದಾಮಿ ಚಾಲುಕ್ಯ ಮನೆತನ. ಆರನೆಯ ಶತಮಾನದ ಉತ್ತರಾರ್ಧದಲ್ಲಿ ಪ್ರಬಲರಾದ ಬಾದಾಮಿಯ ಚಾಲುಕ್ಯರು ಈ ಭಾಗಕ್ಕೆ ಒಡೆಯರಾದರು. ಮೊದಲ ದೊರೆಗಳಾದ ಒಂದನೇಯ ಪುಲಿಕೇಶಿ, ಕೀರ್ತಿವರ್ಮ ಮತ್ತು ಮಂಗರಸರ ಕಾಲದಲ್ಲಿ ಕೊಪ್ಪಳ ಪ್ರದೇಶ ಅವರಿಗೆ ಸೇರಿತ್ತೋ ಇಲ್ಲವೋ ನಿಶ್ಚಿತವಾಗಿ ಹೇಳುವ ಶಾಸನಗಳಾವುವು ಇದುವರೆಗೂ ದೊರೆತಿಲ್ಲ. ಆದರೆ ಇಮ್ಮಡಿ ಪುಲಿಕೇಶಿಯ ಕಾಲದಿಂದ (ಕ್ರಿ.ಶ.೬೦೯–೬೪೨) ಈ ವಿಷಯದಲ್ಲಿ ಸಂದೇಹಕ್ಕೆ ಆಸ್ಪದವಿಲ್ಲ. ಉತ್ತರದಲ್ಲಿ ನರ್ಮದೆಯವರೆಗೆ, ಪೂರ್ವದಲ್ಲಿ ಕಳಿಂಗದವರೆಗೆ ಹಬ್ಬಿದ್ದ ಈ ರಾಜ್ಯದೊಳಗೆ ಸಹಜವಾಗಿಯೇ ಕೊಪ್ಪಳ ಪ್ರದೇಶ ಸೇರಿರುತ್ತದೆ. ಕದಂಬ, ಗಂಗ, ಅಳುಪ, ಪಲ್ಲವ, ಚೋಳ, ಕೊಂಕಣದ ಮೌರ್ಯ, ಮಾಳವ ಮತ್ತು ಗೂರ್ಜರ ದೊರೆಗಳನ್ನು ಕೋಸಲ ಕಳಿಂಗ ದೇಶಗಳನ್ನು ತನ್ನ ಪ್ರಭುತ್ವಕ್ಕೆ ಒಳಪಡಿಸಿಕೊಂಡವನು ಇಮ್ಮಡಿ ಪುಲಿಕೇಶಿ. ಉತ್ತರಪಥೇಶ್ವರನಾಗಿದ್ದ ಹರ್ಷ ವರ್ಧನನ್ನು ಸೋಲಿಸಿ ದಕ್ಷಿಣಪಥೇಶ್ವರನೆಂಬ ಬಿರುದುವೆತ್ತ ಇಮ್ಮಡಿ ಪುಲಿಕೇಶಿಯು ಕರ್ನಾಟಕದ ಇತಿಹಾಸದಲ್ಲಿಯೇ ಒಬ್ಬ ಶಕಪುರುಷ. ಭಾರತದ ಸಮುದ್ರದಾಚೆಗೂ ತನ್ನ ಕೀರ್ತಿಯನ್ನು ಪಸರಿಸಿದ್ದ. ಪುಲಿಕೇಶಿ ಪರ್ಷಿಯ ಚಕ್ರವರ್ತಿ ಇಮ್ಮಡಿ ಖುಸ್ರುವಿನೊಂದಿಗೆ ರಾಯಭಾರ ಸಂಬಂಧವನ್ನು ಹೊಂದಿದ್ದನು. ಖುಸ್ರುವಿನ ದೂತನು ಚಾಲುಕೇಶ್ವರನಿಗೆ ಕಾಣಿಕೆಯನ್ನು ನೀಡುತ್ತಿರುವ ದೃಶ್ಯದ ಚಿತ್ರವೊಂದು ಅಜಂತಾದ ಗುಹೆಯೊಂದರ ವರ್ಣಚಿತ್ರದಲ್ಲಿ ಇರುವುದನ್ನು ಇತಿಹಾಸತಜ್ಞರು ಗುರುತಿಸಿದ್ದಾರೆ. ಚೀನಾದ ಬೌದ್ಧ ಯಾತ್ರಿಕ ಹುಯೆನ್‌ತ್ಸಾಂಗ್ ಪುಲಿಕೇಶಿಯ ಆಡಳಿತದ ಕಾಲದಲ್ಲಿ ಇಲ್ಲಿಗೆ ಬಂದಿದ್ದು, ಕರ್ನಾಟಕದ ಭವ್ಯ ಜೀವನದ ಸಂಸ್ಕೃತಿಯನ್ನು ಮುಕ್ತ ಕಂಠದಿಂದ ಹೊಗಳಿದ್ದಾನೆ. ಪಲ್ಲವ ಚಾಲುಕ್ಯ ಹೋರಾಟ ಶ್ರೇಣಿಯಲ್ಲಿ ಸಾಮಾನ್ಯವಾಗಿ ಮೇಲುಗೈ ಪಡೆದಿದ್ದ ಕರ್ನಾಟಕ ರಾಜಶ್ರೀ ಪುಲಿಕೇಶಿಯ ಆಳ್ವಿಕೆಯ ಕೊನೆಗಾಲದಲ್ಲಿ ತಾತ್ಕಾಲಿಕವಾಗಿ ಭೂಗತಗಳಾಗಬೇಕಾಯಿತು. ಪಲ್ಲವ ನರಸಿಂಹವರ್ಮನು ಬಾದಾಮಿಯನ್ನು ವಶಪಡಿಸಿಕೊಂಡಾಗ ಉಂಟಾದ ಅಸ್ತವ್ಯಸ್ತ ಪರಿಸ್ಥಿತಿಯಲ್ಲಿ ಪುಲಕೇಶಿಯು ಕಣ್ಮರೆಯಾದನು.

ಒಂದನೇ ಪುಲಿಕೇಶಿಯು ಬಾದಾಮಿಯ ಗಿರಿಯ ಮೇಲೆ ಕಲ್ಲಿನ ಕೋಟೆಯನ್ನು ಕಟ್ಟಿಸಿದನು. ಇದು ಪ್ರಪ್ರಥಮವಾದ ಗಿರಿಯ ಕೋಟೆಯಾಗಿದ್ದು ಕರ್ನಾಟಕದ ಉಳಿದ ಭಾಗದಲ್ಲಿ ಗಿರಿಗಳ ಮೇಲೆ ಕೋಟೆಗಳನ್ನು ನಿರ್ಮಿಸಲು ನಾಂದಿಯಾಯಿತು. ಬಾದಾಮಿ ಚಾಲುಕ್ಯ ವಂಶದಲ್ಲಿಯೇ ಅತ್ಯಂತ ಪ್ರಬಲ ಅರಸ ಮತ್ತು ದಕ್ಷಿಣಪಥೇಶ್ವರನೆಂದು ಬಿರುದು ಪಡೆದಿದ್ದ ಇಮ್ಮಡಿ ಪುಲಿಕೇಶಿಯು ದಕ್ಷಿಣ ಭಾರತವನ್ನಲ್ಲದೇ ಉತ್ತರ ಭಾರತದಲ್ಲಿಯೂ ತನ್ನ ಸಾಮ್ರಾಜ್ಯನ್ನು ವಿಸ್ತರಿಸಿದ್ದನು.

ಜಿಲ್ಲೆಯಲ್ಲಿ ಬಾದಾಮಿಯ ಚಾಲುಕ್ಯರ ಆಡಳಿತದ ಕಾಲಾವಧಿಯನ್ನು ಸೂಚಿಸುವ ಕೆಲವೊಂದು ಶಾಸನಗಳಲ್ಲಿ ಮಾತ್ರ ಕಂಡು ಬರುತ್ತವೆ. ಹೀಗಾಗಿ ಬಾದಾಮಿ ಚಾಲುಕ್ಯ ಆಡಳಿತದ ಕಾಲಾವಧಿವರೆಗಿನ ಈ ಜಿಲ್ಲೆಯ ರಾಜಕೀಯ ಇತಿಹಾಸ ಸ್ಪಷ್ಟವಾಗಿ ದೊರಕುವುದಿಲ್ಲ. ಬಾದಾಮಿ ಚಾಲುಕ್ಯರಿಗೆ ಸಂಬಂಧಿಸಿದಂತೆ ಹಲಗೇರಿ, ಇಟಗಿ, ಕುಕನೂರುಗಳಲ್ಲಿ ಕೆಲವು ಶಾಸನಗಳು ದೊರಕುತ್ತವೆ. ಕ್ರಿ.ಶ.೮ನೇ ಶತಮಾನದ ಹಲಗೇರಿಯ ಶಾಸನವು[೬] ವಿಜಯಾದಿತ್ಯನ ಕಾಲಕ್ಕೆ ಸಂಬಂಧಿಸಿದ್ದಾಗಿದೆ. ಈ ಶಾಸನದಲ್ಲಿ 'ಕೊಪಣ' (ಕೊಪ್ಪಳವೆಂಬುದು ಇತ್ತೀಚಿನ ಹೆಸರು)ದ ಬಗೆಗೆ ಪ್ರಪ್ರಥಮವಾಗಿ ಶಾಸನೋಕ್ತ ಹೆಸರು ದಾಖಲಾಗಿದೆ. ಹಾಗೆಯೇ ಪ್ರಸ್ತುತ ಶಾಸನವು ಕೊಪ್ಪಳದ ಅಂದಿನ ಮೂರು ಜಾತಿ, ಗುತ್ತಿಯ ಮುಖ್ಯಸ್ಥ (ಅಂಗ) ರಾಜನನ್ನು ಕುರಿತಾಗಿಯೂ ಉಲ್ಲೇಖಿಸುತ್ತದೆ. ಹಾಗೆಯೇ ಈ ಚಾಲುಕ್ಯ ವಂಶದ ಅರಸು ವಿಜಯಾದಿತ್ಯನ ಕಾಲದಲ್ಲಿ (ಕ್ರಿ.ಶ.೬೯೬-೭೩೩) ಈತನ ವಿತ್ತ ಸಚಿವ ಗುತ್ತಿಯ ಒಡೆಯ ಅಂಗರಾಜನು ಈ ಕೊಪ್ಪಳದಲ್ಲಿ ಇದ್ದುದನ್ನು ಪ್ರಸ್ತುತ ಹಲಗೇರಿ ಶಾಸನವು ಸ್ಪಷ್ಟಪಡಿಸುತ್ತದೆ.

ಇಟಗಿಯ ಶಾಸನವೊಂದು[೭] ಇದೇ ಬಾದಾಮಿ ಚಾಲುಕ್ಯ ವಂಶದ ಮತ್ತೊಬ್ಬ ಅರಸನಾಗಿದ್ದ ಯುದ್ಧಮಲ್ಲ ಸತ್ಯಾಶ್ರಯನ ಕಾಲಕ್ಕೆ ಸಂಬಂಧಿಸಿದೆ. ಆದರೆ ಈ ಶಾಸನವು ತ್ರುಟಿತವಾಗಿದ್ದು ವಿವರಗಳು ಸ್ಪಷ್ಟವಾಗಿ ದೊರೆಯಲಾರವು. ಬಾದಾಮಿ ಚಾಲುಕ್ಯ ಮಾಂಡಲೀಕ ದಂತಿದುರ್ಗನು ಈ ಚಾಲುಕ್ಯ ವಂಶದ ಕೊನೆಯ ಅರಸು ಕೀರ್ತಿವರ್ಮನನ್ನು ಸೋಲಿಸಿ ಕ್ರಿ.ಶ.೭೫೭ರಲ್ಲಿ ಮಾನ್ಯಖೇಟದಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಹೀಗಾಗಿ ಪ್ರಸ್ತುತ ಶಾಸನಗಳ ಆಧಾರಗಳಿಂದ ಕೊಪ್ಪಳ ಜಿಲ್ಲೆಯಲ್ಲಿ ಬಾದಾಮಿ ಚಾಲುಕ್ಯ ವಂಶವು ಆಳ್ವಿಕೆ ನಡೆಸಿದೆಯೆಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ.

ರಾಷ್ಟ್ರಕೂಟರು

ಬಾದಾಮಿ ಚಾಲುಕ್ಯರ ನಂತರ ಕರ್ನಾಟಕದಲ್ಲಿ ತಮ್ಮ ಸಾಮ್ರಾಜ್ಯದ ಮೂಲಕ ಆಳ್ವಿಕೆ ನಡೆಸಿದ ಅರಸು ಮನೆತನವೆಂದರೆ ರಾಷ್ಟ್ರಕೂಟ ಮನೆತನ. ಈ ವಂಶದ ಪ್ರಖ್ಯಾತ ಅರಸನಾದ ಅಮೋಘವರ್ಷ ನೃಪತುಂಗನ ಕಾಲದಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯವು ಉತ್ತರದಲ್ಲಿ ಗೋದಾವರಿ ನದಿಯವರೆಗೂ ದಕ್ಷಿಣದಲ್ಲಿ ಕಾವೇರಿ ನದಿಯವರೆಗೂ ಪೂರ್ವದಿಂದ ಪಶ್ಚಿಮದ ಸಾಗರಗಳವರೆಗೂ ಹಬ್ಬಿದ್ದಿತು. ಇಂತಹ ಪ್ರಖ್ಯಾತ ಅರಸು ಮನೆತನಕ್ಕೆ ಸಂಬಂಧಿಸಿದ ಅನೇಕ ಶಾಸನಗಳು ಕೊಪ್ಪಳ ಜಿಲ್ಲೆಯಲ್ಲಿ ದೊರೆಯುತ್ತವೆ.

ಕೊಪ್ಪಳ ಜಿಲ್ಲೆಯ ಇಟಗಿ, ಅರಕೇರಿ, ಸಂಕನೂರು, ಅಳವಂಡಿ, ಬೆಟಗೇರಿ ಮುಂತಾದ ಸ್ಥಳಗಳಲ್ಲಿ ರಾಷ್ಟ್ರಕೂಟರಿಗೆ ಸಂಬಂಧಿಸಿದ ಅನೇಕ ಶಾಸನಗಳು ದೊರಕುತ್ತವೆ. ನೃಪತುಂಗನು ಸೇರಿದಂತೆ ಈ ಮನೆತನದ ಪ್ರಮುಖ ಅರಸರುಗಳಾದ ಮುಮ್ಮಡಿ ಇಂದ್ರ, ಪ್ರಭೂತವರ್ಷ ಗೋವಿಂದ, ಇಮ್ಮಡಿ ಕೃಷ್ಣ, ಮುಮ್ಮಡಿ ಕೃಷ್ಣ, ಜೊಟ್ಟಿಗ.......... ಮುಂತಾದವರನ್ನು ಕುರಿತಂತೆಯೂ ಅನೇಕ ಶಾಸನಗಳು ಈ ಪ್ರದೇಶದಲ್ಲಿ ದೊರಕಿವೆ.

ರಾಷ್ಟ್ರಕೂಟ ವಂಶದ ಪ್ರಥಮ ಪ್ರಸಿದ್ಧ ದೊರೆಯೆನಿಸಿಕೊಂಡಿರುವ ಮುಮ್ಮಡಿ ಇಂದ್ರ (ಕ್ರಿ.ಶ.೮೮೩)ನ ಕಾಲದಲ್ಲಿ ಕೊಪಣ(ಕೊಪ್ಪಳ)ದ ದಂಡ ನಾಯಕನಾಗಿದ್ದ ಮಾಮರಸನೆಂಬುವವನು ಭೇಟಿ ನೀಡಿ, ಕದಂಬ ವಂಶದ ಮಹಾ ಸಾಮಂತನಾಗಿದ್ದ ದಡಿಯಮರಸನು ಕಟ್ಟಿಸಿದನೆಂದು ಹೇಳಲಾಗುವ ಬಸದಿಗೆ ದಾನವನ್ನು ನೀಡಿದನೆಂಬುದಕ್ಕೆ ಶಾಸನ[೮]ವೊಂದು ಆಧಾರವಾಗಿದೆ. ಆದರೆ ಈ ಕಾಲದಲ್ಲಿ ಆಳ್ವಿಕೆ ನಡೆಸುತ್ತಿರುವನು ಮುಮ್ಮಡಿ ಇಂದ್ರನಾಗದೆ ಇಮ್ಮಡಿ ಕೃಷ್ಣ ನೆಂಬುದು ಸ್ಪಷ್ಟ. ಹಾಗೆಯೇ ನೃಪತುಂಗನ ಕಾಲಕ್ಕೆ ಸಂಬಂಧಿಸಿದ ಶಾಸನ[೯]ವೊಂದರಲ್ಲಿ ಯೋಧನೊಬ್ಬ ವೀರಮರಣ ಹೊಂದಿದ ವಿವರಣೆಯಿದೆ. ಹೀಗಾಗಿ ನೃಪತುಂಗನಿಗೆ ಸಂಬಂಧಿಸಿದ ವಿವರ ತಿಳಿಸುವ ಇಂತಹ ಶಾಸನಗಳಿಂದ ನಿರ್ವಿವಾದವಾಗಿ ಈ ಕೊಪ್ಪಳ ಜಿಲ್ಲೆಯು ರಾಷ್ಟ್ರಕೂಟರ ರಾಜ್ಯದಲ್ಲಿ ಸೇರಿ ಘನತೆಯನ್ನು ಪಡೆದಿರಬೇಕೆಂದು ಸುಲಭವಾಗಿ ಗುರ್ತಿಸಬಹುದು. ಇಮ್ಮಡಿ ಕೃಷ್ಣನ ಆಡಳಿತದ ಕಾಲದಲ್ಲಿ ಮಹಾಶ್ರೀಮಂತನೆಂಬುವವನು ಬೆಳವೊಲ-೩೦೦ ಆಳುತ್ತಿದ್ದಾಗ ಕ್ರಿ.ಶ.೮೭೭ರಲ್ಲಿ ಮುದವೊಳಲಿನಲ್ಲಿ ನಡೆದ ಕಾಳಗದಲ್ಲಿ ಸಮ್ಮಗಾರ ಚಂದನೆಂಬುವವನು ಹೋರಾಡಿ ವೀರಮರಣ ಹೊಂದಿದನು ಎಂಬುದಾಗಿ ಶಾಸನ[೧೦]ವೊಂದು ತಿಳಿಸುತ್ತದೆ.

ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಶಾಸನ[೧೧]ವು ಅಕಾಲವರ್ಷ ಎಂಬುವವನ ಆಳ್ವಿಕೆಯದ್ದು. ಆಗ ಜಗತ್ತುಂಗನೆಂಬುವವನು ಆತನಿಗೆ ಅಧೀನನಾಗಿ 'ಎಡೆದೊರೆ ನಾಡು' ಎಂಬ ಎರಡು ಸಾವಿರ ಪ್ರಾಂತವನ್ನು 'ಅಣುಗ ಜೀವಿತ'ವಾಗಿ ಆಳುತ್ತಿದ್ದನೆಂದು ಅದು ಹೇಳುತ್ತದೆ. ಶಾಸನದಲ್ಲಿ ತೇದಿ ವಿವರವಾಗಿ ಕೊಡಲ್ಪಟ್ಟಿಲ್ಲ. ವಿರೋಧಿ ಕೃತ್ ಸಂವತ್ಸರ ಮಾತ್ರ ಉಕ್ತವಾಗಿದೆ. ಈ ಸಂವತ್ಸರದ ಆಧಾರದಿಂದ ಶಾಸನದಲ್ಲಿ ಉಕ್ತವಾದ ಅಕಾಲವರ್ಷನು ಇಮ್ಮಡಿ ಕೃಷ್ಣನೆಂದು ಹೇಳಬಹುದು. ಹಾಗೆಯೇ ಇಲ್ಲಿ ಉಲ್ಲೇಖಗೊಂಡಿರುವ ಜಗತ್ತುಂಗನು ಈತನ ಮಗನಾದ ಇಮ್ಮಡಿ ಜಗತ್ತುಂಗನಾಗಿದ್ದಾನೆ. ಈ ಜಗತ್ತುಂಗನು ಎಂಬುದಾಗಿ ಪ್ರಸ್ತುತ ಶಾಸನ ಸ್ಪಷ್ಟಪಡಿಸುತ್ತದೆ. ಆದರೆ ಹೆಚ್ಚಿನ ಮಾಹಿತಿಗಳು ಅಲಭ್ಯವಾಗಿವೆ. ಈತನು ಕ್ರಿ.ಶ.೮೯೧–೯೨ರಲ್ಲಿ ತಂದೆಯ ಅಧೀನನಾಗಿ ಪ್ರಾಂತವೊಂದರ ಅಧಿಪತಿಯಾಗಿದ್ದ ನೆಂಬುದು ಈ ಭೋಗಾವತಿ ಶಾಸನದಿಂದ ಮಾತ್ರ ತಿಳಿದುಬರುತ್ತದೆ. ಮೇಲೆ ಉಕ್ತವಾಗಿರುವ 'ಎಡೆದೊರೆ-೨೦೦೦' ನಾಡು ಕೃಷ್ಣ-ತುಂಗಭದ್ರಾ ನದಿಗಳ ನಡುವಿನ ಪ್ರದೇಶವಾಗಿದ್ದರಿಂದ ಕೊಪ್ಪಳದ ಬಹು ಭಾಗವು ಈ ಪ್ರದೇಶದಲ್ಲಿರುವುದರಿಂದ ಇಮ್ಮಡಿ ಕೃಷ್ಣನ ಆಡಳಿತ ಇಲ್ಲಿತ್ತೆಂಬುದು ಸುಲಭವಾಗಿ ಗುರುತಿಸಬಹುದು. ಹಾಗೆಯೇ ರಾಯಚೂರು ಜಿಲ್ಲೆಯ ಯರಡೋಣಿಯಲ್ಲಿ ಒಂದು ರಾಷ್ಟ್ರಕೂಟರ ಶಾಸನ[೧೨]ವು ದೊರಕಿದೆ. ಅದರಲ್ಲಿ 'ಹಿರಣ್ಯವರ್ಷ'

ಎಂಬ ಬಿರುದಿನ ಅರಸನ ಉಲ್ಲೇಖವಿದೆ. ಕ್ರಿ.ಶ.೯೨೮ರ ಈ ಶಾಸನದ ಕಾಲದಲ್ಲಿ ಮುಮ್ಮಡಿ ಇಂದ್ರನು ರಾಜ್ಯವಾಳುತ್ತಿದ್ದನು. ಅವನಿಗೆ 'ಹಿರಣ್ಯವರ್ಷ' ಎಂಬ ಬಿರುದು ಇದ್ದಿತೆಂದು ಇದರಿಂದ ತಿಳಿದು ಬರುತ್ತದೆ. ಇವನ ನಂತರ ಅಧಿಕಾರಕ್ಕೆ ಬಂದ ೪ನೇ ಗೋವಿಂದನಿಗೆ 'ಸುವರ್ಣವರ್ಷ' ಎಂಬ ಬಿರುದು ಇದ್ದು 'ಹಿರಣ್ಯವರ್ಷ' ಎಂಬ ಬಿರುದು ಅದೇ ಅರ್ಥವಿದ್ದರೂ ಕಾಲದ ವ್ಯತ್ಯಾಸದಿಂದ ಯರಡೋಣಿ ಶಾಸನದ ಅರಸನು ಇಂದ್ರನೇ ಇದ್ದಿರಬಹುದೆಂಬುದು ಹೆಚ್ಚು ಸೂಕ್ತವೆನಿಸುತ್ತದೆ. ಇಲ್ಲವಾದರೆ ಈ ಕೆಲಕಾಲದಲ್ಲಿಯೇ ಗೋವಿಂದನು ಅಧಿಕಾರ ನಡೆಸಲಾರಂಭಿಸಿದ್ದನು ಎಂದು ಊಹಿಸಬೇಕಾಗುತ್ತದೆ. ಅದೇನೇಯಿದ್ದರೂ ಕೂಡ ಈಗಿನ ರಾಯಚೂರು ಜಿಲ್ಲೆಯ ಪ್ರದೇಶಗಳಲ್ಲಿನ ಪ್ರಸ್ತುತ ಶಾಸನಗಳಿಂದ ತಿಳಿದುಬರುವುದೇನೆಂದರೆ ಈ ಪ್ರದೇಶ ಕೊಪ್ಪಳ ಜಿಲ್ಲೆಗೆ ಹತ್ತಿರವಾಗಿರುವುದರಿಂದ ಪ್ರಸ್ತುತ ರಾಷ್ಟ್ರಕೂಟರ ಆಡಳಿತಕ್ಕೆ ಅವಿಭಜಿತ ಕೊಪ್ಪಳ ಜಿಲ್ಲಾ ಪ್ರದೇಶವು ಒಳಗೊಂಡಿತ್ತೆಂದು ಹೇಳಬಹುದು.

ಕ್ರಿ.ಶ.೯೩೯ರಲ್ಲಿ ಮುಮ್ಮಡಿ ಕೃಷ್ಣನು ಆಳ್ವಿಕೆಯನ್ನು ಮಾಡುತ್ತಿರುವಾಗ ಅವನ ಕೈಕೆಳಗಿನ ಬೂತುಗ ಪೆರ್ಮಾನಾಡಿ ಆಳುತ್ತಿದ್ದನು. ಈತನ ಕೈಕೆಳಗೆ ಬುಟ್ಟಯ್ಯನೆಂಬುವವನು ಎಡದೊರೆ-೨೦೦೦ರನ್ನು ಆಳ್ವಿಕೆ ನಡೆಸುತ್ತಿದ್ದನೆಂದು ತಿಳಿದು ಬರುತ್ತದೆ. ಬೂತುಗ ಪೆರ್ಮಾನಾಡಿ ಬೆಳ್ವೊಲ-೩೦೦, ಮಾಸವಾಡಿ-೧೪೦, ಕುಕನೂರು-೩೦, ಕೆಳವಾಡಿ-೩೦೦ಗಳನ್ನು ಆಳ್ವಿಕೆ ನಡೆಸುತ್ತಿರುವಾಗ ದಾನವಾಗಿ ನೀಡಿದ್ದಾಗಿ ಇಟಗಿ ಶಾಸನ[೧೩]ವೊಂದು ದಾಖಲಿಸಿದೆ. ಈ ಕಾಲವು ಮುಮ್ಮಡಿ ಕೃಷ್ಣನ ಪ್ರಥಮ ಆಡಳಿತದ ವರ್ಷವಾಗಿದೆ. ಇದೇ ಮುಮ್ಮಡಿ ಕೃಷ್ಣನಿಗೆ ಸಂಬಂಧಿಸಿದಂತೆ ಹೊಸಕೇರಿಯಲ್ಲಿ ಇನ್ನೊಂದು ಶಾಸನ[೧೪]ವು ಲಭ್ಯವಾಗಿದೆ. ಹಾಗೆಯೇ ಕ್ರಿ.ಶ.೯೬೪ರಲ್ಲಿ ರಚಿತವಾದ ಉಪ್ಪಿನ ಬೆಟಗೇರಿ ಶಾಸನ[೧೫]ವು ಸಹಿತ ಇದೇ ಕೃಷ್ಣನ ಆಡಳಿತದ ಬಗ್ಗೆ ವಿವರಣೆ ನೀಡಿದೆ. ಈತನ ಕೈಕೆಳಗೆ ಯಾದವ ವಂಶದವನೆಂದು ಹೇಳಲಾಗುವ ಶಂಕರಗಂಡನೆಂಬುವವನು ಆಳ್ವಿಕೆ ನಡೆಸುತ್ತಿದ್ದನು. ಪ್ರಸ್ತುತ ಶಂಕರಗಂಡನು ಕುಪಣದಲ್ಲಿ ಮಾಡಿಸಿದ ಜಯಧೀರ ಜಿನಾಲಯಕ್ಕೆ ತಳವೃತ್ತಿಯಾಗಿ ಭೂದಾನವನ್ನು ಬೇಡಿದಾಗ ರೊಟ್ಟಯ್ಯನೆಂಬುವವನು ನಾಗನಂದಿ ಪಂಡಿತ ಭಟಾರನ ಕಾಲನ್ನು ತೊಳೆದು ಕುಕ್ಕನೂರು-೩೦ರ ಗ್ರಾಮವೊಂದರಲ್ಲಿ (ಹೆಸರು ತೃಟಿತಗೊಂಡಿದೆ) ಆರು ಮತ್ತರು ಭೂಮಿಯನ್ನು ಬಿಡುತ್ತಾನೆ. ಈ ಶಾಸನದಲ್ಲಿ ರೊಟ್ಟಯ್ಯನ ವಂಶಾವಳಿಯಿದ್ದು ಈತ ಚಾಳುಕ್ಯ ವಂಶದ ಬಿಟ್ಟಿಯಣ್ಣನ ಮಗನಾದ ಸಾಳಕೆ, ಆತನ ಮಗ ಗೊಗ್ಗಿ ಆತನ ಮಗ ರೊಟ್ಟಯ್ಯನೆಂದಿದೆ. ಹಾಗೆಯೇ ನಾಗನಂದಿ ಭಟ್ಟಾರನು ಸಾರಸ್ವಗಣದ ಶ್ರೀನಂದಿಭಟಾರರ ಶಿಷ್ಯ ವಿನಯನಂದಿ ಅವನ ಶಿಷ್ಯ ನಾಗನಂದಿಭಟಾರನೆಂದು ಹೇಳಿ ವಂಶಾವಳಿಯನ್ನು ವಿವರಿಸಿದೆ.

ಕುಕನೂರಿನ ಶಾಸನ[೧೬]ವೊಂದು ಮಾರಸಿಂಹನ ಕಾಲದ್ದಾಗಿದ್ದು ಇದರಲ್ಲಿ ಕ್ರಿ.ಶ.೯೭೮ರಲ್ಲಿದ್ದ ನಾಲ್ಕನೆಯ ಇಂದ್ರನನ್ನು ಸಿಂಹಾರೋಹಣ ಮಾಡಿಸಿ ಪ್ರಶಂಸೆಗೆ ಗುರಿಯಾದ ವಿವರವು ಸಿಗುತ್ತದೆ. ರಾಜನ ಆಜ್ಞೆಯಂತೆ ಈತನು ಗುರ್ಜರ, ಲಲ್ಲ, ಮೊದಲಾದ ರಾಜರನ್ನು ಗೆದ್ದನು. ಪ್ರಸ್ತುತ ಇಮ್ಮಡಿ ಮಾರಸಿಂಹ (ಗಂಗಕಂದರ್ಪ)ನ ಪಾದಗಳನ್ನು ಶತ್ರುಗಳು ಕೂಡ ಪೂಜಿಸುತ್ತಿದ್ದರು. ಈ ಗಂಗ

ಚೂಡಾಮಣಿಯ ಕೀರ್ತಿ ಎಂಟು ದಿಕ್ಕುಗಳಿಗೂ ಹಬ್ಬಿದುದಲ್ಲದೇ ಜಿನ ಪೂಜಕನಾದ ಈ ಮಾರಸಿಂಹನು ತನ್ನ ಶತ್ರುಗಳನ್ನೆಲ್ಲಾ ಸಂಹರಿಸಿದ. ಈ ಸತ್ಯವಾಕ್ಯ ಕೊಂಗುಣಿ ಧರ್ಮಮಹಾರಾಜಾಧಿರಾಜ ಪರಮೇಶ್ವರ ಗಂಗಕಂದರ್ಪ ಮಾರಸಿಂಹನ ಅಕ್ಕ ಕುಂದಣಸಾಮಿ. ಈಕೆಯ ಗಂಡ ಚಾಲುಕ್ಯ ವಂಶದ ರಾಜಾದಿತ್ಯ. ಮುಂದೆ ಶಾಸನದಲ್ಲಿ ಕುಂದಣಸಾಮಿಯ ಪ್ರಶಂಸೆ ಬಂದಿದೆ. ಆಕೆಯ ಜಿನಶಾಸನ ಪ್ರೀತಿ, ಜಿನ ಧರ್ಮದ ಮೇಲಿನ ನಂಬಿಕೆಯನ್ನು ವಿವರವಾಗಿ ವರ್ಣಿಸಿದೆ. ರಾಷ್ಟ್ರಕೂಟರ ಚೊಟ್ಟಿಗನೆಂಬ ಅರಸನಿಗೆ ಸಂಬಂಧಿಸಿದ ಇನ್ನೊಂದು ಇಟಗಿಯ ಶಾಸನ[೧೭] ವೊಂದರಲ್ಲಿ ಗಂಗರ ಮಾಂಡಳಿಕರ ವಿಶೇಷಣಗಳಾದ 'ಪೆರ್ಮಾನಾಡಿ' 'ನಂದಿಗಿರಿನಾಥ'– ಮುಂತಾದ ಬಿರುದು–ಬಾವಲಿಗಳ ವರ್ಣನೆ ಬರುತ್ತದೆ.

ಒಟ್ಟಾರೆಯಾಗಿ ಗಮನಿಸಿದರೆ ರಾಷ್ಟ್ರಕೂಟರ ಪ್ರಸಿದ್ಧ ದೊರೆಯಾದ ನೃಪತುಂಗ (ಅಮೋಘವರ್ಷ)ನು ಸೇರಿದಂತೆ ಈ ವಂಶದ ಪ್ರಖ್ಯಾತ ಅರಸರ ಆಳ್ವಿಕೆಯ ಕಾಲದಲ್ಲಿ ಕೊಪ್ಪಳವು ಒಂದು ಪ್ರಮುಖ ಆಡಳಿತ ಕೇಂದ್ರವಾಗಿತೆಂಬುದಾಗಿ ಹೇಳಬಹುದು. ಹಾಗೆಯೇ ಶಾಸನೇತರ ಆಕರಗಳಲ್ಲಿ ಪ್ರಮುಖವಾದ ನಿದರ್ಶನವನ್ನು ಒದಗಿಸುವ ಶ್ರೀವಿಜಯನ 'ಕವಿರಾಜಮಾರ್ಗ'ದಲ್ಲಿಯೂ ಸಹ ರಾಷ್ಟ್ರಕೂಟರಿಗೆ ಸಂಬಂಧಿಸಿದ ಅನೇಕ ಅಂಶಗಳು ದೊರೆಯುತ್ತವೆ. ಆದುದರಿಂದ ಕೊಪ್ಪಳವು ರಾಷ್ಟ್ರಕೂಟರು ಆಡಳಿತ ನಡೆಸಿದ ಪ್ರಮುಖ ಪ್ರದೇಶವಾಗಿತ್ತೆಂದು ಹೇಳಬಹುದು.

ಗಂಗರು

ಕೊಪ್ಪಳ ಜಿಲ್ಲೆಯ ಶಾಸನಗಳನ್ನು ಸೂಕ್ಷ್ಮವಾಗಿ ಗಮನಿಸಿ ಹೇಳುವುದಾದರೆ ಕೊಪ್ಪಳ ಪ್ರದೇಶದಲ್ಲಿ ಗಂಗರು ಖಚಿತವಾಗಿ ಆಳ್ವಿಕೆಯನ್ನು ನಡೆಸದಿದ್ದರೂ ಪ್ರಭಾವಪೂರ್ವಕವಾಗಿ ಮಹಾಮಾಂಡಳಿಕರಾಗಿ ಇಲ್ಲಿ ಆಳಿದ್ದಾರೆ. ಈ ಅರಸು ಮನೆತನವು ಅಧಿಕಾರದಲ್ಲಿದ್ದಾಗ ಕೊಪ್ಪಳ ಪ್ರದೇಶಕ್ಕೆ ಗಂಗವಾಡಿ–೯೬,೦೦೦ ಎಂದು ಕರೆಯಲಾಗುತ್ತಿತ್ತು. ಈ ಭಾಗದಲ್ಲಿ ಗಂಗರಿಗೆ ಸಂಬಂಧಿಸಿದಂತೆ ಕುಕನೂರು, ಹೆಬ್ಬಾಳ, ಇಟಗಿ, ಕೊಪ್ಪಳಗಳಲ್ಲಿ ಅನೇಕ ಶಾಸನಗಳು ದೊರಕುತ್ತವೆ.

ಗಂಗರ ರಾಜಕೀಯ ಸಂಬಂಧವು ಕೊಪ್ಪಳದಲ್ಲಿ ಅಧಿಕವಾಗಿದೆ. ಇವರ ಕಾಲದ ಸಮಗ್ರ ಶಾಸನಗಳನ್ನು ಅವಲೋಕಿಸಿದಾಗ ಇವರ ಧಾರ್ಮಿಕ ನಂಟು ಕೆಲವು ನಿರ್ದಿಷ್ಟ ಪ್ರದೇಶಗಳಿಗೆ ಅಂಟಿಕೊಂಡಿದ್ದು ಅವುಗಳಲ್ಲಿ ಪ್ರಮುಖ ವಾದವುಗಳಾದ ಶ್ರವಣಬೆಳಗೋಳ, ತಲಕಾಡು, ಅಣ್ಣಿಗೆರೆ, ಹೊಂಬುಜ, ಮಂಡಲಿ ಸಾಸಿರ ಪ್ರದೇಶ, ಕೊಪ್ಪಳ ಪ್ರದೇಶ ಮುಂತಾದವುಗಳು. ಇವುಗಳು ಗಂಗರಿಗೆ ಕರ್ನಾಟಕದಲ್ಲಿ ಅತಿಮುಖ್ಯ ಕ್ಷೇತ್ರಗಳಾಗಿ ಮತ್ತು ತೀರ್ಥಕ್ಷೇತ್ರಗಳಾಗಿದ್ದವು. ಶ್ರವಣಬೆಳಗೂಳವು ಗಂಗವಾಡಿ–೯೬,೦೦೦ ಪ್ರದೇಶದಲ್ಲಿತ್ತು. ಕೊಪ್ಪಳವು ಗಂಗ ವಾಡಿಯಲ್ಲಿರಲಿಲ್ಲ. ಆದರೆ ಕೊಪ್ಪಳ ಪ್ರದೇಶವು ಗಂಗರಿಗೆ ತುಂಬಾ ಹತ್ತಿರವಾದ್ದದ್ದು ೧೦ನೇ ಶತಮಾನದಲ್ಲಿ. ಗಂಗರ ದೊರೆ ದುರ್ವಿನೀತನು ಕೊಪ್ಪಳ ಸಮೀಪದ ಕೋಳೂರಲ್ಲಿ ಒಂದು ಬಸದಿಯನ್ನು ಕಟ್ಟಿಸಿದ್ದು ಅದು ಮತ್ತೆ ಜೀರ್ಣೋದ್ಧಾರ ವಾದದ್ದೂ ಶಾಸನದಲ್ಲಿ ಉಲ್ಲೇಖಗೊಂಡಿದೆ. ರಾಷ್ಟ್ರಕೂಟರ ಸಾಮ್ರಾಜ್ಯ ಅಸ್ಥಿರವಾಗುತ್ತ ಅಳ್ಳಾಡತೊಡಗಿ

ಕಡೆಗೆ ಅಸ್ತಂಗತವಾದದ್ದರ ಪರಿಣಾಮ ಪ್ರತಿಷ್ಠಿತ ಗಂಗರ ಕುಟುಂಬಗಳ ಮೇಲೆ ಗಾಢವಾದ ಪರಿಣಾಮವಾಯಿತು. ಗಂಗರು ಒಬ್ಬರಾದ ಮೇಲೊಬ್ಬರು ಕೊಪ್ಪಳದಲ್ಲಿ ಬಂದು ಧಾರ್ಮಿಕ ಮರಣ ಪಡೆದರು. ಗಂಗರ ರಾಜ-ರಾಣಿಯರು ಅನೇಕ ಬಸದಿಗಳನ್ನು ಕಟ್ಟಿಸಿದ್ದು ತಿಳಿದು ಬರುತ್ತದೆ. ಅದಲ್ಲದೆ ಅವರಲ್ಲಿ ಅನೇಕರು ಸಲ್ಲೇಖನ ವಿಧಿಯಿಂದ ಸಮಾಧಿ ಮರಣ ಪಡೆದಿದ್ದು ಕೊಪ್ಪಳದ ಶಾಸನಗಳಿಂದ ತಿಳಿದುಬರುತ್ತದೆ. ಇದು ಗಂಗರ ಇತಿಹಾಸದಲ್ಲಿ ಒಂದು ವೈಶಿಷ್ಟ್ಯತೆಯೆಂದು ಹೇಳಬಹುದು. ರಾಚಮಲ್ಲ, ಆರುಮೋಳಿದೇವ, ಮಾರಸಿಂಹ, ಲೋಕಾ(ರಾಜಾ)ದಿತ್ಯ, ಪದ್ಮಬ್ಬೆ, ಕುಂದಣಸಾಮಿ, ರೇವಕನಿಮ್ಮಡಿ, ಚಂಗಾಂಬೆ, ಬಿಜ್ಜಾಂಬಾ........ ಮೊದಲಾದವರೆಲ್ಲ ಮಡದಿದ್ದು ಧಾರ್ಮಿಕ ವಿಧಿಯಿಂದ. ಮತ್ತು ಇವರಲ್ಲಿ ಕೆಲವರು ಕೊಪ್ಪಳದಲ್ಲಿ ಬಂದು ಮಡದಿದ್ದಾರೆ. ಗಂಗರ ಉಗಮ, ಆಗಮನ, ನಿರ್ಗಮನ ಕುರಿತು ಚರ್ಚೆಗಳಿವೆ. ಅವರ ಒಟ್ಟು ಚಲನವಲನ ವ್ಯಾಪ್ತಿ ವಿಸ್ತಾರಗಳ ನಿರ್ದೇಶನ ಇನ್ನೂ ನಿಖರವಾಗಿ ಆಗಬೇಕಾದ್ದದ್ದಿದೆ. ಆದರೆ ಗಂಗರು ಕ್ರಿ.ಶ.೩-೪ನೇ ಶತಮಾನದ ವೇಳೆಗೆ ಸಿಂಹನಂದಿ ಆಚಾರ್ಯರ ಮುಂದಾಳಿಕೆಯಲ್ಲಿ ಕರ್ನಾಟಕದಲ್ಲಿ ಹೆಜ್ಜೆ ಇಟ್ಟಿದ್ದರೆಂಬುದು ಖಚಿತವಾಗಿದೆ. ಆದಿಕದಂಬರೂ, ಆದಿಚಾಳುಕ್ಯರೂ, ರಾಷ್ಟ್ರಕೂಟರೂ ತೋರಿದ ಆಸಕ್ತಿಗೂ ಸರಿಮಿಗಿಲಾದ ಮತ್ತು ದೀರ್ಘಕಾಲಿಕ ಆಸಕ್ತಿ, ಅನುರಾಗ, ಶ್ರದ್ಧೆಯನ್ನು ಜೈನ ಧರ್ಮದಲ್ಲಿ ಆದಿಗಂಗರೂ ತೋರಿದರು. ಕೊಪ್ಪಳದಲ್ಲಿ ಈಗ ಹೊಸದಾಗಿ ದೊರೆತಿರುವ ಶಾಸನಗಳಲ್ಲಿ ವ್ಯಾಪಕ ಪ್ರಮಾಣದಿಂದ ಪ್ರಕಟವಾಗಿರುವ ಅವರ ಜೈನನಿಷ್ಠೆಯ ಬೇರುಗಳು ಇನ್ನೂ ಆಳಕ್ಕೆ ಮತ್ತು ಆರಂಭಕ್ಕೆ ಹೋಗುತ್ತವೆ. ಅದರ ವಿಸ್ತಾರವಾದ ಸಂವಾದಗಳಿಗೆ ತೊಡಗದೆ ತೀರ ಕಿರಿದಾಗಿಯೇ ಗಂಗರು ಜೈನ ಧರ್ಮನಿಷ್ಠೆಯಿಂದ ಅನುಸರಿಸಿ ಆಚರಿಸಿದ ಸಂಗತಿಯನ್ನು ಅದೂ ಶಾಸನದಲ್ಲಿ ಅಲ್ಲಲ್ಲಿ ಬರೆದಿರುವ ವಿವರಣೆಯಲ್ಲಿ ಸಮೀಕ್ಷಿಸಲಾಗಿದೆ.

ಗಂಗವಂಶದ ಆರಂಭ ಕಾಲದ ಕಥನ ಸಾಮಗ್ರಿ ಕೊಪ್ಪಳ ಶಾಸನಗಳಲ್ಲಿ ಸಿಗುವುದಿಲ್ಲವಾದರೂ ಅವರ ಉತ್ತರ ಕಾಲೀನ ಹಾಗೂ ಇಳಿಗಾಲದ ಮಾಹಿತಿಗಳು ಇಲ್ಲಿ ಸಾಕಷ್ಟಿವೆ. ಗಂಗರ ಮನೆತನದ ಮುಖ್ಯರೆಲ್ಲ ವಲಸೆಯಾಗಿ ಕೊಪ್ಪಳಕ್ಕೆ ಬಂದು ಮುಡುಪಿದ್ದಾರೆ.

ಗಂಗರ ಮನೆತನದ ಇಮ್ಮಡಿ ಬೂತುಗನಿಗೆ ಸಂಬಂಧಿಸಿದ ಕ್ರಿ.ಶ.೯೩೯ರ ಶಾಸನ[೧೮]ವೊಂದು ಇಟಗಿಯಲ್ಲಿ ದೊರೆತಿದೆ. ಈ ಶಾಸನದಲ್ಲಿ ಬೂತುಗನಿಗೆ ರಾಷ್ಟ್ರಕೂಟರ ದೊರೆ ಮುಮ್ಮಡಿ ಕೃಷ್ಣನು ತುಂಗಭದ್ರಾ ನದಿಯ ಉತ್ತರ ಭಾಗಗಳಾದ ಎಡದೊರೆ-೨೦೦೦, ಬೆಳ್ವೊಲ-೩೦೦, ಮಾಸವಾಡಿ-೧೪೦, ಕುಕನೂರು-೩೦....... ಮೊದಲಾದ ನಾಡುಗಳನ್ನು ನೀಡಿದಂತೆ ತಿಳಿದು ಬರುತ್ತದೆ. ರಾಷ್ಟ್ರಕೂಟರ ಅರಸ ಮುಮ್ಮಡಿ ಕೃಷ್ಣನು ಆಡಳಿತ ಕಾಲಾವಧಿಯಲ್ಲಿ ಕುಕನೂರು-೩೦ರ ಒಂದು ಆಡಳಿತದ ಪ್ರಾಂತವಾಗಿದ್ದರಿಂದ ಆ ಕಾಲದಲ್ಲಿ ಈ ನಗರಕ್ಕೆ ಕುಪಣವೆಂದು ಕರೆದಿರಬೇಕು. ಇಲ್ಲವೆ ಬಹುಶಃ ಇದು ಕುಕನೂರು-೩೦ರ[೧೯] ಒಂದು ಘಟಕಕ್ಕೆ ಸೇರಿರಬೇಕೆಂದು ನಂಬಲಾಗಿದೆ. ಆತಕೂರಿನ ಶಾಸನದಲ್ಲಿ ಬೂತುಗನು 'ತಕ್ಕೊಲಂ' ಯುದ್ಧದಲ್ಲಿ ಚೋಳವಂಶದ ರಾಜಾಧಿತ್ಯನನ್ನು ಕೊಂದ ಮೇಲೆ ಆತನಿಗೆ ಇವುಗಳನ್ನು ಬಳುವಳಿಯಾಗಿ ನೀಡಿದಂತೆ ತಿಳಿಸುತ್ತದೆ. ಆದರೆ ಈ ಇಟಗಿಯ

ಶಾಸನವು ಸ್ಪಷ್ಟವಾಗಿ ಕ್ರಿ.ಶ. ೯೩೯ಕ್ಕೆ ಬೂತುಗನು ಪಡೆದಿರುವುದಾಗಿ ತಿಳಿಸುತ್ತದೆ. ಕ್ರಿ.ಶ.೯೩೯ಕ್ಕೆ ಆತನು ಇಟಗಿಗೆ ಬಂದಿದ್ದಂತೆ ಪ್ರಸ್ತುತ ಶಾಸನ ತಿಳಿಸುತ್ತದೆ. ಇಮ್ಮಡಿ ಮಾರಸಿಂಹನ ಕಾಲದಲ್ಲಿನ ಕುಕನೂರು ತಾಮ್ರ ಶಾಸನ[೨೦] ದಲ್ಲಿ ಗಂಗರ ಪಾರಂಪರಿಕ ವಂಶಾವಳಿಯನ್ನು ಸವಿವರವಾಗಿ ನೀಡಲಾಗಿದೆ. ಗಂಗ ವಂಶದ ಪ್ರಥಮ ಅರಸನಾದ ಕೊಂಕಣಿವರ್ಮನಿಂದ ಹಿಡಿದು ಇಮ್ಮಡಿ ಮಾರಸಿಂಹನವರೆಗೆ ಆಳಿದ ರಾಜರನ್ನು ಇದು ಉಲ್ಲೇಖಿಸುತ್ತದೆ. ಈ ತಾಮ್ರ ಶಾಸನದ ಮುದ್ರಿಕೆಯ ಮೇಲೆ ಕೆತ್ತಿದ ಗಂಗರ ರಾಜ ಲಾಂಛನದ ಚಿತ್ರ ತುಂಬ ಸುಂದರವಾಗಿದೆ. ಕ್ರಿ.ಶ.೯೬೯ರ ಈ ತಾಮ್ರ ಶಾಸನದಲ್ಲಿ ಮಾರಸಿಂಹನ ಅನೇಕ ಬಿರುದುಗಳನ್ನು ನೀಡಲಾಗಿದೆ. ಈತನ ಮಕ್ಕಳಾದ ಕುಂಪಣಸಾಮಿಯು ಕಾಳಪರ್ಯಗೆ ಎಂಬ ಬ್ರಾಹ್ಮಣನಿಗೆ ಅಡ್ಡವುರಗೆ ಎಂಬ ಗ್ರಾಮವನ್ನು ನೀಡಿದಂತೆ ತಿಳಿಸುತ್ತದೆ. ಈ ಕಾಲಕ್ಕೆ ಮುಮ್ಮಡಿ ಕೃಷ್ಣನು ಮೃತನಾಗಿದ್ದು ಗಂಗರ ಮಾರಸಿಂಹನು ಕೃಷ್ಣನ ದಂಡಯಾತ್ರೆಯನ್ನು ರಾಷ್ಟ್ರಕೂಟರ ಪರವಾಗಿ ಮುಂದುವರೆಸಿಕೊಂಡು ಬರುತ್ತಾನೆ. ಕ್ರಿ.ಶ.೯೬೮ರ ಇಟಗಿಯ ಶಾಸನ[೨೧]ದಲ್ಲಿ ಈತನ ಉಲ್ಲೇಖವಿದೆ. ಕೃಷ್ಣನ ಮರಣದ ನಂತರ ಕೊಟ್ಟಿಗನು ಪಟ್ಟಕ್ಕೆ ಬಂದನು. ಈತನ ಮಹಾಮಾಂಡಳಿಕನಾಗಿ ಗಂಗರ ಪೆರ್ಮಾನಾಡಿಯ ಇದ್ದಂತೆ ತಿಳಿದು ಬಂದಿದೆ. ಈ ಪೆರ್ಮಾನಾಡಿಯೇ ಇಮ್ಮಡಿ ಮಾರಸಿಂಹನಾಗಿರಬೇಕೆಂದು ಊಹಿಸಲಾಗಿದೆ.

ಗಂಗರ ಪಾರಂಪರಿಕ ಬಿರುದುಗಳನ್ನು ಗಂಗರಸನ ಉಲ್ಲೇಖ ಕ್ರಿ.ಶ. ೧೦ನೇ ಶತಮಾನದ ಹೆಬ್ಬಾಳದ ಶಾಸನ[೨೨]ವೊಂದರಲ್ಲಿ ಬರುತ್ತದೆ. ಬಹುಶಃ ಇದು ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ ಮಾರಸಿಂಹನದಾಗಿರಬೇಕೆಂದು ನಂಬಲಾಗಿದೆ. ಮುಂದೆ ಗಂಗರ ಆಳ್ವಿಕೆಯ ಶಾಸನಗಳು ಅಷ್ಟಾಗಿ ದೊರೆಯುವುದಿಲ್ಲ. ಆದರೆ ಕೊಪ್ಪಳದ ನಿಷಧಿ ಶಾಸನಗಳಲ್ಲಿ ಅವರ ಕುರಿತು ಹೆಚ್ಚಿನ ವಿವರ ಸಿಗುತ್ತದೆ. ಕೆಲವು ಶಾಸನಗಳಲ್ಲಿ ರಾಜರು ನಿಖರವಾಗಿ ಉಲ್ಲೇಖಗೊಂಡಿಲ್ಲ. ಬಹುಶಃ ರಾಷ್ಟ್ರಕೂಟರ ಮುಮ್ಮಡಿ ಕೃಷ್ಣನ ಮರಣ, ಗಂಗರ ಇಮ್ಮಡಿ ಭೂತುಗನ ಮರಣದ ಜೊತೆಗೆ ಗಂಗರ ಭೂತುಗನ ಮಗ ಆರುಮೋಳಿದೇವನ ಮರಣ, ಶಿಥಿಲವಾಗುತ್ತಿದ್ದ ರಾಷ್ಟ್ರಕೂಟರ ಆಡಳಿತ ಮತ್ತು ಕ್ರಿ.ಶ.೯೭೩ರಲ್ಲಾದ ರಾಷ್ಟ್ರಕೂಟ ಸಾಮ್ರಾಜ್ಯದ ಪತನ ಈ ಎಲ್ಲಾ ಸಂಗತಿಗಳಿಂದ ಭ್ರಮನಿರಸನಗೊಂಡ ಗಂಗ ಅರಸು ಮನೆತನದ ರಾಣಿವಾಸದ ಸ್ತ್ರೀಯರು ಒಬ್ಬೊಬ್ಬರಾಗಿ ಸನ್ಯಾಸವನ್ನು ಕೊಪ್ಪಳದಲ್ಲಿ ಪಡೆದುಕೊಂಡಂತೆ ಕಂಡುಬರುತ್ತದೆ. ಈ ರೀತಿ ಮುಡುಪಿದವರಲ್ಲಿ ಕ್ರಿ.ಶ.೯೭೬ರ ಗಂಗರಾಜನ ಪತ್ನಿ ಪೋಲೆಯಬ್ಬೆಯ ಮಗಳು ಎರೆಯಬ್ಬೆ[೨೩] ಮಂಕುಟ ಚೂಡಾಮಣಿಗಿಂತ (ಇಮ್ಮಡಿ ಮಾರಸಿಂಹ) ಚಿಕ್ಕವಳಾದ ಚಿನ್ದಿಬ್ಬರಸಿ ಎಂಬುದಾಗಿ ಕ್ರಿ.ಶ.೯೭೪ರ ಶಾಸನ[೨೪] ತಿಳಿಸುತ್ತದೆ. ಕ್ರಿ.ಶ. ೯೭೩ರಲ್ಲಿ ಗಂಗ ಭೂತುಗನ ಪತ್ನಿ ಪದ್ಮಬ್ಬಿಯರಸಿ ಮುಡಿಪಿರುತ್ತಾಳೆ. ಕ್ರಿ.ಶ.೯೮೭ಕ್ಕೆ ಮೊದಲೇ ಕುಂದಣಸಾಮಿ ಸತ್ತಿರುತ್ತಾಳೆ.[೨೫] ಕ್ರಿ.ಶ.೯೮೭ರಲ್ಲಿ ರಾಯನ ಪತ್ನಿ ಚಂಗಂಬೆ (ಪ್ರಸ್ತುತ ರಾಯನು ಚಾವುಂಡರಾಯನಿರಬಹುದೆಂದು ಗುರ್ತಿಸಲಾಗಿದೆ.) ಕ್ರಿ.ಶ.೯೮೭ರಲ್ಲಿ ರಾಯನ ಪತ್ನಿ ಪದ್ಮಬ್ಬರಸಿ ಮುಡುಪಿರುತ್ತಾಳೆ. ಕ್ರಿ.ಶ.೯೮೭ರಲ್ಲಿ ಛಲದಂಕ ಗಂಗನ ಮಗನಾದ ವಾಸವ ಮತ್ತು ಅವನ ಪತ್ನಿ ಕಾವಣಬ್ಬರಸಿಯ ಮಗಳು ರಂಬಲದೇವಿ (ಚಾಲುಕ್ಯ ವಂಶದ ಚಿಕ್ಕದೇವನ ಪತ್ನಿ) ಮುಡುಪುತ್ತಾರೆ.[೨೬] ಕ್ರಿ.ಶ. ೯೯೨ರಲ್ಲಿ

ಗಂಗವಂಶದ ಎರೆಗಂಗನ ಮಗಳು ಗೋನಬ್ಬೆಕಂತಿ ಮುಡಿಪುತ್ತಾಳೆ.[೨೭] ಈಕೆಯ ತಂದೆ ಗಂಗ ವಂಶದ ಎರೆಗಂಗ, ಗಂಡ ಅಜವರ್ಮ್ಮ, ಮಗನು ಕ್ಷತ್ರಿಯ ಕುಲದ ರಾಮನೆಂಬುವವನೆಂದು ಪ್ರಸ್ತುತ ಶಾಸನ ಸ್ಪಷ್ಟಪಡಿಸುತ್ತದೆ.

ಕ್ರಿ.ಶ.೯೮ರಲ್ಲಿ ಗಂಗ ಭೂತುಗನ ಮಗಳು ಮಾರಸಿಂಹನ ತಂಗಿ ಹಾಗೂ ಚಾಲುಕ್ಯ ಹರಿಗನ ಪತ್ನಿ ಜೆಬ್ಬರಸಿ (ಜೆಂಬಾಂಬಿಕೆ) ಕೊನೆಯುಸಿರೆಳೆಯುತ್ತಾಳೆ.[೨೮] ಸೇನಗಣಕ್ಕೆ ಸೇರಿದ ಅಜಿತಸೇನಾಚಾರ್ಯನನ್ನು ಹೆಸರಿಸಿ ಇವನಿಂದ ಭೂಮಿಯ ಮೇಲೆ ಪೆರ್ಮಾಳಿಗಳು ಸುರಿದವಂತೆ. ಹಸಿವು, ನೀರಡಿಕೆಗಳು ಇಲ್ಲವಾದುವೆಂದೂ ತನಗೆ ಗೌರವ ನೀಡಿದವರನ್ನು, ನಿಂದಿಸಿದವರನ್ನು ಸಮಾನವಾಗಿ ಕಾಣುತ್ತಿದ್ದನೆಂದು ಈ ಶಾಸನ ವರ್ಣಿಸಿದೆ. ಈತನ ಶಿಷ್ಯ ಗಂಗ ವಂಶದ ರಾಜಮಲ್ಲ. ಇವನ ಪತ್ನಿ ಕಂಚಿಯಬ್ಬರಸಿ. ತನ್ನ ಪತಿ ಸತ್ತ ಮೇಲೆ ಈಕೆಯು ಅಜಿತಸೇನಾಚಾರ್ಯರ ಬಳಿ ದೀಕ್ಷೆ ಪಡೆದು ಕುಪಣತೀರ್ಥದಲ್ಲಿ ಸಮಾಧಿ ವಿಧಿಯಿಂದ ಮುಡುಪಿದಳು. ಕ್ರಿ.ಶ.೧೦೦೨ರಲ್ಲಿ ಗಂಗ ಬೂತುಗ ಮತ್ತು ಅವನ ಪತ್ನಿ ಪದ್ಮವತಿಯ ಮಗಳು ಎರೆಯಂಗನ ಅಕ್ಕ ಮಲ್ಲಪ್ಪನ ಪತ್ನಿಯಾದ ಬಿಜ್ಜಬ್ಬರಸಿ ಆರಾಧನಾ ವಿಧಾನದಿಂದ ಮುಡುಪುತ್ತಾಳೆ.[೨೯] ಅಂದರೆ ಈಕೆಯು ರತ್ನತ್ರಯವನ್ನು ಸಾಧಿಸಿ ಸತ್ತಂತೆ ಕಂಡು ಬರುತ್ತದೆ.

ಶಾಸನವು ಈ ಬಿಜ್ಜರಸಿಯ ಗುರು ಶ್ರೀಧರನೆಂದೂ, ತಮ್ಮ ಎರೆಗಂಗನೆಂಬಂತೆಯೂ ತಿಳಿಸಿದೆ. ಪ್ರಸ್ತುತ ಶಾಸನದ ಇನ್ನೊಂದು ಭಾಗದಲ್ಲಿ ಜಿನಮುನಿ ಕೊಂಡಕುಂದಾನ್ವಯ ಪುಸ್ತಕ ಗುಚ್ಛದ ರವಿಚಂದ್ರ, ಇವನ ಶಿಷ್ಯ ದಾಮನಂದಿ ಇವನ ಶಿಷ್ಯ ಶ್ರೀಧರದೇವನನ್ನು ಹೊಗಳಿದ್ದು ಆತನ ಮುಂದೆ ಸಾಮಿದೇವಿ ಇರುವಂತೆ ಶಾಸನ ಪಾಠ ತಿಳಿಸಿದೆ. ಕ್ರಿ.ಶ.೧೦೨೩ರಲ್ಲಿ ಗಂಗ ಅರಸ ರಾಚಮಲ್ಲನ ಪತ್ನಿ ಕಂಚಿಯಬ್ಬರಸಿ ಕುಪಣದಲ್ಲಿ ದೀಕ್ಷೆಯನ್ನು ಕೈಗೊಳ್ಳುತ್ತಾಳೆ.[೩೦] ಕ್ರಿ.ಶ. ೧೦೩೦ರ ಶಾಸನವೊಂದರಲ್ಲಿ ಇಮ್ಮಡಿ ಜಯಸಿಂಹನ ಪತ್ನಿ ಬೊನ್ಥಾದೇವಿಯ ತಾಯಿ ರೇವಕ್ಕ ನಿಮ್ಮಡಿ ಸತ್ತ ಉಲ್ಲೇಖವಿದೆ.[೩೧] ಈಕೆಯು ಬಹುಶಃ ಗಂಗವಂಶದವಳಿರಬೇಕು. ಇಲ್ಲಿಂದ ಮುಂದೆ ಗಂಗರ ಉಲ್ಲೇಖ ಕೊಪ್ಪಳ ಜಿಲ್ಲೆಯ ಶಾಸನಗಳಲ್ಲಿ ದೊರೆಯುವುದು ಕಡಿಮೆ. ಇಮ್ಮಡಿ ಬೂತುಗನ ನಂತರದ ಗಂಗರ ವಂಶಾವಳಿಯನ್ನು ಶಾಸನಗಳಿಂದ ಈ ಮುಂದಿನಂತೆ ಪುನರ್ರಚಿಸಬಹುದು.

ಇಮ್ಮಡಿ ಬೂತುಗ (ಕ್ರಿ.ಶ. ೯೩೬–೯೬)

- ಮರಳುದೇವ (ಅರಮೊಳಿದೇವ) ಕ್ರಿ.ಶ.೯೬೧–೯೬೩
- ಕುಂದಣಸಾಮಿ (ಗಂ.ರಾಜಾದಿತ್ಯ)
- ಬಿಜ್ಜಬ್ಬರಸಿ (ಗಂ.ಮಲ್ಲಪ್ಪ)
- ಜೆಬ್ಬಬರಸಿ (ಗಂ.ಹರಿಗ)
- ಮಾರಸಿಂಹ–II (ಕ್ರಿ.ಶ.೯೬೩–೯೭೪)
- ಚೆನ್ನಿಬ್ಬರಸಿ
- ರಾಜಮಲ್ಲ–IV (ಹೆಂ.ಕಂಚೆಬ್ಬರಸಿ)
- ನೀತಿಮಾರ್ಗ (ಗೋವಿಂದ) ಕ್ರಿ.ಶ.೯೯೯
- ವಾಸವ(ಬಾಸ) (ಹೆಂ.ಕುಂತಲದೇವಿ)
    - ಗೋವಿಂದರ (ಸತ್ಯವಾಕ್ಯ) (ಕ್ರಿ.ಶ.೯೯೯–೧೦೨೪)
    - ರಂಬಲದೇವಿ ಗಂ.ಚಾಲುಕ್ಯ ಚಿಕ್ಕಲದೇವ
    - ನೀತಿಮಾರ್ಗ ಅದುಮೋಳಿದೇವ (ಕ್ರಿ.ಶ.೧೦೨೦–೧೦೩೬)
        - ಬಚ್ಚಲದೇವಿ (ಗಂ.ಕಾಡುವೆಣ್ಣ)
        - ಕಾಂತಲದೇವಿ (ಗಂ.ತ್ರೈಲೋಕ್ಯಮಲ್ಲ ವೀರಸಾಂತರ)
        - ರಾಜಾವಿದ್ಯಾಧರ (ಲೋಕವಿದ್ಯಾಧರ ರಾಜಾದಿತ್ಯ) ಕ್ರಿ.ಶ.೧೦೩೪–೧೦೩೫

ಕಲ್ಯಾಣದ ಚಾಲುಕ್ಯರು

ಕರ್ನಾಟಕವನ್ನಾಳಿದ ಪ್ರಮುಖ ಅರಸು ಮನೆತನವೆಂದರೆ ಕಲ್ಯಾಣ ಚಾಲುಕ್ಯರ ಅರಸು ಮನೆತನ. ಈ ವಂಶದ ಸಾಮ್ರಾಜ್ಯ ಸ್ಥಾಪಕನಾದ ಇಮ್ಮಡಿ ತೈಲಪ. ಈತನು ಕ್ರಿ.ಶ.೯೭೩ರಲ್ಲಿ ರಾಷ್ಟ್ರಕೂಟರ ಆಳ್ವಿಕೆಯನ್ನು ಕೊನೆಗೊಳಿಸಿ ಈ ಸಾಮ್ರಾಜ್ಯವನ್ನು ಸ್ಥಾಪಿಸುತ್ತಾನೆ. ಇದಕ್ಕೆ ಮೊದಲು ಬೇರೆ ಬೇರೆ ಸ್ಥಳಗಳಲ್ಲಿ ರಾಷ್ಟ್ರಕೂಟರು ಹಾಗೂ ಗಂಗರು ಇವರೊಡನೆ ವೈವಾಹಿಕ ಸಂಬಂಧ ಹೊಂದಿದ್ದರೆಂಬುದಾಗಿ ಇತಿಹಾಸ ಹೇಳುತ್ತದೆ. ಈ ಹಿನ್ನೆಲೆಯಿಂದ ಕಲ್ಯಾಣಿ ಚಾಲುಕ್ಯರ ಆಡಳಿತವನ್ನು ಗುರುತಿಸಬಹುದಾಗಿದೆ. ಕಲ್ಯಾಣದ ಚಾಲುಕ್ಯರು ರಾಜಕೀಯ ರಂಗದ ಮೇಲೆ ಬರುವ ಹೊತ್ತಿಗೆ ಕೊಪ್ಪಳ ನಾಡು ಪ್ರಾಮುಖ್ಯತೆಯನ್ನು ಪಡೆದು ಕೊಂಡಿದ್ದು, ಇವರ ಕಾಲಕ್ಕೆ ಪರಾಕಾಷ್ಠೆಯನ್ನು ಮುಟ್ಟಿತ್ತು. ಸ್ಥೂಲವಾಗಿ ಹೇಳಬೇಕೆಂದರೆ ಈ ಮನೆತನದ ಅರಸರ ಶಾಸನಗಳು ಈ ನಾಡಿನ ಪ್ರತಿಯೊಂದು ಹಳ್ಳಿಯಲ್ಲಿಯೂ ದೊರೆಯುತ್ತವೆ.

ಕಲ್ಯಾಣ ಚಾಲುಕ್ಯರಿಗೆ ಸಂಬಂಧಿಸಿದಂತೆ ಕೊಪ್ಪಳ ಜಿಲ್ಲೆಯ ಶಾಸನಗಳು ಅನೇಕ ಕುರುಹುಗಳನ್ನು ಒದಗಿಸುತ್ತವೆ. ಕ್ರಿ.ಶ.೧೧೯೦ರಲ್ಲಿ ಮಾದಿನೂರಿನ ಶಾಸನ[೩೨]ವು ಕಲ್ಯಾಣ ಚಾಲುಕ್ಯರ ಆರಂಭಿಕ ಆಡಳಿತವನ್ನು ತಿಳಿಸುತ್ತದೆ. ಚಾಲುಕ್ಯ ವಂಶದ ತೈಲಪನು ತನ್ನ ಆಡಳಿತದ ಮೊದಲ ವರ್ಷದಲ್ಲಿ 'ಬ್ರಹ್ಮಾಂಡಕ್ರತು' ಎಂಬ ಯಾಗವನ್ನು ಮಾಡಿದಂತೆ ತಿಳಿಸುತ್ತದೆ. ಬಹುಶಃ ರಾಷ್ಟ್ರಕೂಟರನ್ನು ಸೋಲಿಸಿದ ತಾನು ಪಟ್ಟಕ್ಕೆ ಬಂದ ಕಾರಣಕ್ಕೆ ಈ ಯಾಗವನ್ನು ಮಾಡಿಸಿರಬಹುದೆಂದು ಊಹಿಸಲು ಸಾಧ್ಯವಿದೆ. ಶಾಸನದಲ್ಲಿ ಇವನನ್ನು 'ಚಾಲುಕ್ಯಾಭರಣ' 'ಪಾಂಚಾಲಮದೇಭ ಪಂಚಾನನ' 'ರಟ್ಟಘರಟ್ಟ ನೂರ್ಮಡಿ ತೇಜ ಆಹವಮಲ್ಲ'....... ಮುಂತಾಗಿ ಕರೆಯಲಾಗಿದೆ. ಕೊಪ್ಪಳದ ಕ್ರಿ.ಶ.೯೮೭ರ [illegible][೩೩] ದಲ್ಲಿ ಗಂಗ ವಂಶದ ವಾಸವನ(ಬಾಸ) ಮಗಳಾದ ರಂಬಲದೇವಿಯನ್ನು ನಾನಾ ರೀತಿಯಾಗಿ ವರ್ಣಿಸಿದೆ. ಕ್ರಿ.ಶ.೯೮೮ರ ಪಂಪಸರೋವರದ ಮೆಟ್ಟಲಿಗೆ ಸೇರಿಸಲಾಗಿರುವ ಕಲ್ಲಿನಲ್ಲಿರುವ ಶಾಸನ[೩೪] ಆಹವಮಲ್ಲನು ತುಂಗಭದ್ರೆಯ ದಕ್ಷಿಣ ತಡಿಯ ಪಂಪಾ ಬೀಡಿನಲ್ಲಿದ್ದಂತೆ ತಿಳಿದು ಬರುತ್ತದೆ.

ತಳಕಲ್ಲಿನ ಕ್ರಿ.ಶ.೯೯೧ರ ಶಾಸನ[೩೫]ದಲ್ಲಿ ಆಹವಮಲ್ಲನ ಸಾಮಂತ ಸೋಭರಸನು ಎರಡಾರುನೂರು ಮತ್ತು ಬನವಾಸಿ-೧೨೦೦೦ನ್ನು ಆಳುತ್ತಿದ್ದಂತೆಯೂ ಅವನ ಮಾಂಡಳೀಕನಾದ ಸಾವಿಯಣ್ಣನು ಕುಕನೂರು-೩೦ನ್ನು ಆಳುತ್ತಿದ್ದಂತೆಯೂ ಉಲ್ಲೇಖಿಸಲಾಗಿದೆ. ಹಿರೇಮನ್ನಾಪುರದ ಕ್ರಿ.ಶ.೯೯೨ರ ಶಾಸನವು[೩೬] ಜಯಸಿಂಹನ ಕಾಲಕ್ಕೆ ಸೇರಿದ್ದರೂ ಜಯಸಿಂಹನ ಆಡಳಿತ ಇರುವುದಿಲ್ಲ. ಈ ಕಾಲಕ್ಕಾಗಲೇ ಸತ್ಯಾಶ್ರಯನು ಪಟ್ಟಕ್ಕೆ ಬಂದಿರುತ್ತಾನೆ. ಬಳಗೇರಿ ಮತ್ತು ಕಲ್ಲೂರು ಶಾಸನಗಳು ಕ್ರಿ.ಶ.೧೦೦೨ಕ್ಕೆ ಸೇರಿದ್ದು ಸೋಬರಸನು ಸತ್ಯಾಶ್ರಯನ ಸಾಮಂತನಾಗಿ ಮುಂದುವರೆದಿದ್ದನ್ನು ತಿಳಿಸುತ್ತವೆ.[೩೭] ಕುಕನೂರಿನ ಕ್ರಿ.ಶ. ೧೦೦೫ರ ಶಾಸನದಲ್ಲಿ ಇರಿವಬೆಡಂಗನ ಉಲ್ಲೇಖವಿದ್ದು ಕುಕನೂರಿನ ಎರಡು ದೇವಾಲಯಗಳ ಕಳಶಗಳನ್ನು ಸ್ಥಾಪಿಸಿದಂತೆ ತಿಳಿಯುತ್ತದೆ.[೩೮]

ಕೊಪ್ಪಳದ ಕ್ರಿ.ಶ.೧೦೦೮ರ ಶಾಸನದಲ್ಲಿ[೩೯] ವಿಕ್ರಮಾದಿತ್ಯನ ಮೊದಲ ವರ್ಷದ ಉಲ್ಲೇಖವಿದ್ದು ಇವನು ಐದನೇ ವಿಕ್ರಮಾದಿತ್ಯನಾಗಿರುತ್ತಾನೆ. ಸಾಮಿಕುಮಾರ ಎಂಬುವವನು ಬಿಚ್ಚುಕುಂಸ್ದೆ ಗ್ರಾಮದಲ್ಲಿ ನಾಗದೇವ ಬಸದಿಯನ್ನು ಕಟ್ಟಿಸಿದ. ಈ ನಾಗದೇವ ಬಹುಶಃ ಚಾಲುಕ್ಯರ ದಂಡನಾಯಕರಲ್ಲೊಬ್ಬನಾದ ಅತ್ತಿಮಬ್ಬೆಯ ಗಂಡ ನಾಗದೇವನೇ ಇದ್ದಿರಬಹುದು. ಈ ಕಾಲಕ್ಕೆ ಆತ ಸತ್ತಿದ್ದು ಅವನ ನೆನಪಿನಲ್ಲಿ ನಾಗದೇವ ಬಸದಿ ಕಟ್ಟಿಸಿ ಅವನ ಹೆಸರಿನ ನಾಗದೇವನ ಸವಣ್ಣಾದ ಗಡಿಂಬ ಎಂಬ ಅಳತೆ ಗೋಲನ್ನು ಹಾಕಿಸಿರುತ್ತಾನೆ. ಈ ಶಾಸನ ದೊರೆತ ಸ್ಥಾನದಲ್ಲಿನ ಕಟ್ಟಡದ ಅವಶೇಷವೇ ಈ ನಾಗದೇವ ಬಸದಿಯಾಗಿರಬಹುದೆಂದು ಹೇಳಬಹುದು.[೪೦] ಗೋತಗಿಯ ಕ್ರಿ.ಶ. ೧೦೨೪ರ ಶಾಸನದ ಪ್ರಕಾರ ಜಗದೇಕ ಮಲ್ಲನು ಕಲ್ಯಾಣದಿಂದ ರಾಜ್ಯಭಾರ ಮಾಡುತ್ತಿದ್ದಂತೆ ಅವನ ಪತ್ನಿ ಪದ್ಮಲದೇವಿ ಕರಡಿಕಲ್ಲು-೩೦೦ನ್ನು ಆಳುತ್ತಿದ್ದಂತೆ ತಿಳಿಸುತ್ತದೆ.[೪೧] ಈತನ ಮತ್ತೊಬ್ಬಳು ಪತ್ನಿಯಾಗಿದ್ದ ಬೊಂಥಾದೇವಿಯ ಉಲ್ಲೇಖವೂ ಸಹ ಕ್ರಿ.ಶ.೧೦೩೦ರ ಶಾಸನ[೪೨]ದಲ್ಲಿ ಕಂಡುಬರುತ್ತದೆ. ಇದರ ಪ್ರಕಾರ ಬೊಂಥಾದೇವಿಯ ತಾಯಿ ರೇವಕಮ್ಮಡಿಯೂ ಆಗಿರಬಹುದೆಂದು ಗುರ್ತಿಸಬಹುದಾಗಿದೆ.

ತ್ರೈಲೋಕ್ಯಮಲ್ಲನು ಕ್ರಿ.ಶ. ೧೦೪೫ರಲ್ಲಿ ಮಾರಗನೂರು ಬೀಡಿನಲ್ಲಿದ್ದಂತೆ ತಿಳಿಯುವ ಹಲವಾರು ಮಾಹಿತಿಗಳಿವೆ. ಸೋಮೇಶ್ವರ ಬೆಟ್ಟದಲ್ಲಿನ ಶಾಸನ ವೊಂದರಲ್ಲಿ ಕ್ರಿ.ಶ. ೧೦೫೩ರಲ್ಲಿ ಇದೇ ಅರಸನು ಆಳುತ್ತಿದ್ದಾಗ ಕದಂಬ ವಂಶದ ಪಂಪರಸನೆಂಬುವವನ ಉಲ್ಲೇಖ ದೊರೆಯುತ್ತದೆ. ಪ್ರಸ್ತುತ ಕದಂಬ ಅರಸನು ಕರಡಿಕಲ್ಲಿನ ಕದಂಬನಿರಬಹುದೆಂದು ಊಹಿಸಲು ಸಾಧ್ಯವಿದೆ. ವಿಪ್ರದ ಕ್ರಿ.ಶ.೧೦೫೯ರ ಶಾಸನದಲ್ಲಿ ಸೋಮೇಶ್ವರನು ಈ ಸ್ಥಳಕ್ಕೆ ಬಂದು ದೇವಪೂಜೆ, ನದಿ ಪೂಜೆಯನ್ನು ಮಾಡಿಸಿದಂತೆ ತಿಳಿಸಲಾಗಿದೆ. ಈ ಶಾಸನದಲ್ಲಿ ಕಿಷ್ಕಿಂದೆಯ ಹಾಗೂ ವಿಪ್ರದ ೩೩ ಕೋಟಿ ದೇವರುಗಳ ಉಲ್ಲೇಖ ಸಿಗುತ್ತದೆ.[೪೩] ಅಳವಂಡಿಯ ಕ್ರಿ.ಶ.೧೦೬೧ರ ಶಾಸನದಲ್ಲಿ ಕರುವ ಗುಲ್ಲಿಮಯ್ಯ ಎಂಬುವವನು ಅಳವಂಡಿಯಲ್ಲಿ ತೋಟ, ಬಾವಿ, ಕಲ್ಲದೇಗುಲ, ಸತ್ರ, ಊರ ಬಾಗಿಲನ್ನು ಮಾಡಿಸಿದಂತೆ ತಿಳಿಯುತ್ತದೆ.[೪೪] ತ್ರೈಲೋಕ್ಯಮಲ್ಲದೇವನು ಕಲ್ಯಾಣದಿಂದ ಅಳವಂಡಿಯ ನಾನೂರು ಮಹಾಜನರ ಸನ್ನಿಧಿಯಲ್ಲಿ ಕರುವ ಗುಲ್ಲಿಮಯ್ಯನು ಊರ ಪಶ್ಚಿಮಕ್ಕೆ ತೋಟವನ್ನು, ಪೂರ್ವಕ್ಕೆ ಬಾವಿ, ಕಲ್ಲದೇಗುಲ, ಸತ್ರ, ಸತ್ರದ ಮನೆ ಹಾಗೂ ಊರ ನಡುವೆ ಶ್ರೀ ಬಾಗಿಲನ್ನು ಮಾಡಿಸುತ್ತಾನೆ. ಈ ರಚನೆಗಳಿಗೆ ಗುಲ್ಲಿಮಯ್ಯನ ಮಗ ಬಮರಯ್ಯ ವಸತಿ ಸತ್ರಕ್ಕೆ ೧೮ ಮತ್ತರು, ದೇವರಿಗೆ ಐದು ಮತ್ತರು, ಮಠಕ್ಕೆ ಎರೆ ಮತ್ತರು ಐದು- ಹೀಗೆ ದಾನಗಳನ್ನು ನೀಡಿರುತ್ತಾನೆ. ಶಾಸನದ ಮುಂದಿನ ಭಾಗದಲ್ಲಿ ಕರುವ ಗುಲ್ಲಿಮಯ್ಯನು ಕನ್ಯಾದಾನ, ಕವಿಲೆದಾನ, ಪಾದರಕ್ಷೆ ದಾನಗಳನ್ನು ಮಾಡಿ ಅನೇಕ ತೀರ್ಥಗಳಲ್ಲಿ ಸ್ನಾನ ಮಾಡಿ ದಾನ ಧರ್ಮಗಳನ್ನು ಮಾಡಿ ಮಹಾಪುರುಷ ಮೋಕ್ಷವನ್ನು ಪಡೆಯುತ್ತಾನೆ ಎಂಬುದಾಗಿ ಸ್ಪಷ್ಟಪಡಿಸಿದೆ. ಮುಧೋಳ ಶಾಸನ[೪೫] ದಲ್ಲಿಯೂ ಈ ತ್ರೈಲೋಕ್ಯಮಲ್ಲನಿಗೆ ಸಂಬಂಧಿಸಿದ ಉಲ್ಲೇಖ ಕಂಡುಬರುತ್ತದೆ.

ಈ ಶಾಸನದಲ್ಲಿ ವಿಕ್ರಮಾದಿತ್ಯನಿಂದ ಆರನೆಯ ವಿಕ್ರಮಾದಿತ್ಯನವರೆಗಿನ ಚಾಲುಕ್ಯ ವಂಶಾವಳಿಯನ್ನೇ ನೀಡಿದ್ದು, ಮುಂದೆ ತ್ರೈಲೋಕ್ಯಮಲ್ಲನು ಕಲ್ಯಾಣದಿಂದ ಆಳುತ್ತಿದ್ದಂತೆ ಹೇಳಲಾಗಿದೆ. ಶಾಸನದಲ್ಲಿ

ಮುದುವೊಳಲ ಸಾವಿರ ಅಶೇಷ ಮಹಾಜನರನ್ನು ಅನೇಕ ವಿಶೇಷಣಗಳಿಂದ ದೀರ್ಘವಾಗಿ ವರ್ಣಿಸಿದೆ. ಇವರನ್ನು ಶ್ರೀಸ್ವಯಂಭು ಜಡೆಯ ಶಂಕರದೇವ ಪಾದಾರಾಧಕರು ಎಂಬುದಾಗಿ ಕರೆಯಲಾಗಿದೆ. ಈ ವ್ಯಾಪಾರಿಗಳನ್ನು ನಾನಾ ರೀತಿಯಲ್ಲಿ ಶಾಸನದಲ್ಲಿ ವರ್ಣಿಸಲಾಗಿದೆ.

ಕೊಪಣದ ಪುರಾಧೀಶ ಪೆರ್ಮ್ಮಾಡಿ ಕಲ್ಯಾಣಿ ಚಾಲುಕ್ಯರ ೬ನೇ ವಿಕ್ರಮಾದಿತ್ಯನಿಗೆ ಸಂಬಂಧಿಸಿದಂತೆ ಹುಲಗಿಯ ಕ್ರಿ.ಶ.೧೦೮೮ರ ಶಾಸನವು[೪೬] ಆತನು ಕಲ್ಯಾಣದಿಂದ ಆಳ್ವಿಕೆ ನಡೆಸುತ್ತಿದ್ದಂತೆ ತಿಳಿಯುತ್ತದೆ. ಹಾಗೆಯೇ ಈತನ ಸುಪುತ್ರ ಮಲ್ಲಿಕಾರ್ಜುನನ ಸೇವಕನೆಂದು ರಾಯತೀರ್ಥ ಶಾಸನದಿಂದ ತಿಳಿಯುತ್ತದೆ. ಈ ಅರಸನ ಕಾಲದಲ್ಲಿ ಈ ಕೊಪ್ಪಳವು ರಾಜಕೀಯ, ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರವಾಗಿಯೇ ಮುಂದುವರೆಯಿತು. ವಿಪ್ರದ ಕ್ರಿ.ಶ.೧೯೪ರ ಶಾಸನದಲ್ಲಿ ಪ್ರಭುವಾನ ಸಾಮಂತ ಪ್ರಭುವಾನ ಮಲ್ಲ ವೀರಪಾಂಡ್ಯನು ನೊಳಂಬರ ಪಾರಂಪರಿಕ ಬಿರುದುಗಳನ್ನು ಧರಿಸಿರುವುದನ್ನು ತಿಳಿಯ ಬಹುದಾಗಿದೆ. ಕ್ರಿ.ಶ.೧೯೯ರಲ್ಲಿ ತ್ರಿಭುವನ ಮಲ್ಲನ ಕಾಲದ ಶಾಸನ[೪೭] ಅನೇಕ ವ್ಯಾಪಾರಿಗಳನ್ನು ಹೆಸರಿಸಿದೆ.

ಹೆಸರೂರಿನ ಈ ವ್ಯಾಪಾರಿಗಳನ್ನು ಚಾಲುಕ್ಯರಾಯರ ಕುಲದೈವದೊಕ್ಕಲುಗಳೆಂದು ಕರೆಯಲಾಗಿದೆ. ಕ್ರಿ.ಶ.೧೧೦೪ರ ಪ್ರಸ್ತುತ ಶಾಸನವು[೪೮] ಹೇಳುವಂತೆ ಚಾಲುಕ್ಯ ತ್ರಿಭುವನಮಲ್ಲನು ಕಲ್ಯಾಣದಿಂದ ರಾಜ್ಯಭಾರ ಮಾಡುತ್ತಿದ್ದಾಗ ಚಾಲುಕ್ಯರಾಯರ ಕುಲದೈವದ ಒಕ್ಕಲುಗಳು, ಮಣ್ಣಕೆರೆಯ ೫೦೦ ತಂತ್ರರು ಊರೊಡೆಯ ಪನ್ನಿರ್ವ್ವರು ಆದಿತ್ಯದೇವರ ಅಂಗಭೋಗಕ್ಕೆ, ಜೀರ್ಣೋದ್ಧಾರಕ್ಕೆ ಚಾಮೋಜನ ಮಗ ಬೊಪ್ಪಣನಿಗೆ ಹೆಗ್ಗೆರೆಯ ಪೂರ್ವಕ್ಕೆ ನಾಲ್ಕು ಮತ್ತರನ್ನು ನೀಡುತ್ತಾರೆ. ಇದಲ್ಲದೆ ಇನ್ನೂ ಕೆಲವು ದಾನಗಳನ್ನು ನೀಡುತ್ತಾರೆ. ಹೆಚ್ಚಿನ ವಿವರಗಳು ನಾಶವಾದರೂ ಇಲ್ಲಿ ಉಲ್ಲೇಖಗೊಂಡಿರುವ ಒಕ್ಕಲುಗಳನ್ನು ಹಾಗೂ ಊರೊಡೆಯರನ್ನು ಶಾಸನದಲ್ಲಿ ಹೆಚ್ಚಾಗಿ ವರ್ಣಿಸಲಾಗಿದೆ. ಮಂಕಲ್ಕೇರಿಯ ಕ್ರಿ.ಶ. ೧೧೨೩ರ ಶಾಸನವು[೪೯] ಈ ರಾಜನ ಜಯಂತಿಪುರದ ನೆಲೆವೀಡಿನಲ್ಲಿದ್ದಂತೆ ಹೇಳಿದೆ. ಕ್ರಿ.ಶ.೧೧೨೮ರ ವರೆಗೆ ಇವನ ಶಾಸನಗಳು ಕೊಪ್ಪಳ ಜಿಲ್ಲೆಯಲ್ಲಿ ಕಂಡುಬರುತ್ತವೆ. ಇದೇ ವಂಶದ ಒಂದನೇ ಸೋಮೇಶ್ವರನಿಗೂ ಚೋಳ ಅರಸು ರಾಜಾಧಿರಾಜನಿಗೂ ಕೊಪ್ಪಳದಲ್ಲಿ ಖಾಡಬಾಡಿ ಯುದ್ಧ ನಡೆದು ಚೋಳ ಅರಸು ಸೋತು ಮಡಿದನೆಂದು ಹೇಳಲಾಗುತ್ತಿದೆ. ಇಲ್ಲಿ ಉಲ್ಲೇಖಿತವಾದ 'ಕೊಪ್ಪಂ' ಈ ಕೊಪ್ಪಳವೆಂದೇ ಅನೇಕ ತಜ್ಞರು ಊಹಿಸಿದ್ದಾರೆ. ಇದು ನಿಜವಿದ್ದರೆ ಇದೊಂದು ಕೊಪ್ಪಳದ ರಾಜಕೀಯ ಇತಿಹಾಸಲ್ಲಿಯೇ ಪ್ರಮುಖ ಮೈಲುಗಲ್ಲೆಂದು ಗುರುತಿಸಲ್ಪಡುತ್ತದೆ.

ಕ್ರಿ.ಶ.೧೧೨೯ರ ಕುಕನೂರಿನ ಶಾಸನವೊಂದು[೫೦] ಭೂಲೋಕಮಲ್ಲನ ಆಳ್ವಿಕೆಯನ್ನು ಹೆಸರಿಸಿದೆ. ತೃಟಿತಗೊಂಡಿರುವ ಈ ಶಾಸನ ಭೂಲೋಕಮಲ್ಲನ ಆಳ್ವಿಕೆಯಲ್ಲಿ ದೇಮೆಯೆಷಣಂಗಿಯು ಗಣೇಶ್ವರ ದೇವಾಲಯದಲ್ಲಿ ರುದ್ರಾದಿತ್ಯ ಘೈಸಾಸನು ಮಾಡಿಸಿದ ಸತ್ರದ ಮನೆಯಲ್ಲಿ ಪ್ರತಿ ದಿವಸವೂ ೬ ಜನ ಬ್ರಾಹ್ಮಣರು ಊಟ ಮಾಡುವಂತೆ ಭೂ ದಾನವನ್ನು ನೀಡುತ್ತಾನೆ. ಇದರೊಂದಿಗೆ ಮತ್ತೆ ೧೨ ಜನರು ಊಟ ಮಾಡಲು ರುದ್ರಾದಿತ್ಯ ಘೈಸಾಸನು ಮತ್ತೆ ಭೂದಾನ ನೀಡುತ್ತಾನೆ. ಇದಲ್ಲದೆ

ಬೇರೆ ಬೇರೆಯವರು ದೇವರ ಬೇರೆ ಬೇರೆ ಕಾರ್ಯಗಳಿಗೆ ದಾನ ನೀಡಿರುತ್ತಾರೆ. ಈ ಧರ್ಮವನ್ನು ಸಾವಿರ ಜನರು ಪ್ರತಿಪಾದಿಸಬೇಕೆಂದು ವಿಧಿಸಿದೆ.

ಕಲ್ಲೂರಿನ ಕ್ರಿ.ಶ.೧೧೩೨ರ ಶಾಸನದಲ್ಲಿ[೫೧] ಆಚರಸನ ಮಗ ಪೆರ್ಮಾನಾಡಿಯು ಕುಕನೂರು-೩೦ನ್ನು ಆಳುತ್ತಿದ್ದಂತೆ ಹೇಳಿದೆ. ಈ ಶಾಸನದಲ್ಲಿ ಬರುವ ವಡ್ಡರಾವುಳದ ಅಧಿಕಾರಿ ಮಹೇಶ್ವರಯ್ಯನನ್ನೆ ಶಾಸನದಲ್ಲಿ ಬಹಳವಾಗಿ ಉಲ್ಲೇಖಿಸಲಾಗಿದೆ. ಕ್ರಿ.ಶ.೧೧೩೬ರ ಶಾಸನ[೫೨] ವು ತ್ರಿಭುವನಮಲ್ಲನ ಹೆಂಡತಿಯಾದ ರೆಬ್ಬಲದೇವಿಯುನ್ನು ಹೆಸರಿಸಿದೆ. ಈಕೆಯು ಭೂಲೋಕಮಲ್ಲನ ತಾಯಿಯಾಗಿರಬಹುದೆಂದು ಊಹಿಸಬಹುದು. ಶಿವಪುರದ ಕ್ರಿ.ಶ.೧೦೩೩ರ ಶಾಸನ[೫೩]ವು ತೈಲಪನನ್ನು ಮತ್ತು ಅವನ ಸಾಮಂತನನ್ನು ವರ್ಣಿಸಿದೆ. ಪ್ರಸ್ತುತ ಊರಿನ ಕ್ರಿ.ಶ.೧೧೪೩ ಮತ್ತು ೧೧೪೯ರ ಶಾಸನಗಳು ಜಗದೇಕಮಲ್ಲನನ್ನು ಹೆಸರಿಸುತ್ತವೆ.[೫೪] ಕ್ರಿ.ಶ.೧೧೪೩ರ ಶಾಸನದಂತೆ ಜಗದೇಕಮಲ್ಲನು ರಾಜ್ಯವನ್ನು ಆಳುತ್ತಿದ್ದಾಗ ಅಗ್ರಹಾರ ಕುಕ್ಕನೂರಿನ ಸಾವಿರ ಮಹಾಜನರ ಪ್ರಿಯ ಮಕ್ಕಳಾದ ಗಳೆಯ ಮೂನೂರ್ವರು ಸಾವಿರ ಮಹಾಜನರ ಕೈಯಲ್ಲಿ ತಮ್ಮ ತೋಟಿಗೇಶ್ವರ ದೇವರ್ಗ್ಗೆ ವರ್ಷಂಪ್ರತಿ ತೋಟಗೆಲಸದಲ್ಲಿ ಒಂದು ಹಾಗವನ್ನು ಬಿಟ್ಟಂತೆ ಶಾಸನವು ತಿಳಿಸುತ್ತದೆ. ಕ್ರಿ.ಶ.೧೧೪೯ರ ಶಾಸನದಂತೆ ಚಾಲುಕ್ಯ ಚಕ್ರವರ್ತಿ ಜಗದೇಕಮಲ್ಲನ ಕಾಲದಲ್ಲಿ ಮರಿಮರಸ ದಂಡನಾಥನು ಬೆಳ್ವಲ-೨೦೦ನ್ನು ಅಳುತ್ತಿದ್ದಾಗ ಇವನ ಕೈ ಕೆಳಗಿನ ಅಧಿಕಾರಿ ಮೇದಿರಾಜ ದಂಡನಾಯಕನು ಕುಕ್ಕನೂರಿನ ಮಲ್ಲಿಕಾರ್ಜುನ ದೇವರ ನೈವೇದ್ಯಕ್ಕೆ ಹೊನ್ನನ್ನು ಬಿಡುತ್ತಾನೆ. ಇವರಲ್ಲದೆ ಮಾಹಿಯಣ್ಣನೂ ಒಂದು ಗಳಂ ದಾನ ಬಿಡುತ್ತಾನೆ.

ಕಲ್ಲೂರು ಮತ್ತು ಮುಧೋಳಿನ ಕ್ರಿ.ಶ.೧೧೫೪ರ ಶಾಸನಗಳಲ್ಲಿ[೫೫] ಅಳವಂಡಿ ಮತ್ತು ಕುಕ್ಕನೂರಿನ ಕ್ರಿ.ಶ.೧೧೫೭ರಲ್ಲಿನ[೫೬] ಶಾಸನಗಳಲ್ಲಿ ಚಾಲುಕ್ಯ ತ್ರೈಲೋಕ್ಯಮಲ್ಲನ ಆಳ್ವಿಕೆಯ ಉಲ್ಲೇಖವಿದೆ. ಇಲ್ಲಿಂದ ಮುಂದೆ ಕ್ರಿ.ಶ.೧೧೮೫ರ ವರೆಗೆ ಚಾಲುಕ್ಯರ ಶಾಸನಗಳು ಈ ಜಿಲ್ಲೆಯಲ್ಲಿ ಅಷ್ಟಾಗಿ ದೊರೆಯುವುದಿಲ್ಲ. ಕಲ್ಲೂರಿನ ಕ್ರಿ.ಶ.೧೧೮೫ರ ಶಾಸನ ಚಾಲುಕ್ಯ ಪ್ರಭುವಿನ ಉಲ್ಲೇಖವನ್ನೇ ಹೆಸರಿಸಿದ್ದು, ಇವನ ಸಾಮಂತನಾದ ಸಿಂಧ ವಂಶದ ವೀರ ಬಿಜ್ಜಳ ಮತ್ತು ವಿಕ್ರಮ ದೇವನಿದ್ದಂತೆ ಉಲ್ಲೇಖ ಬರುತ್ತದೆ.[೫೭] ಅದೇ ಗ್ರಾಮದ ಕ್ರಿ.ಶ.೧೧೯ರ ಶಾಸನದಲ್ಲಿ ಭೂಲೋಕಮಲ್ಲನ ಉಲ್ಲೇಖವಿದೆ. ಮಾದಿನೂರಿನ ಕ್ರಿ.ಶ.೧೧೯೦ರ ಶಾಸನದಲ್ಲಿ[೫೮] ಸೋವಿದೇವನ ಉಲ್ಲೇಖವಿದ್ದು ಇವನು ಯಾರೆಂಬುದು ಸ್ಪಷ್ಟವಾಗಿ ತಿಳಿದು ಬರುವುದಿಲ್ಲ.

ಚಾಲುಕ್ಯ ವಂಶದ ೩ನೇ ತೈಲಪನು ಈ ಚಾಲುಕ್ಯರ ಮಹಾಮಂಡಳೇಶ್ವರ ಮತ್ತು ಇವರ ಬಂಧುವೆಂದು ಹೇಳಲಾಗುವ ಕಲಚೂರಿಯ ೨ನೇ ಬಿಜ್ಜಳನು ಕಾಕತೀಯರ ೩ನೇ ತೈಲಪನನ್ನು ದಂಡಿಸಲು ಹೋದ ಸಮಯದಲ್ಲಿ ಕಲ್ಯಾಣ ಸಿಂಹಾಸನವನ್ನು ಆಕ್ರಮಿಸಿಕೊಂಡನು ಮತ್ತು ಕಲಚೂರಿಯ ರಾಜ್ಯವನ್ನು ಕ್ರಿ.ಶ.೧೧೬೨ರಲ್ಲಿ ಸ್ಥಾಪಿಸಿದನೆಂದು ಹೇಳಲಾಗುತ್ತದೆ. ಈತನು ಕುಮಾರರಾಮ ಮರಾಠಿ ಸೋವಿದೇವಯ್ಯನನ್ನು ಕೊಪ್ಪಳದ ಸನಿಹದಲ್ಲಿರುವ ಮೊದೆಗನೂರು ರಾಜ್ಯದ ಅರಸನೆಂದು

ಸಾರಿದನು. ಈ ವಿಷಯವನ್ನು ಇಟಗಿ ಮತ್ತು ಕುಕನೂರಿನಲ್ಲಿನ ಶಾಸನಗಳು ಸ್ಪಷ್ಟಪಡಿಸುತ್ತವೆ. ಕಾಲ ಸುಮಾರು ಕ್ರಿ.ಶ.೧೧೮೩ರಲ್ಲಿ ಕಲ್ಯಾಣ ವಂಶದ ಅರಸು ೪ನೇ ಸೋಮೇಶ್ವರನು ಬ್ರಹ್ಮರಸ...... ಮುಂತಾದ ದಂಡನಾಯಕರ ಸಹಾಯದಿಂದ ಕಲಚೂರಿಗಳನ್ನು ಮಣಿಸಿ ಪುನಃ ಕಲ್ಯಾಣ ಚಾಲುಕ್ಯರ ಸಾಮ್ರಾಜ್ಯ ಮರಳಿ ಪಡೆದನೆಂದು ಹೇಳಬಹುದು.

ಪ್ರಸ್ತುತ ಕೊಪ್ಪಳ, ಬೆಳ್ವಲನಾಡು, ಎಡೆದೊರೆನಾಡುಗಳೊಂದಿಗೆ ಮತ್ತೆ ಕಲ್ಯಾಣ ಚಾಲುಕ್ಯರ ರಾಜ್ಯಕ್ಕೆ ಸೇರಿದಂತಹ ಈ ಚಾಲುಕ್ಯ ವಂಶದ ಸಾಮಂತನಾಗಿದ್ದ ದೇವಗಿರಿಯ ಅರಸು ೫ನೇ ಬಿಲ್ಲಮನು, ಅರಸು ೪ನೇ ಸೋಮೇಶ್ವರನು ಬನವಾಸಿಯತ್ತ ಸೈನ್ಯದೊಂದಿಗೆ ತೆರಳಿದ ಸಮಯಾವಕಾಶವನ್ನು ಉಪಯೋಗಿಸಿಕೊಂಡು ಕಲ್ಯಾಣವನ್ನು ಹಿಡಿದುಕೊಂಡು ಸ್ವತಂತ್ರ ರಾಜನೆಂದು ಸಾರಿದ. ಕಿಸುಕಾಡು, ಬೆಳ್ವಲ, ಎಡದೊರೆನಾಡು ಈ ದೇವಗಿರಿಯ ಸೇವುಣರ ಅರಸರ ಆಡಳಿತಕ್ಕೆ ಸೇರಿದವು. ಈ ಮೊದಲೇ ಎಡದೊರೆಯ ನಾಡಿನಲ್ಲಿದ್ದ ಈ ಕೊಪ್ಪಳ ಇವುಗಳೊಂದಿಗೆ ಸೇವುಣ ರಾಜ್ಯಕ್ಕೆ ಸೇರಿತು.

ಸೇವುಣರು

ಕೊಪ್ಪಳ ಜಿಲ್ಲೆಯಲ್ಲಿ ಸೇವುಣರಿಗೆ ಸಂಬಂಧಿಸಿದ ಶಾಸನಗಳು ಸ್ಪಷ್ಟವಾಗಿ ದೊರೆಯದಿದ್ದರೂ ಹೊಯ್ಸಳ ಅರಸನಾದ ಇಮ್ಮಡಿ ಬಲ್ಲಾಳನಿಗೂ ಮತ್ತು ಸೇವುಣರ ಅರಸು ಐದನೇ ಬಿಲ್ಲಮನಿಗೂ ಸ್ವರಲೂರಿನಲ್ಲಿ ಯುದ್ಧವಾಯಿತೆಂದು ಹಿಂದೆ ಗಮನಿಸಲಾಗಿದೆ. ಇದರಲ್ಲಿ ಬಿಲ್ಲಮನು ಜಯಶಾಲಿಯಾಗುತ್ತಾನೆ. ವೈರಿಗಳನ್ನು 'ತೋಳಗುಂಡಿ' (ಈಗಿನ ಲಕ್ಕಂಡಿ ಎಂದು ಹೇಳಲಾಗುವ)ಯ ವರೆಗೂ ಈತನು ಅಟ್ಟಿದನು. ಅವರಾಳುತ್ತಿದ್ದ ಬೆಳ್ವಲನಾಡನ್ನು ತನ್ನ ರಾಜ್ಯ ಕ್ಕೆ ಸೇರಿಸಿಕೊಂಡನು. ಕ್ರಿ.ಶ.೧೨೧೫ರಲ್ಲಿ ಸೇವುಣ ವಂಶದ ಬಲ್ಲಾರ್ಯ ಅರಸನೆಂದು ಹೇಳಲಾಗುವ ಇಮ್ಮಡಿ ಸಿಂಘಣನು ಹೊಯ್ಸಳ ಇಮ್ಮಡಿ ಬಲ್ಲಾಳನನ್ನು ಸೋಲಿಸಿ ಆತನು ವಶಪಡಿಸಿಕೊಂಡಿದ್ದ ತಮ್ಮ ಪ್ರದೇಶಗಳನ್ನು ಪುನಃ ಪಡೆದುಕೊಂಡನು. ಆನಂತರ ಸೇವುಣರ ಅರಸು ರಾಮಚಂದ್ರನ ಕಾಲ ಕ್ರಿ.ಶ.೧೨೪೫ರಲ್ಲಿ ದಿಲ್ಲಿಯಿಂದ ದಕ್ಷಿಣಕ್ಕೆ ಬಂದ ಅಲ್ಲಾವುದ್ದೀನನು ದೇವಗಿರಿಯನ್ನು ಹಿಡಿದುಕೊಂಡನು. ಈರ್ವರಲ್ಲಿ ಒಪ್ಪಂದ ಏರ್ಪಟ್ಟು ಅಪಾರ ಬಂಗಾರ ಮತ್ತು ಬೆಲೆಯುಳ್ಳ ವಸ್ತುಗಳೊಂದಿಗೆ ದಿಲ್ಲಿಗೆ ಹಿಂದಿರುಗಿದನು. ನಂತರದಲ್ಲಿ ಸ್ವಾಭಿಮಾನಿಗಳಾದ ಕಾಕತೀಯರು, ಹೊಯ್ಸಳರು ಸೇರಿ ದೇವಗಿರಿ ಮೇಲಿನ ದಿಲ್ಲಿಯ ಹಿಡಿತವನ್ನು ಕಿತ್ತೊಗೆದು ಸೇವುಣರನ್ನು ಮರಳಿ ಸ್ವತಂತ್ರಗೊಳಿಸಿದರು. ಹೀಗೆ ಪ್ರಬಲರಾದ ಸೇವುಣರು ನೇರವಾಗಿ ಕೊಪ್ಪಳ ಪ್ರದೇಶದಲ್ಲಿ ತಮ್ಮ ಅಧಿಕಾರವನ್ನು ನಡೆಸಿದರು. ಇಲ್ಲಿನ ಅರಸರು ಪರಕೀಯರ ವಿರುದ್ಧ ಸಾಧನೆ ಮಾಡಿದುದು ಗಮನಿಸುವಂತಹದು.

ನೊಳಂಬರು

ನೊಳಂಬರಿಗೆ ಸಂಬಂಧಿಸಿದಂತೆ ಕೆಲವೆ ಕೆಲವು ಶಾಸನಗಳು ಕೊಪ್ಪಳ ಜಿಲ್ಲೆಯಲ್ಲಿ ಕಂಡು ಬರುತ್ತವೆ. ಈ ನೊಳಂಬರು ಪಾರಂಪರಿಕವಾಗಿ ಬಂದಿದ್ದ ನೊಳಂಬ-೩೨,೦೦೦ದ ಅರಸರಾಗಿದ್ದರು.

ಇವರು ಪ್ರಾರಂಭದಲ್ಲಿ ಹೇಮಾವತಿ (ಹೆಂಜೇರು)ಯನ್ನು ರಾಜಧಾನಿಯನ್ನಾಗಿ ಹೊಂದಿದ್ದರೂ ಸಹಿತ ನಂತರದ ಕಾಲದಲ್ಲಿ ಕಂಪಲಿಯನ್ನು (ಈಗಿನ ಕಂಪ್ಲಿ) ರಾಜಧಾನಿಯನ್ನಾಗಿ ಬದಲಾಯಿಸಿ ಕೊಂಡರು. ತುಂಗಭದ್ರಾ ನದಿ ಇವರ ಪ್ರಾಂತ್ಯಕ್ಕೆ ನೈಸರ್ಗಿಕ ಮೇರೆಯನ್ನು ಒದಗಿಸಿಕೊಟ್ಟಿದ್ದರಿಂದ ಈ ನೊಳಂಬವಾಡಿ-೩೨,೦೦೦ ಪ್ರದೇಶ ಈ ನದಿಯ ಉತ್ತರಕ್ಕೆ ಹೆಚ್ಚಾಗಿ ಹಾಗೆಯೇ ನೊಳಂಬರು ಈ ನದಿಯಿಂದ ಉತ್ತರಕ್ಕೆ ಆಡಳಿತ ನಡೆಸಿದ ಬಗೆಗೆ ದಾಖಲೆಗಳು ಸಹ ಹೆಚ್ಚಿಗೆ ದೊರೆಯುವುದಿಲ್ಲ. ಆದರೆ ಗಂಗಾವತಿ ತಾಲೂಕಿನ ವಿಪ್ರವನ್ನು ಕೆಲವು ಕಾಲ ತಮ್ಮ ನೆಲೆವೀಡನ್ನಾಗಿ ಇವರು ಮಾಡಿಕೊಂಡಿದ್ದಂತೆ ಕಲ್ಕಂಬ ಶಾಸನ[೫೯] ಗಳಿಂದ ತಿಳಿದು ಬರುತ್ತದೆ.

ಇಲ್ಲಿನ ನಿಷದಿ ಶಾಸನಗಳಲ್ಲಿ ಪಲ್ಲವರಾಯನ ಉಲ್ಲೇಖವು ಬಂದಿದ್ದು ಈತನು ನೊಳಂಬ ಅರಸನಾಗಿರಬಹುದೆಂದು ನಂಬಲಾಗಿದೆ. ಕ್ರಿ.ಶ.೯೮೯ರ ಶಾಸನವೊಂದು ಪರಿಯಬ್ಬರಿಸಿಯು ಪಲ್ಲವರ ರಾಜನ ಪತ್ನಿಯೆಂದು ತಿಳಿಸುತ್ತದೆ. ಈ ಪಲ್ಲವರಾಜನು ಇರಿವ ನೊಳಂಬ ದೀಲಿಪನ ಮಗನಾದ ಇರಿವ ನೊಳಂಬ ನೊಳಿಪ್ಪಯ್ಯನಿರಬಹುದೆಂದು ಊಹಿಸಲಾಗಿದೆ. ಕ್ರಿ.ಶ.೧೦೩೧ರ ಕೊಪ್ಪಳದ ಶಾಸನ[೬೦] ವೊಂದು ಚಿಣ್ಣಕಬ್ಬೆಯ ಪತಿ ದೀಲಿಪನೆಂದು ಈಕೆಯ ಮಗ ಗುಣದ ಬೆಡಂಗನೆಂದು ತಿಳಿಸುತ್ತದೆ. ಈ ದೀಲಿಪನು ಕ್ರಿ.ಶ.೯೫೦ರಲ್ಲಿ ಆಳ್ವಿಕೆ ನಡೆಸಿದ ದೀಲಿಪನಾಗಿರಲು ಸಾಧ್ಯವಿಲ್ಲ. ಆದುದರಿಂದ ಕ್ರಿ.ಶ.೯೭೦ರ ನಂತರ ಆಳ್ವಿಕೆ ನಡಿಸಿದ ನೊಳಂಬ ರಾಜರುಗಳಲ್ಲಿ ಈತನು ಒಬ್ಬನಾಗಿರಬೇಕು. ಈ ರಾಜರುಗಳಲ್ಲಿ ಗುಣದ ಬೆಡಂಗ ಎಂಬ ವಿಶೇಷಣ ಯಾರಿಗಿತ್ತೆಂಬುದು ಸ್ಪಷ್ಟವಾಗಿಲ್ಲ. ೬ನೇ ವಿಕ್ರಮಾದಿತ್ಯನ ಕಾಲದ ವಿಪ್ರದ ಶಾಸನದಲ್ಲಿ ನೊಳಂಬರ ಪಾರಂಪರಿಕ ಬಿರುದು ಬಾವಲಿಗಳನ್ನೇ ಹೊಂದಿದ್ದ ತ್ರಿಭುವನ ಮಲ್ಲನಾದ ಪಾಂಡ್ಯನ ಉಲ್ಲೇಖ ಕಂಡುಬರುತ್ತದೆ. ಇಲ್ಲಿ ಯಥಾವತ್ತಾಗಿ ನೊಳಂಬ ವಂಶದ ಅರಸರ ಬಿರುದು ಬಾವಲಿಗಳನ್ನು ಸ್ವೀಕರಿಸಿದ್ದರೂ ಸಹ ಪ್ರಸ್ತುತ ತ್ರಿಭುವನಮಲ್ಲ ಪಾಂಡ್ಯನು ಉಚ್ಚಂಗಿಯ ಪಾಂಡ್ಯನಾಗಿರಬಹುದೆಂದು ಹೇಳಬಹುದು.

ಕಲ್ಯಾಣದ ಕಲಚೂರಿಗಳು

ಕೊಪ್ಪಳ ಜಿಲ್ಲಾ ಪ್ರದೇಶದಲ್ಲಿ ಕಲಚೂರಿಗಳಿಗೆ ಸಂಬಂಧಿಸಿದ ಶಾಸನಗಳು ಕುಕನೂರು, ಹಲಗೇರಿ, ಪುರ, ಕವಲೂರು, ಇಟಗಿ, ಅಳವಂಡಿ ಈ ಮುಂತಾದ ಸ್ಥಳಗಳಲ್ಲಿ ದೊರೆಯುತ್ತವೆ. ಕುಕನೂರಿನಲ್ಲಿ ಕ್ರಿ.ಶ.೧೧೬೩ರ ಶಾಸನ[೬೧]ವು ಇಮ್ಮಡಿ ಬಿಜ್ಜಳನ ಆಳ್ವಿಕೆಗೆ ಸೇರಿದ್ದು, ಹಂಪೆಯ ವಿರೂಪಾಕ್ಷನ ಸನ್ನಿಧಿಯಲ್ಲಿ ಮಾಡಿದ ದಾನದ ಬಗೆಗೆ ತಿಳಿಸುತ್ತದೆ. ಈ ಶಾಸನ ಬಿಜ್ಜಳನ ಕೈಕೆಳಗೆ ಅಮ್ಮಣ್ಣರಸ, ಬೊಪ್ಪಣ್ಣ ನಾಯಕ, ಭೀಮರಸ, ಸಾಯಿದೇವ ವಿಟ್ಟಪ್ಪಯ್ಯ, ಬಲದೇವ ದಂಡ ನಾಯಕರಲ್ಲದೇ ಕರಣಗಳಾದ ಮಧುಸೂಧನ ಆದಿತ್ಯದೇವ, ಸೋಮರಾಜ, ಬೊಪ್ಪದೇವ, ಚಾವುಂಡರನ್ನು ಹೆಸರಿಸಿದೆ. ಇದೇ ಗ್ರಾಮದ ಇನ್ನೊಂದು ಶಾಸನವು ಕಲಚೂರಿ ಕನ್ನಮನಿಂದ ಸೋಮದೇವನ ವರೆಗೆ ವಂಶಾವಳಿಯನ್ನು ನೀಡಿದ್ದು ಸೋವಿದೇವನು ಮುದೇನೂರು ನೆಲೆವೀಡಿನಲ್ಲಿದ್ದಂತೆ ತಿಳಿಸುತ್ತದೆ. ಇವನ ದಂಡಾಧೀಶನಾಗಿ ತೇಜಿರಾಜನಿರುತ್ತಾನೆ. ಕ್ರಿ.ಶ.೧೧೭೧ರಲ್ಲಿನ ಚಳಿಗೇರಾ ಶಾಸನ ಇವನ ಇನ್ನೊಬ್ಬ ದಂಡಾಧೀಶನಾದ ಬೂಚಿರಾಜನನ್ನು ಹೆಸರಿಸುತ್ತದೆ.

ಕವಲೂರಿನ ಕ್ರಿ.ಶ.೧೧೭೭ರ ಕಾಲಕ್ಕೆ ಸೇರಿದ ಸಂಕಮದೇವನ ಶಾಸನ[೬೨]ದಲ್ಲಿ ಏಚಿಮಯ್ಯ ನಾಯಕನೆಂಬುವವನು ಕವಲೂರಿನಲ್ಲಿ ಹರಿಹರ ದೇವಾಲಯವನ್ನು ನಿರ್ಮಿಸಿ ಅದರ ಪೂಜಾ ಕಾರ್ಯಗಳಿಗೆ ಭೂದಾನವನ್ನು ನೀಡುತ್ತಾನೆ. ಕುಕನೂರಿನ ಕ್ರಿ.ಶ.೧೧೭೮ರ ಶಾಸನ[೬೩]ದಲ್ಲಿ ಸಂಕಮದೇವನು ಮೋದಿಗ ನೂರಿನಲ್ಲಿದ್ದಾಗ ಇವನ ಸೇನಾನಿ ಧಂನುಗಿ(ಧನ್ಯಚಮೂಪನು) ಬೆಳ್ವಲ-೨೦೦ರನ್ನು ಆಳುತ್ತಿದ್ದನು. ಇವನು ತನ್ನ ತಾಯಿ ಚಾಂಡಾಬಾಯಿ ಅಕ್ಕ ಲಳಿಯದೇವಿಯರೊಡಗೂಡಿ ಕುಕನೂರಿಗೆ ಬಂದು ಜೇಷ್ಠ ದೇವಿಯ ಪೂಜೆಯನ್ನು ಮಾಡಿಸಿದ್ದನ್ನು ಉಲ್ಲೇಖಿಸುತ್ತದೆ. ಕವಲೂರಿನ ಕ್ರಿ.ಶ.೧೧೭೯ರ ಶಾಸನ[೬೪]ದಲ್ಲಿ ಸಂಕಮದೇವನು ಕೌರೂರ ಹರಿಹರೇಶ್ವರ ದೇವಾಲಯಕ್ಕೆ ಎಡೆಹಳ್ಳಿಗೇರಿಯನ್ನು ಬಿಡುತ್ತಾನೆ. ಇವನ ಮಾಂಡಳಿಕ ಬಾಚಿದೇವನಾಗಿರುತ್ತಾನೆ. ಅಳವಂಡಿಯಲ್ಲಿ ದೊರೆತ ಶಾಸನ[೬೫]ವೊಂದು ಕಲಚೂರಿ ಆಹವಮಲ್ಲನ ಕಾಲಕ್ಕೆ ಸೇರಿದ್ದು ಅಳವಂಡಿಯ ಮಹಾಜನರಿಗೆ ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ. ಕ್ರಿ.ಶ.೧೧೮೩ರ ಶಾಸನ[೬೬]ವೊಂದು ಕಲಚೂರ್ಯ ಸಿಂಘದೇವನ ಕಾಲದ್ದಾಗಿದ್ದು ಕುಕನೂರಿನ ಜೇಷ್ಠಾದೇವಿಗೆ ಕುಕನೂರನ್ನು ಸರ್ವಮಾನ್ಯವಾಗಿ ನೀಡಿದ್ದನ್ನು ವಿವರಿಸುತ್ತದೆ.

ಹೊಸಮಲೆದುರ್ಗದ ಅರಸರು

ಹೊಸಮಲೆ ದುರ್ಗದ ಅರಸರಿಗೆ ಸಂಬಂಧಿಸಿದಂತೆ ಕೇವಲ ಎರಡು ಶಾಸನ[೬೭]ಗಳು ಹಂಪಿಯ ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೨ರಲ್ಲಿ ಪ್ರಕಟಗೊಂಡಿವೆ. ಕಮ್ಮಟದುರ್ಗದಲ್ಲಿ ದೊರೆತಿರುವ ಇವುಗಳು ವೀರಗಲ್ಲುಗಳಾಗಿದ್ದ ಒಂದು ಶಾಸನವು ಕಾಲಯುಕ್ತವಾಗಿದೆ. ಕ್ರಿ.ಶ.೧೩೧೫ರಲ್ಲಿ ಸುರತಾಣನ ದಳವು ನೇಮಿಯ ನೇತೃತ್ವದಲ್ಲಿ ಕಮ್ಮಟದುರ್ಗಕ್ಕೆ ಮುತ್ತಿಗೆ ಹಾಕಿದಂತೆ ತಿಳಿಸುತ್ತದೆ. ಈ ಯುದ್ಧದಲ್ಲಿ ಗಡೆಸಿಂಘ ನಾಯ್ಕ ಮತ್ತು ಆತನ ತಮ್ಮನಾದ ಕಾಮಿ ನಾಯ್ಕರು ಸತ್ತಂತೆ ತಿಳಿದು ಬರುತ್ತದೆ. ಒಟ್ಟಿನಲ್ಲಿ ಈ ಅರಸರು ಕೆತ್ತಿಸಿದ ಶಾಸನಗಳು ಹೆಚ್ಚಿಗೆ ದೊರೆಯದಿದ್ದರೂ ಇತರೆ ಶಾಸನಗಳ ಹಾಗೂ ಇದೇ ವಂಶದ ಕುಮಾರ ರಾಮನನ್ನು ಕುರಿತು ಬಂದಿರುವ ಕಾವ್ಯಗಳ ಆಧಾರದ ಮೇಲೆ ಇವರ ವಂಶಾವಳಿಯನ್ನು ರಚಿಸಬಹುದಾಗಿದೆ. ಕ್ರಿ.ಶ.೧೫೨೧ರ ಹೊಸಮಲೆ (ರಾಮನಮಲೆ) ಶಾಸನ[೬೮]ವು ಇವರ ವಂಶಾವಳಿಯನ್ನು ಹೀಗೆ ಹೇಳುತ್ತದೆ.

ಮುಮ್ಮಡಸಿಂಗ
↓
ಕಂಪಿಲರಾಯ (ಖಂಡೆಯರಾಯ)
↓
ಕುಮಾರರಾಮ(ರಾಮನಾಥ)

ಇವರಲ್ಲಿ ಮುಮ್ಮಡಸಿಂಗನು ಈ ರಾಜ್ಯದ ಸ್ಥಾಪಕನಾಗಿದ್ದು ಈತನು ಕ್ರಿ.ಶ.೧೨೬೦ರಲ್ಲಿ ಅನಂತಪುರ, ಮೊಳಕಾಲ್ಮೂರು ಪ್ರದೇಶದಿಂದ ಬಂದವ ನಾಗಿರಬೇಕು. ಇವನ ಮನೆದೈವ ಜಟಂಗರಾಮೇಶ್ವರ. ಮುಂದೆ ಇವನು ಕಾಕತೀಯ, ಹೊಯ್ಸಳ ಮತ್ತು ಸೇವುಣರ ರಾಜ್ಯಗಳು ಸೇರುವ ಸ್ಥಳವನ್ನೇ ತನ್ನ ರಾಜ್ಯ ವಿಸ್ತಾರ ಮಾಡಲು ಆಯ್ಕೆ ಮಾಡುತ್ತಾನೆ. ಉತ್ತರದಿಂದ ಬರುತ್ತಿದ್ದ ಮುಸಲ್ಮಾನರ ದಾಳಿಯಿಂದ ಸೇವುಣರು, ಕಾಕತೀಯರು ತತ್ತರಿಸುತ್ತಿದ್ದ ಕಾಲದಲ್ಲಿ ತನ್ನ ರಾಜ್ಯವನ್ನು

ವಿಸ್ತರಿಸಿ ಅಲ್ಪಕಾಲದಲ್ಲಿಯೇ ಬಳ್ಳಾರಿಯಿಂದ ಹರಿಹರದವರೆಗೆ ರಾಜ್ಯ ವಿಸ್ತರಿಸಿದ್ದಾನೆ. ಇಂತಹ ಸಂದರ್ಭದಲ್ಲಿ ಸೇವುಣ, ಹೊಯ್ಸಳ, ಕಾಕತೀಯ ರೊಂದಿಗೆ ಯುದ್ಧ ಮಾಡಬೇಕಾದ ಚಾವುಂಡರಸನು ಈ ಮುಮ್ಮಡಿಸಿಂಗನ ಮೇಲೆ ಯುದ್ಧ ಮಾಡಿದಂತೆ ಉಲ್ಲೇಖವಿದೆ. ಸು.೧೩ನೇ ಶತಮಾನದಲ್ಲಿ ಈ ಮುಮ್ಮಡಿಸಿಂಗನು ಯರಂಬಗೇರೆಯನ್ನು ಹಿಡಿದಾಗ ಅಲ್ಲಿದ್ದ ಜೈನರಿಗೆ ಕಿರುಕುಳ ನೀಡಿ ಅವರ ಬಸದಿಗಳನ್ನು ನಾಶ ಮಾಡಿಸಿದಂತೆ ಯಲಬುರ್ಗಾದ ಶಾಸನ[೬೯]ವೊಂದು ತಿಳಿಸುತ್ತದೆ. ಹಾಗೆಯೇ ಮುಮ್ಮಡಿಸಿಂಗನ ಮಗ ಕಂಪಿಲ ದೇವರಾಯ ಈತನು ತನ್ನ ರಾಜಧಾನಿಯನ್ನು ಹೊಸಮಲೆದುರ್ಗದಿಂದ ಕಮ್ಮಟದುರ್ಗಕ್ಕೆ ಸ್ಥಳಾಂತರಿಸುತ್ತಾನೆ. ಈತನ ಪತ್ನಿ ಗುಜ್ಜಲ ವಂಶದ ಹರಿಹರದೇವಿ. ಈತನ ಕಾಲದಲ್ಲಿ ನೇಮಿಬಾನನು ಕಮ್ಮಟದುರ್ಗದ ಮೇಲೆ ದಾಳಿ ಮಾಡುತ್ತಾನೆ. ಆಗ ನೇಮಿಬಾನನು ಸೋತಿರಬಹುದು.

ಈ ಕಂಪಿಲರಾಯನ ಮಗನಾದ ಕುಮಾರರಾಮ(ರಾಮನಾಥ)ನನ್ನು ಹೆಸರಿಸುವ ಶಾಸನ ನೇರವಾಗಿ ದೊರೆಯದಿದ್ದರೂ ಇವನ ಹೆಸರಿನಲ್ಲಿ ಕಟ್ಟಿಸಿದ ದೇವಾಲಯಗಳ ಕುರಿತಾಗಿ ವಿವರ ದೊರೆಯುತ್ತದೆ. ವಿಜಯನಗರ ಅರಸನಾದ ವಿರೂಪಾಕ್ಷನು ಆಗೋಲಿಯ ರಾಮನಾಥ ದೇವರಿಗೆ ಹರಿವಾಣ ನೀಡಿದಂತೆ ಹೇಳಿದ್ದು, ಈ ಶಾಸನದಲ್ಲಿ ಆ ದಾನಕ್ಕೆ ತಪ್ಪದವರು 'ರಾಮನಾಥನ ಲೆಂಕರು' ಎಂಬುದಾಗಿ ಉಲ್ಲೇಖಿಸಲಾಗಿದೆ. ಈ ರಾಮನಾಥ ದೇವಾಲಯ ಕುಮಾರ ರಾಮನ ನೆನಪಿಗಾಗಿ ಕಟ್ಟಿಸಿದ ದೇವಾಲಯವಾಗಿದೆ. ಕೃಷ್ಣದೇವರಾಯನ ಕಾಲದಲ್ಲಿ ಈ ಕುಮಾರರಾಮನ ಆರಾಧನೆಗೆ ಸಂಬಂಧಿಸಿದಂತೆ ಕೊನೇರಿ ನಾಯ್ಕನ ಮಗಳು ಗೋಪಾಯಿ ಹೊಸಮಲೆಯಲ್ಲಿ ರಾಮನಾಥನ ದೇವಾಲಯವನ್ನು ಕಟ್ಟಿಸಿದ್ದಲ್ಲದೇ ಅಲ್ಲಿ ಪೂಜೋಪಕರಣಗಳನ್ನು ದಾನ ನೀಡುತ್ತಾಳೆ ಎಂಬುದು ಸಂಡೂರಿನ ಶಾಸನ[೨೦]ವೊಂದರಿಂದ ತಿಳಿರುಬರುತ್ತದೆ. ಆಕೆಯು ಕಮ್ಮಟದುರ್ಗ ದಲ್ಲಿಯೂ ರಾಮನಾಥನ ದೇವಾಲಯವನ್ನು (ತನ್ನ ತಂದೆಯವರಾದ ರಾಮನಾಥ ಕೊನೇರಿ ನಾಯ್ಕನ ಸ್ಮರಣಾರ್ಥ) ನಿರ್ಮಿಸಿದ್ದಿರಬೇಕೆಂದು ತಿಳಿದು ಬರುತ್ತದೆ.[೨೧] ಆನೆಗೊಂದಿಯಲ್ಲಿಯೂ ರಾಮನಾಥನ ದೇವಾಲಯ ಇದ್ದ ಬಗ್ಗೆ ಉಲ್ಲೇಖವಿದೆ.[೨೨]

ವಿಜಯನಗರದ ಅರಸರು

ಭಾರತದ ವಾಯುವ್ಯ ಭಾಗದಿಂದ ಆಗಮಿಸಿದ ಮುಸ್ಲಿಂ ದಾಳಿಕೋರರು ಕ್ರಮೇಣ ಭಾರತದ ದಕ್ಷಿಣ ಭಾಗದಲ್ಲಿ ದಾಳಿ ನಡೆಸಿ ಕ್ರಿ.ಶ.೧೨೯೬ ರಿಂದ ೧೩೩೬ರ ವರೆಗೆ ಇಲ್ಲಿನ ರಾಜ್ಯಗಳನ್ನೆಲ್ಲಾ ಬಲಹೀನಗೊಳಿಸಿದ್ದರು. ಈ ಅವಧಿಯಲ್ಲಿ ರಾಜಕೀಯ ಅನಾಯಕತ್ವ ತಲೆದೋರಿತು. ದೇವಗಿರಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಡಳಿತ ನಡೆಸುತ್ತಿದ್ದ ಸೇವುಣರು, ದ್ವಾರಸಮುದ್ರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ ಹೊಯ್ಸಳರು, ಓರಂಗಲ್ಲನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಕಾಕತೀಯರು ಉತ್ತರದಿಂದ ಬರುತ್ತಿದ್ದ ಮುಸ್ಲಿಂರ ದಾಳಿಯನ್ನು ಎದುರಿಸಲಾಗದೆ, ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡಿದ್ದರು. ಇಂತಹ ಸಂದಿಗ್ಧ ಸಮಯದಲ್ಲಿ ಹಿಂದೂ ಧರ್ಮ ಮತ್ತು ಸಂಸ್ಕೃತಿಯ ರಕ್ಷಣೆಗಾಗಿ ದಕ್ಷಿಣ ಭಾರತದಲ್ಲಿ ವಿಜಯನಗರ ಸಾಮ್ರಾಜ್ಯವು ಉದಯಿಸಿತು. ಹೊಯ್ಸಳರ

ಆಡಳಿತದ ಕಾಲದಲ್ಲಿ ಅಧಿಕಾರಿಗಳಾಗಿದ್ದ ಸಂಗಮ ವಂಶದ ಸಂಗಮನ ಮಕ್ಕಳಾದ ಹರಿಹರ ಬುಕ್ಕರಾಯರು ಕ್ರಿ.ಶ.೧೩೩೬ರಲ್ಲಿ ಇಂತಹದ್ದೊಂದು ರಾಜ್ಯ ಸ್ಥಾಪಿಸಿ, ರಾಜಕೀಯ ಅಸ್ಥಿರತೆಯನ್ನು ಹೋಗಲಾಡಿಸಲು ಕಾರಣವಾದರು. ಆರಂಭದಲ್ಲಿ ಇವರ ರಾಜಧಾನಿ ಆನೆಗೊಂದಿಯಾಗಿತ್ತು.

ಆನಂತರ ಅತ್ಯಲ್ಪ ಕಾಲದಲ್ಲಿಯೇ ಪಂಪಾಪುರಿಯ ಸಮೀಪದಲ್ಲಿ ಈ ಒಂದು ಹೊಸ ಪಟ್ಟಣವನ್ನು ನಿರ್ಮಿಸಿ ಅದಕ್ಕೆ ವಿಜಯನಗರವೆಂದು ಹೆಸರಿಟ್ಟರು. ಅಂದಿನಿಂದಲೂ ಅದು ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿ ಹಂಪೆ ಎಂದು ಪ್ರಸಿದ್ಧಿ ಪಡೆಯಿತು. ಈ ವಿಜಯನಗರವನ್ನು ಕೇಂದ್ರವಾಗಿಸಿಕೊಂಡು ಸಂಗಮ, ಸಾಳ್ವ, ತುಳುವ ಮತ್ತು ಅರವೀಡು ವಂಶಗಳು ಕ್ರಮವಾಗಿ ಆಡಳಿತ ನಡೆಸಿದವು. ಮೊದಲ ಮೂರು ವಂಶಗಳಿಗೆ ವಿಜಯನಗರ ರಾಜಧಾನಿಯಾಗಿತ್ತು. ಆನಂತರದ ನಾಲ್ಕನೆ ವಂಶವು ಪೆನಗೊಂಡ, ಚಂದ್ರಗಿರಿಗಳಿಂದ ರಾಜ್ಯಭಾರ ಮಾಡಿತು. ಈ ನಾಲ್ಕು ಅರಸು ಮನೆತನಗಳಿಗೆ ಸಂಬಂಧಿಸಿದ ಶಾಸನಗಳು ಕೊಪ್ಪಳ ಜಿಲ್ಲೆಯಲ್ಲಿ ಸಿಗುತ್ತವೆ.

ಕ್ರಿ.ಶ.೧೩೪೨ರಲ್ಲಿ ದೊರೆತಿರುವ ಆನೆಗೊಂದಿಯ ಶಾಸನ[೨೩]ವೇ ಈ ಜಿಲ್ಲೆಯಲ್ಲಿ ಸಂಗಮ ವಂಶದ ಅರಸರ ಬಗೆಗೆ ದೊರೆತಿರುವ ಪ್ರಥಮ ಶಾಸನವಾಗಿದೆ. ಈ ಶಾಸನವು ಒಂದನೇ ಹರಿಹರನ ದಂಡನಾಯಕನಾದ ಭೈರದಂಡನಾಯಕನ ಮಗ ಇರುಗಪ ದಂಡನಾಯಕನು ಆನೆಗೊಂದಿಯಲ್ಲಿ ಬಸದಿಯೊಂದನ್ನು ಕಟ್ಟಿಸಿದಂತೆ ತಿಳಿಸುತ್ತದೆ. ಮುಂದೆ ಕೊಪ್ಪಳದ ಕ್ರಿ.ಶ.೧೩೪೬ರ ಶಾಸನ[೨೪]ದಲ್ಲಿ ಹರಿಹರನ ಉಲ್ಲೇಖವಿದೆ. ಆನೆಗೊಂದಿಯ ಕ್ರಿ.ಶ.೧೩೪೯ರ ಶಾಸನ[೨೫]ವು ಹರಿಹರನ ಮಗ ಸಾವಣ್ಣ ಒಡೆಯನನ್ನು ಹೆಸರಿಸುತ್ತದೆ. ಈ ವರೆಗೆ ನಮಗೆ ದೊರೆತಿರುವ ಸಿದ್ಧ ವಂಶಾವಳಿಗಳು ಸಾವಣನನ್ನು ಒಂದನೇ ಹರಿಹರ ತಮ್ಮನಾದ ಕಂಪಣ ಮಗನೆಂದು ತಿಳಿಸಿವೆ. ಆದರೆ ಪ್ರಸ್ತುತ ಶಾಸನದಲ್ಲಿ ಸ್ಪಷ್ಟವಾಗಿ ಅವನನ್ನು ಹರಿಹರನ ಮಗನೆಂದೇ ಹೇಳಲಾಗಿದೆ.

ಕ್ರಿ.ಶ.೧೩೫೨ರ ಆನೆಗೊಂದಿಯ ಮತ್ತೊಂದು ಶಾಸನ[೨೬]ದಲ್ಲಿ ಪ್ರಧಾನಿ ಬುಳ್ಳರಾಜನ ಉಲ್ಲೇಖವಿದೆ. ಈತನು ಬಹುಶಃ ಬುಕ್ಕರಾಯನ ಪ್ರಧಾನಿಗಳಲ್ಲಿ ಒಬ್ಬನಾಗಿರಬೇಕು. ಕುಕನೂರಿನ ಕ್ರಿ.ಶ.೧೩೭೯ರ ಶಾಸನ[೨೭]ದಲ್ಲಿ ಹರಿಹರರಾಯನು ಕ್ರಿಯಾಶಕ್ತಿ ಗುರುವಿನ ನಿರೂಪದಿಂದ ಕುಕನೂರಿನ ಅಗ್ರಹಾರವನ್ನು ಪುನರ್ ನಿರ್ಮಿಸಿದ ಉಲ್ಲೇಖವಿದೆ. ಇಲ್ಲಿ ಉಲ್ಲೇಖಿತಗೊಂಡಿರುವ ಹರಿಹರನು ಇಮ್ಮಡಿ ಹರಿಹರನಾಗಿರುತ್ತಾನೆ. ಆನೆಗೊಂದಿಯ (ಆನೆಗುಂದಿ) ಕ್ರಿ.ಶ.೧೩೮೨ರ ಶಾಸನ[೨೮]ವು ಹರಿಹರನ ಮಗನಾದ ಕಂಪನನ್ನು ಹೆಸರಿಸುತ್ತದೆ. ವಂಶಾವಳಿಯಲ್ಲಿ ಇವನನ್ನು ಬುಕ್ಕರಾಯನ ಮಗನೆಂದು ಹೇಳಲಾಗಿದೆ. ಆದರೆ ಪ್ರಸ್ತುತ ಶಾಸನದಲ್ಲಿ ಸ್ಪಷ್ಟವಾಗಿ ಕಂಪನನ್ನು ಹರಿಹರನ ಮಗನೆಂದು ಉಲ್ಲೇಖಿಸಲಾಗಿದೆ.

ಅಲ್ಲಿಂದ ಪ್ರೌಢದೇವರಾಯನ ಆಡಳಿತದ ಕಾಲಾವಧಿ (ಕ್ರಿ.ಶ.೧೪೨೮–೧೪೪೨)ಯ ವರೆಗೆ ಶಾಸನಗಳು ದೊರೆಯುವುದಿಲ್ಲ. ಕನಕಗಿರಿಯ ಕ್ರಿ.ಶ.೧೪೩೬ರ ಶಾಸನ[೨೯]ವು ಪ್ರೌಢದೇವರಾಯನು ಕನಕಗಿರಿನಾಥ ದೇವರಿಗೆ ದಾನ ನೀಡಿದ್ದನ್ನು ತಿಳಿಸುತ್ತದೆ. ಆನೆಗೊಂದಿಯ ಕ್ರಿ.ಶ.೧೪೩೨ರ

ಶಾಸನ[೮೦]ವು ಪ್ರೌಢದೇವರಾಯನ ಅಳಿಯ ತಿರುವೆಂಕಟನನ್ನು ಹೆಸರಿಸುತ್ತದೆ. ಬಹುಶಃ ಪ್ರೌಢದೇವರಾಯನಿಗೆ ಮಗಳೊಬ್ಬಳಿದ್ದ ಸಂಗತಿ ಇದರಿಂದ ತಿಳಿದು ಬರುತ್ತದೆ. ಪುರದ ಶಾಸನವು ಉಲ್ಲೇಖಿಸುವ ವೀರಪ್ರತಾಪದೇವರಾಯನು ಪ್ರೌಢದೇವರಾಯನೇ ಆಗಿರಬಹುದು. ಕಾಲದ ಉಲ್ಲೇಖವಿಲ್ಲದ ಇನ್ನೊಂದು ಶಾಸನವು[೮೧] ವಿರೂಪಾಕ್ಷರಾಯನನ್ನು ಉಲ್ಲೇಖಿದ್ದು ಸಂಗಮ ವಂಶದವರ ಕೊನೆಯ ಶಾಸನ ಇದಾಗಿದೆಯೆಂದು ಹೇಳಬಹುದು.

ಕನಕಗಿರಿಯ ಕ್ರಿ.ಶ.೧೪೮೮ರ ಶಾಸನ[೮೨]ವು ಸಾಳ್ವನರಸಿಂಹ ದೇವನು ರಾಜ್ಯಭಾರ ಮಾಡುತ್ತಿದ್ದಂತೆ ಉಲ್ಲೇಖಿಸಿದ್ದು ಕನಕಗಿರಿನಾಥನಿಗೆ ನಾಲ್ಕು ಗ್ರಾಮಗಳನ್ನು ದಾನ ಕೊಟ್ಟಂತೆ ತಿಳಿಸುತ್ತದೆ. ಈ ನರಸಿಂಹನು ಸಾಳ್ವ ವಂಶದ ಒಂದನೆಯ ನರಸಿಂಹನಾಗಿರುವವನು. ಸಾಳ್ವ ಅರಸು ಮನೆತನದ ಬಗೆಗೆ ಉಲ್ಲೇಖವಿರುವ ಶಾಸಗಳೆಂದರೆ ಇದೊಂದೆ. ಹಾಗೆಯೇ ಕಾಲದ ಉಲ್ಲೇಖವಿಲ್ಲದ ಗಂಗವತಿ ತಾಲೂಕಿನ ಎರಡು ಶಾಸನಗಳಲ್ಲಿ ನರಸನಾಯಕನ ಉಲ್ಲೇಖವಿದ್ದು ಈ ನರಸನಾಯಕನೇ ತುಳು ವಂಶದ ನರಸನಾಯಕನೇ ಆಗಿರಬಹುದು. ಕನ್ನೇರುಮಡುವಿನ ಕ್ರಿ.ಶ.೧೫೦೬ರ ಶಾಸನ[೮೩]ವೊಂದರಲ್ಲಿ ತಿಂಥಣಿ ಶಾಖೆಯ ಗುಜ್ಜಲ ಬೊಮ್ಮಣ್ಣ ನಾಯಕನ ಉಲ್ಲೇಖ ಸಿಗುತ್ತದೆ. ಆದರೆ ರಾಜನ ಹೆಸರು ಸ್ಪಷ್ಟವಾಗಿ ಉಲ್ಲೇಖಿಸಿಲ್ಲ.

ಕ್ರಿ.ಶ.೧೫೧೨ರ ಕನಕಗಿರಿ ಹಾಗೂ ಕ್ರಿ.ಶ.೧೫೧೩ರ ಗೊಂಡಬಾಳು ಶಾಸನ[೮೪]ಗಳಲ್ಲಿ ಕೃಷ್ಣದೇವರಾಯನ ಉಲ್ಲೇಖವಿದೆ. ಕ್ರಿ.ಶ.೧೫೧೩ರ ಮತ್ತು ಕ್ರಿ.ಶ.೧೫೧೪ರ ಶಾಸನ[೮೫]ಗಳಲ್ಲಿಯೂ ಈ ಅರಸನ ಉಲ್ಲೇಖ ಸಿಗುತ್ತದೆ. ಕೊಪ್ಪಳದ ಗಿಣಿಗೇರಿ ಶಾಸನ[೮೬]ದಲ್ಲಿ ಈತನ ಆಳ್ವಿಕೆಯಲ್ಲಿ ಬಂಗಾರು ತಿಮ್ಮರಾಜು ದಳವಾಯಿ ಆನೆಗೊಂದಿಯಲ್ಲಿ ಇದ್ದನೆಂಬ ಸಂಗತಿ ತಿಳಿದುಬರುತ್ತದೆ. ಕೊಪ್ಪಳದ ಮತ್ತೊಂದು ಶಾಸನ[೮೭]ದಲ್ಲಿ ಬಂಡಾರದ ಅಪ್ಪರಸಯ್ಯನ ಮಗ ಬಂಡಾರದ ತಿಮ್ಮಪ್ಪಯ್ಯನ ಉಲ್ಲೇಖ ಸಿಗುತ್ತದೆ. ಕೆಸರಟ್ಟಿಯ ಕ್ರಿ.ಶ.೧೫೨೭ರ ಶಾಸನ[೮೮]ವೇ ಕೊಪ್ಪಳ ಜಿಲ್ಲೆಯಲ್ಲಿ ಶ್ರೀಕೃಷ್ಣದೇವರಾಯನ ಬಗ್ಗೆ ದೊರೆಯುವ ಕೊನೆಯ ಶಾಸನವಾಗಿದೆ.

ಕ್ರಿ.ಶ.೧೫೩೦ರ ಕನ್ನೇರುಮಡುವಿನ ಶಾಸನ[೮೯]ವು ಕೊಪ್ಪಳ ಜಿಲ್ಲೆಯಲ್ಲಿ ಸಿಗುವ ಅಚ್ಯುತದೇವರಾಯನ ಆಡಳಿತದ ಕಾಲದಲ್ಲಿನ ಮೊದಲ ಶಾಸನವಾಗಿದೆ. ಆನೆಗೊಂದಿಯ ಕ್ರಿ.ಶ.೧೫೩೧ರ ಶಾಸನ[೯೦] ಮತ್ತು ಕ್ರಿ.ಶ.೧೫೩೪ರ ಶಾಸನ[೯೧]ಗಳು ಅಚ್ಯುತರಾಯನ ಕುರಿತಾಗಿ ಉಲ್ಲೇಖಿಸುತ್ತವೆ. ಹಾಗೆಯೇ ಕ್ರಿ.ಶ.೧೫೩೭ರ ಕಲ್ಲೂರಿನ[೯೨] ಮತ್ತು ಬಂಡಿಹಾಳದ ಶಾಸನ[೯೩]ಗಳಲ್ಲಿ ಅಚ್ಯುತರಾಯನ ಆಳ್ವಿಕೆಯಲ್ಲಿ ಗುಜ್ಜಲ ವಂಶದ ಅರಸರು ಇವರ ಮಾಂಡಳಿಕರಾಗಿದ್ದಂತೆ ತಿಳಿಯುತ್ತದೆ. ಪಾಳೇಗಾರರು ಮುಂದಿನ ಶಾಸನದಲ್ಲಿ ವಿಜಯನಗರದ ಅರಸರನ್ನು ಉಲ್ಲೇಖಿಸದೇ ತಮ್ಮ ಉಲ್ಲೇಖಗಳನ್ನು ಮಾತ್ರ ದಾಖಲಿಸಿದ್ದಾರೆ. ಹಾಗೆಯೇ ಸದಾಶಿವರಾಯನ ಕಾಲದ ಶಾಸನಗಳು ಕೂಡ ಕೊಪ್ಪಳ ಜಿಲ್ಲೆಯಲ್ಲಿ ದೊರೆಯುತ್ತವೆ. ಹಿರೇಜಂತಗಲ್ ಶಾಸನ[೯೪]ದಲ್ಲಿ ಸದಾಶಿವರಾಯನಿಗೆ ಮತ್ತು ರಾಮರಾಜನ ತಮ್ಮನಾದ ತಿರುವೆಂಕಟಾದ್ರಿ ರಾಜನಿಗೆ ಪುಣ್ಯವಾಗಬೇಕೆಂದು ಚಂದ್ರಗಿರಿಯ ಹೇಮರಸಯ್ಯನು ದಾನ ನೀಡಿದ ಉಲ್ಲೇಖವಿದೆ.

ಮುಂದೆ ಕ್ರಿ.ಶ.೧೫೮೪ರಿಂದ ಆಚೆಗೆ ಸದಾಶಿವರಾಯನ ಜೊತೆಯಲ್ಲಿ ಆತನ ಕಾರ್ಯಕರ್ತರಾದ ರಾಮರಾಜಯ್ಯ ಮತ್ತು ತಿರುಮಲ ರಾಜಯ್ಯನನ್ನು ಉಲ್ಲೇಖಿಸಲಾಗಿದೆ. ಈ ಸ್ಥಳದಲ್ಲಿಯೇ ಹಲವು ದೇವಾಲಯಗಳು ಹಾಗೂ ಮಠ ಮಾನ್ಯಗಳಿಗೆ ದಾನ ನೀಡಿದುದರ ಬಗೆಗೆ ಉಲ್ಲೇಖಗಳು ಸಿಗುತ್ತವೆ.

ಮರಾಠರು

ಮರಾಠ ವಂಶದ ಪ್ರಖ್ಯಾತ ದೊರೆಯಾದ ಶಿವಾಜಿಯ ಆಡಳಿತ ಕಾಲದ ಶಾಸನವೊಂದು ಆನೆಗೊಂದಿಯಲ್ಲಿ ದೊರೆತಿದೆ. ಅದರಲ್ಲಿ ಆನೆಗೊಂದಿ ರಾಜ್ಯವು ಆಗ ಅನ್ಯ ಪ್ರಾಂತ್ಯಕ್ಕೆ ಸೇರಿದ ರಾಜ್ಯವಾಗಿದ್ದು ಶ್ರೀರಂಗರಾಜನು ಮರಣಹೊಂದಿ ನೆಂಬುದಾಗಿ ತಿಳಿಸುತ್ತದೆ. ಈತನ ಪತ್ನಿ ತಿಮ್ಮಾಜಿಯ ಮಕ್ಕಳಾದ ತಿರುಮಲರಾಜ ಮತ್ತು ರಾಮರಾಯನನ್ನು ವಕೀಲರ ಸಂಗಡ ಶಿವಾಜಿಯ ಬಳಿಗೆ ಕಳಿಸಿಕೊಡುತ್ತಾಳೆ. ಆಗ ಸದಾಶಿವರಾಯನು ಅವರ ಸಂರಕ್ಷಣಾರ್ಥವಾಗಿ ಆನೆಗೊಂದಿ ಮೊದಲಾದ ಒಂಬತ್ತು ಸಮೇತಗಳನ್ನು ಆಗಿ ಕ್ರಿ.ಶ.೧೬೫೭ರಲ್ಲಿ ನೀಡುತ್ತಾನೆ. ಈ ಶಾಸನದ ಒಕ್ಕಣಿಕೆಯನ್ನು ಗಮನಿಸಿದಾಗ ಶಿವಾಜಿಯು ಕ್ರಿ.ಶ.೧೬೫೭ರಲ್ಲಿ ಹಂಪೆಗೆ ಬಂದಿರಬಹುದೆಂದು ಹೇಳಬಹುದು.

ಸ್ಥಳೀಯ ಅರಸರು

ಅರಸನು ರಾಜ್ಯ ವಿಸ್ತರಣಾ ಹಾಗೂ ಆಂತರಿಕ ಕಲಹಗಳನ್ನು ಶಮನಗೊಳಿಸುವಲ್ಲಿ ಅಥವಾ ಆಡಳಿತದಲ್ಲಿ ತನಗೆ ಸಹಕಾರಕೊಡುವುದಕ್ಕಾಗಿ ಸ್ಥಳೀಯ ಅರಸರನ್ನು ಅಥವಾ ಪಾಳೆಗಾರರನ್ನು ನೇಮಿಸಿಕೊಳ್ಳುತ್ತಿದ್ದರು. ಇವರು ಅರಸನಿಗೆ ವಿಧೇಯರಾಗಿ ಸಾಮ್ರಾಜ್ಯ ವಿಸ್ತರಣೆ, ಯುದ್ಧ, ಆಡಳಿತ ಮುಂತಾದ ಅನೇಕ ಆಂತರಿಕ ವಿಷಯಗಳಲ್ಲಿ ರಾಜರುಗಳ ಪ್ರತಿನಿಧಿಗಳಾಗಿ ಭಾಗವಹಿಸುತ್ತಿದ್ದರು. ಇಂತಹ ಪಾಳೆಗಾರರಲ್ಲಿ ಆನೆಗೊಂದಿ ಮತ್ತು ಕನಕಗಿರಿ ಪಾಳೆಗಾರರ ವಿವರ ಸಂಕ್ಷಿಪ್ತವಾಗಿ ಕೊಪ್ಪಳ ಜಿಲ್ಲೆಯ ಶಾಸಗಳಲ್ಲಿ ದೊರೆತಿದೆ.

ಆನೆಗುಂದಿ ಪಾಳೆಗಾರರು

ಈ ಪಾಳೆಗಾರರ ಉಲ್ಲೇಖ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಆನೆಗುಂದಿಯಲ್ಲಿ ದೊರೆತ ಶಾಸನ[೯೫]ದಲ್ಲಿ ಮಾತ್ರ ಬರುತ್ತದೆ. ಈ ಶಾಸನದಲ್ಲಿ ಆನೆಗುಂದಿಯ ಯಾವುದೇ ಪಾಳೆಗಾರರ ಹೆಸರುಗಳು ಪ್ರಸ್ತಾಪಿಸಲ್ಪಟ್ಟಿಲ್ಲ. ಇದು ದಾನ ಶಾಸನವಾಗಿದ್ದು ಈ ಪಾಳೆಗಾರರು ಅಂಬಿಗರ ಬರಮ ಮತ್ತು ಬಸವ ಎಂಬುವವರಿಗೆ ಐದು ಹುಟ್ಟುಗಳನ್ನು ದಾನ ನೀಡುತ್ತಾರೆಂದು ಹೇಳಲಾಗಿದೆ.

ಕನಕಗಿರಿ ಪಾಳೆಗಾರರು

ಈ ಕನಕಗಿರಿಯ ಪಾಳೆಗಾರರಿಗೆ ಸಂಬಂಧಪಟ್ಟಂತೆ ಕೆಲ ಶಾಸನಗಳು ದೊರೆಯುತ್ತವೆ. ಅವುಗಳಲ್ಲಿ ಲಖಮಣನಾಯಕ, ಮೂರನೆಯ ಮೇದಿನಿರಾಯ, ಎರಡನೆಯ ವು(ಉ)ಡಸಿನಾಯಕ ಮತ್ತು ಎರಡನೆಯ ವುಡಸಿನಾಯಕನ ಪತ್ನಿಯರಾದ ಕನಕಮ್ಮ, ಚೆಣ್ಣಮ್ಮರ ಉಲ್ಲೇಖಗಳು ಶಾಸನಗಳಲ್ಲಿ ಕಂಡು ಬರುತ್ತವೆ. ಗಂಗಾವತಿಯ ಒಂದು ಶಾಸನ[೯೬]ದಲ್ಲಿ ಲಖಮಣ ಮತ್ತು ಅವನ ಪತ್ನಿ

ಬೊಮ್ಮನಾಗತಿ ಕಲ್ಲುಕೆರೆಯನ್ನು ಕಟ್ಟಿಸಿದರೆಂದು ತಿಳಿಸಿದ್ದು, ಅದೇ ರೀತಿ ಮುಮ್ಮಡಿ ಮೇದಿನಿರಾಯನು ಶಾಂತಮಲ್ಲಿಕಾರ್ಜುನ ದೇವರ ಪ್ರತಿಷ್ಠೆ ಮಾಡಿ ದಾನ ನೀಡಿದನೆಂದು ಹಿರೇಸೂಳೆಕೆರೆ ಶಾಸನ[೯೭]ದಲ್ಲಿ ತಿಳಿಸಿದೆ. ಈ ಇಬ್ಬರು ಪಾಳೆಗಾರರ ಬಗ್ಗೆ ಒಂದೊಂದು ಶಾಸನದಲ್ಲಿ ಉಲ್ಲೇಖವಿರುವುದು ಕಂಡುಬರುತ್ತದೆ. ಈ ಕನಕಗಿರಿಯ ಪಾಳೆಗಾರರಲ್ಲಿ ಇಮ್ಮಡಿ ವುಡಸಿನಾಯಕನು ಪ್ರಮುಖನಾಗಿ ಕಂಡು ಬರುತ್ತಾನೆ. ಇವನು ಕನಕಮ್ಮ ಮತ್ತು ಚಿನ್ನಮ್ಮ ಎಂಬ ಇಬ್ಬರು ಪತ್ನಿಯರನ್ನು ಹೊಂದಿದ್ದನು. ಕನಕಮ್ಮಳು ಬಾವಿ ಕಟ್ಟಿಸಿದ್ದನ್ನು[೯೮] ಮತ್ತು ಚಿಣ್ಣಮ್ಮಳು ಕೆರೆಯನ್ನು ಕಟ್ಟಿಸಿದ್ದು[೯೯] ಶಾಸಗಳಿಂದ ತಿಳಿದುಬರುತ್ತದೆ. ವುಡಸಿನಾಯಕನು ನರಭಕ್ಷಕ ಪ್ರಾಣಿಯನ್ನು ಕೊಂದ ಸೊಲಬಾಯನಿಗೆ ಗದ್ದೆಯನ್ನು ದಾನವಾಗಿ ನೀಡುತ್ತಾನೆ.[೧೦೦] ಈ ಪಾಳೆಗಾರನನ್ನು ನಾಯಕ ಶಿರೋಮಣಿ ಎಂದು ಶಾಸನದಲ್ಲಿ ಹೊಗಳಲಾಗಿದೆ.

೩.೨ ಕೊಪ್ಪಳ ಜಿಲ್ಲೆಯ ಪರಿಚಯ

ಪ್ರಸ್ತಾವನೆ : "ಕೊಪ್ಪಳ ಜಿಲ್ಲೆಯು ರಾಯಚೂರ ಜಿಲ್ಲೆಯಿಂದ ವಿಂಗಡಿಸಲ್ಪಟ್ಟು ೧ ನೇ ಎಪ್ರಿಲ್, ೧೯೯೭ ರಂದು ಆಸ್ತಿತ್ವಕ್ಕೆ ಬಂದಿತು. ಇದು ೧೫೦ ೯೦' ೦೦" ದಿಂದ ೧೬೦ ೦೩' ೩೦" ನಡುವಿನ ಉತ್ತರ ಅಕ್ಷಾಂಶ ಮತ್ತು ೭೫೦ ೪೭' ೩೦" ದಿಂದ ೭೬೦ ೪೮' ೧೦" ಪೂರ್ವ ರೇಖಾಂಶದಲ್ಲಿ ಬರುತ್ತದೆ. ಕೊಪ್ಪಳ ಜಿಲ್ಲೆಯು ಪೂರ್ವಕ್ಕೆ ರಾಯಚೂರ ಜಿಲ್ಲೆ, ಪಶ್ಚಿಮಕ್ಕೆ ಗದಗ ಜಿಲ್ಲೆ, ಉತ್ತರಕ್ಕೆ ಬಾಗಲಕೋಟೆ ಜಿಲ್ಲೆ, ದಕ್ಷಿಣಕ್ಕೆ ಬಳ್ಳಾರಿ ಜಿಲ್ಲೆಗಳಿಂದ ಆವೃತವಾಗಿದೆ. ಕೊಪ್ಪಳ ಜಿಲ್ಲೆಯು ನಾಲ್ಕು ತಾಲ್ಲೂಕುಗಳನ್ನು ಹೊಂದಿದೆ ಅವುಗಳೆಂದರೆ ಕೊಪ್ಪಳ, ಗಂಗಾವತಿ, ಕುಷ್ಟಗಿ ಮತ್ತು ಯಲಬುರ್ಗಾ. ಈ ಎಲ್ಲಾ ತಾಲ್ಲೂಕುಗಳು ೨೦ ಹೋಬಳಿಗಳಿಂದ ವಿಭಾಗಿಸಲ್ಪಟ್ಟಿವೆ. ೨೦೦೧ ರ ಜನಗಣತಿ ಪ್ರಕಾರ ಜಿಲ್ಲೆಯು ೫೯೪ ಜನವಸತಿ ಇರುವ ಗ್ರಾಮಗಳನ್ನು ಮತ್ತು ೩೫ ವಸತಿ ರಹಿತ ಗ್ರಾಮಗಳನ್ನು ಹೊಂದಿವೆ. ಈ ಜಿಲ್ಲೆಯ ಕೊಪ್ಪಳ ನಗರ ಸಭೆ ಮತ್ತು ಗಂಗಾವತಿ ನಗರ ಸಭೆ, ಕುಷ್ಟಗಿ ಪುರಸಭೆ, ಯಲಬುರ್ಗಾ ಪಟ್ಟಣ ಪಂಚಾಯಿತಿ ಮತ್ತು ೧೩೪ ಗ್ರಾಮ ಪಂಚಾಯಿತಿಗಳನ್ನು ಹೊಂದಿದೆ.

೨೦೧೧ ರ ಜನಗಣತಿಯ ಪ್ರಕಾರ ಕೊಪ್ಪಳ ಜಿಲ್ಲೆಯ ಜನಸಂಖ್ಯೆಯು ಸುಮಾರು ೧೩.೮೯ ಲಕ್ಷವಿದ್ದು, ಇದು ರಾಜ್ಯದ ಜನಸಂಖ್ಯೆಯ ಶೇ.೨.೨೮ ರಷ್ಟಿದೆ. ತಾಲ್ಲೂಕುವಾರು ಜನಸಂಖ್ಯೆಯ ಶೇ.೨.೨೮ ರಷ್ಟಿದೆ. ತಾಲ್ಲೂಕುವಾರು ಜನಸಂಖ್ಯೆ ಅನುಪಾತವು ಗಂಗಾವತಿ, ಕೊಪ್ಪಳ, ಕುಷ್ಟಗಿ ಮತ್ತು ಯಲಬುರ್ಗಾಗಳಲ್ಲಿ ಅನುಕ್ರಮವಾಗಿ ಶೇ.೩೩.೦೯, ಶೇ.೨೭.೧೮, ಶೇ.೨೦.೮೯ ಮತ್ತು ಶೇ.೧೯.೨೪ ಇರುತ್ತದೆ. ಸದರಿ ಜಿಲ್ಲೆಯು ಒಟ್ಟು ೫೫೭೦ ಚ.ಕಿ.ಮೀ ಭೌಗೋಳಿಕ ಕ್ಷೇತ್ರವನ್ನು ಹೊಂದಿದ್ದು, ಇದು ರಾಜ್ಯದ ಭೌಗೋಳಿಕ ಕ್ಷೇತ್ರದ ಶೇ.೨.೯ ರಷ್ಟಿದೆ. ಕೊಪ್ಪಳ, ಕುಷ್ಟಗಿ, ಗಂಗಾವತಿ ಮತ್ತು ಯಲಬುರ್ಗಾ ತಾಲ್ಲೂಕುಗಳು ಅನುಕ್ರಮವಾಗಿ ಶೇ.೨೪.೭, ಶೇ.೨೪.೬, ಶೇ.೨೩.೯ ಮತ್ತು ಶೇ. ೨೬.೮ ರಷ್ಟು ಭೌಗೋಳಿಕ ಕ್ಷೇತ್ರವನ್ನು ಹೊಂದಿವೆ. ಸಂಕ್ಷಿಪ್ತವಾಗಿ ಹೇಳುವುದಾದರೆ,

ಭೌಗೋಳಿಕ ಕ್ಷೇತ್ರವು ವಿವಿಧ ತಾಲ್ಲೂಕುಗಳಲ್ಲಿ ಹೆಚ್ಚು ಕಡಿಮೆ ಸಮಾನವಾಗಿ ಹಂಚಲ್ಪಟ್ಟಿದ್ದು, ಜನಸಂಖ್ಯೆ ವಿಷಯದಲ್ಲಿ ಈ ರೀತಿ ಇಲ್ಲದಿರುವುದು ಕಾಣಬಹುದು.

೩.೩ ಹಿನ್ನಲೆ ಮತ್ತು ಸಂಕ್ಷಿಪ್ತ ಪ್ರಾದೇಶಿಕ ಚರಿತ್ರೆ

ಕೊಪ್ಪಳ ಜಿಲ್ಲೆಯ ಇತಿಹಾಸವು ಶಾತವಾಹನರ ಆಳ್ವಿಕೆಯಿಂದ ಗುರುತಿಸಲ್ಪಡುತ್ತದೆ.೧ ಗಂಗರು, ಹೊಯ್ಸಳರು ಮತ್ತು ಚಾಲುಕ್ಯರ ಆಳ್ವಿಕೆಯಲ್ಲಿ ಜಿಲ್ಲೆಯನ್ನು "ವಿದಿಥಾ ಮಹಾಕೊಪ್ಪನ ನಗರ" ವೆಂದು ಕರೆಯಲ್ಪಡುತ್ತಿದೆಂದು ಮಹಾಕವಿ ರಾಜಮಾರ್ಗನು (ಕ್ರಿ.ಶ.೮೧೪ ರಿಂದ ಕ್ರಿ.ಶ. ೮೭೮ ರ ಅವಧಿಯಲ್ಲಿ ನೃಪತುಂಗ ರಾಜನ ಕಾಲದ) ಉಲ್ಲೇಖಿಸಿದ್ದಾನೆ. ಮಹಾರಾಜ ಅಶೋಕನ ಆಳ್ವಿಕೆಯಲ್ಲಿ ಜೈನಧರ್ಮವು ಇಲ್ಲಿ ಪ್ರಸಿದ್ಧಿ ಪಡೆದಿತ್ತು ಮತ್ತು ಕೊಪ್ಪಳವನ್ನು ಜೈನ ಕಾಶಿಯಂದು ಕರೆಯಲಾಗುತ್ತಿತ್ತು. ೧೨ನೇ ಶತಮಾನದಲ್ಲಿ ಬಸವೇಶ್ವರರು ತಮ್ಮ ಸಮಾಜ ಸುಧಾರಣಾ ನೀತಿಯಿಂದಾಗಿ ಈ ಸ್ಥಳದಲ್ಲಿ ಪ್ರಸಿದ್ಧಿಯನ್ನು ಪಡೆದಿದ್ದರೆಂದು ಉಲ್ಲೇಖಿಸಲಾಗಿದೆ.

ಗಂಗಾವತಿ ತಾಲ್ಲೂಕಿನ ಆನೆಗುಂದಿಯು ವಿಜಯನಗರ ಸಾಮ್ರಾಜ್ಯದ ಪ್ರಥಮ ರಾಜಧಾನಿಯಾಗಿತ್ತು ಪ್ರಾಚೀನವಾದ ಅರಮನೆ ಸ್ಮಾರಕಗಳು ಮತ್ತು ಕೋಟೆ ಈಗಲೂ ಇಲ್ಲಿ ನೋಡಲು ಸಿಗುತ್ತವೆ. ಆನೆಗುಂದಿ ಉತ್ಸವವನ್ನು ಪ್ರತಿ ವರ್ಷ ಜಿಲ್ಲಾಡಳಿತದಿಂದ ಆಚರಿಸಲಾಗುತ್ತದೆ. ಕೊಪ್ಪಳ ಜಿಲ್ಲೆಯ ಇತರೆ ಐತಿಹಾಸಿಕ ಸ್ಥಳಗಳಾದ ಇಟಗಿ, ಕುಕನೂರು, ಮದಿನಾರು, ಇಂದ್ರಕೀಲ ಪರ್ವತ, ಕನಕಗಿರಿ, ಪುರಾ, ಚಿಕ್ಕಬೆನಕಲ್, ಹಿರೇಬೆನಕಲ್, ಹುಲಗಿ ಮತ್ತು ಪ್ರಚಲಿತ ಕೊಪ್ಪಳದ ಗವಿಮಠವು ಸಹ ಆಕರ್ಷಣೀಯ ಕ್ಷೇತ್ರಗಳಾಗಿವೆ. ಕೊಪ್ಪಳವು ಕಲೆ ಮತ್ತು ಶಿಲ್ಪಕಲೆಯ ಶ್ರೀಮಂತ ಪರಂಪರೆಯನ್ನು ಹೊಂದಿದೆ. ಕೆಲವು ಐತಿಹಾಸಿಕ ಸ್ಮಾರಕಗಳು, ಸಂಶೋಧಕರ ಮತ್ತು ಪ್ರವಾಸಿಗರ ಆಸಕ್ತಿಯನ್ನು ಕೆರಳಿಸುತ್ತದೆ. ಆದಾಗ್ಯೂ ಈ ಸ್ಮಾರಕಗಳ ಮೌಲ್ಯವು ಅಷ್ಟಾಗಿ ತಿಳಿದಿರುವುದಿಲ್ಲ. ಹೀಗಾಗಿ ಈ ಸ್ಮಾರಕಗಳು ಸಾಕಷ್ಟು ಪ್ರಮಾಣದಲ್ಲಿ ಪರಿಶೋಧಿಸಲ್ಪಟ್ಟಿರುವುದಿಲ್ಲ. ಕೊಪ್ಪಳವು ಈ ಎಲ್ಲ ಕಾರಣಗಳಿಂದಾಗಿ ಪ್ರವಾಸಿ ತಾಣವಾಗಬೇಕಾಗಿದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಸದ್ಯದ ಕೊಪ್ಪಳ ಜಿಲ್ಲೆಯು (ಹೈದರಾಬಾದ ಕರ್ನಾಟಕದ ಭಾಗ) ಹೈದರಾಬಾದ ನಿಜಾಮರ ಆಳ್ವಿಕೆಯಲ್ಲಿತ್ತು. ಭಾರತ ದೇಶವು ೧೫ನೇ ಅಗಸ್ಟ ೧೯೪೭ ರಂದು ಸ್ವತಂತ್ರ್ಯ ಪಡೆದಾಗಲೂ ನಿಜಾಮರ ಆಳ್ವಿಕೆಯಲ್ಲಿರುವ ಜನರು ಮಾತ್ರ ಸ್ವತಂತ್ರ್ಯಕ್ಕಾಗಿ ಪುನಃ ಹೋರಾಟ ಮಾಡಬೇಕಾಯಿತು. ಕಾಲಾಂತರದಲ್ಲಿ ೧೮ ನೇ ಸೆಪ್ಟಂಬರ ೧೯೪೮ ರಂದು ಈ ಭಾಗಕ್ಕೆ ಸ್ವತಂತ್ರ್ಯ ದೊರೆದಂತಾಯಿತು. ನಂತರ ೧ನೇ ಎಪ್ರಿಲ್ ೧೯೯೮ ರ ವರೆಗೆ ಕೊಪ್ಪಳ ಜಿಲ್ಲೆಯು ರಾಯಚೂರ ಜಿಲ್ಲೆಯ ಒಂದು ಭಾಗವಾಗಿದ್ದು ಈಗಿನ ಕಲಬುರಗಿ ಕಂದಾಯ ವಿಭಾಗದಲ್ಲಿ ಬರುತ್ತಿತ್ತು. ಈ ಮೊದಲೇ ವಿವರಿಸಿದಂತೆ ಕೊಪ್ಪಳ ಜಿಲ್ಲೆಯು ೧೯೯೮ ರಲ್ಲಿ ರೂಪಗೊಂಡಿದ್ದು ನಾಲ್ಕು ತಾಲ್ಲೂಕುಗಳಾದ ಗಂಗಾವತಿ, ಕೊಪ್ಪಳ, ಕುಷ್ಟಗಿ ಮತ್ತು ಯಲಬುರ್ಗಾವನ್ನು ಒಳಗೊಂಡಿದೆ.

೩.೪ ಜಿಲ್ಲೆಯ ಭೌಗೋಳಿಕ ಲಕ್ಷಣಗಳು ಮತ್ತು ವರ್ಗೀಕರಣ

ಕರ್ನಾಟಕ ರಾಜ್ಯವು ನಾಲ್ಕು ಭೌಗೋಳಿಕ ಮೇಲ್ಮೈ ಲಕ್ಷಣದ ಪ್ರಕಾರಗಳನ್ನು ಹೊಂದಿದೆ. ಅವು ೧. ಉತ್ತರ ಕರ್ನಾಟಕ ಪ್ರಸ್ಥಭೂಮಿ ೨. ಮಧ್ಯ ಕರ್ನಾಟಕ ಪ್ರಸ್ಥಭೂಮಿ ೩. ದಕ್ಷಿಣ ಕರ್ನಾಟಕ ಪ್ರಸ್ಥಭೂಮಿ ೪. ಕರ್ನಾಟಕ ಕರಾವಳಿ ಪ್ರದೇಶಗಳಾಗಿವೆ. ಜಿಲ್ಲೆಯು ಉತ್ತರ ಕರ್ನಾಟಕ ಪ್ರಸ್ಥಭೂಮಿ ಮತ್ತು ದಕ್ಷಿಣ ಕರ್ನಾಟಕದ ಪ್ರಸ್ಥಭೂಮಿಯ ಮಧ್ಯದಲ್ಲಿ ಬರುತ್ತದೆ. ಜಿಲ್ಲೆಯು ತುಂಗಭದ್ರಾ ಜಲಾಯನ ಪ್ರದೇಶದ ಭಾಗವಾಗಿರುತ್ತದೆ. ಇದು ಸಮುದ್ರಮಟ್ಟದಿಂದ ೪೫೦ ರಿಂದ ೭೦೦ ಮೀಟರ್‌ನಷ್ಟು ಎತ್ತರದಲ್ಲಿದೆ. ಭೂಮಿಯು ಪ್ರಾಥಮಿಕವಾಗಿ ಧಾರವಾಡ ಮಾದರಿ ಬಂಡೆಗಳ ವ್ಯವಸ್ಥೆಯನ್ನು ಹೊಂದಿದ್ದು, ಸಮಾನಾಂತರ ರೇಖೆಗಳು ಹಾಗೂ ಹಲವಾರು ಪರ್ವತದ ಸಾಲುಗಳಲ್ಲಿ ವಿಭಜಿಸಲ್ಪಡುತ್ತದೆ. ಈ ಬೆಟ್ಟಗಳ ಸರಾಸರಿ ಎತ್ತರವು ಸಮುದ್ರ ಮಟ್ಟದಿಂದ ಸುಮಾರು ೯೦೦ ಮೀಟರ್ ನಷ್ಟಿವೆ. ಪ್ರದೇಶದ ಸಾಮಾನ್ಯ ಇಳಿಜಾರು ಪೂರ್ವ ದಿಕ್ಕಿನಲ್ಲಿ ಸಾಗುತ್ತದೆ.

ಕರ್ನಾಟಕ ಮತ್ತು ಕೊಪ್ಪಳ ಜಿಲ್ಲೆಯ ಭೌಗೋಳಿಕ ಮೇಲ್ಮೈ ಲಕ್ಷಣಗಳನ್ನು ನೋಡಲಾಗಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳು ಕರ್ನಾಟಕದ ಉತ್ತರ ಶುಷ್ಕದಿಂದ ಕೂಡಿದ ಕೃಷಿ ಹವಾಮಾನದ ವಲಯದಲ್ಲಿ ಬರುತ್ತವೆ. ಜಿಲ್ಲೆಯ ಹವಾಗುಣವು ಬಹಳವೇ ಉಷ್ಣ ಹಾಗೂ ಒಣಹವೆಯಿಂದ ಕೂಡಿರುತ್ತವೆ. ಬೇಸಿಗೆ ಕಾಲವು ಫೆಬ್ರುವರಿ ಮಧ್ಯದಿಂದ ಮೇ ತಿಂಗಳವರೆಗೆ ಇರುತ್ತದೆ. ಅಕ್ಟೋಬರ ಮತ್ತು ನವ್ಹಂಬರ ತಿಂಗಳುಗಳು ಮಳೆಗಾಲ ಮತ್ತು ಚಳಿಗಾಲದ ನಡುವೆ ಬರುತ್ತವೆ. ಚಳಿಗಾಲವು ಡಿಸೆಂಬರನಲ್ಲಿ ಪ್ರಾರಂಭವಾಗಿ ಫೆಬ್ರುವರಿ ತಿಂಗಳದ ಮಧ್ಯದವರೆಗೆ ಇರುತ್ತದೆ. ಜಿಲ್ಲೆಯ ಸರಾಸರಿ ಮಳೆಯ ಪ್ರಮಾಣ ೫೭೧.೯೨ ಮೀ.ಮೀ ನಷ್ಟಿದ್ದು ಸರಾಸರಿ ೪೬ ಮಳೆಯ ದಿನಗಳು ಇರುತ್ತವೆ. ಚಳಿಗಾಲ ಮತ್ತು ಬೇಸಿಗೆಯಲ್ಲಿ ಸರಾಸರಿ ತಾಪಮಾನಗಳು ಕನಿಷ್ಠ ಮತ್ತು ಗರಿಷ್ಠ ೧೬೦ ಸೆಲ್ಸಿಯಸ್ ಮತ್ತು ೪೫೦ ಸೆಲ್ಸಿಯಸ್-ಗಳೆಂದು ದಾಖಲಾಗಿರುತ್ತವೆ.

೩.೫ ಭೂಮಿ, ಮಣ್ಣು, ನೈಸರ್ಗಿಕ ಸಂಪನ್ಮೂಲಗಳು

ಕಂದಾಯ ಇಲಾಖೆಯ ದಾಖಲೆಗಳ ಪ್ರಕಾರ ಅರಣ್ಯ ಪ್ರದೇಶವು ಒಟ್ಟು ಭೌಗೋಳಿಕ ಪ್ರದೇಶದ ಕೇವಲ ಶೇ.೫.೩೩ ರಷ್ಟಿದೆ. ಅರಣ್ಯ ಪ್ರದೇಶಗಳ ಮಾಲೀಕತ್ವವನ್ನು ಆಧರಿಸಿ ಕಂದಾಯ ಇಲಾಖೆಯು ವ್ಯಾಖ್ಯಾನಿಸುತ್ತದೆ. ಇದಕ್ಕೆ ವಿರುದ್ಧವಾಗಿ ಭಾರತೀಯ ಅರಣ್ಯ ಸಮೀಕ್ಷೆಯನ್ನು ಆಧರಿಸಿ ಅಂಕಿಅಂಶಗಳನ್ನು ಪೂರೈಸಿದೆ. ಭಾರತೀಯ ಅರಣ್ಯ ಸಮೀಕ್ಷೆ(೨೦೧೧)ರ ಅಂದಾಜಿನ ಪ್ರಕಾರ, ಅರಣ್ಯ ಪ್ರದೇಶವು ಕೇವಲ ೧೪ ಚ.ಕಿ.ಮೀ (ಭೌಗೋಳಿಕ ಕ್ಷೇತ್ರದ ಶೇ.೦.೧೯ ರಷ್ಟಿದೆ). ರಾಜ್ಯದಲ್ಲಿ ಶೇ. ೧೮.೮೭ ರಷ್ಟು ಅರಣ್ಯ ಪ್ರದೇಶವಿದ್ದು ಈ ಜಿಲ್ಲೆಯಲ್ಲಿ ಅತಿ ಕಡಿಮೆ ಪ್ರಮಾಣದಲ್ಲಿದೆ. ಕೊಡಗು ಮತ್ತು ಉತ್ತರ ಕನ್ನಡ ಜಿಲ್ಲೆಗಳು ಅನುಕ್ರಮವಾಗಿ ಶೇ. ೮೪.೪ ಮತ್ತು ೭೫.೯೮ ಅರಣ್ಯ ಪ್ರದೇಶಗಳನ್ನು ಹೊಂದಿವೆ. ಕೊಪ್ಪಳ ಜಿಲ್ಲೆಯು ಅಷ್ಟೇನೂ ದಟ್ಟ ಕಾಡನ್ನು ಹೊಂದಿರುವುದಿಲ್ಲಾ (ಕೇವಲ ೧ ಕಿ. ಮೀ.ನಷ್ಟು ಮಧ್ಯದಲ್ಲಿ ಕಾಡನ್ನು ಹೊಂದಿದೆ) ಉಳಿದ ೧೩ ಕಿ. ಮೀ ಮುಕ್ತ ಅರಣ್ಯವಾಗಿದೆ.

೨೦೧೧ ರ ಜನಗಣತಿಯ ಪ್ರಕಾರ, ಸುಮಾರು ಶೇ. ೮೮.೨ ರಷ್ಟು ಪ್ರದೇಶವು ಗ್ರಾಮೀಣ ಪ್ರದೇಶವಾಗಿದ್ದು ಕೇವಲ ಶೇ. ೧೪.೮ ರಷ್ಟು ನಗರ ಪ್ರದೇಶವಾಗಿದೆ. ಜಿಲ್ಲೆಯಲ್ಲಿ ಭೌಗೋಳಿಕ ಪ್ರದೇಶವು ಶೇ.೬೦ ರಿಂದ ಶೇ. ೭೦ ರಷ್ಟು ಪ್ರದೇಶವು (ವಿವಿಧ ತಾಲ್ಲೂಕುಗಳಲ್ಲಿ) ಕೃಷಿ ಭೂಮಿಯಾಗಿರುತ್ತದೆ. ಕುಷ್ಟಗಿ ಮತ್ತು ಯಲಬುರ್ಗಾ ತಾಲ್ಲೂಕುಗಳು ಹೆಚ್ಚಿನ ಪ್ರಮಾಣದಲ್ಲಿ ಪಾಳು ಭೂಮಿಯನ್ನು ಹೊಂದಿದ್ದು, ಅತ್ಯಲ್ಪ ಪ್ರಮಾಣದ ಅರಣ್ಯ ಪ್ರದೇಶವನ್ನು ಹೊಂದಿವೆ. ಕೊಪ್ಪಳ ತಾಲ್ಲೂಕು ಜಿಲ್ಲೆಯ ಕೇಂದ್ರಸ್ಥಾನವಾಗಿದ್ದು, ಹೆಚ್ಚಿನ ಪ್ರಮಾಣದಲ್ಲಿ ನಗರೀಕರಣ ಹೊಂದಿದ್ದರಿಂದ ಹೆಚ್ಚಿನ ಪ್ರಮಾಣದಲ್ಲಿ ಕೃಷಿಯೇತರ ಭೂಮಿಯನ್ನು ಹೊಂದಿದೆ.

ಜಿಲ್ಲೆಯು ಪ್ರಮುಖವಾಗಿ ೩ ಪ್ರಕಾರದ ಮಣ್ಣಿನ ವಿಧವನ್ನು ಹೊಂದಿದೆ. ಅವು ಕಪ್ಪು ಎರೆಮಣ್ಣು, ಕೆಂಪು ಮಣ್ಣು ಮತ್ತು ಕೆಂಪು ಮರಳು ಮಣ್ಣು. ಜೋಳ, ಸಜ್ಜಿ, ಮತ್ತು ಇತರೆ ಏಕದಳ ಧಾನ್ಯಗಳು ಹಾಗೂ ಎಣ್ಣೆ ಬೀಜಗಳು ಜಿಲ್ಲೆಯ ಪ್ರಮುಖ ಬೆಳೆಗಳಾಗಿವೆ. ಹತ್ತಿ ಹಾಗೂ ಕಬ್ಬಿನ ಬೆಳೆಯನ್ನು ಅಲ್ಪ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ. ಜಿಲ್ಲೆಯ ಸ್ಪಟಿಕ/ಸಿಲಿಕಾನ ಹಾಗೂ ಗ್ರಾನೈಟ ನಿಕ್ಷೇಪಗಳನ್ನು ಹೊಂದಿದೆ. ಜಿಲ್ಲೆಯ ಸುತ್ತಲೂ ಸಮೃದ್ಧ ಮತ್ತು ಹೇರಳವಾಗಿ ಖನಿಜ ಸಂಪನ್ಮೂಲಗಳನ್ನೊಳಗೊಂಡಂತಹ ರಾಯಚೂರ, ಗದಗ, ಬಾಗಲಕೋಟೆ ಮತ್ತು ಬಳ್ಳಾರಿ ಜಿಲ್ಲೆಗಳಿಂದ ಸುತ್ತುವರೆದಿದೆ.

ಜಿಲ್ಲೆಯ ಜಲ ಸಂಪನ್ಮೂಲಗಳನ್ನು ನೋಡಲಾಗಿ, ತುಂಗಭದ್ರಾ ನದಿ ಜಲಾಯನ ಪ್ರದೇಶದಲ್ಲಿ ಬರುತ್ತದೆ. ತುಂಗಾ ಮತ್ತು ಭದ್ರಾ ನದಿಗಳು ಸೇರಿ ತುಂಗಭದ್ರಾ ನದಿಯು ಸರ್ವಕಾಲಿಕ ನದಿಯಾಗಿದ್ದು, ಕೊಪ್ಪಳ ತಾಲ್ಲೂಕಿನ ನೈರುತ್ಯ ತುದಿಯಲ್ಲಿರುವ ಕೆಸಲಾಪುರ ಹಳ್ಳಿಯ ಬಳಿ ಈ ಜಿಲ್ಲೆಯನ್ನು ಸೇರುತ್ತದೆ. ಜಿಲ್ಲೆಯು ಸಾಮಾನ್ಯವಾಗಿ ವಾಯುವ್ಯದಿಂದ ಆಗ್ನೇಯದವರೆಗೆ ಇಳಿಜಾರಾಗಿರುತ್ತದೆ. ನದಿಯು ದೊಡ್ಡ ಪ್ರಮಾಣದ ತೊರೆಗಳನ್ನು ಮತ್ತು ಹೊಳೆಗಳನ್ನು ಹೊಂದಿದೆ. ಹೊಳೆಗಳು ಬೇಸಿಗೆ ಕಾಲದಲ್ಲಿ ಒಣಗಿ ಹೋಗುವದರಿಂದ ಉಪಯೋಗಕ್ಕೆ ಬರುವುದಿಲ್ಲ. ಕೊಪ್ಪಳ ತಾಲ್ಲೂಕಿನ ಮುನಿರಾಬಾದಿನಲ್ಲಿ ತುಂಗಭದ್ರಾ ಜಲಾಶಯ ಇರುತ್ತದೆ.

೩.೬ ಜನಸಂಖ್ಯಾ ವಿವರ

ಕೋಷ್ಟಕ ೧ ಮತ್ತು ೨ ರಲ್ಲಿ ಜಿಲ್ಲೆಯ ಜನಸಂಖ್ಯಾ ವೈಶಿಷ್ಟಗಳನ್ನು ಒದಗಿಸಲಾಗಿದೆ. ಜಿಲ್ಲೆ ೧೩.೮೯ ಲಕ್ಷ ಜನಸಂಖ್ಯೆಯನ್ನು ಹೊಂದಿದ್ದು,ಇದು ರಾಜ್ಯದ ಒಟ್ಟು ಜನಸಂಖ್ಯೆಯ ಶೇ.೨.೨೮ರಷ್ಟಿದೆ. (೨೦೧೧ರ ಜನಗಣತಿ ಪ್ರಕಾರ) ೨೦೦೧ರ ಜನಗಣತಿಗೆ ಹೋಲಿಸಿದಾಗ ಇದು ಶೇ. ೨.೨೬ ರಷ್ಟಿತ್ತು ಹಾಗೂ ಜಿಲ್ಲೆಯು ಒಟ್ಟು ರಾಜ್ಯದ ಸುಮಾರು ಶೇ.೩.೦೯ ಗ್ರಾಮೀಣ ಮತ್ತು ಶೇ. ೦.೯೯ ರಷ್ಟು ನಗರ ಜನಸಂಖ್ಯೆಯನ್ನು ಹೊಂದಿದೆ. ಕೊಪ್ಪಳ ಜಿಲ್ಲೆಯ ದಶಕದ ಜನಸಂಖ್ಯೆ ಬೆಳವಣಿಗೆ ೨೦೦೧ ರಿಂದ ೨೦೧೧ ರಲ್ಲಿ ಶೇ.೧೫.೬೭ ಕ್ಕಿಂತ ಸ್ವಲ್ಪ ಹೆಚ್ಚಾಗಿದೆ ಹಾಗೂ ವಾಸ್ತವವಾಗಿ ರಾಜ್ಯದ ಜನಸಂಖ್ಯೆ ಬೆಳವಣಿಗೆಯಲ್ಲಿ ಏಳನೇ ಸ್ಥಾನವನ್ನು ಪಡೆದಿದೆ. ಅಂದರೆ ಜಿಲ್ಲೆಯಲ್ಲಿ ಜನಸಾಂದ್ರತೆಯು ೨೦೦೧ ರಲ್ಲಿ ೨೧೫ ರಷ್ಟಿದ್ದು ೨೦೧೧ ವೇಳೆಗೆ ಪ್ರತಿ ಚ.ಕಿ.ಮೀ ಗೆ ೨೫೦

ಆಗಿರುತ್ತದೆ ಆದರೆ ಕರ್ನಾಟಕ ರಾಜ್ಯದ ಸರಾಸರಿಗೆ ಹೋಲಿಸಿದಾಗ ಅದು ೨೭೬(೨೦೦೧) ಮತ್ತು ೩೧೯ (೨೦೧೧) ಇರುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಕೊಪ್ಪಳ ಜಿಲ್ಲೆಯ ಜನಸಾಂದ್ರತೆಯು ರಾಜ್ಯದ ಸರಾಸರಿಗಿಂತ ಕಡಿಮೆ ಇರುವುದನ್ನು ನಾವು ಕಾಣಬಹುದಾಗಿದೆ.

ಕೊಪ್ಪಳ ಜಿಲ್ಲೆಯ ನಗರೀಕರಣವು ರಾಜ್ಯಕ್ಕೆ ಹೋಲಿಸಿದಾಗ ಬಹಳ ಕಡಿಮೆ ಪ್ರಮಾಣದಲ್ಲಿರುವುದು ಕಂಡು ಬರುತ್ತದೆ. ೨೦೧೧ರ ಜನಗಣತಿ ಪ್ರಕಾರ ಜಿಲ್ಲೆಯಲ್ಲಿ ನಗರ ಜನಸಂಖ್ಯೆ ಕೇವಲ ಶೇ.೧೬.೮೧ ರಷ್ಟಿದೆ. ಆದರೆ ಕರ್ನಾಟಕ ರಾಜ್ಯದ ಜನಸಂಖ್ಯೆ ಶೇ.೩೮.೬೭ ರಷ್ಟಿದೆ.

ಚಿತ್ರ ೧ ರಲ್ಲಿ ವಿಶ್ಲೇಷಿಸಿದಂತೆ, ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಯವರ ಜನಸಂಖ್ಯೆ ರಾಜ್ಯದ ಪರಿಶಿಷ್ಟ ಜಾತಿಯವರ ಜನಸಂಖ್ಯೆ ಹೋಲಿಸಿದರೆ ಹೆಚ್ಚಾಗಿರುವುದು. ಜಿಲ್ಲೆಯ ನಗರ ಪ್ರದೇಶದಲ್ಲಿ ಪರಿಶಿಷ್ಟ ಜಾತಿಯವರ ಪ್ರಮಾಣ ಹೆಚ್ಚಾಗಿದೆ. ಆದರೆ ಗ್ರಾಮೀಣ ಪ್ರದೇಶದಲ್ಲಿ ಪರಿಶಿಷ್ಟ ಜಾತಿಯವರ ಜನಸಂಖ್ಯೆ ಅನುಪಾತದಲ್ಲಿ ಅಷ್ಟೊಂದು ವ್ಯತ್ಯಾಸ ಇರುವುದಿಲ್ಲ.

ಕೋಷ್ಟಕ ೩.೧: ಕೊಪ್ಪಳ ಜಿಲ್ಲೆಯ ಜನಸಂಖ್ಯಾ ಸೂಚ್ಯಂಕಗಳ ಪಕ್ಷಿನೋಟ

ಜನಸಂಖ್ಯಾ ಸೂಚ್ಯಂಕಗಳು	೨೦೧೧	೨೦೦೧
ಜನಸಂಖ್ಯೆ	೧೩,೮೯,೯೨೦	೧೧,೯೬,೦೮೯
ಶೇಕಡಾವಾರು ಪುರುಷರ ಜನಸಂಖ್ಯೆ	೫೦.೩೬	೫೦.೪೪
ಶೇಕಡಾವಾರು ಮಹಿಳೆಯರ ಜನಸಂಖ್ಯೆ	೪೯.೬೪	೪೯.೫೬
ಶೇಕಡಾವಾರು ಜನಸಂಖ್ಯಾ ಬೆಳವಣಿಗೆ	೧೬.೨೧	೨೪.೮೪
ಜನಸಾಂದ್ರತೆ/ ಚ. ಕಿ. ಮೀ	೨೫೦.೦೦	೨೧೩.೦೦
ಶೇಕಡಾವಾರು ಕರ್ನಾಟಕ ಜನಸಂಖ್ಯೆ	೨.೨೮	೨.೨೬
ಲಿಂಗಾನುಪಾತ (ಪ್ರತಿ ಸಾವಿರ ಪುರುಷರಿಗೆ)	೯೮೬	೯೮೩
ಮಕ್ಕಳ ಲಿಂಗಾನುಪಾತ (೦-೬)	೯೫೮	೯೫೩
ಸರಾಸರಿ ಸಾಕ್ಷರತೆ	೬೮.೦೯	೫೪.೧೦
ಶೇಕಡಾವಾರು ಪುರುಷ ಸಾಕ್ಷರತೆ	೭೮.೫೪	೬೮.೪೨
ಶೇಕಡಾವಾರು ಮಹಿಳೆ ಸಾಕ್ಷರತೆ	೫೭.೫೫	೩೯.೬೧
ಮಕ್ಕಳ ಅನುಪಾತ (೦-೬ ವಯೋಮಾನ)	೧೪.೫೧	೧೭.೩೯
ಬಾಲಕರ ಅನುಪಾತ (೦-೬ ವಯೋಮಾನ)	೭.೪೧	೮.೯೦
ಬಾಲಕಿಯರ ಅನುಪಾತ (೦-೬ ವಯೋಮಾನ)	೭.೧೦	೮.೪೯

ಮೂಲ: ಜನಗಣತಿ ೨೦೦೧ ಮತ್ತು ೨೦೧೧

ಜಿಲ್ಲೆಯ ಪರಿಶಿಷ್ಟ ಪಂಗಡದವರ ಜನಸಂಖ್ಯಾ ಪ್ರಮಾಣವು ರಾಜ್ಯದ ಸರಾಸರಿಗೆ ಹೋಲಿಸಿದಾಗ ಹೆಚ್ಚಿರುತ್ತದೆ. (ಚಿತ್ರ ೧) ಇದು ನಗರ ಮತ್ತು ಗ್ರಾಮೀಣ ಪ್ರದೇಶಗಳಿಗೆ ಹಾಗೂ ಒಟ್ಟಾರೆ ಜಿಲ್ಲೆಗೆ ಅನ್ವಯವಾಗುತ್ತದೆ. ಪರಿಶಿಷ್ಟ ಪಂಗಡದವರು ಗ್ರಾಮೀಣ ಭಾಗದಲ್ಲಿ ಬೇರೂರಿದಂತೆ ತೋರುತ್ತದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಜನಸಂಖ್ಯೆಯನ್ನು ನಗರ ಮತ್ತು ಗ್ರಾಮೀಣ ಪ್ರದೇಶಗಳ ಆ ದಶಕದ ಪ್ರಮಾಣವನ್ನು ಗಮನಿಸಿದಾಗ ಜಿಲ್ಲೆ ಮತ್ತು ರಾಜ್ಯಗಳೆರಡರಲ್ಲೂ ಒಂದೇ ಸ್ಥಿತಿ ಇರುವುದು ಕಂಡುಬರುತ್ತದೆ. ೦೬ ವಯೋಮಾನದ ಮಕ್ಕಳ ಜನಸಂಖ್ಯೆ ಪ್ರಮಾಣವು ಮಹತ್ವವಾದದ್ದು, ಇದು ಮುಂಬರುವ ವರ್ಷಗಳಲ್ಲಿ ಸಾಮಾಜಿಕ ವಲಯಗಳಲ್ಲಿ ವೆಚ್ಚದ ಅಗತ್ಯತೆಯನ್ನು ಸೂಚಿಸುತ್ತದೆ. ಇಂತಹ ಸರಿಸಮಾನ ದೂರದೃಷ್ಟಿಯುಳ್ಳ ಯೋಜನೆಗಳಿರದಿದ್ದರೆ ಆರ್ಥಿಕ, ಸಾಮಾಜಿಕ, ರಾಜಕೀಯ ಸಮಸ್ಯೆಗಳಿಂದಾಗಿ ನಿರುದ್ಯೋಗ ಮತ್ತು ಸಂಘರ್ಷಗಳು ಹಾಗೂ ಅಪರಾಧಗಳ ಉಲ್ಬಣಕ್ಕೆ ಕಾರಣವಾಗಬಹುದು. ಜಿಲ್ಲೆಯಲ್ಲಿ ಯುವಜನತೆಯ ಪ್ರಮಾಣ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿದೆ (ಚಿತ್ರ ೨) ಇದು ಪ್ರಾದೇಶಿಕವಾದುದೆಂದನಿಸುತ್ತದೆ. (ಏಕೆಂದರೆ ಹೈದ್ರಾಬಾದ ಕರ್ನಾಟಕ ಭಾಗದ ಪ್ರದೇಶಗಳಲ್ಲಿ ಯುವಜನತೆಯ ಪ್ರಮಾಣ ಹೆಚ್ಚಾಗಿರುವುದನ್ನು ಕಾಣಬಹುದು)

ಲಿಂಗಾನುಪಾತವು ಕರ್ನಾಟಕ ರಾಜ್ಯ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ೨೦೦೧ ರಿಂದ ೨೦೧೧ ರ ಅವಧಿಯಲ್ಲಿ ಏರಿಕೆಯಾಗಿದೆ. ೨೦೦೧ ರಲ್ಲಿ ಜಿಲ್ಲೆಯಲ್ಲಿ ಲಿಂಗಾನುಪಾತವು ೯೮೩ ಇದ್ದದ್ದು ೨೦೧೧ ಕ್ಕೆ ೯೮೬ ಕ್ಕೆ ಏರಿಕೆಯಾಗಿದೆ. ಅದರಂತೆ ಕರ್ನಾಟಕ ರಾಜ್ಯದಲ್ಲಿ ಕ್ರಮವಾಗಿ ೯೬೫ ಮತ್ತು ೯೭೩ ಇರುತ್ತದೆ. ಸಂಕ್ಷಿಪ್ತವಾಗಿ ಲಿಂಗಾನುಪಾತವು ೨೦೦೧-೨೦೧೧ ರಲ್ಲಿ ಜಿಲ್ಲೆಯಲ್ಲಿ ಏರಿಕೆ ಕಂಡುಬಂದರೂ ಅದು ರಾಜ್ಯದ ಸರಾಸರಿಯಲ್ಲಿ ೮ ಅಂಕಗಳ ಏರಿಕೆಯಾಗಿದ್ದರೆ ಜಿಲ್ಲೆಯಲ್ಲಿ ಕೇವಲ ೩ ಅಂಕಗಳ ಏರಿಕೆಯನ್ನು ಮಾತ್ರ ಕಾಣಬಹುದಾಗಿದೆ. ಲಿಂಗಾನುಪಾತದಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ವ್ಯತ್ಯಾಸಗಳನ್ನು ನೋಡುವುದಾದಲ್ಲಿ ಕರ್ನಾಟಕ ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ೯೭೯ ಮತ್ತು ನಗರ ಪ್ರದೇಶದಲ್ಲಿ ೯೬೩(೨೦೧೧) ಜನಗಣತಿ ಪ್ರಕಾರ ಇರುವುದು. ಇದು ಜಿಲ್ಲೆಯಲ್ಲಿ ಅನುಕ್ರಮವಾಗಿ ೯೮೩ ಮತ್ತು ೯೯೮ ಇರುತ್ತದೆ. ಜಿಲ್ಲೆಯಲ್ಲಿಯ ಮಕ್ಕಳ ಲಿಂಗಾನುಪಾತವು ೯೩೧ ರಿಂದ ೯೪೩ ಕ್ಕೆ ಏರಿಕೆಯಾಗಿರುವುದು ಸ್ವಾಗತರ್ಹವಾಗಿದೆ. ಸಂಕ್ಷಿಪ್ತವಾಗಿ ಲಿಂಗಾನುಪಾತಗಳು(ಗ್ರಾಮೀಣ, ನಗರ ಮತ್ತು ಮಕ್ಕಳಲ್ಲಿ) ಕರ್ನಾಟಕ ರಾಜ್ಯದ ಸರಾಸರಿಗೆ ಹೋಲಿಸಿದರೆ ಜಿಲ್ಲೆಯಲ್ಲಿ ಹೆಚ್ಚಾಗಿರುವುದು ಕಂಡು ಬರುತ್ತದೆ.

ಕೋಷ್ಟಕ ೩.೨ ಕೊಪ್ಪಳ ಜಿಲ್ಲೆಯ ಜನಸಂಖ್ಯಾ ಸೂಚ್ಯಂಕಗಳ ಪಕ್ಷಿನೋಟ (೨೦೧೧)

ವಿವರಣೆ	ಗ್ರಾಮೀಣ	ನಗರ	ಒಟ್ಟು
ಒಟ್ಟು ಜನಸಂಖ್ಯೆ	೧೧೫೬೨೧೬	೨೩೩೭೦೪	೧೩೮೯೯೨೦
ಶೇಕಡವಾರು ಜನಸಂಖ್ಯೆ	೮೩.೧೯	೧೬.೮೧	೧೦೦.೦೦
ಪುರುಷ ಜನಸಂಖ್ಯೆ	೫೮೨೯೫೮	೧೧೬೯೬೮	೬೯೯೯೨೬
ಮಹಿಳಾ ಜನಸಂಖ್ಯೆ	೫೭೩೨೫೮	೧೧೬೭೩೬	೬೮೯೯೯೪
ಲಿಂಗಾನುಪಾತ	೯೮೩	೯೯೮	೯೮೬
ಮಕ್ಕಳ ಲಿಂಗಾನುಪಾತ (೦-೬ ವಯೋಮಾನ)	೯೫೫	೯೭೩	೯೫೮
ಮಕ್ಕಳ ಸಂಖ್ಯೆ (೦-೬ ವಯೋಮಾನ)	೧೭೦೫೫೦	೩೧೧೦೪	೨೦೧೬೫೪
ಗಂಡು ಮಕ್ಕಳ ಸಂಖ್ಯೆ (೦-೬ ವಯೋಮಾನ)	೮೭೨೫೫೪	೧೫೭೬೨	೧೦೩೦೧೬
ಹೆಣ್ಣು ಮಕ್ಕಳ ಸಂಖ್ಯೆ (೦-೬ ವಯೋಮಾನ)	೮೩೨೯೬	೧೫೩೪೨	೯೮೬೩೮
ಮಕ್ಕಳ ಪ್ರತಿಶತ (೦-೬ ವಯೋಮಾನ)	೧೪.೭೫	೧೩.೩೧	೧೪.೫೧
ಗಂಡು ಮಕ್ಕಳ ಪ್ರತಿಶತ (೦-೬ ವಯೋಮಾನ)	೧೪.೯೭	೧೩.೪೮	೧೪.೭೨
ಹೆಣ್ಣು ಮಕ್ಕಳ ಪ್ರತಿಶತ (೦-೬ ವಯೋಮಾನ)	೧೪.೫೩	೧೩.೧೪	೧೪.೩೦
ಸಾಕ್ಷರರು	೬೫೧೦೦೧	೧೫೮೦೮೪	೮೦೯೦೮೫
ಪುರುಷ ಸಾಕ್ಷರರು	೩೮೨೨೭೦	೮೬೫೧೫	೪೬೮೭೮೫
ಮಹಿಳಾ ಸಾಕ್ಷರರು	೨೬೮೭೩೧	೭೧೫೬೯	೩೪೦೩೦೦
ಸರಾಸರಿ ಸಾಕ್ಷರತೆ	೬೬.೦೫	೭೮.೦೩	೬೮.೦೯
ಶೇಕಡವಾರು ಪುರುಷ ಸಾಕ್ಷರತೆ	೭೭.೧೨	೮೫.೪೮	೭೮.೫೪
ಶೇಕಡವಾರು ಮಹಿಳಾ ಸಾಕ್ಷರತೆ	೫೪.೮೫	೭೦.೫೯	೫೭.೫೫

ಮೂಲ: ಜನಗಣತಿ ೨೦೧೧, ಜನಗಣತಿ ಕಾರ್ಯಚರಣೆಗಳ ನಿರ್ದೇಶನಾಲಯ, ಕರ್ನಾಟಕ

೩.೭ ಸಾಕ್ಷರತೆ

ಈ ವಿಭಾಗದಲ್ಲಿ ಕರ್ನಾಟಕ ರಾಜ್ಯದ ಸರಾಸರಿ ಪುರುಷರ ಮತ್ತು ಮಹಿಳೆಯರ ಸಾಕ್ಷರತಾ ಪ್ರಮಾಣವನ್ನು ಕೊಪ್ಪಳ ಜಿಲ್ಲೆಯ ಸಾಕ್ಷರತಾ ಪ್ರಮಾಣಕ್ಕೆ ಹೋಲಿಸಿದಾಗ ಕೊಪ್ಪಳ ಜಿಲ್ಲೆಯು ರಾಜ್ಯದ ಸರಾಸರಿ ಸಾಕ್ಷರತಾ ಪ್ರಮಾಣಕ್ಕಿಂತ ಕಡಿಮೆ ಇರುವುದು ಕಂಡುಬರುತ್ತದೆ. ಇದನ್ನು ಕೋಷ್ಟಕ ೩ ರಲ್ಲಿ ೨೦೦೧ ಮತ್ತು ೨೦೧೧ ಎರಡೂ ಜನಗಣತಿಯ ಅವಧಿಯಲ್ಲಿ ಈ ರೀತಿಯ

ಹಿನ್ನಡೆಯು ಕಾಣುತ್ತದೆ. ಕೋಷ್ಟಕ ೪ ನ್ನು ಪರಿಶೀಲಿಸಿದಾಗ, ಜಿಲ್ಲೆಯ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಸಾಕ್ಷರತಾ ಪ್ರಮಾಣ ಅಷ್ಟು ಗಮನಾರ್ಹ ವ್ಯತ್ಯಾಸ ಇಲ್ಲದಿರುವದು ಕಂಡುಬರುತ್ತದೆ. ನಗರ ಪ್ರದೇಶದ ಸಾಕ್ಷರತಾ ಪ್ರಮಾಣದಲ್ಲಿ ವ್ಯತ್ಯಾಸ ಕಡಿಮೆ ಇರಬೇಕೆಂಬುದು ಸಾಮಾನ್ಯ ನಿರೀಕ್ಷೆಯಾಗಿರುತ್ತದೆ ಇದಕ್ಕೆ ಕಾರಣ ನಗರ ಪ್ರದೇಶದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಶೈಕ್ಷಣಿಕ ಸೌಲಭ್ಯಗಳ ಲಭ್ಯತೆ ಇರುತ್ತದೆ. ಆದಾಗಿಯೂ ಕೊಪ್ಪಳ ಜಿಲ್ಲೆಯ ಗ್ರಾಮೀಣ ಪ್ರದೇಶಗಳಿಗೆ ಉದ್ಯೋಗವಕಾಶಗಳ ಕೊರತೆಯಿಂದಾಗಿ ಶ್ರಮಿಕ ಅಕ್ಷರಸ್ಥ ಜನರು ನಗರ ಪ್ರದೇಶಗಳಿಗೆ ವಲಸೆ ಬಂದಿರುತ್ತಾರೆ. ಕೋಷ್ಟಕ ೫ ನ್ನು ಪರಿಶೀಲಿಸಲಾಗಿ ತಾಲ್ಲೂಕು ಮಟ್ಟದಲ್ಲಿ ಲಿಂಗಾನುಪಾತ ಸಾಕ್ಷರತೆಯಲ್ಲಿ ಸಾಕಷ್ಟು ತಾರತಮ್ಯ ಇರುವುದು ಕಂಡುಬರುತ್ತದೆ. ಈ ವ್ಯತ್ಯಾಸವು ೧೮ ರಿಂದ ೨೫ ಪ್ರತಿಶತದಷ್ಟಿದೆ. ಅತಿ ಹೆಚ್ಚು ವ್ಯತ್ಯಾಸವು ಯಲಬುರ್ಗಾ ತಾಲ್ಲೂಕಿನಲ್ಲಿ ಮತ್ತು ನಂತರದ ಸ್ಥಾನದಲ್ಲಿ ಕುಷ್ಟಗಿ ತಾಲ್ಲೂಕಿನಲ್ಲಿ ಇರುತ್ತದೆ. ಗಂಗಾವತಿ ತಾಲ್ಲೂಕಿನಲ್ಲಿ ಜಿಲ್ಲಾಡಳಿತವು ಪುರುಷ ಮತ್ತು ಮಹಿಳಾ ಸಾಕ್ಷರತೆಯನ್ನು ಹೆಚ್ಚಿಸುವಲ್ಲಿ ಪ್ರಯತ್ನಿಸಬೇಕಾಗುವದು, ಅದರಲ್ಲಿಯೂ ಯಲಬುರ್ಗಾ ಮತ್ತು ಕುಷ್ಟಗಿ ತಾಲ್ಲೂಕುಗಳಿಗೆ ವಿಶೇಷವಾದ ಗಮನ ನೀಡುವ ಅವಶ್ಯಕತೆ ಇದೆ.

ಕೋಷ್ಟಕ ೩.೩ ಕರ್ನಾಟಕ ರಾಜ್ಯ ಮತ್ತು ಕೊಪ್ಪಳ ಜಿಲ್ಲೆಯ ಲಿಂಗವಾರು ಸಾಕ್ಷರತೆ

ಸಾಕ್ಷರತೆಯ ಪ್ರಮಾಣ (ಶೇಕಡಾ)	ಕೊಪ್ಪಳ ಜಿಲ್ಲೆ		ಕರ್ನಾಟಕ	
	೨೦೦೧	೨೦೧೧	೨೦೦೧	೨೦೧೧
ಸರಾಸರಿ ಸಾಕ್ಷರತೆ	೫೪.೧	೬೮.೧	೬೬.೬	೭೫.೪
ಪುರುಷ ಸಾಕ್ಷರತೆ	೬೮.೪	೭೮.೫	೭೬.೧	೮೨.೫
ಮಹಿಳೆಯರ ಸಾಕ್ಷರತೆ	೩೯.೬	೫೭.೬	೫೬.೯	೬೮.೧

ಮೂಲ: ಜನಗಣತಿ ೨೦೦೧ ಮತ್ತು ೨೦೧೧

ಕೋಷ್ಟಕ ೩.೪ ಕರ್ನಾಟಕ ಮತ್ತು ಕೊಪ್ಪಳದ ಪ್ರದೇಶವಾರು ಹಾಗೂ ಲಿಂಗವಾರು ಸಾಕ್ಷರತೆ (೨೦೧೧)

ಸಾಕ್ಷರತೆಯ ಪ್ರಮಾಣ (ಶೇಕಡಾ)	ಕೊಪ್ಪಳ ಜಿಲ್ಲೆ			ಕರ್ನಾಟಕ		
	ಗ್ರಾಮೀಣ	ನಗರ	ಒಟ್ಟು	ಗ್ರಾಮೀಣ	ನಗರ	ಒಟ್ಟು
ಸರಾಸರಿ ಸಾಕ್ಷರತೆ	೬೬.೦೫	೭೮.೦೩	೬೮.೦೯	೬೮.೮೬	೮೬.೨೧	೭೫.೪೦
ಪುರುಷ ಸಾಕ್ಷರತೆ	೭೭.೧೨	೮೫.೪೫	೭೮.೫೪	೭೭.೯೨	೯೦.೫೪	೮೨.೫೦
ಮಹಿಳೆಯರ ಸಾಕ್ಷರತೆ	೫೪.೮೫	೭೦.೩೯	೫೭.೫೫	೫೯.೬೦	೮೧.೭೧	೬೮.೧೩

ಮೂಲ: ಜನಗಣತಿ ೨೦೦೧ ಮತ್ತು ೨೦೧೧

ಕೋಷ್ಟಕ ೩.೫ ಕೊಪ್ಪಳ ಜಿಲ್ಲೆಯ ತಾಲ್ಲೂಕುವಾರು ಮತ್ತು ಲಿಂಗವಾರು ಸಾಕ್ಷರತೆ (೨೦೧೧)

ತಾಲ್ಲೂಕುಗಳು	**ಮಹಿಳೆಯರ ಸಾಕ್ಷರತೆ ಪ್ರಮಾಣ**	**ಪುರುಷರ ಸಾಕ್ಷರತೆ ಪ್ರಮಾಣ**	**ಸ್ತ್ರೀ ಮುಖಾಮುಖಿಯಾಗಿ ಗಂಡು ಸಾಕ್ಷರತೆ ಕೊರತೆ**
ಗಂಗಾವತಿ	೫೮.೧೯	೭೬.೫೧	೧೮.೩೨
ಕೊಪ್ಪಳ	೬೦.೪೮	೮೦.೪೮	೨೦.೦೧
ಕುಷ್ಟಗಿ	೫೫.೮	೭೮.೨೧	೨೩.೧೩
ಯಲಬುರ್ಗಾ	೫೪.೮	೭೯.೫೮	೨೪.೭೦

ಮೂಲ: ಜನಗಣತಿ ೨೦೦೧

೩.೮ ಉದ್ಯಮ ರಂಗ

ದೊಡ್ಡ ಕೈಗಾರಿಕೆಗಳತ್ತ ಗಮನಹರಿಸಿದಾಗ ಜಿಲ್ಲೆಯಲ್ಲಿಯ ಕಬ್ಬಿಣ, ಉಕ್ಕು ಮತ್ತು ದೂರ ಸಂಪರ್ಕ ಕ್ಷೇತ್ರಗಳಲ್ಲಿ ದೊಡ್ಡ ಕಾರ್ಖಾನೆಗಳನ್ನು ಹೊಂದಿದೆ. ವಿವರಗಳು ಅನುಬಂಧ ಕೋಷ್ಟಕ ಎ೨.೧ರಲ್ಲಿ ಲಭ್ಯವಿರುತ್ತವೆ. ಅದರಂತೆ ಸಣ್ಣ ಮತ್ತು ಗುಡಿ ಕೈಗಾರಿಕೆಗಳ ಮಾಹಿತಿಯು ಅನುಬಂಧ, ಕೋಷ್ಟಕ ಎ೨.೨ರಲ್ಲಿ ಲಭ್ಯವಿರುತ್ತದೆ. ಇವುಗಳು ಮುಖ್ಯವಾಗಿ ಆಹಾರ ಸಂಸ್ಕರಣೆ, ಮರದ ಪಿಠೋಪಕರಣಗಳು, ಜವಳಿ ಮತ್ತು ಜವಳಿ ಉತ್ಪನ್ನಗಳು (ಸಿದ್ಧ ಉಡುಪುಗಳು) ದುರಸ್ಥಿ ಸೇವೆಗಳು ಇತ್ಯಾದಿಗಳನ್ನು ಒಳಗೊಂಡಿದೆ.

೩.೯ ನೀರಾವರಿ

ಕೊಪ್ಪಳ ಜಿಲ್ಲೆಯು ಕರ್ನಾಟಕದ ಬರಪೀಡಿತ ಜಿಲ್ಲೆಗಳಲ್ಲಿ ಬರುತ್ತದೆ. ಜಿಲ್ಲೆಯಲ್ಲಿ ನೀರಾವರಿಯ ಪ್ರಮುಖ ಮೂಲಗಳು ಕಾಲುವೆ ಮತ್ತು ಕೊಳವೆ ಬಾವಿಗಳಾಗಿವೆ.ಆದಾಗಿಯೂ, ವಿವಿಧ ತಾಲ್ಲೂಕುಗಳಲ್ಲಿ ನೀರಾವರಿ ಬಳಕೆಯಲ್ಲಿ ವಿವಿಧ ವಿಧಾನಗಳನ್ನು ಉಪಯೋಗಿಸುತ್ತಾರೆ. ಗಂಗಾವತಿಯ ಕಾಲುವೆ ಮತ್ತು ಕೊಳವೆ ಬಾವಿಗಳನ್ನೂ ಮುಖ್ಯವಾಗಿ ಅವಲಂಬಿಸಿದೆ. ಅದೇ ರೀತಿ ಕೊಪ್ಪಳ, ಕುಷ್ಟಗಿ ಹಾಗೂ ಯಲಬುರ್ಗಾ ತಾಲ್ಲೂಕುಗಳು ಮುಖ್ಯವಾಗಿ ಕೊಳವೆ ಬಾವಿಯ ಮೇಲೆ ಅವಲಂಬಿಸಿವೆ.

೩.೧೦ ಮೂಲಭೂತ ಸೌಕರ್ಯಗಳು

ಜಿಲ್ಲೆಯಲ್ಲಿ ಸಾರಿಗೆ ವ್ಯವಸ್ಥೆಯು ಸಮಾಧಾನಕರವಾಗಿದೆ. ಜಿಲ್ಲೆಯಲ್ಲಿ ರಸ್ತೆಗಳು ಉತ್ತಮ ಸಂಪರ್ಕ ಜಾಲವನ್ನು ಹೊಂದಿವೆ. ಕೊಪ್ಪಳ ನಗರವು ಕರ್ನಾಟಕದ ಎಲ್ಲಾ ನಗರಗಳಿಗಿಂತ ಉತ್ತಮ ರಸ್ತೆ ಸಂಪರ್ಕವನ್ನು ಹೊಂದಿದೆ. ಇದು ರಾಷ್ಟ್ರೀಯ ಹೆದ್ದಾರಿ ಸಂಖ್ಯೆ ೬೩ ಮತ್ತು ೧೩ರ ಮೂಲಕ ಬೆಂಗಳೂರು, ಹುಬ್ಬಳ್ಳಿ, ಹೊಸಪೇಟೆ, ಬಳ್ಳಾರಿ, ರಾಯಚೂರು ನಗರಗಳಿಗೆ ರಸ್ತೆ

ಸಂಪರ್ಕ ಹೊಂದಿದ್ದು ಕೊಪ್ಪಳ ನಗರವು ಬೆಂಗಳೂರಿನಿಂದ ೩೮೦ ಕಿ.ಮೀ ಹಾಗೂ ಹುಬ್ಬಳ್ಳಿಯಿಂದ ೧೨೦ ಕಿ.ಮೀ ದೂರದಲ್ಲಿದೆ. ಹಾಗೂ ಎಲ್ಲ ಪ್ರಮುಖ ನಗರಗಳಾದ ಬೆಂಗಳೂರು, ಹುಬ್ಬಳ್ಳಿ, ಮೈಸೂರು,ಗೋವಾ, ಹೈದ್ರಾಬಾದ, ಕಲಬುರಗಿ, ಬೀದರ, ರಾಯಚೂರ, ಬಳ್ಳಾರಿ, ಧಾರವಾಡ, ದಾವಣಗೆರೆ, ಬೆಳಗಾವಿ, ಬಾಗಲಕೋಟೆ, ವಿಜಯಪುರ ಮತ್ತು ಮಂಗಳೂರು ನಗರಗಳಿಗೆ ರಾಜ್ಯ ರಸ್ತೆ ಸಾರಿಗೆ ಬಸ್ಸುಗಳು ಸಂಚರಿಸುತ್ತವೆ.

ಕೊಪ್ಪಳ ಜಿಲ್ಲೆಯೂ ಸಹ ಬ್ರಾಡಗೇಜ ರೈಲ್ವೆ ಮಾರ್ಗವನ್ನು ಹೊಂದಿದೆ. ಇದು ಬಾಣಾಪುರ ಹಳ್ಳಿಯ ಹತ್ತಿರ ಯಲಬುರ್ಗಾ ತಾಲ್ಲೂಕು ಮೂಲಕ ಸಂಪರ್ಕದಿಂದ ಕೊಪ್ಪಳ ತಾಲ್ಲೂಕನ್ನು ಪ್ರವೇಶಿಸುತ್ತದೆ. ಮತ್ತು ಕೊಪ್ಪಳ ಜಿಲ್ಲಾ ಕೇಂದ್ರದ ಮೂಲಕ ಹಾಯ್ದು ತಾಲ್ಲೂಕಿನ ಮುನಿರಾಬಾದನಿಂದ ಬಳ್ಳಾರಿ ಜಿಲ್ಲೆಯ ಹೊಸಪೇಟೆ ಹಾಗೂ ಅಲ್ಲಿಂದ ಆಂಧ್ರದ ಗುಂತಕಲ್‌ಗೆ ಸೇರುತ್ತದೆ. ರೈಲು ಹಳಿಯು ಕೊಪ್ಪಳ ತಾಲ್ಲೂಕಿನಲ್ಲಿ ೩೫ ಕಿ.ಮೀ ಮತ್ತು ಯಲಬುರ್ಗಾ ತಾಲ್ಲೂಕಿನಲ್ಲಿ ೧೮ ಕಿ.ಮೀ ಉದ್ದ ಇರುತ್ತದೆ. ಕೊಪ್ಪಳ ಮತ್ತು ಮುನಿರಾಬಾದ ರೈಲ್ವೆ ನಿಲ್ದಾಣಗಳಿಂದ ಉತ್ತಮ ಸರಕು ಸಾಗಣಿಕೆಯ ಸೌಲಭ್ಯವಿರುತ್ತದೆ.

ಕೊಪ್ಪಳ ಮತ್ತು ಮುನಿರಾಬಾದ ನಡುವೆ ಕೊಪ್ಪಳ ತಾಲ್ಲೂಕಿನ ಗಿಣಿಗೇರಾ ಗ್ರಾಮದಲ್ಲಿ ವಾಯು ಸಂಚಾರದ ಸೌಲಭ್ಯವಿರುತ್ತದೆ. ಸದರಿ ವಿಮಾನವು ಸದ್ಯ ಮಿತ್ತಲ್ ಸ್ಟೀಲ್ ಪಾಯಿಂಟ್ ಸಾಲಿನಿಂದ ಉಪಯೋಗಿಸಲ್ಪಡುತ್ತಿದೆ. ಲಭ್ಯವಿರುವ ವಿಮಾನ ನಿಲ್ದಾಣವು ೧೨ ಆಸನಗಳ ಸಾಮರ್ಥ್ಯ ಹೊಂದಿರುವ ಸಣ್ಣ ವಿಮಾನಗಳು ಸಂಚರಿಸಲು ಯೋಗ್ಯವಾಗಿದೆ. ಪ್ರಯಾಣಿಕರ ಪ್ರಯಾಣಕ್ಕೆ ವಿಮಾನ ನಿಲ್ದಾಣವು ಸದ್ಯಕ್ಕೆ ಹುಬ್ಬಳ್ಳಿ ವಿಮಾನ ನಿಲ್ದಾಣದಿಂದ ಪ್ರಯಾಣಿಸಬೇಕಾಗಿದೆ. ಇದು ಕೊಪ್ಪಳದಿಂದ ೧೨೦ ಕಿ.ಮೀ ದೂರದಲ್ಲಿದೆ.

ಕೊಪ್ಪಳ ಜಿಲ್ಲೆಗೆ ಐತಿಹಾಸಿಕ ಪ್ರಾಮುಖ್ಯತೆಯನ್ನು ನೀಡಿದಲ್ಲಿ, ಇದು ಐತಿಹಾಸಿಕ ಕೇಂದ್ರವಾಗಲು ಅಪಾರ ಸಾಮರ್ಥ್ಯವನ್ನು ಹೊಂದಿದೆ. ಆದಾಗಿಯೂ ಐತಿಹಾಸಿಕ ಸ್ಥಳಗಳಿಗೆ ಭೇಟಿಕೊಡಲು ಸಾರಿಗೆ ಸಂಪರ್ಕ ವ್ಯವಸ್ಥೆ ಹಾಗೂ ಇನ್ನಿತರ ಸೌಲಭ್ಯಗಳು ಆರಾಮದಾಯಕವಾಗಿರುವುದಿಲ್ಲ. ಹೀಗಾಗಿ ಇಂಥಹ ಸೌಲಭ್ಯಗಳನ್ನು ಸುಧಾರಿಸುವ ಅಗತ್ಯವಿದೆ. ಜಿಲ್ಲೆಯ ವಿವಿಧ ಐತಿಹಾಸಿಕ ಸ್ಮಾರಕಗಳ ಕಡೆಗೆ ತುರ್ತು ಗಮನ ಮತ್ತು ಮುತವರ್ಜಿವಹಿಸುವುದು ತುಂಬಾನೇ ಅಗತ್ಯವಿದೆ.

ಜಿಲ್ಲೆಯ ಎಲ್ಲ ಗ್ರಾಮಗಳು ವಿದ್ಯುದೀಕರಣ ಹೊಂದಿವೆ. ಆದಾಗ್ಯೂ ಇನ್ನೂ ೨೨ ಕೊಪ್ಪಲಗಳು ವಿದ್ಯುದೀಕರಣಗೊಳ್ಳಬೇಕಾಗಿದೆ. ಆದರೆ ಜಿಲ್ಲೆಯಲ್ಲಿ ಗೃಹ ಬಳಿಕೆಗಾಗಿ ವಿದ್ಯುತ್ ಉಪಯೋಗಿಸಿರುವಂತಹ ಅಂಶವನ್ನು ನೋಡಲಾಗಿ, ಜನರ ಜೀವನ ಮಟ್ಟದ ಚಿತ್ರಣ ತೋರಿಸುತ್ತದೆ. ಹೀಗಾಗಿ ಪರಿಸ್ಥಿತಿಯಲ್ಲಿ ಹೆಚ್ಚು ಸುಧಾರಿಸುವ ಅಗತ್ಯವಿದೆ. ಗೃಹಬಳಿಕೆ ಉದ್ದೇಶಗಳಿಗೆ ವಿದ್ಯುತ್ ಸರಾಸರಿ ಬಳಕೆ ತಲಾ ೫೫ ಯುನಿಟ್‌ಗಳಷ್ಟು ಮಾತ್ರ ಇದೆ (೨೦೧೨-೧೩). ಆದರೆ ಗಂಗಾವತಿಯಲ್ಲಿ ೧೩೦.೧೪ ಯುನಿಟ್ ಮತ್ತು ಕೊಪ್ಪಳದಲ್ಲಿ ೮೭.೦೩೨ ಯುನಿಟ್ ಬಳಕೆಯಾಗುತ್ತದೆ. ಕುಷ್ಟಗಿಯಲ್ಲಿ ೨೧.೮೭

ಯುನಿಟ್ ಹಾಗೂ ಅತಿ ಕಡಿಮೆ ಯಲಬುರ್ಗಾದಲ್ಲಿ ೧೮.೨೬ ಯುನಿಟ್ ತಾಲ್ಲೂಕುಗಳಲ್ಲಿ ಅಸಮತೋಲನವಾಗಿರುವುದು ಕಂಡುಬರುತ್ತದೆ.

ದೂರವಾಣಿ ಮತ್ತು ಸಂವಹನಗಳಿಗೆ ಸಂಬಂಧಿಸಿದಂತೆ, ಗಂಗಾವತಿ ಮತ್ತು ಕೊಪ್ಪಳ ತಾಲ್ಲೂಕುಗಳಲ್ಲಿ ಕುಷ್ಟಗಿ ಮತ್ತು ಯಲಬುರ್ಗಾ ತಾಲ್ಲೂಕುಗಳಿಗಿಂತ ದ್ವಿಗುಣ ಸಂಖ್ಯೆಯಲ್ಲಿ ದೂರವಾಣಿ ವಿನಿಮಯ ಕೇಂದ್ರಗಳಿವೆ. ಆದಾಗಿಯೂ ಅಂಚೆ ಕಛೇರಿಗಳ ಸಂಖ್ಯೆ ದೂರವಾಣಿ ವಿನಿಮಯ ಕೇಂದ್ರಗಳಿಗೆ ಸರಿಸಮಾನವಾಗಿರುವುದಿಲ್ಲ.

ಶಾಲೆಯ ಸೌಲಭ್ಯಗಳು ಜಿಲ್ಲೆಯ ಎಲ್ಲ ಪ್ರದೇಶಗಳಲ್ಲಿ ಲಭ್ಯವಿರುತ್ತದೆ. ಆದರೆ ಉನ್ನತ ಶಿಕ್ಷಣ ಕೇಂದ್ರಗಳು ಕೇವಲ ಗಂಗಾವತಿ ಮತ್ತು ಕೊಪ್ಪಳ ತಾಲ್ಲೂಕುಗಳಿಗೆ ಮಾತ್ರ ಸೀಮಿತವಾಗಿವೆ. ಜಿಲ್ಲೆಯಲ್ಲಿ ಇತ್ತೀಚಿಗೆ ವೈದ್ಯಕೀಯ ಮತ್ತು ಇಂಜನಿಯರಿಂಗ್ ವಿದ್ಯಾಲಯಗಳು ಸ್ಥಾಪನೆಯಾಗಿವೆ.

೩.೧೧ ಪ್ರಾದೇಶಿಕ ಆಯಾಮಗಳು ಮತ್ತು ಹಿಂದುಳಿದಿರುವಿಕೆ

ಡಾ. ನಂಜುಂಡಪ್ಪಾ ಸಮಿತಿ ವರದಿಯು ಜಿಲ್ಲೆಯ ತಾಲ್ಲೂಕುಗಳನ್ನು ಹಿಂದುಳಿದ, ಹೆಚ್ಚು ಹಿಂದುಳಿದ ಮತ್ತು ಅತ್ಯಂತ ಹೆಚ್ಚು ಹಿಂದುಳಿದ ತಾಲ್ಲೂಕುಗಳೆಂದು ಗುರುತಿಸಿದೆ. ಕೋಷ್ಟಕ ೫ರಲ್ಲಿ ವಿವರಿಸಿದ ಹೊರತಾಗಿಯೂ, ಜಿಲ್ಲೆಯ ಐತಿಹಾಸಿಕವಾಗಿ ಬಹಳ ಪ್ರಾಮುಖ್ಯತೆಯನ್ನು ಪಡೆದಿದೆ. ರಾಜ್ಯದ ಇತರೆ ಜಿಲ್ಲೆಗಳಿಗೆ ಹೋಲಿಸಿದರೆ ಕೊಪ್ಪಳ ಜಿಲ್ಲೆಯ ಪ್ರಸ್ತುತ ಸ್ಥಿತಿಯು ಸಮಾಧಾನಕರವಾಗಿರುವುದಿಲ್ಲ. ಇದಲ್ಲದೆ, ಜಿಲ್ಲೆಯಲ್ಲಿ ಕುಷ್ಟಗಿ ಮತ್ತು ಯಲಬುರ್ಗಾ ತಾಲ್ಲೂಕುಗಳನ್ನು ಇತರ ತಾಲ್ಲೂಕುಗಳಿಗೆ ಹೋಲಿಸಿದಾಗ ಗಣನೀಯವಾಗಿ ಹಿಂದುಳಿದಿವೆ. ಸಾಕ್ಷರತೆಯ ವಿಷಯದಲ್ಲಿ ಪ್ರಮುಖವಾಗಿ ಮಹಿಳೆಯರ ಸಾಕ್ಷರತೆ ಹೆಚ್ಚಿಸುವಲ್ಲಿ ವಿಶೇಷ ಗಮನಹರಿಸಬೇಕಾಗಿದೆ.

ಒಂದು ಅವಲೋಕನ

ವಾಸ್ತವವಾಗಿ ಜಿಲ್ಲೆಯು ಬರಪೀಡಿತ ಪ್ರದೇಶವಾಗಿದ್ದರೂ ಕೃಷಿ ಅವಲಂಬಿತವಾಗಿರುತ್ತದೆ ಹಾಗೂ ಗಂಗಾವತಿ ತಾಲ್ಲೂಕನ್ನು ಹೊರತುಪಡಿಸಿ ಉಳಿದೆಲ್ಲ ಪ್ರದೇಶಗಳಲ್ಲಿ ನೀರಾವರಿ ಸೌಲಭ್ಯಗಳ ಅಭಾವ ಇದ್ದುದ್ದರಿಂದ ಜೀವನ ನಿರ್ವಹಣೆ ಹಾಗೂ ಆದಾಯದ ಇತರೆ ಮೂಲಗಳನ್ನು ಆವಿಷ್ಕರಿಸುವ ಸಂಶೋಧನೆಗಳನ್ನು ಕೈಕೊಳ್ಳುವದು ತುಂಬಾನೇ ಅಗತ್ಯವಿರುತ್ತದೆ. ಉದ್ಯಮಿಗಳಿಗೆ ಸಂಬಂಧಿಸಿದಂತೆ ಈ ಜಿಲ್ಲೆಯಲ್ಲಿ ದೊಡ್ಡ ಉದ್ಯಮಗಳಾದ ಕಬ್ಬಿಣ ಅದಿರಿನ ಮತ್ತು ಮರದ ಪಿಠೋಪಕರಣಗಳ ಉದ್ಯಮಗಳು ಸ್ಥಾಪಿತವಾಗಿವೆ. ಆದರೆ ಇವು ಸಂಪನ್ಮೂಲ ಮತ್ತು ಪರಿಸರ ಆಧಾರಿತ ಕೈಗಾರಿಕೆಗಳಾಗಿದ್ದರಿಂದ ದೀರ್ಘಕಾಲೀನವಾಗಿ ಸುಸ್ಥಿರವಾಗಿರುವುದಿಲ್ಲ. ಇದಕ್ಕೆ ಪರ್ಯಾಯವಾಗಿ ಜಿಲ್ಲೆಯಲ್ಲಿ ಹೇರಳವಾಗಿ ಲಭ್ಯವಿರುವ ಸೌರಶಕ್ತಿಯನ್ನು ಉಪಯೋಗಿಸಲು ಸಾಧ್ಯವಿರುವ ಪರ್ಯಾಯ ಉದ್ದಿಮೆಗಳನ್ನು ಸ್ಥಾಪಿಸುವದು ಅವಶ್ಯಕವಾಗಿದೆ. ಜಿಲ್ಲೆಯ ಅಭಿವೃದ್ಧಿಗಾಗಿ ಐತಿಹಾಸಿಕ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವದು ಪ್ರಮುಖವಾಗಿದೆ. ಒಟ್ಟಾರೆಯಾಗಿ

ಹೇಳುವದಾದರೆ ಜೀವನೋಪಾಯ ಮಾರ್ಗಗಳು, ಪರ್ಯಾಯ ಆದಾಯದ ಮೂಲಗಳು ಮತ್ತು ಮೂಲಭೂತ ಅವಶ್ಯಕತೆಗಳನ್ನು ಒದಗಿಸುವದಕ್ಕೆ ತುರ್ತುಗಮನ ಹರಿಸುವದು ಅತ್ಯವಶ್ಯಕವಾಗಿದೆ. ಸಾಕ್ಷರತಾ ದರಗಳನ್ನು ಅದರಲ್ಲಿ ವಿಶೇಷವಾಗಿ ಮಹಿಳಾ ಸಾಕ್ಷತರತೆಯನ್ನು ಉತ್ತೇಜಿಸುವುದು ಅತ್ಯಗತ್ಯ."[೧೦೧]

ಕೊನೆ ಟಿಪ್ಪಣಿಗಳು

೧. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೨, ಕೊಪ್ಪಳ-೨೮, ಪುಟ. ೩೭

೨. ಅದೇ, ಕೊ-೨೮, ಪುಟ. ೩೭

೩. ಇಂಡಿಯನ್ ಆರ್ಕಿಯಾಲಜಿ, ಎ.ರಿವ್ಯೂ, ೧೯೭೭-೭೮

೪. ಅ.ಸುಂದರ : ಆದಿ ಇತಿಹಾಸ ಕಾಲ ಸಂಶೋಧನೆಗಳು, ಸನ್ನತಿ-ಹಂಪಿ,

೫. ರಾಜಶೇಖರಪ್ಪ ಬಿ: ಚಂದ್ರವಳ್ಳಿ ಶಾಸನದ ಮೇಲೆ ಹೊಸಬೆಳಕು, ಸಂಪುಟ-೬೯,ಸಂಚಿಕೆ-೨

೬. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೨, ಕೊಪ್ಪಳ-೨೨, ಪುಟ. ೨೯

೭. ಅದೇ, ಯಲಬುರ್ಗಾ-೬೪, ಪುಟ. ೨೫೬

೮. ಅದೇ, ಕೊಪ್ಪಳ-೩೪, ಪುಟ. ೪೦

೯. ಅದೇ ಕೊ-೩೨, ಪುಟ. ೩೯

೧೦. ಅದೇ ಯ-೩೦, ಪುಟ. ೧೮೯

೧೧. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೭, ಮಾನವಿ-೧೮, ಪುಟ. ೨೪೨

೧೨. ಅದೇ, ಲಿಂ-೧೭, ಪುಟ. ೧೫೧

೧೩. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೨, ಯಲಬುರ್ಗಾ-೬೫, ಪುಟ. ೨೫೭

೧೪. ಅದೇ, ಗಂಗಾವತಿ-೧೧೧, ಪುಟ. ೩೯೦

೧೫. ಅದೇ, ಕೊಪ್ಪಳ-೧೧, ಪುಟ. ೨೨

೧೬. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೨, ಯ-೫೬, ಪುಟ. ೨೩೮

೧೭. ಅದೇ, ಯ-೬೩, ಪುಟ. ೨೫೬

೧೮. ಅದೇ, ಯ-೬೫, ಪುಟ. ೨೫೭

೧೯. ದೇಸಾಯಿ ಪಿ.ಬಿ. : ಶಾಸನ ಪರಿಚಯ, ಪುಟ. ೭೩

೨೦. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೨, ಯ-೫೬, ಪುಟ. ೨೩೮

೨೧. ಅದೇ, ಯ-೬೩, ಪುಟ. ೨೫೬

೨೨. ಅದೇ, ಗಂ-೧೦೨, ಪುಟ. ೩೮೫

೨೩. ಅದೇ, ಕೊ-೯೮, ಪುಟ. ೮೭

೨೪. ಅದೇ, ಕೊ-೧೦೧, ಪುಟ. ೯೦

೨೫. ಅದೇ, ಕೊ-೮೩, ಪುಟ. ೬೮

೨೬. ಅದೇ, ಕೊ-೮೪, ಪುಟ. ೬೯

೨೭. ಅದೇ, ಕೊ-೧೧೩ಪುಟ. ೧೦೯

೨೮. ಅದೇ, ಕೊ-೯೯, ಪುಟ. ೮೮

೨೯. ಅದೇ ಕೊ-೭೯, ಪುಟ. ೬೨

೩೦. ಅದೇ ಕೊ-೯೩, ಪುಟ. ೮೦

೩೧. ಅದೇ, ಕೊ-೧೨೫, ಪುಟ. ೧೨೧

೩೨. ಅದೇ, ಕೊ-೨೬, ಪುಟ. ೩೧

೩೩. ಅದೇ, ಕೊ-೮೪, ಪುಟ. ೬೯

೩೪. ಅದೇ, ಗಂ-೫೩, ಪುಟ. ೩೫೩

೩೫. ಅದೇ, ಯ-೫೯, ಪುಟ. ೨೫೩

೩೬. ಅದೇ, ಕು-೭, ಪುಟ. ೨೮೩

೩೭. ಅದೇ, ಯ-೩೬ & ೧೦, ಪುಟ. ೧೯೪ & ೧೬೪

೩೮. ಅದೇ, ಯ-೫೦, ಪುಟ. ೨೨೨

೩೯. ಅದೇ, ಕೊ-೬೨, ಪುಟ. ೫೬

೪೦. ಅದೇ, ಕೊ-೪೫, ಪುಟ. ೪೬ & ೩೭.

೪೧. ಅದೇ, ಕು-೩, ಪುಟ. ೨೭೯

೪೨. ಅದೇ, ಕೊ-೧೨೪, ಪುಟ. ೧೨೨

೪೩. ಅದೇ, ಗಂ-೨, ಪುಟ. ೩೧೪

೪೪. ಅದೇ, ಕೊ-೬, ಪುಟ.೧೨

೪೫. ಅದೇ, ಯ-೨೯, ಪುಟ. ೧೮೪

೪೬. ಅದೇ, ಕೊ-೧೪೮, ಪುಟ. ೧೪೫

೪೭. ಅದೇ, ಕು-೨೨, ಪುಟ. ೩೦೨

೪೮. ಅದೇ, ಕು-೨, ಪು.೨೭೭

೪೯. ಅದೇ, ಕು-೧, ಪುಟ. ೨೭೭

೫೦. ಅದೇ, ಯ-೫೩, ಪುಟ. ೨೩೬

೫೧. ಅದೇ, ಯ-೧೬, ಪುಟ. ೧೭೩

೫೨. ಅದೇ, ಕೊ-೨೬, ಪುಟ. ೩೧

೫೩. ಅದೇ, ಕೊ-೧೫೯, ಪುಟ. ೧೫೩

೫೪. ಅದೇ, ಯ-೩೯&೪೭, ಪುಟ. ೨೦೨ &೨೧೮

೫೫. ಅದೇ, ಯ-೨೯, ಪುಟ. ೧೮೪

೫೬. ಅದೇ, ಯ-೩೮, ಪುಟ. ೧೯೭ & ಕೊ-೮, ಪುಟ. ೧೬

೫೭. ಅದೇ, ಯ-೧೩, ಪುಟ. ೧೬೭

೫೮. ಅದೇ, ಕೊ-೨೬, ಪುಟ. ೩೧

೫೯. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧, ಬಳ್ಳಾರಿ-೪೯, ಪುಟ.೬೫

೬೦. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೨ ಕೊ-೧೦೬, ಪುಟ. ೯೯

೬೧. ಅದೇ, ಯ-೪೦, ಪುಟ.೨೦೫

೬೨. ಅದೇ, ಕೊ-೩, ಪುಟ. ೪

೬೩. ಅದೇ, ಯ-೫೨, ಪುಟ. ೨೨೮

೬೪. ಅದೇ, ಕೊ-೩ ಪುಟ. ೪

೬೫. ಅದೇ, ಕೊ-೯ ಪುಟ. ೨೦

೬೬. ಅದೇ, ಯ-೬೯ ಪುಟ. ೪

೬೭. ಅದೇ, ಕೊ-೧೬೪ ಮತ್ತು ೧೬೫, ಪುಟ. ೧೫೭ ಮತ್ತು ೧೫೮

೬೮. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧, ಸಂಡೂರು-೧೪, ಪುಟ. ೨೦೨

೬೯. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೨, ಯ-೬, ಪುಟ. ೧೬೨

೭೦. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧, ಸಂಡೂರು-೧೪, ಪುಟ. ೨೦೨

೭೧. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೨, ಕೊ-೧೬೭, ಪುಟ. ೧೫೯

೭೨. ಅದೇ, ಕೊ-೧೬೬, ಪುಟ. ೧೫೯

೭೩. ಅದೇ, ಗಂ-೨೧, ಪುಟ. ೩೩೫

೭೪. ಅದೇ, ಕೊ-೩೧, ಪುಟ. ೩೮

೭೫. ಅದೇ, ಗಂ-೨೮, ಪುಟ. ೩೪೨

೭೬. ಅದೇ, ಗಂ-೩೪, ಪುಟ. ೩೪೪

೭೭. ಅದೇ, ಯ-೪೮, ಪುಟ. ೨೧೯

೭೮. ಅದೇ, ಗಂ-೩೯, ಪುಟ. ೩೪೭

೭೯. ಅದೇ, ಗಂ-೮೦, ಪುಟ. ೩೬೯

೮೦. ಅದೇ, ಗಂ-೨೦, ಪುಟ. ೩೩೫

೮೧. ಅದೇ, ಕೊ-೧೬೩, ಪುಟ. ೧೫೭

೮೨. ಅದೇ, ಗಂ-೮೦, ಪುಟ. ೩೬೯

೮೩. ಅದೇ, ಗಂ-೯೦, ಪುಟ. ೩೭೯

೮೪. ಅದೇ, ಗಂ-೮೦, ಪುಟ. ೩೬೯ ಮತ್ತು ಕೊ-೧೫೫, ಪುಟ. ೧೩೨

೮೫. ಅದೇ, ಕೊ-೧೩೮, ಪುಟ. ೧೩೪,೧೫೩

೮೬. ಅದೇ, ಕೊ-೧೩೯, ಪುಟ. ೧೩೬

೮೭. ಅದೇ, ಕೊ-೩೯, ಪುಟ. ೪೩

೮೮. ಅದೇ, ಗಂ-೭೩, ಪುಟ. ೩೬೪

೮೯. ಅದೇ, ಗಂ-೯೧, ಪುಟ. ೩೭೯

೯೦. ಅದೇ, ಗಂ-೫೫, ಪುಟ. ೩೫೫

೯೧. ಅದೇ, ಗಂ-೮೦, ಪುಟ. ೩೬೯

೯೨. ಅದೇ, ಯ-೧೪, ಪುಟ. ೧೭೦

೯೩. ಅದೇ, ಯ-೨೨, ಪುಟ. ೧೭೮

೯೪. ಅದೇ, ಗಂ-೩, ಪುಟ. ೩೧೬

೯೫. ಅದೇ, ಗಂ-೨೭, ಪುಟ. ೩೪೧

೯೬. ಅದೇ, ಗಂ-೯೦(ಎ), ಪುಟ. ೩೭೯

೯೭. ಅದೇ, ಕೊ-೧೪೨, ಪುಟ. ೧೪೨

೯೮. ಅದೇ, ಗಂ-೮೯, ಪುಟ. ೩೭೭

೯೯. ಅದೇ, ಗಂ-೭೫, ಪುಟ. ೩೬೭

೧೦೦. ಅದೇ, ಗಂ-೮೫, ಪುಟ. ೩೭೫

೧೦೧. ಕೊಪ್ಪಳ ಜಿಲ್ಲೆ ಮಾನವ ಅಭಿವೃದ್ಧಿ ವರದಿ ೨೦೧೪, ಪುಟ ೩೧-೪೨.

❖❖❖

ಅಧ್ಯಾಯ : ನಾಲ್ಕು

ಅಭಿವೃದ್ಧಿ ಪರಿಕಲ್ಪನೆ

ಅಧ್ಯಾಯ: ನಾಲ್ಕು

ಅಭಿವೃದ್ಧಿ ಪರಿಕಲ್ಪನೆ

ಅಭಿವೃದ್ಧಿ ಎನ್ನುವುದನ್ನು ನಾವು ಈ ಮಾನವನ ಈ ಸಮಾಜದ ಈ ಪರಿಸರದ ಎಲ್ಲ ಬೆಳವಣಿಗೆಯನ್ನು ನಾವು ಅಭಿವೃದ್ಧಿ ಎಂದು ಪರಿಗಣಿಸುತ್ತೇವೆ. ಈ ಅಭಿವೃದ್ಧಿಯಲ್ಲಿ ನಾವು ವಿವಿಧ ಪ್ರಕಾರಗಳನ್ನು ನಾವು ಕಾಣುತ್ತೇವೆ. ಉದಾಹರಣೆಗೆ ಮಾನವ ಅಭಿವೃದ್ಧಿ, ಸ್ವಾತಂತ್ರ್ಯದ ಅಭಿವೃದ್ಧಿ, ಆಧುನೀಕರಣ ಅಭಿವೃದ್ಧಿ, ಮಾರುಕಟ್ಟೆ ಅಭಿವೃದ್ಧಿ, ಗ್ರಾಮೀಣ ಅಭಿವೃದ್ಧಿ, ಮಹಿಳಾ ಅಭಿವೃದ್ಧಿ, ರಾಜಕೀಯ ಅಭಿವೃದ್ಧಿ, ಸಾಮಾಜಿಕ ಅಭಿವೃದ್ಧಿ ಹೀಗೆ ಹಲವು ಅಭಿವೃದ್ಧಿಯನ್ನು ಕಾಣುತ್ತೇವೆ ಹಾಗೂ ಸಾಮಾನ್ಯ ಅಭಿವೃದ್ಧಿ ಕುರಿತು ಈ ಕೆಳಗಿನಂತೆ ವಿವರಣೆಯನ್ನು ನೋಡುತ್ತಾ ಹೋಗೋಣ.

ಅಭಿವೃದ್ಧಿ ಎಂಬ ಚರ್ಚೆ ಇವತ್ತೀನ ಚರ್ಚೆ ಅಲ್ಲ ಅದು ಹಿಂದಿನಿಂದಲೂ ನಡೆದು ಬಂದಿರುವಂತದ್ದು ರಾಜ್ಯ ಹಾಗೂ ಮಾನವನ ಪ್ರಗತಿಗೆ ಸಂಬಂಧ ಪಟ್ಟದ್ದು ಆಗಿರುತ್ತದೆ. ಎರಡನೇ ಮಹಾಯುದ್ಧದ ನಂತರ ಸ್ವತಂತ್ರ್ಯಗೊಂಡ ಹಲವು ರಾಷ್ಟ್ರಗಳು ಅಭಿವೃದ್ಧಿ ಚರ್ಚೆಯ ಚೌಕಟ್ಟಿನಲ್ಲಿ ಕೆಲವು ಸವಾಲುಗಳನ್ನು ಎದುರಿಸಬೇಕಾಯಿತು ಅಭಿವೃದ್ಧಿ ಎನ್ನುವುದು ಮೊದಲು ಆರ್ಥಿಕ ಅಂಶಕ್ಕೆ ಮಾತ್ರ ಸಂಬಂಧಪಟ್ಟಿತ್ತು ನಂತರದಲ್ಲಿ 'ರಾಜಕೀಯ ಕಲ್ಪನೆ' ತನ್ನದಾಗಿಸಿಕೊಂಡಿತ್ತು ಆ ಸಂದರ್ಭದಲ್ಲಿ 'ರಾಜ್ಯದ' ಸ್ಥಿರತೆ ಹಾಗೂ ರಾಷ್ಟ್ರೀಯ ಒಕ್ಕೂಟಗಳೆರಡೂ ಈ ಚರ್ಚೆಯ ಮೂಲ ಗುರಿಯಾಗಿತ್ತು. ಇದೇ ಸಂದರ್ಭದಲ್ಲಿ ವಿಶ್ವಸಂಸ್ಥೆ ಕೂಡಾ ಅಭಿವೃದ್ಧಿ ಚರ್ಚೆಯೆಡೆಗೆ ತನ್ನ ಗಮನ ಹರಿಸಿತು.[೧]

ಟಿ.ಎಚ್ ಬ್ರಾನ್ ಹೇಳಿದಂತೆ ೧೯೩೫-೪೫ ರ ದಶಕದಲ್ಲಿ ಇಡೀ ವಿಶ್ವವೇ ಅಭಿವೃದ್ಧಿ ಚರ್ಚೆಯ ಸೆಳೆತದಲ್ಲಿ ಸಿಲುಕಿಕೊಂಡಿತ್ತು[೨] ಹಾಗೆಯೇ ವಿಶ್ವಸಂಸ್ಥೆಯ ಅಭಿವೃದ್ಧಿ ಆಡಳಿತ ಚರ್ಚೆಯಲ್ಲಿಯೂ ಸಹ ಇಂತಹದೇ ಚರ್ಚಿತ ವಿಷಯವಿದ್ದು, ಅಲ್ಲಿಯೂ ಸರಕಾರಗಳ ಮೇಲೆ ಒತ್ತಡ ಹೇರಲ್ಪಡುತ್ತಿತ್ತು ಹಾಗೂ ಆ ಸಂದರ್ಭದಲ್ಲಿ ಸಾಂಸ್ಥಿಕ ಬದಲಾವಣೆಗಳನ್ನು ತರಬೇಕಾದ ಒತ್ತಡ ಯಾವ ರೀತಿ ಇತ್ತು ಎಂಬುದನ್ನು ಗಮನಿಸಿದರೆ[೩] ಅಭಿವೃದ್ಧಿ ಕುರಿತಾದ ಚರ್ಚೆಯ ಪರಿಕಲ್ಪನಾ ಪ್ರಾಮುಖ್ಯತೆಯ ಬಗ್ಗೆ ಇದ್ದ ಪ್ರಾಥಮಿಕತೆಯನ್ನು ನಾವಿಲ್ಲಿ ಅರ್ಥೈಯಿಸಿ ಕೊಳ್ಳಬಹುದು.

ಎಡ್ವರ್ಡ್‌ಶಿಲ್‌ರವರು ತಮ್ಮ 'ಹೊಸ ರಾಜ್ಯ ರಾಷ್ಟ್ರಗಳಲ್ಲಿ ರಾಜಕೀಯ ಅಭಿವೃದ್ಧಿ' ಎಂಬ ಗ್ರಂಥದಲ್ಲಿ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಬಗ್ಗೆ ವಿಶ್ಲೇಷಿಸಿ ಚರ್ಚಿಸಿ ಅದನ್ನು ಆಧುನಿಕತೆಯ ಪ್ರತಿಬಿಂಬದಂತೆ ರೂಪಿಸುವುದು, ಈ ಚರ್ಚೆಗೆ ದೊರೆತ ಹೊಸ ಪ್ರೇರಣೆಯಾಗಿದೆ.[೪] ಹೀಗೆ ಅಭಿವೃದ್ಧಿ ಎಂಬುದು ಹೊಸದು ಅಲ್ಲ ಹಳೆದೂ ಅಲ್ಲವೆಂಬಂತೆ ಪ್ರತಿಪಾದಿಸಿರುವ ೧೯೯೨ ರ ವಿಶ್ವಬ್ಯಾಂಕಿನ ವರದಿಯು, ಅಭಿವೃದ್ಧಿ ಎಂಬುದು ಕಾಲದಿಂದ ಕಾಲಕ್ಕೆ ಬದಲಾಗುತ್ತಿರುವ ಪರಿಕಲ್ಪನೆ ಎಂಬುದಾಗಿ ಪ್ರತಿಪಾದಿಸಿ ಅದರಲ್ಲಿ ಎಡ್ವರ್ಡ್ ಶಿಲ್‌ರವರು ತಿಳಿದ 'ಆಧುನಿಕತೆ' ಯ ಅಂಶವನ್ನು ಜೀವಂತವಾಗಿ ಉಳಿಸಿದ್ದಾರೆ.

ಬ್ರಾಂಡಟ್ ಕಮಿಷನನ್ ಮುಖ್ಯಸ್ಥರಾಗಿದ್ದ ಬ್ರಾಂಡಟ್ ತಮ್ಮ ಸ್ವತಂತ್ರ ಸಮಿತಿಯ ಅಧ್ಯಯನದಲ್ಲಿ 'ಅಭಿವೃದ್ಧಿ' ಪ್ರಕ್ರಿಯೆ ಹಾಗೂ ಪರಿಕಲ್ಪನೆಯನ್ನು ಕುರಿತು ಅಭಿವೃದ್ಧಿ ಎನ್ನುವುದು ಯಾವುದೇ ಕಾಲದಲ್ಲಿ "ಜಾಗತಿಕ ತೃಪ್ತಿ' ತರುವಂತೆ ವಿವರಿಸಿ ವ್ಯಾಖ್ಯಾನಿಸಲು ಸಾಧ್ಯವಿಲ್ಲವೆಂದು ಅಭಿಪ್ರಾಯ ಪಟ್ಟಿದ್ದಾರೆ. ನಾರಮನ ಉಪಹಾಪ್ ಹಾಗೂ ಎಲ್ಪಮ್ಯಾನ್ ಕೂಡ ವ್ಯಕ್ತಪಡಿಸಿದ್ದಾರೆ.

೪.೧ ಅಭಿವೃದ್ಧಿ ಪರಿಕಲ್ಪನೆಯ ಕೆಲವು ವ್ಯಾಖ್ಯೆಗಳು

ನಗರೀಕರಣದ ರಾಜಕೀಯ ಅಭಿವೃದ್ಧಿಯೆಂಬ ಅಧ್ಯಯನದ ಶೀರ್ಷಿಕೆ ನೋಡಿದಾಗ ಅಭಿವೃದ್ಧಿಯಲ್ಲಿ ಅನೇಕ ಗಣ್ಯವ್ಯಕ್ತಿಗಳ ಪಾತ್ರ ಬಹುಮುಖ್ಯ ಅದೇ ರೀತಿ ಆಡಳಿತಗಾರರು ರಾಜಕೀಯ ವ್ಯಕ್ತಿಗಳ ಯೋಜನೆಗಳನ್ನು ಶಾಸಕಾಂಗದ ಮೂಲಕ ರಚಿಸಿ ಕಾರ್ಯಾಂಗಗಳ ಮೂಲಕ ಜಾರಿಗೆ ತಂದು ಬೆಳವಣಿಗೆಯಲ್ಲಿ ತಮ್ಮ ಪಾತ್ರ ವಹಿಸುತ್ತಾರೆ. ಬೆಳವಣಿಗೆ ಎಂದರೆ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಸಂಸ್ಥೆಗಳಲ್ಲಿ ಬದಲಾವಣೆ ತರುವುದು ಈ ದೃಷ್ಟಿಕೋನದಲ್ಲಿ ಕೆಲವು ವ್ಯಾಖ್ಯಾನಗಳು ಪ್ರಮುಖವೆನಿಸುತ್ತದೆ.

ಗ್ಯಾಬ್ರಿಯಲ್ ಅಲ್‌ಮಂಡ: ರಾಜಕೀಯ ಅಭಿವೃದ್ಧಿ ಎನ್ನುವುದು ರಾಜಕೀಯ ವ್ಯವಸ್ಥೆಯಲ್ಲಿ ಕಾಲಮಾನಕ್ಕೆ ತಕ್ಕಂತೆ ಬದಲಾವಣೆಗಳನ್ನು ತರುವುದು ಮತ್ತು ಸಮಸ್ಯೆಗಳಿಗೆ ಸ್ಪಂದಿಸುವುದು.

ಜಿ. ಬಿ ಎಂಡರ್ : ಅಭಿವೃದ್ಧಿ ತತ್ವವನ್ನು ಗಮನಿಸಿದಲ್ಲಿ ಇದು ಒಂದು ವ್ಯವಸ್ಥೆಯ ಶಕ್ತಿಯ ಬಗ್ಗೆ ವಿವರಣೆ ನೀಡುತ್ತದೆ. ಒಂದು ವ್ಯವಸ್ಥೆಯ ಹೊಸ ವಿಷಯವನ್ನು ಹೇಗೆ ತನ್ನದಾಗಿಸಿಕೊಳ್ಳಬಹುದು ಮತ್ತು ಅಭಿವೃದ್ಧಿ ಕಾರ್ಯಗಳನ್ನು ತರುವಲ್ಲಿ ಒಂದು ಸಂಸ್ಥೆ ವಹಿಸುವ ಪಾತ್ರ ಮತ್ತು ರಚನೆಯ ಬಗ್ಗೆ ಮಾಹಿತಿ ನೀಡಿದ್ದಾರೆ.

ಟಿ. ಕೆ. ಎನ್. ಉನ್ನಿನಾತನ : ಸಮಾಜದಲ್ಲಿ ಜನರಿಗೆ ಹೊಸ ಅವಕಾಶಗಳನ್ನು ಸೃಷ್ಟಿಸಿ ಅವರನ್ನು ಸಮಗ್ರ ಅಭಿವೃದ್ಧಿಯತ್ತ ಕೊಂಡ್ಯೊಯುವ ಒಂದು ಪ್ರಕ್ರಿಯೆಯಾಗಿದೆ. ಮುಂದುವರೆದು ಅಭಿವೃದ್ಧಿಯೆಂದರೆ ಒಂದು ರಾಜಕೀಯ ವ್ಯವಸ್ಥೆಯು ಎಷ್ಟರ ಮಟ್ಟಿಗೆ ರಾಜಕೀಯ ಸಮಸ್ಯೆಗಳನ್ನು ಬಗೆಹರಿಸುತ್ತದೆ ಮತ್ತು ಜನರ ರಾಜಕೀಯ ಬೇಡಿಕೆಗಳನ್ನು ಪೂರೈಸುವ ಕ್ಷಮತೆಯನ್ನು ಎಷ್ಟರ ಮಟ್ಟಿಗೆ ಹೊಂದಿದೆ ಎಂಬುವುದನ್ನು ವಿವರಿಸುವುದು ಎಂದಿದ್ದಾರೆ.

ರೋಸ್ಟರ್ : ಯಾವ ದೇಶದಲ್ಲಿ ಹೇರಳವಾಗಿ ಸ್ವಾಭಾವಿಕ ಸಂಪನ್ಮೂಲಗಳು ದೊರಕುತ್ತಿದ್ದು ಆ ದೇಶದಲ್ಲಿ ತಂತ್ರಜ್ಞಾನ ಮತ್ತು ಕೈಗಾರಿಕೆಗಳು ಬೆಳವಣಿಗೆ ಹೊಂದಿದ್ದರೆ ಅದನ್ನು ಅಭಿವೃದ್ಧಿ ಎನ್ನುತ್ತಾರೆ. ಮುಂದುವರೆದು ನಾಗರಿಕ ಹಕ್ಕುಗಳು ಯಾವುದೇ ನಿರ್ಬಂಧವಿಲ್ಲದೆ ಎಲ್ಲರಿಗೂ ದೊರಕುತ್ತಿರಬೇಕು ಅದನ್ನು ಅಭಿವೃದ್ಧಿ ಎನ್ನುತ್ತಾರೆ.

ಪಾರ್ಕಿನಸನ್ : ಸಿಗುವ ಎಲ್ಲಾ ಅವಕಾಶಗಳನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡು ಮಾನವನು ತನ್ನ ಸ್ವಭಾವವನ್ನು ಅನುರೂಪವಿಟ್ಟುಕೊಂಡು ಬದಲಾವಣೆಗಳನ್ನು ತರುವುದೇ ಅಭಿವೃದ್ಧಿ

ಭೌಂಡವಿಲ್ : ಗುಣಾತ್ಮಕ ಮತ್ತು ಪರಿಮಾಣಾತ್ಮಕ ಬದಲಾವಣೆಗಳನ್ನು ತರುವುದೇ ಅಭಿವೃದ್ಧಿ ಎನ್ನುತ್ತಾರೆ.

ಡೆವಸ್ಕಿ: ಆರ್ಥಿಕ ವ್ಯವಸ್ಥೆಯಲ್ಲಿ ಅಭಿವೃದ್ಧಿಯೆಂದರೆ ತಲಾ ಆದಾಯದ ಮೇಲೆ ಬೆಳವಣಿಗೆಯನ್ನು ಮೌಲ್ಯಮಾಪನ ಮಾಡುವುದು ಹಾಗೂ ಉತ್ಪಾದನಾ ತಂತ್ರಗಳು ಮತ್ತು ಬಳಕೆದಾರರ ನಡುವಿನ ಸಂಬಂಧವನ್ನು ವಿಶ್ಲೇಷಿಸಿದ್ದಾರೆ.

ಈ ಮೇಲಿನ ಎಲ್ಲಾ ವ್ಯಾಖ್ಯೆಗಳನ್ನು ಗಮನಿಸಿದಾಗ ಮಾನವನ ಸಮಗ್ರ ಬೆಳವಣಿಗೆ ಎಂದರೆ ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ, ತಂತ್ರಜ್ಞಾನ, ಕೈಗಾರಿಕೆಗಳಲ್ಲಿ ಮುಂದುವರೆಯುವುದನ್ನು ನಾವು ಅಭಿವೃದ್ಧಿ ಎನ್ನುತ್ತೇವೆ. ಇದರ ಜೊತೆಗೆ ಮುಕ್ತ ಸಮಾಜ ಹೊಂದಿ ಎಲ್ಲರಿಗೂ ಎಲ್ಲದರಲ್ಲಿ ಮುಕ್ತ ಅವಕಾಶ ನೀಡುವುದಾಗಿದೆ.

ಅಭಿವೃದ್ಧಿ ಪದಕ್ಕೆ ಎರಡು ಅರ್ಥಗಳಿವೆ ಒಂದು ಜೀವಿಗಳ ಅಭಿವೃದ್ಧಿ ಮತ್ತು ಎರಡು ಸಾಮಾಜಿಕ ಅಭಿವೃದ್ಧಿ ಗಿಡಮರಗಳು ಮೂಲದಲ್ಲಿ ಬೀಜ ರೂಪದಲ್ಲಿದ್ದು ನಂತರ ಮೊಳಕೆ ಒಡೆದು ಮರವಾಗುವುದು ಪ್ರಾಣಿ ಪಕ್ಷಿಗಳು ಭ್ರೂಣದಲ್ಲಿದ್ದು ಮಗುವಾಗುವುದು. ನಂತರ ಬೆಳೆದು ದೊಡ್ಡವರಾಗುವುದು ಇವೆಲ್ಲವು ಜೀವಿಗಳ ಅಭಿವೃದ್ಧಿಯನ್ನು ಅಥವಾ ವಿಕಸನವನ್ನು ಸೂಚಿಸುತ್ತವೆ. ಒಂದು ಕಾಲದಲ್ಲಿ ಅಭಿವೃದ್ಧಿಯನ್ನು ಕೂಡಾ ಜೀವಿಗಳ ಅಭಿವೃದ್ಧಿ ರೀತಿಯಲ್ಲಿ ಕಲ್ಪಿಸಿಕೊಳ್ಳಲಾಗಿತ್ತು. ಇದನ್ನು ಸೋಷಿಯಲ್ ಡಾರ್ವಿನಿಸಂ ಎನ್ನುತ್ತಾರೆ. ಅಂದರೆ ವಿಕಾಸವಾದದ ಹಿನ್ನೆಲೆಯಿಂದ ಸಾಮಾಜಿಕ, ಆರ್ಥಿಕ, ರಾಜಕೀಯ ಬೆಳವಣಿಗೆಗಳನ್ನು ನೋಡುವ ಕ್ರಮ ಇದು ವಿಕಸನದ ಹಲವು ಹಂತಗಳನ್ನು ದಾಟಿದ ನಂತರ ಮನುಷ್ಯ ಪರಿಪೂರ್ಣ ಹಂತ ತಲುಪಿದನೆಂದು ವಿಕಾಸವಾದ ಹೇಳುತ್ತದೆ. ಅದೇ ರೀತಿಯಲ್ಲಿ ವ್ಯಕ್ತಿ, ಕುಟುಂಬ, ಪ್ರದೇಶಗಳು ಒಮ್ಮೆಲೆ ಅಭಿವೃದ್ಧಿ ಹೊಂದುವುದಿಲ್ಲ ಅಭಿವೃದ್ಧಿಯ ಹಲವು ಹಂತಗಳನ್ನು ದಾಟಿದ ನಂತರ ಪರಿಪೂರ್ಣ ಅಭಿವೃದ್ಧಿ ಸಾಧ್ಯ ಎನ್ನುವುದು ಅಭಿವೃದ್ಧಿ ಚಿಂತನೆಗಳ ವಿಕಾಸವಾದ.[೫]

ಎಡಪಂಥೀಯ ಮತ್ತು ಬಲಪಂಥೀಯ ಚಿಂತಕರು ಅಭಿವೃದ್ಧಿಯ ಹಂತಗಳನ್ನು ಗುರುತಿಸಿದ್ದಾರೆ. ಮೊದಲು ಸ್ಲೇವರಿ, ನಂತರ ಫ್ಯೂಡಲಿಸಂ ಅನಂತರ ಕ್ಯಾಪಿಟಲಿಸಂ ಕೊನೆಗೆ ಕಮ್ಯೂನಿಸಮ್ ಇದು ಎಡಪಂಥೀಯರು ಗುರುತಿಸಿದ ಅಭಿವೃದ್ಧಿಯ ಹಂತಗಳು ಡಬ್ಲ್ಯು ಡಬ್ಲ್ಯು ರೋಸ್ಟೋ(೧೯೬೦)

ಅಭಿವೃದ್ಧಿಯ ಹಲವು ಹಂತಗಳನ್ನು ಗುರುತಿಸಿದ್ದಾರೆ.[೬] ಈಗಾಗಲೇ ಅಭಿವೃದ್ಧಿ ಹೊಂದಿದವರ ಇತಿಹಾಸವನ್ನು ಗಮನದಲ್ಲಿಟ್ಟುಕೊಂಡು ಅಭಿವೃದ್ಧಿಯ ಈ ಹಂತಗಳನ್ನು ಗುರುತಿಸಲಾಗಿದೆ. ಹೆಚ್ಚು ಕಡಿಮೆ ಎಲ್ಲ ಸಂಸ್ಕೃತಿಗಳು ಇದೇ ದಾರಿಯಲ್ಲಿ ಅಭಿವೃದ್ಧಿಗೊಳ್ಳುವುದೆನ್ನುವ ವಾದವನ್ನು ಅಭಿವೃದ್ಧಿಯ ವಿಕಾಸವಾದ ಹೇಳುತ್ತದೆ. ಅಂದರೆ ಇಂದು ಅಭಿವೃದ್ಧಿಗೊಂಡವರು ಅನಭಿವೃದ್ಧಿಗೊಂಡ ಸಂಸ್ಕೃತಿಗಳಲ್ಲಿ ತಮ್ಮ ಭೂತವನ್ನು ನೋಡಿದರೆ ಅನಭಿವೃದ್ಧಿಗೊಂಡಿರುವವರು ಅಭಿವೃದ್ಧಿಗೊಂಡ ಸಂಸ್ಕೃತಿಗಳಲ್ಲಿ ತಮ್ಮ ಭವಿಷ್ಯವನ್ನು ನೋಡುತ್ತಿರುತ್ತಾರೆ. ಆದರೆ ಇಂದು ವಿಕಾಸವಾದ ಹಿನ್ನೆಲೆಯಿಂದ ರೂಪಿತಗೊಂಡ ಇಂತಹ ಅಭಿವೃದ್ಧಿ ಕಲ್ಪನೆಗಳನ್ನು ಯಾರೂ ಗಂಭೀರವಾಗಿ ಪರಿಗಣಿಸುವುದಿಲ್ಲ.[೭]

ಇವತ್ತು ಅಭಿವೃದ್ಧಿಯನ್ನು ಸಾಮಾಜಿಕ ಅಭಿವೃದ್ಧಿ ಎನ್ನುವ ಅರ್ಥದಲ್ಲಿ ಹೆಚ್ಚು ಬಳಸುತ್ತಾರೆ ಸಾಮಾಜಿಕ ಅಭಿವೃದ್ಧಿ ಎಂದಾಗಲೂ ಹಲವು ಸಂದರ್ಭಗಳಲ್ಲಿ ಇದು ಆರ್ಥಿಕ ಪರಿವರ್ತನೆಗಳಿಗೆ ಸೀಮಿತಗೊಂಡಂತೆ ಬಳಕೆಯಾಗುತ್ತಿದೆ ಕೃಷಿ, ಕೈಗಾರಿಕೆ, ಸೇವಾವಲಯಗಳಲ್ಲಿ ವಿಜ್ಞಾನ ತಂತ್ರಜ್ಞಾನಗಳನ್ನು ಬಳಿಸಿ ಉತ್ಪಾದನೆ ಹೆಚ್ಚಿಸುವುದು, ಸಾರಿಗೆ ಸಂಪರ್ಕ, ವಸತಿ, ಶಿಕ್ಷಣ, ಆರೋಗ್ಯ ಇತ್ಯಾದಿ ಮೂಲ ಸೌಕರ್ಯಗಳನ್ನು ಪೂರೈಸುವುದು ಎನ್ನುವ ಅರ್ಥದಲ್ಲಿ ಅಭಿವೃದ್ಧಿಯನ್ನು ನೋಡಲಾಗುತ್ತಿದೆ ಆರ್ಥಿಕ ಕ್ಷೇತ್ರದ ಅಭಿವೃದ್ಧಿಯಿಂದ ಆಧುನಿಕ ಸರಕು ಸೇವೆಗಳ ಉತ್ಪಾದನೆ ಮತ್ತು ಪೂರೈಕೆ ಹೆಚ್ಚಾಗುತ್ತದೆ. ಸರಕು ಸೇವೆಗಳ ಉತ್ಪಾದನೆ ಮತ್ತು ಪೂರೈಕೆ ಹೆಚ್ಚಾದರೆ ಎಲ್ಲರೂ ಕಡಿಮೆ ಬೆಲೆಗೆ ಆಧುನಿಕ ಸರಕು ಸೇವೆಗಳನ್ನು ಖರೀದಿಸಿ ಅನುಭವಿಸಬಹುದು.[೮] ಆಧುನಿಕ ಸರಕು ಸೇವೆಗಳನ್ನು ಅನುಭವಿಸುವ ಮೂಲಕ ಜನರು ಆಧುನಿಕರಾಗುತ್ತಾರೆ ಅಥವಾ ಅಭಿವೃದ್ಧಿ ಹೊಂದುತ್ತಾರೆ ಎನ್ನುವ ಪರಿಕಲ್ಪನೆ ಇಲ್ಲಿದೆ.

ಸರಕು ಸೇವೆಗಳ ಪೂರೈಕೆ ಮತ್ತು ಅಭಿವೃದ್ಧಿ ನಡುವಿನ ಸಂಬಂಧವನ್ನು ಈ ಕೆಳಗಿನ ಸಂಗತಿಗಳು ವಿವರಿಸುತ್ತವೆ. ಸರಕು ಸೇವೆಗಳ ಪೂರೈಕೆ ಹೆಚ್ಚಾದರೆ ಎಲ್ಲರಿಗೂ ಕಡಿಮೆ ವೆಚ್ಚದಲ್ಲಿ ಸರಕು ಸೇವೆಗಳು ಲಭ್ಯವಾದರೆ ಸರಕಾರ ಬಡತನ ನಿವಾರಣೆ ಮೇಲೆ ಪ್ರತ್ಯೇಕ ಖರ್ಚು ಮಾಡುವ ಅಗತ್ಯವಿರುವುದಿಲ್ಲ. ಸರಕು ಸೇವೆಗಳ ಉತ್ಪಾದನೆ ಹೆಚ್ಚಿಸುವುದರಿಂದ ಉದ್ಯೋಗ ಸೃಷ್ಟಿಯಾಗುತ್ತದೆ. ಆವಾಗ ಸರಕಾರ ನಿರುದ್ಯೋಗ ನಿವಾರಣೆಗೆ ಪ್ರತ್ಯೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಅಗತ್ಯವಿರುವುದಿಲ್ಲ.

ಸರಕು ಸೇವೆಗಳ ಉತ್ಪಾದನೆ ಹೆಚ್ಚಿಸುವುದರಿಂದ ತೆರಿಗೆ ಸಂಗ್ರಹ ಹೆಚ್ಚಾಗುತ್ತದೆ. ತೆರಿಗೆ ಸಂಗ್ರಹ ಹೆಚ್ಚಾದರೆ ಸರಕಾರ ಜನಸಾಮಾನ್ಯರ ಶಿಕ್ಷಣ, ಆರೋಗ್ಯಗಳ ಮೇಲೆ ಖರ್ಚು ಮಾಡುವುದು ಸುಲಭವಾಗುತ್ತದೆ. ಹೀಗೆ ಆರ್ಥಿಕ ಅಭಿವೃದ್ಧಿಯನ್ನು ಅಭಿವೃದ್ಧಿಯೆಂದು ವ್ಯಾಖ್ಯಾನಿಸುವುದು ಹಿಂದಿನಿಂದಲೂ ಇದೆ.[೯]

ಸರಕು ಸೇವೆಗಳ ಉತ್ಪಾದನೆ ಹೆಚ್ಚಾದ ಕೂಡಲೇ ಸಮಾಜದ ಎಲ್ಲರಿಗೂ ಸರಕು ಸೇವೆಗಳು ಲಭ್ಯವಾಗುತ್ತವೆಯೇ ಎನ್ನುವ ಪ್ರಶ್ನೆ ಹುಟ್ಟುತ್ತದೆ ಖಂಡಿತವಾಗಿಯೂ ಇಲ್ಲ. ಇಲ್ಲ ಎನ್ನುವುದನ್ನು

ಸಾಬೀತು ಪಡಿಸಲು ಸಾಕಷ್ಟು ಪುರಾವೆಗಳನ್ನು ನೀಡಬಹುದು. ಅಭಿವೃದ್ಧಿಯನ್ನು ಆರ್ಥಿಕ ಅಭಿವೃದ್ಧಿಯೆಂದು ವ್ಯಾಖ್ಯಾನಿಸುವ ವ್ಯವಸ್ಥೆಯಲ್ಲಿ ಬಡತನ ಸಿರಿತನವನ್ನು ವ್ಯಕ್ತಿ ಕುಟುಂಬಗಳು ಅನುಭೋಗಿಸುವ ಸರಕು ಸೇವೆಗಳ ಪ್ರಮಾಣದಿಂದ ಮಾಪನ ಮಾಡಲಾಗುತ್ತಿದೆ. ವ್ಯಕ್ತಿ ಕುಟುಂಬಗಳು ಅನುಭೋಗಿಸುವ ಸರಕು ಸೇವೆಗಳು ಹೆಚ್ಚಾದಂತೆ ಬಡವರ್ಗದಿಂದ ಮಧ್ಯಮ ವರ್ಗಕ್ಕೆ ಮತ್ತು ಮಧ್ಯಮ ವರ್ಗದಿಂದ ಶ್ರೀಮಂತ ವರ್ಗಕ್ಕೆ ಚಲಿಸುತ್ತಾರೆ. ವ್ಯಕ್ತಿ ತನ್ನ ಕನಿಷ್ಟ ಅವಶ್ಯಕತೆಗಳನ್ನು ಖರೀದಿಸಲು ಹೊಂದಿರಬೇಕಾದ ಆದಾಯವನ್ನು ಬಡತನ ರೇಖೆಯ ಆದಾಯವೆನ್ನುತ್ತಾರೆ.[೧೦]

ಇಂತಹ ಬಡತನ ರೇಖೆಯ ಆದಾಯದ ಪ್ರಕಾರ ಪ್ರಪಂಚದ ಬಡವರ ಶೇ೨೦ ರಷ್ಟು ಬಡವರು ನಮ್ಮಲ್ಲಿದ್ದಾರೆ. ಸರಕಾರದ ಬಡತನದ ರೇಖೆ ಪ್ರಕಾರ ನಮ್ಮ ಜನಸಂಖ್ಯೆಯ ಶೇ.೨೬ರಷ್ಟು ಬಡವರಿದ್ದಾರೆ. ಸರಕಾರದ ಬಡತನ ರೇಖೆಯ ಬದಲು ಅಂತರಾಷ್ಟ್ರೀಯ ಬಡತನ ರೇಖೆಯಿಂದ (೧.೨೫ಡಾಲರ್) ನಮ್ಮ ದೇಶದ ಬಡತನ ಮಾಪನ ಮಾಡಿದರೆ ಶೇ೪೦ ರಷ್ಟು ಜನ ಬಡತನ ರೇಖೆಗಿಂತ ಕೆಳಗಿದ್ದಾರೆ. ಇದೇ ಮಾನದಂಡವನ್ನು ಎರಡು ಡಾಲರಗೆ ಏರಿಸಿದರೆ ಶೇ.೭೭ ಜನ ಬಡತನ ರೇಖೆಗಿಂತ ಕೆಳಗಿದ್ದಾರೆ. ಆದುದರಿಂದ ಸರಕು ಸೇವೆಗಳ ಉತ್ಪಾದನೆ ಹೆಚ್ಚಾದ ಕೂಡಲೇ ಅಥವಾ ಆರ್ಥಿಕ ಅಭಿವೃದ್ಧಿಯಿಂದೆಲ್ಲರೂ ಅಭಿವೃದ್ಧಿ ಹೊಂದುವುದಿಲ್ಲ. ಏಕೆಂದರೆ ಆರ್ಥಿಕಭಿವೃದ್ಧಿಯಿಂದ ಹೆಚ್ಚಾದ ಸರಕು ಸೇವೆಗಳನ್ನು ಎಲ್ಲರೂ ಅನುಭವಿಸಬೇಕಾದರೆ ಎರಡು ಸಂಗತಿಗಳಿರಬೇಕು.[೧೧]

ಆರ್ಥಿಕ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಒಂದೋ ಭೂಮಿ ಬೇಕು ಇಲ್ಲವೇ ಬಂಡವಾಳ ಬೇಕು, ಇಲ್ಲವೇ ಶಿಕ್ಷಣ ಆರೋಗ್ಯಗಳು ಬೇಕು. ಈ ಮೂರರಲ್ಲಿ ಒಂದೂ ಇಲ್ಲದವರು ಬಡವರಾಗುವ ಇಲ್ಲವೇ ಭಿಕ್ಷುಕರಾಗುವ ಇಲ್ಲವೇ ದರೋಡೆ ಮಾಡಬೇಕು, ಇಲ್ಲವೇ ಆತ್ಮಹತ್ಯೆ ಮಾಡಿಕೊಳ್ಳಬೇಕಾದ ಸ್ಥಿತಿ ಇದೆ.ಎಲ್ಲರಿಗೂ ಭೂಮಿ ಬಂಡವಾಳ ಕೊಡುವುದು ಕಷ್ಟ. ಆದರೆ ಶಿಕ್ಷಣ ಆರೋಗ್ಯಗಳನ್ನು ಕೊಡುವುದು ಭೂಮಿ, ಬಂಡವಾಳ ಕೊಡುವಷ್ಟು ಕಷ್ಟದ ಕೆಲಸವಲ್ಲ. ಹೀಗೆ ಅಭಿವೃದ್ಧಿ ವ್ಯಾಖ್ಯಾನ ಮಾನವ ಅಭಿವೃದ್ಧಿಯ ರೂಪ ಪಡೆದಿದೆ. ಅಂದರೆ ಎಲ್ಲರೂ ಕೃಷಿಕರಾಗಿ ಅಥವಾ ಉದ್ಯಮಿಗಳಾಗಿ ಕೃಷಿ ಮತ್ತು ಉದ್ದಿಮೆಗಳ ಅಭಿವೃದ್ಧಿಗಾಗಿ ಸರಕಾರ ವಿನಿಯೋಜಿಸುವ ಸಂಪನ್ಮೂಲಗಳ ಲಾಭ ಪಡೆಯಲು ಸಾಧ್ಯವಿಲ್ಲ. ಇದನ್ನು ಇನ್ನೊಂದು ವಿಧದಲ್ಲಿ ಹೇಳುವುದಾದರೆ ಕಾರ್ಖಾನೆಗಳು ಅಭಿವೃದ್ಧಿಯಾದರೆ ಸಾಲದು, ಕೃಷಿ, ಕಾರ್ಖಾನೆಗಳ ಅಭಿವೃದ್ಧಿ ಸೃಷ್ಟಿಸುವ ಹೊಸ ಹೊಸ ಅವಕಾಶಗಳನ್ನು ಬಳಸಿಕೊಳ್ಳಬೇಕಾದರೆ ಶಿಕ್ಷಣ, ಆರೋಗ್ಯಗಳು ಕೂಡ ಮುಖ್ಯವೆಂದು ಮಾನವ ಅಭಿವೃದ್ಧಿ ಪ್ರತಿಪಾದಿಸುತ್ತದೆ. ಶಿಕ್ಷಣ ಆರೋಗ್ಯಗಳು ಆರ್ಥಿಕಾಭಿವೃದ್ಧಿಯನ್ನು ಜೀರ್ಣಿಸಿಕೊಳ್ಳುವ ಶಕ್ತಿ ನೀಡಬಹುದು. ಆದರೆ ಜಾತಿ, ಲಿಂಗ, ಧರ್ಮಗಳು ಸೃಷ್ಟಿಸುವ ಅಸಾಮರ್ಥ್ಯಗಳನ್ನು ದೂರ ಮಾಡಲು ಇವು ಸಾಲದು. ಸಾಮಾಜಿಕ ಸಾಮರ್ಥ್ಯಗಳು ವೃದ್ಧಿಯಾಗದಿದ್ದರೆ ಜನರು ಅಭಿವೃದ್ಧಿಯಾಗಲು ಸಾಧ್ಯವಿಲ್ಲ. ಇವೆಲ್ಲವನ್ನು ಅಭಿವೃದ್ಧಿಯ ಮಾನವ ಅಭಿವೃದ್ಧಿ, ಸ್ವಾತಂತ್ರ್ಯ ಸಮಾನತೆಯ ಕಲ್ಪನೆಗಳಲ್ಲಿ ಚರ್ಚಿಸಲಾಗಿದೆ.[೧೨]

೪.೨ ಅಭಿವೃದ್ಧಿ ಪ್ರಕಾರಗಳು

ಮಾನವ ಅಭಿವೃದ್ಧಿ : ಕೇವಲ ಆರ್ಥಿಕ ಅಭಿವೃದ್ಧಿಯಿಂದ ಮಾತ್ರ ಸಮಾಜ ಪರಿವರ್ತನೆ ಸಾಧ್ಯವಿಲ್ಲ ಎನ್ನುವುದು ಅರಿವಿಗೆ ಬಂದನಂತರ ಮಾನವ ಅಭಿವೃದ್ಧಿ ಕಲ್ಪನೆ ಪ್ರಚಲಿತಕ್ಕೆ ಬಂದಿದೆ. ಮನುಷ್ಯನಿಗೆ ಕೇವಲ ಹಣವಿದ್ದರೆ ಸಾಲದು ಆ ಹಣವನ್ನು ಸರಿಯಾಗಿ ಸದುಪಯೋಗ ಮಾಡಬೇಕಾದರೆ ಶಿಕ್ಷಣ ಬೇಕು ಮತ್ತು ಹಣವನ್ನು ಅನುಭವಿಸಲು ಆರೋಗ್ಯಬೇಕು. ಆದ್ದರಿಂದ ಉತ್ತಮ ಆರೋಗ್ಯ ಮತ್ತು ಶಿಕ್ಷಣ ಹೊಂದುವುದು ಅಭಿವೃದ್ಧಿಯ ಗುರಿಯಾಗಿದೆ. ಹೀಗೆ ಆರ್ಥಿಕಭಿವೃದ್ಧಿಯಲ್ಲಿ ಎಲ್ಲರೂ ಪಾಲ್ಗೊಳ್ಳಲು ಸಾಧ್ಯವಾಗುವ ಸಾಮಾಜಿಕ ಪರಿಸರವನ್ನು ಮಾನವ ಅಭಿವೃದ್ಧಿ ರೂಪಿಸುತ್ತದೆ. ಎನ್ನುವ ಗ್ರಹಿಕೆ ಇದೆ ಅಷ್ಟು ಮಾತ್ರವಲ್ಲ ಪ್ರದೇಶವೊಂದರಲ್ಲಿ ಸೃಷ್ಟಿಯಾದ ಆದಾಯ ಯಾವ ಉದ್ದೇಶಕ್ಕೆ ಬಳಕೆಯಾಗಿದೆ ಎನ್ನುವುದನ್ನು ಮಾನವ ಅಭಿವೃದ್ಧಿ ಸೂಚಿಸುತ್ತದೆ.[೧೩] ಪ್ರದೇಶವೊಂದು ಸಾಧಿಸಿದ ಆರ್ಥಿಕ ಪ್ರಗತಿ ಎಲ್ಲರಿಗೆ ಹಂಚಿಕೆಯಾಗಬೇಕಾದರೆ ಅಲ್ಲಿನ ಸಾಮಾಜಿಕ, ಆರ್ಥಿಕ ಮೂಲ ಸೌಕರ್ಯಗಳು ಅಭಿವೃದ್ಧಿಯಾಗಬೇಕು. ಅಂದರೆ ಅಲ್ಲಿನ ಶಿಕ್ಷಣ, ಆರೋಗ್ಯ, ವಸತಿ, ಕುಡಿಯುವ ನೀರು, ಸಾರಿಗೆ–ಸಂಪರ್ಕ, ಬ್ಯಾಂಕಿಂಗ್ ಇತ್ಯಾದಿ ಮೂಲ ಸೌಕರ್ಯಗಳು ಅಭಿವೃದ್ಧಿಯಾಗಬೇಕು ಇವುಗಳ ಮೇಲೆ ವಿನಿಯೋಜನೆಯಾದರೆ ಜನರ ಆರೋಗ್ಯ, ಶಿಕ್ಷಣ, ವಸತಿಗಳು ಕೂಡ ಸುಧಾರಣೆಯಾಗುತ್ತವೆ. ಆರೋಗ್ಯ, ಶಿಕ್ಷಣಗಳು ಜನರ ಆಯ್ಕೆಗಳನ್ನು ಹೆಚ್ಚಿಸುವ ಬಹು ಮುಖ್ಯ ಸಾಧನಗಳು ಕೂಡ ಈ ಕಾರಣದಿಂದಲೂ ಮಾನವ ಅಭಿವೃದ್ಧಿ ಆದಾಯದೊಂದಿಗೆ ಆರೋಗ್ಯ ಶಿಕ್ಷಣಗಳನ್ನು ತನ್ನ ವ್ಯಾಪ್ತಿಯೊಳಗೆ ತಂದಿದೆ. ಇದನ್ನೇ ಇನ್ನೊಂದು ವಿಧದಲ್ಲಿ ಹೇಳುವುದಾದರೆ ಇದು ಕೇವಲ ಆರ್ಥಿಕ ಪ್ರಗತಿಯನ್ನು ಮಾತ್ರ ಪರಿಗಣಿಸುವುದಲ್ಲ ಸಾಮಾಜಿಕ ಪ್ರಗತಿಯನ್ನು ಪರಿಗಣಿಸುತ್ತದೆ ಎನ್ನುವ ಹೆಗ್ಗಳಿಕೆ ಇದೆ.[೧೪]

ಮಾನವ ಅಭಿವೃದ್ಧಿ ಸಾಮಾಜಿಕ ಪ್ರಗತಿಯನ್ನು ಪರಿಗಣಿಸುವ ಮೂಲಕ ಸಂಪನ್ಮೂಲದ ವಿತರಣೆಯನ್ನು ಕೂಡಾ ಪರಿಗಣಿಸುತ್ತಿದೆ ಎನ್ನುವ ಅಭಿಪ್ರಾಯವಿದೆ ಸ್ವಲ್ಪಮಟ್ಟಿಗೆ ಇದು ಸರಿ ಕೂಡಾ. ಅಮೆರಿಕಾ ಇಡೀ ಪ್ರಪಂಚದಲ್ಲೇ ಶ್ರೀಮಂತ ರಾಷ್ಟ್ರ ಆರ್ಥಿಕಾಭಿವೃದ್ಧಿಯಲ್ಲಿ ೭ ಅಥವಾ ೮ ನೇ ಸ್ಥಾನದಲ್ಲಿದೆ.[೧೫] ಆದರೆ ಅಲ್ಲೂ ದೊಡ್ಡ ಸಂಖ್ಯೆ ಬಡವರಿದ್ದಾರೆ, ವಸತಿಹೀನರಿದ್ದಾರೆ, ಆರೋಗ್ಯ ಸವಲತ್ತುಗಳಿಲ್ಲದವರಿದ್ದಾರೆ.[೧೬] ಇವರ ಸ್ಥಿತಿಗತಿಯನ್ನು ಆರ್ಥಿಕಾಭಿವೃದ್ಧಿ ಬಿಂಬಿಸುತ್ತಿಲ್ಲ, ಅಮೆರಿಕಾದ ಉದಾಹರಣೆ ಏಕೆ ನಮ್ಮದೇ ದೇಶದ ಅಥವಾ ರಾಜ್ಯಗಳ ಉದಾಹರಣೆ ನೋಡಿದರೆ ಆರ್ಥಿಕಾಭಿವೃದ್ಧಿ ಉತ್ತಮ ಅಭಿವೃದ್ಧಿ ಮಾದರಿಯಲ್ಲ ಎನ್ನುವುದು ಖಚಿತವಾಗುತ್ತದೆ. ನಮ್ಮ ದೇಶದಲ್ಲಿ ಪಂಜಾಬ, ಹರಿಯಾಣ, ಗುಜರಾತ ಇವೆಲ್ಲ ಆರ್ಥಿಕಭಿವೃದ್ಧಿ ದೃಷ್ಟಿಯಿಂದ ಶ್ರೀಮಂತ ರಾಜ್ಯಗಳು, ರಾಜ್ಯ ಶ್ರೀಮಂತವಾಗಿರುವುದರಿಂದ ತಲಾ ಆದಾಯ ಹೆಚ್ಚಿದೆ ಆದರೆ ಅಲ್ಲಿ ಎಲ್ಲರು ಶಿಕ್ಷಣ, ಆರೋಗ್ಯ, ಅಭಿವೃದ್ಧಿ ಹೊಂದಿಲ್ಲ.[೧೭]

ಪ್ರಖ್ಯಾತ ಅರ್ಥ ವಿಜ್ಞಾನಿ ದೀಪಕ್ ನಯ್ಯಾರ್ ತಮ್ಮ ಇತ್ತೀಚಿಗಿನ ಪ್ರಸಿದ್ಧ ಪ್ರಬಂಧವೊಂದರಲ್ಲಿ ಇಪ್ಪತ್ತನೆಯ ಶತಮಾನದ ಉತ್ತರಾರ್ಧ ಭಾಗದಲ್ಲಿ (೧೯೫೦ ರ ನಂತರ) ಭಾರತವು ಅನುಭವಿಸಿದ

ದೊಡ್ಡ ವೈಫಲ್ಯವೆಂದರೆ ವರ್ಧನೆಯಾದ ವರಮಾನವನ್ನು ಅಭಿವೃದ್ಧಿಯನ್ನಾಗಿ ಪರಿವರ್ತನೆ ಮಾಡಿಕೊಳ್ಳದಿರುವುದು[೧೮] ಎಂಬ ಮಾತು ಹೇಳಿದ್ದಾರೆ. ಯು.ಎನ್.ಡಿ.ಪಿ ಯು ಪ್ರಕಟಿಸಿರುವ ೨೦೦೭ ರ ಮಾನವ ಅಭಿವೃದ್ಧಿ ವರದಿ ಕುರಿತು ಚರ್ಚಿಸುತ್ತಾ ಭಾರತವನ್ನು ವರಮಾನ ಉನ್ನತ ಮಟ್ಟವನ್ನು ಅಭಿವೃದ್ಧಿಯಲ್ಲಿ ಕೆಳಮಟ್ಟವನ್ನು ಸಾಧಿಸಿಕೊಂಡಿರುವ ದೇಶವೆಂದು ಹೇಳುತ್ತಾರೆ.[೧೯] ವರಮಾನದ ಮೊತ್ತವೇ ಜನರ ಬದುಕಲ್ಲ.[೨೦]

ಅತ್ಯಂತ ಕುತೂಹಲದ ಸಂಗತಿಯೆಂದರೆ ವರಮಾನ ವರ್ಧನಾ ಅಭಿವೃದ್ಧಿ ಸಿದ್ಧಾಂತದ ಇತಿಮಿತಿಗಳನ್ನು ಇನ್ನಿಲ್ಲದಂತೆ ಅಮರ್ತ್ಯಸೆನ್, ಮೆಹಬೂಬ್ ಉಲ್ ಹಕ, ಜೀನಪ್ರೀಜ್, ಮಾರ್ಥನುಸಾಬಾಯ್ ಮುಂತಾದವರು ಮತ್ತು ಯುಎನ್‌ಡಿಪಿ ಯಂತಹ ಸಂಸ್ಥೆ ತಿಳಿ ಹೇಳುತ್ತಿದ್ದರೂ ಸರ್ಕಾರಗಳು ವಿಶ್ವದಾದ್ಯಂತ 'ವರಮಾನದ ವರ್ಧನೆಯೇ ಅಭಿವೃದ್ಧಿ' ಎಂಬ ಪ್ರಮೇಯಕ್ಕೆ ಗಂಟು ಬಿದ್ದಿರುವುದು ಕಂಡುಬರುತ್ತದೆ. ಭಾರತ ಹನ್ನೊಂದನೆಯ ಪಂಚವಾರ್ಷಿಕ ಯೋಜನೆ ಕುರಿತಂತೆ ೨೦೦೭ರಲ್ಲಿ ಸಾಕಷ್ಟು ಚರ್ಚೆಯಾಗಿದೆ. ಅದು ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಅನುಮೋದನೆಯನ್ನು ಪಡೆದುಕೊಂಡಿದೆ. ಆದರೆ ಅಲ್ಲಿ ಆದ್ಯತೆ ದೊರಕಿರುವುದು ವರಮಾನ ವರ್ಧನೆಯ ಪ್ರಮಾಣ ವಾರ್ಷಿಕ ಶೇ.೯ ಇರಬೇಕೋ ಅಥವಾ ಶೇ.೧೦ ಇರಬೇಕೋ ಎಂಬುದಾಗಿದೆ. ಹನ್ನೊಂದನೆಯ ಯೋಜನೆಯ 'ಆಶಯ ಪತ್ರ' ವನ್ನು ಪ್ರಕಟಿಸಿರುವ ಯೋಜನಾ ಆಯೋಗವು ಅಭಿವೃದ್ಧಿಯಲ್ಲಿ ಶಿಕ್ಷಣ ಮತ್ತು ಆರೋಗ್ಯದ ಮಹತ್ವವನ್ನು ಒತ್ತಿ ಹೇಳಿದೆ. ಜನರನ್ನು ಒಳಗೊಳ್ಳುವ ಅಭಿವೃದ್ಧಿ ಎಂಬ ಹೊಸ ಮಂತ್ರವನ್ನು ಜಪಿಸಲಾಗುತ್ತಿದೆ ಆದರೂ ಮಾನವ ಅಭಿವೃದ್ಧಿಗೆ ಆದ್ಯತೆ ನೀಡುವಲ್ಲಿ ರಾಷ್ಟ್ರಗಳು ಹಿಂಜರಿಯುತ್ತಿವೆ.[೨೧]

ವಾಸ್ತವಿಕ ವರಮಾನ ವರ್ಧನಾ ಅಭಿವೃದ್ಧಿ ಮಾದರಿಯ ವೈಪಲ್ಯವೇ ಮಾನವ ಅಭಿವೃದ್ಧಿ ಮಾದರಿಯ ಹುಟ್ಟಿಗೆ ಕಾರಣವಾಗಿದೆ. ಜನರ ಸುಖ ಸಮೃದ್ಧಿಯನ್ನು, ನಲಿವು ನೆಮ್ಮದಿಯನ್ನು ವರಮಾನದಿಂದ ಸಾಧಿಸಿಕೊಳ್ಳುತ್ತೇವೆ ಎಂಬುದು, ಅಭಿವೃದ್ಧಿಯನ್ನು ವರಮಾನ ವರ್ಧನೆಯ ಮೂಲಕ ಮಾಪನ ಮಾಡುತ್ತೇವೆ ಎಂಬುವುದು ಸರಿಯಲ್ಲ. ವರಮಾನವೆಂಬುವುದು ಅಭಿವೃದ್ಧಿಯ ಸಾಧನವೇ ವಿನಾ ಅದೇ ಅಭಿವೃದ್ಧಿಯಲ್ಲ ಅಭಿವೃದ್ಧಿಯನ್ನು ಸಾಧಿಸಿಕೊಳ್ಳಲು ವರಮಾನ ತುಂಬಾ ಅಗತ್ಯ. ಅದೊಂದು ಬಹುತ್ವದ ಆಯ್ಕೆಯಾಗಿದೆ. ಆದರೆ ಅದೊಂದೆ ಅಭಿವೃದ್ಧಿಯನ್ನು ಒಳಗೊಳ್ಳಲು ಸಾಧ್ಯವಿಲ್ಲ. ಅಭಿವೃದ್ಧಿಯೆಂಬುವುದು ವರಮಾನದ ವಿತರಣೆಗೆ ಸಂಬಂಧಿಸಿದ ಸಮಸ್ಯೆ. ಇದು ಜನರ ಹಕ್ಕುದಾರಿಕೆಗೆ ಜನರ ಧಾರಣ ಸಾಮರ್ಥ್ಯಕ್ಕೆ ಸಂಬಂಧಿಸಿದ ಸಂಗತಿಯಾಗಿದೆ ಅಭಿವೃದ್ಧಿಯೆಂಬುವುದು ದಾನ, ದತ್ತಿ, ಉಂಬಳಿ ಅಲ್ಲ ಅದು ಹಕ್ಕು–ಹಂಗಿನ ಬದುಕು ಅಭಿವೃದ್ಧಿಯನಿಸಿಕೊಳ್ಳಬಾರದು ಹಂಗಿನ ಬದುಕನ್ನು ಹಕ್ಕಿನ ಬದುಕನ್ನಾಗಿ ಪರಿವರ್ತಿಸಿ ಕೊಳ್ಳಬೇಕಾಗುತ್ತದೆ.[೨೨]

ಜನರ ಆಯ್ಕೆಗಳ ವ್ಯಾಪ್ತಿಯನ್ನು ವಿಸ್ತ್ರತಗೊಳಿಸುವುದೇ ಮಾನವ ಅಭಿವೃದ್ಧಿ ಅತ್ಯಂತ ಮುಖ್ಯವಾದ ಮತ್ತು ವಿಸ್ತುತವಾದ ಆಯ್ಕೆಗಳಾವುವೆಂದರೆ ಆರೋಗ್ಯಕಾಯರಾಗಿ ಮತ್ತು ಸುಧೀರ್ಘಕಾಲ ಜನರೂ ಬದುಕುವುದು, ವಿದ್ಯಾ ಸಂಪನ್ನರಾಗುವುದು ಮತ್ತು ಗೌರವಯುತ ಬದುಕಿಗೆ ಅಗತ್ಯವಾದ ಸಂಪನ್ಮೂಲಗಳ ಮೇಲೆ ಹಕ್ಕುದಾರಿಕೆ ಸಾಧಿಸುವುದು[೨೩] ಮುಂದುವರೆದು "ರಾಷ್ಟ್ರವೊಂದರ ನಿಜವಾದ ಸಂಪತ್ತೆಂದರೆ ಅಲ್ಲಿನ ಮಹಿಳೆಯರು ಹಾಗೂ ಪುರುಷರನ್ನು ಒಳಗೊಂಡ ಜನಸಮೂಹ"

ಎಲ್ಲ ಜನರ ಅಂದರೆ ಮಹಿಳೆಯರು ಮತ್ತು ಪುರುಷರನ್ನು ಒಳಗೊಂಡಂತೆ ಆಯ್ಕೆಗಳನ್ನು ವಿಸ್ತರಿಸುವುದೇ ಮಾನವ ಅಭಿವೃದ್ಧಿ. ಸಮಾಜದ ಒಂದು ಜನವರ್ಗದ ಆಯ್ಕೆಗಳ ವ್ಯಾಪ್ತಿಯನ್ನು ವಿಸ್ತ್ರತಗೊಳಿಸುವ ಮಾನವ ಅಭಿವೃದ್ಧಿಯಲ್ಲ. ವಿಸ್ತ್ರತಗೊಳ್ಳುವ ಆಯ್ಕೆಗಳ ವ್ಯಾಪ್ತಿಯಿಂದ ಮಹಿಳೆಯರನ್ನು ಒಂದು ವೇಳೆ ಹೊರಗಿಟ್ಟರೆ ಅದು ಅನ್ಯಾಯಯುತವಾದ ಮತ್ತು ತಾರತಮ್ಯವಾದಿಯಾದ ಪ್ರಕ್ರಿಯೆಯಾಗುತ್ತದೆ.[೨೪] ಅತ್ಯಂತ ಸರಳವಾಗಿ ಹೇಳುವುದಾದರೆ ಜನರ ಬದುಕು ಉತ್ತಮಗೊಳ್ಳುವ ಪ್ರಕ್ರಿಯೆಯನ್ನು ಮಾನವ ಅಭಿವೃದ್ಧಿಯೆಂದು ಹೇಳಬಹುದು.

ಅಭಿವೃದ್ಧಿಯ ಉದ್ದೇಶ ಕೇವಲ ವರಮಾನದ ವರ್ಧನೆಯಲ್ಲ, ಅಭಿವೃದ್ಧಿಯೆಂದರೆ ಜನರ ಬದುಕನ್ನು ಉತ್ತಮಪಡಿಸಿಕೊಳ್ಳಲು ಅಗತ್ಯವಾದ ಅವಕಾಶಗಳ ವರ್ಧನೆ ಈ ಅವಕಾಶಗಳ ವರ್ಧನೆಯಲ್ಲಿ ಶಿಕ್ಷಣ, ಒಳ್ಳೆಯ ಆರೋಗ್ಯ, ರಾಜಕೀಯ ಸ್ವಾತಂತ್ರ್ಯ, ಸಾಂಸ್ಕ್ರತಿಕ ಅನನ್ಯತೆ, ಸಮುದಾಯಿಕ ಸಹಭಾಗಿತ್ವ, ಪರಿಸರ ಸಂಬಂಧಿ ಭದ್ರತೆ ಮುಂತಾದವುಗಳು ಸೇರಿಕೊಂಡಿವೆ.[೨೫] ಅಭಿವೃದ್ಧಿಯೆಂಬುವುದು ಇಡೀ ಸಮಾಜವನ್ನು ಒಳಗೊಳ್ಳಬೇಕು ಅದು ಕೇವಲ ಆರ್ಥಿಕತೆಗೆ ಸಂಬಂಧಿಸಿದ ಸಂಗತಿಯಲ್ಲ ಅಲ್ಲಿ ಜನರು ಪ್ರಧಾನ ದಾತು.

ಸಾಂಪ್ರದಾಯಿಕ ಅಭಿವೃದ್ಧಿ ಸಿದ್ಧಾಂತಗಳಲ್ಲಿ ಅಭಿವೃದ್ಧಿಯ ಸಾಧನಗಳಿಗೆ ಮಹತ್ವವನ್ನು ನೀಡಲಾಗಿತ್ತು. ಅಮರ್ತ್ಯಸೆನ ಮತ್ತು ಮೆಹಬೂಬ್ ಉಲ್ ಹಕ್ ಅವರ ಬಹುದೊಡ್ಡ ಕೊಡುಗೆಯೆಂದರೆ ಅಭಿವೃದ್ಧಿ ಕುರಿತು ಸೈದ್ಧಾಂತಿಕ ಚರ್ಚೆಗಳಲ್ಲಿ ಗಮನವನ್ನು ಸಾಧನೆಗಳಿಂದ ಸಾಧ್ಯದ ಕಡೆಗೆ ಪಲ್ಲಟಗೊಳಿಸಿದ್ದಾಗಿದೆ.

ಅಭಿವೃದ್ಧಿಯು ಜನರನ್ನು ಒಳಗೊಳ್ಳುವ ರೀತಿಯಲ್ಲಿರಬೇಕು ಮತ್ತು ಪ್ರಜಾಪ್ರಭುತ್ವವು ಅಭಿವೃದ್ಧಿಗೆ ಪೂರಕವಾಗಿರಬೇಕು ಎಂದಾದರೆ ಅವೆರಡೂ ಜನರ ಸಹಭಾಗಿತ್ವವನ್ನು ಸಾಧಿಸಿಕೊಂಡಿರಬೇಕು. ಜನರ ಸಹಭಾಗಿತ್ವವಿಲ್ಲದೆ ಅಭಿವೃದ್ಧಿಯು ಜನರನ್ನು ಒಳಗೊಳ್ಳದ ರೀತಿಯಲ್ಲಿರುವುದು ಸಾಧ್ಯವಿಲ್ಲ. ನಮ್ಮ ಸಮಾಜದ ಸಂದರ್ಭದಲ್ಲಿ ಸಹಭಾಗಿತ್ವಕ್ಕೆ ಅಡ್ಡಿಯಾಗಿರುವ ಮುಖ್ಯ ಸಂಗತಿಯೆಂದರೆ ಸಾಮಾಜಿಕ ಅಸಮಾನತೆ, ಈ ಸಾಮಾಜಿಕ ಅಸಮಾನತೆಯಿಂದಾಗಿ ಸಮಾಜದಲ್ಲಿ ವಿವಿಧ ಸಮುದಾಯಗಳಿಗೆ ದೊರೆಯುವ ಅವಕಾಶಗಳಲ್ಲಿ ತಾರತಮ್ಯವನ್ನು ನಾವು ಗುರುತಿಸಬಹುದು ಇದರಿಂದ ಜನರ ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲ. ಸಾಮಾಜಿಕ ಅಸಮಾನತೆ ಮತ್ತು ಅವಕಾಶಗಳಲ್ಲಿ ಅಸಮಾನತೆಯಿಂದಾಗಿ ಅಧಿಕಾರ ವಿತರಣೆಯಲ್ಲಿ ಮತ್ತು

ಸಾಮಾಜಿಕ ನೀತಿಗಳನ್ನು ರೂಪಿಸುವಲ್ಲಿ ತೀವ್ರ ಅಸಮತೋಲನವನ್ನು ಗುರುತಿಸಬಹುದು. ಪಟ್ಟಭದ್ರರು, ಮುಂದುವರಿದ ಜಾತಿಗಳು, ಜಮೀನುದಾರರು, ಉದ್ಯಮಿಪತಿಗಳು ಅಧಿಕಾರದ ಮೇಲೆ ಮತ್ತು ಸಾರ್ವಜನಿಕ ನೀತಿಗಳ ಮೇಲೆ ಅತ್ಯಂತಿಕ ನಿಯಂತ್ರಣವನ್ನು ಸಾಧಿಸಿಕೊಂಡು ಬಿಡುತ್ತಾರೆ.[೨೬] ಇದಕ್ಕಿರುವ ಮುಖ್ಯ ಪರಿಹಾರವೆಂದರೆ ಸಹಭಾಗಿತ್ವವಾದಿ ಪ್ರಜಾಪ್ರಭುತ್ವವನ್ನು ಮತ್ತು ಜನರನ್ನು ಒಳಗೊಳ್ಳುವ ಅಭಿವೃದ್ಧಿಯನ್ನು ಸಾಧಿಸಿಕೊಳ್ಳುವುದು.

ಧೀರ್ಘವಾದ, ಆರೋಗ್ಯಕರವಾದ ಮತ್ತು ಸೃಜನಶೀಲವಾದ ಬದುಕನ್ನು ಸಾಧಿಸಿಕೊಳ್ಳಲು ಜನರು ಯಾವುದು ಮೌಲ್ಯಯುತವಾದುದೆಂದು ಪರಿಗಣಿಸುತ್ತಾರೋ ಅವುಗಳನ್ನು ಸಾಧಿಸಿಕೊಳ್ಳಲು ಹಾಗೂ ನಾವೆಲ್ಲರೂ ಪಾಲುಗಾರರಾಗಿರುವ ನಮ್ಮ ವಿಶ್ವದಲ್ಲಿ ಸಮಾನತೆ ಮತ್ತು ಸುಸ್ಥಿರಗತಿ ಆಧಾರದಲ್ಲಿ ಅಭಿವೃದ್ಧಿಯನ್ನು ರೂಪಿಸುವ ಅಗತ್ಯವಾದ ಜನರ ಸ್ವಾತಂತ್ರ್ಯಗಳೇ ಮಾನವ ಅಭಿವೃದ್ಧಿ ಜನರು ವೈಯಕ್ತಿಕವಾಗಿ ಮತ್ತು ಸಮಷ್ಠಿಯಾಗಿ ಅಭಿವೃದ್ಧಿಯ ಫಲಾನುಭವಿಗಳೂ ಹೌದು ಮತ್ತು ಅದರ ಚಾಲಕ ಶಕ್ತಿಯೂ ಹೌದು.[೨೭]

Human development, as an approach, is concerned with what i take to be the basic development idea; namely advancing the richness of human life, rather than the richness of the economy in which human beings live, which is only a part of it.[28] ಮಾನವ ಅಭಿವೃದ್ಧಿಯ ಪ್ರಧಾನ ಕಾಳಜಿಯು ಜನರ ಬದುಕನ್ನು ಹೇಗೆ ಸಮೃದ್ಧಗೊಳಿಸಬೇಕು ಎಂಬುದಾಗಿರುತ್ತದೆ ವಿನಾ ಆರ್ಥಿಕತೆಯ ಸಮೃದ್ಧತೆಯಲ್ಲ.

ಇದೇ ವಿಷಯವನ್ನು ಚರ್ಚೆ ಮಾಡುತ್ತಾ ಮಾರ್ತಾ ನುಸ್ ಬೌಮ್ ಹೀಗೆ ಹೇಳುತ್ತಾಳೆ Aggregate data are not enough for assessment of how a nation is doing; we need to know how each person is doing, considering each as a separate life.[29] ವರಮಾನ ಸಂಪತ್ತಿನ ಆಧಾರದ ಮೇಲೆ ಮಾಪನ ಮಾಡಲು ಸಾಧ್ಯವಿಲ್ಲದ ಅನೇಕ ಅಭಿವೃದ್ಧಿ ಸೂಚಿಗಳಿವೆ. ಅವು ಬದುಕು ಉತ್ತಮವಾಗಿದೆಯೇ ಅಥವಾ ಇಲ್ಲವೋ ಎಂಬುದನ್ನು ತಿಳಿಸುವ ಸಂಗತಿಗಳಾಗಿವೆ. ಅವು ಬದುಕನ್ನು ಉತ್ತಮ ಪಡಿಸುವ ಚಾಲಕ ಶಕ್ತಿಗಳಾಗಿವೆ.

ಮಾನವ ಅಭಿವೃದ್ಧಿ ಒಂದು ಪ್ರದೇಶದಲ್ಲಿ ಸೃಷ್ಟಿಯಾಗಬೇಕಾದ ಸಾಮಾಜಿಕ ಮೂಲ ಸೌಕರ್ಯಗಳ ಮೇಲೆ ಗಮನಹರಿಸುತ್ತಿದೆ. ಈ ಮೂಲ ಸೌಕರ್ಯಗಳು ಸೃಷ್ಟಿಯಾದ ಕೂಡಲೆ ಅಥವಾ ಊರಿಗೆ ಶಾಲಾ ಕಾಲೇಜು ಬಂದ ಕೂಡಲೇ ಅಥವಾ ಆಸ್ಪತ್ರೆ ಬಂದು ಕೂಡಲೇ ಅಲ್ಲಿನ ಎಲ್ಲರ ಶಿಕ್ಷಣ ಆರೋಗ್ಯಗಳು ಸುಧಾರಿಸುತ್ತವೆಯೆಂದು ಹೇಳಲಾಗುವುದಿಲ್ಲ. ಆ ಪ್ರದೇಶದೊಳಗೆ ಬರುವ ವಿವಿಧ ಸಮುದಾಯಗಳ, ದಲಿತ, ಬುಡಕಟ್ಟುಗಳ, ಅಲ್ಪ ಸಂಖ್ಯಾತರ, ಮಹಿಳೆಯರ ಮಾನವ ಅಭಿವೃದ್ಧಿಯಲ್ಲಿ ಸಾಕಷ್ಟು ಅಂತರಗಳಿರಬಹುದು. ಈ ಅಂತರಗಳು ಏಕಿವೆ ಎನ್ನುವುದರ ಮೇಲೆ ಮಾನವ ಅಭಿವೃದ್ಧಿ ಗಮನ ಹರಿಸುವುದಿಲ್ಲ.[೩೦]

ಮಾನವ ಅಭಿವೃದ್ಧಿ ಆರೋಗ್ಯ, ಶಿಕ್ಷಣಗಳನ್ನು ಅಭಿವೃದ್ಧಿಯ ಸಾಮಾಜಿಕ ಆಯಾಮಗಳೆಂದು ಪರಿಗಣಿಸುತ್ತಿದೆ. ಆದರೆ ವಾಸ್ತವದಲ್ಲಿ ಆದಾಯದ ಮತ್ತೊಂದು ರೂಪವೇ ಆಗಿದೆ ಕಾರಣವೆಂದರೆ ತೊಂಬತ್ತರ ದಶಕದ ನಂತರ ಎಲ್ಲವೂ ಖಾಸಗೀಕರಣಗೊಂಡಿದೆ. ಸರಕಾರಿ ಸ್ವಾಧೀನದಲ್ಲಿರುವ ಆರೋಗ್ಯ, ಶಿಕ್ಷಣ ಜನರ ಬೇಡಿಕೆಗೆ ಅಥವಾ ಜನರ ಬಯಕೆಗಳನ್ನು ಪೂರೈಸುವಲ್ಲಿ ವಿಫಲವಾಗುತ್ತಿದೆ. ಉದಾ: ಸರಕಾರಿ ಸ್ವಾಮ್ಯದಲ್ಲಿರುವ ಸರಕಾರಿ ಶಾಲೆಗಳು ಕನ್ನಡ ಮಾಧ್ಯಮದಲ್ಲಿ ಮಾತ್ರ ಬೋಧನೆ ಮಾಡುತ್ತಿವೆ ಇಂಗ್ಲೀಷಿನ ವ್ಯಾಮೋಹದಲ್ಲಿರುವ ಜನರ ಬಯಕೆ ಪೂರೈಸಲು ಸಾಧ್ಯವಾಗುತ್ತಿಲ್ಲ. ಮೂಲಭೂತ ಸೌಕರ್ಯಗಳ ಕೊರತೆ ಸರಕಾರಿ ಸಂಸ್ಥೆಗಳಲ್ಲಿ ತುಂಬಾನೇ ಎದ್ದು ಕಾಣುವುದರಿಂದ ಜನರು ಹಣ ಹೋದರು ಚಿಂತೆ ಇಲ್ಲ ಒಳ್ಳೆಯ ಶಿಕ್ಷಣ, ಆರೋಗ್ಯ ಬೇಕು ಎಂದು ನಿರ್ಧರಿಸಿದ್ದಾರೆ. ಜನರ ಆದಾಯದ ಬಹುಭಾಗ ಇವುಗಳಿಗೆ ಖರ್ಚಾಗುವುದನ್ನು ಕಾಣುತ್ತೇವೆ.[೨೦] ಆದುದರಿಂದ ಉತ್ತಮ ಶಿಕ್ಷಣ ಮತ್ತು ಆರೋಗ್ಯ ವರಮಾನದ ಮೇಲೆ ನಿಂತಿದೆ. ಆದುದರಿಂದ ಇವನ್ನು ಸಾಮಾಜಿಕ ಅಂಶಗಳ ಮತ್ತೊಂದು ರೂಪವೆನ್ನುವುದು ಹೆಚ್ಚು ಸೂಕ್ತ.

ವರಮಾನದ ವರ್ಧನೆಯ ಜೊತೆ ಅದರ ಸಮಾನ ವಿತರಣೆಯು ಮಾನವ ಅಭಿವೃದ್ಧಿ ಎನಿಸಿಕೊಳ್ಳುತ್ತದೆ. ಅದು ಪರಿಸರವನ್ನು ರಕ್ಷಿಸುತ್ತದೆ ವಿನಾ ನಾಶಮಾಡುವುದಿಲ್ಲ. ಅದು ಜನರನ್ನು ಸಶಕ್ತರನ್ನಾಗಿಸುತ್ತದೆ ವಿನಾ ಅಶಕ್ತರನ್ನಾಗಿ ಮಾಡುವುದಿಲ್ಲ. ಅಲ್ಲಿ ಬಡವರು ಅಭಿವೃದ್ಧಿಯ ಮೂಲಧಾತು ವಾಗಿರುತ್ತಾರೆ. ಅವರ ಆಯ್ಕೆಯ ವ್ಯಾಪ್ತಿ ವಿಸ್ತರಣೆಯಾಗುತ್ತದೆ.ಅವಕಾಶಗಳ ವರ್ಧನೆಯಾಗುತ್ತದೆ ಮತ್ತು ನೀತಿ ನಿರೂಪಣೆ ಚಟುವಟಿಕೆಗಳಲ್ಲಿ ಜನರು ಭಾಗವಹಿಸಲು ಅವಕಾಶವಿರುತ್ತದೆ.ಅದು ಜನರಿಗೆ ಅಭಿಮುಖವಾಗಿರುತ್ತದೆ, ಪರಿಸರಕ್ಕೆ ಪೂರಕವಾಗಿರುತ್ತದೆ, ದುಡಿಮೆಗೆ ಸಹಾಯಕವಾಗಿರುತ್ತದೆ ಮತ್ತು ಲಿಂಗ ಸ್ಪಂದಿಯಾಗಿರುತ್ತದೆ.[೨೧]

ಸ್ವಾತಂತ್ರ್ಯದ ಅಭಿವೃದ್ಧಿ: ಸಾಮಾಜಿಕ ಅಸಾಮರ್ಥ್ಯಗಳನ್ನು ಸೃಷ್ಟಿಸಲು ಜಾತಿ, ಲಿಂಗ, ಧರ್ಮ, ಅಸ್ಪೃಶ್ಯತೆ ಇವುಗಳು ಪ್ರಮುಖ ಸಾಧನಗಳಾಗಿವೆ ಆದರೆ ಮಾನವ ಅಭಿವೃದ್ಧಿ ಈ ಎಲ್ಲ ಅಸಾಮರ್ಥ್ಯಗಳನ್ನು ಒಳಗೊಳ್ಳುವ ವ್ಯಾಖ್ಯಾನವಲ್ಲ. ಈ ಅಸಾಮರ್ಥ್ಯಗಳನ್ನು ಸರಿಪಡಿಸದಿದ್ದರೆ ಇವರ್‍ಯಾರೂ ಅಭಿವೃದ್ಧಿ ಕನಸು ಕಾಣಲು ಸಾಧ್ಯವಿಲ್ಲ. ಆರ್ಥಿಕ ಅಸ್ವಾತಂತ್ರ್ಯ ಸೃಷ್ಟಿಯಾಗಬೇಕಾದರೆ, ಸಾಮಾಜಿಕ ಅಸ್ವಾತಂತ್ರ್ಯ ಕಾರಣವಾಗುತ್ತದೆ. ಮತ್ತು ಆರ್ಥಿಕ ಅಸ್ವಾತಂತ್ರ್ಯದಿಂದ ರಾಜಕೀಯ ಅಸ್ವಾತಂತ್ರ್ಯ ಸೃಷ್ಟಿಯಾಗುತ್ತದೆ. ಇದೊಂದು ವಿಷವರ್ತುಲ ಈ ವಿಷವರ್ತುಲದಿಂದ ಹೊರಬರದಿದ್ದರೆ ಅಭಿವೃದ್ಧಿ ಸಾಧ್ಯವಿಲ್ಲ.[೨೨] ಅಭಿವೃದ್ಧಿಯನ್ನು ಸ್ವಾತಂತ್ರ್ಯದ ಹೆಚ್ಚಳವೆಂದು ವ್ಯಾಖ್ಯಾನಿಸಿದ್ದಾರೆ. ಅಮರ್ತ್ಯಸೇನ ರವರ ಪುಸ್ತಕವಾದ ಡೆವಲಪಮೆಂಟ ಯಾಸ್ ಫ್ರೀಡಂ ಪುಸ್ತಕದಲ್ಲಿ ದೇಶ ಮತ್ತು ಪ್ರಪಂಚದಲ್ಲಿ ದೊಡ್ಡ ಮಟ್ಟದ ಸಂಪತ್ತು ಸೃಷ್ಟಿಯಾಗುತ್ತಿರುವ ಸಂದರ್ಭದಲ್ಲಿ ಬಹುತೇಕರಿಗೆ ಊಟ, ವಸತಿ, ಶಿಕ್ಷಣ, ಆರೋಗ್ಯಗಳು ಇಲ್ಲದೆ ಇರಲು ಪ್ರಮುಖ ಕಾರಣವೆಂದರೆ ಸಾಮಾಜಿಕ ಆರ್ಥಿಕ,ರಾಜಕೀಯ ಅಸ್ವಾತಂತ್ರ್ಯ ಎಂದು ಹೇಳುತ್ತಾರೆ. ತಲಾ ಆದಾಯ ಹೆಚ್ಚಿದ್ದು ಸಾಮಾಜಿಕ ಸ್ವಾತಂತ್ರ್ಯ ಇಲ್ಲದೆ ಇರುವ ಜನ ಕಡಿಮೆ

ಕಾಲ ಬದುಕುತ್ತಾರೆ. ಅದೇ ರೀತಿ ತಲಾ ಆದಾಯ ಕಡಿಮೆ ಇದ್ದು ಸಾಮಾಜಿಕ ಸ್ವಾತಂತ್ರ್ಯವಿರುವ ವ್ಯಕ್ತಿ ಹೆಚ್ಚು ಕಾಲ ಬದುಕುತ್ತಾರೆ.

ಅನೇಕ ಸಂದರ್ಭಗಳಲ್ಲಿ ಇಡೀ ಸ್ವಾತಂತ್ರ್ಯದ ಚರ್ಚೆ ನೋಡಿದಾಗ ವಾಕ್, ಅಭಿವೃದ್ಧಿ ಹಾಗೂ ಸಾಂಸ್ಕೃತಿಕ ಸ್ವಾತಂತ್ರ್ಯದ ಸುತ್ತ ಗಿರಕಿ ಹೊಡೆಯುತ್ತಿವೆ, ಇವೆಲ್ಲವು ಮುಖ್ಯವೇ ಆದರೆ ಕೆಳಸ್ತರದಲ್ಲಿ ವ್ಯಕ್ತಿ ಮಾನ ಸನ್ಮಾನದಿಂದ ಬದುಕಲು ಇದಿಷ್ಟು ಸಾಲದು, ಸ್ವಾತಂತ್ರ್ಯದ ಚರ್ಚೆಯನ್ನು ವಿಸ್ತರಿಸಿ ಕೆಳಸ್ತರದ ವ್ಯಕ್ತಿಗಳ ದಿನನಿತ್ಯದ ಬದುಕಿನೊಂದಿಗೆ ನೇರ ಸಂಬಂಧ ಇರುವ ಸಂಗತಿಗಳೊಂದಿಗೆ ಜೋಡಿಸುವ ಅಗತ್ಯವಿದೆ. ದಿನನಿತ್ಯದ ಜೀವನದಲ್ಲಿ ತನಗಾಗುವ ಅನಾಯ್ಯವನ್ನು ಪ್ರಶ್ನಿಸುವ,ಪ್ರತಿಭಟಿಸುವ ಸ್ವಾತಂತ್ರ್ಯ, ಉದ್ಯೋಗ ಪಡೆಯುವ ಸ್ವಾತಂತ್ರ್ಯ ತಮ್ಮ ಇಷ್ಟದ ಉಡುಗೆ ತೊಡುಗೆಗಳನ್ನು ತೋಡುವ ಸ್ವಾತಂತ್ರ್ಯ, ತಾವು ಇಷ್ಟ ಪಟ್ಟವರನ್ನು ಮದುವೆಯಾಗುವ ಸ್ವಾತಂತ್ರ್ಯ, ಮದುವೆಯ ನಂತರ ಮಕ್ಕಳನ್ನು ಹೆರುವ ಮತ್ತು ಹೆರದೆ ಇರುವ ಸ್ವಾತಂತ್ರ್ಯ. ಇವೆಲ್ಲವು ನಮ್ಮಲ್ಲಿ ಇಂದು ಕೂಡಾ ಸಮಾಜದ ಬಹುತೇಕರಿಗೆ ಗಗನ ಕುಸುಮಗಳಾಗಿವೆ.[೩೪] ಪ್ರಪಂಚದ ತುಂಬೆಲ್ಲಾ ಇಂದು ಮಾರುಕಟ್ಟೆ ನಿರ್ದೇಶಿತ ಅಭಿವೃದ್ಧಿ ಚಾಲ್ತಿಯಲ್ಲಿದೆ ಇದಕ್ಕೂ ಕೂಡಾ ಸ್ವಾತಂತ್ರ್ಯದ ಅವಶ್ಯಕತೆ ಇದೆ. ಇಲ್ಲಿ ಯಾವುದೇ ಜಾತಿ, ಜನಾಂಗ ಧರ್ಮ ವರ್ಗ ಆರ್ಥಿಕ ಸ್ಥಾನಮಾನ ನೋಡಿ ವ್ಯವಹಾರ ನಡೆಯುವುದಿಲ್ಲ ಇಷ್ಟವಿದ್ದರೆ ವ್ಯವಹರಿಸಬೇಕು ಇಲ್ಲದಿದ್ದರೆ ಸುಮ್ಮನಿರಬೇಕು. ತಮಗೆ ಇಷ್ಟ ಬಂದಂತೆ ವ್ಯವಹರಿಸಲು ಸ್ವಾತಂತ್ರ್ಯ ಅವಶ್ಯಕತೆ ಇದೆ. ಇಲ್ಲಿ ಅಸ್ವಾತಂತ್ರ್ಯ ಸೃಷ್ಟಿಸುವ ನೀತಿಗಳನ್ನು ನಿರ್ನಾಮ ಮಾಡುವುದು ಅಭಿವೃದ್ಧಿಯ ಮುಖ್ಯ ಉದ್ದೇಶವಾಗಬೇಕು[೩೫] ಎನ್ನುತ್ತಾರೆ.

ಸ್ವಾತಂತ್ರ್ಯ ಮತು ್ತಸಮಾನತೆ ಒಂದೇ ನಾಣ್ಯದ ಎರಡು ಮುಖಗಳು ಹಾಗಾಗಿ ಎರಡು ಸ್ವಾತಂತ್ರ್ಯದ ಚರ್ಚೆಯನ್ನು ಬೇರ್ಪಡಿಸಿ ನೋಡಲು ಸಾಧ್ಯವಿಲ್ಲ. ಏಕೆಂದರೆ ಸ್ವಾತಂತ್ರ್ಯ ವ್ಯವಹಾರಗಳು ಸಮಾನತೆ ಇರುವ ಪರಿಸರದಲ್ಲಿ ಮಾತ್ರ ಆಚರಣೆಗೆ ಬರಲು ಸಾಧ್ಯ. ಮಹಿಳೆಯರು ಪುರುಷರಿಗೆ ಸಮಾನರಲ್ಲ ಅದಕ್ಕೆ ಸ್ವಾತಂತ್ರ್ಯವಿಲ್ಲ. ಅವರಿಗೆ ದಲಿತರಿಗೆ ಏಕೆ ಹೊಟೇಲ್‌ಗಳು, ಉದ್ಯಮ ನಡೆಸಲು ಸಾಧ್ಯವಿಲ್ಲ. ಜನರ ಪ್ರಕಾರ ಇತರಿಗೆ ಅವರು ಸಮಾನರು ಹೀಗೆ ಸಾಮಾಜಿಕ, ಆರ್ಥಿಕ, ರಾಜಕೀಯ ಸಮಾನತೆಗಳು ಈ ಎಲ್ಲಾ ಕ್ಷೇತ್ರಗಳಲ್ಲಿ ಸ್ವತಂತ್ರ್ಯ ವ್ಯವಹಾರಗಳಿಗೆ ಅವಕಾಶ ಮಾಡಿಕೊಡುವುದು ಆದ್ದರಿಂದ ಮೇಲಿನ ಎಲ್ಲ ಅಸ್ವಾತಂತ್ರ್ಯಗಳು ನಮ್ಮಲ್ಲಿ ದೊಡ್ಡ ಪ್ರಮಾಣದ ಅಸಮಾನತೆಗಳನ್ನು ಸೃಷ್ಟಿಸಿವೆ. ಒಬ್ಬರನ್ನು ಮತ್ತೊಬ್ಬರಿಗೆ ಹೋಲಿಸಿ ನಾವು ಸಾಮಾಜಿಕ, ರಾಜಕೀಯ, ಆರ್ಥಿಕ ಅಸಮಾನತೆಗಳನ್ನು ಅರ್ಥಮಾಡಿಕೊಳ್ಳುವುದು.[೩೬] ಬಲಹೀನರನ್ನು ಅಧಿಕಾರಸ್ಥರಿಗೆ ಕೆಳಜಾತಿಯವರನ್ನು ಮೇಲ್ಜಾತಿಗೆ, ಮಹಿಳೆಯರನ್ನು ಪುರುಷರಿಗೆ, ಬಡವರನ್ನು ಅನುಕೂಲಸ್ಥರಿಗೆ ಸಾಮಾಜಿಕ ಹಾಗೂ ಲಿಂಗ ಸ್ಥಾನಮಾನಗಳನ್ನು, ಬಡತನವನ್ನು ಅಧಿಕಾರ ಹೀನತೆಯನ್ನು ಲೆಕ್ಕಹಾಕುವುದು, ಬಡವರಿಗೆ ಬಡವರಲ್ಲದವರು ಅನುಭವಿಸುವ ಗುಣಮಟ್ಟದ ಆಹಾರ, ಉತ್ತಮ ಆರೋಗ್ಯ, ಶಿಕ್ಷಣ, ವಸತಿ ಇತ್ಯಾದಿಗಳನ್ನು ಅನುಭವಿಸಲು ಸಾಧ್ಯವಾಗುವುದಿಲ್ಲ. ಇದರ ಅರ್ಥ ವ್ಯಕ್ತಿಯೊಬ್ಬರು ಬಡವರು ಮಾತ್ರವಲ್ಲ, ಬಡವರಲ್ಲದವರೊಂದಿಗೆ ಹೋಲಿಸಿದರೆ ಅಸಮಾನರು

ಕೂಡಾ ಇಂತಹ ಅಸಮಾನತೆಗಳು ಬಹುಮುಖಿಯಾಗಿವೆ. ಸ್ಥಾನಮಾನದಲ್ಲಿ ಅಸಮಾನತೆ, ಅಧಿಕಾರದಲ್ಲಿ ಅಸಮಾನತೆ, ಸಂಪನ್ಮೂಲಗಳ ಒಡೆತನದಲ್ಲಿ ಅಸಮಾನತೆ ಮತ್ತು ಭಾಷೆ, ಧರ್ಮ, ದೇವರ ವಿಚಾರಗಳಲ್ಲೂ ಅಸಮಾನತೆ ಇದೆ. ಒಂದು ಕ್ಷೇತ್ರದ ಅಸಮಾನತೆ ಮತ್ತೊಂದು ಕ್ಷೇತ್ರದ ಅಸಮಾನತೆಗೆ ಎಡೆ ಮಾಡಿಕೊಡುತ್ತದೆ.[೩೭] ಬಡತನದ ಸೃಷ್ಟಿಗೆ ಆರ್ಥಿಕ ಅಸಮಾನತೆ ಕಾರಣವಾಗುತ್ತದೆ. ಉತ್ತಮ ಊಟ, ವಸತಿ, ಶಿಕ್ಷಣ, ಆರೋಗ್ಯ, ಇತ್ಯಾದಿಗಳ ಕೊರತೆ ವ್ಯಕ್ತಿಯನ್ನು, ಕುಟುಂಬಗಳನ್ನು ಸಮಾಜದ ಅಂಚಿಗೆ ತಳ್ಳುತ್ತದೆ.[೩೮] ಈ ಕೊರತೆಗಳಿಲ್ಲದ ವ್ಯಕ್ತಿ ಅಥವಾ ಕುಟುಂಬಗಳಿಗೆ ಸಲ್ಲುವ ಮಾನ ಸನ್ಮಾನಗಳು ಬಡವರಿಗೆ ಸಲ್ಲುವುದಿಲ್ಲ.

ಹುಟ್ಟು, ಸಾವು, ಮದುವೆ ಇತ್ಯಾದಿಗಳಿಗೆ ಆಹ್ವಾನಿಸಿಕೊಳ್ಳುವುದು ಕಷ್ಟವಾಗುತ್ತದೆ. ಕರೆಸಿಕೊಂಡರೂ ಸರದಿಯಲ್ಲಿ ಕೊನೆವರಾಗಿ ಎಲ್ಲವನ್ನು ಅನುಭವಿಸಬೇಕಾಗುತ್ತದೆ. ದಿನನಿತ್ಯದ ಬದುಕಿನಲ್ಲಿ ಅನುಭವಿಸುವ ಇಂತಹ ಅಂಚಿಗೆ ಸರಿಸಲ್ಪಟ್ಟ ಅಥವಾ ಹೊರಗಿಟ್ಟ ಅನುಭವ. ಇವರ ಆತ್ಮವಿಶ್ವಾಸವನ್ನು ಕುಗ್ಗಿಸುತ್ತದೆ. ತಮ್ಮ ಸಮಸ್ಯೆಯನ್ನು ಮತ್ತು ಅಭಿಪ್ರಾಯವನ್ನು ನಾಲ್ಕು ಜನರೊಂದಿಗೆ ಹಂಚಿಕೊಳ್ಳಲು ಸಾಧ್ಯವಾಗುವುದಿಲ್ಲ. ಈ ಎಲ್ಲವೂ ಬಲಹೀನರಿಗೆ ತಮ್ಮ ಬದುಕನ್ನು ಪ್ರಭಾವಿಸುವ ನಿರ್ಧಾರ ತೆಳೆಯುವ ಪ್ರಕ್ರಿಯೆಯಲ್ಲಿ ಭಾಗಿಯಾಗಲು ಅಡ್ಡಿಯಾಗುತ್ತವೆ. ಬಡತನವು ಅವರನ್ನು ಎಲ್ಲಿಯೂ ಭಾಗವಹಿಸದಂತೆ ಮಾಡುತ್ತದೆ ಮತ್ತು ರಾಜಕೀಯ ಅಸ್ತಿತ್ವವನ್ನು ಅಲ್ಲಗಳೆಯುತ್ತವೆ. ಒಂದು ಸಮಾಜದ ದೊಡ್ಡ ಸಂಖ್ಯೆಯಲ್ಲಿ ಬಲಹೀನರಿದ್ದಾರೆಂದರೆ ದೊಡ್ಡ ಸಂಖ್ಯೆಯ ಜನರು ಆ ಸಮಾಜದ ಸಾಮಾಜಿಕ, ಆರ್ಥಿಕ, ರಾಜಕೀಯ ಪ್ರಕ್ರಿಯೆಗಳಿಂದ ಹೊರಗಿದ್ದಾರೆಂದು ಅರ್ಥ.[೩೯] ಇಷ್ಟು ದೊಡ್ಡ ಪ್ರಮಾಣದ ಸಂಖ್ಯೆ ಎಲ್ಲ ಕ್ಷೇತ್ರದಿಂದ ಹೊರಗಿದ್ದಾರೆ ಎಂದರೆ ಆ ಸಮಾಜದಲ್ಲಿ ಅಸಮಾನತೆ, ತಾರತಮ್ಯ ಕೂಡಾ ದೊಡ್ಡ ಪ್ರಮಾಣದಲ್ಲಿದೆಯೆಂದೇ ಅರ್ಥ. ಹೀಗೆ ಅಸ್ವಾತಂತ್ರ್ಯ ಮತ್ತು ಅಸಮಾನತೆಗಳ ನಡುವೆ ನೇರ ಸಂಬಂಧ ಇದೆ ಅನಭಿವೃದ್ಧಿಯನ್ನು ಅಸಮಾನತೆಯ ಉತ್ಪನ್ನವೆಂದು ವ್ಯಾಖ್ಯಾನಿಸಿಕೊಳ್ಳದಿದ್ದರೆ ಅನಭಿವೃದ್ಧಿಯ ಪುನರ್ ಸೃಷ್ಟಿಯನ್ನು ತಡೆಯಲು ಸಾಧ್ಯವಿಲ್ಲ.

ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಇನ್ನೊಂದು ದಿಕ್ಕಿನಲ್ಲಿ ನೋಡುವುದಾದರೆ ಸ್ವಾತಂತ್ರ್ಯ ಮತ್ತು ಸಮಾನತೆ ಎರಡು ದೊರಕಿದಾಗ ಕೆಲವು ಅಂಶಗಳಾದ ಧರ್ಮ, ಜಾತಿ, ಲಿಂಗ, ವರ್ಗ ಇವೆಲ್ಲವು ಗೌಣವಾಗುತ್ತವೆ ಮತ್ತು ಊಟಕ್ಕಿಲ್ಲದವರಿಗೆ, ಸ್ವಂತ ದುಡಿಮೆ ಇಲ್ಲದವರಿಗೆ, ಸ್ವಂತ ಮನೆ ಇಲ್ಲದವರಿಗೆ, ತನ್ನ ಆದಾಯ ಗಳಿಸಲು ಸಂಪನ್ಮೂಲಗಳು ಇಲ್ಲದಿದ್ದಾಗ ತನ್ನ ಸಂಸಾರ ಸಾಗಿಸಲು ಶಕ್ತಿ ಇಲ್ಲದವರಿಗೆ ಗೌರವ ಇರುವುದಿಲ್ಲ.[೪೦] ಹೀಗೆ ಈ ಮೇಲಿನ ಅಂಶಗಳು ಮಾನವನಿಗೆ ಗೌರವ ಗಳಿಸಿಕೊಳ್ಳಲು ಸಹಾಯಕವಾಗುತ್ತದೆ.

ಆದಾಯ ಹೆಚ್ಚಿದರೆ ಗುಣಮಟ್ಟದ ಆರೋಗ್ಯ, ಶಿಕ್ಷಣ ಸಿಗುವ ಸಾಧ್ಯತೆ ಹೆಚ್ಚುತ್ತದೆ ಮತ್ತು ಆದಾಯ ಕಡಿಮೆಯಾದರೆ ಗುಣಮಟ್ಟದ ಶಿಕ್ಷಣ, ಆರೋಗ್ಯಗಳು ಸಿಗುವ ಸಾಧ್ಯತೆಗಳು ಕಡಿಮೆಯಾಗುತ್ತದೆ. ಆದುದರಿಂದ ಇದನ್ನು ಸಾಮಾಜಿಕ ಸೂಚಿ ಎಂದು ತಿಳಿಯುವ ಬದಲು ಆರ್ಥಿಕ ಸೂಚಿಯ

ಮತ್ತೊಂದು ರೂಪವೆಂದು ಪರಿಗಣಿಸುವುದು ಹೆಚ್ಚು ಸೂಕ್ತ. ಇದಕ್ಕಿಂತಲೂ ಮುಖ್ಯವಾಗಿ ಮಾನವ ಅಭಿವೃದ್ಧಿ ನಿಜವಾದ ಸಾಮಾಜಿಕ ಆಯಾಮಗಳನ್ನು ಪರಿಗಣಿಸಿಯೇ ಇಲ್ಲ. ನಿಜವಾದ ಅಭಿವೃದ್ಧಿಯನ್ನು ಪ್ರಭಾವಿಸುವ ಅಂಶಗಳೆಂದರೆ ಜಾತಿ, ಧರ್ಮ, ಲಿಂಗಗಳು. ಈ ಸಾಮಾಜಿಕ ಅಂಶಗಳು ಮತ್ತು ಅಭಿವೃದ್ಧಿ ನಡುವೆ ನೇರ ಸಂಬಂಧವಿದೆ. ಹಲವು ದಶಕಗಳ ಅಭಿವೃದ್ಧಿ ನಂತರ ನಮ್ಮ ಸಮಾಜ ಪಿರಾಮಿಡ್ ರೂಪದಲ್ಲಿದೆ. ಪಿರಾಮಿಡ್‌ನ ವಿವಿಧ ಭಾಗಗಳಲ್ಲಿರುವವರು ಮತ್ತು ಜಾತಿ, ಧರ್ಮ, ಲಿಂಗಗಳ ನಡುವೆ ನೇರ ಸಂಬಂಧವಿದೆ. ಪಿರಾಮಿಡ್ ಬುಡದಲ್ಲಿರುವ ಸಾಮಾಜಿಕ ಸ್ಥಿತಿ ಹಲವು ಅಸಾಮರ್ಥ್ಯಗಳನ್ನು ಸೃಷ್ಟಿಸುತ್ತಿವೆ. ಈ ಅಸಾಮರ್ಥ್ಯಗಳ ದಿಶೆಯಿಂದ ತಳಸ್ತರದಲ್ಲಿರುವ ಜನರಿಗೆ ಅಭಿವೃದ್ಧಿಯನ್ನು ಜೀರ್ಣಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಆದುದರಿಂದ ಅಭಿವೃದ್ಧಿಯ ಮುಖ್ಯ ಉದ್ದೇಶ ಆಸಾಮರ್ಥ್ಯಗಳನ್ನು ಸೃಷ್ಟಿಸುವ ಅಸ್ವಾತಂತ್ರ್ಯಗಳನ್ನು ನಿರ್ನಾಮ ಮಾಡುವುದು ಹೀಗೆ ನಂತರದ ದಿನಗಳಲ್ಲಿ ಅಭಿವೃದ್ಧಿ ಸ್ವಾತಂತ್ರ್ಯ ಹೆಚ್ಚಳವಾಯಿತು.[೪೧] ಸಮಾನತೆ ಇಲ್ಲದೆ ಸ್ವಾತಂತ್ರ್ಯದ ಆಚರಣೆ ಸಾಧ್ಯವಿಲ್ಲ. ಅಷ್ಟು ಮಾತ್ರವಲ್ಲ ಸಮಾನತೆಯ ಪ್ರಶ್ನೆ ಕೇವಲ ನೈತಿಕ ಪ್ರಶ್ನೆಯಾದರೆ ಸಾಲದು ಕಾನೂನಿನ ಅಥವಾ ಹಕ್ಕಿನ ಪ್ರಶ್ನೆಯಾಗಬೇಕೆನ್ನುವ ಪ್ರಶ್ನೆ ನಂತರ ಮುಂಚೂಣಿಗೆ ಬಂತು ಹಕ್ಕು ಮತ್ತೊಬ್ಬರನ್ನು ನಿರ್ದಿಷ್ಟ ರೂಪದಲ್ಲಿ ವರ್ತಿಸುವಂತೆ ಒತ್ತಾಯ ಹೇರುತ್ತಿದೆ ಹೀಗೆ ಅಭಿವೃದ್ಧಿ ಇಂದು ಹಕ್ಕಿನ ಪರಿಭಾಷೆಯಾಗಿದೆ.

ಮಾರುಕಟ್ಟೆ ಅಭಿವೃದ್ಧಿ: ತೊಂಬತ್ತರ ದಶಕದ ನಂತರ ನಮ್ಮಲ್ಲಿ ಮಾರುಕಟ್ಟೆ ನಿರ್ದೇಶಿತ ಅಭಿವೃದ್ಧಿ ಅಥವಾ ನಿಯೋ ಲಿಬರಲ್ ಅಭಿವೃದ್ಧಿ ಜಾರಿಯಲ್ಲಿದೆ ಇದು ಉದಾರೀಕರಣ, ಖಾಸಗೀಕರಣ, ಜಾಗತೀಕರಣ ನೀತಿಗಳೆಂದು ಪ್ರಚಾರ ಪಡೆದಿದೆ ಮಾರುಕಟ್ಟೆ ಅಭಿವೃದ್ಧಿಯ ಮೂಲ ಉದ್ದೇಶವೆಂದರೆ ಹೆಚ್ಚು ಹೆಚ್ಚು ಉತ್ಪಾದನೆಯನ್ನು ಮಾಡುವುದು ಉತ್ಪಾದನೆ ಹೆಚ್ಚಾದಾಗ ವಸ್ತುಗಳು ಕಡಿಮೆ ಬೆಲೆಗೆ ಸಿಗುತ್ತವೆ. ಇದರಿಂದ ಬಡವರ ಅಭಿವೃದ್ಧಿಯಾಗುತ್ತದೆ ಎನ್ನುವುದು ಸಾಮಾನ್ಯ ಗ್ರಹಿಕೆ ಈ ಮಾದರಿಯಲ್ಲಿ ಕೆಲಸ ಮಾಡುತ್ತಿದೆ. ವ್ಯಕ್ತಿ, ಸಮಾಜ, ಸರಕಾರ ಮಾರುಕಟ್ಟೆಗಳನ್ನು ಮಾರುಕಟ್ಟೆ ನಿರ್ದೇಶಿತ ಅಭಿವೃದ್ಧಿ ಈ ಕೆಳಗಿನಂತೆ ಕಲ್ಪಸಿಕೊಂಡಿದೆ.

ವ್ಯಕ್ತಿ ಮತ್ತು ಸಮಾಜ : ಮಾರುಕಟ್ಟೆ ನಿರ್ದೇಶಿತ ಅಭಿವೃದ್ಧಿ ವ್ಯಕ್ತಿಗಳ ಸಮೂಹವನ್ನೇ ಸಮಾಜವೆಂದು ತಿಳಿಯುತ್ತದೆ ಹಾಗಾಗಿ ವ್ಯಕ್ತಿಗಳ ಸಮೂಹವನ್ನು ಹೊರೆತುಪಡಿಸಿದ ಸಮಾಜದ ಇರುವಿಕೆಯನ್ನೇ ಇವರು ಅಲ್ಲಗಳಿಯುತ್ತಾರೆ. ಸಮುದಾಯ, ಸಂಸ್ಥೆ, ಮೌಲ್ಯಗಳೇ ಇಲ್ಲದಿದ್ದರೆ ವ್ಯಕ್ತಿಯ ಬೇಕು ಬೇಡಗಳನ್ನು ಇವುಗಳು ಪ್ರಭಾವಿಸುವ ಪ್ರಶ್ನೆಯೇ ಇರುವುದಿಲ್ಲ. ಮಾರುಕಟ್ಟೆ ಅಭಿವೃದ್ಧಿಯನ್ನು ಪ್ರತಿಪಾದಿಸುವವರು ವ್ಯಕ್ತಿಯನ್ನು ಈ ಕೆಳಗಿನ ಸಂಗತಿಗಳೊಂದಿಗೆ ಕಲ್ಪಿಸಿಕೊಳ್ಳುತ್ತಾರೆ. ಒಂದು ಪ್ರತಿಯೊಬ್ಬರಿಗೂ ತಮ್ಮ ಬೇಕು ಬೇಡಗಳ ಬಗ್ಗೆ ಖಚಿತತೆ ಇದೆ ಮತ್ತು ತಮ್ಮ ಸುಖ ಸಂತೋಷಗಳನ್ನು ಹೆಚ್ಚಿಸಿಕೊಳ್ಳುವುದಕ್ಕೆ ಪ್ರತಿಯೊಬ್ಬರು ಆದ್ಯತೆ ನೀಡುತ್ತಾರೆ. ಎರಡು ಪ್ರತಿಯೊಬ್ಬರು ಅವಶ್ಯವಿರುವ ಸಂಪನ್ಮೂಲಗಳನ್ನು ಹೊಂದಿದ್ದಾರೆ, ಉದಾಹರಣೆಗೆ ಭೂಮಿ, ಬಂಡವಾಳ, ಪ್ರಾಕೃತಿಕ

ಸಂಪನ್ಮೂಲ, ಮಾನವ ಸಂಪನ್ಮೂಲ ಇವೆಲ್ಲವೂ ಖಾಸಗಿ ಒಡೆತನದಲ್ಲಿರುವುದೇ ಉತ್ತಮವೆಂದು ಇವರು ವಾದಿಸುತ್ತಾರೆ.[೪೨] ಮೂರು ತಮ್ಮಲ್ಲಿರುವ ಸಂಪನ್ಮೂಲಗಳನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡರೆ ಅಭಿವೃದ್ಧಿಯಾಗುತ್ತದೆ ಭೂಮಿ ಇದ್ದರೆ ಬಾಡಿಗೆ, ಉತ್ಪದನೆಗೆ ಬಳಸುವುದು, ಹಣವಿದ್ದರೆ ಬಂಡವಾಳ ಹೂಡುವುದು ಅಥವಾ ಬಡದಡಿಗೆ ನೀಡುವುದು, ಶಕ್ತಿಯಿದ್ದರೆ ಶ್ರಮವಾಗಿ ಪರಿವರ್ತಿಸುವುದು ಹೀಗೆ ಸೋಮಾರಿಗಳಾಗದೆ ಇಂದಿನ ತಂತ್ರಜ್ಞಾನಕ್ಕೆ ಅನುಗುಣವಾಗಿ ಬಳಸಿಕೊಂಡಲ್ಲಿ ಲಾಭಗಳಿಸುತ್ತಾರೆ.[೪೩] ಈ ರೀತಿಯಲ್ಲಿ ರಾಷ್ಟ್ರೀಯ ಸಂಪತ್ತು ಎಲ್ಲರಿಗೂ ವಿತರಣೆಗೊಳ್ಳುತ್ತದೆ ಎನ್ನುವುದು ನಿಯೋ ಕ್ಲಾಸಿಕಲ್ ಎಕನಾಮಿಕ್ಸನ ವಾದ.

ಮಾರುಕಟ್ಟೆ : ಇವರ ವಾದದ ಪ್ರಕಾರ ಅನುಕೂಲಸ್ಥರು ಅನಾನುಕೂಲಸ್ಥರನ್ನು ಶೋಷಿಸಿ ಸಂಪತ್ತು ಗಳಿಸುತ್ತಿಲ್ಲ. ಅದರ ಬದಲು ಅವರು ತಮ್ಮಲ್ಲಿರುವ ಸಂಪನ್ಮೂಲಗಳನ್ನು ವಿವೇಚನೆಯಿಂದ ಬಳಸಿ ಸಂಪತ್ತು ಗಳಿಸುತ್ತಾರೆ. ಪ್ರತಿಯೊಬ್ಬರು ಅವರವರು ಮಾಡುವ ಆಯ್ಕೆಗಳಿಂದ ಸಂಪತ್ತಿನಲ್ಲಿ ಪಾಲು ಪಡೆಯುತ್ತಾರೆ ಒಬ್ಬರ ಶ್ರೀಮಂತಿಕೆಯಲ್ಲಿ ಮತ್ತೊಬ್ಬರ ಬಡತನ ಅಡಗಿಲ್ಲವೆನ್ನುವುದು ಇವರ ವಾದ[೪೪] ಇಂತಹ ವ್ಯಕ್ತಿಗಳು ವ್ಯವಹರಿಸಲು ಪೂರಕವಾಗುವ ಪರಿಸರವನ್ನು ಮಾರುಕಟ್ಟೆ ಒದಗಿಸುತ್ತದೆಯೆಂದು ನೀಯೊ ಕ್ಲಾಸಿಕಲ್ ಎಕನಾಮಿಷ್ಟಗಳವಾದ ಮಾರುಕಟ್ಟೆಯಲ್ಲಿ ಜಾತಿ, ಲಿಂಗ, ಧರ್ಮ, ಹುಟ್ಟಿದ ಸ್ಥಳ ಇವು ಯಾವುದನ್ನು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ ಕೇವಲ ಲಾಭದ ಉದ್ದೇಶದಿಂದ ಮಾತ್ರ ವ್ಯವಹಾರಗಳು ನಡೆಯುತ್ತವೆ.

ಹುಟ್ಟಿನಿಂದ ಬಂದ ಎಲ್ಲ ಗುರುತುಗಳನ್ನು ಮರೆತು ನೀವು ಮಾರುಕಟ್ಟೆಯಲ್ಲಿ ವ್ಯವಹರಿಸಬಹುದು. ಇದನ್ನೇ ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ ನೀವು ಅಲ್ಲಿ ಸರ್ವ ಸ್ವಾತಂತ್ರ್ಯರು. ಅಂದರೆ ಮಾರುಕಟ್ಟೆಗೆ ಪ್ರವೇಶಿಸಿದ ಕಾರಣಕ್ಕಾಗಿ ಮಾರಲೇ ಬೇಕು ಅಥವಾ ಖರೀದಿಸಲೇಬೇಕೆನ್ನುವ ಕಡ್ಡಾಯವಿಲ್ಲ. ಒಪ್ಪಿಗೆಯಿಂದ ಮಾತ್ರ ಎಲ್ಲವೂ ನಡೆಯುವುದು ಜಾತಿ, ಧರ್ಮ, ಲಿಂಗಗಳ ಹಿನ್ನೆಲೆ ಮಾರುಕಟ್ಟೆಯಲ್ಲಿ ಮಹತ್ವ ಪಡೆಯುವುದರಿಂದ ಮಾರುಕಟ್ಟೆಯಲ್ಲಿ ಸಮಾನತೆಯು ಇದೆ ಎನ್ನುವ ಚಿತ್ರಣ ಇದೆ. ವ್ಯಕ್ತಿಯಲ್ಲಿ ಮಾರುವ ಅಥವಾ ಖರೀದಿಸುವ ಸರಕು ಅಥವಾ ಸೇವೆಗಳಿರುವುದು ಮುಖ್ಯವೇ ಹೊರತು ಅವರ ಹಿನ್ನೆಲೆ ಇಲ್ಲಿ ಮುಖ್ಯವಲ್ಲ.[೪೫] ಹೀಗೆ ಮಾರುಕಟ್ಟೆ ಚರಿತ್ರೆಯಿಂದ ಬಂದ ಎಲ್ಲಾ ಬಂಧನಗಳಿಂದ ನಿಮ್ಮನ್ನು ಮುಕ್ತಗೊಳಿಸಿ ಪರಿಪೂರ್ಣ ವ್ಯಕ್ತಿಯನ್ನಾಗಿಸುತ್ತದೆ. ಅಂದರೆ ನಿಮ್ಮ ಸೋಲು ಗೆಲುವಿಗೆ, ಲಾಭ ನಷ್ಟಕ್ಕೆ, ಸುಖ ದುಃಖಕ್ಕೆ ಮಾರುಕಟ್ಟೆ ನಿಮ್ಮನ್ನು ಜವಾಬ್ದಾರರನ್ನಾಗಿಸುತ್ತದೆ. ಮಾರುಕಟ್ಟೆ ವ್ಯಕ್ತಿಗಳನ್ನು ಸಮುದಾಯದ ಪ್ರಭಾವದಿಂದ ಬೇರ್ಪಡಿಸಿದಂತೆ ಸರಕು ಸೇವೆಗಳನ್ನು ಕೂಡಾ ಅವುಗಳ ಸ್ಥಾನ ಮಾನಗಳಿಂದ ಕಿತ್ತು ಕೇವಲ ಸರಕನ್ನಾಗಿಸುತ್ತದೆ, ಅಥವಾ ಒಂದೇ ತರಹದ ವಸ್ತುಗಳನ್ನು ನಾವು ವಿಭಿನ್ನವಾಗಿ ಬಳಸುತ್ತೇವೆ ವಿಭಿನ್ನವಾದ ಸ್ಥಾನಮಾನ ನೀಡುತ್ತವೆ. ಒಂದೊಂದು ಸಲ ವ್ಯಕ್ತಿಗಿಂತಲೂ ಹೆಚ್ಚಿನ ಸ್ಥಾನ ನೀಡುತ್ತೇವೆ ಆದರೆ ಮಾರುಕಟ್ಟೆಯಲ್ಲಿ ಎಲ್ಲವುಗಳಿಗೆ ಒಂದೆ ಸ್ಥಾನಮಾನ ಕೇವಲ ಬೆಲೆಯಲ್ಲಿ ಮಾತ್ರ ಹೆಚ್ಚು ಕಡಿಮೆ ಇರುವುದನ್ನು ಕಾಣುತ್ತೇವೆ.[೪೬] ಮಾರುಕಟ್ಟೆಯಲ್ಲಿ ವ್ಯಕ್ತಿಗಳು ಅವರ ಹುಟ್ಟಿನಿಂದ ಬಂದ ಬಂಧನಗಳಿಂದ ಮುಕ್ತರಾಗಿ

ಪರಿಪೂರ್ಣ ಮಾರಾಟಗಾರರು ಅಥವಾ ಖರೀದಿದಾರರಾಗುತ್ತಾರೆ. ಅಂದರೆ ಚರಿತ್ರೆಯಿಂದ ಬಂದ ಮೇಲು ಕೀಳುಗಳು ಮಾರುಕಟ್ಟೆಯಲ್ಲಿ ಕೆಲಸ ಮಾಡುವುದಿಲ್ಲ ಇಲ್ಲಿ ಎಲ್ಲರೂ ಸಮಾನರೂ, ಸರಕು ಸೇವೆಗಳು ಮೌಲ್ಯ ತೀರ್ಮಾನದಲ್ಲೂ ವಸ್ತುಗಳ ಬಳಕೆ ಅಥವಾ ಹಿನ್ನೆಲೆಗಳು ಕೆಲಸ ಮಾಡುವುದಿಲ್ಲ, ಅದರ ಬದಲು ಇವುಗಳು ಪೂರೈಕೆ ಮತ್ತು ಬೇಡಿಕೆಗಳು ಪ್ರಮುಖ ಪಾತ್ರ ವಹಿಸುತ್ತವೆ. ಇವೆಲ್ಲ ಮಾರುಕಟ್ಟೆ ಮೂಲ ತತ್ವಗಳು. ಇದು ನಿಯೋ ಕ್ಲಾಸಿಕಲ್ ಎಕಾನಾಮಿಕ್ಸ್ ಪ್ರತಿಪಾದಿಸುವ ಮಾರುಕಟ್ಟೆ ಕಲ್ಪನೆ. ಇಂತಹ ಮಾರುಕಟ್ಟೆಯಲ್ಲಿ ವ್ಯವಹರಿಸುವ ವ್ಯಕ್ತಿಗಳು ತಮ್ಮ ಬೇಕು ಬೇಡಗಳನ್ನು ಪೂರೈಸಿಕೊಳ್ಳುತ್ತಾರೆ. ಇಂತಹ ಮಾರುಕಟ್ಟೆ ಉತ್ಪಾದಿತ ಸಂಪತ್ತನ್ನು ಅಥವಾ ಸರಕು ಸೇವೆಗಳನ್ನು ಮತ್ತು ಉತ್ಪಾದನೆ ಪರಿಕರಣಗಳನ್ನು ಸಮಾಜದ ವಿವಿಧ ಗುಂಪುಗಳ ನಡುವೆ ವಿತರಿಸುತ್ತದೆ.

ಸರಕಾರ: ಮಾರುಕಟ್ಟೆ ನಿರ್ದೇಶಿತ ಅಭಿವೃದ್ಧಿಯಲ್ಲಿ ಸರಕಾರದ ಪಾತ್ರ ಕೂಡಾ ನಿರ್ಧರಿತವಾಗಿದೆ. ಆಡಳಿತದ ವೆಚ್ಚವನ್ನು ಕಡಿಮೆ ಮಾಡುವ ದೃಷ್ಟಿಯಿಂದ ಮಾರುಕಟ್ಟೆ ನಿರ್ದೇಶಿತ ಅಭಿವೃದ್ಧಿಯಲ್ಲಿ ಸರಕಾರದ ಗಾತ್ರ ಮತ್ತು ಪಾತ್ರ ಎರಡೂ ಕೂಡಾ ಕಡಿಮೆ ಇರಬೇಕೆನ್ನುವ ಗ್ರಹಿಕೆ ಇದೆ.[೪೭] ಸರಕಾರ ಹಿಂದೆ ನಡೆಸುತ್ತಿದ್ದ ಹಲವಾರು ಸಾಮಾಜಿಕ ಮತ್ತು ಆರ್ಥಿಕ ಕಾರ್ಯಗಳನ್ನು ಇವತ್ತು ಖಾಸಗಿಯವರು ನಡೆಸುತ್ತಿದ್ದಾರೆ ಕೆಲವೊಂದಿಷ್ಟನ್ನು ಸರಕಾರ ಮತ್ತು ಖಾಸಗಿಯವರು ಸೇರಿ ನಡೆಸುತ್ತಿರುದನ್ನು ಕಾಣುತ್ತೇವೆ ಇದು ಅಭಿವೃದ್ಧಿ ಸಂಕೇತ ಎನ್ನುತ್ತಾರೆ.

ಸಾಮಾಜಿಕ ಮತ್ತು ಆರ್ಥಿಕ ಕಾರ್ಯಗಳನ್ನು ಖಾಸಗಿಯವರೇ ಮಾಡಿದರೆ ಸರಕಾರದ ಕೆಲಸವೇನು ಎನ್ನುವ ಪ್ರಶ್ನೆ ಉದ್ಭವಿಸುತ್ತದೆ ಸರಕಾರ ಉದ್ದಿಮೆಗಳಿಗೆ ಕಡಿಮೆ ಬೆಲೆಯಲ್ಲಿ ನೀರು, ಭೂಮಿ, ಹಣಕಾಸು, ಪ್ರಾಕೃತಿಕ ಸಂಪನ್ಮೂಲ, ಮಾನವ ಸಂಪನ್ಮೂಲಗಳನ್ನು ಒದಗಿಸುವುದು ಸರಕಾರದ ಜವಾಬ್ದಾರಿಯಾಗಿದೆ. ಕಡಿಮೆ ಬೆಲೆಗೆ ಉದ್ದಿಮೆಗಳಿಗೆ ಭೂಮಿಯನ್ನು ನೀಡಲು ೨೦೧೩ ರ ಭೂಸ್ವಾಧೀನ ಮಸೂದೆ ತಿದ್ದುಪಡೆ ಮಾಡಲು ಹೊರಟಿದೆ ಈ ಕಾಯ್ದೆ ಪ್ರಕಾರ ಶೇಕಡಾ ೮೦ ರಷ್ಟು ರೈತರ ಒಪ್ಪಿಗೆ ಬೇಕು ನೀರಾವರಿ ಭೂಮಿಯನ್ನು ವಶಪಡಿಸಿಕೊಳ್ಳುವ ಹಾಗಿಲ್ಲ. ಮಾರುಕಟ್ಟೆಯ ಐದು ಪಟ್ಟು ಬೆಲೆ ಕೊಡಬೇಕು ಭೂಮಿ ವಶಪಡಿಸಿಕೊಂಡ ಐದು ವರ್ಷದೊಳಗೆ ವಶಪಡಿಸಿಕೊಂಡ ಉದ್ದೇಶಕ್ಕೆ ಸಂಬಂಧ ಪಟ್ಟಂತಾ ಉದ್ದಿಮೆಯನ್ನು ಸ್ಥಾಪಿಸಬೇಕು ಇಲ್ಲವಾದರೆ ವಾಪಸ್ಸು ನೀಡಬೇಕಾಗುತ್ತದೆ. ಯಾವುದೇ ಪರಿಸರ ಮಾಲಿನ್ಯವಾಗದಂತೆ ನೋಡಿಕೊಳ್ಳಬೇಕು. ಈ ಭೂಮಿ ಮೇಲೆ ಪರೋಕ್ಷವಾಗಿ ಅವಲಂಬಿತರಾದ ಕುಂಬಾರ, ಕಂಬಾರ, ಚಮ್ಮಾರ, ಕೃಷಿ ಕೆಲಸಗಾರರಿಗೂ ಪರಿಹಾರ ನೀಡಬೇಕು.[೪೮] ಇವೆಲ್ಲ ಶರತ್ತುಗಳು ೨೦೧೩ರ ಭೂಸ್ವಾಧೀನ ಮಸೂದೆಯಲ್ಲಿದ್ದವು.

ಸರಕಾರಿ ಮತ್ತು ಖಾಸಗಿ ಸಾಲವೆಂದು ಎರಡು ಪ್ರಕಾರದಲ್ಲಿ ವಿಭಾಗಿಸಲಾಗಿದೆ. ಸರಕಾರಿ ಸಾಲದ ಶೇ ೬೦ ನ್ನು ಸಮನ್ವಯ ವಲಯಕ್ಕೆ ಮತ್ತು ಶೇ ೪೦ ನ್ನು ಆದ್ಯತಾ ವಲಯಕ್ಕೆ ನೀಡುವಂತೆ ಸಾಲ ನೀತಿಯನ್ನು ತಿದ್ದುಪಡಿ ಮಾಡಲಾಗಿದೆ. ಶೇ.೪೦ ರಷ್ಟು ಸರಕಾರಿ ಸಾಲದಲ್ಲಿ

ಶೇ.೧೮ ಕೃಷಿಗೆ, ಶೇ. ೧೨ ಸಣ್ಣ ಪುಟ್ಟ ವ್ಯಾಪಾರ ಉದ್ದಿಮೆಗಳಿಗೆ ಮತ್ತು ಶೇ. ೧೦ ಬಡತನ ನಿವಾರಣ ಕಾರ್ಯಕ್ರಮಗಳಿಗೆ ಹೋಗುತ್ತದೆ ಅಂದರೆ ನಮ್ಮ ಸಮಾಜದ ಶೇ. ೬೦ ರಷ್ಟು ಜನರು ಶೇ. ೪೦ ರಷ್ಟು ಸರಕಾರ ಸಾಲ ಪಡೆದರೆ ವ್ಯಾಪಾರ ಉದ್ದಿಮೆಗಳನ್ನು ನಡೆಸುವ ಶೇ. ೧೦ ರಷ್ಟು ಜನರು ಸರಕಾರಿ ಸಾಲದ ಶೇ. ೬೦ ನ್ನು ಪಡೆಯುತ್ತಾರೆ.[೪೯]

ಮಾರುಕಟ್ಟೆ ಅಭಿವೃದ್ಧಿಯೆಂದು ಜನಸಾಮಾನ್ಯರಿಗೆ ಅನುಕೂಲಗಳಾಗುವ ಬದಲು ಅನಾನುಕೂಲಗಳೇ ಹೆಚ್ಚಾಗಿರುವುದನ್ನು ನೋಡಿ ಇದು ಮಾರುಕಟ್ಟೆಯದ್ದೇ ಅಥವಾ ನಿಯೋ ಲಿಬರಲ್ ಅಭಿವೃದ್ಧಿ ಪಾಲಸಿಗಳ ಸಮಸ್ಯೆಯೇ ಇರಬೇಕೆಂದು ಗ್ರಹಿಸುವ ಸಾಧ್ಯತೆಗಳಿವೆ. ಖಂಡಿತವಾಗಿಯೂ ಈ ಪಾಲಿಸಿಗಳ ಗರ್ಭದಲ್ಲೇ ಅಸಮಾನತೆ ಸೃಷ್ಟಿಸುವ ಅಂಶಗಳಾಗಿವೆ ಭೂಮಿ, ಹಣಕಾಸು, ಪ್ರಾಕೃತಿಕ ಸಂಪನ್ಮೂಲ, ಶಿಕ್ಷಣ, ಆರೋಗ್ಯಗಳನ್ನು ಕೆಲವರಲ್ಲೇ ಕ್ರೋಢಿಕರಣಗೊಳಿಸುವ ನಿಯೋ ಲಿಬರಲ್ ಪಾಲಿಸಿಗಳ ಪ್ರಭಾವವನ್ನು ನೋಡಿದ್ದೇವೆ ಒಳ್ಳೆಯ ಸರಕಾರಗಳು ಮಾರುಕಟ್ಟೆಯ ನಕಾರಾತ್ಮಕ ಪರಿಣಾಮಗಳನ್ನು ಕಡಿಮೆ ಮಾಡಬಹುದು. ಒಂದು ವೇಳೆ ಸರಕಾರದ ಗುಣಮಟ್ಟ ಕೆಟ್ಟರೆ, ಈ ಪಾಲಿಸಿಗಳು ಜನ ಸಾಮಾನ್ಯರ ಬದುಕಿನ ಮೇಲೆ ಭೀಕರ ಪರಿಣಾಮ ಬೀರುತ್ತದೆ. ಹೀಗೆ ನಿಯೋ ಲಿಬರಲ್ ಅಭಿವೃದ್ಧಿ ಗುಣಮಟ್ಟ ಮತ್ತು ಪ್ರಜಾಪ್ರಭುತ್ವದ ಗುಣಮಟ್ಟ ನಡುವೆ ನೇರ ಸಂಬಂಧ ಇದೆ. ಪ್ರಜಾಪ್ರಭುತ್ವದ ಗುಣಮಟ್ಟ ಉತ್ತಮಗೊಂಡಂತೆ ಮಾರುಕಟ್ಟೆಯ ಗುಣಮಟ್ಟ ಉತ್ತಮಗೊಳ್ಳುತ್ತದೆ. ಮತ್ತು ಪ್ರಜಾಪ್ರಭುತ್ವದ ಗುಣಮಟ್ಟ ಕೆಟ್ಟಂತೆ ಮಾರುಕಟ್ಟೆ ಗುಣಮಟ್ಟ ಕೆಡುತ್ತದೆ.[೫೦] ಮುಕ್ತ ಮಾರುಕಟ್ಟೆ ನಿಜವಾದ ಅರ್ಥದಲ್ಲಿ ಆಚರಣೆಗೆ ಬರಬೇಕಾದರೆ ಮುಕ್ತ ಪ್ರಜಾಪ್ರಭುತ್ವ ಆಚರಣೆಯಲ್ಲಿರಬೇಕಾಗುತ್ತದೆ. ಪ್ರಜಾಪ್ರಭುತ್ವ ಸಂಕುಚಿತಗೊಂಡಂತೆ ಮಾರುಕಟ್ಟೆ ಕೂಡಾ ಸಂಕುಚಿತಗೊಳ್ಳುತ್ತದೆ. ಗುಣಮಟ್ಟದ ಪ್ರಜಾಪ್ರಭುತ್ವ ಆಚರಣೆಯಲ್ಲಿ ಇರಬೇಕಾದರೆ ಸಮಾಜದ ಎಲ್ಲರೂ ಪ್ರಜಾಪ್ರಭುತ್ವದಲ್ಲಿ ಮುಕ್ತವಾಗಿ ಪಾಲ್ಗೊಳ್ಳುವ ಅವಕಾಶ ಇರಬೇಕು. ತಾತ್ವಿಕವಾಗಿ ಈ ಅವಕಾಶ ನಮ್ಮಲ್ಲಿದೆ, ಅಂದರೆ ಚುನಾವಣೆಯಲ್ಲಿ ಭಾಗವಹಿಸಲು ವ್ಯಕ್ತಿಯ ಯಾವುದೇ ಜಾತಿ, ಧರ್ಮ, ಲಿಂಗ, ವರ್ಗಗಳು ಅಡ್ಡಿಯಾಗಬಾರದು ಆದರೆ ವಾಸ್ತವದಲ್ಲಿ ಆ ರೀತಿ ನಡೆಯುತ್ತಿಲ್ಲ.

ಜಾತಿ, ಧರ್ಮಗಳ ಗುರುತಿನ ರಾಜಕೀಯ ವ್ಯಕ್ತಿ ಸ್ವಾತಂತ್ರ್ಯವನ್ನು ಸಂಪೂರ್ಣ ನುಂಗಿ ನೀರು ಕುಡಿಯುತ್ತದೆ. ವಾಕ್, ಅಭಿವ್ಯಕ್ತಿ ಸ್ವಾತಂತ್ರ್ಯಗಳನ್ನು ಬಿಡಿ ದಿನನಿತ್ಯದ ಬದುಕಿನ ಉಣ್ಣುವ ತಿನ್ನುವ, ಪೂಜಿಸುವ, ಪ್ರೀತಿಸುವ, ಮದುವೆಯಾಗುವ, ಮಕ್ಕಳು ಹೆರುವ ಅಥವಾ ಹೇರದಿರುವ ಸ್ವಾತಂತ್ರ್ಯ ಕೂಡ ನಮ್ಮಲ್ಲಿ ಬಹುತೇಕರಿಗೆ ಇಲ್ಲವೆಂದರೆ ಆಶ್ಚರ್ಯವಾಗಬಹುದು[೫೧] ಆದರೆ ಇದು ವಾಸ್ತವ ಪುರುಷರಿಗೆ ಸಮಾನವಾಗಿ ಮಹಿಳೆಯರು ದುಡಿದರು ಅವಳಿಗೆ ಸಮಾನವಾದ ಸ್ಥಾನಮಾನ ಸಿಗುತ್ತಿಲ್ಲ ಮತ್ತು ಅವಳಿಗೆ ಮತ್ತೊಂದಿಷ್ಟು ಜವಾಬ್ದಾರಿಗಳು ಹೆಗಲ ಮೇಲೆ ಏರಿ ಕುಳಿತಿರುವುದನ್ನು ನಾವು ಕಾಣುತ್ತೇವೆ.

ಗ್ರಾಮೀಣಾಭಿವೃದ್ಧಿ : ವರ್ಷದಿಂದ ವರ್ಷಕ್ಕೆ ಗ್ರಾಮೀಣಾಭಿವೃದ್ಧಿಯ ಮೇಲೆ ಸರಕಾರ ಮಾಡುವ ವಿನಿಯೋಜನೆ ಕಡಿಮೆಯಾಗುತ್ತದೆ. ಇದೇ ಪ್ರಮಾಣದಲ್ಲಿ ರಾಷ್ಟ್ರೀಯ ಉತ್ಪನ್ನದಲ್ಲಿ ಕೃಷಿಯ ಪಾಲು ಕುಸಿಯುತ್ತಿದೆ. ಆದರೆ ಕೃಷಿಯನ್ನು ನಂಬಿ ಬದುಕುವವರ ಸಂಖ್ಯೆ ಇದೇ ಪ್ರಮಾಣದಲ್ಲಿ ಕಡಿಮೆಯಾಗಿಲ್ಲ ಇಂತಹ ಕಾರಣಗಳಿಂದಾಗಿ ಗ್ರಾಮೀಣ ಮತ್ತು ನಗರದ ಜನರ ಜೀವನ ಮಟ್ಟದಲ್ಲಿ ಆಕಾಶ ಭೂಮಿಯ ಅಂತರವಿದೆ. ಗ್ರಾಮೀಣ ಶಿಕ್ಷಣ, ಆರೋಗ್ಯ, ಮೂಲ ಸೌಕರ್ಯ, ಪರಿಸರಗಳ ಮೇಲೂ ಸರಕಾರ ದೊಡ್ಡ ಪ್ರಮಾಣದ ಸಂಪನ್ಮೂಲ ವಿನಿಯೋಜಿಸಿಲ್ಲ ಹಾಗಾಗಿ ಗ್ರಾಮೀಣ ಜನರ ಆರೋಗ್ಯ, ಶಿಕ್ಷಣ ವಸತಿ ಪರಿಸರ ಎಲ್ಲವೂ ಚಿಂತಾಜನಕ ಸ್ಥಿತಿಯಲ್ಲಿದೆ ಒಟ್ಟಾರೆಯಾಗಿ ಹೇಳಬೇಕೆಂದರೆ ಹಳ್ಳಿ ಬದುಕು ಸಾಧಿಸಬೇಕಾದ ಗುರಿಯಲ್ಲಿ ಇಲ್ಲ. ಅನಿವಾರ್ಯವಾಗಿ ಸವೆಸಬೇಕಾದ ದಾರಿಯಾಗಿದೆ. ಇನ್ನೂ ಆರ್ಥಿಕ ಸ್ಥಿತಿಯಂತು ಕೇಳುವುದು ಬೇಡ. ದುಡಿಯುವ ಕೈಗಳಿಗೆ ಉದ್ಯೋಗವಿಲ್ಲ. ಭೂಮಿ ಇದ್ದವರಿಗೆ ಬೇಸಾಯ ಮಾಡಲು ನೀರಿಲ್ಲ. ಸಾಲ ಮಾಡಿ ಕೃಷಿ ಮಾಡಿದರೆ ಅವುಗಳ ವೆಚ್ಚ ಭರಿಸುವಷ್ಟು ಬೆಲೆ ಇಲ್ಲ. ಕೃಷಿ ಬಿಟ್ಟು ವ್ಯಾಪಾರ ಮಾಡಿದರೆ ಚಿಕ್ಕಾಸು ಹುಟ್ಟುವುದಿಲ್ಲ. ಪೇಟೆ ಪಟ್ಟಣಗಳಿಗೆ ವಲಸೆ ಹೋಗುವುದು ಬಿಟ್ಟರೆ ಬೇರೆ ದಾರಿಯಿಲ್ಲ ಎನ್ನುವ ಸ್ಥಿತಿ ಇದೆ.[೫೨] ಗ್ರಾಮೀಣ ಜನರ ದುಃಸ್ಥಿತಿ ದೇವರ ಅಥವಾ ಪ್ರಕೃತಿ ಸೃಷ್ಟಿಯಲ್ಲ ಇದು ಅಭಿವೃದ್ಧಿ ಸಿದ್ಧಾಂತಗಳು ಸೃಷ್ಟಿಸಿದ ಅವಾಂತರಗಳು ಅಭಿವೃದ್ಧಿ ಮೇಲಿನ ಬಹುತೇಕ ಸಿದ್ಧಾಂತಗಳು ಕೈಗಾರಿಕೆಗಳನ್ನು ಅಭಿವೃದ್ಧಿಯ ಆಧಾರಸ್ತಂಭ ಎಂದು ಬಣ್ಣಿಸಿದರೆ ಕೃಷಿಯನ್ನು ಪೋಷಕ ನಟರ ರೂಪದಲ್ಲಿ ನೋಡಿವೆ, ಆರ್ಥಿಕಾಭಿವೃದ್ಧಿಯ ಎಲ್ಲ ಸಿದ್ಧಾಂತಗಳು ಸರಕು ಸೇವೆಗಳ ಪೂರೈಕೆಯನ್ನು ಹೆಚ್ಚಿಸುವುದನ್ನು ಅಭಿವೃದ್ಧಿಯೆಂದು ವ್ಯಾಖ್ಯಾನಿಸಿವೆ.[೫೩] ಜೊತೆಗೆ ವ್ಯಕ್ತಿ ಅಥವಾ ಕುಟುಂಬಗಳ ಅಭಿವೃದ್ಧಿಯನ್ನು ಈ ಸಿದ್ಧಾಂತಗಳು ಮಾಪನ ಮಾಡುತ್ತಿವೆ. ಇಲ್ಲಿ ಕೃಷಿಗೆ ಮಹತ್ವ ನೀಡದ ಕೃಷಿಯೇತರ ಚಟುವಟಿಕೆಗಳನ್ನು ಪರಿಗಣಿಸುತ್ತಿವೆ ಅಭಿವೃದ್ಧಿ ಸಿದ್ಧಾಂತಗಳು.

ಆಧುನೀಕರಣ ಸಿದ್ಧಾಂತ ರಚನೆಗೆ ಸಾಕಷ್ಟು ಸಾಮಗ್ರಿಯನ್ನು ಒದಗಿಸಿದ ಕೀರ್ತಿ ಪಶ್ಚಿಮ ಯೂರೋಪಿನಲ್ಲಿ ನಡೆದ ಕೈಗಾರಿಕಾ ಕ್ರಾಂತಿಗೆ ಸಲ್ಲುತ್ತದೆ ಶೋಷಿತರ ಬೆಳವಣಿಗೆ ಹೊಂದಬೇಕಾದರೆ ಕೈಗಾರಿಕೆಗಳ ಬೆಳವಣಿಗೆ ಅತಿ ಅವಶ್ಯವಾಗಿ ಬೇಕಾಗಿತ್ತು ಎನ್ನುವುದನ್ನು ಈ ಕ್ರಾಂತಿಗಳು ಸ್ಪಷ್ಟ ಪಡಿಸಿದವು. ಈ ಕ್ರಾಂತಿಗೆ ಹಲವು ಕಾರಣಗಳಿವೆ. ಒಂದು ಯೂರೋಪನ ಉಳಿಗಮಾನ್ಯ ವ್ಯವಸ್ಥೆಯ ಆಂತರಿಕ ಬಿರುಕಿನಿಂದ ಕೈಗಾರೀಕರಣ ಅಥವಾ ನಗರೀಕರಣ ಆರಂಭವಾಯಿತು ನಮ್ಮಲ್ಲಿನ ಪಾಳೇಗಾರರಂತೆ ಯೂರೋಪಿನಲ್ಲಿ ಬರ್ಗರಗಳು ಉಳಿಗಮಾನ್ಯ ಪದ್ದತಿಯಲ್ಲಿ ಭೂ ಮಾಲಿಕರಾಗಿದ್ದರು. ಮಾಲಿಕರ ಮೋಜು ಮಸ್ತಿ ನೆರೆಯ ಬರ್ಗರಗಳೊಂದಿಗೆ ಜಗಳ ಹೆಚ್ಚಾದಂತೆ ಗೇಣಿದಾರರು ನೀಡಬೇಕಾದ ಗೇಣಿ ಹೆಚ್ಚಾಗುತ್ತಿತ್ತು. ಇದರಿಂದ ಗೇಣಿದಾರರಿಗೆ ಮೂರು ಹೊತ್ತಿನ ಊಟಕ್ಕು ಗತಿ ಇಲ್ಲದಂತಾಗಿ ಊರು ಬಿಟ್ಟು ಹೋಗುವವರ ಸಂಖ್ಯೆ ಹೆಚ್ಚಾಯಿತು. ಇಲ್ಲಿ ಕೃಷಿಗಿಂತ ಕೃಷಿಯೇತರ ಉತ್ಪನ್ನ ಹೆಚ್ಚಳವಾಯಿತು ಇದು ಗೇಣಿದಾರರಿಗೆ ಹೊಸ ಬದುಕನ್ನು ನೀಡಿತು.[೫೪] ಇಂತಹ ಸಣ್ಣ ಪುಟ್ಟ ಪೇಟೆಗಳು ನಂತರ ಪಟ್ಟಣಗಳಾದವು. ಯಂತ್ರಗಳ ಅವಿಷ್ಕಾರದಿಂದ ಸಣ್ಣ

ಪುಟ್ಟ ಪ್ರಮಾಣದಲ್ಲಿ ಆರಂಭವಾದ ಕೃಷಿಯೇತರ ಉತ್ಪಾದನೆಗಳು ದೊಡ್ಡ ಪ್ರಮಾಣದಲ್ಲಿ ಬೆಳೆದವು. ಹೀಗೆ ನಗರಗಳು ಮತ್ತು ಕೈಗಾರಿಕೆಗಳು ಬೆಳೆದವು. ಇವು ಉಳಿಗಮಾನ್ಯ ಪದ್ದತಿಯಲ್ಲಿ ಶೋಷಣೆಗೆ ಒಳಗಾಗುತ್ತಿದ್ದ ಗೇಣಿದಾರರಿಗೂ ಮೂರು ಹೊತ್ತಿನ ಊಟ ನೀಡಿ ಒಳ್ಳೆಯ ಆರೋಗ್ಯ ಶಿಕ್ಷಣ ಸಂಸ್ಕೃತಿಯನ್ನು ನೀಡಿದವು. ಮೊದಮೊದಲು ಪೇಟೆಗಳು ಉಳಿಗಮಾನ್ಯ ವ್ಯವಸ್ಥೆಯ ಕಟ್ಟುಪಾಡಿಗನುಸಾರ ಕಾರ್ಯ ನಿರ್ವಹಿಸುತ್ತಿದ್ದವು. ಆದರೆ ಬರಬರುತ್ತಾ ಪೇಟೆ ಪಟ್ಟಣಗಳ ಆಸಕ್ತಿಗಳು ಮತ್ತು ಕೃಷಿ ಆಧಾರಿತ ಉಳಿಗಮಾನ್ಯ ವ್ಯವಸ್ಥೆಗಳ ಆಸಕ್ತಿಗಳ ನಡುವೆ ಬಿರುಕುಗಳು ಸೃಷ್ಟಿಯಾದವು. ಉಳಿಗಮಾನ್ಯ ವ್ಯವಸ್ಥೆಯಲ್ಲಿ ಚರ್ಚೆ ಮತ್ತು ಭೂಮಾಲಿಕರ ಸ್ವಾಧೀನ ಭೂಮಿ ಇತ್ತು.[೫೫] ಗೇಣಿದಾರರು ಸ್ವತಂತ್ರರಲ್ಲ ಭೂಮಿಯನ್ನು ಇನ್ನೊಬ್ಬರಿಗೆ ಮಾರಿದಾಗ ಇವರು ಕೂಡಾ ವಸ್ತುಗಳಂತೆ ಹಸ್ತಾಂತರವಾಗುತ್ತಿದ್ದರು. ಈ ರೀತಿ ಸಂಕಷ್ಟ ಎದುರಾದಾಗ ಹೆಚ್ಚಿನ ಪ್ರಮಾಣದಲ್ಲಿ ಗೇಣಿದಾರರು ನಗರಗಳಿಗೆ ವಲಸೆ ಬರಲು ಪ್ರಾರಂಭಿಸಿದರು, ಆದರೆ ಉಳಿಗಮಾನ್ಯ ವ್ಯವಸ್ಥೆ ಜನರು ಇವರನ್ನು ಹುಡುಕಿಕೊಂಡು ಪುನಃ ಕರೆದುಕೊಂಡು ಹೋಗಲು ಪ್ರಾರಂಭಿಸಿದರು. ಇದರಿಂದ ನಗರ ಪ್ರದೇಶದಲ್ಲಿ ಕಾರ್ಮಿಕರ ಕೊರತೆ ಶುರುವಾಯಿತು ನ್ಯಾಯವನ್ನು ಕೇಳುವ ಸ್ಥಿತಿಯಲ್ಲಿ ಇರಲಿಲ್ಲ ಎಲ್ಲವು ಉಳಿಗಮಾನ್ಯ ಪದ್ದತಿಯವರು ಹೇಳಿದಂತೆ ನಡೆಯುತ್ತಿತ್ತು. ಆವಾಗ ನಗರದವರಿಗೆ ಅನಿಸಿತು ಕೇವಲ ಉದ್ಯೋಗ ಸೃಷ್ಟಿ ಮಾಡಿದರೆ ಸಾಲದು ನ್ಯಾಯವನ್ನು ಸೃಷ್ಟಿಸಬೇಕು, ಆ ನ್ಯಾಯವನ್ನು ನೀಡುವಂತಾ ಆಡಳಿತಾತ್ಮಕ ಮಂಡಳಿಯನ್ನು ರೂಪಿಸುವುದು ಅನಿವಾರ್ಯವಾಯಿತು ಮತ್ತು ಮುಖ್ಯವಾಯಿತು[೫೬] ಎನ್ನುತ್ತಾರೆ.

ನಗರವೆಂದರೆ ಅಭಿವೃದ್ಧಿ ಹಳ್ಳಿಯಿಂದ ಅನಭಿವೃದ್ಧಿ ಎನ್ನುವ ಕಲ್ಪನೆ ಕೇವಲ ವ್ಯಕ್ತಿಗಳಿಗೆ ಮಾತ್ರ ಅನ್ವಯವಾಗುವುದಿಲ್ಲ ದೇಶದ ಅಭಿವೃದ್ಧಿ, ಅನಭಿವೃದ್ಧಿ ಇದೆ ಮಾನದಂಡದಿಂದ ತೀರ್ಮಾನಗೊಳ್ಳುತ್ತಿದೆ. ವ್ಯಕ್ತಿ ಮತ್ತು ದೇಶಗಳು ಅಭಿವೃದ್ಧಿಯಾಗಬೇಕೆಂದರೆ ಪೇಟೆ ಪಟ್ಟಣಗಳು ಬೆಳೆಯಬೇಕು, ಕೈಗಾರಿಕೆಗಳು ಬೆಳೆಯ ಬೇಕೆನ್ನುವ ನಿಲುವು ಬಲಗೊಂಡವು ಆರ್ಥಿಕಭಿವೃದ್ಧಿ ಸಿದ್ಧಾಂತಗಳು ಈ ಗ್ರಹಿತವನ್ನು ಹಿನ್ನೆಲೆಯಾಗಿಟ್ಟುಕೊಂಡು ಬೆಳೆದವು. ಇಂಗ್ಲೆಂಡ, ಅಮೇರಿಕಾ, ರಷ್ಯಾ, ಫ್ರಾನ್ಸ, ಜಪಾನ ಮುಂತಾದ ದೇಶಗಳ ಅಭಿವೃದ್ಧಿ ಇತಿಹಾಸವನ್ನು ಗಮನದಲ್ಲಿಟ್ಟುಕೊಂಡು ಅಭಿವೃದ್ಧಿಯ ಹಲವು ಹಂತಗಳನ್ನು ಗುರುತಿಸಲಾಯಿತು. ಇವುಗಳಲ್ಲಿ ಕೃಷಿ ಮೊದಲು ನಂತರ ಕೈಗಾರಿಕೆ, ಆಮೇಲೆ ಸೇವಾವಲಯ ಬರುತ್ತದೆ. ಒಂದು ಪ್ರದೇಶ ಅಭಿವೃದ್ಧಿ ಹೊಂದಿದಂತೆ ಅದರ ಒಟ್ಟು ಸಂಪತ್ತಿನ ಕೃಷಿಯ ಪಾಲು ಕಡಿಮೆಗೊಳ್ಳುತ್ತಾ ಮೊದಲು ಕೈಗಾರಿಕೆಗಳ ಪಾಲು ಹೆಚ್ಚುತ್ತದೆ ನಂತರ ಸೇವಾವಲಯದ ಪಾಲು ಹೆಚ್ಚುತ್ತದೆ ಎಂದು ಆರ್ಥಿಕ ಸಿದ್ಧಾಂತಗಳು ತೀರ್ಮಾನಿಸುತ್ತಾರೆ.[೫೭]

ಕೃಷಿ ಕ್ಷೇತ್ರವನ್ನು ಕೈಗಾರಿಕಾ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗಿ ಕಟ್ಟಿಕೊಳ್ಳುವ ಅನಿವಾರ್ಯತೆಯನ್ನು ಆರ್ಥಿಕಭಿವೃದ್ಧಿ ಮೇಲಿನ ಪಠ್ಯಗಳು ಸಾರುತ್ತವೆ. ಕೃಷಿಗೆ ಭೂಮಿ ಅನಿವಾರ್ಯವಾದರೆ ಎಲ್ಲರಲ್ಲೂ ಭೂಮಿಯಲ್ಲಿ ಕೈಗಾರಿಕೆಗಳಿಗೆ ದೊಡ್ಡ ಪ್ರಮಾಣದ ಭೂಮಿಯ ಅವಶ್ಯಕತೆ ಇಲ್ಲ. ಆದರೆ ಹೆಚ್ಚು ಜನರಿಗೆ ಉದ್ಯೋಗ ನೀಡಬಲ್ಲದು ಒಂದು ಪ್ರದೇಶ ಅಭಿವೃದ್ಧಿಯಾದಂತೆ ಕುಟುಂಬಗಳ ಅನುಭೋಗದಲ್ಲಿನ ಆಹಾರ ಪದಾರ್ಥಗಳ ಪಾಲು ಕಡಿಮೆಯಾಗುತ್ತಾ ಹೋಗಿ ಆಹಾರೇತರ

ವಸ್ತುಗಳು ಹೆಚ್ಚುತ್ತವೆ. ಎಲ್ಲರಿಗೂ ಆಹಾರ ಒದಗಿಸಲು ಎಲ್ಲರೂ ಕೃಷಿಯಲ್ಲಿ ತೊಡಗಬೇಕೆಂದೇನಿಲ್ಲ ಎನ್ನುವ ವಿಷಯ ಮುಂಚೂಣಿಗೆ ಬಂದು ದೇಶದ ಒಟ್ಟು ಜನರ ೪–೫ ರಷ್ಟು ಜನ ತೊಡಗಿದರೆ ಸಾಕು ಎನ್ನುವುದನ್ನು ಶ್ರೀಮಂತ ದೇಶಗಳ ಅನುಭವ ಹೇಳಿವೆ. ಇನ್ನೂ ಕೆಲವರ ಪ್ರಕಾರ ಕೈಗಾರಿಕೆಗಳಿಗೆ ಶ್ರಮ ಕಚ್ಚಾವಸ್ತು, ಆಹಾರ ಬಂಡವಾಳ ಇತ್ಯಾದಿ ಒದಗಿಸುವುದು ಕೃಷಿ ಕ್ಷೇತ್ರದ ಜವಾಬ್ದಾರಿ ಇನ್ನೂ ಕೈಗಾರಿಕಾ ಕ್ಷೇತ್ರ ಉತ್ಪಾದಿಸಿದ ಉತ್ಪನ್ನಗಳಿಗೆ ಸ್ಥಳೀಯ ಮಾರುಕಟ್ಟೆ ಒದಗಿಸುವುದು ಕೂಡ ಕೃಷಿಯ ಜವಾಬ್ದಾರಿ.[೫೮]

ಭಾರತದ ಆರ್ಥಿಕ ನೀತಿಯನ್ನು ಅಧ್ಯಯನ ಮಾಡಿದ ಲಿಪ್ಟನ ಪೇಟೆ ಪಟ್ಟಣದ ಜನರು ತಮ್ಮ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಕೃಷಿ ನೀತಿಯನ್ನು ರೂಪಿಸುತ್ತಾರೆ ಎನ್ನುವ ಗಂಭೀರ ಆರೋಪವನ್ನು ಮಾಡುತ್ತಾರೆ ಪುರಾವೆಗಳನ್ನು ನೀಡುತ್ತಾರೆ. ಕೃಷಿ ನೀತಿಯನ್ನು ಸರಕಾರ ನಿರ್ಧರಿಸುತ್ತದೆ. ಸರಕಾರದ ಅಭಿವೃದ್ಧಿ ನೀತಿಗಳನ್ನು ನಗರ ಪ್ರದೇಶದ ಜನ ಪ್ರಭಾವಿಸುತ್ತಾರೆ. ಗ್ರಾಮೀಣ ಪ್ರದೇಶಕ್ಕೆ ಹೋಲಿಸಿದರೆ ನಗರದಲ್ಲಿ ಕಡಿಮೆ ಜನಸಂಖ್ಯೆ ಇರಬಹುದು ಆದರೆ ಅವರು ಶಿಕ್ಷಿತರು ಎಲ್ಲವನ್ನು ತಿಳಿದುಕೊಂಡವರು ತಮ್ಮ ಹಕ್ಕನ್ನು ಚಲಾಯಿಸುವವರು ಮಾಧ್ಯಮಗಳ ಮೇಲೆ ಹಿಡಿತಯುಳ್ಳವರು ಸಾರ್ವಜನಿಕ ಅಭಿಪ್ರಾಯ ರೂಪಿಸಲು ಶಕ್ತಿಯುಳ್ಳವರು ಇವುಗಳ ಜೊತೆಗೆ ಬಹುತೇಕ ಅಭಿವೃದ್ಧಿಯ ಥೀಯರಿಗಳು, ಮಾದರಿಗಳು, ಕೈಗಾರೀಕರಣ, ನಗರೀಕರಣವೇ ಅಭಿವೃದ್ಧಿಯ ಮೂಲಮಂತ್ರವೆಂದು ಅಟ್ಟದ ಮೇಲಿಂದ ಸಾರುತ್ತಿವೆ.[೫೯] ಈ ಎಲ್ಲ ಕಾರಣಗಳಿಂದ ಕಡಿಮೆ ಸಂಖ್ಯೆಯಲ್ಲಿರುವ ಪೇಟೆ ಪಟ್ಟಣದ ಜನರು ಸರಕಾರದ ಅಭಿವೃದ್ಧಿ ನೀತಿಗಳನ್ನು ತಮ್ಮ ಆಸಕ್ತಿಗಳಿಗನುಗುಣವಾಗಿ ರೂಪಿಸಿಕೊಂಡಿದ್ದಾರೆಂದು ಲಿಪ್ಟನ ವಾದಿಸುತ್ತಾನೆ ಇವುಗಳ ಜೊತೆಗೆ ಬೆಲೆಗಳಲ್ಲಿ ವ್ಯತ್ಯಾಸ ಕಾಣುತ್ತೇವೆ. ಹಳ್ಳಿಯಲ್ಲಿ ಉತ್ಪಾದನೆಯಾಗುವ ಕಡಿಮೆ ಬೆಲೆ ನಗರದಲ್ಲಿ ಉತ್ಪಾದಿಸುವ ವಸ್ತುಗಳಿಗೆ ಹೆಚ್ಚಿನ ಬೆಲೆ ನಿಗದಿಗೊಳಿಸುವುದು ವಿಭಿನ್ನ ತೆರಿಗೆ ವಿಧಿಸುವುದು ವಿಶೇಷ ಸಹಾಯಧನ ನೀಡುವುದು ಮತ್ತು ಸಾಲ ಸೌಲಭ್ಯಗಳನ್ನು ಅಸಮಾನವಾಗಿ ನೀಡುವುದು. ಇತ್ಯಾದಿ ಕ್ರಮಗಳ ಮೂಲಕ ಸರಕಾರ ಕೈಗಾರಿಕೆ ಬೆಳವಣಿಗೆಗೆ ಹೆಚ್ಚಿನ ಮಹತ್ವ ನೀಡಿದೆ ಎಂದು 'ಅರ್ಬನ ಬಯಾಸ್ ಥೀಯರಿ' ವಾದಿಸುತ್ತದೆ ನಗರ ಪಕ್ಷಪಾತಿಯಾದ ಅಭಿವೃದ್ಧಿ ನೀತಿಗಳು ಇಡೀ ಅರ್ಥವ್ಯವಸ್ಥೆಯನ್ನು ಅಪಾಯದ ಅಂಚಿಗೆ ತಳ್ಳಿದೆ ಕೈಗಾರಿಕೆಗಳಿಗೆ ಸರಕಾರ ನೀಡಿದ ಬೆಂಬಲದಿಂದ ಅವು ಬೆಳವಣಿಗೆ ಹೊಂದಿದರೆ ಕೃಷಿಗೆ ಮಾಡಿದ ನಿರ್ಲಕ್ಷ ಕೃಷಿಗೆ ಹೀನಾಯ ಸ್ಥಿತಿಗೆ ತಂದಿದೆ. ಇದು ಗ್ರಾಮಾಭಿವೃದ್ಧಿ ಮೇಲೆ ಗಾಡವಾದ ಪರಿಣಾಮ ಬೀರದೆ ಗ್ರಾಮವನ್ನು ಯಾವುದೇ ರೀತಿಯ ವ್ಯವಸ್ಥಿತವಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ನಗರ ಮತ್ತು ಗ್ರಾಮೀಣ ಪ್ರದೇಶದ ನಡುವಿನ ಅಂತರ ಆಕಾಶ ಭೂಮಿಯಷ್ಟು ಹೆಚ್ಚಿದೆ[೬೦] ಎನ್ನುತ್ತಾರೆ.

ನಿಯೋ ಲಿಬರಲ್ ಥೀಯರಿ ಜಾರಿಗೆ ತಂದ ಮಾರುಕಟ್ಟೆ ಪ್ರೇರಿತ ಪಾಲಿಸಿಗಳು ಗ್ರಾಮೀಣ ರೈತರನ್ನು ಮಾರುಕಟ್ಟೆಯಲ್ಲಿ ಸ್ಪರ್ಧಿಸಲು ಒತ್ತಾಯಿಸುತ್ತವೆ. ಆದರೆ ಇಂದಿನ ಸಂದರ್ಭದಲ್ಲಿ ಮಾರುಕಟ್ಟೆಯಲ್ಲಿ ಸ್ಪರ್ಧಿಸುವುದು ವಿಶ್ವಬ್ಯಾಂಕ್ ಹೇಳಿದಷ್ಟು ಸುಲಭವಲ್ಲ. ಆಧುನಿಕ ತಂತ್ರಜ್ಞಾನ

ಆಧುನಿಕ ಮತ್ತು ಆಧುನಿಕ ಮಾರುಕಟ್ಟೆ ಸರಪಳಿಗಳು ಮಾರುಕಟ್ಟೆಯನ್ನು ತುಂಬಾ ಸಂಕೀರ್ಣಗೊಳಿಸಿವೆ. ಇಂತಹ ಮಾರುಕಟ್ಟೆಯಲ್ಲಿ ಸಣ್ಣ ಪುಟ್ಟ ರೈತರು ಭಾಗವಹಿಸಿ ಲಾಭಗಳಿಸುವುದು ಅವರ ಸಾಮರ್ಥ್ಯಕ್ಕೆ ಮೀರಿದ ಕೆಲಸ.[೬೧] ಈ ಸಮಸ್ಯೆಗೆ ವಿಶ್ವಬ್ಯಾಂಕ ಹಲವು ಪರಿಹಾರ ಸೂಚಿಸಿವೆ ಅವುಗಳೆಂದರೆ ಹಣಕಾಸು ಮಾರುಕಟ್ಟೆ ಸುಧಾರಿಸುವುದು, ಬೆಳೆ ವಿಮೆ ಮಾಡಿಸುವುದು, ಗೇಣಿ ಭದ್ರತೆ, ಭೂಪರಭಾರಗೆ ಅವಕಾಶ ಮಾಡಿಕೊಡುವುದು, ಭೂ ಮಾರುಕಟ್ಟೆಯ ಸುಧಾರಣೆ ಇತ್ಯಾದಿ ಕ್ರಮಗಳನ್ನು ಭೂ ಒಡೆತನ ಸುಧಾರಣೆಗೆ ಸಂಬಂಧಿಸಿದಂತೆ ಬ್ಯಾಂಕ ಸೂಚಿಸುತ್ತದೆ.[೬೨] ಇಂತಹ ಕ್ರಮಗಳಿಂದ ಭೂ ಖರೀದಿಗೆ ವಿನಿಯೋಜಿಸಲು ದೊಡ್ಡ ಪ್ರಮಾಣದ ಸಂಪನ್ಮೂಲ ಇದ್ದವರು ಲಾಭಗಳಿಸಬಹುದೇ ಹೊರತು ಭೂರಹಿತರು ಭೂಮಿ ಹೊಂದುವುದು ಕನಸಿನ ಮಾತು ಎನ್ನುವುದು ಹಲವಾರು ದೇಶಗಳ ಅನುಭವದಿಂದ ಸಾಬೀತಾಗಿದೆ. ಗ್ರಾಮೀಣ ಅಭಿವೃದ್ಧಿ ಆಗಬೇಕೆಂದರೆ, ಅಲ್ಲಿನ ಜನರ ಬದುಕು ಹಸನಾಗ ಬೇಕೆಂದರೆ ಮುಕ್ತ ಮಾರುಕಟ್ಟೆ ಜೊತೆಗೆ ಭೂಸುಧಾರಣೆ, ಸಾಮಾಜಿಕ ನ್ಯಾಯದ ಸುಧಾರಣೆ, ಮೂಲಸೌಕರ್ಯಗಳ ಸುಧಾರಣೆ ಹಾಗೂ ಅಭಿವೃದ್ಧಿ ಆಡಳಿತ ಸುಧಾರಣೆಗಳು ನಡೆಯಬೇಕಾಗಿದೆ.

ಮಹಿಳಾಭಿವೃದ್ಧಿ: ಮಹಿಳಾಭಿವೃದ್ಧಿ ಪರಿಭಾಷೆ ಮಹಿಳೆ ಮತ್ತು ಅಭಿವೃದ್ಧಿ ಸಂಬಂಧವನ್ನು ವಿವರಿಸುತ್ತದೆ. ಮಹಿಳೆ ಮತ್ತು ಅಭಿವೃದ್ಧಿ ಸಂಬಂಧ ಕುರಿತಂತೆ ಎರಡು ಪ್ರಮುಖ ನಿಲುವುಗಳು ಚಾಲ್ತಿಯಲ್ಲಿವೆ. ಅಭಿವೃದ್ಧಿ ಸಂಬಂಧ ಹೆಣ್ಣು ಗಂಡು ಎನ್ನುವ ವ್ಯತ್ಯಾಸ ಮಾಡುವುದಿಲ್ಲ. ಸಮಾಜ ಸಂಸ್ಕೃತಿಯಲ್ಲಿರುವ ಲಿಂಗ ತಾರತಮ್ಯಗಳು ಮಹಿಳಾಭಿವೃದ್ಧಿ ಪ್ರಭಾವಿಸುತ್ತದೆ. ಒಂದು ನಿಲುವು ಅಭಿವೃದ್ಧಿಯ ಗರ್ಭದಲ್ಲೆ ಲಿಂಗ ತಾರತಮ್ಯ ಕೂಡ ಹೆಚ್ಚುತ್ತದೆ. ಈ ಸೂಕ್ಷ್ಮವನ್ನು ಅರಿತುಕೊಂಡು ಅಭಿವೃದ್ಧಿ ನಡೆದರೆ ಮಹಿಳಾಭಿವೃದ್ಧಿ ಸಾಧ್ಯ ಎನ್ನುವುದು ಮತ್ತೊಂದು ನಿಲುವು. ಮೊದಲ ನಿಲುವಿನ ಪ್ರಕಾರ ಮುಕ್ತ ಮಾರುಕಟ್ಟೆಯನ್ನು ಪ್ರತಿಪಾದಿಸುವ ಕ್ಲಾಸಿಕಲ್ ಮತ್ತು ನಿಯೋ ಕ್ಲಾಸಿಕಲ್ ಎಕನಾಮಿಸ್ಟಗಳು ವ್ಯಕ್ತಿ ಸ್ವಾತಂತ್ರ್ಯಕ್ಕೆ ಹೆಚ್ಚಿನ ಮಹತ್ವ ನೀಡುತ್ತವೆ. ಇವುಗಳ ಪ್ರಕಾರ ಕುಟುಂಬ, ಸಮುದಾಯ, ಸಮಾಜ ಇವೆಲ್ಲವೂ ಲಿಂಗ ತಾರತಮ್ಯಗಳನ್ನು ಸೃಷ್ಟಿಸುವ ತಾಣಗಳು. ಮಹಿಳೆ ಎನ್ನುವ ಒಂದೇ ಕಾರಣಕ್ಕೆ ಇದನ್ನೆ ಉಡಬೇಕು, ಇದನ್ನೆ ತಿನ್ನಬೇಕು, ಇಷ್ಟೊತ್ತಿಗೆ ಬರಬೇಕು, ಹೀಗೆ ಇರಬೇಕು, ಹಾಗೇ ಇರಬೇಕು ಇದೇ ಕೆಲಸ ಮಾಡಬೇಕು ಇತ್ಯಾದಿಗಳು ಸಮಾಜ ಸಮುದಾಯ ಸೃಷ್ಟಿಸುವ ನಿರ್ಬಂಧಗಳು. ಆದರೆ ಮಾರುಕಟ್ಟೆ ಇಂತಹ ನಿರ್ಬಂಧಗಳನ್ನು ಮಾನ್ಯ ಮಾಡುವುದಿಲ್ಲ. ಅಷ್ಟೆ ಅಲ್ಲ ವಿವಿಧ ಕಾನೂನು, ಕಾರ್ಯಕ್ರಮಗಳ ಮೂಲಕ ಸಮಾಜ, ಸಂಸ್ಕೃತಿಗಳು ಹೇರುವ ನಿರ್ಬಂಧಗಳು ನಿರಾಕರಿಸಲು ಅಭಿವೃದ್ಧಿ ಸಹಕರಿಸುತ್ತಿದೆ[೬೩] ಅಂದರೆ ಅಭಿವೃದ್ಧಿ ನೇರವಾಗಿ ಮತ್ತು ಪರೋಕ್ಷವಾಗಿ ಲಿಂಗ ಸಮಾನತೆಯನ್ನು ಪ್ರತಿಪಾದಿಸುತ್ತಿದೆ.

ಆರ್ಥಿಕಾಭಿವೃದ್ಧಿಯಿಂದ ಲಿಂಗ ಸಮಾನತೆ ಸಾಧ್ಯ ಎನ್ನುವ ನಿಲುವನ್ನು ಇವರು ಬಲವಾಗಿ ವಿರೋಧಿಸುತ್ತಾರೆ ಇವರ ಪ್ರಕಾರ ಹಲವು ಬಾರಿ ಆರ್ಥಿಕಭಿವೃದ್ಧಿಯಿಂದ ಲಿಂಗ ಸಮಾನತೆಗಿಂತ ಶೋಷಣೆ ಹೆಚ್ಚಾಗಿದ್ದನ್ನು ನಾವು ನೋಡುತ್ತೇವೆ, ಈ ವಾದ ಸಮರ್ಥಿಸಲು ಇವರು ಮೈಕ್ರೋ

ಕ್ರೇಡಿಟ್ ಉದಾಹರಣೆ ನೀಡುತ್ತಾರೆ. ಇದು ಮಹಿಳೆಯ ಸಬಲೀಕರಣವಲ್ಲ, ಅವಳನ್ನು ಇನ್ನು ಹೆಚ್ಚು ದುಡಿಯಲು ಹಚ್ಚುವ ಬದಲಾವಣೆ ಇದು. ಪುರುಷರು ದುಡಿಯುವುದು ಮನೆಯ ಖರ್ಚಿಗೆ ಮಹಿಳೆ ಸಾಲಮಾಡುವುದು ಅನಿವಾರ್ಯವಾಗುತ್ತದೆ, ಈ ಸಾಲವನ್ನು ತೀರಿಸುವ ಜವಾಬ್ದಾರಿ ಕೂಡಾ ಅವಳದ್ದೆ ಆಗಿರುವುದರಿಂದ ಅವಳೆ ದುಡಿಯುವ ಸಂದರ್ಭ ಬಂದದೊದಗುತ್ತದೆ. ಪರೋಕ್ಷ ತೆರಿಗೆಯ ಭಾರವನ್ನು ಕೊನೆಗೆ ಜನಸಾಮಾನ್ಯರು ಹೊತ್ತಂತೆ ಸರಕಾರ ಅರ್ಥವ್ಯವಸ್ಥೆಯನ್ನು ಸರಿದುಗಿಸಲು ಕೈಗೊಂಡ ನಿಯೋ ಲಿಬರಲ್ ಪಾಲಿಸಿಗಳ ಬಾರವನ್ನು ಕೊನೆಗೆ ಮಹಿಳೆಯೇ ಹೊರಬೇಕು ಏಕೆಂದರೆ ಸರಕಾರ ಆಹಾರ, ಕುಡಿಯುವ ನೀರು, ಶಿಕ್ಷಣ ಆರೋಗ್ಯಗಳ ಮೇಲೆ ಮಾಡುವ ವಿನಿಯೋಜನೆ ಕಡಿಮೆಯಾದಂತೆ ಮಹಿಳೆಯ ದುಡಿಮೆ ಹೆಚ್ಚಾಗುತ್ತಾ ಹೋಗುತ್ತದೆ.[೬೪] ಹಾಗೆಂದು ಇದರಿಂದ ಮಹಿಳೆಯ ಸ್ಥಾನಮಾನದಲ್ಲಿ ವಿಶೇಷ ಬದಲಾವಣೆಗಳನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಮಹಿಳೆಯರನ್ನು ಪುರುಷರಿಗೆ ಸಮಾನರೆಂದು ಕಾಣುವ ಸಾಮಾಜಿಕ ಪರಿಸರ ಸೃಷ್ಟಿಯಾಗದೇ ಕೇವಲ ಆರ್ಥಿಕ ಚಟುವಟಿಕೆಗಳಿಂದ ಬದಲಾವಣೆ ಸಾಧ್ಯವಿಲ್ಲವೆಂದು ಇವರು ವಾದಿಸುತ್ತಾರೆ.

ಮಹಿಳೆಯರ ಅಭಿವೃದ್ಧಿಗೆ ಅವರ ದಿನನಿತ್ಯದ ಸಮಸ್ಯೆಗಳನ್ನು ಪರಿಹರಿಸುವುದರೊಂದಿಗೆ ಅವರು ಬದುಕನ್ನು ಪ್ರಭಾವಿಸುವ ಸಾಮಾಜಿಕ, ರಾಜಕೀಯ ಸಂಬಂಧಗಳನ್ನು ಸುಧಾರಿಸುವ ಕೆಲಸವೂ ನಡೆಯಬೇಕಾಗಿದೆ.[೬೫] ಮಹಿಳೆಯು ದಿನನಿತ್ಯ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾಳೆ, ದಿನನಿತ್ಯದ ಸಮಸ್ಯೆಗಳ ಪರಿಹಾರ ಮಹಿಳೆಯ ಸಾಮಾಜಿಕ, ರಾಜಕೀಯ ಸ್ಥಾನಮಾನವನ್ನು ವಿಶೇಷ ಬದಲಾಯಿಸುವುದಿಲ್ಲ. ಭ್ರೂಣ ಹತ್ಯೆ, ವರದಕ್ಷಿಣೆ, ಲೈಂಗಿಕ ದೌರ್ಜನ್ಯ ಇವೆಲ್ಲವೂ ಮಹಿಳೆಯ ಎರಡನೇ ದರ್ಜೆ ಸಾಮಾಜಿಕ ಸ್ಥಾನಮಾನದಿಂದ ಸೃಷ್ಟಿಯಾಗುವ ಸಮಸ್ಯೆಗಳು ಇವುಗಳು ಪರಿಹಾರಕ್ಕೆ ಕಠಿಣ ಕಾನೂನುಗಳ ಅಗತ್ಯವಿದೆ. ಭ್ರೂಣ ಹತ್ಯೆ, ವರದಕ್ಷಿಣೆ, ಲೈಂಗಿಕ ದೌರ್ಜನ್ಯಗಳನ್ನು ನಿಷೇಧಿಸುವ ಕಾನೂನುಗಳು ಈ ಸಾಮಾಜಿಕ ಸಮಸ್ಯೆಗಳನ್ನು ಕಾಲಕ್ರಮೇಣ ಪರಿಹರಿಸಬಹುದು.[೬೬] ಅದೇ ರೀತಿ ತಂದೆಯ ಆಸ್ತಿಯಲ್ಲಿ ಮಗಳಿಗೆ ಪಾಲು ಇಲ್ಲದಿರುವುದು, ಸ್ಥಳಿಯ ಸಂಸ್ಥೆಗಳಲ್ಲಿ, ವಿಧಾನಸಭೆ, ಪಾರ್ಲಿಮೆಂಟಗಳಲ್ಲಿ ಮಹಿಳೆಯ ಸಂಖ್ಯೆಗೆ ಸಮನಾದ ಪ್ರತಿನಿಧಿತ್ವ ಇಲ್ಲದಿರುವುದು ಆರ್ಥಿಕ, ರಾಜಕೀಯ ಸಮಸ್ಯೆಗಳು ಈ ಸಮಸ್ಯೆಗಳು ಕೂಡ ಮಹಿಳೆಯ ಆದಾಯ ಹೆಚ್ಚಿಸುವ ಕಾರ್ಯಕ್ರಮದಿಂದ ಪರಿಹಾರವಾಗುವುದಿಲ್ಲ, ಈ ಸಮಸ್ಯೆಗಳ ಪರಿಹಾರಕ್ಕೆ ತಂದೆಯ ಆಸ್ತಿಯಲ್ಲಿ ಮಗಳ ಪಾಲನ್ನು ದೃಢಪಡಿಸುವ ಕಾನೂನಿನ ಬೆಂಬಲ ಬೇಕು. ಮಹಿಳೆಯ ಬದುಕನ್ನು ಪ್ರಭಾವಿಸುವ ನಿರ್ಣಯಗಳನ್ನು ಕೈಗೊಳ್ಳುವ ಎಲ್ಲ ಹಂತದ ಸರಕಾರಗಳಲ್ಲೂ ಮಹಿಳೆಗೆ ಸೀಟು ಮೀಸಲಿಟ್ಟರೆ ಮಾತ್ರ ಮಹಿಳೆಯ ರಾಜಕೀಯ ಸಬಲೀಕರಣ ಸಾಧ್ಯ.[೬೭] ಜಂಡರ್ ಆ್ಯಂಡ್ ಡೆವಲಪಮೆಂಟ್ ಥಿಯರಿಸ್ಟಗಳು ಸರಕಾರ ಮಹತ್ವದ ಪಾತ್ರ ವಹಿಸಬೇಕೆಂದು ವಾದಿಸುತ್ತಾರೆ. ಹಕ್ಕುಗಳು ಸೃಷ್ಟಿಯಾದ ಕೂಡಲೆ ಅಭಿವೃದ್ಧಿಯಾಗುತ್ತದೆ ಎನ್ನುವ ವಾದ ತಪ್ಪಾಗಿದೆ. ಇವತ್ತು ಅನೇಕ ಹಕ್ಕುಗಳು ಸೃಷ್ಟಿಯಾಗಿವೆ ಆದರೆ ನಿರ್ದಿಷ್ಟ ರೂಪದ ಅಭಿವೃದ್ಧಿ ಕಾಣಲಿಕ್ಕೆ ಸಾಧ್ಯವಾಗುತ್ತಿಲ್ಲ. ಹಕ್ಕುಗಳು ಅವುಗಳ ಉದ್ದೇಶಿತ ರೂಪದಲ್ಲಿ ಕಾರ್ಯಗತಗೊಳ್ಳುತ್ತಿಲ್ಲ, ಇದಕ್ಕೆ ಬಹುಮುಖ್ಯ ಕಾರಣ

ಇವುಗಳಿಗೆ ಸಾಮಾಜಿಕ ಹಾಗೂ ರಾಜಕೀಯ ಒಪ್ಪಿಗೆ ಇಲ್ಲದಿರುವುದು. ಹಕ್ಕುಗಳು ಉಲ್ಲಂಘನೆಯಾದಾಗ ಅತೃಪ್ತಿ ಸೃಷ್ಟಿಯಾಗುಬೇಕು ಮಾನವ ಡಿಸ್ಟರ್ಬ್ ಆಗಬೇಕು ಅಂದಾಗ ಮಾತ್ರ ಹಕ್ಕಿನ ಅರಿವು ಹಾಗೂ ಅನಿವಾರ್ಯತೆ ತಿಳಿಯುತ್ತದೆ. ಸಮಾಜ ಅಥವಾ ಸಂಸ್ಕೃತಿಯಲ್ಲಿ ನಾವೆಲ್ಲ ಪರಸ್ಪರ ಸಂಬಂಧಿಸಿದವರು ಅಂದರೆ ಸಮಾಜ ಅಥವಾ ಸಂಸ್ಕೃತಿಯಲ್ಲಿ ಲಿಂಗ ಸಮಾನತೆಯ ಪ್ರಜ್ಞೆ ಬಲವಾಗಿ ಬೇರೂರಬೇಕು.[೬೮] ಕೇವಲ ನೈತಿಕ ಪ್ರಜ್ಞೆಯಿಂದ ರೂಪಗೊಳ್ಳುವುದಿಲ್ಲ ನೈತಿಕತೆಯ ಜೊತೆಗೆ ಕಾನೂನಿನ ಬೆಂಬಲವೂ ಬೇಕೆನ್ನುವುದು ಜಂಡರ ಆಂಡ್ ಡೆವಲಪ್‌ಮೆಂಟ್ ಥಿಯರಿಸ್ಟಗಳ ವಾದ.

ಮಹಿಳೆಯನ್ನು ಅಭಿವೃದ್ಧಿಯಿಂದ ಹೊರಗಿಡುವುದರಲ್ಲಿ ಅಭಿವೃದ್ಧಿಯ ಪಾತ್ರ ಇಲ್ಲ. ಎಲ್ಲ ಸಮಸ್ಯೆಗಳು ಸಮಾಜ ಮತ್ತು ಸಂಸ್ಕೃತಿಯಿಂದ ಸೃಷ್ಟಿಯಾಗಿವೆ ಎನ್ನುವ ಮೇಲಿನ ವಾದಗಳನ್ನು ಅಲ್ಲಗಳಿಯುವ ವಾದಗಳನ್ನು ಮಹಿಳಾವಾದಿಗಳು ಮಂಡಿಸುತ್ತಾರೆ. ಇವರ ಪ್ರಕಾರ ಸಮಾಜ ಮತ್ತು ಸಂಸ್ಕೃತಿಯಲ್ಲಿ ಮಾತ್ರ ಲಿಂಗ ತಾರತಮ್ಯ ಇರುವುದಿಲ್ಲ ಅಭಿವೃದ್ಧಿಯಲ್ಲೂ ಲಿಂಗ ತಾರತಮ್ಯ ಅಂತರ್ಗತಗೊಂಡಿದೆ ಅಭಿವೃದ್ಧಿಯಲ್ಲಿ ಲಿಂಗ ತಾರತಮ್ಯ ಅಂತರ್ಗತಗೊಂಡಿದೆ ಎನ್ನುವ ವಾದವನ್ನು ಮುಂಚೂಣಿಗೆ ತಂದ ಕೀರ್ತಿ ಈಸ್ಥರ್ ಬೊಸರ್ ಗೆ ಸಲ್ಲಬೇಕು. ಈಕೆ ೧೯೭೦ ರಲ್ಲಿ ಪ್ರಕಟವಾದ ತಮ್ಮ ಪುಸ್ತಕವಾದ 'ವುಮನ್ಸ ರೋಲ್ ಇನ್ ಎಕನಾಮಿಕ್ ಡೆವೆಲಪಮೆಂಟ್' ಎನ್ನುವ ಪುಸ್ತಕದಲ್ಲಿ ಅಭಿವೃದ್ಧಿ ಮಹಿಳೆಯನ್ನು ಹೊರಗಿಟ್ಟಿದೆಯಂದು ಕಡುವಾಗಿ ಟೀಕಿಸಿದ್ದಾಳೆ. ಅಭಿವೃದ್ಧಿಯ ಬಹುತೇಕ ಸಿದ್ಧಾಂತಗಳು ಅಭಿವೃದ್ಧಿಯನ್ನು ಹಲವು ಹಂತಗಳಲ್ಲಿ ನೋಡುತ್ತೇವೆ. ಗ್ರಾಮೀಣ ಶ್ರಮ ಆಧರಿತ ಕೃಷಿ ಪ್ರಧಾನ ಅರ್ಥವ್ಯವಸ್ಥೆಯನ್ನು ಅಭಿವೃದ್ಧಿ ಸಿದ್ಧಾಂತಗಳು ಹಿಂದುಳಿದ ಹಂತವೆಂದು ಗುರುತಿಸುತ್ತವೆ. ಇಂತಹ ಹಿಂದುಳಿದ ಸ್ಥಿತಿಯಿಂದ ಬಂಡವಾಳ ಕೇಂದ್ರಿತ, ಯಂತ್ರ ಬಳಕೆಯ ಕೈಗಾರೀಕರಣವನ್ನು ಅಭಿವೃದ್ಧಿಯೆಂದು ಸಿದ್ಧಾಂತಗಳು ಹೇಳುತ್ತಿವೆ. ಮಹಿಳೆಯ ದೃಷ್ಟಿಯಿಂದ ನೋಡಿದರೆ ಅಭಿವೃದ್ಧಿಯ ಹಿಂದುಳಿದ ಸ್ಥಿತಿಯಲ್ಲಿ ಆಕೆಗಿದ್ದ ದುಡಿಮೆ ಗಳಿಸುವ ಅವಕಾಶಗಳು, ಸ್ವತಂತ್ರವಾಗಿ ಬದುಕುವ ಅವಕಾಶಗಳು ಅಭಿವೃದ್ಧಿಯ ಮುಂದುವರಿದ ಹಂತಗಳಲ್ಲಿ ಇರುವುದಿಲ್ಲ[೬೯]ಎನ್ನುತ್ತಾರೆ.

೪.೩ ಅಭಿವೃದ್ಧಿ ಪರಿಕಲ್ಪನೆಯ ಸಾಮಾನ್ಯ ಅಭಿಪ್ರಾಯ

ವಾಸುದೇವರು ತಮ್ಮ ಸಂಪಾದಿತ ಗ್ರಂಥದಲ್ಲಿ ಅಮರ್ತ್ಯಸೇನ್‌ರ ಅಭಿವೃದ್ಧಿಯ ಬಗೆಗಿನ ಮಾತುಗಳನ್ನು ಉಲ್ಲೇಖಿಸುತ್ತಾ ಜನರ ಹಸಿವನ್ನು ನಿಗಿಸಿ ಸರಕಾರ ತನ್ನ ಕರ್ತವ್ಯ ಮುಗಿಯಿತು ಎಂದು ಪಾರಾಗುವುದಲ್ಲ. ಜನರಿಗೆ ಪೌಷ್ಟಿಕ ಆಹಾರ, ಉತ್ತಮ ಆರೋಗ್ಯ, ಗುಣಾತ್ಮಕ ಶಿಕ್ಷಣ ಪಡೆಯುವ, ಸುರಕ್ಷಿತ ಕುಡಿಯುವ ನೀರನ್ನು ಒದಗಿಸಿ ಅದರೊಂದಿಗೆ ಅವಶ್ಯಕ ನಾಗರಿಕ ಸೌಲಭ್ಯಗಳನ್ನು ನೀಡಿ ನೊಂದವರಿಗೆ, ಬಡವರಿಗೆ, ಶೋಷಿತರಿಗೆ, ಸಾಮಾಜಿಕ ಅಸಮಾನತೆಯನ್ನು ಅನುಭವಿಸಿದವರಿಗೆ ಸಮಾನ ಸಾಮಾಜಿಕ ಅವಕಾಶಗಳನ್ನು ನೀಡುವುದರಿಂದ ಮಾತ್ರ ಅಭಿವೃದ್ಧಿ ಸಾಧ್ಯವಾಗುತ್ತದೆ.[೭೦] ಎಂದು ಪ್ರತಿಪಾದಿಸುತ್ತಾ ಇತ್ತೀಚಿನ ದಶಕಗಳಲ್ಲಿ ಕ್ಷೇಮಾಭಿವೃದ್ಧಿ ಹಾಗೂ ಜನರ ಕಲ್ಯಾಣಕ್ಕೆ ಅಭಿವೃದ್ಧಿ ಪ್ರಕ್ರಿಯೆ ಹೆಚ್ಚು ಆದ್ಯತೆಯನ್ನು ನೀಡುತ್ತಿರುವುದರಿಂದ ಅಭಿವೃದ್ಧಿ ಚಟುವಟಿಕೆಗಳು

ಮಾನವನ ಪರವಾಗಿರಬೇಕು. ಇದರಿಂದ ಜನರ ಸ್ಥಾನಮಾನ ಘನತೆ ಹೆಚ್ಚಾಗುತ್ತದೆ. ಹಾಗೂ ೨೧ ನೇ ಶತಮಾನದಲ್ಲಿ ಹೆಚ್ಚು ಪ್ರಾಮುಖ್ಯತೆ ಪಡೆಯುತ್ತಿದೆ[೭೧] ಎನ್ನುವುದು ಲೇಖಕರ ಅಭಿಪ್ರಾಯ.

ಅಭಿವೃದ್ಧಿ ಬಗ್ಗೆ ಸರ್ವಸಮ್ಮತವಾದ, ಸ್ಪಷ್ಟವಾದ, ನಿಖರವಾದ ವ್ಯಾಖ್ಯಾನವಿಲ್ಲ. ಅಭಿವೃದ್ಧಿಯೆಂದರೆ ಸರಕು ಸೇವೆಗಳ ಮುಕ್ತ ವಹಿವಾಟ, ಜನರ ಭೌತಿಕ ಮಟ್ಟವನ್ನು ಹೆಚ್ಚಿಸುವುದು ಒಂದು ಕಡೆಯಾದರೆ ಇನ್ನೊಂದು ರೀತಿಯಲ್ಲಿ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಸಂಸ್ಥೆಗಳಲ್ಲಿ ಹಾಗೂ ಜನರ ವರ್ತನೆಯಲ್ಲಿ ಬದಲಾವಣೆ ತರುವುದು ಪ್ರಮುಖವಾಗಿ ಈ ಎರಡು ಅಂಶಗಳು ಪ್ರಮುಖ ಪಾತ್ರ ವಹಿಸುತ್ತವೆ ಮತ್ತು ಅಭಿವೃದ್ಧಿ ಮಟ್ಟವನ್ನು ನಿರ್ಧರಿಸುತ್ತವೆ[೭೨] ಎಂದು ವಿವರಿಸಿದ್ದಾರೆ. ತೃತೀಯ ರಾಷ್ಟ್ರಗಳಲ್ಲಿ ಅಭಿವೃದ್ಧಿ ನೋಡುವುದಾದರೆ ಕ್ರಮಬದ್ಧವಾದ ಪೂರ್ವ ಯೋಜನೆಗಳೊಂದಿಗೆ ರೂಪಿಸಲ್ಪಟ್ಟ ನೀತಿಗಳು ಮತ್ತು ಯೋಜನೆಗಳು ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಸಾಧಿಸಲು ಸಹಾಯಕವಾಗುತ್ತದೆ. ಬೆಳವಣಿಗೆ ಪ್ರಕ್ರಿಯೆಗೆ ಸಮನಾಂತರವಾಗಿ ಉಪಯೋಗಿಸಲ್ಪಟ್ಟಿಲ್ಲ ಅಭಿವೃದ್ಧಿ. ಅಭಿವೃದ್ಧಿ ಹೊಂದದೆ ಇರುವ ರಾಷ್ಟ್ರಗಳಾದ ಏಷ್ಯಾ, ಆಫ್ರಿಕಾ, ಮತ್ತು ಲ್ಯಾಟಿನ್ ಅಮೆರಿಕಾದ ರಾಷ್ಟ್ರಗಳಲ್ಲಿ ಅಭಿವೃದ್ಧಿಯು ಸರ್ವತೋಮುಖ ಅಂದರೆ ಸಾಮಾಜಿಕವಾಗಿ, ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ಬದಲಾವಣೆಯನ್ನು ತರುವಂತಿರಬೇಕು. ಗುಣಾತ್ಮಕವಾಗಿ ಮತ್ತು ಪ್ರಮಾಣಾತ್ಮಕವಾಗಿ ಜನರ ಅಭಿವೃದ್ಧಿಯನ್ನು ಸಮಾನಾಂತರವಾಗಿ ಸಾಧಿಸುವಂತಿರಬೇಕು. ಇವುಗಳ ನಡುವೆ ಪರಸ್ಪರ ಪೂರಕ ಸಂಬಂಧವಿದ್ದಾಗೂ ಇವುಗಳು ಜೊತೆಯಲ್ಲಿ ಇರದಿದ್ದರೆ ಗುರಿಯನ್ನು ಮುಟ್ಟಲು ಸಾಧ್ಯವಾಗುವುದಿಲ್ಲ. ಹಾಗಾಗಿ ಅಭಿವೃದ್ಧಿಯೆಂದರೆ ಬದಲಾವಣೆ ಮತ್ತು ಬೆಳವಣಿಗೆ ಸಾಮಾನ್ಯವಾಗಿ ವಿಶಾಲ ಅರ್ಥದಲ್ಲಿ ಅಭಿವೃದ್ಧಿಯೆಂಬುದು ಆರ್ಥಿಕ ಬೆಳವಣಿಗೆಯನ್ನು ಮಾಡುವಂತಹ ಒಂದು ಸಾಮಾಜಿಕ ಪ್ರಕ್ರಿಯೆ[೭೩] ಎಂದು ವಿವರಿಸುತ್ತಾರೆ.

ಕಾಮೇಶ್ವರ ಚೌಧರಿಯವರು ತಮ್ಮ ಸಂಪಾದಿತ ಗ್ರಂಥದಲ್ಲಿ ರಾಷ್ಟ್ರದ ಜವಾಬ್ದಾರಿಯು ವ್ಯಕ್ತಿಯ ಸಾಮರ್ಥ್ಯ ಮತ್ತು ಖಾಸಗಿ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸಿ ಒಂದು ಪೂರಕ ಆರ್ಥಿಕ, ರಾಜಕೀಯ ಮತ್ತು ನ್ಯಾಯಯುತವಾದ ಪರಿಸರವನ್ನು ನಿರ್ಮಿಸುವುದಾಗಿರುತ್ತದೆ ಎಂಬುದನ್ನು ಪ್ರಸ್ತಾಪಿಸಿ ಬಹುರಾಷ್ಟ್ರೀಯ ಅಭಿವೃದ್ಧಿಯ ಮತ್ತು ಹಣಕಾಸು ಸಂಸ್ಥೆಗಳು ಇಂದು ಒಳ್ಳೆಯ ಆಡಳಿತದ ಅವಶ್ಯಕತೆಯನ್ನು ಪ್ರತಿಪಾದಿಸುತ್ತಾ ಉತ್ತಮ ಆಡಳಿತವು ಅಭಿವೃದ್ಧಿಯನ್ನು ಪ್ರೋತ್ಸಾಹಿಸುತ್ತದೆ. ಆದರೆ ಇಂತಹ ಆಡಳಿತ ತೃತೀಯ ಜಗತ್ತಿನಲ್ಲಿ ಕಂಡು ಬರುತ್ತಿಲ್ಲ ಎಂಬ ವಿಮರ್ಶೆ ಕಂಡುಬರುತ್ತದೆ. ಹಾಗಾಗಿ ಇಂದು ಆಡಳಿತದಲ್ಲಿ ಪರಿವರ್ತನೆ ತರುವುದು ಅನಿವಾರ್ಯವಾಗಿದೆ. ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆಗಳು ಅಭಿವೃದ್ಧಿಯ ಉದ್ದೇಶಗಳನ್ನು ಪೂರೈಸಲು ಅವಶ್ಯಕವಾಗಿವೆ, ಹಾಗೂ ಆಡಳಿತದ ಭದ್ರತೆ ಮತ್ತು ಅಭಿವೃದ್ಧಿಯ ಗುರಿಗಳನ್ನು ಸಾಧಿಸಲು ಸಹಕಾರಿಯಾಗುತ್ತದೆ ಇದರಿಂದ ಜನರ ಅಭಿವೃದ್ಧಿಯಾಗುತ್ತದೆ ಅಲ್ಲದೆ ಮಾನವ ಹಕ್ಕುಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬಹುದು ಮತ್ತು ಶೋಷಿತರಿಗೆ ನ್ಯಾಯ ದೊರಕುತ್ತದೆ ಅವರ ಸಬಲೀಕರಣಕ್ಕೆ ಮತ್ತು ಸಹ್ಯ ಅಭಿವೃದ್ಧಿ ಸಾಧ್ಯವಾಗುತ್ತದೆ[೭೪] ಎಂಬ ಅಭಿಪ್ರಾಯವನ್ನು ವ್ಯಕ್ತ ಪಡಿಸುತ್ತಾರೆ.

ಬಡತನ ನಿರ್ಲಕ್ಷಿತರ, ಶೋಷಿತರ, ಹಿಂದೂಳಿದವರ ಸಮಸ್ಯೆಗಳನ್ನು ಸರಿಯಾದ ರೀತಿಯಲ್ಲಿ ಪರಿಹರಿಸಲು ಯಾವುದೇ ರಾಜಕೀಯ ವ್ಯವಸ್ಥೆಯು ಗುರಿಗಳನ್ನು ಬದ್ಧತೆಯನ್ನು ಮತ್ತು ದೃಡತೆಯನ್ನು ಸಾಧಿಸಿದೆ ಎಂದು ಹೇಳುವುದು ಸಾಧ್ಯವಿಲ್ಲ. ರಾಜಕೀಯ ವ್ಯವಸ್ಥೆಯು ಶೋಷಣೆಗೆ ಒಳಪಟ್ಟವರ ಸಮಸ್ಯೆಗಳನ್ನು ಪರಿಹರಿಸುವಂತಿರಬೇಕು, ಇಲ್ಲದೆ ಹೋದಲ್ಲಿ ಅರಾಜಕೀಯ ವ್ಯವಸ್ಥೆ ಅಭಿವೃದ್ಧಿ ಸಾಧಿಸಿದೆ ಎಂದು ಹೇಳಲಾಗುವುದಿಲ್ಲ[೨೫] ಎಂದು ವಿಶ್ಲೇಷಿಸುತ್ತಾರೆ.

ಅಬ್ದುಲ್ ಕಲಾಮ್ ಮತ್ತು ವೈ. ಎಸ್ ರಾಜನ ಚರ್ಚಿಸುತ್ತಾ ಇದ್ದಾಗ ಒಂದು ರಾಷ್ಟ್ರ ಅಭಿವೃದ್ಧಿ ಹೊಂದಿದೆ ಎನ್ನುವದಾದರೆ ಯಾವ ಅಂಶಗಳು ಅವು ಎನ್ನುವಾಗ. ಒಂದು ರಾಷ್ಟ್ರ ಹೊಂದಿರುವ ಒಟ್ಟು ಸಂಪತ್ತು, ಅಲ್ಲಿನ ಜನರ ಶ್ರೀಮಂತಿಕೆ ಅಥವಾ ಅಂತರರಾಷ್ಟ್ರೀಯ ಸಮುದಾಯದಲ್ಲಿ ಆ ರಾಷ್ಟ್ರವು ಹೊಂದಿರುವ ಸ್ಥಾನಮಾನಗಳು ಮತ್ತು ಇದರೊಂದಿಗೆ ಜನರ ಜೀವನ ಕ್ರಮ, ಅವರು ಹೊಂದಿರುವ ಉದ್ಯೋಗ, ಭದ್ರತೆ ಹಾಗೂ ಜನರಿಗೆ ಇರುವ ಸೌಲಭ್ಯ, ಉತ್ತಮ ಆರೋಗ್ಯ ರಾಷ್ಟ್ರದ ಅಭಿವೃದ್ಧಿಯನ್ನು ನಿರ್ಧರಿಸುತ್ತದೆ[೨೬] ಎಂಬ ಅಭಿಪ್ರಾಯ ವ್ಯಕ್ತ ಪಡಿಸುತ್ತಾರೆ.

ಒಂದು ರಾಷ್ಟ್ರವು ಅಭಿವೃದ್ಧಿ ಹೊಂದಿದೆ ಅನ್ನುವುದನ್ನು ಯಾವ ಅಂಶ ತೀರ್ಮಾನಿಸುತ್ತದೆ ಅಭಿವೃದ್ಧಿ ದೃಷ್ಟಿ ಕೋನಗಳು ಮತ್ತು ಅವುಗಳನ್ನು ಸಾಧಿಸಲು ವಿವರಿಸಿರುವ ವಿಧಾನಗಳು ಜನಕೇಂದ್ರಿತ ಎಂಬ ನಂಬಿಕೆಯ ಮೇಲೆ ರಚಿಸಲ್ಪಟ್ಟಿವೆ. ಜನರು ಭಾಗವಹಿಸುವ ಮತ್ತು ಒಳಗೊಳ್ಳುವ ದೃಷ್ಟಿ ಕೋನಗಳು ಜನರ ಸಾಮರ್ಥ್ಯ ಮತ್ತು ಮೌಲ್ಯಗಳ ತಳಪಾಯದ ಮೇಲೆ ಬಲವಾಗಿ ನಂಬಿಕೆಯಿರಿಸಿದೆ ಆದರೆ ಇದು ಜನರು ಅಧಿಕಾರದಲ್ಲಿ ಇಲ್ಲದಿರುವಿಕೆ, ಬಡತನ ಮತ್ತು ನಿರ್ಲಕ್ಷಗೊಳಗಾಗಿರುವದರಿಂದ ಮಿತಿಗಳಿಗೆ ಒಳಪಟ್ಟಿರುತ್ತವೆ. ಜನರ ಸಂಘರ್ಷಾತ್ಮಕ ಮತ್ತು ಪರಸ್ಪರ ವೈರುದ್ಯದ ಹಿತಾಸಕ್ತಿಗಳನ್ನು ಪರಿಹರಿಸಲು ಅಭಿವೃದ್ಧಿ ದೃಷ್ಟಿಕೋನಗಳು ಪೂರಕವಾಗಿರಬೇಕು. ಅಭಿವೃದ್ಧಿ ಪರಿಕಲ್ಪನೆ ಯಾರಿಗೆ ಹೆಚ್ಚು ಲಾಭವಾಗುತ್ತದೆ ಮತ್ತು ಯಾರನ್ನ ಒಳಗೊಂಡಿರುತ್ತದೆ ಯಾರಿಗೆ ಹೆಚ್ಚು ಒತ್ತು ನೀಡಬೇಕು ಎನ್ನುವುದರ ಬಗೆಗಿರಬೇಕು. ಯಾವುದೇ ಅಭಿವೃದ್ಧಿ ತನ್ನ ಉದ್ದೇಶ ಅಥವಾ ಗುರಿಯನ್ನು ಮುಟ್ಟುವಂತಿರಬೇಕು ಅಂದರೆ ಫಲಾನುಭವಿಗಳಿಗೆ ಮುಟ್ಟಬೇಕು[೨೭] ಎಂದು ಪ್ರಸ್ತಾಪಿಸಿ ಅಭಿವೃದ್ಧಿ ಜನರ ಸರ್ವತೋಮುಖ ಬೆಳವಣಿಗೆಗೆ ಆದ್ಯತೆ ನೀಡಬೇಕು ಎಂದಿದ್ದಾರೆ.

ಬದಲಿ ಅಭಿವೃದ್ಧಿ ಯೋಜನೆಗಳು, ಬದಲಿ ಆಚರಣೆಗಳು ಮತ್ತು ಅಭಿವೃದ್ಧಿಯ ಗುರಿಗಳನ್ನು ಪುನರ ವ್ಯಾಖ್ಯಾನ ಮಾಡುವುದರತ್ತ ಹೆಚ್ಚಿನ ಒಲವು ತೋರುತ್ತಾರೆ. ಸಮುದಾಯದ ಪಾಲ್ಗೊಳ್ಳುವಿಕೆಯಿಂದ ಅಭಿವೃದ್ಧಿಯ ಪ್ರಯತ್ನಗಳು ಯಶಸ್ವಿಯಾಗುತ್ತವೆ ಎಂದು ಅವುಗಳ ಬಳಕಗೆ ತರದಿದ್ದರೂ ಒಪ್ಪಿಕೊಳ್ಳಲಾಗುತ್ತದೆ[೨೮] ಎಂಬುದಾಗಿದೆ ವಿಶ್ಲೇಷಿಸಿ ಅಭಿವೃದ್ಧಿಯೆಂದರೆ ಕೇವಲ ರಾಷ್ಟ್ರಗಳ ಒಟ್ಟು ವರಮಾನವನ್ನು ಹೆಚ್ಚಿಸುವುದು ಮಾತ್ರ ಅಲ್ಲ ಇಲ್ಲಿರುವ ಮಾನವ ಸಂಪನ್ಮೂಲಗಳ ಸದ್ಬಳಕೆ ಮಾಡುವುದು. ಅಭಿವೃದ್ಧಿ ಅಳತೆ ಮಾಡುವ ಮಾಪನವಾಗಿದೆ ಎಂದಿರುವ ಲೇಖಕರು ೧೯೨೦ರ

ನಂತರ ಮುಖ್ಯ ವಾಹಿಯ ಅಭಿವೃದ್ಧಿ ಚಿಂತನೆಯಿಂದ ಬೇಸತ್ತು ಬದಲಿ ಜನಕೇಂದ್ರತ ಅಭಿವೃದ್ಧಿಯ ದೃಷ್ಟಿಕೋನ ಮಹತ್ವ ಪಡೆಯಿತು ಎಂದು ಪ್ರಸ್ತಾಪಿಸುತ್ತಾರೆ.

ಶೂಮಾಕರವರ ಚಿಕ್ಕದು ಸುಂದರವಾಗಿರುತ್ತದೆ ಎಂಬ ಮಾತನ್ನು ಆರ್.ಕೆ ಸತ್ರು ರವರು ಉಲ್ಲೇಖಿಸುತ್ತಾ ಇದೊಂದು ರೀತಿಯ ಭಿನ್ನವಾದ ಪ್ರಕ್ರಿಯೆಯಾಗಿದೆ ಇದು ಕೈಗಾರೀಕರಣಕ್ಕೆ ಬದಲಿ ವ್ಯವಸ್ಥೆಯನ್ನು ಸೂಚಿಸುತ್ತದೆ. ಇದರ ಮೂಲ ಉದ್ದೇಶ ಆರ್ಥಿಕತೆಯನ್ನು ವಿಕೇಂದ್ರಿಕರಿಸುತ್ತದೆ ಇದರಿಂದಾಗಿ ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ಸ್ಥಳೀಯ ತಾಂತ್ರಿಕತೆಯನ್ನು ಉಪಯೋಗಿಸಿ. ಚಿಕ್ಕ ಕೈಗಾರಿಕಾ ಘಟಕದ ಸ್ಥಾಪನೆಗೆ ಅವಕಾಶ ಒದಗಿಸುತ್ತದೆ ಇದರಿಂದ ಪರಿಸರ ಮಾಲಿನ್ಯವನ್ನು ಹಾಗೂ ಜನರಿಗೆ ಆಗುವ ತೊಂದರೆಯನ್ನು ತಪ್ಪಿಸಬಹುದು[೭೯] ಎಂದು ಅಭಿಪ್ರಾಯ ಪಡುತ್ತಾರೆ. ೧೯೬೧ ರಲ್ಲಿ ಭಾರತ ಸರಕಾರಕ್ಕೆ ಗ್ರಾಮಾಂತರ ಪ್ರದೇಶದಲ್ಲಿ ಚಿಕ್ಕ ಕೈಗಾರಿಕೆಯನ್ನು ಸ್ಥಾಪಿಸಿದಲ್ಲಿ ಅಲ್ಲಿನ ಜನರ ಪಾಲ್ಗೊಳ್ಳುವಿಕೆ ಹೆಚ್ಚುತ್ತದೆ ಮತ್ತು ಪರಿಸರ ಮಾಲಿನ್ಯವು ತಪ್ಪುತ್ತದೆ ಎಂದು ಶೂಮಾಕರ್ ಅಭಿಪ್ರಾಯ ಪಡುತ್ತಾ ಚಿಕ್ಕ ಕೈಗಾರಿಕಾ ಘಟಕಗಳ ಸ್ಥಾಪನೆಯ ಔಚಿತ್ಯವನ್ನು ವಿವರಿಸುತ್ತಾರೆ.

ತೃತೀಯ ಜಗತ್ತೀನಲ್ಲಿ ಆರಂಭಿಸಲ್ಪಡುವ ಆಧುನಿಕ ತಂತ್ರಜ್ಞಾನವನ್ನು ಹೊಂದಿರುವ ಕೈಗಾರಿಕೆಗಳು ಸಾಮಾಜಿಕ ಬೇಕು ಬೇಡಗಳನ್ನು ಪೂರೈಸಿದಾಗ ಮಾತ್ರ ಯಶಸ್ವಿಯಾಗಲು ಸಾಧ್ಯವಾಗುತ್ತದೆ, ಸ್ಥಳೀಯ ಜನರಿಗೆ ಅಭಿವೃದ್ಧಿ ಯೋಜನೆಗಳ ತಯಾರಿಯಲ್ಲಿ ನಿರ್ದೇಶನದಲ್ಲಿ ಅವಕಾಶ ನೀಡಬೇಕು ಇವುಗಳು ಸಾಧ್ಯವಾಗಬೇಕಾದರೆ ಜನರಿಗೆ ಭೌತಿಕ ಮತ್ತು ತಾಂತ್ರಿಕ ನೇರವು ನೀಡಬೇಕು[೮೦] ಎಂದು ಪ್ರತಿಪಾದಿಸಿದ ಪಿ ಹ್ಯಾರಿಸನ್ ರವರು ಸಾಮಾಜಿಕ ನ್ಯಾಯ ದೊರಕಬೇಕೆಂದರೆ ಬೃಹತ ಕೈಗಾರಿಕೆಗಳ ಸ್ಥಾಪನೆಯಲ್ಲಿ ಸ್ಥಳೀಯ ಜನರ ಸಹಕಾರ ಮತ್ತು ಸಹಭಾಗಿತ್ವದ ಅವಶ್ಯಕತೆಯು ಪೂರೈಕೆಯಾಗಬೇಕು ಎನ್ನುತ್ತಾರೆ.

ಪೌಲ್ ಗ್ರೀಡಿ ಮತ್ತು ಜೊನಾಥನ್ ಎನ್ಸಾರ್‌ರವರು ತಮ್ಮ ಸಂಪಾದಿತ ಗ್ರಂಥದಲ್ಲಿ ಅಭಿವೃದ್ಧಿ ಕೇವಲ ತಲಾವರಮಾನದ ಏರಿಕೆ ಮತ್ತು ಆರ್ಥಿಕ ಹಕ್ಕುಗಳ ಬೆಳವಣಿಗೆ ಸಾಧಿಸಲು ಮಾತ್ರ ಸೀಮಿತವಾಗದೆ ಗುಣಾತ್ಮಕ ಅಭಿವೃದ್ಧಿಗೆ ಆದ್ಯತೆ ನೀಡಬೇಕು. ಅಭಿವೃದ್ಧಿಯು ಜನರ ಹಿತಾಸಕ್ತಿಗೆ ಅನುಗುಣವಾಗಿರಬೇಕು ಇಲ್ಲದಿದ್ದರೆ ಅದು ಅಭಿವೃದ್ಧಿ ಅಲ್ಲ ಅಸಹಜ ಅಭಿವೃದ್ಧಿಯಾಗುತ್ತದೆ[೮೧] ಎಂಬುದಾಗಿ ವಿಮರ್ಶಿಸುತ್ತಾರೆ.

ಅರ್ಮತ್ಯಸೇನ್ ಮತ್ತು ಜೀನ್ ಡ್ರೀಸ್ ರವರು ಆರ್ಥಿಕ ಅವೃದ್ಧಿಯೆಂದರೆ ಸಮಾಜದಲ್ಲಿ ಜನರಿಗೆ ಅವಕಾಶಗಳನ್ನು ಹೆಚ್ಚಿಸಬೇಕು ಜನರು ಸ್ವತಂತ್ರ್ಯವನ್ನು ಪರಿಣಾಮಕಾರಿಯಾಗಿ ಅನುಭವಿಸುವಂತೆ ಮಾಡಬೇಕು. ಮೂಲ ಉದ್ದೇಶ ಜನರ ಸಾಮರ್ಥ್ಯವನ್ನು ಹೆಚ್ಚಿಸುವುದಾಗಿದೆ, ಆದರೆ ಆಧುನಿಕ ಅಭಿವೃದ್ಧಿಯ ಸಾಹಿತ್ಯದಲ್ಲಿ ಸರ್ವತೋಮುಖ ಅಭಿವೃದ್ಧಿಗೆ ಪ್ರಾಮುಖ್ಯತೆಯನ್ನು ನೀಡದೆ ಹೆಚ್ಚಿನ

ಗಮನವನ್ನು ಒಟ್ಟು ರಾಷ್ಟ್ರೀಯ ಉತ್ಪನ್ನ ಹಾಗೂ ಅದಕ್ಕೆ ಸಂಬಂಧಪಟ್ಟ ಅಂಶಗಳನ್ನು ಹೆಚ್ಚಿಸುವುದು ಆರ್ಥಿಕ ಬೆಳವಣಿಗೆಯೆಂದು ವಿಶ್ಲೇಷಿಸಲಾಗುತ್ತದೆ[೮೨] ಎಂದು ಅಭಿಪ್ರಾಯ ಪಟ್ಟಿದ್ದಾರೆ.

ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ಅಭಿವೃದ್ಧಿ ಕುಂಠಿತಗೊಳ್ಳಲು ಪ್ರಮುಖ ಕಾರಣವೆಂದರೆ ಸಾಮಾಜಿಕ ಬಂಡವಾಳದ ಕೊರತೆ. ಈ ಸಾಮಾಜಿಕ ಅಭಿವೃದ್ಧಿಯು ತಪ್ಪಿದ ಕೊಂಡಿಯಾಗಿದ್ದು ಸ್ಥಳೀಯ ಸಂಘಟನೆಗಳಿಗೆ ಮತ್ತು ಸ್ವಸಹಾಯ ಗುಂಪುಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕು ಅಭಿವೃದ್ಧಿಯಲ್ಲಿ ಈ ರೀತಿ ಸ್ಥಳೀಯ ಸಂಘಟನೆಗಳು ಹೆಚ್ಚು ತೊಡಗಿಕೊಂಡಾಗ ಮಾತ್ರ ಅಭಿವೃದ್ಧಿ ಸಾಧ್ಯವಾಗುತ್ತದೆ[೮೩] ಎಂದು ವಿಶ್ಲೇಷಿಸಿರುತ್ತಾರೆ.

೨೫೦ ಕುಟುಂಬಗಳಲ್ಲಿ ೧೩ ಕುಟುಂಬಗಳಲ್ಲಿ ಮರಣ ಹೊಂದಿದ ಮಕ್ಕಳ ಕುಟುಂಬಗಳು ನಮ್ಮ ಅಧ್ಯಯನದಲ್ಲಿ ಲಭ್ಯವಾಗಿವೆ ಅದರಲ್ಲಿ ಹೆರಿಗೆಗೆ ಮುನ್ನ ಶೇಕಡಾ ೭೭ ರಷ್ಟು, ಹೆರಿಗೆ ಸಮಯದಲ್ಲಿ ಯಾವುದೂ ಇಲ್ಲ, ಹೆತ್ತ ಒಂದು ವರ್ಷದಲ್ಲಿ ಶೇಕಡಾ ೨೩ ರಷ್ಟು ಮಕ್ಕಳು ಮರಣ ಹೊಂದಿದ್ದಾರೆ. ಶೇಕಡಾ ೭೭ ರಷ್ಟು ಮಕ್ಕಳು ಮರಣಿಸಿದ ಕಾರಣ ತಿಳಿದುಕೊಂಡಾಗ ಪೌಷ್ಟಿಕತೆಯ ಕೊರತೆ, ಬಡತನ, ಆರೋಗ್ಯ ಸೌಲಭ್ಯಗಳ ಕುರಿತು ತಿಳುವಳಿಕೆ ಇಲ್ಲದಿರುವುದು ಮತ್ತು ನಿರ್ಲಕ್ಷ ಎನ್ನುವುದು ಗೊತ್ತಾಗುತ್ತದೆ. ಹೆತ್ತ ಒಂದು ವರ್ಷದಲ್ಲಿ ಶೇಕಡಾ ೨೩ ರಷ್ಟು ಮಕ್ಕಳು ಮರಣಕ್ಕೆ ಕಾರಣವನ್ನೂ ಹುಡುಕಿದಾಗ ಇಲ್ಲಿಯೂ ಕೂಡಾ ಅದೇ ಕಾರಣಗಳು ಪುನರಾವರ್ತನೆಯಾಗುವುದನ್ನು ಕಾಣುತ್ತೇವೆ. ನಮ್ಮ ಅಧ್ಯಯನದ ಹಿಂದುಳಿದ ಮತ್ತು ಸ್ಲಮ್ ಪ್ರದೇಶಗಳಲ್ಲಿ ಹೆಚ್ಚು ಮಕ್ಕಳು ಸಾವನ್ನಪಿದನ್ನು ಕಾಣುತ್ತೇವೆ. ಮುಂದುವರೆದ ಪ್ರದೇಶದಲ್ಲಿ ಇದು ತೀರಾ ಕಡಿಮೆ ಇರುವುದು ಕಂಡು ಬರುತ್ತದೆ. ಇದರಿಂದ ತಿಳಿದು ಬರುವುದೇನೆಂದರೆ ಆರ್ಥಿಕವಾಗಿ ಬಲಿಷ್ಟವಾದವರಲ್ಲಿ ಮರಣ ಸಂಖ್ಯೆ ತೀರಾ ಕಡಿಮೆ ಇರುವುದು ಮತ್ತು ಆರ್ಥಿಕವಾಗಿ ಹಿಂದುಳಿದವರಲ್ಲಿ ಮಕ್ಕಳ ಮರಣ ಸಂಖ್ಯೆ ಹೆಚ್ಚಿರುವುದನ್ನು ಕಾಣುತ್ತೇವೆ. ಇದನ್ನು ಕಡಿಮೆ ಮಾಡುವಲ್ಲಿ ನಗರ ಸಭೆಯು

ಪೂರಕ ಕ್ರಮಗಳನ್ನು ತೆಗೆದುಕೊಳ್ಳುವ ಅನಿವಾರ್ಯತೆ ಇರುವುದು ಕಂಡು ಬರುತ್ತದೆ. ಇದು ದೇಶದ ಅಭಿವೃದ್ಧಿ ದೃಷ್ಟಿಯಿಂದಲೂ ಕೂಡಾ ಸರಿಯಾದದಲ್ಲಾ ಇದನ್ನು ಸರಿಪಡಿಸುವ ಅವಶ್ಯಕತೆ ಇದೆ. ಇದನ್ನು ಸ್ಥಳೀಯ ಪ್ರತಿನಿಧಿಗಳು, ಅಧಿಕಾರಿಗಳು ಗಮನಿಸಿ ಸರಿಯಾದ ಕ್ರಮ ತೆಗೆದುಕೊಳ್ಳಬೇಕು.

೭.೧.೯. ನಗರದಲ್ಲಿ ಕಳೆದ ಎರಡು ವರ್ಷದಲ್ಲಿ ಕೌಟುಂಬಿಕ ಅನಾರೋಗ್ಯದ ವಿವರಗಳು.

ರೋಗದ ವಿಧಗಳು	ವಿವರ	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
ಬಿ.ಪಿ	ಪುರುಷ	೦೮	೨೬.೫
	ಸ್ತ್ರೀಯರು	೦೧	
	ಒಟ್ಟು	೦೯	
ಸಕ್ಕರೆ ಕಾಯಿಲೆ	ಪುರುಷ	೧೨	೪೧.೫
	ಸ್ತ್ರೀಯರು	೦೨	
	ಒಟ್ಟು	೧೪	
ಹೃದಯಿ ಸಂಬಂಧಿ ಕಾಯಿಲೆ	ಪುರುಷ	೦೨	೦೯
	ಸ್ತ್ರೀಯರು	೦೧	
	ಒಟ್ಟು	೦೩	
ಕ್ಯಾನ್ಸರ್	ಪುರುಷ	೦೦	೦೦
	ಸ್ತ್ರೀಯರು	೦೦	
	ಒಟ್ಟು	೦೦	
ಎಚ್. ಆಯ್. ವಿ	ಪುರುಷ	೦೦	೦೦
	ಸ್ತ್ರೀಯರು	೦೦	
	ಒಟ್ಟು	೦೦	
ಇತರೆ	ಪುರುಷ	೦೨	೨೩
	ಸ್ತ್ರೀಯರು	೦೬	
	ಒಟ್ಟು	೦೮	
	ಒಟ್ಟು	೩೪	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಕಳೆದ ಎರಡು ವರ್ಷಗಳ ಅನಾರೋಗ್ಯದ ವಿವರಗಳನ್ನು ತಿಳಿದುಕೊಂಡಾಗ ಗೊತ್ತಾದ ಸಂಗತಿಯಂದರೆ ಒಟ್ಟು ೩೪ ರೋಗಿಗಳು ೨೫೦ ಕುಟುಂಬದಿಂದ ದೊರಕಿದ್ದಾರೆ. ಇದರಲ್ಲಿ ರಕ್ತದೊತ್ತಡ ಇರುವವರು ಶೇಕಡಾ ೨೬.೫ ರಷ್ಟು, ಸಕ್ಕರೆ ಕಾಯಿಲೆ ಶೇಕಡಾ ೪೧.೫ ರಷ್ಟು, ಹೃದಯ ಸಂಬಂಧಿ ಕಾಯಿಲೆ ಇರುವವರು ಶೇಕಡಾ ೯ ರಷ್ಟು, ಇತರೆ ಕಾಯಿಲೆ ಹೊಂದಿದವರು ಶೇಕಡಾ ೨೩ ರಷ್ಟು, ಇರುವುದು ಕಂಡು ಬಂದಿದೆ. ಪುರುಷರನ್ನು ಮತ್ತು ಮಹಿಳೆಯರನ್ನು ಹೊಲಿಕೆ ಮಾಡಿ ನೋಡಿದಾಗ ಹೆಚ್ಚು ರೋಗಗಳು ಪುರುಷರಿಗೆ ಇರುವುದು ಕಂಡು ಬರುತ್ತದೆ. ಇಲ್ಲಿ ಗಮನಿಸುವ ಅಂಶಗಳೆಂದರೆ ಜನರು ತಮಗಿರುವ ರೋಗವನ್ನು ಹೇಳಲು ಹಿಂಜರಿಯುವುದು ಕಂಡು ಬಂದಿದೆ. ಬೇರೆ ವ್ಯಕ್ತಿಗಳಿಂದಲೇ ಈ ವಿಷಯ ನಮಗೆ ತಿಳಿದು ಬಂದಿದೆ. ಎಲ್ಲ ರೋಗಗಳಲ್ಲಿ ಈ ಸಕ್ಕರೆ ಕಾಯಿಲೆ ಹೆಚ್ಚಿರುವುದನ್ನು ಕಾಣುತ್ತೇವೆ ಮತ್ತು ಈ ಕಾಯಿಲೆಯು ಮುಂದುವರೆದ ಪ್ರದೇಶಗಳಲ್ಲಿಯೆ ಹೆಚ್ಚಿರುವುದು ಕಂಡು ಬಂದಿರುವುದು ವಿಶೇಷವಾಗಿದೆ. ಹಿಂದುಳಿದ ಮತ್ತು ಮುಂದುವರೆದ ಪ್ರದೇಶಗಳಲ್ಲಿ ಕಂಡು ಬರುವ ರೋಗಗಳು ಬೇರೆ ಬೇರೆ, ಸಾಮಾನ್ಯವಾಗಿ ಇಲ್ಲಿ ಎರಡು ರೀತಿಯಿಂದ ವಿಭಾಗಿಸಬಹುದು ಒಂದು ಶ್ರೀಮಂತರ ಕಾಯಿಲೆ ಇನ್ನೊಂದು ಬಡವರ ಕಾಯಿಲೆ ರಕ್ತದೊತ್ತಡ ಮತ್ತು ಸಕ್ಕರೆ ಕಾಯಿಲೆ ಶ್ರೀಮಂತರ ಕಾಯಿಲೆಗಳಾಗಿದ್ದು ಅವು ಇವತ್ತು ಸಾಮಾನ್ಯ ಕಾಯಿಲೆಗಳಾಗಿರುವುದನ್ನು ಕಾಣುತ್ತೇವೆ. ಈ ಹಿಂದುಳಿದ ಪ್ರದೇಶದಲ್ಲಿ ಕಂಡುಬಂದ ಇನ್ನೊಂದು ಪ್ರಮುಖ ಅಂಶವೆಂದರೆ ಇಲ್ಲಿನ ಜನರಿಗೆ ಅನೇಕ ಕಾಯಿಲೆಗಳಿವೆ ಆದರೆ ಅವು ಯಾವು ಅನ್ನುವುದು ತಿಳಿದೆ ಇಲ್ಲ ಏಕೆಂದರೆ ಅವರು ಆಸ್ಪತ್ರೆಗಳಿಗೆ ಹೋಗುವುದೇ ಇಲ್ಲ ಹೋದರು ಸಾಮಾನ್ಯ ಆಸ್ಪತ್ರೆಗಳಿಗೆ ಹೋಗುತ್ತಾರೆ, ದೊಡ್ಡ ಅಥವಾ ಭಯಾನಕ ಪಡುವಂತಾ ಕಾಯಿಲೆಗಳನ್ನು ಪತ್ತೆ ಹಚ್ಚುವುದೇ ಇಲ್ಲ ಹಾಗಾಗಿ ಅವರಿಗೆ ಸಾವೇ ಗತಿಯಾಗುವುದನ್ನು ಕಾಣುತ್ತೇವೆ. ಇಲ್ಲಿಯೂ ಕೂಡಾ ಆರ್ಥಿಕ ಅಂಶಗಳು ಪ್ರಮುಖ ಪಾತ್ರವಹಿಸುತ್ತವೆ, ಬಡವರಿಗೆ ಉತ್ತಮ ಆರೋಗ್ಯ ಸಿಗುವ ಪ್ರಯತ್ನ ನಡೆಯ ಬೇಕಾದ ಅವಶ್ಯಕತೆ ಇರುವುದು ಗೊತ್ತಾಗುತ್ತದೆ.

೭.೧.೧೦. ನಗರದ ಜನ ಪಡೆದುಕೊಂಡ ಚಿಕಿತ್ಸೆಯ ಪ್ರಕಾರಗಳು

ಚಿಕಿತ್ಸೆಯ ಪ್ರಕಾರಗಳು	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
ಆಯುರ್ವೇದ	೧೬	೪೭
ಹೊಮಿಯೋಪತಿ	೦೦	೦೦
ಅಲೋಪತಿ	೧೮	೫೩
ಇತರೆ	೦೦	೦೦
ಒಟ್ಟು	೩೪	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಒಟ್ಟು ೩೪ ರೋಗಿಗಳು ಪಡೆದ ಚಿಕಿತ್ಸೆಯ ಪ್ರಕಾರಗಳನ್ನು ನಾವು ನೋಡಿದಾಗ ಆರ್ಯುವೇದ್ ಶೇಕಡಾ ೪೭ ರಷ್ಟು, ಹೊಮಿಯೋಪತಿ ಶೂನ್ಯ ಮತ್ತು ಅಲೋಪಥಿ ಶೇಕಡಾ ೫೩ ರಷ್ಟು, ಪ್ರಮಾಣದಲ್ಲಿ ಚಿಕಿತ್ಸೆಯನ್ನು ಪಡೆಯಲಾಗಿದೆ. ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶಗಳೆಂದರೆ ಬಹಳಷ್ಟು ಜನರಿಗೆ ಇವುಗಳ ಮಧ್ಯೆ ಇರುವ ವ್ಯತ್ಯಾಸವೇ ತಿಳಿಯದೆ ಇರುವುದು ಹೆಚ್ಚು ಜನರು ಅಲೋಪತಿ ವೈದ್ಯರ ಹತ್ತಿ ತೋರಿಸುತ್ತಾರೆ ಮತ್ತು ಹಾಗೆಯೇ ಆಯುರ್ವೇದವು ಕೂಡಾ ಕಡಿಮೆ ಇಲ್ಲಾ, ಶೇಕಡಾ ೫ ರಷ್ಟು ಕಡಿಮೆ ಇದೆ, ಅಲೋಪತಿಗೆ ಹೋಲಿಸಿದಾಗ ಕೊಪ್ಪಳ ನಗರದಲ್ಲಿ ಆಯುರ್ವೇದ ವೈದ್ಯರು ಹೆಚ್ಚಾಗಿರುವುದು ಕಂಡು ಬರುತ್ತದೆ. ಹಿಂದುಳಿದ ಪ್ರದೇಶದ ಜನ ಹೆಚ್ಚು ಸರಕಾರಿ ಆಸ್ಪತ್ರೆಗಳನ್ನು ಅವಲಂಭಿಸಿರುವುದು ಕಂಡು ಬರುತ್ತದೆ, ಅಲ್ಲಿನ ವ್ಯವಸ್ಥೆ ಕುರಿತು ಕೇಳಿದಾಗ ನಕಾರಾತ್ಮಕ ಅಭಿಪ್ರಾಯಗಳು ಹೆಚ್ಚಾಗಿ ಕಂಡು ಬಂದಿರುವುದು ಕಂಡು ಬರುವುದನ್ನು ಕಾಣುತ್ತೇವೆ.

೭.೧.೧೧.ಅ. ಚಿಕಿತ್ಸೆ ಪಡೆದುಕೊಂಡ ಸ್ಥಳದ ವಿವರ.

ವಿವರ	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
ನಗರ	೨೫	೭೪
ನಗರದಿಂದ ಹೊರಗಡೆ	೦೯	೨೩
ಒಟ್ಟು	೩೪	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಚಿಕಿತ್ಸೆಯ ಪ್ರದೇಶವನ್ನು ಕುರಿತು ಪ್ರಶ್ನಿಸಿದಾಗ ಶೇಕಡಾ ೭೪ ರಷ್ಟು, ನಗರದಲ್ಲಿ ಮತ್ತು ಶೇಕಡಾ ೨೬ ರಷ್ಟು, ಜನರು ನಗರದಿಂದ ಹೊರಗಡೆ ಚಿಕಿತ್ಸೆಯನ್ನು ಪಡೆದು ಕೊಂಡಿದ್ದಾರೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಹಿಂದುಳಿದ ಮತ್ತು ಮಧ್ಯಮ ಪ್ರದೇಶದ ಜನರೆಲ್ಲರೂ ನಗರದಲ್ಲಿಯೇ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ ಮುಂದುವರೆದ ಪ್ರದೇಶದಲ್ಲಿಯೂ ಕೂಡಾ ಕೆಲವರು ನಗರದಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಕಾರಣವೆಂದರೆ ನಗರದಲ್ಲಿ ೨೪×೭ ಅಂದರೆ ಮಲ್ಟಿ ಸ್ಪೆಷಾಲಿಷ್ಟ ಆಸ್ಪತ್ರೆಗಳು ಆಗಿರುವುದರಿಂದ ಆದರೂ ಮುಂದುವರೆದ ನಗರಗಳಿಗೆ ಹೋಲಿಸಿದಾಗ ಅಷ್ಟೊಂದು ಪ್ರಮಾಣದಲ್ಲಿ ಒಳ್ಳೆಯ ಸೌಲಭ್ಯ ಇರುವ ಆಸ್ಪತ್ರೆಗಳು ಇಲ್ಲದಿರುವುದನ್ನು ಕಾಣುತ್ತೇವೆ. ಇದರ ಕುರಿತು ನಗರದ ಪ್ರತಿನಿಧಿಗಳು ಗಮನ ಹರಿಸುವ ಅವಶ್ಯಕತೆ ಇರುವುದು ಕಂಡು ಬರುತ್ತದೆ.

೭.೧.೧೧. ಬ. ಚಿಕಿತ್ಸೆಗೆ ತಗುಲಿದ ಖರ್ಚು

ಹಣದ ವಿವರ	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
೧೦ ಸಾವಿರಕ್ಕಿಂತ ಕಡಿಮೆ	೧೬	೪೭
೧೦೦೦೧-೫೦೦೦೦	೧೦	೨೯
೫೦೦೦೧-೧೦೦೦೦೦	೦೩	೦೯
೧ ಲಕ್ಷಕ್ಕಿಂತ ಹೆಚ್ಚು	೦೫	೧೫
ಒಟ್ಟು	೩೪	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಒಟ್ಟು ನಾಲ್ಕು ವಿಧದಲ್ಲಿ ಚಿಕಿತ್ಸೆಗೆ ತಗುಲಿದ ವೆಚ್ಚವನ್ನು ವಿಂಗಡಿಸಲಾಗಿತ್ತು ಅದರಲ್ಲಿ ಮೊದನೆಯದಾಗಿ ೧೦ ಸಾವಿರಕ್ಕಿಂತ ಕಡಿಮೆ ಶೇಕಡಾ ೪೭ ರಷ್ಟು, ಎರಡನೆಯದಾಗಿ ೧೦೦೦೦-೫೦೦೦೦ ರವರೆಗೆ ಶೇಕಡಾ ೨೯ ರಷ್ಟು, ಮೂರನೆಯದಾಗಿ ೫೦ ಸಾವಿರ ದಿಂದ ೧ ಲಕ್ಷದ ವರೆಗೆ ಶೇಕಡಾ ೯ ರಷ್ಟು, ನಾಲ್ಕನೆಯದಾಗಿ ೧ ಲಕ್ಷಕ್ಕಿಂತ ಹೆಚ್ಚು ಶೇಕಡಾ ೧೫ ರಷ್ಟು, ಖರ್ಚು ಮಾಡಿದ್ದಾರೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಅತಿ ಹೆಚ್ಚು ೧೦ ಸಾವಿರ ಕ್ಕಿಂತ ಕಡಿಮೆ ಖರ್ಚು ಮಾಡಿದವರು ಕಂಡು ಬರುತ್ತಾರೆ ಕಾರಣವೆಂದರೆ ಮೂರರಲ್ಲಿ ಎರಡು ಭಾಗದಷ್ಟು ಜನರು ಮಧ್ಯಮ ಮತ್ತು ಹಿಂದುಳಿದ ಪ್ರದೇಶದವರಾಗಿದ್ದಾರೆ, ಅವರು ಮಾಡುವ ಹೆಚ್ಚು ವೆಚ್ಚವೆಂದರೆ ೧೦ ಸಾವಿರ ಅದಕ್ಕಿಂತ ಹೆಚ್ಚಿಗೆ ಆಗುತ್ತದೆ ಅಂತಾ ಗೊತ್ತಾದರೆ ಅವರು ಮುಂದುವರೆಯುವುದಿಲ್ಲ ಹೀಗಾಗಿ ಆ ಪ್ರಮಾಣ ಹೆಚ್ಚಿರುವುದನ್ನು ನಾವು ಕಾಣುತ್ತೇವೆ. ಮುಂದುವರೆದ ಪ್ರದೇಶದ ಜನ ಆರೋಗ್ಯದ ಮೇಲೆ ಹೆಚ್ಚು ಖರ್ಚು ಮಾಡಲು ಸಿದ್ಧರಿದ್ದಾರೆ ಮತ್ತು ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ ಚಿಕಿತ್ಸೆಯನ್ನು ಕೊಡಿಸುತ್ತಾರೆ. ಅವರಿಗೆ ಹಣಕ್ಕಿಂತ ಆರೋಗ್ಯ ಮುಖ್ಯವಾಗಿದೆ, ಬಡವರಿಗೂ ಆರೋಗ್ಯ ಮುಖ್ಯ ಆದರೆ ಹಣ ಅದನ್ನ ಗೌಣವಾಗಿಸುತ್ತದೆ. ನಗರದಲ್ಲಿ ಸರಕಾರಿ ಆಸ್ಪತ್ರೆ ಸುಧಾರಿಸುವ ಅವಶ್ಯಕತೆ ಇದೆ ಗುಣಮಟ್ಟದ ಆರೋಗ್ಯ ಸೌಲಭ್ಯಗಳನ್ನು ನೀಡಿ ಆದಷ್ಟು ದಿನದಲಿತರ, ಹಿಂದುಳಿದವರ ಆರೋಗ್ಯ ಕಾಪಾಡುವ ಜವಾಬ್ದಾರಿ ಪ್ರತಿನಿಧಿಗಳ ಮೇಲೆ ಇರುವುದನ್ನು ನೋಡುತ್ತೇವೆ ಮತ್ತು ಇದೆ ಅತ್ಯವಶ್ಯವಾಗಿ ಆಗಬೇಕಾದ ಒಂದು ಕೆಲಸವಾಗಿದೆ, ಮೂಲಭೂತ ಸೌಲಭ್ಯಗಳಲ್ಲಿ ಇದು ಕೂಡಾ ಒಂದು ಪ್ರಮುಖ ಅಂಶವಾಗಿದೆ.

೭.೧.೧೨. ನಗರದಲ್ಲಿ ವಾಸಿಸುವ ಜನರ ಆರೋಗ್ಯದ ಸದ್ಯದ ಸ್ಥಿತಿ

ಸ್ಥಿತಿಗಳು	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
ಉತ್ತಮ	೦೬	೧೮
ಉತ್ತಮವಿಲ್ಲ	೦೨	೦೬
ಸಾಧರಣ	೨೫	೭೩
ನಿಧನ	೦೧	೦೩
ಒಟ್ಟು	೩೪	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಒಟ್ಟು ೩೪ ಜನರ ಅನಾರೋಗ್ಯದ ಸ್ಥಿತಿಯನ್ನು ಅಧ್ಯಯನ ಮಾಡಿದಾಗ ಮತ್ತು ಅವರು ಆಸ್ಪತ್ರೆಗೆ ಹೋಗಿ ಬಂದ ನಂತರ ಅವರ ಸ್ಥಿತಿಯನ್ನು ನೋಡಿದಾಗ ಶೇಕಡಾ ೧೮ ರಷ್ಟು ಉತ್ತಮ ಸ್ಥಿತಿ, ಶೇಕಡಾ ೬ ರಷ್ಟು ಉತ್ತಮವಲ್ಲದ ಸ್ಥಿತಿ, ಶೇಕಡಾ ೭೩ ರಷ್ಟು ಸಾಧಾರಣ, ಶೇಕಡಾ ೩ ರಷ್ಟು ನಿಧನ ಹೊಂದಿದವರು ಎನ್ನುವ ಅಂಶ ತಿಳಿಯುತ್ತದೆ ಇದೊಂದು ಸಾಮಾನ್ಯ ಪ್ರಕ್ರಿಯೆಯಾಗಿದೆ ಅಂದರೆ ಆಸ್ಪತ್ರೆಗೆ ಹೋಗಿ ಬಂದ ನಂತರ ಈ ಮೇಲಿನ ಯಾವುದಾದರೂ ಒಂದು ಪ್ರಕಿಯೆ ನಡೆಯಲೇಬೇಕು. ಇಲ್ಲಿ ಗಮನಿಸುವ ಅಂಶವೇನೆಂದರೆ ಬಹಳಷ್ಟು ಜನರ ಸ್ಥಿತಿ ಸಾಧಾರಣವಾಗಿದೆ. ಈ ಸಾಧಾರಣ ಸ್ಥಿತಿ ಎನ್ನುವುದು ರೋಗಗಳ ಮೇಲೆ ಅವಲಂಬಿಸಿದೆ ಉದಾಹರಣೆಗೆ ರಕ್ತದೊತ್ತಡ ಮತ್ತು ಸಕ್ಕರೆ ಕಾಯಿಲೆ ಒಮ್ಮೆ ಬಂದರೆ ಇವು ಕಡಿಮೆಯಾಗುವ ಸಾಧ್ಯತೆ ಕಡಿಮೆ ಹಾಗಾಗಿ ಸಾಧಾರಣ ಸ್ಥಿತಿ ಮುಂದುವರೆಯುತ್ತದೆ. ಹಿಂದುಳಿದ ಪ್ರದೇಶದಲ್ಲಿ ನಾವು ಮಾಹಿತಿ ಪಡೆಯುತ್ತಿರುವಾಗ ಅವರು ಆಸ್ಪತ್ರೆಗೆ ಹೋಗದೆ ಇರುವುದನ್ನು ಕಾಣುತ್ತೇವೆ ಹಾಗೆಯೆ ಅವುಗಳನ್ನು ಅನುಭವಿಸುತ್ತಲೇ ಸಾವಿನ ಸ್ಥಿತಿಯನ್ನು ತಲುಪುತ್ತಾರೆ. ನಗರದ ಅಥವಾ ದೇಶದ ಜನರ ಆರೋಗ್ಯ ಸರಿಯಾಗಿದ್ದರೆ ದೇಶದ ಮತ್ತು ನಗರದ ಪ್ರಗತಿ ವೇಗಗತಿಯಲ್ಲಿ ಸಾಗುತ್ತದೆ ಏಕೆಂದರೆ ಇದು ಆರ್ಥಿಕತೆ ಮೇಲೆ ಪರಿಣಾಮ ಬೀರುತ್ತದೆ, ಆರೋಗ್ಯವೇ ಭಾಗ್ಯ ಎನ್ನುವ ಮಾತು ನಿಜ ಅನಿಸುತ್ತದೆ. ಹಾಗಾಗಿ ಇದೊಂದು ಮೂಲಭೂತ ಸೌಕರ್ಯಗಳಲ್ಲಿ ಒಂದಾಗಿರುವುದರಿಂದ ಇದರ ಕುರಿತು ಹೆಚ್ಚು ಕಾಳಜಿವಹಿಸುವ ಅವಶ್ಯಕತೆ ಇದೆ ಇದನ್ನು ಜನಪ್ರತಿನಿಧಿಗಳು ಗಮನಿಸಬೇಕು.

೭.೧.೧೩. ಗರ್ಭಿಣಿ ಸಂದರ್ಭದಲ್ಲಿ ನಗರದ ಜನ ಪಡೆದ ವಿಶೇಷ ಆರೈಕೆ

ವಿಶೇಷ ಆರೈಕೆಯ ವಿಧಗಳು	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
ಸರಕಾರಿ	೦೩	೦೩
ಕೌಟುಂಬಿಕ	೮೩	೯೭
ಇತರೆ	೦೦	೦೦
ಒಟ್ಟು	೮೬	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಗರ್ಭಿಣಿ ಸಂದರ್ಭದಲ್ಲಿ ಪಡೆದ ವಿಶೇಷ ಆರೈಕೆ ಕುರಿತು ಪ್ರಶ್ನಿಸಿದಾಗ ಬಂದ ಉತ್ತರ ಶೇಕಡಾ ೩ ರಷ್ಟು ಸರಕಾರಿ ಆರೈಕೆ, ಶೇಕಡಾ ೯೭ ರಷ್ಟು ಕೌಟುಂಬಿಕ ಆರೈಕೆ ಪಡೆದಿದ್ದಾರೆ ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ ಸಾಮಾನ್ಯವಾಗಿ ಮನೆಯಲ್ಲಿಯೇ ಇದ್ದು ಕುಟುಂಬದವರಿಂದ ಆರೈಕೆ ಪಡೆದಿದ್ದಾರೆ ತೊಂದರೆಯಾದಾಗ ಮತ್ತು ನಿಯಮಿತವಾಗಿ ಆಸ್ಪತ್ರೆಗಳಿಗೆ ಹೋಗುತ್ತಾರೆ ವಿನಹ ಸರಕಾರಿ ಆರೈಕೆ ಪಡೆದುಕೊಳ್ಳುವವರು ಕಡಿಮೆ ಸರಕಾರಿ ಆರೈಕೆ ಪಡೆದವರ ಸಂಖ್ಯೆ ತೀರಾ ಕಡಿಮೆ ಇರುವುದನ್ನು ನೋಡಿದಾಗ ಹೆಚ್ಚು ಜನಾ ಕುಟುಂಬದ ಆರೈಕೆ ಪಡೆದುಕೊಳ್ಳಲು ಇಚ್ಚಿಸುತ್ತಾರೆ ಯಾರೋ ಅನಿವಾರ್ಯ ಕಾರಣಗಳಿಂದ ಸರಕಾರಿ ಆರೈಕೆ ಪಡೆದುಕೊಂಡಿದ್ದಾರೆ. ಸರಕಾರಿ ಆರೈಕೆಯಲ್ಲಿ ಜನರಿಗೆ ನಂಬಿಕೆ ಕಡಿಮೆ ಇರುವ ಭಾವನೆ ಇಲ್ಲಿ ವ್ಯಕ್ತವಾದದ್ದನ್ನು ಗಮನಿಸಬಹುದು.

೭.೧.೧೪.ಅ. ನಗರದ ಹೆಣ್ಣು ಮಕ್ಕಳ ಹೆರಿಗೆ ನಡೆದ ಸ್ಥಳ

ಹೆರಿಗೆ ನಡೆದ ಸ್ಥಳ	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
ಮನೆಯಲ್ಲಿ	೦೦	೦೦
ಆಸ್ಪತ್ರೆಯಲ್ಲಿ	೮೬	೧೦೦
ಒಟ್ಟು	೮೬	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಹೆರಿಗೆ ನಡೆದ ಸ್ಥಳದ ಕುರಿತು ಪ್ರಶ್ನೆ ಕೇಳಿದಾಗ ಮನೆಯಲ್ಲಿ ಶೂನ್ಯ ಮತ್ತು ಆಸ್ಪತ್ರೆಯಲ್ಲಿ ಶೇಕಡಾ ೧೦೦ ರಷ್ಟು ಎಂದು ತಿಳಿಯಿತು ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ ಇತ್ತೀಚಿನ ದಿನಗಳಲ್ಲಿ ಸರ್ವೇಸಾಮನ್ಯವಾಗಿ ಹೆರಿಗೆಗಳು ಆಸ್ಪತ್ರೆಗಳಲ್ಲಿ ನಡೆಯುವುದನ್ನು ನೊಡುತ್ತೇವೆ ಜನರು ಪ್ರಜ್ಞಾವಂತರಾಗಿದ್ದಾರೆ ಮತ್ತು ಇಲ್ಲಿ ಇನ್ನೊಂದು ಗಮನಿಸುವ ಅಂಶವೆಂದರೆ ಹೆರಿಗೆಗಳು ಹೆಚ್ಚು ಸರಕಾರಿ ಆಸ್ಪತ್ರೆಗಳಿಗಿಂತ ಖಾಸಗಿ ಆಸ್ಪತ್ರೆಗಳಲ್ಲಿ ಮಾಡಿಸಿಕೊಳ್ಳುತ್ತಿರುವುದು ಹೆಚ್ಚುತ್ತಿರುವುದನ್ನು ಕಾಣುತ್ತೇವೆ. ಇದು ಒಳ್ಳೆಯ ಬೆಳವಣಿಗೆ ಮನೆಯಲ್ಲಿ ಹೆರಿಗೆ ಮಾಡಿಸುವ ಸೂಲಗಿತ್ತಿಯರ ಪ್ರಮಾಣ ಕಡಿಮೆಯಾಗಿರುವುದನ್ನು ಕಾಣಬಹುದು ಮತ್ತು ಇದು ಸುಲಭದ ಕಾರ್ಯವಾಗಿ ಉಳಿದಿಲ್ಲ ಆಧುನಿಕ ಅಂದರೆ ಇತ್ತೀಚಿನ ದಿನಗಳಲ್ಲಿ ತಾಯಂದಿರ ಆರೋಗ್ಯ ಸ್ಥಿರವಾಗಿರುವುದನ್ನು ಕಾಣುತ್ತೇವೆ. ಏಕೆಂದರೆ ಈಗ ಹೆರಿಗೆಗಳು ಸಾಮಾನ್ಯ ರೀತಿಯಲ್ಲಿ ಆಗುವುದು ಅಪರೂಪ ಸಿಜೇರಿಯೆನ್ ಮೂಲಕ ಹೆಚ್ಚಾಗಿ ನಡೆಯುತ್ತಿವೆ. ಹೀಗಾಗಿ ಮನೆಯಲ್ಲಿ ಹೆರಿಗೆ ಅನ್ನುವುದು ದೂರಿನ ಮಾತಾಗಿದೆ, ಒಟ್ಟಿನಲ್ಲಿ ಇದೊಂದು ಸಕಾರಾತ್ಮಕ ಬೆಳವಣಿಗೆ ಆಸ್ಪತ್ರೆಗಳಲ್ಲಿ ಹೆರಿಗೆ ಮಾಡಿಸುವುದು ಸೂಕ್ತವಾದದ್ದು ಇವತ್ತೀನ ಪರಿಸ್ಥಿತಿಯಲ್ಲಿ. ಇಲ್ಲಿ ಅನೇಕ ಚುಚ್ಚುಮದ್ದುಗಳನ್ನು ಮಕ್ಕಳಿಗೆ ನೀಡುತ್ತಾರೆ ಇನ್ನೊಂದು ಪ್ರಯೋಜನವೆಂದರೆ ಜೀವಕ್ಕೆ ಯಾವುದೇ ಅಪಾಯ ಸಂಭವಿಸುವ ಸಾಧ್ಯತೆ ಅತಿ ಕಡಿಮೆ ಇರುತ್ತದೆ. ನಮ್ಮ ಅಧ್ಯಯನದಲ್ಲಿ ಶೇಕಡಾ ೧೦೦ ರಷ್ಟು ಹೆರಿಗೆಗಳು ಆಸ್ಪತ್ರೆಗಳಲ್ಲಿ ನಡೆದಿರುವುದು ಕಂಡು ಬಂದಿದ್ದು ಇದೊಂದು ಒಳ್ಳೆಯ ಬೆಳವಣಿಗೆಯಾಗಿದೆ.

೭.೧.೧೫. ನಗರದ ಗರ್ಭಿಣಿಯರು ವಿಶ್ರಾಂತಿ ಪಡೆದ ದಿನಗಳು

ಗರ್ಭಿಣಿಯರ ವಿಶ್ರಾಂತಿ	ದಿನಗಳು	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
ಹೆರಿಗೆಗೆ ಮುನ್ನ	೩೦-೬೦	೪೫	೫೩
	೬೦-೯೦	೩೫	೪೧
	೯೦-೧೨೦	೦೪	೦೪
	೧೨೦ ಕ್ಕಿಂತ ಹೆಚ್ಚು	೦೨	೦೨
	ಒಟ್ಟು	೮೪	೧೦೦
ಹೆರಿಗೆ ನಂತರ	೩೦-೬೦	೧೪	೧೭
	೬೦-೯೦	೪೫	೫೩
	೯೦-೧೨೦	೧೫	೧೮
	೧೨೦ ಕ್ಕಿಂತ ಹೆಚ್ಚು	೧೦	೧೨
	ಒಟ್ಟು	೮೪	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಹೆರಿಗೆಗೆ ಮುನ್ನ ಗರ್ಭಿಣಿಯರು ಪಡೆದ ವಿಶ್ರಾಂತಿ ಕುರಿತು ಪ್ರಶ್ನಿಸಿದಾಗ ೩೦-೬೦ ದಿನಗಳು ಶೇಕಡಾ ೫೩ ರಷ್ಟು, ೬೦-೯೦ ದಿನಗಳು ಶೇಕಡಾ ೪೧ ರಷ್ಟು, ೯೦-೧೨೦ ದಿನಗಳು ಶೇಕಡಾ ೪ ರಷ್ಟು, ೧೨೦ ಕ್ಕಿಂತ ಹೆಚ್ಚು ದಿನ ಶೇಕಡಾ ೧೨ ರಷ್ಟು, ವಿಶ್ರಾಂತಿ ಪಡೆದಿದ್ದನ್ನು ಕಾಣುತ್ತೇವೆ. ಇಲ್ಲಿ ಗಮನಿಸುವ ಪ್ರಮುಖ ಅಂಶವೆಂದರೆ ಹೆರಿಗೆಗೆ ಮುನ್ನ ವಿಶ್ರಾಂತಿ ಪಡೆದಿದ್ದು ಅತಿ ಹೆಚ್ಚು ಅಂದರೆ ೩೦-೬೦ ದಿನ ಮಾತ್ರ, ಇದಕ್ಕೆ ಕಾರಣವೆಂದರೆ ನಮ್ಮ ಅಧ್ಯಯನದ ಮಧ್ಯಮ, ಹಿಂದುಳಿದ ಪ್ರದೇಶದ ಜನ ಹೆಚ್ಚು ವಿಶ್ರಾಂತಿಯನ್ನು ಪಡೆದುಕೊಂಡಿಲ್ಲ. ಮೇಲಿನ ವರ್ಗಕ್ಕೆ ಅಂದರೆ ಮುಂದುವರೆದ ಪ್ರದೇಶದಲ್ಲಿ ಜನರು ಹೆಚ್ಚು ದಿನಗಳ ಕಾಲ ವಿಶ್ರಾಂತಿ ಪಡೆದಿದ್ದನ್ನು ಕಾಣುತ್ತೇವೆ. ಇಲ್ಲಿ ಗಮನಿಸುವ ಪ್ರಮುಖ ಅಂಶವೆಂದರೆ ಹೆರಿಗೆಗೆ ಮುನ್ನ ವಿಶ್ರಾಂತಿ ಪಡೆದಿದ್ದು ಅತಿ ಹೆಚ್ಚು ಅಂದರೆ ೩೦-೬೦ ದಿನ ಮಾತ್ರ ಇದಕ್ಕೆ ಕಾರಣವೆಂದರೆ ನಮ್ಮ ಅಧ್ಯಯನದಲ್ಲಿ ಮಧ್ಯಮ ಮತ್ತು ಹಿಂದುಳಿದ ಜನ ಹೆಚ್ಚಿರುವುದು ಎಷ್ಟೋ ಜನ ಬಡವರು ಹೆರಿಗೆಯಾಗುವ ದಿನದವರೆಗೂ ವಿಶ್ರಾಂತಿಯನ್ನು ಪಡೆಯದೆ ಕೆಲಸ ಮಾಡಿ ಹೆರಿಗೆಯಾದ ನಂತರ ವಿಶ್ರಾಂತಿ ಪಡೆದುಕೊಂಡಿದ್ದಾರೆ ಅದು ಕಡಿಮೆ ದಿನಗಳು ಮಾತ್ರ ವಿಶ್ರಾಂತಿ ಎನ್ನುವುದು ಅವಶ್ಯವಾಗಿದೆ ಹೆರಿಗೆ ಸಮಯದಲ್ಲಿ, ಹೆರಿಗೆಗೆ ಮುನ್ನವೆ ಮಕ್ಕಳು ಮರಣ ಹೊಂದಿರುವುದನ್ನು ಕಾಣುತ್ತೇವೆ. ಅದಕ್ಕೆ ಕಾರಣ ವಿಶ್ರಾಂತಿ ರಹಿತ ಕೆಲಸ, ಬಡತನ, ಆರ್ಥಿಕವಾಗಿ ಹಿಂದುಳಿದಿರುವಿಕೆ. ಇನ್ನೂ

ಹೆರಿಗೆ ನಂತರ ಪಡೆದ ವಿಶ್ರಾಂತಿಯಲ್ಲಿ ೬೦-೯೦ ದಿನಗಳು ಹೆಚ್ಚು ಇರುವುದನ್ನು ಕಾಣುತ್ತೇವೆ. ಎಷ್ಟೋ ಹೆಣ್ಣು ಮಕ್ಕಳು ಈ ಹಿಂದುಳಿದ ಪ್ರದೇಶದಲ್ಲಿ ಹೆರಿಗೆಯಾದ ಒಂದು ವಾರದಲ್ಲಿ ಕೆಲಸ ಪ್ರಾರಂಭಿಸಿದನ್ನು ಕಾಣುತ್ತೇವೆ. ಮುಂದುವರೆದ ಪ್ರದೇಶದಲ್ಲಿ ೧೫೦-೧೮೦ ದಿನಗಳ ಕಾಲ ವಿಶ್ರಾಂತಿ ಪಡೆದುದನ್ನು ನೋಡುತ್ತೇವೆ. ಹೆರಿಗೆ ನಂತರವು ವಿಶ್ರಾಂತಿ ಪಡೆಯುವ ಅವಶ್ಯವಿರುತ್ತದೆ ಏಕೆಂದರೆ ಅದು ದೇಹದ ಮೇಲೆ ಕೆಟ್ಟ ಪರಿಣಾಮ ಬೀರುವ ಸಾಧ್ಯತೆ ಇರುತ್ತದೆ. ನಮ್ಮ ಅಧ್ಯಯನದಲ್ಲಿ ಕಂಡುಬಂದ ಒಂದು ಪ್ರಮುಖ ಅಂಶವೆಂದರೆ ತಮ್ಮ ದಿನನಿತ್ಯದ ಬದುಕು ಸಾಗಿಸಲು ನಗರದಲ್ಲಿರುವ ಕೆಲವು ಜನರಿಗೆ ಕೆಲಸ ಮಾಡಲೇಬೇಕಾದ ಅನಿವಾರ್ಯತೆ ಇದೆ. ಒಟ್ಟಿನಲ್ಲಿ ಎರಡೂ ಅಂಶಗಳನ್ನು ಗಮನಿಸಿದಾಗ ಆರ್ಥಿಕವಾಗಿ ಹಿಂದುಳಿದವರು, ಬಡವರು ತೆಗೆದುಕೊಂಡ ವಿಶ್ರಾಂತಿ ಪ್ರಮಾಣ ಕಡಿಮೆ ಇದ್ದು ಆರ್ಥಿಕವಾಗಿ ಮುಂದುವರೆದವರು, ಶ್ರೀಮಂತರು ಹೆಚ್ಚು ವಿಶ್ರಾಂತಿ ಪಡೆದುಕೊಂಡದನ್ನು ಕಾಣುತ್ತೇವೆ. ಗರ್ಭಿಣಿಯರಿಗೆ ವಿಶ್ರಾಂತಿ ಎನ್ನುವುದು ಅನಿವಾರ್ಯವಾಗಿ ಬೇಕಾಗಿರುವ ಸಂಗತಿಯಾಗಿದೆ ಎಂದು ಹೇಳಬಹುದು.

೭.೧.೧೬. ನಗರದಲ್ಲಿ ಕಿರಿಯ ಆರೋಗ್ಯ ಸಹಾಯಕರ ಭೇಟಿ

ಆರೋಗ್ಯ ಸಹಾಯಕರ ಭೇಟಿ	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
ಹೌದು	೧೭	೨೦
ಇಲ್ಲ	೬೭	೮೦
ಒಟ್ಟು	೮೪	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಕಿರಿಯ ಆರೋಗ್ಯ ಸಹಾಯಕರ ಭೇಟಿಯನ್ನು ಪ್ರಶ್ನಿಸಿದಾಗ ಹೌದು ಎಂದವರು ಶೇಕಡಾ ೨೦ ರಷ್ಟು, ಇಲ್ಲ ಎಂದವರು ಶೇಕಡಾ ೮೦ ರಷ್ಟು ಜನ. ಇಲ್ಲಿ ಗಮನಿಸುವ ಅಂಶವೆಂದರೆ ಕಿರಿಯ ಆರೋಗ್ಯ ಸಹಾಯಕರು ಎಲ್ಲ ಮನೆಗೆ ಹೋಗುವ ಪ್ರಯತ್ನ ಮಾಡುವುದಿಲ್ಲ. ಆದರೆ ಯಾರಾದರೂ ಗರ್ಭಿಣಿಯರು ಇದ್ದಾರೆ ಮನೆಯಲ್ಲಿ ಅಂತಾ ಗೊತ್ತಾದಾಗ ಮಾತ್ರ ಅವರು ನಿರಂತರವಾಗಿ ಅವರನ್ನು ಸಂಪರ್ಕಿಸುತ್ತಾರೆ. ನಗರಗಳಲ್ಲಿ ಅವರೇ ಹೇಳಿದಂತೆ ವಿಷಯಗಳು ತಿಳಿಯುವುದು ಕಷ್ಟವಾದದ್ದು ಹಳ್ಳಿಗಳಲ್ಲಿ ಪ್ರತಿಯೊಬ್ಬರ ಮನೆಯ ವಿವರಗಳು ಇವರಿಗೆ ದೊರಕುವುದರಿಂದ ನಿರಂತರವಾಗಿ ಅವರು ಅವರ ಮನೆಗಳಿಗೆ ಭೇಟಿ ನೀಡುತ್ತಾರೆ. ಆದರೆ ನಗರಗಳಲ್ಲಿ ನಮ್ಮ ಅಧ್ಯಯನದಲ್ಲಿ ಸಿಕ್ಕದ್ದು ಶೇಕಡಾ ೨೦ ರಷ್ಟು ಮಾತ್ರ, ಏಕೆ ಎಂದು ಕೇಳಿದಾಗ ಅವರು ಹೇಳುವುದು ಮಾಹಿತಿ ಕೊರತೆ ಮತ್ತು ಮುಂದುವರೆದ ಪ್ರದೇಶಗಳಿಗೆ ಅಥವಾ ಆರ್ಥಿಕವಾಗಿ ಸಬಲರಾದವರು ಸರಕಾರಿ ಕಿರಿಯ ಸಹಾಯಕರ ಭೇಟಿ ನೀಡುವುದು ಕಡಿಮೆ ಮಾಡುತ್ತಾರೆ. ಕೊಳಗೇರಿ ಪ್ರದೇಶದಲ್ಲಿ ಈ ಕಿರಿಯ ಸಹಾಯಕರ ಭೇಟಿಯ ಅವಶ್ಯಕತೆ ತುಂಬಾನೇ ಇರುವುದನ್ನು ಕಾಣಬಹುದು, ಗರ್ಭಿಣಿ ಸಂದರ್ಭದಲ್ಲಿ ಅವರಿಗೆ ವೈದ್ಯಕೀಯ ಸೇವೆಯ ಅವಶ್ಯಕತೆ ಇದ್ದು ಅಲ್ಲಿನ

ಜನರಿಗೆ ಇದು ಅರಿವು ಮೂಡಿದಂತೆ ಕಾಣುತ್ತದೆ. ಅವರೆ ಆಸ್ಪತ್ರೆಗಳಿಗೆ ಅಥವಾ ಕಿರಿಯ ಸಹಾಯಕರು ಇರುವಲ್ಲಿ ಹುಡುಕಿಕೊಂಡು ಬರುತ್ತಾರೆ ಮತ್ತು ತಮಗೆ ಬೇಕಾದ ಸಹಾಯವನ್ನು ಪಡೆದುಕೊಳ್ಳುತ್ತಾರೆ. ಈ ವಿಷಯದಲ್ಲಿ ಸರಕಾರ ತುಂಬಾನೇ ಮಹತ್ವದ ಪಾತ್ರವಹಿಸುತ್ತದೆ. ಕಿರಿಯ ಸಹಾಯಕರು ತುಂಬಾನೆ ಕಾಳಜಿಯಿಂದ ನೋಡಿಕೊಳ್ಳುತ್ತಿರುವುದು ಕಂಡು ಬಂದಿದೆ, ಹಾಗೂ ಬಹಳಷ್ಟು ಜವಾಬ್ದಾರಿಯಿಂದ ತಮ್ಮ ಕಾರ್ಯಗಳನ್ನು ಮಾಡುತ್ತಿದ್ದಾರೆ. ಆದರೆ ಕೆಲವು ಗರ್ಭಿಣಿಯರು ನಿರ್ಲಕ್ಷವಹಿಸುತ್ತಿದ್ದಾರೆ, ಇದರಿಂದಾಗಿಯೇ ಕೆಲವು ಸಮಸ್ಯೆಗಳು ಬರುವುದನ್ನು ಕಾಣುತ್ತೇವೆ. ಒಟ್ಟಿನಲ್ಲಿ ಈ ಕಿರಿಯ ಆರೋಗ್ಯ ಸಹಾಯಕರ ಕಾರ್ಯ ಬಹಳಷ್ಟು ಪ್ರಶಂಸನೀಯವಾಗಿದೆ. ಇನ್ನೂ ಹೆಚ್ಚಿನ ಜವಾಬ್ದಾರಿಗಳೊಂದಿಗೆ ಹೆಚ್ಚು ಹೆಚ್ಚು ಮನೆಗೆ ಭೇಟಿ ನೀಡಿ ಆರೋಗ್ಯದ ಕುರಿತು ಅರಿವು ಮೂಡಿಸುವ ಅವಶ್ಯಕತೆ ಇರುವುದನ್ನು ಕಾಣುತ್ತೇವೆ. ಮತ್ತು ಇವರ ಭೇಟಿಯು ತಿಂಗಳಿಗೊಮ್ಮೆ ಆದರೂ ನಡೆಯುತ್ತದೆ ಕೆಲವೊಂದು ಕಡೆ ಇಲ್ಲ, ಹಾಗಾಗಿ ಎಲ್ಲ ಕಡೆಯೂ ಕೂಡಾ ಭೇಟಿ ನೀಡಿ ತಮ್ಮ ಕರ್ತವ್ಯವನ್ನು ಮಾಡಬೇಕೆನ್ನುವುದು ಜನರ ಆಶಯವಾಗಿದೆ.

೭.೧.೧೭. ನಗರದಲ್ಲಿ ಸಣ್ಣ ಮಕ್ಕಳಿಗೆ ಚುಚ್ಚು ಮದ್ದು ನೀಡಿದ ವಿವರಗಳ ಕಾರ್ಡನ್ನು ಹೊಂದಿರುವರೆ?

ಚುಚ್ಚು ಮದ್ದು ಕಾರ್ಡಿನ ವಿವರ	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
ಇದೆ	೭೭	೯೨
ಇಲ್ಲ	೦೭	೦೮
ಗೊತ್ತಿಲ್ಲ	೦೦	೦೦
ಒಟ್ಟು	೮೪	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಸಣ್ಣ ಮಕ್ಕಳಿಗೆ ಚುಚ್ಚು ಮದ್ದು ನೀಡಿದ ವಿವರಗಳ ಕಾರ್ಡು ಇದೆ ಅಥವಾ ಇಲ್ಲ ಎನ್ನುವ ಪ್ರಶ್ನೆ ಕೇಳಿದಾಗ ಶೇಕಡಾ ೯೨ ರಷ್ಟು ಜನರ ಹತ್ತಿರ ಈ ಕಾರ್ಡು ಇದೆ ಮತ್ತು ಶೇಕಡಾ ೮ ರಷ್ಟು ಜನರ ಹತ್ತಿರ ಇಲ್ಲ ಎನ್ನುವ ಉತ್ತರ ಬಂದಿದ್ದನ್ನು ನಾವು ನೋಡಬಹುದು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಇತ್ತೀಚಿನ ದಿನಗಳಲ್ಲಿ ಈ ಕಾರ್ಡು ಎಲ್ಲರ ಹತ್ತಿರವು ಇದೆ. ಮೊದಲಿನ ದಿನಗಳಲ್ಲಿ ಈ ಕಾರ್ಡು ಕಡಿಮೆ ಪ್ರಮಾಣದಲ್ಲಿದ್ದು ಈ ಕಾರ್ಡಿನ ಮಹತ್ವವೆಂದರೆ ಇಲ್ಲಿ ತಾಯಿ ಮತ್ತು ಮಗುವಿನ ಎಲ್ಲಾ ವಿವರಗಳು ಇರುತ್ತವೆ ಮತ್ತು ಈ ಕಾರ್ಡಿನಲ್ಲಿ ಮಗು ಬೆಳೆದು ದೊಡ್ಡದಾಗುವವರೆಗೆ ಏನೆಲ್ಲಾ ಔಷಧಿ ಮತ್ತು ಚುಚ್ಚು ಮದ್ದುಗಳನ್ನು ನೀಡಬೇಕನ್ನುವ ವಿವರ ಇರುತ್ತವೆ. ನಾವು ಮಾಡಿದ ಅಧ್ಯಯನದಲ್ಲಿ ಎಲ್ಲಾ ವರ್ಗದ ಜನರ ಹತ್ತಿರವು ಈ ಕಾರ್ಡು ಇರುವುದನ್ನು ಕಾಣುತ್ತೇವೆ. ಈ ಕಾರ್ಡನ್ನು ನಾವು ತಾಯಿ ಕಾರ್ಡು ಎನ್ನುತ್ತೇವೆ. ಈ ಕಾರ್ಡಿನಿಂದ

ಸರ್ಕಾರದ ಸೌಲಭ್ಯಗಳು ದೊರಕುವುದನ್ನು ಕಾಣುತ್ತೇವೆ. ಈ ಕಾರ್ಡಿನ ಕುರಿತು ಇನ್ನಷ್ಟು ಅರಿವು ಮೂಡಿಸುವ ಜವಾಬ್ದಾರಿ ಆರೋಗ್ಯ ಇಲಾಖೆಯ ಮೇಲಿರುವುದನ್ನು ಕಾಣುತ್ತೇವೆ. ಭವಿಷ್ಯದಲ್ಲಿ ಮಕ್ಕಳು ಸಧೃಡವಾಗಿ ಬೆಳೆದು ಯಾವುದೇ ಮಾರಕ ಖಾಯಿಲೆಗಳಿಗೆ ತುತ್ತಾಗದಂತೆ ಇರಲು ಇದು ಸಹಾಯಕಾರಿ ಆಗಿದೆ ಮತ್ತು ಈ ಕಾರ್ಡಿನಲ್ಲಿ ಎಲ್ಲ ಔಷಧಿ ಮತ್ತು ಚುಚ್ಚು ಮದ್ದುಗಳ ವಿವರವಿದೆ ಮತ್ತು ಸರ್ಕಾರ ಉಚಿತವಾಗಿ ಇವುಗಳನ್ನು ಜನರಿಗೆ ಯಾವುದೇ ಭೇಧ-ಭಾವವಿಲ್ಲದೇ ಒದಗಿಸುತ್ತಿರುವುದನ್ನು ನಾವು ಕಾಣುತ್ತೇವೆ. ಒಟ್ಟಿನಲ್ಲಿ ಇದೊಂದು ಸರ್ಕಾರದ ಒಳ್ಳೆಯ ಯೋಜನೆಯಾಗಿದೆ ಎನ್ನಬಹುದು.

೭.೧.೧೮. ನಗರದ ಜನ ಆಹಾರ ಪದಾರ್ಥಗಳನ್ನು ಖರೀದಿಸುವ ಸ್ಥಳ

ಆಹಾರ ಪದಾರ್ಥ ಖರೀದಿಸುವ ಸ್ಥಳ	**ಪ್ರತಿಕ್ರಿಯಿಸಿದವರ ಸಂಖ್ಯೆ**	**ಶೇಕಡಾವಾರು**
ನ್ಯಾಯ ಬೆಲೆ ಅಂಗಡಿ	೦೦	೦೦
ಖಾಸಗಿ ವ್ಯವಸ್ಥೆ	೮೩	೩೭
ಎರಡೂ	೧೪೨	೬೩
ಒಟ್ಟು	೨೨೫	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಆಹಾರ ಪದಾರ್ಥಗಳನ್ನು ಖರೀದಿಸುವ ಸ್ಥಳದ ಕುರಿತು ಪ್ರಶ್ನಿಸಿದಾಗ ಕೇವಲ ನ್ಯಾಯ ಬೆಲೆ ಅಂಗಡಿಯಲ್ಲಿ ಖರೀದಿಸುವವರು ಶೂನ್ಯವಾಗಿದ್ದು ಖಾಸಗಿ ವ್ಯವಸ್ಥೆಯಲ್ಲಿ ಖರೀದಿಸುವವರು ಶೇ.೩೭ ರಷ್ಟು, ಎರಡು ವ್ಯವಸ್ಥೆಯಲ್ಲಿ ಖರೀದಿಸುವವರು ಶೇ.೬೩ ರಷ್ಟು ಎಂದು ತಿಳಿಯಿತು. ಇಲ್ಲಿ ಗಮನಿಸುವ ಸಂಗತಿಯೆಂದರೆ ಕೇವಲ ನ್ಯಾಯಬೆಲೆ ಅಂಗಡಿಯಲ್ಲಿ ಮಾತ್ರ ಖರೀದಿಸಿ ಬಾಳುವವರು ಯಾರು ಇಲ್ಲ, ಏಕೆಂದರೆ ಒಂದಲ್ಲ ಒಂದು ವಸ್ತುವಿಗಾಗಿ ನಾವು ಖಾಸಗಿ ವ್ಯವಸ್ಥೆಯನ್ನು ಅವಲಂಬಿಸಲೇ ಬೇಕು. ಏಕೆಂದರೆ ನ್ಯಾಯಬೆಲೆ ಅಂಗಡಿಯಲ್ಲಿ ಮನೆಗೆ ಬೇಕಾದ ಎಲ್ಲಾ ರೀತಿಯ ಆಹಾರ ಪದಾರ್ಥಗಳು ಸಿಗುವುದಿಲ್ಲ. ಹಾಗಾಗಿ ಖಾಸಗಿ ಅವಲಂಬನೆ ನಡೆಯುತ್ತದೆ. ಕೆಲವೊಂದಿಷ್ಟು ಮುಂದುವರೆದ ಆರ್ಥಿಕವಾಗಿ ಸಧೃಢರಾದರು ನ್ಯಾಯಬೆಲೆ ಅಂಗಡಿ ಕಡೆ ಮುಖ ಮಾಡದೇ ಇರುವುದನ್ನು ನಾವು ಕಾಣುತ್ತೇವೆ. ಇನ್ನು ಹೆಚ್ಚಿನ ಪ್ರಮಾಣದಲ್ಲಿ ಜನ ಎರಡು ವ್ಯವಸ್ಥೆಯಲ್ಲಿ ತಮ್ಮ ಆಹಾರ ಪದಾರ್ಥಗಳನ್ನು ಖರೀದಿಸುತ್ತಾರೆ. ಇಲ್ಲಿ ಹಿಂದುಳಿದ ಮತ್ತು ಮಧ್ಯಮ ಪ್ರದೇಶದ ಜನರು ಹೆಚ್ಚು ನ್ಯಾಯಬೆಲೆಯ ಅಂಗಡಿಯ ಮೇಲೆ ಅವಲಂಬನೆಯಾಗಿದ್ದಾರೆ. ಇವರಿಗೆ ಇದುವೆ ಆಧಾರವಾಗಿದೆ. ಸಣ್ಣ-ಪುಟ್ಟ ವಸ್ತುಗಳನ್ನು ಮಾತ್ರ ಖಾಸಗಿ ವ್ಯವಸ್ಥೆಯಲ್ಲಿ ಖರೀದಿಸುವುದು. ಸರ್ಕಾರ ಅತ್ಯಂತ ಕಡಿಮೆ ದರದಲ್ಲಿ ವಸ್ತುಗಳನ್ನು ನೀಡುವುದರಿಂದ ಇವರು ತಮ್ಮ ದುಡಿಮೆಯ ಹಣವನ್ನು ಅಷ್ಟೊಂದು ಆಹಾರಕ್ಕಾಗಿ ಖರ್ಚು ಮಾಡದಿರುವುದನ್ನು ಕಾಣುತ್ತೇವೆ. ಸರ್ಕಾರದ ಈ ಯೋಜನೆಯನ್ನು

ಇವರು ಹೊಗಳುತ್ತಾರೆ. ಇಲ್ಲಿ ಗಮನಿಸುವ ಇನ್ನೊಂದು ಅಂಶವೆಂದರೆ ಈ ನ್ಯಾಯಬೆಲೆ ಅಂಗಡಿಗಳಲ್ಲಿ ಬೇಡವಾದ ವಸ್ತುಗಳನ್ನು ಒತ್ತಾಯಪೂರ್ವಕವಾಗಿ ನೀಡುತ್ತಾರೆ, ಇದು ಜನರಿಗೆ ಹೊರೆಯಾಗಿದೆ, ಇವುಗಳನ್ನು ತೆಗೆದುಕೊಳ್ಳಲೇ ಬೇಕು, ತೆಗೆದುಕೊಂಡರೆ ಮಾತ್ರ ಉಳಿದ ಆಹಾರ ಪದಾರ್ಥಗಳು ಸಿಗುತ್ತವೆ ಎಂಬ ಮಾತುಗಳು ಕೇಳಿ ಬರುತ್ತವೆ, ಇದರ ಕುರಿತು ಜನಪ್ರತಿನಿಧಿಗಳು ಗಮನಹರಿಸುವ ಅವಶ್ಯಕತೆ ಇರುವುದನ್ನು ಕಾಣುತ್ತೇವೆ.

೭.೧.೧೯. ನಗರದಲ್ಲಿ ನ್ಯಾಯಬೆಲೆ ಅಂಗಡಿಯಿಂದ ಖರೀದಿಸುವ ಶೇಕಡಾವಾರು ಆಹಾರ ಪ್ರಮಾಣ

ಶೇಕಡಾವಾರು ಆಹಾರ ಪ್ರಮಾಣ	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
೨೦%	೦೧	೦೧
೩೦%	೦೫	೦೪
೪೦%	೧೫	೧೦
೫೦%	೭೫	೫೨
೫೦% ಕ್ಕಿಂತ ಹೆಚ್ಚು	೪೭	೩೩
ಒಟ್ಟು	೧೪೩	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

೭.೧.೨೦. ನಗರದಲ್ಲಿ ಆಹಾರ ಪದಾರ್ಥಗಳ ತೂಕ ಮತ್ತು ಗುಣಮಟ್ಟ ವಿವರ

ವಿವರ	ತೂಕ ಮತ್ತು ಗುಣಮಟ್ಟದ ವಿಧಗಳು ಮತ್ತು ಸಂಖ್ಯೆ				
ಆಹಾರ ಪದಾರ್ಥಗಳು	ಅತ್ಯುತ್ತಮ	ಉತ್ತಮ	ತೃಪ್ತಿಕರ	ಅತೃಪ್ತಿಕರ	ಶೋಚನಿಯ
ಅಕ್ಕಿ	೦೦	೧೨೯	೦೪	೧೦	೦೦
ಗೋದಿ	೦೦	೯೫	೦೧	೪೭	೦೦
ಸಕ್ಕರೆ	೦೦	೧೩೭	೦೬	೦೦	೦೦
ಸಿಮೇ ಎಣ್ಣೆ	೦೦	೧೩೮	೦೫	೦೦	೦೦
ಖಾದ್ಯ ತೈಲಗಳು	೦೦	೧೩೭	೦೬	೦೦	೦೦
ಇತರೆ ವಸ್ತುಗಳು	೦೦	೧೩೬	೦೭	೦೦	೦೦
ಒಟ್ಟು	೦೦	೭೭೨	೨೯	೫೭	೦೦
ಶೇಕಡಾವಾರು	೦೦	೯೦	೦೩	೦೭	೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಎಷ್ಟು ಪ್ರಮಾಣದಲ್ಲಿ ನ್ಯಾಯಬೆಲೆ ಅಂಗಡಿಯಿಂದ ಆಹಾರ ಪದಾರ್ಥಗಳನ್ನು ಖರೀದಿಸುತ್ತೀರಿ ಎನ್ನುವ ಪ್ರಶ್ನೆ ಕೇಳಿದಾಗ ಶೇಕಡಾ. ೨೦ ಪ್ರಮಾಣ ಶೇಕಡಾ ೧ ರಷ್ಟು ಜನ ಶೇಕಡಾ ೩೦ ಪ್ರಮಾಣ ಶೇಕಡಾ ೪ರಷ್ಟು ಜನ ಶೇಕಡಾ ೪೦ ಪ್ರಮಾಣ, ಶೇಕಡಾ ೧೦ ರಷ್ಟು ಜನ, ಶೇಕಡಾ ೫೦ರಷ್ಟು ಜನ ೫೦ ಪ್ರಮಾಣ, ಶೇಕಡಾ ೫೦ಕ್ಕಿಂತ ಹೆಚ್ಚು ಪ್ರಮಾಣ ಶೇಕಡಾ ೩೩ ರಷ್ಟು ಪ್ರಮಾಣದಲ್ಲಿ ಖರೀದಿಸುವುದು ತಿಳಿದುಬರುತ್ತದೆ. ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ ಜನಸಂಖ್ಯೆಯನ್ನು ಆಧರಿಸಿ ಇದು ನಿರ್ಧಾರವಾಗುತ್ತದೆ, ಅಂದರೆ ಮನೆಯಲ್ಲಿ ಕಡಿಮೆ ಜನರು ಇದ್ದರೆ ಆಹಾರದ ಪ್ರಮಾಣ ಹೆಚ್ಚಿನ ಪ್ರಮಾಣದಲ್ಲಿ ಬರುತ್ತದೆ, ಹೆಚ್ಚು ಜನ ಇದ್ದಲ್ಲಿ ಕಡಿಮೆ ಪ್ರಮಾಣದಲ್ಲಿ ಆಹಾರ ಪದಾರ್ಥ ದೊರಕುತ್ತದೆ, ವ್ಯಕ್ತಿಗೆ ಅನುಗುಣವಾಗಿ ಅಕ್ಕಿಯನ್ನು ಮಾತ್ರ ನೀಡುತ್ತಾರೆ. ಇಲ್ಲಿ ಬಡವರು ಅಥವಾ ಹಿಂದುಳಿದವರು ಹೆಚ್ಚು ಅವಲಂಬಿತರಾಗಿದ್ದಾರೆ ಮತ್ತು ಶ್ರೀಮಂತರು ಈ ವ್ಯಾಪ್ತಿಯಲ್ಲಿ ಬರುವುದಿಲ್ಲ ಅಂದರೆ ಬಡತನ ರೇಖೆಗಿಂತ ಮೇಲಿರುವವರು ಮತ್ತು ಕೆಲವು ಮಧ್ಯಮ ವರ್ಗದ ಜನ ನ್ಯಾಯ ಬೆಲೆ ಅಂಗಡಿಗೆ ಹೋಗಿ ಆಹಾರ ಪದಾರ್ಥವನ್ನು ಖರೀದಿಸಿ ಬೇರೆಯವರಿಗೆ ಮಾರುವುದನ್ನು ನಾವು ಕಾಣುತ್ತೇವೆ.

ತೂಕ ಮತ್ತು ಗುಣಮಟ್ಟವನ್ನು ತೆಗೆದುಕೊಂಡಾಗ ಅತ್ಯುತ್ತಮ ಶೇಕಡಾ ಶೂನ್ಯ, ಉತ್ತಮ ಶೇಕಡಾ ೯೦ರಷ್ಟು, ತೃಪ್ತಿಕರ–ಶೇಕಡಾ ೩ರಷ್ಟು, ಅತೃಪ್ತಿಕರ–ಶೇಕಡಾ ೭ರಷ್ಟು, ಶೋಚನೀಯ–ಶೂನ್ಯರಷ್ಟು ಇರುವುದನ್ನು ಕಾಣುತ್ತೇವೆ. ಗಮನಿಸುವ ಅಂಶವೆಂದರೆ ತೂಕದಲ್ಲಿ ಮೋಸ ಮಾಡುತ್ತಾರೆ ಎನ್ನುವವರ ಸಂಖ್ಯೆ ಹೆಚ್ಚಿರುವುದನ್ನು ಕಾಣುತ್ತೇವೆ. ಗುಣಮಟ್ಟದ ಬಗ್ಗೆ ಬಡವರು ಯಾವುದೇ ತೊಂದರೆಯನ್ನು ವ್ಯಕ್ತಪಡಿಸದಿರುವುದನ್ನು ಕಾಣುತ್ತೇವೆ. ಯಾವುದೋ ಒಂದು ಹೊಟ್ಟೆಗೆ ಸಿಕ್ಕರೆ ಸಾಕು ಎನ್ನುವ ಮನೋಭಾವ ಬಡವರದು, ಆದರೆ ಮಧ್ಯಮ ವರ್ಗ ಮತ್ತು ಮೇಲು ವರ್ಗದವರು ಈ ಗುಣಮಟ್ಟದ ಬಗ್ಗೆ ಪ್ರಶ್ನಿಸುವುದು, ಪರಿಶೀಲಿಸುವುದು ಕಾಣುತ್ತೇವೆ. ಒಟ್ಟಿನಲ್ಲಿ ಮೇಲಿನ ಅಂಶಗಳನ್ನು ಗಮನಿಸಿದಾಗ ಗುಣಮಟ್ಟ ಮತ್ತು ತೂಕದ ಕುರಿತು ಜನರ ಅಸಮಾಧಾನ ಇರುವುದರಿಂದ ಇದರ ಕುರಿತು ಪ್ರತಿನಿಧಿಗಳು ಗಮನಹರಿಸುವ ಅವಶ್ಯಕತೆ ಇರುವುದನ್ನು ಕಾಣುತ್ತೇವೆ. ಇದರ ಕುರಿತು ಸೂಕ್ತ ಕ್ರಮ ಕೈಗೊಳ್ಳಬೇಕು, ನ್ಯಾಯಬೆಲೆ ಅಂಗಡಿಯವರು ಇದನ್ನು ದೊಡ್ಡ ವ್ಯವಹಾರವಾಗಿ ಮಾಡಿಕೊಂಡು ಅಕ್ರಮ ಎಸಗುತ್ತಿರುವುದು ಕಾಣುತ್ತಿದೆ.

೭.೧.೨೧. ನಗರದಲ್ಲಿ ಕುಟುಂಬದ ಸದಸ್ಯರು ಮಾಡುವ ಊಟದ ಸಂಖ್ಯೆ

ಊಟದ ಸಂಖ್ಯೆ	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
ಮೂರು	೨೨೫	೧೦೦
ಎರಡು	೦೦	೦೦
ಒಂದು	೦೦	೦೦
ಒಟ್ಟು	೦೦	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಕುಟುಂಬದಲ್ಲಿ ಸದಸ್ಯರು ಊಟ ಮಾಡುವ ಸಂಖ್ಯೆಯನ್ನು ಕೇಳಿದಾಗ ತಿಳಿದು ಬಂದ ಅಂಶವೆಂದರೆ ೨೨೫ ಕುಟುಂಬಗಳಲ್ಲಿ ೨೨೫ ಕುಟುಂಬಗಳು ಮೂರು ಹೊತ್ತು ಊಟ ಮಾಡುತ್ತಾರೆ. ಅಂದರೆ ಶೇಕಡಾ ೧೦೦ ರಷ್ಟು ಜನ ೩ ಹೊತ್ತು ಊಟ ಮಾಡುವವರು ಇದ್ದಾರೆ. ಇಲ್ಲಿ ಗಮನಿಸುವ ಅಂಶವೆಂದರೆ ಇವತ್ತೀನ ಕಾಲದಲ್ಲಿ ಉಪವಾಸವಿರುವವರು ಕಾಣುವುದಿಲ್ಲ. ಎಷ್ಟೇ ಬಡವರಿದ್ದರು ಮೂರು ಹೊತ್ತು ಊಟವನ್ನು ಮಾಡುತ್ತಿದ್ದಾರೆ. ಊಟದ ಗುಣಮಟ್ಟ ಬೇರೆ-ಬೇರೆ ಇರಬಹುದು. ಕಾರಣಗಳನ್ನು ತಿಳಿದುಕೊಂಡಾಗ ಉದ್ಯೋಗದ ಪ್ರಮಾಣ ಹೆಚ್ಚಿದೆ. ವ್ಯಕ್ತಿ ಮನಸ್ಸು ಮಾಡಿದರೆ ಒಂದಿಲ್ಲ ಒಂದು ಕೆಲಸ ಸಿಕ್ಕೇ ಸಿಗುತ್ತದೆ ಮತ್ತು ಸರ್ಕಾರದ ಅನ್ನಭಾಗ್ಯ ಯೋಜನೆ ಕೂಡಾ ಒಂದು ಕಾರಣವಾಗಿದೆ. ಹೀಗಾಗಿ ಜನರು ಮೂರು ಹೊತ್ತು ಊಟ ಮಾಡುತ್ತಿದ್ದಾರೆ.

೭.೧.೨೨. ನಗರದಲ್ಲಿ ನೀರಿನ ಗುಣಮಟ್ಟ

ಗುಣಮಟ್ಟದ ವಿವರ	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
ಅತ್ಯುತ್ತಮ	೦೦	೦೦
ಉತ್ತಮ	೪೫	೨೦
ತೃಪ್ತಿಕರ	೧೬	೦೭
ಅತೃಪ್ತಿಕರ	೧೬೨	೭೨
ಶೋಚನಿಯ	೦೨	೦೧
ಒಟ್ಟು	೨೨೫	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ನೀರಿನ ಗುಣಮಟ್ಟದ ಕುರಿತು ಪ್ರಶ್ನಿಸಿದಾಗ ಅತ್ಯುತ್ತಮ-ಶೂನ್ಯ, ಉತ್ತಮ-ಶೇಕಡಾ ೨೦ರಷ್ಟು, ತೃಪ್ತಿಕರ-ಶೇಕಡಾ ೭ರಷ್ಟು, ಅತೃಪ್ತಿಕರ-ಶೇಕಡಾ ೭೨ ರಷ್ಟು, ಶೋಚನೀಯ-ಶೇಕಡಾ ೧ರಷ್ಟು ಇರುವುದು ತಿಳಿಯುತ್ತದೆ. ಇಲ್ಲಿ ಗಮನಿಸಬೇಕಾದ ಅಂಶಗಳೆಂದರೆ ನೀರು ಮೂಲಭೂತ ಸೌಕರ್ಯಗಳಲ್ಲಿ ಒಂದಾಗಿದೆ. ಒಳ್ಳೆಯ ಗುಣಮಟ್ಟದ ನೀರನ್ನು ಒದಗಿಸುವುದು ಸರ್ಕಾರದ ಪ್ರಮುಖ ಕರ್ತವ್ಯವಾಗುತ್ತದೆ. ನಮ್ಮ ಅಧ್ಯಯನದಲ್ಲಿ ಅತಿ ಹೆಚ್ಚು ಶೇಕಡಾ ೭೨ ರಷ್ಟು ಜನ ಅತೃಪ್ತಿಕರ ಎಂದು ಹೇಳುತ್ತಾರೆ. ಇದರ ಅರ್ಥ ನೀರಿನ ಗುಣಮಟ್ಟ ಸರಿಯಿಲ್ಲ, ನೀರಿನ ಶುದ್ಧೀಕರಣ ನಡೆಯುತ್ತಿಲ್ಲ. ನಗರದಲ್ಲಿ ನೀರು ಕಳಪೆ ಗುಣಮಟ್ಟದಾಗಿದ್ದು ಇದು ನಗರದ ಜನರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ. ಹೀಗಾಗಿ ನೀರಿನ ಗುಣಮಟ್ಟದ ಬಗ್ಗೆ ಜನಪ್ರತಿನಿಧಿಗಳು ಸರಿಯಾದ ಕ್ರಮವನ್ನು ತೆಗೆದುಕೊಳ್ಳುವ ಆವಶ್ಯಕತೆ ಇದೆ. ಏಕೆಂದರೆ ನಗರದಲ್ಲಿ ನೀರಿನ ಕುರಿತು ಸಮಸ್ಯೆಗಳು ಬಹಳಷ್ಟಿದೆ. ಹಾಗಾಗಿ ಗಮನ ಹರಿಸುವ ಅನಿವಾರ್ಯತೆ ಇದೆ.

೬.೧.೨೩. ಮನೆಯಿಂದ ನೀರು ಸಿಗುವ ಜಾಗ ಎಷ್ಟು ದೂರದಲ್ಲಿದೆ ಎನ್ನುವುದರ ವಿವರ

ನೀರು ಸಿಗುವ ಜಾಗ	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
ಮನೆಯಲ್ಲಿ	೧೮೨	೮೧
೧೦ ಮಿಟರ	೧೪	೦೬
೨೦ ಮಿಟರ	೧೪	೦೬
೩೦ ಮಿಟರ	೦೯	೦೪
೫೦ ಮಿಟರ	೦೪	೦೨
೫೦ ಕ್ಕಿಂತ ಹೆಚ್ಚು	೦೨	೦೧
ಒಟ್ಟು	೨೨೫	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ನೀರು ಸಿಗುವ ಜಾಗದ ಕುರಿತು ಪ್ರಶ್ನಿಸಿದಾಗ ಮನೆಯಲ್ಲಿ ಶೇಕಡಾ ೮೧ ರಷ್ಟು, ೧೦ಮೀಟರ್ ದೂರದಲ್ಲಿ ಶೇಕಡಾ ೬ರಷ್ಟು, ೨೦ಮೀಟರ್ ದೂರದಲ್ಲಿ ಶೇಕಡಾ ೬ರಷ್ಟು, ೩೦ಮೀಟರ್ ದೂರದಲ್ಲಿ ಶೇಕಡಾ ೪ರಷ್ಟು, ೫೦ಮೀಟರ್ ದೂರದಲ್ಲಿ ಶೇಕಡಾ ೨ರಷ್ಟು, ೫೦ಕ್ಕಿಂತಲೂ ಹೆಚ್ಚು ಮೀಟರ್ ದೂರದಲ್ಲಿ ಶೇಕಡಾ ೧ರಷ್ಟು, ಜನ ದೂರವಿದೆ ಎಂದು ಹೇಳಿದ್ದಾರೆ, ಇಲ್ಲಿ ಗಮನಿಸುವ ಅಂಶವೆಂದರೆ ಇನ್ನೂ ಎಲ್ಲರ ಮನೆಯ ಬಾಗಿಲಿಗೆ ನೀರಿನ ಸೌಲಭ್ಯ ದೊರಕಿಲ್ಲ ಎನ್ನುವುದು ಅರ್ಥವಾಗುತ್ತದೆ. ಇದು ಸಾಮಾನ್ಯವಾಗಿ ಹಿಂದುಳಿದ ಪ್ರದೇಶದಲ್ಲಿ ನೀರಿನ ಸೌಲಭ್ಯ ಅಥವಾ ನೀರು ಮನೆಯಲ್ಲಿ ಸಿಗದೆ ಇರುವುದನ್ನು ಕಾಣುತ್ತೇವೆ. ಕಾರಣ ಕೇಳಿದಾಗ ಬಹಳಷ್ಟು ಜನ ಹಣ ನೀಡಬೇಕೆನ್ನುತ್ತಾರೆ. ಸಿರಿವಂತರು ಅವರು ಹೇಳಿದಷ್ಟು ಹಣವನ್ನು ನೀಡಿ ನೀರನ್ನು ಪಡೆದುಕೊಳ್ಳುತ್ತಾರೆ. ಪ್ರತಿಯೊಬ್ಬರ ಮನೆಯ ಬಾಗಿಲಿಗೆ ನೀರು ಹೋಗಿಲ್ಲವೆಂದರೆ ಅದು ನಗರಸಭೆಯ ವೈಫಲ್ಯವೇ ಕಾರಣವೆಂದು ಹೇಳಬೇಕು. ಒಂದು ನಗರ ಪ್ರದೇಶವೆಂದರೆ ಅಲ್ಲಿ ಕನಿಷ್ಟ ಮೂಲಭೂತ ಸೌಕರ್ಯಗಳು ದೊರೆಯಬೇಕು. ಜನರಿಗೆ ದೊರಕಿಸಿಕೊಡುವ ಕಾರ್ಯವನ್ನು ಅದು ಮಾಡಬೇಕಾಗುತ್ತದೆ. ಅನೇಕ ಜನ ಈ ಕೊರಗನ್ನು ನಮ್ಮ ಮುಂದೆ ಹೇಳಿದ್ದನ್ನು ನೋಡಬಹುದು. ಹಾಗಾಗಿ ಇಲ್ಲಿನ ಜನಪ್ರತಿನಿಧಿಗಳು ನೀರಿನ ಸೌಲಭ್ಯ ನೀಡಬೇಕು ಅಂದಾಗ ಮಾತ್ರ ಅದು ಸುಸಜ್ಜಿತ ಮೂಲ ಸೌಕರ್ಯಗಳನ್ನು ಹೊಂದಿದ್ದ ನಗರವಾಗುತ್ತದೆ. ಎಷ್ಟೋ ಜನ ತಮ್ಮ ಅಮೂಲ್ಯವಾದ ಸಮಯವನ್ನು ನೀರನ್ನು ತರಲು ವ್ಯಯಿಸುತ್ತಿರುವದನ್ನು ನಾವು ಕಾಣುತ್ತೇವೆ. ಹೀಗಾಗಿ ಇದರ ಅವಶ್ಯಕತೆ ತುಂಬಾನೆ ಇದ್ದು ಈ ಸಮಸ್ಯೆಯನ್ನು ಆದಷ್ಟು ಬೇಗ ಬಗೆಹರಿಸಬೇಕು ಎನ್ನುವುದು ಜನರ ವಾದವಾಗಿದೆ.

೭.೧.೨೪. ನಗರದಲ್ಲಿ ಸಿಗುವ ನೀರಿನ ಪ್ರಮಾಣ (ಬಿಂದಿಗೆ ಲೆಕ್ಕ)

ನೀರಿನ ಪ್ರಮಾಣ	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
೦೫-೧೦	೮೩	೩೭
೧೧-೧೫	೧೩೧	೫೮
೧೬-೨೦	೦೯	೦೪
೨೦ ಕ್ಕಿಂತ ಹೆಚ್ಚು	೦೨	೦೧
ಒಟ್ಟು	೨೨೫	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ನೀರು ಸಿಗುವ ಪ್ರಮಾಣದ ಕುರಿತು ಪ್ರಶ್ನೆ ಕೇಳಿದಾಗ ೫-೧೦ ಬಿಂದಿಗೆ ಶೇಕಡಾ ೩೭ ರಷ್ಟು, ೧೧-೧೫ ಬಿಂದಿಗೆ ಶೇಕಡಾ ೫೮ ರಷ್ಟು, ೧೬-೨೦ ಬಿಂದಿಗೆ ಶೇಕಡಾ ೪ ರಷ್ಟು, ೨೦ಕ್ಕಿಂತ ಹೆಚ್ಚು ಬಿಂದಿಗೆ ಶೇಕಡಾ ೧ ರಷ್ಟು ಪ್ರಮಾಣದಲ್ಲಿ ಸಿಗುತ್ತಿವೆ. ಇಲ್ಲಿ ಗಮನಿಸುವ ಅಂಶವೆಂದರೆ ಕೆಲವೊಂದಿಷ್ಟು ಜನರಿಗೆ ಸಾಕಾಗುವಷ್ಟು ನೀರು ಸಿಗುತ್ತಿಲ್ಲ. ಇದರರ್ಥ ನಗರದಲ್ಲಿ ಸಮರ್ಪಕವಾಗಿ ನೀರು ಪೂರೈಕೆ ಆಗುತ್ತಿಲ್ಲ. ನೀರಿಗಾಗಿ ಪರಿತಪಿಸುವ ಜನ ತುಂಬಾ ಇರುವುದನ್ನು ಕಾಣುತ್ತೇವೆ. ಇದು ನಗರಾಭಿವೃದ್ಧಿಗೆ ಮಾರಕವಾದ ಪ್ರಕ್ರಿಯೆಯಾಗಿದೆ ಇದನ್ನು ಜನ ಪ್ರತಿನಿಧಿಗಳು ಗಂಭೀರವಾಗಿ ತೆಗೆದುಕೊಂಡ ಹಾಗೆ ಕಾಣುತ್ತಿಲ್ಲ. ನಗರಕ್ಕೆ ಸಮರ್ಪಕವಾಗಿ ನೀರು ಪೂರೈಕೆ ಆಗಬೇಕು, ಆದರೆ ಇಲ್ಲಿ ಅದು ನಡೆಯುತ್ತಿಲ್ಲ. ಮನೆಯಲ್ಲಿ ಜನರು ಹೆಚ್ಚಾದಾಗ ನೀರಿನ ಕೊರತೆ ಉಂಟಾಗುತ್ತದೆ ಮತ್ತು ಜನಸಂಖ್ಯೆ ಕಡಿಮೆ ಇದ್ದರೆ ಯಾವುದೇ ಸಮಸ್ಯೆ ಇಲ್ಲ. ನೀರು ಸಾಕಾಗುವಷ್ಟು ಪೂರೈಕೆ ಆಗುತ್ತಿಲ್ಲ ಮತ್ತು ನೀರಿಗಾಗಿ ಬೇರೆ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಾಗುತ್ತಿದೆ. ಒಂದು ವಿಚಿತ್ರ ಸಂಗತಿಯೆಂದರೆ ನಗರದಿಂದ ೩೫ ಕೀ.ಮಿ ದೂರದಲ್ಲಿ ತುಂಗಭದ್ರಾ ಜಲಾಶಯವಿದೆ, ಇಷ್ಟು ಹತ್ತಿರ ಜಲಾಶಯವಿದ್ದರೂ ನೀರು ಸಾಕಾಗುವಷ್ಟು ಪೂರೈಕೆ ಆಗುತ್ತಿಲ್ಲವೆಂದರೆ ಇಲ್ಲಿನ ಜನಪ್ರತಿನಿಧಿಗಳ ನಿರ್ಲಕ್ಷ ಎದ್ದು ಕಾಣುತ್ತಿದೆ. ಬಹಳಷ್ಟು ಜನ ತಮ್ಮ ನೀರಿನ ಸಮಸ್ಯೆ ಕುರಿತು ಆಹ್ವಾಲವನ್ನು ಹೇಳಿಕೊಂಡಿದ್ದಾರೆ ಹಾಗಾಗಿ ನಗರ ಪ್ರತಿನಿಧಿಗಳು ಇದರ ಕುರಿತು ಗಮನಹರಿಸುವ ಅವಶ್ಯಕತೆ ಇದೆ. ನೀರಿನ ಪೂರೈಕೆ ಕುರಿತು ಪ್ರಶ್ನಿಸಿದಾಗ ಸಮರ್ಪಕ ಎಂದವರು ಶೇ. ೬೪.೫ ರಷ್ಟು, ಅಸಮರ್ಪಕ ಎಂದವರು ಶೇ.೩೫ ರಷ್ಟು, ಸಾಧಾರಣ ಎಂದವರು ೦.೫ ರಷ್ಟು ಎನ್ನುತ್ತಾರೆ. ಅಂದರೆ ಇಲ್ಲಿ ಗಮನಿಸುವ ಅಂಶವೆಂದರೆ ನಗರದಲ್ಲಿ ಅನೇಕ ಸಮಸ್ಯೆಗಳಿರುತ್ತವೆ, ಆದರೆ ನೀರಿನ ಸಮಸ್ಯೆ ಗಂಭೀರವಾದ ಸಮಸ್ಯೆಯಾಗಿದೆ. ಬೇರೆ ನಗರಗಳಿಗೆ ಹೋಲಿಸಿದಾಗ ಇದು ಸಣ್ಣ ನಗರ, ಸಣ್ಣ ನಗರವನ್ನೇ ನಿರ್ವಹಣೆ ಮಾಡಲು ಇಲ್ಲಿನ ನಗರಾಡಳಿತ ವಿಫಲವಾದದನ್ನು ಕಾಣುತ್ತೇವೆ. ಇದರ ಕುರಿತು ಗಮನಹರಿಸುವ ಅವಶ್ಯಕತೆ ಇದೆ.

೭.೧.೨೫.ಅ. ನಗರದಲ್ಲಿ ನೀರಿನ ಪೂರೈಕೆಯ ಮಟ್ಟ

ಗುಣಮಟ್ಟದ ವಿಧಗಳು	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
ಸಮರ್ಪಕ	೧೪೫	೬೪.೫
ಅಸಮರ್ಪಕ	೭೯	೩೫
ಸಾಧಾರಣ	೦೧	೦.೫
ಒಟ್ಟು	೨೨೫	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

೭.೧.೨೫.ಆ. ನಗರದಲ್ಲಿ ನೀರಿನ ಕೊರತೆ ಸಮಯ

ಕಾಲಗಳು	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
ಬೇಸಿಗೆ	೮೦	೧೦೦
ಮಳೆಗಾಲ	೦೦	೦೦
ಚಳಿಗಾಲ	೦೦	೦೦
ಒಟ್ಟು	೮೦	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

೭.೧.೨೫.ಇ. ನಗರದಲ್ಲಿ ನೀರಿನ ಸಮಸ್ಯೆಯ ಪರಿಹಾರ ಪಡೆದುಕೊಳ್ಳುವ ವಿಧಗಳು

ನೀರಿನ ಮೂಲಗಳು	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
ಟ್ಯಾಂಕರಗಳ ಮೂಲಕ	೪೬	೫೮
ಬಾವಿ	೦೦	೦೦
ಕೊಳವೆ ಬಾವಿ	೩೨	೪೦
ಕೆರೆ	೦೧	೦೧
ಇತರೆ	೦೧	೦೧
ಒಟ್ಟು	೮೦	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ನೀರಿನ ಕೊರತೆ ಸಮಯ ಕೇಳಿದಾಗ ಬೇಸಿಗೆಯಲ್ಲಿ ಶೇ. ೧೦೦ ರಷ್ಟು ಜನ ಕೊರತೆ ಇರುತ್ತದೆ ಎನ್ನುತ್ತಾರೆ. ಇಲ್ಲಿ ಗಮನಿಸುವ ಅಂಶವೆಂದರೆ ನೀರಿನ ಕೊರತೆ ನಿರಂತರವಾಗಿ ಇದೆ

ಎನ್ನುವುದು ಅಧ್ಯಯನದಿಂದ ತಿಳಿದು ಬಂದ ಸಂಗತಿಯಾಗಿದೆ. ಹಿಂದೆ ಹೇಳಿದಂತೆ ಜಲಾಶಯ ಹತ್ತಿರವಿದ್ದರೂ ಈ ಸಮಸ್ಯೆ ಅದರಲ್ಲೂ ಬೇಸಿಗೆಯಲ್ಲಿ ದನಕರುಗಳಿಗೆ ನೀರು ಕುಡಿಯಲು ಸಿಗುತ್ತಿಲ್ಲ, ಜನರು ಸಂಕಷ್ಟದ ಸ್ಥಿತಿ ಅನುಭವಿಸುತ್ತಿದ್ದಾರೆ ಇದು ಕೇವಲ ಬೇಸಿಗೆಯಲ್ಲಿ ಮಾತ್ರವಲ್ಲದೆ ಉಳಿದ ದಿನಗಳಲ್ಲಿಯೂ ಕೆಲವು ಸಲ ಈ ಪರಿಸ್ಥಿತಿ ಇರುವುದನ್ನು ಕಾಣುತ್ತೇವೆ. ಮನೆಯಲ್ಲಿ ಬೋರವೆಲ್‌ಗಳನ್ನು ಹಾಕಿದ್ದರೂ ಬೇಸಿಗೆಯಲ್ಲಿ ನೀರು ಬರದೆ ಇರುವುದನ್ನು ಕಾಣುತ್ತೇವೆ. ಇದು ಅಂತರ್ಜಲ ಕಡಿಮೆ ಇರುವುದರ ಸಂಕೇತವಾಗಿದೆ. ಹಾಗೆಯೇ ಜನ ನೀರಿನ ಕೊರತೆಯಾದಾಗ ಟ್ಯಾಂಕರಗಳ ಮೂಲಕ ಶೇ.೫೮ ರಷ್ಟು, ಬಾವಿಗಳ ಮೂಲಕ ಶೂನ್ಯ, ಕೊಳವೆ ಬಾವಿಗಳ ಮೂಲಕ ಶೇ.೪೦ ರಷ್ಟು, ಕೆರೆಗಳ ಮೂಲಕ ಶೇ.೧ ರಷ್ಟು, ಇತರೆ ಮೂಲಗಳಿಂದ ಶೇ.೧ ರಷ್ಟು ಈ ಮೇಲಿನ ಎಲ್ಲಾ ಮೂಲಗಳಿಂದ ನೀರಿನ ಕೊರತೆಯನ್ನು ನೀಗಿಸಿಕೊಳ್ಳುತ್ತಿದ್ದಾರೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಶೇ.೫೮ ರಷ್ಟು ಜನ ಟ್ಯಾಂಕರ ಮೂಲಕ ನೀರನ್ನು ಪಡೆಯುತ್ತಿದ್ದಾರೆ, ಇಲ್ಲಿ ಇದೊಂದು ದೊಡ್ಡ ವ್ಯವಹಾರವಾಗಿಬಿಟ್ಟಿರುವುದು ಎದ್ದು ಕಾಣುತ್ತಿದೆ, ಅಂತರ ಜಲ ಸಂಪೂರ್ಣವಾಗಿ ಕಡಿಮೆಯಾಗಿದ್ದು ಹೆಚ್ಚಾಗಿ ಕೊಳವೆ ಬಾವಿಗಳು ವಿಫಲವಾಗಿರುವುದನ್ನು ಕಾಣುತ್ತೇವೆ. ಬಡವರಿಗೆ ಇವುಗಳನ್ನು ಹಾಕಿಸುವಷ್ಟು ಸಾಮರ್ಥ್ಯ ಇರುವುದಿಲ್ಲ ಸಾರ್ವಜನಿಕ ಬಾವಿ ಕೊಳವೆಬಾವಿ ಬತ್ತಿ ಹೋದದ್ದನ್ನು ಕಾಣುತ್ತೇವೆ. ಕೆಲವೊಂದಿಷ್ಟು ಪ್ರದೇಶಗಳಿಗೆ ನಗರ ಸಭೆಯ ನೀರಿನ ಸಂಪರ್ಕವೇ ಇಲ್ಲದಿರುವುದನ್ನು ಕಾಣುತ್ತೇವೆ. ನೀರಿನ ಸಂಪರ್ಕವೆನ್ನುವುದು ದುಬಾರಿಯಾದದ್ದನ್ನು ಕಾಣುತ್ತೇವೆ. ಒಟ್ಟಿನಲ್ಲಿ ನೀರಿನ ಕುರಿತು ಬಹಳಷ್ಟು ಸಮಸ್ಯೆಯನ್ನು ನಗರವು ಅನುಭವಿಸುತ್ತಿದೆ. ಇದರ ಕುರಿತು ನಗರಾಡಳಿತ ಮತ್ತು ಜನಪ್ರತಿನಿಧಿಗಳು ಗಮನಹರಿಸುವ ಅವಶ್ಯಕತೆ ಇದೆ ಎನ್ನುವುದು ಗೊತ್ತಾಗುತ್ತದೆ.

೭.೧.೨೬. ನಗರದಲ್ಲಿ ಸ್ವಚ್ಚತಾ ಸೌಲಭ್ಯಗಳ ವಿವರ

ಸ್ವಚ್ಚತಾ ವಿಧ	ಪ್ರತಿಕ್ರಿಯಿಸಿದವರ ಸಂಖ್ಯೆ							
	ದಿನಂಪ್ರತಿ	೨-೪ ದಿನ	೦೮ ದಿನ	೧೫ ದಿನ	೨-೩ ತಿಂಗಳು	೧ವರ್ಷ	ಇಲ್ಲ	ಒಟ್ಟು
ಚರಂಡಿ	೦೦	೦೦	೦೦	೦೦	೬೩	೧೦೨	೬೦	೨೨೫
ಶೇಕಡಾವಾರು	೦೦	೦೦	೦೦	೦೦	೨೮	೪೫	೨೭	೧೦೦
ಸ್ವಚ್ಚತಾ ವಿಧ	ಪ್ರತಿಕ್ರಿಯಿಸಿದವರ ಸಂಖ್ಯೆ							
	ದಿನಂಪ್ರತಿ	೨-೪ ದಿನ	೦೮ ದಿನ	೧೫ ದಿನ	೨-೩ ತಿಂಗಳು	೧ವರ್ಷ	ಇಲ್ಲ	ಒಟ್ಟು
ಕಸವಿಲೇವಾರಿ	೪೮	೧೫೦	೦೦	೦೦	೦೦	೦೦	೨೭	೨೨೫
ಶೇಕಡಾವಾರು	೨೧	೬೭	೦೦	೦೦	೦೦	೦೦	೧೨	೧೦೦

ಸ್ವಚ್ಛತಾ ವಿಧ	ಪ್ರತಿಕ್ರಿಯಿಸಿದವರ ಸಂಖ್ಯೆ							
	ದಿನಂಪ್ರತಿ	೨-೪ ದಿನ	೦೮ ದಿನ	೧೫ ದಿನ	೨-೩ ತಿಂಗಳು	೧ವರ್ಷ	ಇಲ್ಲ	ಒಟ್ಟು
ಸೊಳ್ಳೆ ಔಷದಿ ಸಿಂಪಡನೆ	೦೦	೦೦	೦೦	೦೦	೦೦	೨೧೫	೧೦	೨೨೫
ಶೇಕಡಾವಾರು	೦೦	೦೦	೦೦	೦೦	೦೦	೯೬	೦೪	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಸ್ವಚ್ಛತಾ ಸೌಲಭ್ಯ ಕುರಿತು ಪ್ರಶ್ನಿಸಿದಾಗ ಬಂದ ಉತ್ತರ ಚರಂಡಿ ಸ್ವಚ್ಛತೆ ದಿನಂಪ್ರತಿ ಶೂನ್ಯ, ೨-೪ ದಿನ ಶೂನ್ಯ, ೮ ದಿನ ಶೂನ್ಯ, ೧೫ ದಿನ ಶೂನ್ಯ, ೨-೩ ತಿಂಗಳು ಶೇ.೨೮ ರಷ್ಟು, ೧ ವರ್ಷಕ್ಕೊಮ್ಮೆ ಶೇ. ೪೫ ರಷ್ಟು, ಇಲ್ಲ ಎಂದವರು ಶೇ.೨೭ ರಷ್ಟು. ಈ ಚರಂಡಿಯ ಸ್ವಚ್ಛತೆ ವಿಷಯದಲ್ಲಿ ನಗರವನ್ನು ತುಂಬಾನೆ ನಿರ್ಲಕ್ಷ ಮಾಡಿದನ್ನು ಕಾಣುತ್ತೇವೆ. ಎಷ್ಟೋ ಕಡೆ ಚರರಂಡಿಗಳೇ ಇಲ್ಲ, ಚರಂಡಿಗಳಿದ್ದರೂ ತಿಂಗಳಿಗೊಮ್ಮೆಯಾದರು ಸ್ವಚ್ಛತೆ ಮಾಡಬೇಕು. ಕೆಲವೊಂದಿಷ್ಟು ಪ್ರದೇಶಗಳಲ್ಲಿ ೨-೩ ತಿಂಗಳಿಗೊಮ್ಮೆ, ಇನ್ನು ಕೆಲವೊಂದಿಷ್ಟು ಪ್ರದೇಶದಲ್ಲಿ ಒಂದು ವರ್ಷಕ್ಕಿಂತಲೂ ಹೆಚ್ಚಿಗೆ ಸಮಯಕ್ಕೆ ಒಮ್ಮೆ, ಕೆಲವೊಂದಿಷ್ಟು ಪ್ರದೇಶದಲ್ಲಿ ಇಲ್ಲ ಎನ್ನುವ ಉತ್ತರವನ್ನು ಕಾಣುತ್ತೇವೆ. ಸ್ವಚ್ಛತೆಯು ಬಹಳ ಮಹತ್ವದ ವಿಷಯವಾಗಿದೆ. ಸ್ವಚ್ಛತೆ ಇಲ್ಲದ ಕಡೆ ರೋಗಗಳು ಹರಡುವ ಸಾಧ್ಯತೆ ಹೆಚ್ಚಿರುತ್ತದೆ, ಸ್ಲಮ್‌ಗಳಲ್ಲಿ ಸ್ವಚ್ಛತೆ ಅನ್ನುವುದು ಕನಸಿನ ಮಾತಾಗಿದೆ ಮಕ್ಕಳು ಅನೇಕ ರೋಗಗಳಿಂದ ಬಳಲುತ್ತಿರುವುದನ್ನು ಕಾಣುತ್ತೇವೆ. ಹೀಗಾಗಿ ನಗರಾಡಳಿತವು ಸ್ವಚ್ಛತೆ ಕುರಿತು ಗಮನ ಹರಿಸುವ ಅವಶ್ಯಕತೆ ಇರುವುದನ್ನು ಕಾಣಬಹುದು.

ಕಸ ವಿಲೇವಾರಿ ಕುರಿತು ಪ್ರಶ್ನಿಸಿದಾಗ ದಿನಂಪ್ರತಿ ಶೇ.೨೧ ರಷ್ಟು, ೨-೪ ದಿನ ಶೇ.೬೭ ರಷ್ಟು, ಇಲ್ಲ ಎಂದವರು ಶೇ.೧೨ ರಷ್ಟು ಎಂದು ತಿಳಿಯಿತು. ನಗರದಲ್ಲಿ ಕಸ ವಿಲೇವಾರಿ ಎನ್ನುವುದು ದಿನಂಪ್ರತಿ ನಡೆಯಬೇಕಾದ ಪ್ರಕ್ರಿಯೆಯಾಗಿದೆ. ಇಲ್ಲಿ ನಗರ ಸಭೆ ವಾಹನವು ಕೆಲವು ಕಡೆ ದಿನಂಪ್ರತಿ, ಕೆಲವು ಕಡೆ ೨-೪ ದಿನಗಳಿಗೊಮ್ಮೆ, ಕೆಲವು ಪ್ರದೇಶಗಳಿಗೆ ಹೋಗುವುದೆ ಇಲ್ಲ. ಕಾರಣವನ್ನು ಹುಡುಕಿದಾಗ ವಾಹನ ಹೋಗುವ ಪ್ರದೇಶಗಳಿಗೆ ಮಾತ್ರ ಹೋಗುತ್ತಾರೆ, ವಾಹನ ಹೋದರು ನಿರ್ಲಕ್ಷ್ಯ ಮಾಡುತ್ತಾರೆ, ಕೆಲವೊಂದಿಷ್ಟು ಹೊಸ ಪ್ರದೇಶಗಳಿಗೆ ಹೋಗುವುದಿಲ್ಲ. ಇದರ ಕುರಿತು ನಗರಾಡಳಿತವು ಗಮನ ಹರಿಸುವ ಅವಶ್ಯಕತೆ ಇದೆ. ಏಕೆಂದರೆ ನಗರದ ತ್ಯಾಜ್ಯ ವಸ್ತುಗಳಿಂದ ಬಹಳಷ್ಟು ಸಮಸ್ಯೆಗಳು ಉದ್ಭವಿಸುತ್ತವೆ, ಹೀಗಾಗಿ ಕಸದಿಂದ ಮುಕ್ತವಾಗಿಸುವ ಯೋಜನೆಗಳನ್ನು ನಗರಾಡಳಿತ ಜಾರಿಗೆ ತರುವ ಅವಶ್ಯಕತೆ ಇರುವುದು ಎದ್ದು ಕಾಣುತ್ತಿದೆ.

ಸೊಳ್ಳೆ ಔಷಧಿ ಸಿಂಪಡನೆ ಕುರಿತು ಪ್ರಶ್ನಿಸಿದಾಗ ಸಿಕ್ಕ ಉತ್ತರ ೧ ವರ್ಷಕ್ಕೆ ಒಂದು ಬಾರಿ ಎಂದವರು ಶೇ.೯೬ ರಷ್ಟು, ಇಲ್ಲ ಎಂದವರು ಶೇ.೪ ರಷ್ಟು ಜನ. ಇನ್ನು ದಿನಂಪ್ರತಿ, ೨–೪ ದಿನ, ೮–೧೫ದಿನ, ೨–೩ ತಿಂಗಳಿಗೆ ಸಿಕ್ಕ ಉತ್ತರ ಶೂನ್ಯ. ನಗರದಲ್ಲಿ ಮೇಲೆ ನೋಡಿದಂತೆ ಚರಂಡಿಗಳ ಸ್ವಚ್ಛತೆ ನಿರಂತರವಾಗಿ ನಡೆಯುತ್ತಿಲ್ಲ ಹಾಗಾಗಿ ಸೊಳ್ಳೆಗಳ ಪ್ರಮಾಣ ಹೆಚ್ಚಾಗುತ್ತಿದೆ. ಸೊಳ್ಳೆಗಳಿಂದ ಅನೇಕ ರೋಗಗಳು ಮತ್ತು ಕೆಲವು ಡೆಂಗ್ಯೂನಂತಾ ಭಯಾನಕ ರೋಗಗಳು ಕೂಡಾ ಬರುತ್ತಿವೆ. ಆದರೆ ಇದರ ಕುರಿತು ಯಾರು ಕೂಡಾ ಗಮನ ಹರಿಸದೆ ಇರುವುದು ಆಶ್ಚರ್ಯಕರ ಸಂಗತಿಯಾಗಿದೆ. ಕೆಲವೊಂದಿಷ್ಟು ಪ್ರದೇಶಗಳು ವರ್ಷಕ್ಕೆ ಒಂದು ಬಾರಿಯಾದರೂ ಕಂಡರೆ, ಇನ್ನು ಕೆಲವು ಪ್ರದೇಶಗಳು ಒಂದು ಬಾರಿಯೂ ಕಾಣದೆ ಇರುವುದನ್ನು ಕಾಣುತ್ತೇವೆ. ಸಾಮಾನ್ಯವಾಗಿ ಯಾವಾಗ ಸಿಂಪಡಿಸುತ್ತಾರೆ ಎಂದು ಕೇಳಿದಾಗ ನಗರದಲ್ಲಿ ಏನಾದರೂ ರೋಗ–ರುಜಿನಗಳು ಬಂದು ಪರಿಸ್ಥಿತಿ ಬಹಳಷ್ಟು ವಿಕೋಪ ಸ್ಥಿತಿಗೆ ಹೋದಾಗ ಜನರು ನಗರಸಭೆಗೆ ಹೋಗಿ ಒತ್ತಾಯಿಸಿ ಒತ್ತಡ ತಂದಾಗ ಸಿಂಪಡಿಸುತ್ತಾರೆ. ನಿರಂತರವಾಗಿ ಸಿಂಪಡನೆ ಮಾಡುವಂತೆ ಪ್ರತಿನಿಧಿಗಳು ನೋಡಿಕೊಳ್ಳುವ ಅವಶ್ಯಕತೆ ಇರುವುದನ್ನು ಕಾಣುತ್ತೇವೆ.

೭.೧.೨೭. ನಗರದ ಮನೆಗಳಲ್ಲಿ ಹೊಂದಿರುವ ಸೌಲಭ್ಯಗಳು

ಸೌಲಭ್ಯಗಳು	ಇದೆ	ಇಲ್ಲ	ಒಟ್ಟು
ನೀರು	೧೮೯	೩೬	೨೨೫
ಶೇಕಡಾವಾರು	೮೪	೧೬	೧೦೦
ಸೌಲಭ್ಯಗಳು	ಇದೆ	ಇಲ್ಲ	ಒಟ್ಟು
ಹೊಗೆಚಿಟ್ಟು	೧೦೦	೧೨೫	೨೨೫
ಶೇಕಡಾವಾರು	೪೪	೫೬	೧೦೦
ಸೌಲಭ್ಯಗಳು	ಇದೆ	ಇಲ್ಲ	ಒಟ್ಟು
ಬಚ್ಚಲು ಮನೆ	೨೨೫	೦೦	೨೨೫
ಶೇಕಡಾವಾರು	೧೦೦	೦೦	೧೦೦
ಸೌಲಭ್ಯಗಳು	ಇದೆ	ಇಲ್ಲ	ಒಟ್ಟು
ಪಾಯಿಖಾನೆ	೨೦೭	೧೮	೨೨೫
ಶೇಕಡಾವಾರು	೯೨	೦೮	೧೦೦

ಸೌಲಭ್ಯಗಳು	ಇದೆ	ಇಲ್ಲ	ಒಟ್ಟು
ವಿದ್ಯುತ್	೨೨೫	೦೦	೨೨೫
ಶೇಕಡಾವಾರು	೧೦೦	೦೦	೧೦೦
ಸೌಲಭ್ಯಗಳು	ಇದೆ	ಇಲ್ಲ	ಒಟ್ಟು
ಅಡುಗೆ ಅನೀಲ	೨೦೨	೨೩	೨೨೫
ಶೇಕಡಾವಾರು	೯೦	೧೦	೧೦೦
ಸೌಲಭ್ಯಗಳು	ಇದೆ	ಇಲ್ಲ	ಒಟ್ಟು
ಪಡಿತರ ಚೀಟಿ	೧೮೨	೪೩	೨೨೫
ಶೇಕಡಾವಾರು	೮೧	೧೦	೧೦೦
ಸೌಲಭ್ಯಗಳು	ಇದೆ	ಇಲ್ಲ	ಒಟ್ಟು
ಕಂಪೌಂಡ	೧೨೨	೧೦೩	೨೨೫
ಶೇಕಡಾವಾರು	೫೪	೪೬	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಮನೆಯಲ್ಲಿರುವ ಕೆಲವು ಸೌಲಭ್ಯಗಳ ಕುರಿತು ಪ್ರಶ್ನಿಸಿದಾಗ ಬಂದ ಉತ್ತರ ಮೊದನೆಯದಾಗಿ ನೀರು ಶೇ. ೮೪ ರಷ್ಟು ಜನ ಇದೆ ಎನ್ನುತ್ತಾರೆ, ಶೇ.೧೬ ರಷ್ಟು ಜನ ಇಲ್ಲ ಎಂದಿದ್ದಾರೆ. ಇಲ್ಲಿ ಗಮನಿಸುವ ಅಂಶವೆಂದರೆ ಎಲ್ಲರ ಮನೆಗಳಿಗೆ ನೀರಿನ ಸೌಲಭ್ಯ ದೊರಕಿಲ್ಲ, ಇದು ನಗರದ ಹಿಂದುಳಿದ ಸ್ಥಿತಿಯನ್ನು ತೋರಿಸುತ್ತದೆ ಮಾನವನ ದಿನನಿತ್ಯದ ಚಟುವಟಿಕೆಗಳಿಗೆ ನೀರು ಅವಶ್ಯವಾಗಿ ಬೇಕು, ಹಾಗಿರುವುದರಿಂದ ನೀರನ್ನು ಒದಗಿಸುವಂತಹ ಕಾರ್ಯವನ್ನು ನಗರಾಡಳಿತ ಮಾಡುವುದು ಸೂಕ್ತ ಇದರ ಕುರಿತು ಜನಪ್ರತಿನಿಧಿಗಳು ಗಮನಹರಿಸಬೇಕು.

ಎರಡನೆಯದಾಗಿ ಹೊಗೆಚಿಟ್ಟು ಇದೆ ಎಂದವರು ಶೇ.೪೪ ರಷ್ಟು ಜನ, ಇಲ್ಲ ಎಂದವರು ಶೇ.೫೬ ರಷ್ಟು ಜನ. ಇಲ್ಲಿ ಗಮನಿಸುವ ಅಂಶವೆಂದರೆ ಹೊಗೆ ಚಿಟ್ಟುನ್ನು ಇತ್ತೀಚಿನ ದಿನಗಳಲ್ಲಿ ಬಳಸುವುದು ಕಡಿಮೆಯಾಗಿದೆ. ನಮ್ಮ ಅಧ್ಯಯನದಲ್ಲಿ ಮುಂದುವರೆದ ಪ್ರದೇಶದಲ್ಲಿ ಒಬ್ಬರ ಮನೆಯಲ್ಲಿಯೂ ಇದು ಕಾಣಲಿಲ್ಲ ಏಕೆಂದರೆ ಅವರು ವಿದ್ಯುತ ಮತ್ತು ಅಡುಗೆ ಅನಿಲವನ್ನು ಬಳಸುತ್ತಿದ್ದಾರೆ. ಆರ್.ಸಿ.ಸಿ ಮನೆ ಇರುವವರು ಸೌದೆಯ ಬಳಕೆ ಮಾಡದೆ ಇರುವುದನ್ನು ಕಾಣುತ್ತೇವೆ, ಮಧ್ಯಮ ವರ್ಗದವರಲ್ಲಿ ಕೆಲವರು ಬಳಸುತ್ತಿದ್ದಾರೆ, ಇನ್ನು ಹಿಂದುಳಿದ ಪ್ರದೇಶದಲ್ಲಿ ಶೇ.೭೫ ರಷ್ಟು ಮನೆಗಳಲ್ಲಿ ಇದು ಕಂಡು ಬಂದಿದೆ. ಇದರ ಬಳಕೆ ಕಡಿಮೆ ಆದಷ್ಟು ಪರಿಸರಕ್ಕೆ ಒಳ್ಳೆಯದು ನಗರದಲ್ಲಿ ಇದು ಆದಷ್ಟು ಕಡಿಮೆ ಆಗಬೇಕು, ಕೇಂದ್ರ ಸರಕಾರದ ಉಜ್ವಲ್

ಯೋಜನೆಯಿಂದ ಇದು ಆದಷ್ಟು ಕಡಿಮೆಯಾಗುತ್ತಿದೆ, ಆದರೆ ಸಮಸ್ಯೆಂಯೆಂದರೆ ಮೊದಲನೆ ಬಾರಿಗೆ ಮಾತ್ರ ಅವರು ಅವರು ಉಚಿತವಾಗಿ ನೀಡುತ್ತಾರೆ ನಂತರದಲ್ಲಿ ಇವರೇ ಅದನ್ನು ಖರೀದಿಸಬೇಕಾಗುತ್ತದೆ ಎಷ್ಟೋ ಮನೆಗಳಲ್ಲಿ ಒಂದು ಬಾರಿ ಮುಗಿಯುವರೆಗೆ ಬಳಸಿ ಅದನ್ನು ಬಳಸದೆ ಇರುವುದನ್ನು ಕಾಣುತ್ತೇವೆ. ಸರಕಾರಗಳು ಇಲ್ಲಿ ಏನಾದರೂ ಪರ್ಯಾಯ ಯೋಜನೆಗಳನ್ನು ರೂಪಿಸುವ ಅವಶ್ಯಕತೆ ಇದೆ.

ಮೂರನೆಯದಾಗಿ ಬಚ್ಚಲು ಮನೆ ಶೇ.೧೦೦ ರಷ್ಟು ಜನ ಬಚ್ಚಲು ಮನೆಯನ್ನು ಹೊಂದಿದ್ದಾರೆ, ಇದು ಸಂತೋಷದಾಯಕ ವಿಚಾರವಾಗಿದೆ ಆದರೆ ಇಲ್ಲಿ ಗಮನಿಸುವ ಅಂಶವೆಂದರೆ ಹಿಂದುಳಿದ ಪ್ರದೇಶದಲ್ಲಿ ಮುಕ್ತ ಬಚ್ಚಲು ಮನೆಯನ್ನು ಕಾಣುತ್ತೇವೆ. ಅವುಗಳಿಗೆ ಯಾವುದೇ ಬಾಗಿಲುಗಳಿಲ್ಲ ಕೇವಲ ಸ್ವಲ್ಪ ಎತ್ತರದ ಗೋಡೆಗಳನ್ನು ಮಾತ್ರ ನಿರ್ಮಿಸಿಕೊಂಡಿದ್ದಾರೆ. ಕೆಲವರು ಮನೆಯಿಂದ ಹೊರಗಡೆ ಕೊಡಾ ಕಟ್ಟಿಸಿಕೊಂಡಿದ್ದಾರೆ. ಸರಕಾರಗಳು ಬಚ್ಚಲು ಮನೆಯನ್ನು ಕೂಡಾ ಕಟ್ಟಿಸಿಕೊಡುತ್ತಿರುವುದನ್ನು ನೋಡುತ್ತೇವೆ, ಇಂತಹ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದು ಎಲ್ಲರಿಗೂ ಕೂಡಾ ಸುವ್ಯವಸ್ಥಿತವಾದ ಬಚ್ಚಲು ಮನೆಯ ನಿರ್ಮಾಣವಾಗಬೇಕು.

ನಾಲ್ಕನೆಯದಾಗಿ ಪಾಯಿಖಾನೆ ಇದೆ ಎಂದವರು ಶೇ.೯೨ ರಷ್ಟು, ಇಲ್ಲ ಎಂದವರು ಶೇ.೮ ರಷ್ಟು ಇಲ್ಲಿ ಗಮನಿಸುವ ಅಂಶವೆಂದರೆ ನಗರ ಪ್ರದೇಶವಾದರೂ ಕೂಡಾ ಇನ್ನೂ ಪಾಯಿಖಾನೆಯುನ್ನು ಹೊಂದದೆ ಇರುವ ಜನರಿದ್ದಾರೆ ನನ್ನ ನೆನಪಿನ ಪ್ರಕಾರ ಕೊಪ್ಪಳ ಜಿಲ್ಲೆಯು ೩ ವರ್ಷಗಳ ಹಿಂದೆ ಬಯಲು ಶೌಚ ಮುಕ್ತ ಜಿಲ್ಲೆಯಾಗಿತ್ತು, ಆದರೆ ಸಮೀಕ್ಷೆ ಮಾಡುವ ಸಮಯದಲ್ಲಿ ಇದು ತಿಳಿದು ಬಂದಿತು. ಶೌಚಾಲಯ ಇಲ್ಲದೆ ಇರುವುದು ವಿಚಿತ್ರ ಸಂಗತಿಯೇ ಸರಿ. ಮುಂದುವರೆದ ಹಾಗೂ ಮಧ್ಯಮ ಪ್ರದೇಶಗಳಲ್ಲಿ ಈ ಬಯಲು ಶೌಚ ಕಂಡು ಬಂದಿಲ್ಲ. ಸ್ವಚ್ಚ ಭಾರತ ಯೋಜನೆಯಡಿ ಹಿಂದುಳಿದ ಪ್ರದೇಶದಲ್ಲಿಯೂ ಕೂಡಾ ಶೌಚಾಲಯಗಳು ನಿರ್ಮಾಣವಾಗಿ ಬಳಕೆ ಮಾಡುತ್ತಿದ್ದಾರೆ. ಇದೇ ಪ್ರದೇಶದಲ್ಲಿ ಕೆಲವರು ಬಯಲು ಶೌಚವನ್ನು ಮಾಡುತ್ತಿದ್ದಾರೆ, ಎಷ್ಟೋ ಜನ ಸರಕಾರ ನೀಡಿದ ಶೌಚಾಲಯಗಳನ್ನು ಬೇರೆ ಕೆಲಸಗಳಿಗೆ ಬಳಸುತ್ತಿದಾರೆ, ಇದು ಉತ್ತಮ ಬೆಳವಣಿಗೆಯಲ್ಲ. ಇದರಿಂದ ಅನೇಕ ಮಾರಕ ರೋಗಗಳು ಹರಡುತ್ತಿವೆ ಇವತ್ತಿನ ಸರಕಾರಗಳು ಇದರ ಕುರಿತು ಬಹಳಷ್ಟು ಪ್ರಚಾರ ಮಾಡಿ ತಿಳುವಳಿಕೆ ಕಾರ್ಯಕ್ರಮಗಳನ್ನು ಮಾಡುತ್ತಿವೆ, ಆದರೂ ಜನ ಪೂರ್ಣ ಪ್ರಮಾಣದಲ್ಲಿ ಜನ ಅದನ್ನು ಪಾಲಿಸುತ್ತಿಲ್ಲ ಸರಕಾರಗಳು ಉಚಿತವಾಗಿ ಕಟ್ಟಿಸಿಕೊಡುತ್ತಿದ್ದಾರೆ ಜನರು ಇದರ ಸದುಪಯೋಗ ಪಡೆದುಕೊಳ್ಳಬೇಕು ಇದರ ಅರಿವು ಮೂಡಿಸಲು ಸರಕಾರ ಮತ್ತು ಸ್ಥಳೀಯ ಮುಖಂಡರುಗಳು ಇನ್ನೂ ಬೇರೆ ರೀತಿಯ ಪ್ರಯತ್ನವನ್ನು ಮಾಡುವ ಅವಶ್ಯಕತೆ ಇರುವುದನ್ನು ಕಾಣುತ್ತೇವೆ.

ಐದನೆಯದಾಗಿ ವಿದ್ಯುತ್ ಸೌಲಭ್ಯ ಶೇ.೧೦೦ ರಷ್ಟು ಜನ ವಿದ್ಯುತನ್ನು ಹೊಂದಿರುವುದನ್ನು ಕಾಣುತ್ತೇವೆ. ಏಕೆಂದರೆ ಅದು ಅನಿವಾರ್ಯ ಅನ್ನುವ ಸ್ಥಿತಿಗೆ ಜನರ ಮನಸ್ಥಿತಿ ತಲುಪಿದೆ,

ದಿನನಿತ್ಯ ಮುಖ್ಯವಾಗಿ ಟಿ.ವಿ, ಮೊಬೈಲ ಮತ್ತು ಇತರೆ ಕಾರ್ಯಕ್ಕೆ ಬಳಸಲು ವಿದ್ಯುತಿನ ಅವಶ್ಯಕತೆ ಇದೆ ಹಾಗಾಗಿ ಜನರು ವಿದ್ಯುತನ್ನು ಬಳಸುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆ ಇಂದು ಹಳ್ಳಿಗಳಲ್ಲಿಯೂ ಕೂಡಾ ಎಲ್ಲ ಮನೆಯಲ್ಲಿ ವಿದ್ಯುತನ್ನು ಕಾಣುತ್ತೇವೆ. ನಗರಗಳಲ್ಲಿಯೂ ಈ ಪರಿಸ್ಥಿತಿ ಇರುವುದನ್ನು ಕಾಣುತ್ತೇವೆ. ಒಟ್ಟಿನಲ್ಲಿ ವಿದ್ಯುತ ಎನ್ನುವುದು ಮಾನವನ ಅತಿ ಅವಶ್ಯಕ ವಸ್ತುವಾಗಿದೆ.

ಆರನೆಯದಾಗಿ ಅಡುಗೆ ಅನಿಲ ಕುರಿತು ಪ್ರಶ್ನಿಸಿದಾಗ ಇದೆ ಎಂದವರು ಶೇ.೯೦ ರಷ್ಟು, ಇಲ್ಲ ಎಂದವರು ಶೇ.೧೦ ರಷ್ಟು ಇದು ಒಳ್ಳೆಯ ಬೆಳವಣಿಗೆ ಇಲ್ಲಿ ಗಮನಿಸುವ ಅಂಶವೆಂದರೆ ಇವತ್ತು ಸರಕಾರ ಉಜ್ವಲ್ ಯೋಜನೆಯ ಮೂಲಕ ಎಲ್ಲರಿಗೂ ಅಡುಗೆ ಅನಿಲವನ್ನು ಒದಗಿಸುವ ಕಾರ್ಯವನ್ನು ಮಾಡುತ್ತಿದೆ. ಇದರ ಮೂಲಕ ಇದರ ಪ್ರಮಾಣ ಹೆಚ್ಚಿದೆ ಸರಕಾರವು ಇನ್ನೂ ಮುಂದುವರೆದು ಬಡವರಿಗೆ ಕಡಿಮೆ ದರದಲ್ಲಿ ಅಡುಗೆ ಅನಿಲ ವಿತರಣೆಯನ್ನು ಮಾಡಬೇಕು ಹೀಗೆ ಮಾಡಿದಾಗ ಬಳಕೆದಾರರ ಪ್ರಮಾಣ ಹೆಚ್ಚಾಗುತ್ತದೆ. ಇದರಿಂದ ಪರಿಸರ ಮಾಲಿನ್ಯವನ್ನು ತಡೆಗಟ್ಟಬಹುದು, ಈ ನಿಟ್ಟಿನಲ್ಲಿ ಸರಕಾರಗಳು ಕೆಲವು ಪ್ರಯತ್ನವನ್ನು ಮಾಡಬೇಕು.

ಏಳನೆಯದಾಗಿ ಪಡಿತರ ಚೀಟಿ ಕುರಿತು ಪ್ರಶ್ನಿಸಿದಾಗ ಇದೆ ಎಂದವರು ಶೇ.೮೧ ರಷ್ಟು, ಇಲ್ಲ ಎಂದವರು ಶೇ.೧೯ ರಷ್ಟು ಇಲ್ಲಿ ಗಮನಿಸುವ ಅಂಶವೇನೆಂದರೆ ಸಾಮಾನ್ಯವಾಗಿ ಎಲ್ಲರ ಹತ್ತಿರವು ಇದೆ. ಇಲ್ಲದವರನ್ನು ಎಕೆ ಎಂದು ಪ್ರಶ್ನಿಸಿದಾಗ ಅವರು ಬೇರೆ ಊರಿನಿಂದ ಬಂದವರಾಗಿದ್ದಾರೆ ಮತ್ತು ಸರಕಾರಿ ನೌಕರಸ್ಥರಾಗಿದ್ದಾರೆ, ಪಡಿತರ ಚಿಟಿಯಲ್ಲಿ ಸಾಮಾನ್ಯವಾಗಿ ಮೂರು ವಿಧಗಳು ಎ.ಪಿ.ಎಲ್, ಬಿ.ಪಿ.ಎಲ್ ಮತ್ತು ಅಂತ್ಯೋದಯ. ಆರ್ಥಿಕ ಶಕ್ತಿಗೆ ಅನುಗುಣವಾಗಿ ಈ ಕಾರ್ಡನ್ನು ಹೊಂದಿದ್ದಾರೆ. ಈ ಕಾರ್ಡುಗಳಿಂದ ಆರೋಗ್ಯ ಸೌಲಭ್ಯಗಳು ಕೂಡಾ ಇವತ್ತು ದೊರಕುತ್ತಿವೆ ಹೀಗಾಗಿ ಹೆಚ್ಚು ಜನ ಕಾರ್ಡನ್ನು ಹೊಂದಿದ್ದಾರೆ.

ಎಂಟನೆಯದಾಗಿ ಕಂಪೌಂಡ ಕುರಿತು ಕೇಳಿದಾಗ ಶೇ.೫೪ ರಷ್ಟು ಜನ ಇದೆ ಎಂದು, ಶೇ.೪೬ ರಷ್ಟು ಜನ ಇಲ್ಲ ಎಂದಿದ್ದಾರೆ. ಸಾಮಾನ್ಯವಾಗಿ ಮುಂದುವರೆದ ಎಲ್ಲ ಮನೆಗಳಲ್ಲಿಯೂ ಕಂಪೌಂಡುಗಳನ್ನು ಕಾಣುತ್ತೇವೆ. ಇನ್ನೂ ಮಧ್ಯಮ ವರ್ಗದ ಪ್ರದೇಶದಲ್ಲಿ ಕೆಲವು ಮನೆಗಳಿಗೆ ಇದೆ, ಆದರೆ ಹಿಂದುಳಿದ ಪ್ರದೇಶದಲ್ಲಿ ಯಾವುದೇ ಮನೆಗಳಿಗೆ ಕಂಪೌಂಡಗಳು ಇಲ್ಲ ಇದರಿಂದ ತಿಳಿದು ಬರುವ ಅಂಶವೆನೆಂದರೆ ಎಲ್ಲ ತರಹದ ಜನ ಇಲ್ಲಿ ವಾಸಿಸುತ್ತಿದ್ದಾರೆ ಮತ್ತು ಎಲ್ಲ ತರಹದ ಮನೆಗಳು ಸಿಗುತ್ತಿವೆ, ಕೊಪ್ಪಳ ನಗರವು ಇನ್ನೂ ಬಹಳಷ್ಟು ಕಡೆ ಹಳೆಯ ಶೈಲಿಯನ್ನೇ ಹೊಂದಿರುವುದನ್ನು ಕಾಣುತ್ತೇವೆ.

೭.೨. ಕೊಪ್ಪಳ ನಗರದ ಆರ್ಥಿಕ ಸ್ಥಿತಿ ಗತಿ, ಆಸ್ತಿ ಮತ್ತು ಸಾಲಗಳ ವಿವರ

೭.೨.೧. ನಗರದಲ್ಲಿ ವಾಸಿಸುವವರ ಮನೆಯ ಒಡೆತನದ ಕಟ್ಟಡದ ಸ್ವರೂಪ

ಕಟ್ಟಡದ ವಿಧಗಳು	ಗುಡಿಸಲು		ಮಣ್ಣಿನ ಮನೆ		ಆರ್.ಸಿ.ಸಿ. ಮನೆ		ಶೇಕಡಾ
	ಒಟ್ಟು	ಶೇಕಡಾ	ಒಟ್ಟು	ಶೇಕಡಾ	ಒಟ್ಟು	ಶೇಕಡಾ	
ಸ್ವಂತ	೦೦	೦೦	೧೪	೦೬	೭೪	೩೩	೩೯
ಬಾಡಿಗೆ	೦೦	೦೦	೦೮	೩.೫	೩೩	೧೫	೧೮.೫
ಅನುದಾನ	೦೦	೦೦	೦೦	೦೦	೦೦	೦೦	೦೦
ಪಿತ್ರಾರ್ಜಿತ	೦೦	೦೦	೬೫	೨೯	೨೨	೧೦	೩೯
ಸರ್ಕಾರ ನೀಡಿದ್ದು	೦೦	೦೦	೦೩	೦೧	೦೫	೦೨	೦೩
ಲೀಜಿಗೆ ಪಡೆದಿದ್ದು	೦೦	೦೦	೦೦	೦೦	೦೧	೦.೫	೦.೫
	ಒಟ್ಟು		೨೨೫				೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಜನರು ವಾಸಿಸುವ ಕಟ್ಟಡದ ಸ್ವರೂಪವನ್ನು ನೋಡಿದಾಗ ಸ್ವಂತ ಗುಡಿಸಲು ಯಾರು ಹೊಂದಿಲ್ಲ, ಮಣ್ಣಿನ ಮನೆ ಶೇ.೬ ರಷ್ಟು, ಆ.ಸಿ.ಸಿ ಶೇ.೩೩ ರಷ್ಟು, ಬಾಡಿಗೆ ಗುಡಿಸಲು ಯಾರು ಹೊಂದಿಲ್ಲ, ಮಣ್ಣಿನ ಮನೆ ಶೇ.೩.೫ ರಷ್ಟು, ಆ.ಸಿ.ಸಿ ಶೇ.೧೫ ರಷ್ಟು, ಅನುದಾನ ಯಾವುದು ಇಲ್ಲ, ಪಿತ್ರಾರ್ಜಿತ ಗುಡಿಸಲು ಯಾರು ಹೊಂದಿಲ್ಲ, ಮಣ್ಣಿನ ಮನೆ ಶೇ.೨೯ ರಷ್ಟು, ಆ.ಸಿ.ಸಿ ಶೇ.೧೦ ರಷ್ಟು, ಸರಕಾರ ನೀಡಿದ ಗುಡಿಸಲು ಯಾರು ಹೊಂದಿಲ್ಲ, ಮಣ್ಣಿನ ಮನೆ ಶೇ.೧ ರಷ್ಟು, ಆ.ಸಿ.ಸಿ ಶೇ.೨ ರಷ್ಟು, ಲೀಜಿಗೆ ಪಡೆದ ಗುಡಿಸಲು ಯಾರು ಹೊಂದಿಲ್ಲ, ಮಣ್ಣಿನ ಮನೆ ಯಾರು ಹೊಂದಿಲ್ಲ, ಆರ್.ಸಿ.ಸಿ ಶೇ.೫ ರಷ್ಟು ಹೊಂದಿದ್ದಾರೆ. ಇಲ್ಲಿ ಗಮನಿಸುವ ಅಂಶವೆನೆಂದರೆ ನಮ್ಮ ಅಧ್ಯಯನದಲ್ಲಿ ಬರುವ ಪ್ರದೇಶದಲ್ಲಿ ಯಾರು ಕೂಡಾ ಗುಡಿಸಲನ್ನು ಹೊಂದಿಲ್ಲ ಮತ್ತು ಅತಿ ಹೆಚ್ಚು ಸ್ವಂತ ಮನೆಯನ್ನು ಹೊಂದಿದ್ದಾರೆ. ಇವತ್ತಿನ ಸರಕಾರಗಳು ಸರ್ವರಿಗೂ ಸೂರನ್ನು ಕಲ್ಪಿಸುವ ಯೋಜನೆಯನ್ನು ತಂದಿದ್ದಾರೆ ಆ ಕಾರಣದಿಂದ ಎಲ್ಲ ಬಡವರಿಗೆ ಮನೆಗಳು ಸಿಗುತ್ತಿವೆ ಇಲ್ಲಿ ಬರುವ ಸಮಸ್ಯೆಯೆಂದರೆ ಬಡವರಿಗೆ ಮನೆಕಟ್ಟಲು ಜಾಗ ಸಿಗುತ್ತಿಲ್ಲ ಇದ್ದ ಹಳೆಯ ಮನೆಗಳನ್ನು ಕೆಡವಿ ಹೊಸ ಮನೆಗಳನ್ನು ಕಟ್ಟಿಸಿಕೊಳ್ಳುತ್ತಿದ್ದಾರೆ. ಎಷ್ಟೋ ಜನರಿಗೆ ಸರಕಾರಿ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗುತ್ತಿಲ್ಲ ಕಾರಣವೆಂದರೆ ಮನೆ ಪಡೆಯಲು ಲಂಚವನ್ನು ನೀಡಬೇಕಾಗುತ್ತಿದೆ ಇದನ್ನು ಪಡೆಯಲು ಬಡವರಿಗೆ ಸಾಧ್ಯವಾಗುತ್ತಿಲ್ಲ. ಹೀಗಾಗಿ ಎಷ್ಟೋ ಜನರಿಗೆ ಮನೆಗಳನ್ನು ಹೊಂದಲು ಸಾಧ್ಯವಾಗುತ್ತಿಲ್ಲ. ಮೂಲಭೂತ ಸೌಲಭ್ಯಗಳಲ್ಲಿ ಒಂದು ಪ್ರತಿಯೊಬ್ಬರು ಸ್ವಂತ ಮನೆಯನ್ನು ಹೊಂದಬೇಕು ಎನ್ನುವ ಆಸೆ ಹೊಂದಿರುತ್ತಾರೆ. ಅನೇಕರು ತಗಡಿನ ಶೀಟುಗಳಲ್ಲಿ

ವಾಸವಾಗಿದ್ದಾರೆ ಅವರಿಗೆ ಶಾಶ್ವತ ಮನೆಗಳು ಇಲ್ಲ ಸರಕಾರ ಯಾವಾಗ ಬಿಡು ಎನ್ನುತ್ತದೆ ಆವಾಗ ಬಿಡಬೇಕಾಗುತ್ತದೆ ಎಷ್ಟೋ ಜನರಿಗೆ ಇನ್ನೂ ಸ್ವಂತ ಮನೆಗಳಿಲ್ಲ ಹೊರಗಿನಿಂದ ನೌಕರಿಗೆ ಬಂದವರು ಸಾಮಾನ್ಯವಾಗಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದಾರೆ, ಕೆಲವರು ಸ್ವಂತ ಮನೆಯನ್ನು ಹೊಂದಿದ್ದಾರೆ ಕೊಳಗೇರಿ ಜನರನ್ನು ಗಮನದಲ್ಲಿಟ್ಟುಕೊಂಡು ನಗರಾಡಳಿತವು ಒಂದು ಸ್ವಂತ ಸೂರನ್ನು ನೀಡಬೇಕಾಗಿದೆ. ದುಡಿಯುವ ಸಂಬಳದಲ್ಲಿ ಕೆಲವೊಂದಿಷ್ಟು ಬಾಡಿಗೆಗೆ ಹೋದರೆ ಜೀವನ ನಡೆಸುವುದು ಕಷ್ಟವಾಗುತ್ತದೆ ಹಾಗಾಗಿ ಸ್ಥಳೀಯ ಪ್ರತಿನಿಧಿಗಳು ಇದರ ಕಡೆಗೆ ಗಮನ ಹರಿಸಿ ಎಲ್ಲರಿಗೂ ಸೂರನ್ನು ಒದಗಿಸಬೇಕಾಗಿದೆ.

೭.೨.೨. ನಗರದ ಜನ ಕಟ್ಟಡಕ್ಕೆ ಮಾಡಿದ ಖರ್ಚಿನ ವಿವರ

ಖರ್ಚಿನ ವಿವರ	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
೧೦-೫೦ ಸಾವಿರ	೮೮	೪೯
೫೦ ಸಾವಿರದಿಂದ ೧ ಲಕ್ಷ	೦೬	೦೩
೧-೨ ಲಕ್ಷ	೦೦	೦೦
೨-೫ ಲಕ್ಷ	೦೦	೦೦
೫-೧೦ ಲಕ್ಷ	೨೦	೧೧
೧೦ ಲಕ್ಷಕ್ಕಿಂತ ಹೆಚ್ಚು	೬೭	೩೭
ಒಟ್ಟು	೧೮೧	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಕಟ್ಟಡಕ್ಕೆ ಮಾಡಿದ ಖರ್ಚಿನ ವಿವರಗಳನ್ನು ತಿಳಿದುಕೊಂಡಾಗ ೧೦-೫೦ ಸಾವಿರ ಶೇ.೪೬ ರಷ್ಟು, ೫೦ ಸಾವಿರದಿಂದ ೧ಲಕ್ಷ ಶೇ.೩ ರಷ್ಟು, ೧-೨ ಲಕ್ಷ ಶೇ.೩ ರಷ್ಟು, ೨-೫ ಲಕ್ಷ ಶೇ.೨ ರಷ್ಟು, ೫-೧೦ ಲಕ್ಷ ಶೇ.೧೧ ರಷ್ಟು, ೧೦ ಲಕ್ಷಕ್ಕಿಂತ ಹೆಚ್ಚು ಶೇ.೩೫ ರಷ್ಟು ಹಣವನ್ನು ಖರ್ಚು ಮಾಡಿ ಮನೆ ಕಟ್ಟಿದ್ದಾರೆ. ಇಲ್ಲಿ ಗಮನಿಸುವ ಅಂಶವೆಂದರೆ ಅತಿ ಹೆಚ್ಚು ೧೦-೫೦ ಸಾವಿರ ಖರ್ಚಿನ ಮನೆಗಳು ಸಿಗುತ್ತವೆ ಕಾರಣವೆಂದರೆ ನಮ್ಮ ಅಧ್ಯಯನವು ಮೂರು ಭಾಗಗಳಲ್ಲಿದ್ದು ಎರಡು ಭಾಗ ಮಧ್ಯಮ ಮತ್ತು ಹಿಂದುಳಿದ ಪ್ರದೇಶವಾಗಿದೆ ಹೀಗಾಗಿ ಅವರು ಕಡಿಮೆ ಖರ್ಚಿನಲ್ಲಿ ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ ಮತ್ತು ಹಳೆಯ ಪಿತ್ರಾರ್ಜಿತ ಮನೆಗಳಿರುವುದರಿಂದ ಅವು ಅಷ್ಟರಲ್ಲಿ ಮುಗಿದಿರುತ್ತವೆ. ಹೀಗಾಗಿ ಆ ಸಂಖ್ಯೆ ಹೆಚ್ಚಿರುವುದನ್ನು ಕಾಣುತ್ತೇವೆ. ಇನ್ನು ಎರಡನೆಯದಾಗಿ ಹೆಚ್ಚಿರುವುದೆಂದರೆ ೧೦ ಲಕ್ಷಕ್ಕಿಂತ ಹೆಚ್ಚು ಮುಂದುವರೆದ ಪ್ರದೇಶಗಳಲ್ಲಿ. ಇವತ್ತಿನ ದಿನಗಳಲ್ಲಿ ಮನೆ ಕಟ್ಟಲು ಕನಿಷ್ಟ ೧೦ ಲಕ್ಷ ಬೇಕು ಹಾಗಾಗಿ ಅದು ಹೆಚ್ಚಿರುವುದನ್ನು ಕಾಣುತ್ತೇವೆ. ನಗರವು ಅತಿ ವೇಗವಾಗಿ ಬೆಳೆಯುತ್ತಿದೆ ಕಟ್ಟಡದ ದೃಷ್ಟಿಯಿಂದ ಇವತ್ತು ಸಾಧಾರಣ

ಹಂಚಿನ ಮನೆಗಳನ್ನು ನಿರ್ಮಿಸಲು ೧-೨ ಲಕ್ಷ ಬೇಕಾದದನ್ನು ಕಾಣುತ್ತೇವೆ. ಎಷ್ಟೋ ಜನ ಸರಕಾರದಿಂದ ನೀಡಿದ ಮನೆಯನ್ನು ಹೊಂದಿದ್ದಾರೆ. ಬಡವರಿಗೆ ಖರ್ಚು ಮಾಡಲು ಹಣದ ಕೊರತೆ, ಬಡತನ, ಆರ್ಥಿಕವಾಗಿ ಹಿಂದುಳಿಯುವಿಕೆ ಅವರನ್ನು ಸುಸಜ್ಜಿತ ಮನೆಯಿಂದ ವಂಚಿತರನ್ನಾಗಿಸಿದೆ. ಕಡಿಮೆ ಖರ್ಚಿನಲ್ಲಿ ಮನೆಗಳ ನಿರ್ಮಾಣ ಕನಸಿನ ಮಾತಾಗಿದೆ. ಎಷ್ಟೋ ಜನರಿಗೆ ಮನೆ ಕಟ್ಟಿಸುವುದು ಕನಸಿನ ಮಾತು ಎನ್ನುವುದು ಕೇಳಿದೆವು ಹಾಗಾಗಿ ಕೆಲವರು ತಮ್ಮ ಮನೆಗಳಿಗೆ ಕನಸು ಎನ್ನುವ ಹೆಸರನ್ನೇ ಇಡುವುದನ್ನು ಕಾಣುತ್ತೇವೆ. ಏನೇ ಇರಲಿ ಸರಕಾರದ ಸಹಾಯದಿಂದ ಎಷ್ಟೋ ಜನ ಮನೆಯನ್ನು ಹೊಂದುವಂತಾಗಿದೆ ಮುಂದೆಯೂ ಕೂಡಾ ಹೆಚ್ಚು ಹೆಚ್ಚು ಮನೆಗಳನ್ನು ಸರಕಾರ ಬಡವರಿಗೆ ಕಟ್ಟಿಸಿಕೊಡಲಿ ಎನ್ನುವುದು ಅಧ್ಯಯನದ ಆಶಯವಾಗಿದೆ ಮತ್ತು ಲಂಚ ಪಡೆಯದೆ ಮನೆಗಳ ನಿರ್ಮಾಣ ಪ್ರಕ್ರಿಯೆ ನಡೆಯಬೇಕಾಗಿದೆ.

೭.೨.೩ನಗರದ ಜನರು ಹೊಂದಿರುವ ಕಟ್ಟಡದ ಕೊಠಡಿ ಸಂಖ್ಯೆಯ ವಿವರ

ಕೊಠಡಿಯ ಸಂಖ್ಯೆಗಳು	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
೦೧	೦೦	೦೦
೦೨	೨೦	೦೯
೦೩	೮೪	೩೭
೦೪	೯೮	೪೩.೫
೦೫	೨೨	೧೦
೦೬	೦೧	೦.೫
೬ ಕ್ಕಿಂತ ಹೆಚ್ಚು	೦೦	೦೦
ಒಟ್ಟು	೨೨೫	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ನಮ್ಮ ಅಧ್ಯಯನ ಪ್ರದೇಶದಲ್ಲಿ ಕಟ್ಟಡ ಹೊಂದಿರುವ ಕೊಠಡಿಗಳ ಸಂಖ್ಯೆಯನ್ನು ವಿಚಾರಿಸಿದಾಗ ೧ ಕೊಠಡಿ ಹೊಂದಿದವರು ಯಾರು ಇಲ್ಲ, ೨ ಕೊಠಡಿ ಶೇ.೯ ರಷ್ಟು, ೩ ಕೊಠಡಿ ಶೇ.೩೭ ರಷ್ಟು, ೪ ಕೊಠಡಿ ಶೇ.೪೩.೫ ರಷ್ಟು, ೫ ಕೊಠಡಿ ಶೇ.೧೦ ರಷ್ಟು, ೬ ಕೊಠಡಿ ಶೇ.೦.೫ ರಷ್ಟು, ೬ ಕ್ಕಿಂತ ಹೆಚ್ಚು ಹೊಂದಿದವರು ಯಾರು ಇಲ್ಲ. ಇಲ್ಲಿ ಗಮನಿಸುವ ಅಂಶವೆಂದರೆ ಸಾಮಾನ್ಯವಾಗಿ ಅತಿ ಹೆಚ್ಚು ಅಂದರೆ ೪ ಕೊಠಡಿಗಳನ್ನು ಹೊಂದಿದವರು ಸಿಗುತ್ತಾರೆ. ಇದನ್ನು ನಾವು ಮುಂದುವರೆದ ಮತ್ತು ಹಿಂದುಳಿದ ಪ್ರದೇಶದಲ್ಲಿ ಕಾಣುತ್ತೇವೆ. ಇನ್ನು ಹಿಂದುಳಿದ ಪ್ರದೇಶದಲ್ಲಿ ೨-೩ ಕೊಠಡಿಗಳನ್ನು ಕಾಣುತ್ತೇವೆ. ಇನ್ನೊಂದು ವಿಚಿತ್ರವೆಂದರೆ ಕಡಿಮೆ ಜನ ಇರುವ ಶ್ರೀಮಂತರ ಮನೆಯಲ್ಲಿ ಹೆಚ್ಚು

ಕೊಠಡಿಗಳನ್ನು ಕಾಣುತ್ತೇವೆ. ಹೆಚ್ಚು ಜನ ಇರುವ ಬಡವರ ಮನೆಯಲ್ಲಿ ಕಡಿಮೆ ಕೊಠಡಿಗಳಿರುವುದನ್ನು ಕಾಣುತ್ತೇವೆ. ಒಟ್ಟಿನಲ್ಲಿ ಹೇಳಬೇಕೆಂದರೆ ಶ್ರೀಮಂತರು ಸ್ಥಿತಿವಂತರು ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟಿಕೊಂಡು ಮತ್ತು ಬಡವರು ಒಂದು-ಎರಡು ಕೊಠಡಿಗಳನ್ನು ಕಟ್ಟಿಕೊಂಡು ಬಾಳುತ್ತಿದ್ದಾರೆ. ನಗರದಲ್ಲಿ ಎಲ್ಲ ತರಹದ ಮನೆಗಳು ಕಾಣಸಿಗುತ್ತವೆ. ಅವರವರ ಆರ್ಥಿಕ ಸ್ಥಿತಿಗೆ ತಕ್ಕಂತೆ ಕಟ್ಟಿಸಿಕೊಂಡಿದ್ದಾರೆ, ಶ್ರೀಮಂತರು ಬಾಡಿಗೆಗೆ ಮನೆಗಳನ್ನು ನಿರ್ಮಿಸಿದ್ದಾರೆ, ಮೆಟ್ರೊಪಾಲಿಟಿನ ನಗರಗಳಿಗೆ ಹೋಲಿಸಿದಾಗ ನಮ್ಮ ನಗರದ ಜನ ವಿಶಾಲವಾದ ಮನೆಗಳಲ್ಲಿ ಆರಾಮವಾಗಿಯೇ ಇರುವುದನ್ನು ಕಾಣುತ್ತೇವೆ. ಅಲ್ಲಿ ಎಷ್ಟೋ ಜನ ಒಂದೇ ಕೊಠಡಿಯಲ್ಲಿ ವಾಸಿಸುತ್ತಿರುತ್ತಾರೆ, ಇಲ್ಲಿ ಆ ರೀತಿ ಎಲ್ಲೂ ಕಂಡುಬಂದಿಲ್ಲ.

೭.೨.೪.ಅ. ನಗರದಲ್ಲಿ ಕುಟುಂಬ ಹೊಂದಿರುವ ಭೂಮಿಯ ವಿವರ. (ಎಕರೆಗಳಲ್ಲಿ)

ಭೂಮಿಯ ವಿಧಗಳು	ನೀರಾವರಿ				ಒಣಭೂಮಿ				ಶೇ
	೦೧-೦೫		೫ಕ್ಕಿಂತ ಹೆಚ್ಚು		೦೧-೦೫		೫ಕ್ಕಿಂತ ಹೆಚ್ಚು		
	ಒಟ್ಟು	ಶೇ	ಒಟ್ಟು	ಶೇ	ಒಟ್ಟು	ಶೇ	ಒಟ್ಟು	ಶೇ	
ಸ್ವಂತ ಭೂಮಿ	೧೨	೧೨	೧೦	೧೧	೩೦	೩೧	೧೩	೧೪	೬೮
ಗೇಣಿ ಪಡೆದಿರುವ ಭೂಮಿ	೦೦	೦೦	೦೦	೦೦	೦೩	೦೩	೦೨	೦೨	೦೫
ಗೇಣಿ ಕೊಟ್ಟಿರುವ ಭೂಮಿ	೦೦	೦೦	೦೧	೦೧	೧೧	೧೨	೧೪	೧೫	೨೭
ಒತ್ತುವರಿ ಸರಕಾರಿ ಭೂಮಿ	೦೦	೦೦	೦೦	೦೦	೦೦	೦೦	೦೦	೦೦	೦೦
ಒಟ್ಟು					೯೬				೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

೭.೨.೪.ಬ. ನಗರದಲ್ಲಿ ಬೆಳೆಯುವ ಬೆಳೆಗಳು

ಬೆಳೆ ವಿಧಗಳು	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
ಆಹಾರ ಬೆಳೆ	೭೫	೭೧
ವಾಣಿಜ್ಯ ಬೆಳೆ	೩೧	೨೯
ಒಟ್ಟು	೧೦೬	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಕುಟುಂಬ ಹೊಂದಿರುವ ಭೂಮಿಯ ವಿವರಗಳನ್ನು ನೋಡಿದಾಗ ಸ್ವಂತ ಭೂಮಿ ನೀರಾವರಿ ೧-೫ ಶೇ.೧೨ ರಷ್ಟು, ೫ ಕ್ಕಿಂತ ಹೆಚ್ಚು ಶೇ.೧೧ರಷ್ಟು, ಒಣಭೂಮಿ ೧-೫ ಶೇ ೩೧ರಷ್ಟು, ೫ ಕ್ಕಿಂತ ಹೆಚ್ಚು ಶೇ. ೧೪ರಷ್ಟು, ಇಲ್ಲಿ ಗೇಣಿ ಪಡೆದಿರುವ ಭೂಮಿ ನಿರಾವರಿ ೧-೫ ಇಲ್ಲ, ೫ ಕ್ಕಿಂತ ಹೆಚ್ಚು ಇಲ್ಲ, ಒಣಭೂಮಿ ೧-೫ ಶೇ.೩ರಷ್ಟು, ೫ ಕ್ಕಿಂತ ಹೆಚ್ಚು ಶೇ.೦೨ರಷ್ಟು, ಗೇಣಿ ಕೊಟ್ಟಿರುವ ಭೂಮಿ ನೀರಾವರಿ ೧-೫ ಇಲ್ಲ ೫ ಕ್ಕಿಂತ ಹೆಚ್ಚು ಶೇ. ೧ ರಷ್ಟು, ಒಣ ಭೂಮಿ ೧-೫ ಶೇ.೧೨ರಷ್ಟು, ೫ ಕ್ಕಿಂತ ಹೆಚ್ಚು ಶೇ.೧೫ ರಷ್ಟು, ಒತ್ತುವರಿ ಸರಕಾರಿ ಭೂಮಿ ಯಾವುದು ಇಲ್ಲ. ಇಲ್ಲಿ ಗಮನಿಸುವ ಅಂಶವೆಂದರೆ ನೀರಾವರಿಗಿಂತ ಒಣ ಭೂಮಿ ಹೆಚ್ಚಿರುವುದು ಕಂಡು ಬರುತ್ತದೆ. ಏಕೆಂದರೆ ಇದು ಬಿಸಿಲು ನಾಡಾಗಿದೆ ನೀರಿನ ಸೌಲಭ್ಯ ಕಡಿಮೆ ಇದೆ ಮತ್ತು ಅಂತರ್ಜಲ ಕೂಡಾ ಕಡಿಮೆ ಇರುವುದನ್ನು ಕಾಣುತ್ತೇವೆ. ಇನ್ನೂ ಗೇಣಿ ಕೊಟ್ಟಿರುವ ಭೂಮಿ ಹೆಚ್ಚಿಗೆ ಇರುವುದನ್ನು ಕಾಣುತ್ತೇವೆ. ಬಹಳಷ್ಟು ಜನ ಭೂಮಿಯನ್ನು ಬೇರೆಯವರಿಗೆ ಕೊಟ್ಟು ಬೇರೆ ಉದ್ಯೋಗ ಮಾಡುತ್ತಿರುವುದನ್ನು ಕಾಣುತ್ತೇವೆ. ಏಕೆಂದರೆ ನಿರಂತರ ನಷ್ಟ, ಸರಿಯಾಗಿ ಮಳೆಯಾಗದೆ ಇರುವುದನ್ನು ಕಾಣುತ್ತೇವೆ. ಹಾಗಾಗಿ ಈ ನಿರ್ಧಾರಕ್ಕೆ ಬಂದಿರುವುದನ್ನು ಕಾಣುತ್ತೇವೆ. ಸ್ವಂತ ಭೂಮಿಯನ್ನು ಹೊಂದಿ ವ್ಯವಸಾಯ ಮಾಡುತ್ತಿರುವವರ ಸಂಖ್ಯೆ ಕಡಿಮೆ ಇದೆ. ೩೫ ಕೀ.ಮೀ ದೂರದಲ್ಲಿ ಜಲಾಶಯವಿದ್ದರೂ ಕಾಲುವೆಗಳ ಕೊರತೆ ಎದ್ದು ಕಾಣುತ್ತಿದೆ, ಕೊಪ್ಪಳದ ಕೆಲವು ತಾಲ್ಲೂಕುಗಳಿಗೆ ನೀರಾವರಿ ಸೌಲಭ್ಯವಿದೆ, ನಗರದಲ್ಲಂತೂ ಕುಡಿಯಲು ಕೂಡಾ ನೀರು ಸಮರ್ಪಕವಾಗಿ ಬರುತ್ತಿಲ್ಲ, ಇನ್ನೂ ವ್ಯವಸಾಯ ಕನಸಿನ ಮಾತಾಗಿದೆ ಇದರ ಕುರಿತು ಜನಪ್ರಿನಿಧಿಗಳು ಗಮನ ಹರಿಸುವ ಅವಶ್ಯಕತೆ ಇದೆ ಎನ್ನುವುದನ್ನು ನಮ್ಮ ಅಧ್ಯಯನವು ಹೇಳುತ್ತದೆ.

ಇನ್ನೂ ಬೆಳೆಯುವ ಬೆಳೆ ಕುರಿತು ನೋಡಿದಾಗ ಆಹಾರ ಬೆಳೆ ಶೇ.೭೧ ರಷ್ಟು, ವಾಣಿಜ್ಯ ಬೆಳೆ ಶೇ.೨೯ರಷ್ಟು ಇರುವುದನ್ನು ಕಾಣುತ್ತೇವೆ. ಇದರಿಂದಲೇ ತಿಳಿಯುತ್ತದೆ ನೀರಿನ ಕೊರತೆ ಇರುವುದು. ವಿಶೇಷವಾಗಿ ಇಲ್ಲಿ ಬೆಳೆಯುವ ಆಹಾರ ಪದಾರ್ಥಗಳು ಬಿಳಿಜೋಳ, ಸಜ್ಜೆ, ನವನಿ, ಹೆಸರುಕಾಳು, ಕಡಲೆ ಮುಂತಾದ ಕಡಿಮೆ ನೀರಿನಲ್ಲಿ ಬೆಳೆಯುವ ಬೆಳೆಗಳನ್ನು ಬೆಳೆಯುತ್ತಾರೆ. ಕೆಲವೊಂದು ಸಲ ಮಳೆ ಬರದೆ ಇದ್ದಾಗ ಈ ಬೆಳೆಗಳನ್ನು ಬೆಳೆಯುವುದು ಕಷ್ಟವಾಗುತ್ತಿದೆ. ಇದು ಬಯಲು ಪ್ರದೇಶವಾಗಿದೆ ಇಲ್ಲಿ ಹೆಚ್ಚು ಹೆಚ್ಚು ಗಿಡ ಮರಗಳನ್ನು ಬೆಳೆಯುವ ಅನಿವಾರ್ಯತೆ ಇದೆ. ಈ ದಿಸೆಯಲ್ಲಿ ಕೆಲವೊಂದಿಷ್ಟು ಸಂಘಟನೆಗಳು ಕಾರ್ಯನಿರತವಾಗಿವೆ, ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಸಂಘಟನೆಗಳೊಂದಿಗೆ ಸ್ಥಳೀಯ ಸರಕಾರವು ಕೂಡಾ ಕೈಗೂಡಿಸಬೇಕಾಗಿದೆ.

೭.೨.೫. ನಗರದಲ್ಲಿ ಕುಟುಂಬ ಹೊಂದಿರುವ ಇತರೆ ಆಸ್ತಿ

ಆಸ್ತಿಯ ವಿಧಗಳು	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
ಅಂಗಡಿ	೨೪	೫೫
ಬಾಡಿಗೆ ಮನೆ	೨೦	೪೫
ಬಾಡಿಗೆ ಮಳಿಗೆಗಳು	೦೦	೦೦
ಬಾಡಿಗೆ ವಾಹನಗಳು	೦೦	೦೦
ಕೈಗಾರಿಕೆಗಳು	೦೦	೦೦
ಇತರೆ	೦೦	೦೦
ಒಟ್ಟು	೪೪	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಕುಟುಂಬ ಹೊಂದಿರುವ ಇತರೆ ಆಸ್ತಿಯ ಕುರಿತು ಪ್ರಶ್ನಿಸಿದಾಗ ಅಂಗಡಿಗಳನ್ನು ಹೊಂದಿದವರು ಶೇ.೫೫ ರಷ್ಟು ಬಾಡಿಗೆ ಮನೆಯನ್ನು ಹೊಂದಿದವರು ಶೇ.೪೫ರಷ್ಟು ಇಲ್ಲಿ ಗಮನಿಸುವ ಅಂಶವೆಂದರೆ ಕೊಪ್ಪಳ ನಗರದಲ್ಲಿ ಶೇ.೫೦ ರಷ್ಟು ಜನ ವ್ಯಾಪರವನ್ನು ಮಾಡುತ್ತಿದ್ದಾರೆ. ಒಂದಿಲ್ಲೊಂದು ಅಂಗಡಿಯನ್ನು ತೆರೆದಿದ್ದಾರೆ ಇಲ್ಲಿ ವ್ಯಾಪಾರಿಗಳು ಹೆಚ್ಚಿರುವದನ್ನು ಕಾಣುತ್ತೇವೆ. ಅದೇ ರೀತಿ ಬಹಳಷ್ಟು ಜನ ಮನೆಗಳನ್ನು ಹೆಚ್ಚು ಅಂತಸ್ತು ಮತ್ತು ಹೆಚ್ಚು ಹೆಚ್ಚು ಮನೆಗಳನ್ನು ಹೊಂದಿದ್ದು ಬಾಡಿಗೆ ಕೊಡುವುದು ಒಂದು ದೊಡ್ಡ ವ್ಯವಹಾರವಾಗಿದೆ. ಮನೆ ಬಾಡಿಗೆಯನ್ನು ವಿಚಾರಿಸಿದಾಗ ದೊಡ್ಡ ದೊಡ್ಡ ನಗರಗಳಿಗಿಂತಲೂ ಹೆಚ್ಚಿನ ದರವನ್ನು ವಿಧಿಸಿದ್ದನ್ನು ಕಾಣುತ್ತೇವೆ. ಹಾಗಾಗಿ ಇದು ಒಂದು ದೊಡ್ಡ ವ್ಯವಹಾರವಾಗಿದೆ. ಇದು ನಗರದ ಜನರ ಆದಾಯವನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಶ್ರೀಮಂತರು ದೊಡ್ಡ ದೊಡ್ಡ ಮಳಿಗೆಗಳನ್ನು ಮಾರುಕಟ್ಟೆಯಲ್ಲಿ ಹೊಂದಿದ್ದಾರೆ. ಕೃಷಿ ಮಾರುಕಟ್ಟೆಯಲ್ಲಿ ಇರುವಂತ ಎಲ್ಲಾ ಅಂಗಡಿಗಳು ಮುಂದುವರೆದ ಜಾತಿಯವರದೆ. ಇನ್ನು ಮಧ್ಯಮ ವರ್ಗದವರು ತರಕಾರಿ, ಸಣ್ಣ ಪುಟ್ಟ ಅಂಗಡಿಗಳನ್ನು ಇಟ್ಟುಕೊಂಡು ಜೀವನ ಸಾಗಿಸುತ್ತಿದ್ದಾರೆ, ತರಕಾರಿ ವ್ಯಾಪರದಲ್ಲಂತೂ ಬಹಳಷ್ಟು ಲಾಭ ಪಡೆಯುತ್ತಿದ್ದಾರೆ. ಇಲ್ಲಿ ಪ್ರಮುಖವಾಗಿ ರೈತರು ಶೋಷಣೆಗೆ ಒಳಗಾಗಿದ್ದಾರೆ ವ್ಯಾಪರಿಗಳು ಬಹಳಷ್ಟು ಸುಖಕರ ಜೀವನ ಸಾಗಿಸುವುದನ್ನು ಕಾಣುತ್ತೇವೆ. ಒಟ್ಟಿನಲ್ಲಿ ನಗರದಲ್ಲಿ ಹೆಚ್ಚು ಜನ ವ್ಯಾಪರ ಮಾಡಿಕೊಂಡು ಒಳ್ಳೆಯ ಜೀವನ ನಡೆಸುತ್ತಿರುವುದು ಕಂಡುಬರುತ್ತದೆ.

೭.೨.೬.ಅ. ನಗರದಲ್ಲಿನ ಜನರ ಉದ್ಯೋಗದ ಸ್ಥಿತಿ ಗತಿ

ಉದ್ಯೋಗದ ಪ್ರಕಾರಗಳು	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
ಸ್ವಂತ	೧೧೨	೨೫
ಸರಕಾರಿ	೪೮	೧೦
ಕೈಗಾರಿಕೆ	೦೯	೦೨
ಕೂಲಿ ಅಥವಾ ಕೃಷಿ	೨೫೩	೫೬
ನಿರುದ್ಯೋಗ	೦೦	೦೦
ಇತರೆ	೩೧	೦೭
ಒಟ್ಟು	೪೫೩	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಉದ್ಯೋಗದ ಸ್ಥಿತಿಗತಿ ಕುರಿತು ಕೇಳಿದಾಗ ಸ್ವಂತ ಶೇ.೨೫ ರಷ್ಟು, ಸರಕಾರಿ ಶೇ.೧೦ ರಷ್ಟು, ಕೈಗಾರಿಕೆ ಶೇ.೨ ರಷ್ಟು ಕೂಲಿ ಅಥವಾ ಕೃಷಿ ಶೇ,೫೬ ರಷ್ಟು, ನಿರುದ್ಯೋಗಿಗಳು ಯಾರು ಇಲ್ಲ, ಇತರೆ ಶೇ,೭ ರಷ್ಟು ಉದ್ಯೋಗವನ್ನು ಹೊಂದಿದ್ದಾರೆ. ಇಲ್ಲಿ ಗಮನಿಸುವ ಅಂಶವೆಂದರೆ ಅತಿ ಹೆಚ್ಚು ಜನ ಕೂಲಿ ಅಥವಾ ಕೃಷಿಯಲ್ಲಿ ತೊಡಗಿದ್ದಾರೆ. ನಮ್ಮ ಅಧ್ಯಯನದಲ್ಲಿ ಮೊದಲನೆಯದಾಗಿ ಮುಂದುವರೆದ ಪ್ರದೇಶದಲ್ಲಿ ಹೆಚ್ಚಾನುಹೆಚ್ಚು ಸರಕಾರಿ ನೌಕರರು ಮತ್ತು ಸ್ವಂತ ಉದ್ಯೋಗವನ್ನು ಮಾಡುತ್ತಿದ್ದಾರೆ. ಇನ್ನು ಮಧ್ಯಮ ಪ್ರದೇಶದಲ್ಲಿ ಕೃಷಿ, ಸರಕಾರಿ, ಕೂಲಿ, ಸ್ವಂತ ಉದ್ಯೋಗವನ್ನು ಮಾಡುವವರು ಇದ್ದಾರೆ. ಇನ್ನು ಹಿಂದುಳಿದ ಪ್ರದೇಶದಲ್ಲಿ ಎಲ್ಲರು ಕೂಲಿ ಕೆಲಸದಲ್ಲಿ ತೊಡಗಿರುವದನ್ನು ಕಾಣುತ್ತೇವೆ. ಹಾಗಾಗಿ ಅದು ಹೆಚ್ಚಿಗೆ ಪ್ರಮಾಣ ಬಂದಿದ್ದನ್ನು ಕಾಣುತ್ತೇವೆ. ನಗರದಲ್ಲಿ ವಿಶೇಷವಾಗಿ ಕಂಡಿರುವುದು ಜನರು ಒಂದಿಲ್ಲ ಒಂದು ಉದ್ಯೋಗದಲ್ಲಿ ತೊಡಗಿದ್ದಾರೆ. ನಿರುದ್ಯೋಗವು ಇಲ್ಲದೆ ಇರುವುದನ್ನು ಕಾಣುತ್ತೇವೆ. ನಿರುದ್ಯೋಗವಿದ್ದರೂ ನಮ್ಮ ವ್ಯಾಪ್ತಿ ಪ್ರದೇಶದಲ್ಲಿ ಕಂಡು ಬಂದಿಲ್ಲ ಉದ್ಯೋಗವೆನ್ನುವದು ಜನರ ಜೀವನ ಮಟ್ಟವನ್ನು ಬದಲಿಸುತ್ತದೆ. ಅವರಲ್ಲಿ ಸ್ವಾಭಿಮಾನವನ್ನು ಮೂಡಿಸಿ ಜೀವನ ಸಾಗಿಸುವಂತೆ ಮಾಡುತ್ತದೆ. ಇಲ್ಲಿ ಬರುವ ಸರಕಾರಿ ನೌಕರರು ಹೆಚ್ಚು ಬೇರೆ ಊರಿನಿಂದ ಬಂದವರು. ಎರಡನೆಯದಾಗಿ ದೊಡ್ಡ ಮಟ್ಟದಲ್ಲಿರುವುದು ಸ್ವಂತ ಉದ್ಯೋಗ, ಹಿಂದಿನ ಅಂಶದಲ್ಲಿ ಚರ್ಚಿಸಿದಂತೆ ನಗರದಲ್ಲಿ ಸ್ವಂತ ಉದ್ಯೋಗವನ್ನು ಮಾಡುವರ ಸಂಖ್ಯೆ ಹೆಚ್ಚು ಇರುವುದನ್ನು ಕಾಣುತ್ತೇವೆ. ನಗರದಲ್ಲಿ ಮುಂದುವರದ ಪ್ರದೇಶಗಳು ಬಹಳಷ್ಟು ಇವೆ. ಹಿಂದುಳಿದ ಪ್ರದೇಶಗಳಿಗೆ ಹೊಲಿಸಿದಾಗ ಅವುಗಳ ಸಂಖ್ಯೆ ಹೆಚ್ಚಿದೆ. ಹಾಗಾಗಿ ಒಟ್ಟಾರೆ ನಗರವನ್ನು ತೆಗೆದುಕೊಂಡಾಗ ಸ್ವಂತ ಉದ್ಯೋಗ ಮಾಡುವವರ ಸಂಖ್ಯೆ ಹೆಚ್ಚಾಗಿರುತ್ತದೆ. ಶಿಕ್ಷಣದ ಬಗ್ಗೆ ನಿರುತ್ಸಾಹ ಇರುವದನ್ನು ಕಾಣುತ್ತೇವೆ. ಪದವಿ ಮುಗಿದರೆ ಸಾಕು ಅನ್ನುವ ಮನೋಭಾವ, ಮುಗಿದ ನಂತರ ಯಾವುದೋ

ಒಂದು ಉದ್ಯೋಗದಲ್ಲಿ ತೊಡಗುವುದು. ಹಿಂದುಳಿದ ಪ್ರದೇಶದಲ್ಲಿನ ಮಕ್ಕಳಂತು ೧೦ ಅಥವ ೧೨ ನೇ ತರಗತಿಗಳನ್ನು ಮುಗಿಸಿ ಬೇರೆಯವರ ಕೈಯಲ್ಲಿ ಕೆಲಸ ಮಾಡುತ್ತಿರುವುದನ್ನು ಕಾಣುತ್ತೇವೆ. ನಗರದ ಸುತ್ತ ಮುತ್ತ ಹೆಚ್ಚು ಕೈಗಾರಿಕೆಗಳು ಇವೆ. ಅವೆ ಕೆಲವೊಂದಿಷ್ಟು ಉದ್ಯೋಗಗಳನ್ನು ನೀಡಿವೆ. ನಗರದಲ್ಲಿ ಇನ್ನು ಹೆಚ್ಚಿನ ಉದ್ಯೋಗವನ್ನು ಸೃಷ್ಟಿಸುವ ಅವಶ್ಯಕತೆ ಇರುವುದನ್ನು ಕಾಣುತ್ತೇವೆ. ಮತ್ತು ನಗರದ ಜನ ಬೇರೆ ಬೇರೆ ಪಟ್ಟಣಗಳಿಗೆ ಉದ್ಯೋಗವನ್ನು ಹುಡುಕಿಕೊಂಡು ಹೋಗುವುದನ್ನು ಕಾಣುತ್ತೇವೆ. ಇದು ಕಡಿಮೆಯಾಗಬೇಕೆಂದರೆ ನಗರದಲ್ಲಿ ಅವರಿಗೆ ಸೂಕ್ತ ಉದ್ಯೋಗ ಸಿಗಬೇಕು, ಆ ದಿಸೆಯಲ್ಲಿ ಪ್ರತಿನಿಧಿಗಳು ಕಾರ್ಯವನ್ನು ನಿರ್ವಹಿಸಿ, ಪ್ರಯತ್ನ ಪಟ್ಟು ಉದ್ಯೋಗವನ್ನು ಹೆಚ್ಚಿಸಬೇಕು.

೭.೨.೬.ಆ. ನಗರದ ಜನರ ಉದ್ಯೋಗದ ಸ್ಥಳ

ಉದ್ಯೋಗದ ಸ್ಥಳ	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
ನಗರದಲ್ಲಿ	೪೧೯	೯೩
ಹೊರಗಡೆ	೩೦	೦೭
ಒಟ್ಟು	೪೪೯	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಉದ್ಯೋಗದ ಸ್ಥಳವನ್ನು ಕೇಳಿದಾಗ ನಗರದಲ್ಲಿ ಶೇ.೯೩ ರಷ್ಟು, ನಗರದಿಂದ ಹೊರಗಡೆ ಶೇ.೭ರಷ್ಟು ಜನ ಕೆಲಸ ಮಾಡುತ್ತಿದ್ದಾರೆ. ಇಲ್ಲಿ ಗಮನಿಸುವ ಅಂಶವೆಂದರೆ ಅತಿ ಹೆಚ್ಚು ಜನ ನಗರದಲ್ಲಿಯೇ ಕೆಲಸಮಾಡುತ್ತಿದ್ದಾರೆ. ಇದರಿಂದ ತಿಳಿದುಬರುವ ಅಂಶವೆಂದರೆ. ನಗರವು ಹೆಚ್ಚು ಜನರಿಗೆ ಕೆಲಸವನ್ನು ನೀಡಿದೆ. ಹಾಗೆಯೆ ಮೊದಲೇ ಹೇಳಿರುವಂತೆ ನಗರದಲ್ಲಿ ಸ್ವಂತ ಉದ್ಯೋಗ ಮಾಡುವವರ ಸಂಖ್ಯೆ ಹೆಚ್ಚಿದೆ ಕೆಲವೊಂದಿಷ್ಟು ಜನ ಬೇರೆ ನಗರಗಳಿಗೆ ಉದ್ಯೋಗಕ್ಕಾಗಿ ವಲಸೆ ಹೋಗಿರುವುದನ್ನು ನಾವು ಕಾಣುತ್ತೇವೆ. ಅಂದರೆ ಪೂರ್ಣಪ್ರಮಾಣದ ಉದ್ಯೋಗವನ್ನು ಒದಗಿಸಲು ಸಾಧ್ಯವಾಗಿಲ್ಲ. ಇದು ಎಲ್ಲಾ ನಗರಗಳಲ್ಲಿ ಸಾಮಾನ್ಯವಾದ ಪ್ರಕ್ರಿಯೆಯಾಗಿದೆ. ಎಲ್ಲರೂ ನಗರದಲ್ಲಿ ಕೆಲಸವನ್ನು ಮಾಡುವಂತಾಗಬೇಕೆಂದರೆ ಹೆಚ್ಚು ಉದ್ಯೋಗ ಸೃಷ್ಟಿಸಬೇಕಾಗುತ್ತದೆ. ಹೆಚ್ಚು ಹೆಚ್ಚು ಕೈಗಾರಿಕೆ, ಕಾರ್ಖಾನೆ ಹಾಗೂ ಸರಕಾರಿ ಉದ್ಯೋಗವನ್ನು ಸೃಷ್ಟಿಸಿ ಕೆಲಸವನ್ನು ನೀಡಿದಾಗ ಬೇರೆ ನಗರಗಳಿಗೆ ಹೋಗುವುದು ತಪ್ಪುತ್ತದೆ. ನಗರದ ಸುತ್ತಮುತ್ತಲಿನ ಬಹಳಷ್ಟು ಹಳ್ಳಿಯ ಜನ ನಗರಕ್ಕೆ ಕೆಲಸಕ್ಕೆ ಎಂದು ಬರುವುದನ್ನು ಗಮನಿಸುತ್ತೇವೆ. ಸಾಮನ್ಯವಾಗಿ ಶೇ.೮೦ರಷ್ಟು ಉದ್ಯೋಗವನ್ನು ನಗರವು ನೀಡಿದೆ. ಇದು ಒಳ್ಳೆಯ ಬೆಳವಣಿಗೆಯಾಗಿದೆ, ಆದರೂ ಇನ್ನೂ ಹೆಚ್ಚು ಉದ್ಯೋಗಗಳು ಸೃಷ್ಟಿಯಾಗಬೇಕಾಗಿದೆ.

೭.೨.೭.ಅ.ನಗರದಲ್ಲಿ ವಾಸಿಸುವ ಕುಟುಂಬದ ಒಟ್ಟು ಆದಾಯದ ಸ್ಥಿತಿ-ಗತಿ (ವಾರ್ಷಿಕ).

ಆದಾಯದ ಪ್ರಮಾಣ	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
೧-೨೫ ಸಾವಿರ	೦೭	೦೩
೨೫-೫೦ ಸಾವಿರ	೧೨	೦೫
೫೦ ಸಾವಿರದಿಂದ ೧ ಲಕ್ಷ	೦೯	೦೪
೧-೨ ಲಕ್ಷ	೫೦	೨೨
೨-೫ ಲಕ್ಷ	೧೧೦	೪೯
೫ ಲಕ್ಷಕ್ಕಿಂತ ಹೆಚ್ಚು	೩೭	೧೭
ಒಟ್ಟು	೨೨೫	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಕುಟುಂಬದ ಒಟ್ಟು ಆದಾಯದ ಕುರಿತು ಪ್ರಶ್ನಿಸಿದಾಗ ಬಂದಿರುವ ಉತ್ತರಗಳು ೧-೨೫ ಸಾವಿರ ಶೇ.೩ ರಷ್ಟು, ೨೫-೫೦ಸಾವಿರ ಶೇ.೫ರಷ್ಟು. ೫೦ಸಾವಿರದಿಂದ ೧ಲಕ್ಷದವರಗೆ ಶೇ.೪ರಷ್ಟು ೧-೨ ಲಕ್ಷ ಶೇ.೨೨ರಷ್ಟು, ೨-೫ಲಕ್ಷ ಶೇ,೪೯ ರಷ್ಟು ೫ಲಕ್ಷಕ್ಕಿಂತ ಹೆಚ್ಚು ಶೇ.೧೭ ರಷ್ಟು ಇಲ್ಲಿ ಗಮನಿಸುವ ಅಂಶವೆಂದರೆ ಅತಿ ಹೆಚ್ಚು ಜನ ೨ ರಿಂದ ೫ ಲಕ್ಷದ ವ್ಯಾಪ್ತಿಯಲ್ಲಿ ಬರುತ್ತಾರೆ. ನಮ್ಮ ಅಧ್ಯಯನವು ಮೂರು ರೀತಿಯಿಂದ ಕೂಡಿದ್ದು ಇಲ್ಲಿ ಮಧ್ಯಮ ಮತ್ತು ಹಿಂದುಳಿದ ವರ್ಗದವರನ್ನು ನೋಡುತ್ತೇವೆ. ಹೀಗೆ ನೋಡಿದಾಗ ಈ ರೀತಿ ಬರಬಾರದು. ಆದರೆ ಒಂದು ಸತ್ಯಾಂಶ ಗೊತ್ತಾಗಿದ್ದು ಏನೆಂದರೆ ಕೂಲಿ ಮಾಡುವವರ ಸಂಖ್ಯೆ ಹೆಚ್ಚಿದ್ದು ಕೂಲಿ ಮಾಡುವವರ ಸಂಬಳವನ್ನು ವಾರ್ಷಿಕ ಲೆಕ್ಕ ಹಾಕಿದರೆ ಎರಡು ಲಕ್ಷಕ್ಕಿಂತಲು ಹೆಚ್ಚು ಇರುವುದು ಕಾಣುತ್ತೇವೆ. ಕನಿಷ್ಟ ೨೦೦-೩೦೦ ರೂ ದಿನ ಒಂದಕ್ಕೆ ಸಂಬಳ ಪಡೆಯುತ್ತಿದ್ದಾರೆ. ಹೀಗಾಗಿ ಈ ಆವರ್ತನದಲ್ಲಿ ಬಂದಿರುವುದನ್ನು ಕಾಣುತ್ತೇವೆ. ಅತ್ಯಂತ ಕೆಳಮಟ್ಟದ ಕಷ್ಟಕರ ಜೀವನ ಸಾಗಿಸುವ ಒಂದು ವರ್ಗವೆಂದರೆ ಅದು ರೈತರು. ಕೆಲವೊಂದು ಸಾರಿ ಅವರು ಕೂಡ ಕೃಷಿಯನ್ನು ಬಿಟ್ಟು ಕೂಲಿ ಕೆಲಸಕ್ಕೆ ತೆರಳುತ್ತಿದ್ದಾರೆ. ಏಕೆಂದರೆ ಕೃಷಿಯನ್ನು ನಂಬಿ ಜೀವನವನ್ನು ಸಾಗಿಸುವುದು ಕಷ್ಟವಾಗುತ್ತಿದೆ. ಮನೆಯಲ್ಲಿ ಒಬ್ಬರಾದರು ಕೂಲಿ ಕೆಲಸಕ್ಕೆ ಹೋಗುತ್ತಿರುವುದನ್ನು ಕಾಣುತ್ತೇವೆ. ಕೆಲವೊಂದಿಷ್ಟು ಜನರ ವಾರ್ಷಿಕ ಆದಾಯ ನೋಡಿದಾಗ ಇವರು ಇಷ್ಟು ಆದಾಯದಲ್ಲಿ ಹೇಗೆ ಬದಕುತ್ತಿದ್ದಾರೆ ಎನ್ನುವ ಪ್ರಶ್ನೆ ಮೂಡುತ್ತದೆ. ಇನ್ನೂ ಕೆಲವರ ಆದಾಯವನ್ನು ನೋಡಿದಾಗ ಇಷ್ಟು ಅದಾಯವನ್ನು ಇವರು ಹೇಗೆ ಗಳಿಸುತ್ತಾರೆ ಎನ್ನುವ ಪ್ರಶ್ನೆ ಮೂಡುತ್ತದೆ. ಕೊಪ್ಪಳ ನಗರದಲ್ಲಿ ಎಲ್ಲಾ ರೀತಿಯ ಜನ ಬದುಕುತ್ತಿದ್ದಾರೆ. ಕುಟುಂಬದ ಆದಾಯ ಹೆಚ್ಚಿದಂತೆ ನಗರದ ಬೆಳವಣಿಗೆ ಹೆಚ್ಚಾಗುತ್ತದೆ. ಅಂದರೆ ಅಭಿವೃದ್ಧಿಯತ್ತ ಸಾಗುತ್ತದೆ, ಅದೇ ನಗರದಲ್ಲಿ ಬಡತನ ತಾಂಡವಾಡಿದರೆ ನಗರ

ಹಿಂದುಳಿಯುತ್ತದೆ. ನಗರದಲ್ಲಿರುವ ಜನರ ಆದಾಯ ಹೆಚ್ಚಿದಂತೆ ನಗರಕ್ಕೆ ಅದು ಒಳ್ಳೆಯ ಬೆಳವಣಿಗೆ, ಎಲ್ಲಾ ಸ್ಥಾನಮಾನಗಳು ಹೆಚ್ಚುತ್ತವೆ, ಅನೇಕ ಸಕಾರಾತ್ಮಕ ಬದಲಾವಣೆಗಳಾಗುತ್ತವೆ. ನಮ್ಮ ದೇಶದಲ್ಲಿ ಇರುವಂತೆ ಇಲ್ಲಿಯೂ ಕೂಡಾ ತೀರಾ ಬಡವರು, ತೀರಾ ಶ್ರೀಮಂತರು ಇದ್ದಾರೆ. ಒಟ್ಟಿನಲ್ಲಿ ನಗರದ ಆದಾಯ ಹೆಚ್ಚಿದರೆ ನಗರಕ್ಕೆ ಒಳ್ಳೆಯದು, ಕಡಿಮೆ ಇದ್ದರೆ ನಗರಕ್ಕೆ ಕೆಟ್ಟದ್ದು. ಹೀಗಾಗಿ ಜನರ ಆದಾಯ ಹೆಚ್ಚುವಂತೆ ಮಾಡಲು ಸರಕಾರ ಕೂಡ ಪ್ರಯತ್ನಿಸಬೇಕು.

೭.೨.೭.ಆ. ನಗರದಲ್ಲಿ ವಾಸಿಸುವ ಕುಟುಂಬದ ಒಟ್ಟು ಖರ್ಚು

ಖರ್ಚಿನ ಪ್ರಮಾಣ	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
೧-೨೫ ಸಾವಿರ	೦೭	೦೩
೨೫-೫೦ ಸಾವಿರ	೧೪	೦೬
೫೦ ಸಾವಿರದಿಂದ ೧ ಲಕ್ಷ	೩೩	೧೫
೧-೨ ಲಕ್ಷ	೭೫	೩೩
೨-೫ ಲಕ್ಷ	೮೭	೩೯
೫ ಲಕ್ಷಕ್ಕಿಂತ ಹೆಚ್ಚು	೦೯	೦೪
ಒಟ್ಟು	೨೨೫	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಕುಟುಂಬದ ಖರ್ಚಿನ ವಿವರವನ್ನು ಕೇಳಿದಾಗ ಬಂದ ಉತ್ತರ ೧-೨೫ ಸಾವಿರ ಶೇ.೩ ರಷ್ಟು, ೨೫-೫೦ ಸಾವಿರ ಶೇ.೬ ರಷ್ಟು, ೫೦ ಸಾವಿರದಿಂದ ೧ ಲಕ್ಷ ಶೇ.೧೫ ರಷ್ಟು, ೧-೨ ಲಕ್ಷ ಶೇ.೩೩ ರಷ್ಟು, ೨-೫ ಲಕ್ಷ ಶೇ. ಶೇ.೩೯ ರಷ್ಟು, ೫ ಲಕ್ಷಕ್ಕಿಂತ ಹೆಚ್ಚು ಶೇ.೪ ರಷ್ಟು, ಇಲ್ಲಿ ಗಮನಿಸುವ ಅಂಶವೆಂದರೆ ಆದಾಯಕ್ಕೆ ಅನುಗುಣವಾಗಿ ಖರ್ಚು ಕೂಡಾ ಇರುವುದು, ಅತಿ ಹೆಚ್ಚು ಅಂದರೆ ೨-೫ ಲಕ್ಷ. ಇಲ್ಲಿ ಒಂದನ್ನು ಗಮನಿಸಬೇಕು ಸಾಮಾನ್ಯವಾಗಿ ಜನ ಎಷ್ಟು ಗಳಿಸುತ್ತಾರೆ ಅಷ್ಟು ಖರ್ಚು ಮಾಡುತ್ತಾರೆ. ಇಲ್ಲಿ ಕೆಲವೊಂದು ಕುಟುಂಬಗಳು ತಾವು ಗಳಿಸಿದ ಎಲ್ಲಾ ಆದಾಯವನ್ನು ಖರ್ಚು ಮಾಡುತ್ತಿದ್ದಾರೆ. ಅಂದರೆ ಅವರ ಪರಿಸ್ಥಿತಿ ಅದೇ ರೀತಿ ಇದೆ. ಅಷ್ಟೇ ಅಲ್ಲದೆ ಕೆಲವರು ಸಾಲವನ್ನು ಮಾಡಿ ಬದುಕುತ್ತಿದ್ದಾರೆ. ಬಡವರು ತಮ್ಮ ಹೊಟ್ಟೆಯನ್ನು ತುಂಬಿಕೊಳ್ಳಲು ಖರ್ಚು ಮಾಡುತ್ತಿದ್ದಾರೆ, ಶ್ರೀಮಂತರು ಐಷಾರಾಮಿ ಜೀವನ ನಡೆಸಲು ಖರ್ಚು ಮಾಡುತ್ತಿದ್ದಾರೆ. ಕೆಲವು ಜನರಿಗೆ ತುರ್ತು ಸಂದರ್ಭಗಳು ಬಂದಾಗ ಹಣವಿರುವುದಿಲ್ಲ ಎನ್ನುವ ಮಾತನ್ನು ಕೇಳಿದ್ದೇವೆ. ಹೆಚ್ಚು ಖರ್ಚು ಮಾಡುವ ಮನೋಭಾವದವರು ಹೆಚ್ಚಾಗಿ ಕಂಡು ಬರುತ್ತಾರೆ ಖರ್ಚನ್ನು ಕಡಿಮೆ ಮಾಡಿ ಉಳಿತಾಯವನ್ನು ಮಾಡಬೇಕಾದ ಅನಿವಾರ್ಯತೆ ಇರುವುದನ್ನು ಕಾಣುತ್ತೇವೆ.

೭.೨.೭೩. ನಗರದಲ್ಲಿ ವಾಸಿಸುವ ಕುಟುಂಬದ ಒಟ್ಟು ಉಳಿತಾಯ

ಉಳಿತಾಯದ ಪ್ರಮಾಣ	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
೧-೨೫ ಸಾವಿರ	೨೨	೧೦
೨೫-೫೦ ಸಾವಿರ	೪೪	೧೯
೫೦ ಸಾವಿರದಿಂದ ೧ ಲಕ್ಷ	೬೬	೨೯
೧-೨ ಲಕ್ಷ	೪೪	೧೯.೫
೨-೫ ಲಕ್ಷ	೨೪	೧೧
೫ ಲಕ್ಷಕ್ಕಿಂತ ಹೆಚ್ಚು	೦೧	೦.೫
ಇಲ್ಲ	೨೪	೧೧
ಒಟ್ಟು	೨೨೫	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಕುಟುಂಬದ ಉಳಿತಾಯವನ್ನು ಪ್ರಶ್ನಿಸಿದಾಗ ೧-೨೫ ಸಾವಿರ ಶೇ.೧೦ ರಷ್ಟು, ೨೫-೫೦ ಸಾವಿರ ಶೇ.೧೯ ರಷ್ಟು, ೫೦ ಸಾವಿರದಿಂದ ೧ ಲಕ್ಷ ಶೇ.೨೯ ರಷ್ಟು, ೧-೨ ಲಕ್ಷ ಶೇ.೧೯.೫ ರಷ್ಟು, ೨-೫ ಲಕ್ಷ ಶೇ. ಶೇ.೧೧ ರಷ್ಟು, ೫ ಲಕ್ಷಕ್ಕಿಂತ ಹೆಚ್ಚು ಶೇ.೦.೫ ರಷ್ಟು, ಇಲ್ಲಿ ಗಮನಿಸುವ ಅಂಶವೆಂದರೆ ಉಳಿತಾಯ ಎನ್ನುವುದು ಸ್ವಾಭಾವಿಕ ಪ್ರಕ್ರಿಯೆಯಾಗಿದೆ ಅತಿ ಹೆಚ್ಚು ಅಂದರೆ ೫೦ ಸಾವಿರದಿಂದ ೧ ಲಕ್ಷವಿದೆ. ಅಂದರೆ ಈ ಪ್ರಮಾಣದಲ್ಲಿ ಜನ ಹೆಚ್ಚು ಉಳಿತಾಯ ಮಾಡುವುದು ಕಂಡುಬರುತ್ತದೆ. ಸಾಮಾನ್ಯವಾಗಿ ತಮ್ಮ ಆದಾಯದ ಶೇ. ೨೦ ಅಥವಾ ೩೦ ರಷ್ಟು ಉಳಿತಾಯ ಮಾಡುತ್ತಿದ್ದಾರೆ. ಶೇ. ೧೧ ರಷ್ಟು ಜನ ಯಾವುದೇ ಉಳಿತಾಯವನ್ನು ಮಾಡುತ್ತಿಲ್ಲ ಕಾರಣ ತಿಳಿದುಕೊಂಡಾಗ ಬದುಕಲಿಕ್ಕೆ ಹಣ ಸಾಕಾಗುತ್ತಿಲ್ಲ ಎನ್ನುತ್ತಾರೆ ಈ ಸಾಲಿನಲ್ಲಿ ಹೆಚ್ಚು ರೈತಾಪಿ ವರ್ಗದವರು ಬರುತ್ತಾರೆ ಇವರ ಉಳಿತಾಯ ಶೂನ್ಯವಾಗಿದ್ದು ಸಾಲದಲ್ಲಿ ಮುಳುಗಿದ್ದಾರೆ. ಉಳಿತಾಯ ಎನ್ನುವುದು ಅನಿವಾರ್ಯ ಸಂಗತಿಯಾಗಿದ್ದು ಕಷ್ಟಕಾಲದಲ್ಲಿ ಸಹಾಯಕ್ಕೆ ಬರುತ್ತದೆ. ಉಳಿತಾಯ ಮಾಡಬೇಕೆಂದರೆ, ಆದಾಯ ಹೆಚ್ಚಾಗಬೇಕು, ಆದಾಯ ಹೆಚ್ಚಾಗಬೇಕೆಂದರೆ, ಉದ್ಯೋಗ ಹೆಚ್ಚಾಗಬೇಕು, ಉದ್ಯೋಗ ಹೆಚ್ಚಾಗಬೇಕು ಅಥವಾ ಸಿಗಬೇಕೆಂದರೆ ಪ್ರಯತ್ನಗಳು ನಡೆಯಬೇಕು ಪರಿಶ್ರಮ ಪಡಬೇಕಾಗುತ್ತದೆ ಈ ದಿಸೆಯಲ್ಲಿ ಸಾಗಬೇಕಾದ ಅನಿವಾರ್ಯತೆ ಇರುವುದನ್ನು ಕಾಣುತ್ತೇವೆ.

೭.೨.೮.ಅ. ನಗರದಲ್ಲಿ ವಾಸಿಸುವವರ ಕುಟುಂಬದ ಸಾಲದ ವಿವರಗಳು

ಸಾಲದ ಪ್ರಮಾಣ	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
೧-೨೫ ಸಾವಿರ	೧೬	೨೨
೨೫-೫೦ ಸಾವಿರ	೦೪	೦೬
೫೦ ಸಾವಿರದಿಂದ ೧ ಲಕ್ಷ	೦೫	೦೭
೧-೨ ಲಕ್ಷ	೦೮	೧೧
೨-೫ ಲಕ್ಷ	೧೮	೨೫
೫ ಲಕ್ಷಕ್ಕಿಂತ ಹೆಚ್ಚು	೨೧	೨೯
ಒಟ್ಟು	೭೨	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

೭.೨.೮.ಆ. ನಗರದ ಜನರ ಸಾಲದ ಕಾರಣಗಳು

ಸಾಲದ ಕಾರಣಗಳು	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
ಮನೆ ಕಟ್ಟಲು	೨೮	೩೯
ವ್ಯಾಪಾರಕ್ಕೆ	೧೩	೧೮
ಮನೆಯ ಅಡಚಣೆ	೧೨	೧೭
ಚಿಕಿತ್ಸೆಗಾಗಿ	೦೧	೦೧
ಇತರೆ	೧೮	೨೫
ಒಟ್ಟು	೭೨	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಸಾಲದ ವಿವರಗಳನ್ನು ಪ್ರಶ್ನಿಸಿದಾಗ ೧-೨೫ ಸಾವಿರ ಶೇ.೨೨ ರಷ್ಟು, ೨೫-೫೦ ಸಾವಿರ ಶೇ.೬ ರಷ್ಟು, ೫೦ ಸಾವಿರದಿಂದ ೧ ಲಕ್ಷ ಶೇ.೭ ರಷ್ಟು, ೧-೨ ಲಕ್ಷ ಶೇ.೧೧ ರಷ್ಟು, ೨-೫ ಲಕ್ಷ ಶೇ. ಶೇ.೨೫ ರಷ್ಟು, ೫ ಲಕ್ಷಕ್ಕಿಂತ ಹೆಚ್ಚು ಶೇ.೨೯ ರಷ್ಟು ಇರುವುದು ತಿಳಿಯಿತು. ಇಲ್ಲಿ ಗಮನಿಸುವ ಅಂಶವೆಂದರೆ ಅತಿ ಹೆಚ್ಚು ಸಾಲ ಹೊಂದಿದ ಮೊತ್ತ ೫ ಲಕ್ಷಕ್ಕಿಂತ ಹೆಚ್ಚು ಅಂದರೆ ಇಲ್ಲಿ ಶ್ರೀಮಂತರು ಹೆಚ್ಚು ಹೆಚ್ಚು ಸಾಲ ಮಾಡುತ್ತಿದ್ದಾರೆ, ಬಡವರು ತಮ್ಮ ವ್ಯಾಪ್ತಿಯಲ್ಲಿಯೇ ಸಾಲ ಮಾಡುತ್ತಿದ್ದಾರೆ, ಶ್ರೀಮಂತರು ಆಸ್ತಿಯನ್ನು ಮಾಡಲು ಸಾಲ ಮಾಡಿದರೆ ಬಡವರು ತಮ್ಮ ಜೀವನವನ್ನು ಸಾಗಿಸಲು ಮತ್ತು ಮದುವೆ, ಹಬ್ಬ ಹರಿದಿನಗಳಿಗೆ ಖರ್ಚು ಮಾಡುತ್ತಿರುವುದನ್ನು ಕಾಣುತ್ತೇವೆ. ಒಟ್ಟು ೨೨೫ ಕುಟುಂಬಗಳಲ್ಲಿ ೭೨ ಕುಟುಂಬಗಳು ಮಾತ್ರ ಸಾಲ ಮಾಡಿರುವುದನ್ನು

ಕಾಣುತ್ತೇವೆ. ಜನ ಸಾಲದಿಂದ ದೂರವಿರಲು ಪ್ರಯತ್ನಿಸುತ್ತಿರುವುದು ಕಂಡುಬರುತ್ತದೆ. ಕೆಲವರು ಅನಿವಾರ್ಯ ಕಾರಣಗಳಿಗೆ ಸಾಲ ಮಾಡಿರುವರು, ಇವತ್ತಿನ ದಿನಗಳಲ್ಲಿ ಸಾಲಗಳು ಸುಲಭವಾಗಿ ಸಿಗುತ್ತಿವೆ, ಕೊಪ್ಪಳ ನಗರದಲ್ಲಿ ನೋಡಿದಾಗ ಫೈನಾನ್ಸ್‌ಗಳು ತುಂಬಾ ಇರುವುದನ್ನು ಕಾಣುತ್ತೇವೆ. ಇದೊಂದು ದೊಡ್ಡ ವ್ಯವಹಾರವಾಗಿದೆ, ಹೆಚ್ಚಿನ ಬಡ್ಡಿ ದರವನ್ನು ವಿಧಿಸಿ ಸುಲಭವಾಗಿ ಸಾಲ ನೀಡುತ್ತಿದ್ದಾರೆ. ಇದರ ಕುರಿತು ನಗರಾಡಳಿತವು ಗಮನಹರಿಸುವ ಅವಶ್ಯಕತೆ ಇದೆ ಇದನ್ನು ನಿಯಂತ್ರಿಸಬೇಕು.

ಸಾಲದ ಕಾರಣಗಳನ್ನು ಕೇಳಿದಾಗ ಮನೆ ಕಟ್ಟಲು ಶೇ.೩೯ ರಷ್ಟು, ವ್ಯಾಪರಕ್ಕೆ ಶೇ.೧೮ ರಷ್ಟು, ಮನೆಯ ಅಡಚಣೆಗೆ ಶೇ.೧೭ ರಷ್ಟು, ಚಿಕಿತ್ಸೆಗಾಗಿ ಶೇ.೧ ರಷ್ಟು, ಇತರೆ ಶೇ.೨೫ ರಷ್ಟು, ಇಲ್ಲಿ ಗಮನಿಸುವ ಅಂಶವೆಂದರೆ ಅತಿ ಹೆಚ್ಚು ಸಾಲವನ್ನು ಜನ ಮನೆಕಟ್ಟಲು ಮಾಡಿದ್ದಾರೆ. ಶ್ರೀಮಂತರು ಮತ್ತು ಮಧ್ಯಮ ವರ್ಗದವರು ಈ ಸಾಲವನ್ನು ಮಾಡಿರುವುದನ್ನು ಕಾಣುತ್ತೇವೆ. ಇತರೆ ಕಾರಣಗಳಲ್ಲಿ ಜನ ಹೆಚ್ಚು ಮದುವೆಗಳಿಗೆ ಸಾಲ ಮಾಡಿಕೊಂಡಿದ್ದಾರೆ ಅನವಶ್ಯವಾಗಿ ದುಂದು ವೆಚ್ಚ ಮಾಡಿ ನಂತರ ಆ ಸಾಲ ತೀರಿಸಲು ಪರಿತಪಿಸಿದ ಉದಾಹರಣೆಗಳನ್ನು ಕಾಣುತ್ತೇವೆ. ಇನ್ನು ಬಡವರು ಮನೆಯ ಅಡಚಣೆಗಾಗಿ ಸಾಲ ಮಾಡುತ್ತಿದ್ದಾರೆ, ಸಾಲಗಳು ಲಾಭ ತರುವಂತಿರಬೇಕು ಅದನ್ನು ಬಿಟ್ಟು ಅವು ಮಾರಕವಾಗಬಾರದು ಸಾಲವನ್ನು ಅವರವರ ಸಾಮರ್ಥ್ಯವನ್ನು ಅರಿತು ಮಾಡಬೇಕು ಎನ್ನುವುದು ನಮ್ಮ ಆಶಯವಾಗಿದೆ.

೭.೨೯. ಕೊಪ್ಪಳ ನಗರದ ಜನರ ಇಂಧನದ ಮೂಲ

ಅ. ನಗರದಲ್ಲಿ ಜನರು ಮನೆ ಬೆಳಗಲು ಬಳಸುವ ಇಂಧನಗಳು

ಇಂಧನದ ಪ್ರಕಾರಗಳು	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
ವಿದ್ಯುತ್	೨೨೫	೧೦೦
ಸೋಲಾರ್	೦೦	೦೦
ಸೀಮೆ ಎಣ್ಣೆ	೦೦	೦೦
ಇತರೆ	೦೦	೦೦
ಒಟ್ಟು	೨೨೫	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಆ. ನಗರದಲ್ಲಿ ಜನರು ಅಡುಗೆ ಕೆಲಸಕ್ಕೆ ಬಳಸುವ ಇಂಧನಗಳು.

ಇಂಧನದ ಪ್ರಕಾರಗಳು	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
ವಿದ್ಯುತ್	೦೦	೦೦
ಗ್ಯಾಸ	೧೫೫	೬೯
ಸೀಮೆ ಎಣ್ಣೆ	೨೧	೦೯
ಇತರೆ	೪೯	೨೨
ಒಟ್ಟು	೨೨೫	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಮನೆ ಬೆಳಗಲು ಯಾವ ಇಂಧನ ಬಳಸುತ್ತೀರಿ ಎಂದು ಪ್ರಶ್ನಿಸಿದಾಗ ವಿದ್ಯುತ ಶೇ.೧೦೦ ರಷ್ಟು, ಇತರೆ ಶೂನ್ಯ ಇಲ್ಲಿ ಗಮನಿಸುವ ಅಂಶವೆಂದರೆ ೨೨೫ಕ್ಕೆ ೨೨೫ ಜನ ವಿದ್ಯುತನ್ನೇ ಬಳಸುತ್ತಿದ್ದಾರೆ ಎಲ್ಲರಿಗೂ ವಿದ್ಯುತನ್ನು ಒದಗಿಸಲಾಗಿದೆ ಮತ್ತು ಎಲ್ಲರೂ ಇದನ್ನು ಬಳಸಲು ಆಸಕ್ತರಿರುವುದನ್ನು ಕಾಣುತ್ತೇವೆ ಮತ್ತು ಇದು ಅನಿವಾರ್ಯ ಸಂಗತಿಯಾಗಿದೆ ಇಂದಿನ ಎಲ್ಲ ಕೆಲಸಗಳಿಗೆ ವಿದ್ಯುತನ್ನು ಬಳಸುತ್ತಿರುವುದನ್ನು ಕಾಣುತ್ತೇವೆ. ಇದು ಕಡಿಮೆ ದರದಲ್ಲಿ ಮತ್ತು ಸುಲಭವಾಗಿ ಬಳಸಬಹುದು ಇದು ಪರಿಸರ ದೃಷ್ಟಿಯಿಂದಲೂ ಒಳ್ಳೆಯದಾಗಿದೆ, ನಗರದ ಒಳ್ಳೆಯ ಬೆಳವಣಿಗೆಯಾಗಿದೆ.

ಅಡುಗೆ ಕೆಲಸಕ್ಕೆ ಯಾವ ಇಂಧನವನ್ನು ಬಳಸುತ್ತೀರಿ ಎಂದು ಪ್ರಶ್ನಿಸಿದಾಗ ವಿದ್ಯುತ ಶೂನ್ಯ, ಗ್ಯಾಸ(ಅಡುಗೆ ಅನಿಲ) ಶೇ.೬೯ ರಷ್ಟು, ಸೀಮೆ ಎಣ್ಣೆ ಶೇ.೯ ರಷ್ಟು, ಇತರೆ ಶೇ.೨೨ ರಷ್ಟು ಬಳಸುತ್ತಿದ್ದಾರೆ. ಇಲ್ಲಿ ಗಮನಿಸುವ ಅಂಶವೆಂದರೆ ಇತ್ತೀಚಿನ ದಿನಗಳಲ್ಲಿ ಹೆಚ್ಚು ಜನ ಗ್ಯಾಸನ್ನು ಅವಲಂಬಿಸಿದ್ದಾರೆ. ಪರಿಸರ ಮಾಲಿನ್ಯ ದೃಷ್ಟಿಯಿಂದ ಒಳ್ಳೆಯ ಬೆಳವಣಿಗೆ, ನಗರದಲ್ಲಿ ಕೆಲವರು ಕಟ್ಟಿಗೆಯನ್ನು ಬಳಸುತ್ತಿದ್ದಾರೆ, ವಿದ್ಯುತನ್ನು ಕೂಡಾ ಬಳಸುವಂತಾಗಬೇಕು. ಸರಕಾರವು ಇಂದು ಉಜ್ವಲ್ ಯೋಜನೆ ಮೂಲಕ ಎಲ್ಲರಿಗೂ ಅಡುಗೆ ಅನಿಲವನ್ನು ಒದಗಿಸುತ್ತಿದ್ದರೂ ಪೂರ್ಣ ಪ್ರಮಾಣದಲ್ಲಿ ಇದು ಯಶಸ್ವಿಯಾಗಿಲ್ಲ ಕಾರಣ ಹುಡಿಕಿದಾಗ ಅವರು ಒಂದು ಸಲ ಮಾತ್ರ ನೀಡುತ್ತಾರೆ ನಂತರದಲ್ಲಿ ಅವರೇ ಅದನ್ನು ತುಂಬಿಸಿಕೂಳ್ಳಬೇಕು ಇಲ್ಲಿ ಸರಕಾರ ಬಡಕುಟುಂಬಗಳಿಗೆ ಕಡಿಮೆ ದರದಲ್ಲಿ ಮರು ವಿತರಣೆ ಮಾಡಬೇಕು ಅಂದಾಗ ಇದು ಯಶಸ್ವಿಯಾಗಬಹುದು. ಒಟ್ಟಿನಲ್ಲಿ ಹೆಚ್ಚು ಜನ ಪರಿಸರ ಸ್ನೇಹಿ ಇಂಧನವನ್ನು ಬಳುಸುವಂತಾಗಬೇಕು, ಆ ದಿಸೆಯಲ್ಲಿ ಸರಕಾರಗಳು ಪ್ರಯತ್ನಿಸಬೇಕು.

೭.೩ ಕೊಪ್ಪಳ ನಗರದ ಜನರ ಮನೋರಂಜನಾ ವಿವರಗಳು

೭.೩.೧. ನಗರದ ಜನ ಆಚರಿಸುವ ಹಬ್ಬಗಳ ಸಂಖ್ಯೆ

ಹಬ್ಬಗಳ ಸಂಖ್ಯೆ	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
೧-೪	೨೩	೧೦
೫-೬	೧೬೮	೭೫
೭-೧೦	೩೦	೧೩
೧೧-೧೨	೦೦	೦೦
೧೨ ಕ್ಕಿಂತ ಹೆಚ್ಚು	೦೦	೦೦
ಇಲ್ಲ	೦೪	೦೨
ಒಟ್ಟು	೨೨೫	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಆಚರಿಸುವ ಹಬ್ಬಗಳ ಸಂಖ್ಯೆಯನ್ನು ಕೇಳಿದಾಗ ೧-೪ ಶೇ.೧೦ರಷ್ಟು, ೫-೬ ಶೇ.೭೫ರಷ್ಟು, ೭-೧೦ ಶೇ.೧೩ರಷ್ಟು, ಇಲ್ಲ ಎಂದವರು ಶೇ.೨ರಷ್ಟು. ಇಲ್ಲಿ ಗಮನಿಸುವ ಸಂಗತಿಗಳೆಂದರೆ ಇಲ್ಲಿ ಹಬ್ಬಗಳನ್ನು ಶ್ರೀಮಂತಿಕೆಯ ಆಧಾರದ ಮೇಲೆ ಹೆಚ್ಚಾನುಹೆಚ್ಚು ಆಚರಿಸುತ್ತಿದ್ದಾರೆ. ಆದರೆ ಕೆಲವು ಬಡವರು ಕೂಡಾ ಹಬ್ಬಗಳ ವಿಚಾರದಲ್ಲಿ ಹಿಂದೆ ಬಿದ್ದಿಲ್ಲ. ಇತ್ತೀಚಿನ ದಿನಗಳಲ್ಲಿ ಹಬ್ಬಗಳನ್ನು ಆಚರಿಸುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಅತಿ ಹೆಚ್ಚು ಎಂದರೆ ೫-೬ ಹಬ್ಬಗಳನ್ನು ವರ್ಷಕ್ಕೆ ಆಚರಿಸುತ್ತಿದ್ದಾರೆ. ಶ್ರೀಮಂತರು ಹೆಚ್ಚು ಹೆಚ್ಚು ಹಬ್ಬಗಳನ್ನು ಹೆಚ್ಚು ವಿಶೇಷವಾಗಿ ಆಚರಿಸುತ್ತಿದ್ದಾರೆ. ಬಡವರು ಸಾಧಾರಣವಾಗಿ ಆಚರಿಸುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಶ್ರೀಮಂತರು ಹೊಸ ಹೊಸ ಹಬ್ಬಗಳನ್ನು ತಮ್ಮ ಪ್ರತಿಷ್ಠೆಗಾಗಿ ಕೂಡಾ ಆಚರಿಸುವುದನ್ನು ಕಾಣುತ್ತೇವೆ ಮತ್ತು ದೇವರುಗಳು ಕೂಡಾ ಬದಲಾವಣೆ ಹೊಂದಿದ್ದನ್ನು ಕಾಣುತ್ತೇವೆ. ಒಟ್ಟಿನಲ್ಲಿ ಹಬ್ಬಗಳ ಸ್ವರೂಪ ಬದಲಾವಣೆ ಹೊಂದಿದ್ದನ್ನು ಕಾಣುತ್ತೇವೆ. ತೀರಾ ಹಿಂದುಳಿದ ಪ್ರದೇಶದಲ್ಲಿ ಒಂದು ಅಥವಾ ಎರಡು ಹಬ್ಬಗಳನ್ನು ಆಚರಿಸುತ್ತಿದ್ದಾರೆ. ಹಿಂದಿನ ಸಂಸ್ಕೃತಿ ನಶಿಸಿ ಹೋಗುವುದನ್ನು ತಡೆಯಬೇಕಾಗಿದೆ. ಕೆಲವೊಂದಿಷ್ಟು ಜನ ಯಾವುದೇ ಹಬ್ಬಗಳನ್ನು ಆಚರಿಸುವುದಿಲ್ಲ ಎಂದು ಅಧ್ಯಯನದ ಮೂಲಕ ಕಂಡುಕೊಳ್ಳುತ್ತೇವೆ. ಒಟ್ಟಿನಲ್ಲಿ ನಮ್ಮ ಸಂಸ್ಕೃತಿ ಹಬ್ಬ ಹರಿದಿನಗಳನ್ನು ಆಚರಿಸುವುದು ನಿರಂತರವಾಗಿ ನಡೆಯಬೇಕು, ಸಂಸ್ಕೃತಿ ಉಳಿಯಬೇಕು, ಬೆಳೆಯಬೇಕು.

೭.೩.೨. ನಗರದ ಜನರು ಮದುವೆಯಲ್ಲಿ ಪಾಲ್ಗೊಳ್ಳುವುದರ ವಿವರ.

ಪಾಲ್ಗೋಳ್ಳುವವರ ಸಂಖ್ಯೆ	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
೧–೪	೪೯	೨೨
೫–೭	೧೭೩	೭೭
೮–೧೦	೦೩	೦೧
೧೧–೧೨	೦೦	೦೦
೧೨ ಕ್ಕಿಂತ ಹೆಚ್ಚು	೦೦	೦೦
ಒಟ್ಟು	೨೨೫	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಮದುವೆಯಲ್ಲಿ ಪಾಲ್ಗೊಳ್ಳುವುದರ ಕುರಿತು ಪ್ರಶ್ನೆ ಕೇಳಿದಾಗ ೧–೪ ಶೇ.೨೨ ರಷ್ಟು, ೫–೭ ಶೇ,೭೭ ರಷ್ಟು, ೮–೧೦ ಶೇ.೧ ರಷ್ಟು ಭಾಗವಹಿಸುತ್ತಾರೆ ಇಲ್ಲಿ ಗಮನಿಸುವ ಅಂಶವೆಂದರೆ ಇದು ಕೂಡಾ ಆರ್ಥಿಕತೆಯನ್ನು ಆಧರಿಸಿದೆ. ಶ್ರೀಮಂತರು ಹೆಚ್ಚೆಚ್ಚು, ಬಡವರು ಕಡಿಮೆ ಮದುವೆಗಳಲ್ಲಿ ಭಾಗವಹಿಸುತ್ತಾರೆ. ನಗರಗಳಲ್ಲಿ ಮತ್ತು ಹಳ್ಳಿಗಳಲ್ಲಿ ಮದುವೆಯ ಸ್ವರೂಪ ಬದಲಾವಣೆ ಇರುವುದನ್ನು ನೋಡುತ್ತೇವೆ. ಸಾಲ ಮಾಡಿ ಮದುವೆ ಮಾಡುವವರ ಸಂಖ್ಯೆ ಹೆಚ್ಚಿದೆ. ತಮ್ಮ ಇಡೀ ಜೀವಿತಾವಧಿಯಲ್ಲಿ ದುಡಿದ ಹಣವನ್ನು ಮಕ್ಕಳ ಮದುವೆಗಾಗಿ ಖರ್ಚು ಮಾಡುತ್ತಿದ್ದಾರೆ. ಮತ್ತು ಕೆಲವರು ಸಾಲವನ್ನು ಮಾಡಿ ಮದುವೆಯಾಗಿ ೫ ರಿಂದ ೧೦ ವರ್ಷಗಳ ಕಾಲ ಸಾಲವನ್ನು ತೀರಿಸುವಲ್ಲಿ ಕಷ್ಟಪಡುವುದನ್ನು ಕಾಣುತ್ತೇವೆ. ಇದು ಒಂದು ರೀತಿಯ ಜಿದ್ದಾಜಿದ್ದಿಗೆ ಬಿದ್ದಿರುವುದರಿಂದ ಹೆಚ್ಚು ಹೆಚ್ಚು ಸಾಲಗಳು ಆಗುತ್ತಿವೆ, ಅನಾವಶ್ಯಕವಾಗಿ ಖರ್ಚು ಮಾಡುತ್ತಿದ್ದಾರೆ. ಈ ರೀತಿಯ ಖರ್ಚುಗಳು ಕಡಿಮೆಯಾಗಬೇಕು, ಇನ್ನೂ ಕೆಲವರು ಅತ್ಯಂತ ಸರಳವಾಗಿ ಕೂಡಾ ವಿವಾಹವಾಗುತ್ತಿದ್ದಾರೆ. ಆದರೂ ಮದುವೆ ಎನ್ನುವದು ಸಾರ್ವತ್ರಿಕವಾದ ಕಾರ್ಯವಾಗಿರುವುದರಿಂದ ಬಿಡಲು ಸಾಧ್ಯವಾಗುವುದಿಲ್ಲ.

೭.೩.೩. ನಗರದ ಜನರ ಧಾರ್ಮಿಕ ಕ್ಷೇತ್ರದ ಭೇಟಿ

ಸಂಖ್ಯೆಯ ವಿವರ	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
೧–೨	೧೨೯	೫೭
೨–೫	೬೧	೨೭
೬–೮	೦೦	೦೦
೯–೧೦	೦೦	೦೦
೧೦ ಕ್ಕಿಂತ ಹೆಚ್ಚು	೦೦	೦೦
ಇಲ್ಲ	೩೫	೧೬
ಒಟ್ಟು	೨೨೫	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಧಾರ್ಮಿಕ ಕ್ಷೇತ್ರದ ಭೇಟಿ ಕುರಿತು ಪ್ರಶ್ನೆಯನ್ನು ಕೇಳಿದಾಗ ೧-೨ ಶೇ.೫೭ರಷ್ಟು, ೨-೫ ಶೇ.೨೭ರಷ್ಟು, ಇಲ್ಲ ಎಂದವರು ಶೇ.೧೬ರಷ್ಟು ಎನ್ನುವ ಉತ್ತರ ತಿಳಿಯಿತು. ಇಲ್ಲಿ ಗಮನಿಸುವ ಅಂಶವೆಂದರೆ ಇಲ್ಲಿಯೂ ಕೂಡಾ ಆರ್ಥಿಕ ಅಂಶ ಮಹತ್ವದ ಪಾತ್ರವಹಿಸುತ್ತದೆ. ಶ್ರೀಮಂತರು ಹೆಚ್ಚು, ಬಡವರು ಕಡಿಮೆ ಭೇಟಿ ನೀಡುತ್ತಾರೆ. ತೀರಾ ಬಡವರು ಭೇಟಿ ನೀಡುವುದೆ ಇಲ್ಲ. ಅತಿ ಹೆಚ್ಚು ೧-೨ ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ನೀಡಿರುವರು ಶೇ.೫೭ರಷ್ಟು ಜನ ಎಷ್ಟು ದೂರದಲ್ಲಿರುವ ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ನೀಡುತ್ತೀರಿ ಎಂದಾಗ ಹೆಚ್ಚು ಜನ ನಗರದ ಸುತ್ತಮುತ್ತಲಿನ ಪ್ರದೇಶಗಳಿಗೆ ಭೇಟಿ ನೀಡುತ್ತಾರೆ ಬಡವರಿಗೆ ಇದು ದೂರದ ಮಾತಾಗಿದೆ ಆದರೆ ಕೆಲವರು ಎಷ್ಟೇ ಬಡವರಿದ್ದರೂ ತಮ್ಮ ಮನೆ ದೇವತೆಗಳಿಗೆ ಸಾಲ ಮಾಡಿಯಾದರೂ ಹೋಗುವುದನ್ನು ಕಾಣುತ್ತೇವೆ. ಒಟ್ಟಿನಲ್ಲಿ ಹೆಚ್ಚಾಗಿ ಆರ್ಥಿಕ ಅಂಶವನ್ನು ಅವಲಂಬಿಸಿ ಇದು ನಿರ್ಧಾರವಾಗುತ್ತದೆ. ಆದರೆ ಶೇ. ೧೦೦ರಷ್ಟು ಹೀಗೆ ಎಂದು ಹೇಳಲಾಗುವುದಿಲ್ಲ, ಕೆಲವರು ಇದಕ್ಕೆ ವಿರುದ್ಧವಾಗಿದ್ದಾರೆ. ನಮ್ಮ ನಗರವು ಒಂದು ಧಾರ್ಮಿಕ ಕ್ಷೇತ್ರವಾಗಿದೆ ಹಾಗಾಗಿ ಇಲ್ಲಿ ಧರ್ಮನಿಷ್ಠರು ಹೆಚ್ಚಿದ್ದಾರೆ.

೭.೩.೪. ನಗರದ ಜನರ ಇತರೆ ಮನೋರಂಜನೆ ಚಟುವಟಿಕೆಯಲ್ಲಿ ಭಾಗವಹಿಸುವಿಕೆ.

ಮನೋರಂಜನಾವಿಧಗಳು	ಪ್ರತಿಕ್ರಿಯಿಸಿದವರ ಸಂಖ್ಯೆ			
ನಾಟಕ/ಸಣ್ಣಾಟ/ದೊಡ್ಡಾಟ	ಹಿರಿಯರು		ಯುವಕರು	
	ಹೌದು	ಇಲ್ಲ	ಹೌದು	ಇಲ್ಲ
	೧೧	೨೧೪	೧೩೧	೯೪
ಶೇಕಡಾವಾರು	೦೫	೯೫	೫೮	೪೨
ಮನೋರಂಜನಾವಿಧಗಳು	ಪ್ರತಿಕ್ರಿಯಿಸಿದವರ ಸಂಖ್ಯೆ			
ಸಿನೆಮಾ	ಹಿರಿಯರು		ಯುವಕರು	
	ಹೌದು	ಇಲ್ಲ	ಹೌದು	ಇಲ್ಲ
	೧೪	೨೧೧	೧೯೫	೩೦
ಶೇಕಡಾವಾರು	೦೬	೯೪	೮೭	೧೩
ಮನೋರಂಜನಾವಿಧಗಳು	ಪ್ರತಿಕ್ರಿಯಿಸಿದವರ ಸಂಖ್ಯೆ			
ಕ್ರೀಡೆ	ಹಿರಿಯರು		ಯುವಕರು	
	ಹೌದು	ಇಲ್ಲ	ಹೌದು	ಇಲ್ಲ
	೦೧	೨೨೪	೧೨೮	೯೭
ಶೇಕಡಾವಾರು	೦.೫	೯೯.೫	೫೭	೪೩

ಮನೋರಂಜನಾವಿಧಗಳು	ಪ್ರತಿಕ್ರಿಯಿಸಿದವರ ಸಂಖ್ಯೆ			
ಡಾನ್ಸ್	ಹಿರಿಯರು		ಯುವಕರು	
	ಹೌದು	ಇಲ್ಲ	ಹೌದು	ಇಲ್ಲ
	೦೦	೨೨೫	೧೬	೨೦೯
ಶೇಕಡಾವಾರು	೦೦	೧೦೦	೦೭	೯೩
ಮನೋರಂಜನಾವಿಧಗಳು	ಪ್ರತಿಕ್ರಿಯಿಸಿದವರ ಸಂಖ್ಯೆ			
ಸಂಗೀತ	ಹಿರಿಯರು		ಯುವಕರು	
	ಹೌದು	ಇಲ್ಲ	ಹೌದು	ಇಲ್ಲ
	೦೦	೨೨೫	೧೫	೨೧೦
ಶೇಕಡಾವಾರು	೦೦	೧೦೦	೦೭	೯೩
ಮನೋರಂಜನಾವಿಧಗಳು	ಪ್ರತಿಕ್ರಿಯಿಸಿದವರ ಸಂಖ್ಯೆ			
ಕ್ಲಬ್	ಹಿರಿಯರು		ಯುವಕರು	
	ಹೌದು	ಇಲ್ಲ	ಹೌದು	ಇಲ್ಲ
	೦೨	೨೨೩	೦೦	೨೨೫
ಶೇಕಡಾವಾರು	೦೧	೯೯	೦೦	೧೦೦
ಮನೋರಂಜನಾವಿಧಗಳು	ಪ್ರತಿಕ್ರಿಯಿಸಿದವರ ಸಂಖ್ಯೆ			
ಧಾರ್ಮಿಕ ಕಾರ್ಯ	ಹಿರಿಯರು		ಯುವಕರು	
	ಹೌದು	ಇಲ್ಲ	ಹೌದು	ಇಲ್ಲ
	೨೦೮	೧೭	೨೦೮	೧೭
ಶೇಕಡಾವಾರು	೯೩	೦೭	೯೩	೦೭

ಮೂಲ: ಕ್ಷೇತ್ರಕಾರ್ಯ ಆಧಾರಿತ.

ನಾಟಕ/ಸಣ್ಣಾಟ/ದೊಡ್ಡಾಟ ವನ್ನು ನೋಡುವವರು, ಹಿರಿಯರಲ್ಲಿ ಹೌದು ಎಂದವರು ಶೇ.೫ ರಷ್ಟು, ಇಲ್ಲ ಶೇ.೯೫ರಷ್ಟು, ಯುವಕರಲ್ಲಿ ಹೌದು ಎಂದವರು ಶೇ.೫೮, ಇಲ್ಲ ಎಂದವರು ಶೇ.೪೨ರಷ್ಟು, ಇಲ್ಲಿ ಗಮನಿಸುವ ಅಂಶವೆಂದರೆ ನಮ್ಮ ನಗರದಲ್ಲಿ ವಿಶೇಷವಾಗಿ ನಾಟಕಗಳು ನಡೆಯುತ್ತವೆ, ಈ ನಾಟಕಗಳಲ್ಲಿ ಹಿರಿಯರು ಭಾಗವಹಿಸುವ ಪ್ರಮಾಣ ಕಡಿಮೆ ಇದೆ, ಯುವಕರ

ಸಂಖ್ಯೆ ಹೆಚ್ಚಿದೆ, ಈ ನಾಟಕವನ್ನು ವಿಶೇಷವಾಗಿ ಮಧ್ಯಮ ಮತ್ತು ಹಿಂದುಳಿದ ವರ್ಗದ ಜನ ನೋಡುತ್ತಾರೆ. ನಾಟಕವೆಂದರೆ ಕೆಳಮಟ್ಟದ ಜನ ನೋಡುತ್ತಾರೆ ಎನ್ನುವ ಮನೋಭಾವ ಬೆಳೆದಿದೆ ಇದು ಬದಲಾಗಬೇಕು ಆದರೆ ಇತ್ತೀಚಿನ ದಿನಗಳಲ್ಲಿ ನಾಟಕಗಳ ಸ್ವರೂಪ ಕೂಡಾ ಬದಲಾದುದನ್ನು ಕಾಣುತ್ತೇವೆ. ಪೌರಾಣಿಕ, ಐತಿಹಾಸಿಕ ನಾಟಕಗಳು ಕಣ್ಮರೆಯಾದುದನ್ನು ಕಾಣುತ್ತೇವೆ.

ಸಿನೇಮಾವನ್ನು ನೋಡುವವರು, ಹಿರಿಯರಲ್ಲಿ ಹೌದು ಎಂದವರು ಶೇ.೬ ರಷ್ಟು, ಇಲ್ಲ ಎಂದವರು ಶೇ.೯೪ರಷ್ಟು ಯುವಕರಲ್ಲಿ ಹೌದು ಎಂದವರು ಶೇ.೮೭ರಷ್ಟು, ಇಲ್ಲ ಶೇ.೧೩ರಷ್ಟು, ಇಲ್ಲಿ ಗಮನಿಸುವ ಅಂಶವೆಂದರೆ, ಹಿರಿಯರಿಗಿಂತ ಯುವಕರು ಹೆಚ್ಚು ಸಿನೇಮಾವನ್ನು ನೋಡುತ್ತಿದ್ದಾರೆ. ಚಿಕ್ಕ ನಗರವಾದರೂ ಕೂಡಾ ೬ ಚಿತ್ರ ಮಂದಿರಗಳಿವೆ. ಹೀಗಾಗಿ ಇದು ಸುಲಭವಾಗಿದೆ. ಜನ ಹೇಳುವಂತೆ ಮೊದಲಿಗೆ ಹೋಲಿಸಿದರೆ ಈಗ ಸಂಖ್ಯೆ ಕಡಿಮೆಯಾಗಿದೆ ಏಕೆಂದರೆ ಟಿ.ವಿ ಕಾರಣ, ಒಟ್ಟಿನಲ್ಲಿ ಸಿನೇಮಾವು ಒಂದು ಪ್ರಸಿದ್ಧ ಮನೋರಂಜನಾ ವಿಷಯವಾಗಿದ್ದು ಕೊಪ್ಪಳ ನಗರದಲ್ಲಿ ಟಾಕಿಜ್‌ಗಳ ಗುಣಮಟ್ಟ ಬೇರೆ ನಗರಗಳಿಗೆ ಹೋಲಿಸಿದರೆ ಕಳಪೆಯಾಗಿದೆ. ಇಲ್ಲಿ ಇನ್ನೂ ಮಲ್ಟಿಪ್ಲೆಕ್ಸ ನಂತವುಗಳು ಬಂದಿಲ್ಲ. ಈ ವಿಚಾರದಲ್ಲಿ ನಗರವು ಬೆಳೆಯಬೇಕಿದೆ.

ಕ್ರೀಡೆಯಲ್ಲಿ ಭಾಗವಹಿಸುವವರು ಹಿರಿಯರು ಹೌದು ಶೇ.೦.೫ ರಷ್ಟು, ಇಲ್ಲ ಶೇ೯೯.೫ರಷ್ಟು ಯುವಕರು ಹೌದು ಶೇ.೫೭ರಷ್ಟು, ಇಲ್ಲ ಶೇ೪೩ರಷ್ಟು, ಇಲ್ಲಿ ಗಮನಿಸುವ ಅಂಶವೆಂದರೆ ಕ್ರೀಡೆಯು ಜೀವನದ ಅವಿಭಾಜ್ಯ ಅಂಗವಾಗಬೇಕು, ಇಲ್ಲಿ ಹಿರಿಯರಂತು ಭಾಗವಹಿಸುವುದಿಲ್ಲ. ಅದರೆ ಯುವಕರು ಕೂಡ ಪೂರ್ಣಪ್ರಮಾಣದಲ್ಲಿ ಭಾಗವಹಿಸದೇ ಇರುವುದನ್ನು ಕಾಣುತ್ತೇವೆ. ಕ್ರೀಡೆಯಲ್ಲಿ ಭಾಗವಹಿಸುವವರಿಗಿಂತ ಕ್ರೀಡೆಗಳನ್ನು ಮನೆಯಲ್ಲಿ ಕುಳಿತುಕೊಂಡು ಟಿ.ವಿಗಳ ಮೂಲಕ ವೀಕ್ಷಣೆ ಮಾಡುವರ ಸಂಖ್ಯೆ ಹೆಚ್ಚಿದೆ. ಇನ್ನು ಮಕ್ಕಳಂತೂ ಮೊಬೈಲ್‌ಗಳಲ್ಲಿ ಆಟವಾಡುತ್ತಿದ್ದಾರೆ ಹೊರತು ಮೈದಾನಕ್ಕೆ ಹೋಗುತ್ತಿಲ್ಲ, ಇದು ಆರೋಗ್ಯದ ದೃಷ್ಟಿಯಿಂದ ಒಳ್ಳೆಯ ಪ್ರಕ್ರಿಯೆಯಲ್ಲ. ನಗರಗಳಲ್ಲಿ ಜಿಲ್ಲಾ ಕ್ರೀಡಾಂಗಣವಿದೆ, ಎಲ್ಲರೂ ಇದನ್ನು ಸದುಪಯೋಗ ಮಾಡಿಕೊಳ್ಳವ ಅವಶ್ಯಕತೆ ಇದೆ. ಹೆಚ್ಚು-ಹೆಚ್ಚು ಜನ ದೈಹಿಕ ಶ್ರಮ ಮಾಡಬೇಕು, ಅಂದರೆ ಕ್ರೀಡೆಯಲ್ಲಿ ಭಾಗವಹಿಸುವಂತಾಗಬೇಕಾದ ಅನಿವಾರ್ಯತೆ ಇದೆ.

ಡ್ಯಾನ್ಸ್‌ನಲ್ಲಿ ಭಾಗವಹಿಸುವವರು ಹಿರಿಯರು ಹೌದು ಶೂನ್ಯ ರಷ್ಟು, ಇಲ್ಲ ಶೇ೧೦೦ ರಷ್ಟು ಯುವಕರು ಹೌದು ಶೇ.೭ ರಷ್ಟು, ಇಲ್ಲ ಶೇ.೯೩ ರಷ್ಟು. ಇಲ್ಲಿ ಗಮನಿಸುವ ಅಂಶವೆಂದರೆ ಸ್ವಾಭಾವಿಕವಾಗಿ ಹಿರಿಯರು ಭಾಗವಹಿಸುವುದಿಲ್ಲ, ಯುವಕರು ಕೂಡಾ ತೀರಾ ಕಡಿಮೆ ಇರುವುದನ್ನು ನೋಡುತ್ತೇವೆ. ನಗರದಲ್ಲಿ ಕೆಲವು ಡ್ಯಾನ್ಸ್ ಕೇಂದ್ರಗಳು ಪ್ರಾರಂಭವಾಗಿವೆ ಆದರೆ ಭಾಗವಹಿಸುವವರ ಸಂಖ್ಯೆ ಕಡಿಮೆ ಇದೆ ಒಟ್ಟಿನಲ್ಲಿ ನಗರದಲ್ಲಿ ಇದರ ಕುರಿತು ಆಸಕ್ತಿ ಕಡಿಮೆ ಇರುವುದನ್ನು ಕಾಣುತ್ತೇವೆ.

ಸಂಗೀತದಲ್ಲಿ ಭಾಗವಹಿಸುವವರು ಹಿರಿಯರು ಹೌದು ಶೂನ್ಯ ರಷ್ಟು, ಇಲ್ಲ ಶೇ.೧೦೦ ರಷ್ಟು ಯುವಕರು ಹೌದು ಶೇ.೭ ರಷ್ಟು, ಇಲ್ಲ ಶೇ.೯೩ ರಷ್ಟು, ಇಲ್ಲಿ ಗಮನಿಸುವ ಅಂಶವೆಂದರೆ ಹಿರಿಯರ ಭಾಗವಹಿಸುವಿಕೆ ಇಲ್ಲದಿರುವಿಕೆಯನ್ನು ಮತ್ತು ಯುವಕರು ಕಡಿಮೆ ಪ್ರಮಾಣದಲ್ಲಿ ಇರುವುದನ್ನು ನೋಡುತ್ತೇವೆ. ಸಂಗೀತ ಶಾಲೆಗಳ ಕೊರತೆ ಎದ್ದು ಕಾಣುತ್ತೇವೆ ನಗರದಲ್ಲಿ ಸಂಗೀತ ಪ್ರೇಮಿಗಳಿದ್ದಾರೆ ಆದರೆ ಭಾಗವಹಿಸುವವರ ಪ್ರಮಾಣ ತೀರಾ ಕಡಿಮೆ ಇದೆ. ನಗರದಲ್ಲಿ ಹೆಚ್ಚು ಹೆಚ್ಚು ಸಂಗೀತ ಕೇಂದ್ರಗಳಾಗಬೇಕಿದೆ.

ಕ್ಲಬ್‌ಗಳಿಗೆ ಹೋಗುವವರ ಸಂಖ್ಯೆಯನ್ನು ತಿಳಿದುಕೊಂಡಾಗ ಹಿರಿಯರು ಹೌದು ಶೇ.೧ ರಷ್ಟು, ಇಲ್ಲ ಶೇ.೯೯ ರಷ್ಟು ಯುವಕರು ಯಾವುದೇ ರೀತಿಯ ಕ್ಲಬ್‌ಗಳಿಗೆ ಹೋಗದೆ ಇರುವುದನ್ನು ಕಾಣುತ್ತೇವೆ. ಬೇರೆ ನಗರಗಳಿಗೆ ಹೋಲಿಸಿದಾಗ ಕೊಪ್ಪಳ ನಗರವು ಈ ವಿಷಯದಲ್ಲಿ ತೀರ ಹಿಂದುಳಿದಿದೆ. ನಮ್ಮ ಅಧ್ಯಯನದ ಪ್ರಕಾರ ನಗರದಲ್ಲಿ ಎರಡೇ ಕ್ಲಬ್‌ಗಳು ಇರುವುದನ್ನು ಕಾಣುತ್ತೇವೆ. ಇಲ್ಲಿರುವ ಎಲ್ಲಾ ಸದಸ್ಯರು ಶ್ರೀಮಂತರು. ನಗರದಲ್ಲಿ ಹೆಚ್ಚು ಕ್ಲಬ್‌ಗಳಾಗಬೇಕಿವೆ.

ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವವರು ಹಿರಿಯರು ಹೌದು ಶೇ.೯೩ ರಷ್ಟು, ಇಲ್ಲ ಶೇ.೭ ರಷ್ಟು ಯುವಕರು ಹೌದು ಶೇ.೯೩ ರಷ್ಟು, ಇಲ್ಲ ಶೇ.೭ ರಷ್ಟು, ಇಲ್ಲಿ ಗಮನಿಸುವ ಅಂಶವೆಂದರೆ ನಗರದ ಜನ ಹೆಚ್ಚು ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುತ್ತಾರೆ. ಕಾರಣವೆಂದರೆ ನಗರವು ಒಂದು ಮೂಲತಃ ಧಾರ್ಮಿಕ ಕೇಂದ್ರವಾಗಿದೆ ಹೀಗಾಗಿ ಈ ಸಂಖ್ಯೆ ಹೆಚ್ಚಿರುವುದನ್ನು ಕಾಣುತ್ತೇವೆ. ಆದರೂ ಕೆಲವರು ಹೋಗದಿರುವುದನ್ನು ನೋಡುತ್ತೇವೆ.

೭.೪ ಕೊಪ್ಪಳ ಜನರ ರಾಜಕೀಯ ಅಭಿವೃದ್ಧಿ ಕುರಿತು

೭.೪.೧. ನಗರದ ರಾಜಕಾರಣಿಗಳು ಅಭಿವೃದ್ಧಿ ಪರರೇ?

ವಿವರ	ಗುಣಮಟ್ಟದ ವಿಧಗಳನ್ನು ಪ್ರತಿಕ್ರಿಯಿಸಿದವರ ಸಂಖ್ಯೆ					ಒಟ್ಟು
ಶಾಸಕರು	ಶೂನ್ಯ	ಸಾಧಾರಣ	ಮಧ್ಯಮ	ಉತ್ತಮ	ಅತ್ಯುತ್ತಮ	
	೩೩	೧೬೮	೧೬	೦೮	೦೦	೨೨೫
ಶೇಕಡಾವಾರು	೧೫	೭೫	೦೭	೦೩	೦೦	೧೦೦
ವಿವರ	ಗುಣಮಟ್ಟದ ವಿಧಗಳನ್ನು ಪ್ರತಿಕ್ರಿಯಿಸಿದವರ ಸಂಖ್ಯೆ					ಒಟ್ಟು
ನಗರಸಭಾಅಧ್ಯಕ್ಷರು	ಶೂನ್ಯ	ಸಾಧಾರಣ	ಮಧ್ಯಮ	ಉತ್ತಮ	ಅತ್ಯುತ್ತಮ	
	೧೭	೧೭೬	೨೬	೦೬	೦೦	೨೨೫
ಶೇಕಡಾವಾರು	೭.೫	೭೮	೧೧.೫	೦೩	೦೦	೧೦೦

ವಿವರ	ಗುಣಮಟ್ಟದ ವಿಧಗಳನ್ನು ಪ್ರತಿಕ್ರಿಯಿಸಿದವರ ಸಂಖ್ಯೆ					ಒಟ್ಟು
ವಾರ್ಡಿನಸದಸ್ಯರು	ಶೂನ್ಯ	ಸಾಧಾರಣ	ಮಧ್ಯಮ	ಉತ್ತಮ	ಅತ್ಯುತ್ತಮ	
	೧೪	೧೫೦	೩೦	೩೧	೦೦	೨೨೫
ಶೇಕಡಾವಾರು	೦೬	೬೭	೧೩	೧೪	೦೦	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಶಾಸಕರು ಶೂನ್ಯ ಶೇ.೧೫ ರಷ್ಟು, ಸಾಧಾರಣ ಶೇ.೭೫ ರಷ್ಟು, ಮಧ್ಯಮ ಶೇ.೭ ರಷ್ಟು, ಉತ್ತಮ ಶೇ.೩ ರಷ್ಟು, ಅತ್ಯುತ್ತಮ ಶೇ. ಶೂನ್ಯ ಇಲ್ಲಿ ಗಮನಿಸುವ ಅಂಶವೆಂದರೆ ಶಾಸಕರು ಅಭಿವೃದ್ಧಿಪರರು ಅಲ್ಲ, ಸಾಧಾರಣ ಎನ್ನುವ ಸಂಖ್ಯೆ ಅತಿ ಹೆಚ್ಚು ಬರುತ್ತದೆ. ಇದು ಒಳ್ಳೆಯ ಬೆಳವಣಿಗೆ ಅಲ್ಲ ಜನರ ನಿರೀಕ್ಷೆಗೆ ತಕ್ಕಷ್ಟು ಅಭಿವೃದ್ಧಿಯಾಗಿಲ್ಲ ಮತ್ತು ನಗರದ ಸ್ಥಿತಿಯನ್ನು ನೋಡಿದರೆ ಅದು ನಿಜ ಅನಿಸುತ್ತದೆ ಶಾಸಕರ ಇಚ್ಛಾಶಕ್ತಿಯ ಕೊರತೆ ಎದ್ದು ಕಾಣುತ್ತದೆ. ನಗರದಲ್ಲಿ ಆಗಬೇಕಾದ ಕೆಲಸಗಳು ಆಗುತ್ತಿಲ್ಲ, ಅತ್ಯುತ್ತಮ ಎನ್ನುವವರು ಒಬ್ಬರೂ ಇಲ್ಲ, ಅಂದರೆ ತಾವು ಮಾಡಬೇಕಾದ ಕಾರ್ಯ ಮಾಡುತ್ತಿಲ್ಲ.

ನಗರಸಭಾ ಅಧ್ಯಕ್ಷರು ಶೂನ್ಯ ಶೇ.೭.೫ ರಷ್ಟು, ಸಾಧಾರಣ ಶೇ.೭೮ ರಷ್ಟು, ಮಧ್ಯಮ ಶೇ.೧೧.೫ ರಷ್ಟು, ಉತ್ತಮ ಶೇ.೩ ರಷ್ಟು, ಅತ್ಯುತ್ತಮ ಶೇ. ಶೂನ್ಯ ಇಲ್ಲಿ ಗಮನಿಸುವ ಅಂಶವೆಂದರೆ ಇಲ್ಲಿಯೂ ಕೂಡಾ ಸಾಧಾರಣ ಎನ್ನುವವರು ಹೆಚ್ಚು ಇದ್ದಾರೆ. ಶೂನ್ಯ ಅಂದವರರು ಕೂಡಾ ಇದ್ದಾರೆ. ಅತ್ಯುತ್ತಮ ಎನ್ನುವವರು ಯಾರು ಇಲ್ಲ, ಅಭಿವೃದ್ಧಿ ಪರವಾಗಿ ಕೆಲಸ ಮಾಡುವ ನಗರಸಭಾ ಅಧ್ಯಕ್ಷರು ಇಲ್ಲಿಯವರೆಗೆ ಯಾರು ಬಂದಿಲ್ಲ ಅನ್ನುವ ಉತ್ತರ ಸಿಗುತ್ತದೆ. ನಗರವನ್ನು ನೋಡಿದಾಗ ಆಗಬೇಕಾದ ಅಭಿವೃದ್ಧಿ ಆಗುತ್ತಿಲ್ಲ. ಸರಕಾರ ಅನೇಕ ರೀತಿಯ ಸಹಾಯಹಸ್ತ ಮಾಡುತ್ತಿದೆ, ಇತ್ತೀಚಿಗಂತೂ ಹೈದ್ರಾಬಾದ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ನೀಡಿ ಹೆಚ್ಚು ಹಣ ಬಿಡುಗಡೆ ಆಗುತ್ತಿದೆ, ಆದರೂ ಅಭಿವೃದ್ಧಿಯಲ್ಲಿ ಕುಂಠಿತವನ್ನು ಕಾಣುತ್ತೇವೆ ಇದರ ಕುರಿತು ಎಚ್ಚೆತ್ತುಕೊಳ್ಳುವ ಅವಶ್ಯಕತೆ ಇದೆ.

ವಾರ್ಡಿನ ಸದಸ್ಯರು ಶೂನ್ಯ ಶೇ.೬ ರಷ್ಟು, ಸಾಧಾರಣ ಶೇ.೬೭ ರಷ್ಟು, ಮಧ್ಯಮ ಶೇ.೧೩ ರಷ್ಟು, ಉತ್ತಮ ಶೇ.೧೪ ರಷ್ಟು, ಅತ್ಯುತ್ತಮ ಶೇ. ಶೂನ್ಯ. ಇಲ್ಲಿ ಗಮನಿಸುವ ಅಂಶವೆಂದರೆ ಮೇಲಿನಂತೆ ಇಲ್ಲಿಯೂ ಕೂಡಾ ಸಾಧಾರಣ ಎನ್ನುವವರು ಹೆಚ್ಚು ಇದ್ದಾರೆ, ಶೂನ್ಯ ಅಂದವರು ಕೂಡಾ ಇದ್ದಾರೆ, ಈ ಮೇಲಿನ ಅಂಶಗಳನ್ನು ಗಮನಿಸಿದಾಗ ವಾರ್ಡಿನ ಸದಸ್ಯರು ಅಧಿಕಾರಕ್ಕಾಗಿ ಕೇವಲ ಹುದ್ದೆಯನ್ನು ಸ್ವೀಕರಿಸಿದ್ದಾರೆ, ಅಭಿವೃದ್ಧಿಗಾಗಿ ಅಲ್ಲ. ವಾರ್ಡಿನಲ್ಲಿ ಸಮಸ್ಯೆಗಳ ಸುರಿಮಳೆಯನ್ನೇ ಸುರಿಸುತ್ತಾರೆ ಜನರು, ಆದರೆ ಇಲ್ಲಿ ಅಭಿವೃದ್ಧಿ ಆಗುತ್ತಿಲ್ಲ.

೭.೪.೨. ನಗರದ ರಾಜಕಾರಣಿಗಳ ಕ್ಷೇತ್ರದ ಭೇಟಿ

ಜನಪ್ರತಿನಿಧಿಗಳು	ಗುಣಮಟ್ಟದ ವಿಧಗಳನ್ನು ಪ್ರತಿಕ್ರಿಯಿಸಿದವರ ಸಂಖ್ಯೆ					ಒಟ್ಟು
ಶಾಸಕರು	ಶೂನ್ಯ	ಸಾಧಾರಣ	ಮಧ್ಯಮ	ಉತ್ತಮ	ಅತ್ಯುತ್ತಮ	
	೫೧	೧೫೧	೧೮	೦೫	೦೦	೨೨೫
ಶೇಕಡಾವಾರು	೨೩	೬೭	೦೮	೦೨	೦೦	೧೦೦
ಜನಪ್ರತಿನಿಧಿಗಳು	ಗುಣಮಟ್ಟದ ವಿಧಗಳನ್ನು ಪ್ರತಿಕ್ರಿಯಿಸಿದವರ ಸಂಖ್ಯೆ					ಒಟ್ಟು
ನಗರಸಭಾಅಧ್ಯಕ್ಷರು	ಶೂನ್ಯ	ಸಾಧಾರಣ	ಮಧ್ಯಮ	ಉತ್ತಮ	ಅತ್ಯುತ್ತಮ	
	೨೪	೧೬೫	೨೮	೦೮	೦೦	೨೨೫
ಶೇಕಡಾವಾರು	೧೧	೭೩	೧೨	೦೪	೦೦	೧೦೦
ಜನಪ್ರತಿನಿಧಿಗಳು	ಗುಣಮಟ್ಟದ ವಿಧಗಳನ್ನು ಪ್ರತಿಕ್ರಿಯಿಸಿದವರ ಸಂಖ್ಯೆ					ಒಟ್ಟು
ವಾರ್ಡಿನ ಸದಸ್ಯರು	ಶೂನ್ಯ	ಸಾಧಾರಣ	ಮಧ್ಯಮ	ಉತ್ತಮ	ಅತ್ಯುತ್ತಮ	
	೦೭	೯೯	೨೪	೧೮೯	೦೬	೨೨೫
ಶೇಕಡಾವಾರು	೦೩	೪೪	೧೧	೩೯	೦೩	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಶಾಸಕರು ಶೂನ್ಯ ಶೇ.೨೩ ರಷ್ಟು, ಸಾಧಾರಣ ಶೇ.೬೭ ರಷ್ಟು, ಮಧ್ಯಮ ಶೇ.೮ ರಷ್ಟು, ಉತ್ತಮ ಶೇ.೨ ರಷ್ಟು, ಅತ್ಯುತ್ತಮ ಶೇ. ಶೂನ್ಯ ಇಲ್ಲಿ ಗಮನಿಸುವ ಅಂಶವೆಂದರೆ ನೇರವಾಗಿ ಜನರಿಂದ ಆಯ್ಕೆಯಾಗಿ ಹೋದ ಶಾಸಕರು ಕ್ಷೇತ್ರಕ್ಕೆ ಅದರಲ್ಲೂ ಜಿಲ್ಲೆಗೆ ಬರದೆ ಇರುವುದನ್ನು ನಾವು ಇಲ್ಲಿ ನೋಡುತ್ತೇವೆ. ಭೇಟಿಯಾಗುತ್ತಾರೆ ಆದರೆ ಬಹಳಷ್ಟು ವಿರಳ, ಸಾಧಾರಣ ಭೇಟಿ ಅತಿ ಹೆಚ್ಚಿನ ಪ್ರಮಾಣ ಇರುವುದನ್ನು ಕಾಣುತ್ತೇವೆ. ಇದು ಒಳ್ಳೆಯ ಬೆಳವಣಿಗೆಯಲ್ಲ, ಕ್ಷೇತ್ರದ ಜನರೊಂದಿಗೆ ನಿರಂತರ ಸಂಪರ್ಕ ಇರಬೇಕಾಗುತ್ತದೆ, ಏಕೆಂದರೆ ಮುಂದಿನ ಸಲ ಮತ್ತೆ ಆಯ್ಕೆಯಾಗಲು. ಆದರೆ ಇತ್ತೀಚೆಗೆ ರಾಜಕಾರಣದ ಸ್ವರೂಪ ಬದಲಾಗಿದೆ, ಜನಪ್ರತಿನಿಧಿಗಳಿಗೆ ಗೊತ್ತಾಗಿದೆ ನಮ್ಮ ಜನ ಆಶಾವಾದಿಗಳು ಇವರಿಗೆ ಹಣ ಕೊಟ್ಟರೆ ಸಾಕು ಆರಿಸಿ ಬರುವುದು ಸುಲಭದ ಪ್ರಕ್ರಿಯೆಯಾಗಿದೆ ಎನ್ನುವುದು. ಐದು ವರ್ಷಗಳ ಕಾರ್ಯವನ್ನು ಯಾರು ನೋಡುವುದಿಲ್ಲ. ಚುನಾವಣೆಯ ಹಿಂದಿನ ದಿನ ಎಷ್ಟು ಹಣವನ್ನು ಕೊಡುತ್ತಾರೆ ಎನ್ನುದರ ಮೇಲೆ ಅವಲಂಬಿತವಾಗಿದೆ. ಹೀಗಾಗಿ ಅವರು ತಮ್ಮ ಸಂಪತ್ತನ್ನು ಹೆಚ್ಚಿಸುವುಲ್ಲಿ ನಿರಂತರ ಕಾಲವನ್ನು ಕಳೆಯುತ್ತಾರೆ ವಿನಹ ಜನರ ಸಂಪರ್ಕ ಬಯಸುವುದಿಲ್ಲ. ಇಲ್ಲಿ ವ್ಯವಸ್ಥೆಯೊಂದಿಗೆ ಜನರು ಬದಲಾಗಬೇಕು, ಅಭಿವೃದ್ಧಿ ಪಡಿಸಿದರೆ ಮಾತ್ರ ಪುನಃ ಆಯ್ಕೆ ಎನ್ನುವ ಮನೋಭಾವ ಸೃಷ್ಟಿಯಾಗಬೇಕು ಅಂದಾಗ ಮಾತ್ರ ನಿರಂತರ ಸಂಪರ್ಕ ಹೊಂದಿ ಅಭಿವೃದ್ಧಿಯತ್ತ ಗಮನಹರಿಸುತ್ತಾರೆ.

ನಗರಸಭಾ ಅಧ್ಯಕ್ಷರು ಶೂನ್ಯ ಶೇ.೧೧ ರಷ್ಟು, ಸಾಧಾರಣ ಶೇ.೭೩ ರಷ್ಟು, ಮಧ್ಯಮ ಶೇ.೧೨ ರಷ್ಟು, ಉತ್ತಮ ಶೇ.೪ ರಷ್ಟು, ಅತ್ಯುತ್ತಮ ಶೇ. ಶೂನ್ಯ ಇಲ್ಲಿ ಗಮನಿಸುವ ಅಂಶವೆಂದರೆ ಇವರೆ ನಗರದ ಎಲ್ಲ ವಾರ್ಡಗಳಿಗೆ ಭೇಟಿ ಇಲ್ಲದಿರುವುದನ್ನು ಕಾಣುತ್ತೇವೆ. ಇದು ಸರಿಯಾದ ಕ್ರಮವಲ್ಲ ಏಕೆಂದರೆ ನಗರದ ಮುಖ್ಯಸ್ಥರಾಗಿದ್ದು ನಿರಂತರ ನಗರದೊಂದಿಗೆ ಸಂಪರ್ಕ ಇರಬೇಕಾಗುತ್ತದೆ. ಜನರೊಂದಿಗೆ ಸಂಪರ್ಕವಿದ್ದಾಗ ತಮ್ಮ ಕಾರ್ಯಗಳ ಪ್ರಗತಿ ಪರಿಶೀಲನೆ ಮತ್ತು ನಿಜವಾಗಿಯೂ ಅವು ಜನರಿಗೆ ತಲುಪುತ್ತಿವೆಯೇ ಎನ್ನುವುದನ್ನು ಪ್ರಾಯೋಗಿಕವಾಗಿ ನೋಡಿದಾಗ ತಿಳಿಯುತ್ತದೆ ಮತ್ತು ಸವಾಲುಗಳು ಅರ್ಥವಾಗುತ್ತವೆ. ಮುಂದೆ ಮಾಡಬೇಕಾದ ಕಾರ್ಯಗಳನ್ನು ಮಾಡಲು ಸಾಧ್ಯವಾಗುತ್ತದೆ. ಹೀಗಾಗಿ ಅಧ್ಯಕ್ಷರು ನಿರಂತರ ಸಂಪರ್ಕವಿರಬೇಕಾಗುತ್ತದೆ.

ವಾರ್ಡಿನ ಸದಸ್ಯರು ಶೂನ್ಯ ಶೇ.೩ ರಷ್ಟು, ಸಾಧಾರಣ ಶೇ.೪೪ ರಷ್ಟು, ಮಧ್ಯಮ ಶೇ.೧೧ ರಷ್ಟು, ಉತ್ತಮ ಶೇ.೩೯ ರಷ್ಟು, ಅತ್ಯುತ್ತಮ ಶೇ.೩ ರಷ್ಟು ಇಲ್ಲಿ ಗಮನಿಸುವ ಅಂಶವೆಂದರೆ ಮೇಲಿನ ಅಂಶಗಳನ್ನು ನೋಡಿದಾಗ ವಾರ್ಡಿನ ಸದಸ್ಯರ ಭೇಟಿ ಉತ್ತಮವಾಗಿರುವುದು ಕಂಡುಬರುತ್ತದೆ. ಆದರೆ ಇಲ್ಲಿಯೂ ಕೂಡಾ ಶೂನ್ಯ ಶೇ.೩ ರಷ್ಟು ಇರುವುದನ್ನು ಗಮನಿಸಬಹುದು ವಾರ್ಡಿನಿಂದಲೇ ಆಯ್ಕೆಯಾಗಿರುವುದರಿಂದ ವಾರ್ಡಿನ ಸಂಪರ್ಕ ಶೇ.೧೦೦ ರಷ್ಟು ಇರಬೇಕಾಗುತ್ತದೆ. ಇವರ ಮೇಲೆ ಬಹಳಷ್ಟು ನಂಬಿಕೆಯನ್ನು ಇಟ್ಟು ಮತ್ತು ನಿರೀಕ್ಷೆಗಳೊಂದಿಗೆ ಆಯ್ಕೆ ಮಾಡಿರುತ್ತಾರೆ, ವಾರ್ಡಿನ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಅನುಕೂಲವಾಗುತ್ತದೆ ಅನ್ನುವ ಮನೋಭಾವವು ಅವರಲ್ಲಿರುತ್ತದೆ. ಆದರೆ ಕೆಲವೊಂದು ಕಡೆ ಇದು ಆಗುತ್ತಿಲ್ಲ, ಇದರ ಕಡೆ ಗಮನ ಕೊಟ್ಟು ನಿರಂತರ ಜನರೊಂದಿಗೆ ಸಂಪರ್ಕವಿರಬೇಕಾಗುತ್ತದೆ.

೭.೪.೩. ನಗರದ ರಾಜಕಾರಣಿಗಳು ಸಮಸ್ಯೆಗೆ ಸ್ಪಂದಿಸುವ ರೀತಿ?

ಜನಪ್ರತಿನಿಧಿಗಳು	ಗುಣಮಟ್ಟದ ವಿಧಗಳನ್ನು ಪ್ರತಿಕ್ರಿಯಿಸಿದವರ ಸಂಖ್ಯೆ					ಒಟ್ಟು
ಶಾಸಕರು	ಶೂನ್ಯ	ಸಾಧಾರಣ	ಮಧ್ಯಮ	ಉತ್ತಮ	ಅತ್ಯುತ್ತಮ	
	೨೪	೧೭೧	೨೧	೦೯	೦೦	೨೨೫
ಶೇಕಡಾವಾರು	೧೧	೭೬	೦೯	೦೪	೦೦	೧೦೦
ಜನಪ್ರತಿನಿಧಿಗಳು	ಗುಣಮಟ್ಟದ ವಿಧಗಳನ್ನು ಪ್ರತಿಕ್ರಿಯಿಸಿದವರ ಸಂಖ್ಯೆ					ಒಟ್ಟು
ನಗರಸಭಾಅಧ್ಯಕ್ಷರು	ಶೂನ್ಯ	ಸಾಧಾರಣ	ಮಧ್ಯಮ	ಉತ್ತಮ	ಅತ್ಯುತ್ತಮ	
	೧೨	೧೭೧	೩೨	೦೯	೦೧	೨೨೫
ಶೇಕಡಾವಾರು	೫.೫	೭೬	೧೪	೦೪	೦.೫	೧೦೦

ಜನಪ್ರತಿನಿಧಿಗಳು	ಗುಣಮಟ್ಟದ ವಿಧಗಳನ್ನು ಪ್ರತಿಕ್ರಿಯಿಸಿದವರ ಸಂಖ್ಯೆ					ಒಟ್ಟು
ವಾರ್ಡಿನ ಸದಸ್ಯರು	ಶೂನ್ಯ	ಸಾಧಾರಣ	ಮಧ್ಯಮ	ಉತ್ತಮ	ಅತ್ಯುತ್ತಮ	
	೦೮	೧೩೮	೩೫	೩೯	೦೫	೨೨೫
ಶೇಕಡಾವಾರು	೦೪	೬೧	೧೬	೧೭	೦೨	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ..

ಶಾಸಕರು ಶೂನ್ಯ ಶೇ.೧೧ ರಷ್ಟು, ಸಾಧಾರಣ ಶೇ.೭೬ ರಷ್ಟು, ಮಧ್ಯಮ ಶೇ.೯ ರಷ್ಟು, ಉತ್ತಮ ಶೇ.೪ ರಷ್ಟು, ಅತ್ಯುತ್ತಮ ಶೇ.ಶೂನ್ಯ. ಇಲ್ಲಿ ಗಮನಿಸುವ ಅಂಶವೆಂದರೆ ನಗರ ಎಂದ ಮೇಲೆ ಸಮಸ್ಯೆಗಳು ಮತ್ತು ಸವಾಲುಗಳು ಇದ್ದೇ ಇರುತ್ತವೆ. ನಾವು ಅಧ್ಯಯನಕ್ಕೆ ಒಳಪಡಿಸಿದ ನಗರ ಚಿಕ್ಕ ನಗರ, ಸಮಸ್ಯೆಗಳು ಕೂಡಾ ಕಡಿಮೆ ಮಟ್ಟದಲ್ಲಿ ಇರುತ್ತವೆ. ಶಾಸಕರು ಸಮಸ್ಯೆಗಳಿಗೆ ಸ್ಪಂದಿಸಬೇಕು ಮತ್ತು ಅವುಗಳನ್ನು ಪರಿಹರಿಸುವ ಪ್ರಕ್ರಿಯೆಯಲ್ಲಿ ನಿರಂತರ ತೊಡಗಬೇಕು. ಸಮಸ್ಯೆಗೆ ಸ್ಪಂದಿಸುವುದಿಲ್ಲವೆಂದು ಶೇ.೧೧ ರಷ್ಟು ಜನ ಹೇಳುತ್ತಿರುವುದನ್ನು ಕಾಣುತ್ತೇವೆ. ಅಭಿವೃದ್ಧಿ ದೃಷ್ಟಿಯಿಂದ ಇದು ಸರಿಯಾದ ಬೆಳವಣಿಗೆ ಅಲ್ಲ. ಅತಿ ಹೆಚ್ಚು ಜನ ಸಾಧಾರಣವಾಗಿ ಸ್ಪಂದಿಸುತ್ತಾರೆ ಅನ್ನುತ್ತಾರೆ. ನಗರದ ಭೌತಿಕ ಲಕ್ಷಣಗಳನ್ನು ನೋಡಿದಾಗ ನಗರದಲ್ಲಿ ದೊಡ್ಡ ಮಟ್ಟದ ಬದಲಾವಣೆಗಳಾಗಬೇಕು, ನಗರಕ್ಕೆ ಸೂಕ್ತ ಯೋಜನೆಗಳ ಮೂಲಕ ದೂರದೃಷ್ಟಿ ಇಟ್ಟುಕೊಂಡು ಕೆಲಸಗಳು ನಡೆಯಬೇಕಿದೆ. ನಗರವನ್ನು ನೋಡಿದಾಗ ದೂರದೃಷ್ಟಿಯ ಕೊರತೆ ಎದ್ದು ಕಾಣುತ್ತದೆ. ಯಾವಾಗ ನೋಡಿದರು ಗುಂಡಿ ತೆಗೆಯುವ ದೃಶ್ಯಗಳೇ ಕಾಣುತ್ತೇವೆ. ಒಟ್ಟಿನಲ್ಲಿ ಶಾಸಕರ ಮುಖ್ಯ ಕೇಂದ್ರವಾದ ನಗರದಲ್ಲಿ ಆಗಬೇಕಾದ ಅಭಿವೃದ್ಧಿಗಳು ಸಾಗಬೇಕು. ಜನರ ಎಲ್ಲ ಸಮಸ್ಯೆಗಳಿಗೆ ಶೀಘ್ರ ಪರಿಹಾರ ಸಿಗಬೇಕು ಮತ್ತು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು.

ನಗರಸಭಾ ಅಧ್ಯಕ್ಷರು ಶೂನ್ಯ ಶೇ.೫.೫ ರಷ್ಟು, ಸಾಧಾರಣ ಶೇ.೭೬ ರಷ್ಟು, ಮಧ್ಯಮ ಶೇ.೧೪ ರಷ್ಟು, ಉತ್ತಮ ಶೇ.೪ ರಷ್ಟು, ಅತ್ಯುತ್ತಮ ಶೇ. ೦.೫ ಇಲ್ಲಿ ಗಮನಿಸುವ ಅಂಶವೆಂದರೆ ಮೇಲಿನಂತೆ ಇಲ್ಲಿಯೂ ಸಾಧಾರಣ ಎನ್ನುವ ಅಂಕಿ ಅಂಶವೆ ಅತಿ ಹೆಚ್ಚು ಇರುವುದನ್ನು ಕಾಣುತ್ತೇವೆ. ನಗರದ ಸಮಸ್ಯೆಯನ್ನು ಬಗೆಹರಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುವವರು ಅಧ್ಯಕ್ಷರು. ಏಕೆಂದರೆ ಸ್ಥಳೀಯ ಮಟ್ಟದ ಮುಖ್ಯಸ್ಥರಾಗಿರುವುದರಿಂದ ಸಮಸ್ಯೆಗಳಿಗೆ ಹೊಣೆಯಾಗಿರುತ್ತಾರೆ. ನಗರದಲ್ಲಿರುವ ಪ್ರತಿ ಸಮಸ್ಯೆಯನ್ನು ಅರಿತಿರಬೇಕು ಮತ್ತು ಸವಾಲುಗಳನ್ನು ಎದುರಿಸಲು ಸಿದ್ಧರಿರಬೇಕು, ಜನರ ಸಮಸ್ಯೆಗಳನ್ನು ಕೂಲಕುಂಶವಾಗಿ ಪರಿಶೀಲಿಸಿ ಅವುಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ನಿರಂತರ ಕಾರ್ಯೋನ್ಮೂಖವಾಗಬೇಕು ಅದೇ ಅಲ್ಲವೆ ಇವರ ಕಾರ್ಯ. ನಗರದ ಪರಿಸ್ಥಿತಿ ನೋಡಿದಾಗ ಅಧ್ಯಕ್ಷರು ಮಾಡಬೇಕಾದ ಕಾರ್ಯಗಳು ಬಹಳಷ್ಟಿರುವುದನ್ನು ಕಾಣುತ್ತೇವೆ. ಈ ದಿಶೆಯಲ್ಲಿ ಎಲ್ಲರ ಸಮಸ್ಯೆಗೆ ಸ್ಪಂದಿಸಿ ಅವುಗಳನ್ನು ಪರಿಹರಿಸುವತ್ತ ಗಮನಹರಿಸಬೇಕಾಗಿದೆ.

ವಾರ್ಡಿನ ಸದಸ್ಯರು ಶೂನ್ಯ ಶೇ.೪ ರಷ್ಟು, ಸಾಧಾರಣ ಶೇ.೬೧ ರಷ್ಟು, ಮಧ್ಯಮ ಶೇ.೧೬ ರಷ್ಟು, ಉತ್ತಮ ಶೇ.೧೭ ರಷ್ಟು, ಅತ್ಯುತ್ತಮ ಶೇ.೨ ರಷ್ಟು ಇಲ್ಲಿ ಗಮನಿಸುವ ಅಂಶವೆಂದರೆ ಅದೇ ವಾರ್ಡಿನಿಂದ ಆಯ್ಕೆಯಾಗಿ ನಿರಂತರವಾಗಿ ಜನರೊಂದಿಗೆ ಸಂಪರ್ಕ ಹೊಂದಿದ ವಾರ್ಡಿನ ಸದಸ್ಯರು ಕೂಡಾ ಕೆಲವರ ಸಮಸ್ಯೆಗೆ ಸ್ಪಂದಿಸದೆ ಇರುವುದನ್ನು ಕಾಣುತ್ತೇವೆ. ಇಲ್ಲಿಯೂ ಕೂಡಾ ಅತಿ ಹೆಚ್ಚಿನ ಸಂಖ್ಯೆ ಸಾಧಾರಣ ಎನ್ನುವುದು ಬರುತ್ತದೆ. ಇದನ್ನು ನೋಡಿದಾಗ ಸದಸ್ಯರು ಏನು ಮಾಡುತ್ತೀದ್ದಾರೆ ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ಇವರು ಆಯ್ಕೆಯಾಗಿರುವುದೆ ಜನರ ಸಮಸ್ಯೆಯನ್ನು ಬಗೆಹರಿಸಲು, ಆದರೆ ಇವರು ಮಾಡುತ್ತಿರುವುದೇನು, ಅಲ್ಲಿನ ಸಮಸ್ಯೆಗಳನ್ನು ಅರಿತು ಅಧ್ಯಕ್ಷರಿಗೆ ಶಾಸಕರಿಗೆ ಹೇಳಿ ಅವುಗಳನ್ನು ಸರಿಮಾಡುವ ಪ್ರಯತ್ನವನ್ನು ಮಾಡಬೇಕು ಮತ್ತು ಒತ್ತಡವನ್ನು ಹೇರಬೇಕು, ಮೂಲವಾಗಿ ಸಮಸ್ಯೆಯನ್ನು ಬಗೆಹರಿಸುವ ಜವಾಬ್ಧಾರಿ ಇರುವುದು ವಾರ್ಡಿನ ಸದಸ್ಯರ ಮೇಲೆ, ಇವರು ನಿರಂತರ ಜನರೊಂದಿಗೆ ಸಂಪರ್ಕ ಹೊಂದಿರುತ್ತಾರೆ, ಇವರಿಗೆ ಸುಲಭವಾಗಿ ಜನರ ಸಮಸ್ಯೆಗಳು ಅರ್ಥವಾಗುತ್ತವೆ ಹೀಗಾಗಿ ಇವರ ಮೇಲೆ ಮಹತ್ತರ ಜವಾಬ್ಧಾರಿ ಇರುವುದನ್ನು ಕಾಣುತ್ತೇವೆ. ಆದಷ್ಟು ಜನರ ಸಮಸ್ಯೆಗೆ ಸ್ಪಂದಿಸಿ ಸಕಾರಾತ್ಮಕವಾಗಿ ವರ್ತಿಸುವುದನ್ನು ಮಾಡಬೇಕು, ಇದರ ಅವಶ್ಯಕತೆ ಬಹಳಷ್ಟಿರುವುದನ್ನು ಕಾಣುತ್ತೇವೆ.

೭.೪.೪. ನಗರದಲ್ಲಿ ಜನ ಬೆಂಬಲಿಸುವ ಪಕ್ಷ ಯಾವುದು?

ಪಕ್ಷಗಳ ಪ್ರಕಾರಗಳು	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
ಕಾಂಗ್ರೆಸ್ಸ್	೯೯	೪೪
ಬಿ.ಜೆ.ಪಿ	೧೧೯	೫೩
ಜೆ.ಡಿ.ಎಸ್	೦೭	೦೩
ಇತರೆ	೦೦	೦೦
ಒಟ್ಟು	೨೨೫	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಕಾಂಗ್ರೆಸ್ ಶೇ.೯೯ರಷ್ಟು, ಬಿ.ಜೆ.ಪಿ ಶೇ.೫೩ ರಷ್ಟು, ಜೆ.ಡಿ.ಎಸ್ ಶೇ.೭ ರಷ್ಟು, ಇತರೆ ಯಾರು ಇಲ್ಲ. ಇಲ್ಲಿ ಗಮನಿಸುವ ಅಂಶವೆಂದರೆ ಜನರು ಹೆಚ್ಚು ರಾಷ್ಟ್ರೀಯ ಪಕ್ಷವನ್ನು ಬೆಂಬಲಿಸುತ್ತಾರೆ. ಕೆಲವೊಂದಿಷ್ಟು ಜನ ಬಿ.ಜೆ.ಪಿ ಮತ್ತು ಕಾಂಗ್ರೆಸನ್ನು ಬೆಂಬಲಿಸಿದರೆ ಕಡಿಮೆ ಪ್ರಮಾಣದಲ್ಲಿ ಜೆ.ಡಿ.ಎಸ್‌ನ್ನು ಬೆಂಬಲಿಸುತ್ತಾರೆ. ಕಾರಣಗಳನ್ನು ಕೇಳಿದಾಗ ಕೆಲವರು ವ್ಯಕ್ತಿಯನ್ನಾಧರಿಸಿ, ಕೆಲವರು ಇತಿಹಾಸವನ್ನಾಧರಿಸಿ, ಕೆಲವರು ಧರ್ಮವನ್ನಾಧರಿಸಿ, ಕೆಲವರು ತತ್ವಗಳನ್ನು ಆಧರಿಸಿ ಆಯಾಯಾ ಪಕ್ಷಗಳನ್ನು ಬೆಂಬಲಿಸುವದನ್ನು ಕಾಣುತ್ತೇವೆ. ಒಟ್ಟಿನಲ್ಲಿ ಕೆಲಸವನ್ನು, ಅಭಿವೃದ್ಧಿಯನ್ನು, ಪ್ರಗತಿಯನ್ನು ಮಾಡುವವರನ್ನು ಬೆಂಬಲಿಸಬೇಕಿದೆ ಕೆಲವರನ್ನು ನೋಡಿದರೆ ಈ ಮಾತು ಹೇಳಬೇಕಿನಿಸುತ್ತದೆ

ಏಕೆಂದರೆ ಅವರ ಮಾತು ಹೇಗಿದೆ ಎಂದರೆ ನಾವು ಮೊದಲಿನಿಂದಲೂ ಈ ಪಕ್ಷವನ್ನು ಬೆಂಬಲಿಸಿದ್ದೇವೆ ಹಾಗಾಗಿ ಅದನ್ನು ಈಗಲೂ ಬೆಂಬಲಿಸುತ್ತೇವೆ ಎನ್ನುತ್ತಾರೆ. ಜನರ ಮನೋಭಾವ ಬದಲಾಗಬೇಕು, ನಮ್ಮ ಬೆಂಬಲ ಪ್ರಗತಿಯ ಕಡೆಗೆ ಇರಲಿ ಎನ್ನುವುದು ನಮ್ಮ ಆಶಯ.

೭.೪.೫. ನಗರದಲ್ಲಿ ಎಷ್ಟು ಜನ ರಾಜಕೀಯ ಪಕ್ಷದ ಸದಸ್ಯತ್ವ ಹೊಂದಿದ್ದಾರೆ?

ಪ್ರತಿಕ್ರಿಯೆ	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
ಹೌದು	೧೬	೦೭
ಇಲ್ಲ	೨೦೯	೯೩
ಒಟ್ಟು	೨೨೫	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಸದಸ್ಯತ್ವ ಇದೆ ಎಂದವರು ಶೇ.೭ ರಷ್ಟು, ಇಲ್ಲ ಎಂದವರು ಶೇ.೯೩ ರಷ್ಟು ಜನ ಇಲ್ಲಿ ಗಮನಿಸುವ ಅಂಶವೆಂದರೆ ನಾವು ಇನ್ನೂ ಪೂರ್ಣಪ್ರಮಾಣದಲ್ಲಿ ಸದಸ್ಯತ್ವವನ್ನು ಪಡೆದುಕೊಂಡಿಲ್ಲ, ಕೆಲವರು ಮಾತ್ರ ರಾಜಕೀಯವನ್ನು ಮಾಡುವಂತವರು ಮತ್ತು ರಾಜಕೀಯದಲ್ಲಿ ಮುಂದುವರೆಯಬೇಕೆನ್ನುವವರು ಮಾತ್ರ ಸದಸ್ಯತ್ವವನ್ನು ಪಡೆದುಕೊಂಡಿದ್ದಾರೆ ಇದರಿಂದ ಜನರಿಗೆ ಏನೂ ಲಾಭವಿಲ್ಲ ಹಾಗಾಗಿ ಜನ ಇದರ ಕುರಿತು ಅಷ್ಟೊಂದು ತಲೆಕೆಡಿಸಿಕೊಳ್ಳದಿರುವುದನ್ನು ಕಾಣುತ್ತೇವೆ.

೭.೪.೬. ನಗರದಲ್ಲಿ ಪಕ್ಷದ ಸಭೆ ಮೆರವಣಿಗೆಗಳಲ್ಲಿ ಭಾಗವಹಿಸುವಿಕೆಯ ಪ್ರಮಾಣ

ಪ್ರತಿಕ್ರಿಯೆ	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
ಹೌದು	೩೪	೧೫
ಇಲ್ಲ	೧೯೧	೮೫
ಒಟ್ಟು	೨೨೫	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಹೌದು ಎಂದವರು ಶೇ.೧೫ ರಷ್ಟು, ಇಲ್ಲ ಎಂದವರು ಶೇ. ೮೫ ರಷ್ಟು ಇಲ್ಲಿ ಗಮನಿಸುವ ಅಂಶವೆಂದರೆ ನಮಗೆ ಕಂಡು ಬಂದಂತೆ ತೀರಾ ಶ್ರೀಮಂತರು ಮತ್ತು ಬಡವರು ಹೆಚ್ಚು ಭಾಗವಹಿಸುವುದಿಲ್ಲ ಮಧ್ಯಮ ವರ್ಗದವರು ಹೆಚ್ಚು ಭಾಗವಹಿಸುತ್ತಾರೆ ಇದು ಕೂಡಾ ಅನಿವಾರ್ಯವಾದ ಪ್ರಕ್ರಿಯೆ ಅಲ್ಲ ಹಾಗಾಗಿ ಹೆಚ್ಚು ಜನ ಭಾಗವಹಿಸುವುದಿಲ್ಲ ಆಸಕ್ತರು ಮಾತ್ರ ಭಾಗವಹಿಸುವುದನ್ನು ಕಾಣುತ್ತೇವೆ.

೭.೪.೭. ನಗರದ ಜನ ಚುನಾವಣೆಯಲ್ಲಿ ಭಾಗವಹಿಸುವಿಕೆ

ಪ್ರತಿಕ್ರಿಯೆ	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
ಹೌದು	೨೨೫	೧೦೦
ಇಲ್ಲ	೦೦	೦೦
ಒಟ್ಟು	೨೨೫	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಹೌದು ಎಂದವರು ಶೇ.೧೦೦ರಷ್ಟು ಇದು ಒಳ್ಳೆಯ ಬೆಳವಣಿಗೆ ಪ್ರಜಾಪ್ರಭುತ್ವ ಯಶಸ್ವಿಯಾಗಬೇಕೆಂದರೆ ಹೆಚ್ಚು ಹೆಚ್ಚು ಜನ ರಾಜಕೀಯ ಚಟುವಟಿಕೆಯಲ್ಲಿ ಭಾಗವಹಿಸಬೇಕು ಇದು ಪೂರ್ಣ ಪ್ರಮಾಣದ ಸತ್ಯವೆಂದು ನಂಬಲಿಕ್ಕೆ ಸಾಧ್ಯವಾಗದ ವಿಚಾರ ಹೀಗೆ ಎಲ್ಲರೂ ಭಾಗವಹಿಸುವುದು ನಿಜವಾಗಿದ್ದರೆ ಮತದಾನದ ಪ್ರಮಾಣ ಶೇ.೧೦೦ ರಷ್ಟು ಆಗಬೇಕಿತ್ತು ಏಕೆ ಹೀಗೆ ಹೇಳಿರಬಹುದೆಂದರೆ, ಭಾಗವಹಿಸಿಲ್ಲ ಎಂದರೆ ನಮಗೆ ಸಿಗಬೇಕಾದ ಸೌಲಭ್ಯ ಸಿಗದೆ ಇರಬಹುದು ಎನ್ನುವ ಕಾರಣಕ್ಕೆ ಹೇಳಿರಬಹುದು. ಈ ರೀತಿ ಭಾಗವಹಿಸಿರುವುದರಿಂದ ರಾಜಕೀಯದ ಕುರಿತು ಅರಿವು ಮೂಡುತ್ತದೆ. ಇದು ಜನರ ಜವಾಬ್ದಾರಿಯನ್ನು ಹೆಚ್ಚಿಸುತ್ತದೆ ತಮ್ಮ ಕರ್ತವ್ಯಗಳ ಕುರಿತು ತಿಳುವಳಿಕೆ ಮೂಡುತ್ತದೆ. ಇದು ಒಳ್ಳೆಯ ಬೆಳವಣಿಗೆ ಹೆಚ್ಚು ಹೆಚ್ಚು ಜನ ಭಾಗವಹಿಸುವಂತೆ ಆಗಬೇಕು.

೭.೪.೮. ಚುನಾವಣೆ ಪ್ರಚಾರದಲ್ಲಿ ಭಾಗವಹಿಸುವಿಕೆ

ಪ್ರತಿಕ್ರಿಯೆ	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
ಹೌದು	೧೦೫	೪೭
ಇಲ್ಲ	೧೨೦	೫೩
ಒಟ್ಟು	೨೨೫	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಹೌದು ಎಂದವರು ಶೇ.೪೭ ರಷ್ಟು, ಇಲ್ಲ ಎಂದವರು ಶೇ.೫೩ ರಷ್ಟು ಇಲ್ಲಿನ ಗಮನಿಸುವ ಅಂಶವೆಂದರೆ ಮೇಲಿನ ಅಂಕಿಗಳನ್ನು ಗಮನಿಸಿದಾಗ ನಗರದ ಜನರಿಗೆ ರಾಜಕೀಯದಲ್ಲಿ ಹೆಚ್ಚು ಆಸಕ್ತಿ ಇರುವುದು ಕಂಡು ಬರುತ್ತದೆ. ಏಕೆಂದರೆ ಅರ್ಧದಷ್ಟು ಜನ ಪಾಲ್ಗೊಳ್ಳುವುದನ್ನು ಕಾಣುತ್ತೇವೆ. ಮುಂದುವರೆದು ಪ್ರಶ್ನಿಸಿದಾಗ ತಿಳಿದುಬಂದ ಅಂಶವೆಂದರೆ ಮನೆಯಲ್ಲಿರುವ ಯುವಕರು ಹೆಚ್ಚು ಪ್ರಚಾರಕ್ಕೆ ಹೋಗುವ ಅಂಶ ಗೊತ್ತಾಗುತ್ತದೆ. ಇನ್ನೂ ಮುಂದುವರೆದು ಪ್ರಶ್ನಿಸಿದಾಗ ಪ್ರಚಾರಕ್ಕೆ ಹೋಗಿರುವುದು ಲಾಭದ ಉದ್ದೇಶದಿಂದ ಇಲ್ಲಿ ಎರಡು ರೀತಿಯ ಲಾಭಗಳಿವೆ, ಒಂದು ತಕ್ಷಣ

ಲಾಭ ಅಂದರೆ ಪ್ರಚಾರಕ್ಕೆ ಹೋದಾಗ ಇಂತಿಷ್ಟು ದುಡ್ಡು ಕೊಡುತ್ತಾರೆ ಮತ್ತು ಅವರದೆ ಅಭ್ಯರ್ಥಿ ಆರಿಸಿ ಬಂದರೆ ಮುಂಬರುವ ದಿನದಲ್ಲಿ ಯಾವುದಾದರೂ ಕೆಲಸಕ್ಕೆ ಅನುಕೂಲ ಆಗಬಹುದು ಅನ್ನುವ ಮನೋಭಾವ ಮತ್ತು ದೂರದೃಷ್ಟಿಯಿಂದ ಹೆಚ್ಚು ಜನ ಪ್ರಚಾರದಲ್ಲಿ ಭಾಗವಹಿಸುವುದನ್ನು ಕಾಣುತ್ತೇವೆ.

೭.೪.೯. ನಗರದ ಸ್ಥಳೀಯ ನಾಯಕರ ಹೆಸರು ಗೊತ್ತಿದೆಯೇ?

ಪ್ರತಿಕ್ರಿಯೆ	ಪ್ರತಿನಿಧಿಗಳ ವಿಧಗಳು							
	ಸಂಸದರು		ಶಾಸಕರು		ನಗರಸಭಾ ಸದಸ್ಯರು		ನಗರಸಭಾ ಅಧ್ಯಕ್ಷರು	
	ಒಟ್ಟು	ಶೇ	ಒಟ್ಟು	ಶೇ	ಒಟ್ಟು	ಶೇ	ಒಟ್ಟು	ಶೇ
ಹೌದು	೨೨೫	೧೦೦	೨೨೫	೧೦೦	೧೬೫	೭೩	೦೦	೦೦
ಇಲ್ಲ	೦೦	೦೦	೦೦	೦೦	೬೦	೨೭	೦೦	೦೦
ಒಟ್ಟು	೨೨೫	೧೦೦	೨೨೫	೧೦೦	೨೨೫	೧೦೦	೦೦	೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಸಂಸದರು ಗೊತ್ತು ಎಂದವರು ಶೇ.೧೦೦ ರಷ್ಟು, ಶಾಸಕರು ಗೊತ್ತು ಎಂದವರು ಶೇ.೧೦೦ ರಷ್ಟು, ನಗರಸಭಾ ಅಧ್ಯಕ್ಷರು ನಾವು ಕ್ಷೇತ್ರ ಕಾರ್ಯ ಮಾಡುವಾಗ ಯಾರು ಇರಲಿಲ್ಲ. ನಗರಸಭಾ ಸದಸ್ಯರು ಗೊತ್ತು ಎಂದವರು ಶೇ.೭೩ ರಷ್ಟು, ಇಲ್ಲಿ ಗಮನಿಸುವ ಅಂಶವೆಂದರೆ ನಗರವು ಚಿಕ್ಕದಿರುವುದರಿಂದ ಪ್ರತಿಯೊಬ್ಬರಿಗೂ ಸಂಸದರು ಮತ್ತು ಶಾಸಕರು ಗೊತ್ತಿದ್ದಾರೆ. ಒಂದು ವಿಚಿತ್ರವೆಂದರೆ ತಮ್ಮ ವಾರ್ಡಿನ ಸದಸ್ಯರ ಹೆಸರೇ ಎಷ್ಟೋ ಜನರಿಗೆ ಗೊತ್ತಿಲ್ಲ. ಅಂದರೆ ಇವರು ಚುನಾವಣೆಯಲ್ಲಿ ಭಾಗವಹಿಸಿಲ್ಲ ಮತ್ತು ಅವರಿಗೆ ಅವರ ಅವಶ್ಯಕತೆ ಇಲ್ಲ ಮತ್ತು ಬೇರೆ ಊರಿಂದ ಕೆಲಸಕ್ಕೆ ಬಂದವರಿಗೆ ಸದಸ್ಯರ ಹೆಸರು ಗೊತ್ತಿರುವುದಿಲ್ಲ ಒಟ್ಟಿನಲ್ಲಿ ನಮ್ಮ ವಾರ್ಡಿನ ಸದಸ್ಯರ ಹೆಸರು ನಾವು ತಿಳಿದುಕೊಂಡಿರಬೇಕು ಇದು ನಮ್ಮ ವಾರ್ಡಿನಲ್ಲಿ ಆಗುವ ಸಮಸ್ಯೆಗಳನ್ನು ಪರಿಹರಿಸಲು ಸಹಾಯಕವಾಗುತ್ತದೆ.

೭.೪.೧೦. ಪ್ರತಿಭಟನೆಯಲ್ಲಿ ಭಾಗವಹಿಸಿದ ವಿವರ

ಪ್ರತಿಕ್ರಿಯೆ	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
ಹೌದು	೧೭	೦೮
ಇಲ್ಲ	೨೦೮	೯೨
ಒಟ್ಟು	೨೨೫	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಹೌದು ಎಂದವರು ಶೇ.೮ ರಷ್ಟು, ಇಲ್ಲ ಎಂದವರು ಶೇ.೯೨ ರಷ್ಟು ಜನ ಇಲ್ಲಿನ ಗಮನಿಸುವ ಅಂಶವೆಂದರೆ ನಗರದಲ್ಲಿ ನಿರಂತರ ಪ್ರತಿಭಟನೆಗಳು ನಡೆಯುತ್ತವೆ ಆದರೆ ಜನರ ಭಾಗವಹಿಸುವಿಕೆ ಕಡಿಮೆ ಇರುವುದು ಕಂಡು ಬರುತ್ತದೆ ಅನ್ಯಾಯವಾದಾಗ, ಸಂಕಷ್ಟಗಳು ಎದುರಾದಾಗ, ಮಾನವ ಹಕ್ಕುಗಳ ಉಲ್ಲಂಘನೆಯಾದಾಗ ಪ್ರತಿಭಟನೆಗಳು ನಡೆಯಬೇಕು ಇದರ ವಿರುದ್ಧ ಹೋರಾಟ ಮಾಡುವುದು ಸಾಮಾಜಿಕ ಕಳಕಳಿಯಲ್ಲಿ ಒಂದು ಅಂಶವಾಗಿದೆ ಇವತ್ತಿನ ಕಾಲ ಕೇವಲ ಮೊಬೈಲ್ ನಲ್ಲಿ ವಿರೋಧಿಸುವ ಕಾಲ ರಸ್ತೆಗೆ ಇಳಿದು ಹೋರಾಟ ಮಾಡುವುದು ಕಡಿಮೆಯಾಗಿದೆ ಮುಂದೆ ಇದು ಬೇರೆ ರೂಪವನ್ನು ಪಡೆದುಕೊಳ್ಳಬಹುದು ಪ್ರತಿಭಟನೆಗಳು ನ್ಯಾಯಕ್ಕಾಗಿ ನಡೆಯಬೇಕು ಅಂದಾಗ ಅದಕ್ಕೊಂದು ಅರ್ಥವಿರುತ್ತದೆ ಇವತ್ತಿನ ಪ್ರತಿಭಟನೆಗಳು ವಿಚಿತ್ರವಾಗಿರುತ್ತವೆ ಅವು ವ್ಯಕ್ತಿಗಳ ಪರವಾಗಿರುವ ಪ್ರತಿಭಟನೆಗಳಾಗಿರುತ್ತವೆ, ತಪ್ಪು ಮಾಡಿದವರ ಪರವಾಗಿರುವ ಪ್ರತಿಭಟನೆಗಳು ನಡೆಯುತ್ತವೆ ಹೀಗೆ ಮುಂದೆವರೆದಾಗ ಪ್ರತಿಭಟನೆಗಳು ಅರ್ಥ ಕಳೆದುಕೊಳ್ಳುತ್ತವೆ ಇದು ಬದಲಾಗಬೇಕಾದ ಅನಿವಾರ್ಯತೆ ಇದೆ.

೭.೪.೧೧.ನಿಮ್ಮ ಕುಟುಂಬದಲ್ಲಿ ಹಿಂದೆ ಯಾವುದಾದರೂ ರಾಜಕೀಯ ಹುದ್ದೆ ಸ್ವೀಕರಿಸಿರುವಿರಾ?

ಪ್ರತಿಕ್ರಿಯೆ	ಪ್ರತಿಕ್ರಿಯಿಸಿದವರ ಸಂಖ್ಯೆ	ಶೇಕಡಾವಾರು
ಹೌದು	೧೯	೦೮
ಇಲ್ಲ	೨೦೬	೯೨
ಒಟ್ಟು	೨೨೫	೧೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಹೌದು ಎಂದವರು ಶೇ.೮ ರಷ್ಟು, ಇಲ್ಲ ಎಂದವರು ಶೇ.೯೨ ರಷ್ಟು ಇಲ್ಲಿನ ಗಮನಿಸುವ ಅಂಶವೆಂದರೆ ನಮ್ಮ ಅಧ್ಯಯನದ ಪ್ರಕಾರ ಮುಂದುವರೆದವರು, ಶ್ರೀಮಂತರು ಮಾತ್ರ ರಾಜಕೀಯ ಹುದ್ದೆಗಳನ್ನು ಸ್ವೀಕರಿಸಿದ್ದಾರೆ ಯಾವ ಒಬ್ಬ ಬಡವ, ಹಿಂದುಳಿದವ ಹುದ್ದೆಯನ್ನು ಸ್ವೀಕರಿಸಿಲ್ಲ ಇವತ್ತಿನ ಸ್ಥಿತಿಯು ಕೂಡಾ ಇದೆ ರೀತಿ ಇದೆ ಯಾರ ಹತ್ತಿರ ಹಣವಿದೆಯೋ ಅವರು ಮಾತ್ರ ಚುನಾವಣೆಯಲ್ಲಿ ಸ್ಪರ್ಧಿಸಲು ಆಗುತ್ತದೆ ಇದು ಬದಲಾಗಬೇಕು ಜನ ಹಣ ನೋಡದೆ ಕೆಲಸ ಮಾಡುವ ವ್ಯಕ್ತಿಯನ್ನು ನೋಡಬೇಕು ಅಂದಾಗ ಮಾತ್ರ ನಿಜವಾದ ಪ್ರಜಾಪ್ರಭುತ್ವ ಆಸ್ತಿತ್ವಕ್ಕೆ ಬರಲು ಸಾಧ್ಯ.

೭.೫ ಕೊಪ್ಪಳ ನಗರದ ಇತರೆ ಮಾಹಿತಿ

೭.೫.೧. ಆಧುನಿಕ ಅಭಿವೃದ್ಧಿ ಸೌಲಭ್ಯಗಳ ಮಾಹಿತಿ ಮತ್ತು ನಿರಾಕರಣೆ

ಅಭಿವೃದ್ಧಿ ಸೌಲಭ್ಯಗಳು	ತಿಳುವಳಿಕೆ		ಸೌಲಭ್ಯ		ಸೌಲಭ್ಯ ದೊರಕದಿರಲು ಕಾರಣ			
	ಇದೆ	ಇಲ್ಲ	ದೊರಕಿದೆ	ಇಲ್ಲ	ಮಾಹಿತಿ ಇಲ್ಲ	ವೆಚ್ಚ ಭರಿಸಲು ಸಾಧ್ಯವಾಗಿಲ್ಲ	ಲಂಚ ನೀಡಲು ಸಾಧ್ಯವಿಲ್ಲ	ಇತರೆ ಕಾರಣಗಳು
ಅಭಿವೃದ್ಧಿ ಯೋಜನೆಗಳು	೧೯೩	೩೨	೧೯೩	೩೨	೦೭	೦೦	೦೫	೨೦
ಆರೋಗ್ಯ ಸೌಲಭ್ಯಗಳು	೨೨೫	೦೦	೨೨೫	೦೦	೦೦	೦೦	೦೦	೦೦
ವಸತಿನಿವೇಶನಗಳು	೨೨೫	೦೦	೨೨	೨೦೩	೦೦	೦೯	೧೬	೧೭೮
ಪಡಿತರ ಸೌಲಭ್ಯ	೨೨೫	೦೦	೧೩೮	೮೭	೦೦	೦೦	೦೦	೮೭
ಬ್ಯಾಂಕ ಸಾಲ	೨೨೫	೦೦	೭೮	೧೪೭	೦೦	೦೦	೦೦	೧೪೭
ಸೊಸೈಟಿ ಸಾಲ	೧೭೬	೪೯	೨೩	೨೦೨	೧೫	೦೦	೦೦	೧೮೭
ಶಾಲಾಸೌಲಭ್ಯ	೨೨೫	೦೦	೨೨೫	೦೦	೦೦	೦೦	೦೦	೦೦
ವಿಧವಾವೇತನ	೨೨೫	೦೦	೧೫	೨೧೦	೦೦	೦೦	೦೦	೨೧೦
ವೃದ್ಧಾಪ್ಯವೇತನ	೨೨೫	೦೦	೩೮	೧೮೭	೦೦	೦೦	೦೦	೧೮೭
ಒಟ್ಟು	೧೯೪೪	೮೧	೯೫೭	೧೦೬೮	೨೨	೦೯	೨೧	೧೦೧೬
ಶೇಕಡಾವಾರು	೯೬	೦೪	೪೭	೫೩	೦೮	೦.೫	೧.೩	೫೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಆಧುನಿಕ ಅಭಿವೃದ್ಧಿ ಸೌಲಭ್ಯಗಳ ಮಾಹಿತಿಯನ್ನು ಸಾಮಾನ್ಯವಾಗಿ ಎಲ್ಲರು ತಿಳಿದುಕೊಂಡಿದ್ದಾರೆ. ಕಾರಣವೆಂದರೆ ಇವತ್ತಿನ ಸರಕಾರದ ಯಾವುದೇ ಯೋಜನೆ ಇರಲಿ ಅದು ಎಲ್ಲರಿಗೂ ತಲುಪುವಲ್ಲಿ ಟಿ.ವಿ ಮಾಧ್ಯಮ, ಪತ್ರಿಕೆ, ಮೊಬೈಲ್, ಅಂತರ್ಜಾಲ, ರೇಡಿಯೊ ಮುಂತಾದವುಗಳು ಪ್ರಮುಖ ಪಾತ್ರ ವಹಿಸುತ್ತಿವೆ ಇನ್ನೂ ಸೌಲಭ್ಯಗಳನ್ನು ದೊರಕಿಸುವಲ್ಲಿಯೂ ಕೂಡಾ ಎಲ್ಲರು ಮುಂದೆ ಇದ್ದಾರೆ ಇಲ್ಲಿ ಗಮನಿಸುವ ಒಂದು ಅಂಶವೆಂದರೆ ಎಲ್ಲಾ ಸೌಲಭ್ಯಗಳು ಎಲ್ಲರಿಗೂ ಸಿಗುವುದಿಲ್ಲ ಆಯಾ ಸೌಲಭ್ಯ ಪಡೆಯಲು ಒಂದು ಅರ್ಹತೆ ಅನ್ನುವುದನ್ನು ಮಾನದಂಡವಾಗಿಸಿದ್ದಾರೆ. ಉದಾಃ ವಸತಿ ನಿವೇಶನಗಳು ಇದು ಆರ್ಥಿಕವಾಗಿ ಹಿಂದುಳಿದವರಿಗೆ, ಬಡವರಿಗೆ, ಮನೆ ಇಲ್ಲದವರಿಗೆ ದೊರಕುವ ಯೋಜನೆ ಆದರೆ ಜನರ ಪ್ರಕಾರ ಪ್ರತಿನಿಧಿಗಳು ತಮಗೆ ಬೇಕಾದವರಿಗೆ, ಇಂತಿಷ್ಟು ಹಣ ಕೊಟ್ಟವರಿಗೆ ಮಾತ್ರ ನೀಡುತ್ತಿದ್ದಾರೆ ನಿಜವಾಗಲೂ ಸಿಗಬೇಕಾದವರಿಗೆ

ಸೌಲಭ್ಯ ದೊರಕುತ್ತಿಲ್ಲ ಪ್ರಭಾವಿಗಳು ಇದನ್ನು ಬಳಸಿಕೊಳ್ಳುತ್ತಿದ್ದಾರೆ ಇದು ಎಲ್ಲ ಯೋಜನೆಗಳಲ್ಲಿ ಸರ್ವೇಸಾಮಾನ್ಯವಾಗಿ ನಡೆಯುತ್ತಿದೆ ಮತ್ತು ಇದು ಎಲ್ಲರಿಗೂ ಗೊತ್ತಿರುವ ವಿಚಾರವೂ ಕೂಡಾ ಹೌದು ಗೊತ್ತಿದ್ದರು ಅದರ ಕಡೆಗೆ ಗಮನ ಕೊಡುವುದಿಲ್ಲ ಏಕೆಂದರೆ ಅವರಿಗೂ ಕೂಡಾ ಇದರಲ್ಲಿ ಪಾಲು ಇರುತ್ತದೆ ಸೌಲಭ್ಯ ದೊರಕದಿರಲು ಕಾರಣಗಳನ್ನು ಕೇಳಿದಾಗ ಮಾಹಿತಿ ಇಲ್ಲ, ವೆಚ್ಚ ಭರಿಸಲು ಸಾಧ್ಯವಾಗಿಲ್ಲ, ಲಂಚ ನೀಡಲು ಸಾಧ್ಯವಾಗಿಲ್ಲ, ಇನ್ನು ಕೆಲವರು ಇತರೆ ಕಾರಣಗಳನ್ನು ನೀಡುತ್ತಾರೆ. ಈ ಎಲ್ಲವನ್ನು ನೋಡಿದಾಗ ಈ ಮೇಲಿನಂತೆ ನಡೆಯುತ್ತಿರುವುದು ನಿಜವಾಗಿದೆ ಅದು ನಿಲ್ಲಬೇಕು ನಮ್ಮಲ್ಲಿರುವ ಜನಪ್ರತಿನಿಧಿಗಳು ಎಚ್ಚೆತ್ತುಕೊಳ್ಳಬೇಕು ನಿಜವಾಗಿ ಸಿಗಬೇಕಾದವರಿಗೆ ಅವು ಸಿಗುವಂತಾಗಬೇಕು ಜನಸಾಮಾನ್ಯರು ಕೂಡಾ ಇದನ್ನು ವಿರೋಧಿಸಬೇಕು ತಮ್ಮ ಹಕ್ಕುಗಳನ್ನು ಚಲಾಯಿಸಬೇಕು ಅಂದಾಗ ಮಾತ್ರ ಜನಪ್ರತಿನಿಧಿಗಳು, ಅಧಿಕಾರಿಗಳು ಎಚ್ಚೆತ್ತುಕೊಳ್ಳುತ್ತಾರೆ ಮತ್ತು ಎಚ್ಚೆತ್ತುಕೊಳ್ಳಬೇಕು.

೭.೫.೨. ನಗರದ ಪ್ರಮುಖ ಶಾಲಾ ಸಂಸ್ಥೆಗಳ ಮುಖ್ಯಸ್ಥರು

ಜಾತಿ	SC	ST	C-I	IIA	IIB	IIIA	IIIB	GM
ಒಟ್ಟು	೦೦	೦೦	೦೦	೦೧	೦೦	೦೪	೦೨	೦೧
ಶೇಕಡಾವಾರು	೦೦	೦೦	೦೦	೧೨.೫	೦೦	೫೦	೨೫	೧೨.೫

ಮೂಲ: ಕ್ಷೇತ್ರಕಾರ್ಯ ಆಧಾರಿತ.

೭.೫.೩. ನಗರದ ಪ್ರಮುಖ ದೇವಾಲಯಗಳ ಮಂಡಳಿಯ ಮುಖ್ಯಸ್ಥರು

ಜಾತಿ	SC	ST	C-I	IIA	IIB	IIIA	IIIB	GM
ಒಟ್ಟು	೦೦	೦೧	೦೦	೦೨	೦೦	೦೦	೦೦	೦೨
ಶೇಕಡಾವಾರು	೦೦	೨೦	೦೦	೪೦	೦೦	೦೦	೦೦	೪೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

೭.೫.೪. ನಗರದ ಪ್ರಮುಖ ವಾಣಿಜ್ಯ ಮಳಿಗೆಗಳ ಮಾಲೀಕರು

ಜಾತಿ	SC	ST	C-I	IIA	IIB	IIIA	IIIB	GM
ಒಟ್ಟು	೦೦	೦೦	೦೦	೦೦	೦೦	೦೪	೦೪	೦೦
ಶೇಕಡಾವಾರು	೦೦	೦೦	೦೦	೦೦	೦೦	೫೦	೫೦	೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

೭.೫.೫. ನಗರದ ಪ್ರಮುಖ ರಿಯಲ್ ಎಸ್ಟೇಟ ಮಾಲೀಕರು

ಜಾತಿ	SC	ST	C-I	IIA	IIB	IIIA	IIIB	GM
ಒಟ್ಟು	೦೦	೦೦	೦೦	೦೦	೦೧	೦೦	೦೪	೦೦
ಶೇಕಡಾವಾರು	೦೦	೦೦	೦೦	೦೦	೨೦	೦೦	೮೦	೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

೭.೫.೬. ನಗರದ ಪ್ರಮುಖ ಬಾರ್ ಮತ್ತು ರೆಸ್ಟೊರೆಂಟ್ ಮಾಲಿಕರು

ಜಾತಿ	SC	ST	C-I	IIA	IIB	IIIA	IIIB	GM
ಒಟ್ಟು	೦೧	೦೦	೦೧	೦೩	೦೦	೦೦	೦೨	೦೦
ಶೇಕಡಾವಾರು	೧೪	೦೦	೧೪	೪೩	೦೦	೦೦	೨೯	೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

೭.೫.೭. ನಗರದ ಪ್ರಮುಖ ಚಿತ್ರ ಮಂದಿರಗಳ ಮಾಲಿಕರು

ಜಾತಿ	SC	ST	C-I	IIA	IIB	IIIA	IIIB	GM
ಒಟ್ಟು	೦೦	೦೦	೦೦	೦೧	೦೧	೦೦	೦೩	೦೦
ಶೇಕಡಾವಾರು	೦೦	೦೦	೦೦	೨೦	೨೦	೦೦	೬೦	೦೦

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಇತರೆ ಮಾಹಿತಿಯಲ್ಲಿ ನಗರದ ಪ್ರಮುಖ ಶಾಲಾ ಸಂಸ್ಥೆಗಳ ಮುಖ್ಯಸ್ಥರು, ದೇವಾಲಯ ಮಂಡಳಿಯ ಮುಖ್ಯಸ್ಥರು, ವಾಣಿಜ್ಯ ಮಳಿಗೆಗಳ ಮಾಲೀಕರು, ರಿಯಲ್ ಎಸ್ಟೇಟ ಮಾಲೀಕರು, ಬಾರ್ ಮತ್ತು ರೆಸ್ಟೊರೆಂಟ್ ಮಾಲೀಕರು, ಮತ್ತು ಚಿತ್ರ ಮಂದಿರಗಳ ಮಾಲೀಕರನ್ನು ನೋಡಿದಾಗ ಗಮನಿಸುವ ಅಂಶವೆಂದರೆ ನಗರದಲ್ಲಿ ಪ್ರಮುಖ ಪ್ರಬಲ ಮುಂದುವರೆದ ಜಾತಿಯವರು ಇವುಗಳನ್ನು ಹೊಂದಿದ್ದಾರೆ. ಇವುಗಳನ್ನು ಹೊಂದುವುದು ಸುಲಭವಲ್ಲ ಯಾರು ಶ್ರೀಮಂತರು ಅವರಿಂದ ಮಾತ್ರ ಸಾಧ್ಯವಾಗುತ್ತದೆ ಇಲ್ಲವಾದರೆ ಅದು ಅಸಾಧ್ಯವಾದದ್ದು ಕೆಲವೊಂದಿಷ್ಟು ಕಡೆ ಸದಸ್ಯರು ಹಿಂದುಳಿದ ಜಾತಿಯವರು ಇದ್ದಾರೆ ಏಕೆಂದರೆ ಸರಕಾರದ ನಿಯಮಗಳಿಂದ ಅದು ಸಾಧ್ಯವಾಗಿದೆ. ಈ ಮೇಲಿನ ಎಲ್ಲ ಅಂಶಗಳನ್ನು ಗಮನಿಸಿದಾಗ ಕೆಲವೇ ಕೆಲ ಜಾತಿಯ ಜನರು ಮೇಲಿನ ಈ ಸಂಪತ್ತನ್ನು ಹೊಂದಿದ್ದಾರೆ ಮತ್ತು ಅವರೆ ನಗರವನ್ನು ನಿಯಂತ್ರಿಸುತ್ತಿದ್ದಾರೆ ಎನ್ನುವ ಅಂಶವು ಗೊತ್ತಾಗುತ್ತದೆ.

೭.೫.೮. ಕೊಪ್ಪಳ ನಗರ ಸಭೆಯ ಪ್ರತಿನಿಧಿಗಳ ಸಾಮಾನ್ಯ ಮೀಸಲಾತಿಯಲ್ಲಿ ಎಸ್ಸಿ ಮತ್ತು ಎಸ್ಟಿ ಯವರ ಸಂಖ್ಯೆ

ಅವಧಿ	ಒಟ್ಟು ಸದಸ್ಯರ ಸಂಖ್ಯೆ	ಸಾಮಾನ್ಯ ಹುದ್ದೆಗಳ ಸಂಖ್ಯೆ	ಆಯ್ಕೆಯಾದ ಎಸ್ಸಿ, ಎಸ್ಟಿಯವರ ಸಂಖ್ಯೆ
೧೯೯೬-೨೦೦೧	೨೭	೧೪	೦೧
೨೦೦೨-೨೦೦೭	೨೭	೧೩	೦೨
೨೦೦೮-೨೦೧೩	೩೧	೧೭	೦೨
೨೦೧೩-೨೦೧೮	೩೧	೧೭	೦೨

ಮೂಲ: ಕ್ಷೇತ್ರಕಾರ್ಯ ಆಧಾರಿತ.

ಈ ಮೇಲಿನ ಕೋಷ್ಟಕದಲ್ಲಿ ನಾವು ನಗರ ಸಭೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರು ಕೇವಲ ಮೀಸಲಾತಿಯಲ್ಲಿ ಮಾತ್ರ ಭಾಗವಹಿಸುತ್ತಿದ್ದಾರೆಯೇ ಅಥವಾ ಸಾಮಾನ್ಯ ಮೀಸಲಾತಿಯಲ್ಲಿಯೂ ಕೂಡಾ ಭಾಗವಹಿಸುತ್ತಿದ್ದಾರೆ ಎನ್ನುವ ವಿಚಾರವನ್ನು ಇಟ್ಟುಕೊಂಡು ನಗರ ಸಭೆಗೆ ಹೋಗಿ ನಾಲ್ಕು ಅವಧಿಯ ಪಟ್ಟಿಯನ್ನು ಪಡೆದುಕೊಂಡು ವಿಶ್ಲೇಷಿಸಿದಾಗ ೧೯೯೬ ರಿಂದ ೨೦೦೧ ರಲ್ಲಿ ಒಟ್ಟು ೨೭ ಸ್ಥಾನಗಳಲ್ಲಿ ೧೪ ಸಾಮಾನ್ಯ ಹುದ್ದೆಗಳಿದ್ದು ೧ ಸ್ಥಾನಗಳಲ್ಲಿ, ೨೦೦೨ ರಿಂದ ೨೦೦೭ ರಲ್ಲಿ ಒಟ್ಟು ೨೭ ಸ್ಥಾನಗಳಲ್ಲಿ ೧೩ ಸಾಮಾನ್ಯ ಹುದ್ದೆಗಳಿದ್ದು ೨ ಸ್ಥಾನಗಳಲ್ಲಿ, ೨೦೦೮ ರಿಂದ ೨೦೧೩ ರಲ್ಲಿ ಒಟ್ಟು ೩೧ ಸ್ಥಾನಗಳಲ್ಲಿ ೧೭ ಸಾಮಾನ್ಯ ಹುದ್ದೆಗಳಿದ್ದು ೨ ಸ್ಥಾನಗಳಲ್ಲಿ, ೨೦೧೩ ರಿಂದ ೨೦೧೮ ರಲ್ಲಿ ಒಟ್ಟು ೩೧ ಸ್ಥಾನಗಳಲ್ಲಿ ೧೭ ಸಾಮಾನ್ಯ ಹುದ್ದೆಗಳಿದ್ದು ೨ ಸ್ಥಾನಗಳಲ್ಲಿ, ಎಸ್.ಸಿ ಎಸ್.ಟಿ ಆಯ್ಕೆಯಾಗಿದ್ದಾರೆ. ಇದನ್ನು ಗಮನಿಸಿದಾಗ ಸಾಮಾನ್ಯ ಮೀಸಲಾತಿಯಲ್ಲಿ ಎಸ್.ಸಿ ಎಸ್.ಟಿಯವರು ದೊಡ್ಡ ಪ್ರಮಾಣದಲ್ಲಿ ಇಲ್ಲದೇ ಇದ್ದರೂ ಸ್ವಲ್ಪ ಪ್ರಮಾಣದಲ್ಲಿಯಾದರೂ ಆಯ್ಕೆಯಾಗಿದ್ದಾರೆ ಇದು ಸಮಾಧಾನದ ವಿಷಯವಾಗಿದೆ ಕೆಲವೊಂದು ಪ್ರದೇಶಗಳಲ್ಲಿ ಶೂನ್ಯವಿರುವುದನ್ನು ಕಾಣುತ್ತೇವೆ. ಅವುಗಳಿಗೆ ಹೋಲಿಸಿದಾಗ ಇದು ಪರವಾಗಿಲ್ಲದ ಸ್ಪರ್ಧೆಯಾಗಿದೆ ಎನ್ನಬಹುದು ಇನ್ನೂ ಮುಂದುವರೆದು ಈ ಆಯ್ಕೆಯಾದವರ ಹಿನ್ನೆಲೆ ನೋಡಿದಾಗ ಶ್ರೀಮಂತ ಎಸ್.ಸಿ, ಎಸ್.ಟಿ ಗಳಾಗಿದ್ದಾರೆ ಇವತ್ತಿನ ರಾಜಕೀಯ ಕೇವಲ ಶ್ರೀಮಂತರಿಗೆ ಸೀಮಿತವಾದದ್ದನ್ನು ಕಾಣುತ್ತೇವೆ ಮೇಲಿನ ಅಂಕಿ ಅಂಶಗಳನ್ನು ಗಮನಿಸಿದಾಗ ಇನ್ನೂ ಇದರ ಪ್ರಮಾಣ ಹೆಚ್ಚಾಗುವುದರ ಅವಶ್ಯಕತೆ ಇರುವುದನ್ನು ನಾವು ಕಾಣುತ್ತೇವೆ ಮತ್ತು ಸಾಮಾನ್ಯ ಜನರಿಗೂ ಕೂಡಾ ಅವಕಾಶ ಸಿಗುವಂತಾಗಬೇಕು ಅಂದಾಗ ಮಾತ್ರ ಪ್ರಜಾಪ್ರಭುತ್ವಕ್ಕೆ ಅರ್ಥ ಬಂದಂತೆ ಆಗುತ್ತದೆ ನಗರದ ಜನರ ಪ್ರಜ್ಞಾವಂತಿಕೆ ಹೆಚ್ಚಾಗುವ ಅವಶ್ಯಕತೆ ಇದೆ ಎನ್ನಬಹುದು.

❖❖❖

ಅಧ್ಯಾಯ : ಎಂಟು

ಸಮಾರೋಪ

೮.೧ ಅಧ್ಯಯನದ ಫಲಿತಗಳು

೮.೨ ಸಲಹೆಗಳು

ಅಧ್ಯಾಯ: ಎಂಟು

ಸಮಾರೋಪ

ಪೀಠಿಕೆ

ಪ್ರಸ್ತುತ ಅಧ್ಯಯನದಲ್ಲಿ ಕರ್ನಾಟಕ ರಾಜ್ಯದ ಹೈದ್ರಾಬಾದ್ ಕರ್ನಾಟಕದ ಹಿಂದುಳಿದ ಜಿಲ್ಲೆಯಾದ ಕೊಪ್ಪಳ ಜಿಲ್ಲೆಯ ಕೊಪ್ಪಳ ನಗರದ ನಗರೀಕರಣದ ಅಭಿವೃದ್ಧಿ ರಾಜಕಾರಣವನ್ನು ಎಳೆಎಳೆಯಾಗಿ ಬಿಡಿಸಿಡುವಂತ ಪ್ರಾಮಾಣಿಕ ಪ್ರಯತ್ನವನ್ನು ಮಾಡಲಾಗಿದೆ.

ಯಾವುದೇ ನಗರವು ಅಭಿವೃದ್ಧಿಯನ್ನು ಹೊಂದಬೇಕಾದರೆ ಅಲ್ಲಿನ ಜನಪ್ರತಿನಿಧಿಗಳ ಪಾತ್ರ ಬಹಳ ಪ್ರಮುಖವಾಗಿರುತ್ತದೆ. ಅಭಿವೃದ್ಧಿ ಎನ್ನುವುದು ಕೇವಲ ಕೆಲವರ ಸ್ವತ್ತಾಗಿ ಇರಬಾರದು. ಅದು ಎಲ್ಲರ ಹಕ್ಕಾಗಬೇಕು. ಅದು ಎಲ್ಲರಿಗೂ ತಲುಪುತ್ತಿದೆಯೇ, ಅದರಿಂದ ಜನರ ಸ್ಥಿತಿಗತಿ ಹೇಗಿದೆ ಎನ್ನುವುದನ್ನು ಈ ಅಧ್ಯಯನದಲ್ಲಿ ವಿವರವಾಗಿ ನೋಡಲಾಗಿದೆ. ನಂಜುಂಡಪ್ಪನವರ ವರದಿಯ ಪ್ರಕಾರ ಹಿಂದುಳಿದ ಜಿಲ್ಲೆಗಳಲ್ಲಿ ಇದು ಒಂದಾಗಿದೆ. ಈ ಹಿಂದುಳಿದ ಪ್ರದೇಶದಲ್ಲಿ ಅಭಿವೃದ್ಧಿ ಹೇಗಾಗುತ್ತದೆ ಮತ್ತು ಹಿಂದುಳಿದ ಮಾತ್ರಕ್ಕೆ ಆ ನಗರ ಯಾವಾಗಲೂ ಹಾಗೆಯೇ ಇರಬೇಕೆಂದು ಏನು ಇಲ್ಲ. ನಗರೀಕರಣ ಪ್ರಕ್ರಿಯೆಯೆನ್ನುವುದು ಸಾಮಾನ್ಯ ಪ್ರಕ್ರಿಯೆಯಾಗಿದೆ. ಇದು ಎಲ್ಲಾ ಪ್ರದೇಶದಲ್ಲಿ ನಿರಂತರವಾಗಿ ನಡೆಯುತ್ತಿರುತ್ತದೆ. ನಗರೀಕರಣದ ಪ್ರಮುಖ ಲಕ್ಷಣಗಳೆಂದರೆ ನಗರದಲ್ಲಿ ವಲಸೆ ಪ್ರಕ್ರಿಯೆ ನಡೆಯುತ್ತದೆ, ಶಾಲಾ ಕಾಲೇಜುಗಳ ಸಂಖ್ಯೆ ಹೆಚ್ಚುತ್ತದೆ, ಕೈಗಾರಿಕೆಗಳು ಹೆಚ್ಚುತ್ತವೆ, ಉದ್ಯೋಗಗಳು ಸೃಷ್ಟಿಯಾಗುತ್ತದೆ ಇದರ ಜೊತೆಗೆ ಸ್ಲಂಗಳ ಹುಟ್ಟು ಕೂಡ ನಡೆದಿರುತ್ತದೆ. ಹೀಗೆ ಅನೇಕ ರೀತಿಯಿಂದ ನಗರದಲ್ಲಿ ಬದಲಾವಣೆಯನ್ನು ಕಾಣುತ್ತೇವೆ. ಅದು ವಿಸ್ತೀರ್ಣದಲ್ಲಿ ಇರಬಹುದು, ಬೇರೆ ಕ್ಷೇತ್ರದಲ್ಲಿ ಇರಬಹುದು. ಹೀಗೆ ಪ್ರತಿಯೊಂದು ಕ್ಷೇತ್ರದಲ್ಲಿ ಬದಲಾವಣೆ ನಿರಂತರವಾಗಿ ನಡೆದಿರುತ್ತದೆ.

ಬೇರೆ ನಗರಗಳಿಗೆ ಹೋಲಿಸಿದಾಗ ಯಾವ ಪ್ರಮಾಣದಲ್ಲಿ ನಗರೀಕರಣ ನಡೆಯುತ್ತಿದೆ ಮತ್ತು ಇಲ್ಲಿರುವ ಪ್ರತಿನಿಧಿಗಳು ಯಾವ ಮಟ್ಟದಲ್ಲಿ ಜನರ ಅಭಿವೃದ್ಧಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ ನಗರದ ಸ್ಥಿತಿ ಪುಸ್ತಕಗಳಲ್ಲಿ ಯಾವ ರೀತಿ ಇದೆ ಮತ್ತು ವಾಸ್ತವವಾಗಿ ಯಾವ ರೀತಿ ಜನರ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಇತರೆ ಸ್ಥಾನಮಾನಗಳು ಯಾವ ರೀತಿ ಇದೆ

ಎನ್ನುವುದನ್ನು ವಿವರವಾಗಿ ವಿಶ್ಲೇಷಣೆ ಮಾಡಲಾಗಿದೆ. ಒಟ್ಟಿನಲ್ಲಿ ಇದೊಂದು ಸಾಮಾನ್ಯ ಪ್ರಕ್ರಿಯೆ ಆಗಿದ್ದು ಇದರಿಂದ ನಮ್ಮ ಜನರಿಗೆ ಆದ ಅನುಕೂಲ ಅನಾನುಕೂಲತೆಗಳೇನು, ಇಲ್ಲಿರುವ ಪ್ರತಿನಿಧಿಗಳ ಪಾತ್ರವನ್ನು ಕೂಲಂಕುಷವಾಗಿ ಅಧ್ಯಯನ ಮಾಡಿ ಅವರು ಮಾಡಬೇಕಾದ ಕಾರ್ಯವೇನು, ಪ್ರಗತಿಯು ಯಾವ ಮಟ್ಟದಲ್ಲಿದೆ ಅದು ಇನ್ನೂ ಎಲ್ಲಿ ತಲುಪಬೇಕೋ ಅದಕ್ಕೆ ಯಾರು ಜವಾಬ್ದಾರರು ಎನ್ನುವುದನ್ನು ಅಧ್ಯಯನದಿಂದ ತಿಳಿದುಕೊಂಡಿದ್ದೇವೆ.

೮.೧ ಫಲಿತಗಳು

* ವಿವಿಧ ನಗರಗಳಿಗೆ ಹೋಲಿಸಿದಾಗ ಬಹುವಾಗಿ ಎಲ್ಲಾ ವಿಧದಲ್ಲಿಯೂ ಹಿಂದುಳಿದಿದ್ದನ್ನು ನಾವು ಕಾಣುತ್ತೇವೆ. ಉದಾಹರಣೆಗೆ ನಗರ ಯೋಜನೆಗಳಿರಬಹುದು ಅಂದರೆ ಒಂದು ನಿರ್ದಿಷ್ಟವಾದ ಮುಂದಾಲೋಚನೆಯ ಯೋಜನೆಗಳ ಕೊರತೆ ಇರುವುದು ಕಂಡುಬರುತ್ತದೆ. ಹೆಚ್ಚಿನ ಪಾಲಿನ ಹಣ ತಪ್ಪು ನಿರ್ಧಾರಗಳಿಂದ ಪೋಲ್ ಆಗುತ್ತಿರುವುದನ್ನು ಕಾಣುತ್ತೇವೆ. ಇದು ಉದ್ದೇಶಪೂರ್ವಕವಾಗಿ ನಡೆದಿದೆಯೋ ಅಥವಾ ದಡ್ಡತನದಿಂದ ನಡೆದಿದೆಯೋ ಎನ್ನುವ ಪ್ರಶ್ನೆ ಇಲ್ಲಿ ಉಳಿದುಕೊಳ್ಳುತ್ತದೆ. ನಗರವು ಉದ್ಯೋಗವನ್ನು ಸೃಷ್ಟಿಸುವಲ್ಲಿಯೂ ಹಿಂದುಳಿದಿದೆ. ನಗರಕ್ಕೆ ಸಂಪೂರ್ಣವಾದ ಒಳಚರಂಡಿ ವ್ಯವಸ್ಥೆ ಇರದೆ ಇರುವುದನ್ನು ನಾವು ಕಾಣುತ್ತೇವೆ. ನಗರದ ಸುತ್ತಲೂ ಕೆಲವೊಂದಿಷ್ಟು ಕೈಗಾರಿಕೆಗಳು ಉದ್ಯೋಗವನ್ನು ಸೃಷ್ಟಿಸಿವೆ ಆದರೂ ಅವು ಕಡಿಮೆ ಪ್ರಮಾಣದಲ್ಲಿ ಇರುವುದನ್ನು ಕಾಣುತ್ತೇವೆ. ಸಂಪೂರ್ಣವಾಗಿ ನಗರವನ್ನು ಅಧ್ಯಯನ ಮಾಡಿದಾಗ ಇದು ನಗರವೋ ಅಥವಾ ಹಳ್ಳಿಯೋ ಅನ್ನುವ ಭಾವನೆ ಉಂಟಾಗುವುದನ್ನು ಕಾಣುತ್ತೇವೆ.

* ಇತ್ತೀಚೆಗೆ ಹುಟ್ಟಿಕೊಂಡಂತಹ ನಗರವಾಗಿರುವದ್ದರಿಂದ ಬೇರೆ ನಗರಗಳೊಂದಿಗೆ ಹೋಲಿಕೆ ಮಾಡುವುದು ಕಷ್ಟ ಸಾಧ್ಯವಾಗುತ್ತದೆ. ವಿಸ್ತೀರ್ಣದಲ್ಲಿ ನಗರವು ಬಹಳಷ್ಟು ವೇಗಗತಿಯಿಂದ ಸಾಗುತ್ತಿದೆ. ವರ್ಷಕ್ಕೆ ಒಂದಾದರೂ ಹೊಸ ನಗರ ಉದ್ಭವಿಸುತ್ತಿದೆ. ಬೆಳವಣಿಗೆಯನ್ನು ಎಲ್ಲಾ ರೀತಿಯಿಂದಲೂ ಹೊಂದಲು ಇನ್ನೂ ಸಮಯದ ಅವಶ್ಯಕತೆ ಇರುವುದು ಬಹಳ ಸ್ಪಷ್ಟವಾಗುತ್ತದೆ. ವಲಸೆಯು ಕೂಡ ನಡೆದಿರುವುದು ಸ್ಪಷ್ಟವಾಗುತ್ತದೆ. ಬೇರೆಬೇರೆ ರಾಜ್ಯಗಳಿಂದ ಮತ್ತು ಸುತ್ತಲೂ ಇರುವ ಎಷ್ಟೋ ಹಳ್ಳಿಯ ಜನ ತಮ್ಮ ಆಸ್ತಿಯನ್ನೆಲ್ಲಾ ಮಾರಿಕೊಂಡು ಬಂದಿದ್ದಾರೆ. ಕೆಲವರು ಅಲ್ಲಿ ಒಬ್ಬರನ್ನು ಬಿಟ್ಟು ಉಳಿದ ನಗರಗಳಿಗೆ ಬಂದು ವಾಸಿಸುತ್ತಿದ್ದಾರೆ. ಕಾರಣ ಕೇಳಿದಾಗ ಒಂದು ಉದ್ಯೋಗ ಮತ್ತು ಶಿಕ್ಷಣ, ಇನ್ನೊಂದಷ್ಟು ಜನ ಆಸ್ತಿಯನ್ನು ಖರೀದಿಸಿ ಅದೇ ಆಸ್ತಿಯಿಂದ ಬದುಕುತ್ತಿರುವುದನ್ನು ಕೂಡ ನೋಡಬಹುದು. ಹೀಗೆ ವರ್ಷದಿಂದ ವರ್ಷಕ್ಕೆ ಜನರ ಪ್ರಮಾಣ ತೀವ್ರಗತಿಯಲ್ಲಿ ಹೆಚ್ಚಾಗುತ್ತಿರುವುದನ್ನು ಕಾಣುತ್ತಿದ್ದೇವೆ.

* ನಗರದಲ್ಲಿ ಎಲ್ಲಾ ಧರ್ಮದ ಎಲ್ಲಾ ಜಾತಿಯ ಜನರು ವಾಸಿಸುತ್ತಿರುವುದು ಕಂಡುಬರುತ್ತದೆ. ಕಾರಣ ಹುಡುಕಿದಾಗ ವ್ಯಾಪಾರ ಮಾಡಲೆಂದು ಒಂದು ದೊಡ್ಡ ಸಂಖ್ಯೆಯಲ್ಲಿ ಮಹಾರಾಷ್ಟ್ರ, ಬಿಹಾರ, ಗುಜರಾತ್, ಪಂಜಾಬ್, ಆಂಧ್ರಪ್ರದೇಶ, ತಮಿಳುನಾಡು, ಹರಿಯಾಣ್, ಇನ್ನೂ ಅನೇಕ

ರಾಜ್ಯಗಳಿಂದ ಜನ ನಗರಕ್ಕೆ ವಲಸೆ ಬಂದು ಮೂಲನಿವಾಸಿಗಳ ತರ ಅವರು ವರ್ತಿಸುತ್ತಿದ್ದಾರೆ. ಇಲ್ಲಿಯೇ ಅವರು ಶಾಶ್ವತವಾಗಿ ವಾಸಮಾಡುತ್ತಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ಪ್ರದೇಶಗಳಿಂದ ಜನ ಬರುವ ನಿರೀಕ್ಷೆಗಳು ಇವೆ. ಏಕೆಂದರೆ ಇಲ್ಲಿ ಬೆಳವಣಿಗೆ ಬಹಳಷ್ಟು ಅವಕಾಶಗಳಿವೆ ಮತ್ತು ಏನೇ ಹೊಸ ಉದ್ಯೋಗ ವ್ಯವಹಾರ ಮಾಡಿದರೂ ಅದು ಯಶಸ್ವಿಯಾಗುತ್ತಿರುವುದನ್ನು ನಾವು ಕಾಣುತ್ತೇವೆ. ಹೀಗಾಗಿ ಇಲ್ಲಿ ಎಲ್ಲಾ ಧರ್ಮದ, ಜಾತಿಯವರು, ಎಲ್ಲಾ ರಾಜ್ಯದ ಜನ ವಾಸಿಸುತ್ತಿದ್ದಾರೆ.

* ಬೇರೆ ನಗರಗಳಿಗೆ ಹೋಲಿಸಿದಾಗ ಇಲ್ಲಿಯೂ ಕೂಡ ಹೆಚ್ಚು ಅವಿಭಕ್ತ ಕುಟುಂಬಗಳು ಕಂಡುಬಂದಿವೆ. ಅದೇ ರೀತಿ ನಗರದಲ್ಲಿ ಹೆಚ್ಚು ವಯಸ್ಕರು ಇರುವುದು ತಿಳಿದುಬಂದಿದೆ. ಉದ್ಯೋಗವನ್ನು ಅರಸಿ ಬಂದವರ ಸಂಖ್ಯೆ ಕೂಡ ಹೆಚ್ಚಿರುವುದನ್ನು ಕಾಣುತ್ತೇವೆ.

* ನಗರದ ಶಿಕ್ಷಣದ ಪ್ರಮಾಣವನ್ನು ದೇಶದ ಶಿಕ್ಷಣ ಪ್ರಮಾಣಕ್ಕೆ ಹೋಲಿಸಿದಾಗ ಕಡಿಮೆ ಇರುವುದನ್ನು ಕಾಣುತ್ತೇವೆ. ಹೆಚ್ಚು ಅನಕ್ಷರಸ್ಥರು ಇರುವುದನ್ನು ನೋಡುತ್ತೇವೆ ಹಾಗೂ ಹೆಚ್ಚಿನ ವಿದ್ಯಾಭ್ಯಾಸವನ್ನು ಮಾಡಿದವರ ಸಂಖ್ಯೆಯೂ ತೀರಾ ಕಡಿಮೆ ಇರುವುದನ್ನು ಕಾಣುತ್ತೇವೆ. ಶಿಕ್ಷಣವು ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುತ್ತದೆ ಎನ್ನುವ ನಂಬಿಕೆಯೊಂದಿದೆ ಆದರೆ ಇಲ್ಲಿ ಅದರ ಪ್ರಮಾಣ ಕಡಿಮೆ ಇರುವುದರಿಂದ ಇದೊಂದು ದೋಷವಾಗಿ ಕಾಣುತ್ತದೆ. ನಗರದಲ್ಲಿ ದೊಡ್ಡ ಪ್ರಮಾಣದಲ್ಲಿಯೇ ಶಿಕ್ಷಣ ಕೇಂದ್ರಗಳಿವೆ ಮತ್ತು ನಗರದಲ್ಲಿ ಒಂದು ಆಯುರ್ವೇದಿಕ್ ಕಾಲೇಜ್ ಮತ್ತು ಇತ್ತೀಚಿಗೆ ಸರ್ಕಾರಿ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಾಗಿವೆ. ಹೆಚ್ಚು ಶಾಲಾ ಶಿಕ್ಷಣ ಕೇಂದ್ರಗಳು ಖಾಸಗಿಯಾಗಿದ್ದು ಹೆಚ್ಚು ಹೆಚ್ಚು ಸರ್ಕಾರಿ ಶಾಲಾ-ಕಾಲೇಜುಗಳ ಅನಿವಾರ್ಯತೆ ಇದೆ. ಸರ್ಕಾರಿ ಶಾಲಾ-ಕಾಲೇಜುಗಳ ಸ್ಥಿತಿ ಶೋಚನೀಯ ಮಟ್ಟದಲ್ಲಿದೆ. ಅಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇದೆ. ಶಿಕ್ಷಕರು, ಉಪನ್ಯಾಸಕರು, ಮತ್ತು ಪ್ರಾಧ್ಯಾಪಕರ ಕೊರತೆ ಇರುವುದನ್ನು ಕಾಣುತ್ತೇವೆ. ಒಂದು ಸಂತೋಷದ ವಿಷಯವೆಂದರೆ ಮಕ್ಕಳನ್ನು ಅತಿಹೆಚ್ಚಿನ ಪ್ರಮಾಣದಲ್ಲಿ ಶಾಲೆಗೆ ಕಳುಹಿಸುತ್ತಿರುವುದನ್ನು ಕಾಣುತ್ತೇವೆ. ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಪ್ರಮಾಣದಲ್ಲಿ, ಗುಣಮಟ್ಟದಲ್ಲಿ ಸುಧಾರಣೆಯಾಗಬೇಕಾದುದ್ದನ್ನು ಕಾಣುತ್ತೇವೆ.

* ಆರೋಗ್ಯದ ದೃಷ್ಟಿಯಿಂದ ನೋಡಿದಾಗ ನಗರದಲ್ಲಿ ಶೋಚನೀಯ ಸ್ಥಿತಿ ಇರುವುದನ್ನು ಕಾಣುತ್ತೇವೆ. ಇನ್ನು ಇಲ್ಲಿ ಹೆರಿಗೆಗೆ ಮುನ್ನ ಹೆರಿಗೆಯ ನಂತರ ಮಕ್ಕಳು ಸಾವನ್ನಪ್ಪುತ್ತಿದ್ದಾರೆ. ಸರಕಾರಿ ಆಸ್ಪತ್ರೆಗಳು, ಕಟ್ಟಡಗಳು ಮಾತ್ರ ದೊಡ್ಡ ಪ್ರಮಾಣದಲ್ಲಿದ್ದು ಅಲ್ಲಿನ ಚಿಕಿತ್ಸೆ ತೀರ ಕಳಪೆ ಗುಣಮಟ್ಟದಲ್ಲಿ ಇದೆ. ಆಸ್ಪತ್ರೆಗಳಲ್ಲಿ ಇರಬೇಕಾದ ಮೂಲಭೂತ ಸೌಕರ್ಯಗಳು ಇಲ್ಲದೆ ಇರುವುದನ್ನು ನೋಡುತ್ತೇವೆ. ಆಸ್ಪತ್ರೆಗೆ ಹೋಗಿ ರೋಗವನ್ನು ಕಡಿಮೆ ಮಾಡಿಕೊಳ್ಳವ ಬದಲು ಇನ್ನೊಂದು ರೋಗವನ್ನು ಅಂಟಿಸಿಕೊಂಡು ಬರುವ ಸ್ಥಿತಿಯಲ್ಲಿ ಸರ್ಕಾರಿ ಆಸ್ಪತ್ರೆ ಇರುವುದನ್ನು ನಾವು ಕಾಣುತ್ತೇವೆ. ಇನ್ನು ನಗರದಲ್ಲಿ ಖಾಸಗಿ ಆಸ್ಪತ್ರೆಗಳು ಇರಬೇಕಾದ ಹೆಚ್ಚಾಗಿರುವುದನ್ನು ಕಾಣುತ್ತೇವೆ. ಇವು ಶ್ರೀಮಂತರಿಗೆ ಮಾತ್ರ ಮತ್ತು ಅಲ್ಲಿರುವ ಹಲವು ವೈದ್ಯರ ಗುಣಮಟ್ಟ ಹೇಳಿಕೊಳ್ಳುವಂತ

ರೀತಿಯಲ್ಲಿ ಇಲ್ಲ. ನಗರದಲ್ಲಿರುವ ಜನರು ಮಾರಕ ರೋಗಗಳು ಶಸ್ತ್ರಚಿಕಿತ್ಸೆಯಂತಹವುಗಳಿಗೆ ಬೇರೆ ನಗರಗಳಿಗೆ ಹೋಗಬೇಕಾದ ಪರಿಸ್ಥಿತಿ ಇದೆ. ಸರ್ಕಾರ ಆರೋಗ್ಯಕ್ಕಾಗಿ ಎಷ್ಟೆಲ್ಲಾ ಹಣವನ್ನು ಖರ್ಚು ಮಾಡಿದರು ಜನಪ್ರತಿನಿಧಿಗಳು ನಿರ್ಲಕ್ಷದಿಂದ ಬಡವರು ಸರ್ಕಾರಿ ಆಸ್ಪತ್ರೆಗಳಲ್ಲಿ ಸರಿಯಾದ ಚಿಕಿತ್ಸೆ ಸಿಗದೆ ಸಾವಿನೊಂದಿಗೆ ಹೋರಾಡುವ ಸ್ಥಿತಿ ಇದೆ. ಆರೋಗ್ಯದ ದೃಷ್ಟಿಯಿಂದ, ಆಸ್ಪತ್ರೆಗಳ ದೃಷ್ಟಿಯಿಂದ ಇನ್ನೂ ಅಗಾಧವಾದ ಬದಲಾವಣೆಯಾಗುವ ಅನಿವಾರ್ಯತೆ ಇದೆ ಮತ್ತು ಜನಪ್ರತಿನಿಧಿಗಳು ಇದರ ಕಡೆಗೆ ಗಮನ ಹರಿಸುವ ಅನಿವಾರ್ಯತೆ ಇರುವುದನ್ನು ಕಾಣುತ್ತೇವೆ. ಎಷ್ಟೋ ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿರುವುದನ್ನು ಕೂಡ ಕಾಣುತ್ತೇವೆ. ಅಪೌಷ್ಟಿಕತೆಯಿಂದ ಗರ್ಭಿಣಿಯರಿಗೆ ಸರಿಯಾದ ರೀತಿಯಲ್ಲಿ ಹೆರಿಗೆ ಆಗುತ್ತಿಲ್ಲ. ತಾಯಿ ಮತ್ತು ಮಗು ಸಾವಿನ ಬಾಗಿಲು ತಟ್ಟುತ್ತಿದ್ದಾರೆ. ಸಂಖ್ಯೆಯನ್ನು ನೋಡಿದಾಗ ಹೆರಿಗೆಯಾದ ನಂತರ ಮಕ್ಕಳು ಮತ್ತು ತಾಯಿಯ ಸಾವು ಕಾಣುತ್ತೇವೆ. ಹೀಗಾಗಿ ಆರೋಗ್ಯದ ದೃಷ್ಟಿಯಿಂದ ನಗರವು ಬಹಳಷ್ಟು ಹಿಂದುಳಿದಿರುವುದನ್ನು ನಾವು ಕಾಣುತ್ತೇವೆ. ಸುಧಾರಣೆಯಾಗುವ ಅವಶ್ಯಕತೆ ಬಹಳಷ್ಟು ಇರುವುದನ್ನು ಕಾಣುತ್ತೇವೆ. ಇಲ್ಲಿ ಅಂಗವಿಕಲತೆಯು ಹೆಚ್ಚಿನ ಪ್ರಮಾಣದಲ್ಲಿ ಕಂಡುಬಂದಿದೆ. ಎಷ್ಟೋ ಜನರು ಚಿಕಿತ್ಸೆಗೆ ಹಣವಿಲ್ಲದೆ ಮರಣಹೊಂದಿದ್ದನ್ನು ನೋಡುತ್ತೇವೆ. ಒಂದು ಒಳ್ಳೆಯ ಬೆಳವಣಿಗೆ ಎಂದರೆ ಹೆರಿಗೆಗಳು ಆಸ್ಪತ್ರೆಗಳಲ್ಲಿಯೇ ನಡೆಯುತ್ತಿವೆ ಮತ್ತು ನಗರದಲ್ಲಿರುವ ಆರೋಗ್ಯ ಕಿರಿಯ ಸಹಾಯಕರ ಒಂದು ಸಕ್ರೀಯ ಪಾತ್ರ ಎಷ್ಟೋ ಗರ್ಭಿಣಿಯರಿಗೆ ಸಹಾಯಕಾರಿ ಆದದ್ದನ್ನು ಕಾಣುತ್ತೇವೆ. ಮಕ್ಕಳಿಗೆ ಸರಕಾರ ನೀಡುತ್ತಿರುವ ಚುಚ್ಚುಮದ್ದುಗಳನ್ನು ತಪ್ಪದೆ ನೀಡುವಲ್ಲಿ ಈ ಕಿರಿಯ ಸಹಾಯಕರು ತಮ್ಮ ಅಮೂಲ್ಯವಾದ ಪಾತ್ರವಹಿಸುತ್ತಿದ್ದಾರೆ.

* ನಗರಕ್ಕೆ ಸಿಗುವ ಆಹಾರ ಪದಾರ್ಥಗಳನ್ನು ನೋಡಿದಾಗ ನ್ಯಾಯಬೆಲೆ ಅಂಗಡಿ ಮೂಲಕ ಆಹಾರ ಪದಾರ್ಥಗಳು ಸಿಗುತ್ತಿವೆ. ಆದರೆ ಗುಣಮಟ್ಟ ನೋಡಿದಾಗ ಕೆಲವೊಂದಿಷ್ಟು ಆಹಾರ ಪದಾರ್ಥಗಳು ಕಳಪೆ ಮಟ್ಟದಲ್ಲಿರುವುದನ್ನು ಕಾಣುತ್ತೇವೆ. ನಗರದ ಜನ ಎಷ್ಟೇ ಬಡವರಿದ್ದರೂ ಮೂರು ಹೊತ್ತಿನ ಊಟವನ್ನು ಮಾಡುತ್ತಿದ್ದಾರೆ. ನಮ್ಮ ಕ್ಷೇತ್ರಕಾರ್ಯದ ಪ್ರಕಾರ ಉಪವಾಸವಿರುವ ಜನ ಸಿಗದೇ ಇರುವುದನ್ನು ಕಾಣುತ್ತೇವೆ. ಗುಣಮಟ್ಟದ ಆಹಾರದ ಕೊರತೆ ಕಾಣುತ್ತೇವೆ. ನ್ಯಾಯಬೆಲೆ ಅಂಗಡಿಯ ಮೂಲಕ ಎಲ್ಲಾ ಆಹಾರ ಪದಾರ್ಥಗಳು ಸಿಗದೇ ಇರುವುದ್ದರಿಂದ ಖಾಸಗಿ ವ್ಯವಸ್ಥೆಯನ್ನು ಕೂಡ ಅವಲಂಬಿಸಿದ್ದನ್ನು ನೋಡುತ್ತೇವೆ. ನಗರದಲ್ಲಿ ಸುಲಭವಾಗಿ ಆಹಾರ ಪದಾರ್ಥಗಳು ಲಭ್ಯತೆಯಿದೆ. ನ್ಯಾಯಬೆಲೆ ಅಂಗಡಿಯಿಂದ ಆಹಾರ ಪದಾರ್ಥಗಳನ್ನು ಮಧ್ಯಮ ಮತ್ತು ಹಿಂದುಳಿದ ಪ್ರದೇಶದ ಜನ ಮಾತ್ರ ಖರೀದಿಸುತ್ತಿದ್ದು ಶ್ರೀಮಂತರು ಖಾಸಗಿ ವ್ಯವಸ್ಥೆಯನ್ನು ಅವಲಂಬಿಸಿದ್ದಾರೆ. ಇಲ್ಲಿ ಇನ್ನೊಂದು ಗಮನಿಸುವ ಅಂಶವೆಂದರೆ ನ್ಯಾಯಬೆಲೆ ಅಂಗಡಿಗಳಲ್ಲಿ ಭ್ರಷ್ಟಾಚಾರ ನಡೆಯುತ್ತಿರುವುದು ಕಂಡು ಬರುತ್ತವೆ. ತೂಕದಲ್ಲಿ ಮತ್ತು ಕೆಲವೊಂದು ವಿಚಾರದಲ್ಲಿ ಜನರಿಗೆ ಮೋಸ ಮಾಡಿ ಬೇರೆಯವರಿಗೆ ಹೆಚ್ಚಿನ ಬೆಲೆಗೆ ಆಹಾರ ಪದಾರ್ಥಗಳನ್ನು

ಮಾರುತ್ತಿರುವುದು ತಿಳಿದುಬಂದಿದೆ. ಇದರ ಕುರಿತು ಜನಪ್ರತಿನಿಧಿಗಳು ಗಮನ ಹರಿಸಿ ಸೂಕ್ತ ಕ್ರಮವನ್ನು ಕೈಗೊಳ್ಳುವ ಅನಿವಾರ್ಯತೆಯಿದೆ.

* ನಗರಕ್ಕೆ ನೀರು ಅತ್ಯವಶ್ಯಕವಾಗಿದ್ದು ನಗರವೆಂದ ಮೇಲೆ ಸಮರ್ಪಕವಾಗಿ ನೀರು ಪೂರೈಕೆಯಾಗಬೇಕಾಗುತ್ತದೆ ಮತ್ತು ನಗರದಲ್ಲಿ ಗುಣಮಟ್ಟದ ನೀರು ಬೇಕಾಗುತ್ತದೆ. ನಗರದ ಅಧ್ಯಯನದಿಂದ ನಮಗೆ ತಿಳಿದು ಬಂದಿರುವ ವಿಚಾರವೆಂದರೆ ಗುಣಮಟ್ಟದ ಮತ್ತು ಸಮರ್ಪಕವಾದ ನೀರು ಸಿಗುತ್ತಿಲ್ಲ. ನಗರವು ಬಿಸಿಲು ಮತ್ತು ಬಯಲು ಪ್ರದೇಶದಲ್ಲಿರುವುದರಿಂದ ನೀರಿನ ಅಭಾವವಿರುವುದು ಸಾಮಾನ್ಯವಾದ ವಿಚಾರವಾಗಿದೆ. ಬೇಸಿಗೆ ಕಾಲದಲ್ಲಿ ನೀರಿನ ಅಭಾವವನ್ನು ತುಂಬಾ ಅನುಭವಿಸುತ್ತಿರುವುದನ್ನು ಕಾಣುತ್ತೇವೆ. ನಗರದಲ್ಲಿ ಎಲ್ಲರ ಮನೆಗೂ ನೀರಿನ ಸಂಪರ್ಕ ಇಲ್ಲದೇ ಇರುವದನ್ನು ಕಾಣುತ್ತೇವೆ. ನಗರ ಪ್ರದೇಶದಲ್ಲಿ ಅಂತರ್ಜಲದ ಪ್ರಮಾಣ ಕಡಿಮೆಯಾಗಿರುವುದು ಕಾಣುತ್ತೇವೆ. ಹೀಗೆಯೇ ಮುಂದುವರೆದರೆ ತುಂಬಾ ಕಷ್ಟದ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಈ ದಿಸೆಯಿಂದ ನಗರದಲ್ಲಿ ಪರಿಸರ ಕಾಳಜಿ ಹೆಚ್ಚಾಗಿದೆ. ಅನೇಕ ಸಂಘ ಸಂಸ್ಥೆಗಳು, ಮಠಗಳು ಈ ದಿಸೆಯಲ್ಲಿ ಕಾರ್ಯವನ್ನು ಕೈಗೊಂಡಿವೆ. ಒಂದು ವಿಚಿತ್ರವಾದ ಸಂಗತಿಯೆಂದರೆ ನಗರದಿಂದ ಆಣೆಕಟ್ಟು ಮೂವತ್ತೈದು ಕಿಲೋಮೀಟರ್ ದೂರದಲ್ಲಿದೆ. ಇದು ನಂಬದ ಸಂಗತಿಯಾಗಿದೆ. ಇದು ಇಲ್ಲಿರುವ ಜನಪ್ರತಿನಿಧಿಗಳ ನಿಷ್ಕಾಳಜಿಯನ್ನು ತೋರಿಸುತ್ತದೆ. ಒಟ್ಟಿನಲ್ಲಿ ನೀರಿನ ಅಸಮರ್ಪಕ ಪೂರೈಕೆ ಇರುವುದನ್ನು ಕಾಣುತ್ತೇವೆ.

* ನಗರದ ಸ್ವಚ್ಛತಾ ಸೌಲಭ್ಯಗಳನ್ನು ನೋಡಿದಾಗ ಹೇಳಿಕೊಳ್ಳುವ ರೀತಿಯಲ್ಲಿ ನಗರದಲ್ಲಿ ಸ್ವಚ್ಛತೆ ಇಲ್ಲದೆ ಇರುವುದನ್ನು ಕಾಣುತ್ತೇವೆ. ಚರಂಡಿ ವಿಷಯದಲ್ಲಿ ತುಂಬಾ ಹಿಂದೆ ಬಿದ್ದಿದೆ. ಕಸ ವಿಲೇವಾರಿಯಲ್ಲಿ ಪರವಾಗಿಲ್ಲ, ತ್ಯಾಜ್ಯ ವಿಲೇವಾರಿ ಘಟಕವು ಕೂಡಾ ಅಸ್ತಿತ್ವದಲ್ಲಿದ್ದು ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ನಗರದಲ್ಲಿ ಯಥೇಚ್ಛವಾಗಿ ಧೂಳಿನ ಸಮಸ್ಯೆ ಇದ್ದು ಪರಿಹಾರಕ್ಕಾಗಿ ಅನೇಕ ಸಂಘಟನೆಗಳು ಹೋರಾಟ ಮಾಡಿದರು ಕೂಡ ಪರಿಹಾರ ಸಿಕ್ಕಿಲ್ಲ. ಸ್ವಚ್ಛತೆಯನ್ನು ಕಾಪಾಡುವಂತ ಕ್ರಮಗಳನ್ನು ತೆಗೆದುಕೊಳ್ಳುವ ನಿಟ್ಟಿನಲ್ಲಿ ಪ್ರಯತ್ನಿಸುವ ಅನಿವಾರ್ಯತೆ ಇದೆ.

* ಮೂಲಭೂತ ಸೌಲಭ್ಯಗಳಿಂದ ನಗರದ ಜನ ವಂಚಿತರಾದದ್ದನ್ನು ಕಾಣುತ್ತೇವೆ. ಎಷ್ಟೋ ಮನೆಗಳಿಗೆ ನೀರಿನ ಸೌಲಭ್ಯವಿಲ್ಲ. ಸ್ವಚ್ಛ ಭಾರತದ ಪರಿಕಲ್ಪನೆ ಬಂದಾಗಿಯೂ ಎಲ್ಲ ಮನೆಗಳಲ್ಲಿ ಪಾಯಖಾನಿಗಳು ಇಲ್ಲ, ಅಡುಗೆ ಅನಿಲ ಇಲ್ಲ, ನಗರವಾದರೂ ಕೂಡ ಬಯಲು ಶೌಚ ಮಾಡುವುದು ಕಂಡು ಬರುತ್ತಿದೆ. ಇದರಿಂದ ಅನೇಕ ರೋಗಗಳು ಕೂಡ ಹರಡುತ್ತಿವೆ. ಒಟ್ಟಿನಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವಲ್ಲಿ ಹಿಂದುಳಿದಿದೆ.

* ನಗರದ ಕೆಲವು ಜನ ಅತಿ ಹೆಚ್ಚು ಭೂಮಿಯನ್ನು ಹೊಂದಿದ್ದಾರೆ. ಬಹಳಷ್ಟು ಜನ ಕಡಿಮೆ ಭೂಮಿಯನ್ನು ಹೊಂದಿದ್ದಾರೆ. ಹೆಚ್ಚಾನೆಚ್ಚು ಸಣ್ಣ-ಪುಟ್ಟ ರೈತರು ಬೇರೆಯವರ ಭೂಮಿಯನ್ನು ಮಾಡಿದವರು ಮಾತ್ರ ವ್ಯವಸಾಯ ಮಾಡುತ್ತಿದ್ದಾರೆ. ಬಹಳಷ್ಟು ಜನ ಭೂಮಿಯನ್ನು ಗೇಣಿಗೆ

ನೀಡಿದ್ದನ್ನು ಕಾಣುತ್ತೇವೆ. ಹೆಚ್ಚು ಪ್ರದೇಶ ಒಣಭೂಮಿಯಾಗಿದೆ. ನೀರಾವರಿ ತೀರಾ ಕಡಿಮೆ ಇರುವುದನ್ನು ಕಾಣುತ್ತೇವೆ. ಹತ್ತಿರದಲ್ಲಿ ಆಣೆಕಟ್ಟು ಇದ್ದರು ನಗರಕ್ಕೆ ನೀರಾವರಿ ಸೌಲಭ್ಯ ಇಲ್ಲದೆ ಇರುವುದನ್ನು ಕಾಣುತ್ತೇವೆ. ಹೆಚ್ಚು ಆಹಾರ ಬೆಳೆಗಳನ್ನು ಇಲ್ಲಿರುವ ರೈತರು ಬೆಳೆಯುತ್ತಿದ್ದಾರೆ. ಕಾರಣವೆಂದರೆ ನೀರಿನ ಸೌಲಭ್ಯ ಇಲ್ಲದೆ ಇರುವುದು. ಇಲ್ಲಿರುವ ಜನ ಹೆಚ್ಚು ವ್ಯಾಪಾರವನ್ನು ಮಾಡುವುದು ಕಂಡುಬರುತ್ತದೆ, ಸ್ವಂತ ಉದ್ಯೋಗಿಗಳಾಗಿದ್ದಾರೆ. ನಗರದಲ್ಲಿರುವ ಜನರಿಗೆ ನಗರವು ಪೂರ್ಣ ಪ್ರಮಾಣದಲ್ಲಿ ಉದ್ಯೋಗ ನೀಡುವಲ್ಲಿ ವಿಫಲವಾಗಿದೆ. ಅಂಕಿಸಂಖ್ಯೆಗಳನ್ನು ನೋಡಿದಾಗ ನಗರದ ಜನ ನಗರದಿಂದ ಹೊರಗಡೆ ಉದ್ಯೋಗಕ್ಕಾಗಿ ಹೋಗುತ್ತಿದ್ದಾರೆ. ನಗರದಲ್ಲಿ ಕೈಗಾರಿಕೆಗಳ ಸಂಖ್ಯೆ ಕೂಡ ಕಡಿಮೆ ಇರುವುದು ಕಂಡುಬರುತ್ತದೆ, ಕರ–ಕುಶಲ ಕೇಂದ್ರಗಳು ಕೂಡ ಹೆಚ್ಚಾಗಿ ಕಂಡುಬರುವುದಿಲ್ಲ.

